KB/153

Acc_6274

1930

ಕೊನೆಯ ಪಂಚಾಮಸಿ

The Vijay College
LIBRARY,
VIJAY COLLEGE,
BIJAPUR.

SHRI SHIDDHESHWAR LIBRARY BIJAPUR



ನಾಲತವಾಡದ ಶಿವಶರಣರು ಶ್ರೀ ವೀರಯ್ಯನವರು
ಸೊಲ್ಲಾಪುರ.

The Vijay College
LIBRARY,
VIJAY COLLEGE,
BIJAPUR.

Acc 6274

SHRI SHIDDHESHWAR LIBRARY BIJAPUR

ಅರ್ಪಣ ಪತ್ರಿಕೆ.

ವಚನಶಾಸ್ತ್ರಾಭ್ಯಾಸಕ್ಕೋಸ್ಕರ ಅತ್ಯುಪಯುಕ್ತವಾಗಿರುವ ಗ್ರಂಥಗಳಲ್ಲಿ ಮಹತ್ತರವಾದ **ಈ ಶಿವಾನುಭವಪಾದನೆ** ಎಂಬ ಗ್ರಂಥವು ಯಾವ **ನಾಲತವಾಡದ ಶ್ರೀ ವೀರಯ್ಯನವರು ಶಿವಶರಣರು** ತಮ್ಮ ಉದಾತ್ತ ನಡೆನುಡಿಯಿಂದ **ಸೊನ್ನಲಿಗೆಯಲ್ಲಿ** ಅತ್ಯಂತ ಪೂಜ್ಯರೆನಿಸಿಕೊಂಡು ಬಹುಕಾಲವಾಸಿಸಿದ್ದರೋ, ಯಾರು ಶ್ರೇಷ್ಠತರವಾದ ಆಚಾರ ವಿಚಾರಗಳಲ್ಲಿ ಸದಾ ಆನಂದದಿಂದ ಕಾಲಕಳೆದು ಅವುಗಳಂತೆ ನಡೆದು ಜಗತ್ತಿಗೆ ತೋರಿ ಮೆರೆದರೋ, ಯಾರು ತಮ್ಮ ನಿಃಸೀಮಬುದ್ಧಿ ಕಟ್ಟಾಚರಣೆಗಳಿಂದ ಸರ್ವಸ್ತರದಲ್ಲಿ ದೃಢವಾದ ಭಕ್ತಿ ಜ್ಞಾನವನ್ನು ಬೀರಿದರೋ, ಅಂಥ ಆ **ಮಹಾನುಭಾವರಿಗೆ** ಅತ್ಯಂತ ಭಕ್ತಿಪೂರ್ವಕವಾಗಿ ಅರ್ಪಿಸಲ್ಪಟ್ಟಿದೆ.

ಸಂಪಾದಕ


The Vijay College
LIBRARY,
VIJAY COLLEGE,
BIJAPUR.

367

ಶಿವಾನುಭವ ಗ್ರಂಥಮಾಲಾ ನಂ॥ ೨೨

ಶೂನ್ಯ ಸಂಪಾದನೆ.

Q234:26
33 All
6274




ಸಂಪಾದಕರು.
ರಾ॥ ಸಾ॥ ಫ. ಗು. ಹಳಕಟ್ಟಿ.
(ಬಿ. ಏ ಎಲ್. ಎಲ್. ಬಿ. ವಕೀಲ)

ಬಿಜಾಪುರ
ಗ್ರಂಥಾಲಯ
ಬಿ[illegible] ಸಂಸ್ಥೆ
ಕನ್ನಡ ಎ. ಎ. ಹಂಟಿಯಿಂದ ಮೂನ್ಮತೆ ಪಡೆದ
ವಚನ ಪಿತಾಮಹ ರಾ॥ ಫ.ಗು. ಹಳಕಟ್ಟಿ ಸಂಶೋಧನ ಕೇಂದ್ರ
ವಿಜಾಪುರ.

ಬೆಲೆ ೩ ರೂಪಾಯಿ.

೧೯೩೦



ಇದನ್ನು ವಿಜಾಪುರದಲ್ಲಿ
ರಾ॥ ಸಾ॥ ಫ. ಗು. ಹಳಕಟ್ಟಿ ಇವರು ತಮ್ಮ
"ಹಿತಚಿಂತಕ ಪ್ರಿಂಟಿಂಗ ಪ್ರೆಸ್ಸಿ" ನಲ್ಲಿ ಮುದ್ರಿಸಿದರು.
ಮತ್ತು ಅವರು ವಿಜಾಪುರದಲ್ಲಿ
ಉಪಲಿ ಬುರುಜದ ಹತ್ತರ ತಮ್ಮ ೧೬೦ (೬) ನೇ ಮನೆಯಲ್ಲಿ
ಪ್ರಕಟಿಸಿದರು.

6274

ಅನುಕ್ರಮಣಿಕೆ.

	ವಿಷಯ	ಪುಟ
೧	ಪೀಠಿಕಾ ಪ್ರಕರಣ	೧
೨	ಗುರುಕರುಣ	೧೦
೩	ಮುಕ್ತಾಯಕ್ಕಗಳ ಸಂಪಾದನೆ	೨೨
೪	ಸಿದ್ಧರಾಮಯ್ಯ ದೇವರ ಸಂಪಾದನೆ . . .	೩೫
೫	ಬಸವನು ಚನ್ನಬಸವನಿಗೆ ಉಪದೇಶ ಸಂಪಾದನೆ . .	೭೧
೬	ಪ್ರಭುದೇವರು ಕಲ್ಯಾಣಕ್ಕೆ ಬಂದ ಸಂಪಾದನೆ . .	೮೧
೭	ಮರುಳುಶಂಕರ ದೇವರ ಸಂಪಾದನೆ	೧೦೬
೮	ಬಸವೇಶ್ವರನ ಸಂಪಾದನೆ	೧೩೨
೯	ಚನ್ನಬಸವರಾಜದೇವರ ಸಂಪಾದನೆ	೧೪೪
೧೦	ಮಡಿವಾಳಯ್ಯಗಳ ಸಂಪಾದನೆ	೧೬೬
೧೧	ಸಿದ್ಧೆರಾಮಯ್ಯನ ಗುರುಕರುಣ	೧೮೨
೧೨	ಪ್ರಭುದೇವರ ಪೂಜಾಸ್ತುತಿ	೨೧೦
೧೩	ಆಯದಕ್ಕಿ ಮಾರಯ್ಯಗಳ ಸಂಪಾದನೆ . . .	೨೨೩
೧೪	ಮೋಳಿಗೆ ಮಾರಯ್ಯಗಳ ಸಂಪಾದನೆ . . .	೨೩೫
೧೫	ನುಲಿಯ ಚಂದಯ್ಯಗಳ ಸಂಪಾದನೆ . . .	೨೪೯
೧೬	ಘಟ್ಟಿವಾಳಯ್ಯಗಳ ಸಂಪಾದನೆ	೨೬೩
೧೭	ಉಡುತಡಿ ಮಹಾದೇವಿಯಕ್ಕಗಳ ಸಂಪಾದನೆ . .	೨೭೬
೧೮	ಪ್ರಭುಪರ್ಯಟಣ ಸಂಪಾದನೆ	೩೦೦
೧೯	ಪ್ರಭುದೇವರು ಶೂನ್ಯಪೀಠಮೂರ್ತ ಸಂಪಾದನೆ . .	೩೧೬
೨೦	ಪ್ರಭುವಾರೋಗಣೆ ಸಂಪಾದನೆ	೩೩೧
೨೧	ಶರಣರವಸಾನ ಪರಾಮರಿಕೆ ಸಂಪಾದನೆ . . .	೩೬೭
೨೨	ಎಲ್ಲ ಗಣಂಗಳ ನಿರ್ವಯಲ ಸಮಾಧಿ . . .	೩೮೫

The Vijay College
LIBRARY.
VIJAY COLLEGE,
VIJAPUR.

ಪ್ರಸ್ತಾವನೆ.

ವಿಜಯನಗರದಲ್ಲಿ ಮೊದಲನೇ ದೇವರಾಯನು ಆಳಿದ ಕಾಲ ಅಂದರೆ ೧೫ನೇ ಶತಮಾನದ ಮಧ್ಯಭಾಗವು ಕರ್ನಾಟಕ ವಾಙ್ಮಯದ ಇತಿಹಾಸದಲ್ಲಿ ಬಹು ಮಹತ್ವದ ಕಾಲವಾಗಿದೆ. ದೇವರಾಯನು ಸ್ವತಃ ಗ್ರಂಥಕಾರನಿದ್ದಲ್ಲದೆ ಕವಿಗಳಿಗೂ, ವಿದ್ವಾಂಸರಿಗೂ, ಸಾಧು-ಸತ್ಪುರುಷರಿಗೂ ಬಹಳ ಆಶ್ರಯ ಕೊಡುತ್ತಿದ್ದನು. ಇವನ ಕಾಲಕ್ಕೆಯೇ ಜಾಮರಸ, ಲಕ್ಕಣ್ಣ ದಂಡೇಶ, ತೋಂಟದಾರ್ಯ ಮೊದಲಾದ ವೀರಶೈವ ಕವಿಗಳೂ, ತತ್ವವೇತ್ತಿಗಳೂ ಪ್ರಸಿದ್ಧಿಗೆ ಬಂದರು. ಇದೇ ಕಾಲಕ್ಕೆಯೇ ಈ ಶೂನ್ಯಸಂಪಾದನೆಯ ಗ್ರಂಥವನ್ನು ವಿರಚಿಸಿದ ಗೂಳೂರ ಸಿದ್ಧವೀರಣಾಚಾರ್ಯನು ಆಗಿಹೋದನು. ಈತನು ಈ ಗ್ರಂಥದಲ್ಲಿ ತೋಂಟದ ಸಿದ್ಧಲಿಂಗೇಶ್ವರನ ಶಿಷ್ಯನಾದ ಜೋಳ ಬಸವೇಶ್ವರನಿದ್ದು ಈತನಿಂದ ತಾನು "ಜೋಧೆವಿಡಿದಾತ" ನೆಂದು ಹೇಳಿಕೊಂಡಿದ್ದಾನೆ.

ವಚನಶಾಸ್ತ್ರವು ಅತ್ಯಂತ ಉತ್ಕರ್ಷತೆಯನ್ನು ಹೊಂದಿದ್ದು ಬಸವೇಶ್ವರ ಮೊದಲಾದ ಶಿವಶರಣರು ಕರ್ನಾಟಕದಲ್ಲಿ ವೀರಶೈವ ಧರ್ಮ ಪ್ರಸಾರ ಮಾಡಿದ ಕಾಲಕ್ಕೆಯೇ ಇರುತ್ತದೆ. ಆಗ ಅಸಂಖ್ಯ ಶಿವಶರಣರು ಕರ್ನಾಟಕದ ಎಲ್ಲ ಭಾಗಗಳಲ್ಲಿ ಉದ್ಭವಿಸಿ ಧರ್ಮಜೋಧೆಯನ್ನು ಮಾಡಿದರು. ಅವರು ಹೀಗೆ ರಚಿಸಿದ ವಚನಗಳು ೧೯ಂ ಕೋಟಿ ಇರುತ್ತವೆಂಬ ಐತಿಹ್ಯವಿದೆ. ಅಂದರೆ ಈ ವಾಙ್ಮಯವು ಬಹು ವಿಸ್ತಾರವಾದದ್ದಿತ್ತೆಂಬ ಭಾವವೇ ಇದರಲ್ಲಿ ಗೂಢವಾಗಿದೆ. ಆದರೆ ಈ ಕಾಲದ ತರುವಾಯ ಕರ್ನಾಟದ ದುರ್ದೈವದಿಂದ ಅದಕ್ಕೆ ಬಹು ವಿಪ್ಲವ ಸಮಯಗಳು ಪ್ರಾಪ್ತವಾದವು. ಉತ್ತರದಿಂದ ಮುಸಲ್ಮಾನರ ಭಯಂಕರ ದಾಳಿಗಳು ದಕ್ಷಿಣ ದೇಶದಲ್ಲಿ ಬರತೊಡಗಿದವು. ಅವುಗಳ ಮುಂದೆ ದೇವಗಿರಿ ಯಾದವರ ರಾಜ್ಯವು ಹಾಳಾಯಿತು. ಓರಂಗಲ್ಲದ ವಿಸ್ತಾರವಾದ ಪ್ರದೇಶವು ಸೂರೆಹೋಯಿತು. ಆನೆಗುಂದಿಯ ರಾಜರು ಸಮರಾಂಗಣದಲ್ಲಿ ಮಡಿದು ಅವರ ರಾಜ್ಯವು ಮುಸಲ್ಮಾನರ ಕೈಸೇರಿತು. ಮತ್ತು ಕಡೆಗೆ ಕಲಬುರ್ಗೆಯಲ್ಲಿ ಬಾಮಣೀ ಬಾದಶಹರ ರಾಜ್ಯವು ಸ್ಥಾಪಿಸಲ್ಪಟ್ಟು ಮುಸಲ್ಮಾನರು ಕರ್ನಾಟಕದಲ್ಲಿ ಸ್ಥಿರವಾಗಿ ತಳವೂರಿ ನಿಂತರು. ಆ ಮೇಲೆ

ಈ ದಾಮಣೇ ಬಾದಶಹರಿಗೂ, ವಿಜಯನಗರದ ನರಪತಿಗಳಿಗೂ ಘೋ
ಯುದ್ಧಗಳು ಎರಡು ಶತಮಾನಗಳ ವರೆಗೆ ಒಂದೇ ಸವನೇ ನಡೆದಿದ
ಇತಿಹಾಸ ಪ್ರಸಿದ್ಧವೇ ಅದೆ. ಈ ಎಲ್ಲ ಬಗೆಯ ಹೊಡೆದಾಟ ರಕ್ತಪಾ
ಗಳು ಯಾವ ಪ್ರಾಂತದಲ್ಲಿ ಬಸವೇಶ್ವರಾದಿ ಮಹಾನುಭಾವರು ಉತ್ಪ
ರಾಗಿ ಧರ್ಮಪ್ರಸಾರವನ್ನೂ, ವಾಙ್ಮಯದ ಅಭಿವೃದ್ಧಿಯನ್ನೂ ಮಾ
ದರೋ, ಅಂಥ ಕರ್ನಾಟಕದ ಉತ್ತರಸೀಮೆಯಲ್ಲಿಯೇ ಸಂಭವಿಸಿದ
ಅಂದಬಳಿಕ ಇಂಥ ಪರಿಸ್ಥಿತಿಯಲ್ಲಿ ವಾಙ್ಮಯವು ಬೆಳೆಯುವದು ಹೇಗೆ
ಗ್ರಂಥಗಳು ಸುರಕ್ಷಿತವಾಗಿ ಇರುವ ಬಗೆ ಹೇಗೆ? ಆದ್ದರಿಂದ ಈ ಸ
ಯದಲ್ಲಿ ಬಸವೇಶ್ವರಾದಿಗಳು ನಿರ್ಮಿಸಿದ ವಾಙ್ಮಯಕ್ಕೆ ಬಹು ದೊ
ದಕ್ಕೆಯು ತಗಲಿತೆಂಬದು ನಿರ್ವಿವಾದವು.

ಹೀಗೆ ವೀರಶೈವ ಧಾರ್ಮಿಕ ವಾಙ್ಮಯಕ್ಕೆ ಪ್ರಾಪ್ತವಾದ ಭಯ
ಕರ ವಿಪತ್ತನ್ನು ದೂರಮಾಡುವ ಸುಯೋಗವು ಮುಂದೆ ಸ್ವಲ್ಪ ಕಾ
ದಲ್ಲಿಯೇ ಬಂದಿತು. ಈ ಬಗೆಯ ಪ್ರಯತ್ನಗಳಿಗೆ ವಿಜಯನಗರದ ಪ
ಸನಾದ ೧ನೇ ದೇವರಾಜನು ಬಹಳ ಸಹಾಯಕನಾದನು. ಆಗ ತೋಂ
ದಾರ್ಯ, ಜಕ್ಕಣಾರ್ಯ ಮೊದಲಾದ ಗ್ರಂಥಕಾರರೂ ೧೫೧ ವಿರಕ್ತರ
ಉದ್ಭವಿಸಿ ವೀರಶೈವ ವಾಙ್ಮಯಕ್ಕೆ ಹೊಸ ಪ್ರಕಾಶವನ್ನು ಒದಗಿಸಿಕ
ಟ್ಟರು. ಅವರು ಹಿಂದಿನ ಕಠಿಣ ಕಾಲದಲ್ಲಿ ಅಸ್ತವ್ಯಸ್ತವಾಗಿ ಬಿ
ಹೋಗಿದ್ದ ವಚನಶಾಸ್ತ್ರ, ಷಟ್ಸ್ಥಲದ ಧರ್ಮವಿಚಾರಗಳನ್ನು ದೇಶದಲ್ಲ
ಪ್ರಚುರಗೊಳಿಸಿದರು. ತೋಂಟದಾರ್ಯ, ಬೋಳಬಸವೇಶ್ವರ, ಘನಲಿ
ಇವರೆಲ್ಲರೂ ಬಹು ಪ್ರೌಢವಾದ ವಚನಗ್ರಂಥಗಳನ್ನು ರಚಿಸಿದರು. ಜ
ಣಾರ್ಯ ಮೊದಲಾದ ವಿದ್ವಜ್ಜನರು ಅಲ್ಲಲ್ಲಿ ತುಂಡುತುಂಡಾಗಿ ಬಿ
ಹೋಗಿದ್ದ ಶಿವಶರಣರ ಜಾಜ್ವಲ್ಯವಾದ ವಚನಗಳನ್ನು ಸಂಗ್ರಹಿಸಿದ
ಮತ್ತು ಅವುಗಳಿಗೆ ಟೀಕೆಗಳನ್ನು ಬರೆದರು. ಈ ಮೇರೆಗೆ ಈ ಕಾಲದ
ವಚನಶಾಸ್ತ್ರದ ವಿಶಾಲ ಮತ್ತು ಉಜ್ವಲ ತತ್ವಗಳು ದೇಶದಲ್ಲೆಲ್ಲ ಪ
ಡಲು ಕಾರಣವಾಯಿತು. ಈ ಮಹಾತ್ಮರೆಲ್ಲರು ಮಾಡಿದ ಕಾರ್ಯ
ಳಲ್ಲಿ ಗೂಳೂರ ಸಿದ್ಧವೀರಣಾಚಾರ್ಯನು ಈ ಶೂನ್ಯಸಂಪಾದನೆಯ
ರಚಿಸಿದ್ದು ಸುಂದರವಾದ ವೀರಶೈವ ಧರ್ಮಮಂದಿರಕ್ಕೆ ಒಂದು ಪ್ರಕ
ವಾನವಾದ ಕಲಶವನ್ನು ಇಟ್ಟಂತೆ ಆಗಿರುತ್ತದೆ. ಈ ಗ್ರಂಥವು ವೀರಶೈ
ವಚನವಾಙ್ಮಯದಲ್ಲಿ ಬಹಳ ಉನ್ನತಸ್ಥಾನವನ್ನು ಹೊಂದಿರುತ್ತದೆ.

ಶೂನ್ಯಸಂಪಾದನೆ ಎಂದರೆ ವೀರಶೈವ ಧರ್ಮತತ್ವಗಳನ್ನು ಬೋಧಿ
ಸುವ ಒಂದು ಸುಂದರವಾದ ಗ್ರಂಥವು. ಅನೇಕರು ವೀರಶೈವ ಮತತತ್ವ
ಗಳನ್ನು ಸಾದ್ಯಂತವಾಗಿ ಅರುಹಿ ಕೊಡುವಂಥ ಗ್ರಂಥವಾವುದೆಂದು ಆಗಿಂ
ದಾಗ್ಗೆ ಕೇಳುವದುಂಟು. ಇಂಥವರಿಗೆ ಈ ಶೂನ್ಯಸಂಪಾದನೆಯ ಗ್ರಂಥವು
ಬಹು ಉಪಯುಕ್ತವಾಗಿರುತ್ತದೆ. ವೀರಶೈವ ಮತತತ್ವಗಳನ್ನು ತಿಳಿದು
ಕೊಳ್ಳಲು ಈ ಗ್ರಂಥವು ಒಂದು ಅಗಾಧವಾದ ಕಣಿಯೇ ಎಂದು ಹೇಳ
ಬಹುದು. ವಾಚಕರು ಇದರಲ್ಲಿಯ ಬೇಕಾದ ಒಂದು ಪುಟವನ್ನು ತೆರೆ
ದುನೋಡಬಹುದು. ಆ ಪುಟದಲ್ಲಿಯ ವಿಷಯಗಳನ್ನು ಅವರು ನಿರೀ
ಕ್ಷಕ ದೃಷ್ಟಿಯಿಂದ ನಿರೀಕ್ಷಿಸಿದರೆ, ತಿಳಿವಳಿಕೆಯನ್ನು ದಂಗುಬಡಿಸುವಂಥ
ಗಹನವಿಚಾರಗಳು ಅವುಗಳಲ್ಲಿ ತುಂಬಿ ತುಳಕುತ್ತವೆಂಬುದು ಕೂಡಲೆ
ತಿಳಿದುಬರುವದು. ಈ ವಿಚಾರಗಳಲ್ಲಿ ವಾಚಕರು ಬೇಕಾದಷ್ಟು ಓಲಾ
ಡಬಹುದು, ಓಲಾಡಿ ಆನಂದಿಸಬಹುದು. ಇಷ್ಟು ಮಹತ್ವದ ಗ್ರಂಥವು
ಈ ಶೂನ್ಯಸಂಪಾದನೆಯಾಗಿದೆ.

ಗೂಳೂರು ಸಿದ್ಧವೀರಣಾಚಾರ್ಯನು ಈ ಶೂನ್ಯಸಂಪಾದನೆಯನ್ನು
ರಚಿಸಿದ ಪದ್ಧತಿಯು ಹೊಸಮಾದರಿಯದಾಗಿರುತ್ತದೆ. ಈ ಪದ್ಧತಿಯನ್ನು
ಅವನ ಹಿಂದೆ ಯಾರೂ ಅನುಸರಿಸಿದಂತೆ ತೋರಿಬರುವದಿಲ್ಲ. ಅವನ
ಪದ್ಧತಿ ಎಂದರೆ ಹಿಂದಿನ ಕಾಲದ ಬಸವಾದಿ ಶಿವಶರಣರ ಪ್ರಬಲವಾದ
ರಹಸ್ಯಾರ್ಥವುಳ್ಳ ವಚನಗಳನ್ನೇ ಆಯ್ದುಕೊಂಡು ಅವುಗಳನ್ನು ವಾದಾ
ತ್ಮಕವಾಗಿ ಉದಹರಿಸಿ ಧರ್ಮತತ್ವಗಳನ್ನು ನಿರೂಪಿಸುವದು ಇರುತ್ತದೆ.
ಅವನು ಹೀಗೆ ಪುರಾತನರ ಉಕ್ತಿಗಳನ್ನು ಆರಿಸಿ ಅವುಗಳ ಮೂಲಕ
ಧರ್ಮತತ್ವಗಳನ್ನು ನಿರೂಪಿಸಿದ್ದು ಒಂದು ಮಹತ್ತರವಾದ ಕಾರ್ಯವೆಂತಲೇ
ನಾವು ಹೇಳಬೇಕು. ಇದರಿಂದ ಪೂರ್ವದ ಶಿವಶರಣರ ವಚನವಾಙ್ಮ
ಯದ ನಿಜಸ್ವರೂಪವನ್ನು ತಿಳಿಯಲಿಕ್ಕೆ ಸಾಧ್ಯವಾಗಿದೆ. ಇದಲ್ಲದೆ ಗ್ರಂಥ
ಕಾರನು ಈ ವಾಗ್ವಾದ ಪದ್ಧತಿಯನ್ನು ಸ್ವೀಕರಿಸಿರುವದರಿಂದ ಚರ್ಚಾತ್ಮಕ
ವಿಷಯಗಳ ಗುಣದೋಷಗಳನ್ನು ತಿಳಿದುಕೊಳ್ಳಲಿಕ್ಕೆ ಬಹು ಸಹಾಯ
ಕಾರಿಯಾಗಿದೆ. ಈ ಪದ್ಧತಿಯಿಂದ ವಿವೇಚಿಸುವ ವಿಷಯಗಳ ಬಗ್ಗೆ ಸಂಶ
ಯಗಳು ಉಳಿಯದಂತೆ ಆಗುತ್ತವೆ. ಉದಾಹರಣಾರ್ಥವಾಗಿ ಸಿದ್ಧರಾಮೇ
ಶ್ವರನ ಸಂಪಾದನೆಯಲ್ಲಿ ಇಷ್ಟಲಿಂಗವೇಕೆ ಬೇಕೆಂಬುದು, ಘಟ್ಟಿವಾಳಯ್ಯ
ನ ಸಂಪಾದನೆಯಲ್ಲಿ ಇಷ್ಟಲಿಂಗದ ಅವಶ್ಯಕತೆ ಎಷ್ಟೆಂಬುದು, ನುಲಿಯ

ಚಂದಯ್ಯನ ಸಂಪಾದನೆಯಲ್ಲಿ ಲಿಂಗಜಂಗಮರ ಸಂಬಂಧವೇನೆಂಬುದು ಹೀಗೆ ಅನೇಕಾನೇಕ ಪಟ್ಟಣಗಳ ವಿಷಯಗಳು ಈ ಗ್ರಂಥದಲ್ಲಿಯ ೨೧ ಸಂಪಾದನೆಗಳಲ್ಲೆಲ್ಲವೂ ಬಂದಿರುತ್ತವೆ. ಮತ್ತು ಈ ವಿಷಯಗಳೆಲ್ಲವು ಸಂಪೂರ್ಣವಾಗಿ ಇವುಗಳಲ್ಲಿ ಚರ್ಚಿಸಲ್ಪಟ್ಟು ಕಟ್ಟಕಡೆಗೆ ಒಂದು ನಿಶಿತ ಸಿದ್ಧಾಂತವು ಹೊರಡಿಸಲ್ಪಟ್ಟಿರುತ್ತದೆ. ಹೀಗೆ ಇದೊಂದು ಹೊಸ ಮಾದರಿಯ ಗ್ರಂಥವಾಗಿದೆ.

ಗ್ರಂಥದ ಈ ರೀತಿಯನ್ನು ನಾವು ಗ್ರೀಸ ದೇಶದಲ್ಲಿ ಆಗಿಹೋದ ಸಾಕ್ರೆಟೀಸ, ಪ್ಲೇಟೋ ಇವರ ವಿವೇಚನಾ ಪದ್ಧತಿಗೆ ಹೋಲಿಸಬಹುದು. ಅವರ ಪದ್ಧತಿಯಾದರೂ ಹೀಗೆಯೇ ಇದೆ. ಅಂದರೆ ವಾದವಿವಾದಾತ್ಮಕವಾಗಿದೆ. "ಪ್ಲೇಟೋನ ಸಂಭಾಷಣೆಗಳು" ಎಂಬ ಪ್ರಸಿದ್ಧ ಗ್ರಂಥವಿದ್ದು ಅದನ್ನು ನೋಡಿದರೆ ಅದಕ್ಕೂ ಈ ಶೂನ್ಯಸಂಪಾದನೆಗೂ ಬಹು ಸಾಮ್ಯತೆಯು ಕಂಡು ಬರುವದು. ಪ್ಲೇಟೋನು ಕೆಲವೊಂದು ವಿಷಯವನ್ನು ತೆಗೆದುಕೊಂಡು ಅದನ್ನು ಪ್ರಶ್ನೋತ್ತರ ಮೂಲಕ ವಿವೇಚಿಸಿ ಅಸತ್ಯವಾದುದನ್ನು ದೂರಮಾಡಿ ನಿಜತ್ವವನ್ನು ಸಿದ್ಧಾಂತಗೊಳಿಸುವಂತೆ ಗೂಳೂರ ಸಿದ್ಧವೀರಣಾಚಾರ್ಯನು ವೀರಶೈವ ಮತತತ್ವಗಳನ್ನು ಇದರಲ್ಲಿ ನಿಷ್ಕರ್ಷೆ ಪಡಿಸಿಹುವನು. ಇವನನ್ನು ನಾವು "ಕರ್ನಾಟಕದ ಪ್ಲೇಟೋ" ಎಂದು ಕರೆಯಬಹುದು.

ಗೂಳೂರ ಸಿದ್ಧವೀರಣಾಚಾರ್ಯನು ಮಾಡಿದ ಈ ಮಹತ್ಕರ ಕಾರ್ಯವನ್ನು ವೀರಶೈವ ಸಮಾಜವು ಮನ್ನಿಸಿ ಅವನ ಈ ಕೃತಿಗೆ ಯಾವಾಗಲೂ ಮಹತ್ವವನ್ನು ಕೊಡುತ್ತ ಬಂದಿರುವದು. ವೀರಶೈವೋಪದೇಶ ಕಾಲದಲ್ಲಿ ಅನೇಕ ವಿಧಾನಗಳು ಜರಗುತ್ತವಷ್ಟೇ. ಆ ಕಾಲಕ್ಕೆ ಉಪದೇಶವನ್ನು ದಯಪಾಲಿಸುವ ಗುರುವು ತನ್ನ ಶಿಷ್ಯನಿಗೆ ತನ್ನ ಜ್ಞಾನಕಾಲದಲ್ಲಿ ಮತತತ್ವ ಬೋಧಕವಾದ ಕೆಲ ಗ್ರಂಥಗಳನ್ನು ಅಭ್ಯಾಸಿಸಲು ಸೂಚಿಸುವದುಂಟು. ಅವುಗಳಲ್ಲಿ ಈ ಶೂನ್ಯಸಂಪಾದನೆಯು ಒಂದಾಗಿರುತ್ತದೆ. ಇದರ ಮೇಲಿಂದ ಈ ಗ್ರಂಥದ ಮಹತ್ವವು ಎಷ್ಟಿರುತ್ತದೆಂಬುದು ವಾಚಕರಿಗೆ ತಿಳಿಯದೆ ಇರಲಾರದು.

ಈಗ ಪ್ರಸಿದ್ಧವಾದ ಈ ಗ್ರಂಥವು ಎರಡು ಹಸ್ತಲಿಖಿತ ಗ್ರಂಥಗಳ ಸಹಾಯದಿಂದ ಅಚ್ಚು ಹಾಕಲ್ಪಟ್ಟಿದೆ. ಒಂದು ಗ್ರಂಥವು ಸ್ವಾಂಗಲಿ ಸಂಸ್ಥಾನದಲ್ಲಿಯ ರಬಕವಿ ಗ್ರಾಮದ್ದು ಇದ್ದು, ಎರಡನೆಯದು ಮೈಸೂರ

ಸಂಸ್ಥಾನದಲ್ಲಿಯ ಕೋಲಾರ ಜಿಲ್ಲಾ ಮೈಗಮಲೆಯ ಶ್ರೀ. ಬಸವರಾಜ ಮಂದೇವರಲ್ಲಿ ದೊರೆತದ್ದು. ಇವುಗಳಲ್ಲಿ ಮೊದಲನೆಯದು ಕೋರಿ ಕಾಗದದ ಮೇಲೆ ಬರೆದದ್ದು ಇದ್ದು, ಎರಡನೆಯದು ತಾಡವಾಲಿ ಗ್ರಂಥವಾಗಿರುತ್ತದೆ. ಇವೆರಡೂ ಗ್ರಂಥಗಳು ಸಾಧಾರಣವಾಗಿ ಶುದ್ಧವಿದ್ದು, ಈಗಿನ ಗ್ರಂಥವನ್ನು ಅಚ್ಚುಹಾಕಲಿಕ್ಕೆ ಬಹಳ ಉಪಯುಕ್ತವಾದವು. ಈ ಗ್ರಂಥಗಳನ್ನು ಕಳಿಸಿಕೊಟ್ಟದ್ದಕ್ಕೆ ಅವುಗಳ ಮಾಲಕರಿಗೆ ನಾನು ಬಹಳ ಋಣಿಯಾಗಿದ್ದೇನೆ.

ಶೂನ್ಯಸಂಪಾದನೆಯಂಥ ದೊಡ್ಡ ಗ್ರಂಥವನ್ನು ಅಚ್ಚುಹಾಕುವ ಕೆಲಸವು ಬಹು ಖರ್ಚಿನದೆಂದು ನಾವು ಬೇರೆ ಹೇಳುವ ಅವಶ್ಯವಿಲ್ಲ. ಇಷ್ಟೆಲ್ಲ ಖರ್ಚನ್ನು ಕೇವಲ ತಮ್ಮ ಲಾಭಕ್ಕಾಗಿ ಗ್ರಂಥಕರ್ತರು ಮಾಡುತ್ತಾರೆಂದು ಯಾರಾದರೂ ತಿಳಿದರೆ ಅದು ತಪ್ಪು ತಿಳವಳಿಕೆಯು. ಒಂದು ವೇಳೆ ಇಂಥ ಗ್ರಂಥಗಳು ಪ್ರಕಟವಾದ ಕೂಡಲೆ ಖರ್ಚಾಗಿ ಬಿಟ್ಟರೆ, ಹೀಗನ್ನುವದು ಕೆಲಮಟ್ಟಿಗೆ ನಿಜವೆನಿಸಿಕೊಳ್ಳಬಹುದು. ಆದರೆ ಇಂಥಹಳೇ ಧಾರ್ಮಿಕ ಗ್ರಂಥಗಳನ್ನು ಈಗಿನ ಹೊಸ ಯುಗದಲ್ಲಿ ಜನರು ತೆಗೆದುಕೊಳ್ಳುವದು ಬಹು ಕಡಿಮೆ. ಅಚ್ಚಾದ ಇಂಥ ಗ್ರಂಥಗಳ ಪ್ರತಿಗಳು ಹತ್ತರಲ್ಲಿ ಒಂದಾದರೂ ಖರ್ಚಾಗದೆ ಉಳಿದ ಪ್ರತಿಗಳು ಹುಳತಿನ್ನುತ್ತ ವರ್ಷಾನುವರ್ಷ ಹಾಗೆಯೇ ಬೀಳುತ್ತಿರುವದು ನಮ್ಮ ಅನುಭವಕ್ಕೆ ಬಂದವಾತು. ಆದ್ದರಿಂದ ಈ ಬಗೆಯ ಗ್ರಂಥಗಳು ಪ್ರಸಿದ್ಧವಾಗಬೇಕಾದರೆ ಲಕ್ಷಾವಧಿ ರೂಪಾಯಿಗಳು ದೊಡ್ಡ ಫಂಡುಗಳು ಬೇಕು ಇಲ್ಲದಿದ್ದರೆ ಪ್ರಸಿದ್ಧಿಕರ್ತರು ಲಕ್ಷಾಧೀಶರಾಗಿರಬೇಕು. ಇಲ್ಲವೆ ಯಾರೊಬ್ಬ ಸ್ವಾಭಿಮಾನ, ಧರ್ಮಾಭಿಮಾನವುಳ್ಳ ಉದಾರ ಗೃಹಸ್ಥರ ಆಶ್ರಯವು ಬೇಕು. ಇವುಗಳಲ್ಲಿ ಮೊದಲಿನ ಎರಡು ಸಂಗತಿಗಳು ವೀರಶೈವ ಸಮಾಜದಲ್ಲಿ ಅಭಾವವಾಗಿವೆ. ಆವರೆ ಮೂರನೇ ಮಾರ್ಗದಿಂದ ನಮಗೆ ಈ ಶೂನ್ಯಸಂಪಾದನೆಯ ಗ್ರಂಥವನ್ನು ಪ್ರಸಿದ್ಧಿಸಲಿಕ್ಕೆ ಬಹು ಸಹಾಯವಾಯಿತು. ಈ ಗ್ರಂಥದ ಅಚ್ಚಿನ ಖರ್ಚಿಗೋಸ್ಕರ ರಾ॥ ರಾ॥ ವೀರಭದ್ರಪ್ಪ ಬಸಪ್ಪ ಹಾಲಭಾವಿ ಬಿ. ಏ. ಎಲ್ ಎಲ್. ಬಿ. ಫರ್ಸ್ಟಕ್ಲಾಸ ಸಬ್ ಜಜ್ಜ ಧಾರವಾಡ ಇವರು ೫೦೦ ರೂ ಗಳನ್ನು ಕೊಟ್ಟು ನನಗೆ ಬಹಳ ಪ್ರೋತ್ಸಾಹಿಸಿದರು. ಇವರ ಸಹಾಯದ ಮಹತ್ವವು ನನಗೆ ಇಂತಿಷ್ಟೇ ಎಂದು ಹೇಳಲು ಸಾಧ್ಯವಿಲ್ಲ. ಈ ಮಹನೀಯರು ನನ್ನ ಗ್ರಂಥಪ್ರಕಟನಾ

ಕಾರ್ಯದಲ್ಲಿ ಅತ್ಯಂತ ಸಹಾನುಭೂತಿಯುಳ್ಳವರಾಗಿ ಯಾವಾಗಲೂ ಬಹಳ ಸಹಾಯಮಾಡುತ್ತ ಬಂದಿದ್ದಾರೆ. ಇವರಿಗೆ ನಾನು ಅತ್ಯಂತ ಋಣಿಯಾಗಿದ್ದೇನೆ. ಇವರ ಅನುಕರಣವನ್ನು ನಮ್ಮ ಸಮಾಜದ ಇತರ ಧನಿಕರು ಮಾಡಿದ್ದಾದರೆ ವೀರಶೈವ ಗ್ರಂಥಗಳು ತೀವ್ರ ಪ್ರಕಾಶಕ್ಕೆ ಬಂದು ಎಷ್ಟು ಲೋಕೋತ್ತರ ಕಲ್ಯಾಣವಾದೀತೆಂಬುದನ್ನು ಹೇಳುವದು ಅವಶ್ಯವಿಲ್ಲ.

ಈ ಶೂನ್ಯಸಂಪಾದನೆಯ ಗ್ರಂಥವು ರಾ॥ ರಾ॥ ಹಾಲಭಾವಿಯವರ ಸೂಚನೆಯ ಮೇರೆಗೆ ಮಹಾಶಿವಾನುಭಾವಿಗಳಾದ ಶಿವಶರಣರ ಮಾರ್ಗವನ್ನು ಕೈಕೊಂಡು ಅದರಂತೆ ನಿತ್ಯ ಆಚರಿಸಿ ಸೊಲ್ಲಾಪುರದಲ್ಲಿ ವಾಸಿಸಿ ಅಲ್ಲಿಯೇ ಕೆಲವು ವರ್ಷಗಳ ಹಿಂದೆ ಶಿವೈಕ್ಯರಾಗಿ ಹೋದ ನಾಲವತವಾಡದ ಶಿ. ಮೂ. ವೀರಯ್ಯನವರು ಶಿವಶರಣ ಇವರಿಗೆ ಸಮರ್ಪಿಸಲ್ಪಟ್ಟಿದೆ. ಹೀಗೆ ಮಾಡಿದ್ದು ಯೋಗ್ಯವೆಂದು ವಾಚಕರು ಅನುಮತಿಸದೆ ಇರಲಾರರು.

ವಿಜಾಪುರ. **ಫ. ಗು. ಹಳಕಟ್ಟಿ.**
೨೪-೯-೩೦ ಸಂಪಾದಕ.

ಶೂನ್ಯ ಸಂಪಾದನೆ.



ಶ್ರೀ ವಿಮಲಮುಕ್ತಿದಾಯಕ ಸಾಮಸನಮಯ ಪರಮಚರಿತ ಷಟ್ಸ್ಥಲಜ್ಞಾನಾಯಕ। ಭೂಪಿನುತ ಸಚ್ಚಿದಾತ್ಮಕ ಭಾವಜಹರ ಸಲಹು ಸಿದ್ಧಲಿಂಗ ದೇಶಿಕ ॥೧॥

ಆವಿಷ ಕುಂಭನಛೇದನ ಪ್ರೇಮದಿ ಪದ ನಾಲ್ಕು ಶರಣಜನಕೀವೃತ್ತನಿ। ರಾಮಯನೆನಿಪನನೊಲ್ದನು ನೋಮುದದಿಂ ನುತಿಪೆ ಜೋಳಬಸವಾಚಾರ್ಯನಾ ॥೨॥

ಪರ ಜೋಳಬಸವ ದೇಶಿಕ ನುರುತರ ಕೃಪೆಯಾಂತು ಅಲ್ಲಮಪ್ರಭು ತಾಯನಾ। ಪರವಾನುಭಾವ ಜೋಳೆಯ ನೊರೆದೆನು ಗೂಳೂರಸಿದ್ಧವೀರಾಚಾರ್ಯ ॥೩॥

ಶ್ರೀಮತ್ಪರಾಪರಶಿವ ನಿತ್ಯನಿರ್ಮಲ ನಿರಘ ನೀರಸೂಯ್ಯ ಅನಿರ್ವಾಚ್ಯ ಪರಂಜ್ಯೋತಿ ಸ್ವರೂಪ ಷಟ್ಸ್ಥಲಜ್ಞಾನ ಪ್ರಭಾಪುಂಜರಂಜಿತ ಸಕಲಭಕ್ತ ಹೃತ್ಕಮಲಕರ್ನಿಕಾ ವಾಸ ಶರಣಜನ ಮುಕ್ತಿಪ್ರದಾಯಕ ಅಖಿಲಜಗದಾರಾಧ್ಯರಪ್ಪ ತೋಂಟದ ಸಿದ್ಧಲಿಂಗೇಶ್ವರನ ಕೃಪಾಪ್ರಸನ್ನ ಪುತ್ರರಾದ ಜೋಳಬಸವೇಶ್ವರ ದೇವರು ಮುಖ್ಯವಾದ ಪಸುಫೆಯ ಷಟ್ಸ್ಥಲಜ್ಞಾನಿಗಳಾದ ದಿವ್ಯಾನುಭಾವಿಗಳಾದ ಜೋಧೆನಿಡಿದು ಗೂಳೂರಸಿದ್ಧವೀರೇಶ್ವರನೆಂಬ ಮಹಾನುಭಾವಿಯು ನಿತ್ಯನಿರ್ಮಲ ನಿರಂಜನನೆನಿಪ ಅಲ್ಲಮಪ್ರಭುದೇವರು ಸಮಸ್ತ ಮಹಾ ಗಣಂಗಳಿಗೆ ದಿವ್ಯಜ್ಞಾನ ಪ್ರಸನ್ನಮಂ ಜೋಧಿಸಿದಕ್ರಮವಂ। ಅಖಿಳ ಪುರಾತನರ ವಚನಂಗಳಿಂದೆ ಸಂಗ್ರಹಿಸಿದವು. ಶಿವಗಣಂಗಳಿಗೆ ಶರಣಾರ್ಥಿ.

ಪ್ರಥಮದಲ್ಲಿ ಅಖಂಡಾವ್ಯಯ, ಅನುಪಮ, ನಿರವಯ, ನಿರಂಜನ, ಸರ್ವ ಶೂನ್ಯವನೊಳಕೊಂಡ, ಸಚ್ಚಿದಾನಂದ ನಿತ್ಯಪರಿಪೂರ್ಣವಪ್ಪ ನಿಃಕಲಲಿಂಗವು ಧ್ಯಾನಪೂಜೆಗಳಿಲ್ಲದೆ, ನಿರವಯವಲ್ಲಿ ಬಯಲಿಗನಾಗಿ, ಇರ

ಬಾರದೆಂದು, ತನ್ನ ಸ್ವೇಚ್ಛಾ ಲೀಲಾವಿಲಾಸವ ನೆನಹಿಂದ ತನ್ನ ಚಿತ್ಪ್ರ
ಭಾಸಾಮರ್ಥ್ಯಶಕ್ತಿಯ ಮುಂದುಗೊಂಡು, ಅನಂತಕೋಟಿ ಬ್ರಹ್ಮಾಂಡಂಗ
ಳನು ಅನಂತಕೋಟಿ ಆತ್ಮರುಗಳನು ತನ್ನಲ್ಲಿಯೆ ಪುಟ್ಟಿಸಿ, ಆತ್ಮರುಗಳಿಗೆ
ಸಂಚವಿಂಶತಿ ತತ್ವಂಗಳ ಸಂಬಂಧಿಸಿದಲ್ಲಿ ಆ ಆತ್ಮರುಗಳು ದೇಹೋದಂ
ಪೆಂದು ಜಾತಿವರ್ಣಾಶ್ರಮ ಕುಲಗೋತ್ರ ನಾಮ ಸೀಮೆ, ಸುಖದುಃಖ,
ಬಂಧಮೋಕ್ಷಕ್ಕೊಕಗಾಗಿ ತಮ್ಮ ನಿಜಸ್ವರೂಪವ ಮರೆದ ಆತ್ಮರುಗಳ
ಕಾಲಕಾಮರಿಗೆ ವಶಮಾಡಿ, ಅವರ ಸುಖದುಃಖ, ಬಂಧಮೋಕ್ಷಂಗಳ
ಹೊಪ್ಪದೆಯಂತ್ರವಾಹಕನಾಗಿ, ಆಡಿಸುತ್ತಿರ್ಪನಾ ಪರಶಿವಲಿಂಗವು. ಅಂತಪ್ಪ
ಆತ್ಮರುಗಳೊಳಗೆ ಜನ್ಮದ ಕಡೆಗಂಡು ಶಿವಸಂಸ್ಕಾರ ಒಚಗಿ, ದೇಹಭಾ
ವಕ್ಕೆ ಹೇಸಿ, ಸಂಸಾರವಿಮೋಚನಮಂಮಾಡಿ, ಗುರೋಪಾವಸ್ಥೆಯಂ
ಮಾಡುತ್ತಿರಲು, ಆ ಪರಶಿವಲಿಂಗವು ಗುರುವಾಗಿ ಬಂದು, ತ್ರಿವಿಧ
ದೀಕ್ಷೆಯಿಂದೆ ಮಲತ್ರಯಂಗಳ ಕಳೆದು, ದೀಕ್ಷೆಯಿಂ ರಕ್ಷಿಸಿದ, ಲಿಂಗಸ್ವ
ರೂಪವಾಗಿ ಬಂದು ಕರಸ್ಥಲದಲ್ಲಿ ಪೂಜೆಗೊಂಡು ರಕ್ಷಿಸಿದ, ಜಂಗಮ
ಸ್ವರೂಪವಾಗಿ ಬಂದು, ಅಂತರಂಗ ಬಹಿರಂಗದಲ್ಲಿ ಭರಿತನಾಗಿ ಬೋಧಿಸಿ
ರಕ್ಷಿಸಿ, ರಕ್ಷಿಸಿದ ಪ್ರಸಾದವ ಕರುಣಿಸಿ ತನ್ನೊಳಗೆ ಕೂಡಿಕೊಳುತಿಪ್ಪನು.
ಆ ನಿಷ್ಕಲಪರಶಿವಲಿಂಗವು ಆ ನಿಷ್ಕಲಪರಶಿವನ ಸಚ್ಚಿದಾನಂದ ಸ್ವರೂಪ
ವೆನಿಸಿವ, ಬಸವಣ್ಣ, ಚನ್ನಬಸವಣ್ಣ, ಪ್ರಭುದೇವರೇ ಗುರು ಲಿಂಗ
ಜಂಗಮ ಸ್ವರೂಪವಾಗಿ ಸಕಲ ಜಗತ್ಪಾವನ ನಿಮಿತ್ಯವಾಗಿ, ಮರ್ತ್ಯಕ್ಕೆ
ಅವತರಿಸಿವರು. ಇಂತೀ ಗುರು ಲಿಂಗ ಜಂಗಮ ಮೂರು ಆ ನಿಷ್ಕಲಪರ
ಶಿವಲಿಂಗ ತಾನೆ ಆ ಪರಶಿವಲಿಂಗವು ಜಗದ್ಧಿತಾರ್ಥವಾಗಿ, ಮೂರಾಗಿ
ಅವತರಿಸಿವರೆ, ಇದೇನುಕಾರಣ ಮರ್ತ್ಯಕ್ಕೆ ಬಂದರೆಂದು ಸಂಕಲ್ಪಿಸಿ ಶಾಪ
ದಿಂದ ಬಂದರೆಂದು ಅವನಾನೊಬ್ಬ ನುಡಿವುತಿದ್ದಾನು ಅವನು ಇಪ್ಪ
ತ್ತೆಂಟುಕೋಟಿ ನರಕವಲ್ಲಿ ರವಿ, ಶಶಿವುಳ್ಳನ್ನಬರ ನರಕವನನುಭವಿಸು
ತ್ತಿರ್ಪನು. ಅಂತಲ್ಲವೆ ಜಗಹಿತಾರ್ಥವಾಗಿ ನಾಲ್ಕು ಯುಗಂಗಳಲ್ಲಿ ಅವ
ತರಿಸಿವರೆಂಬುದಕ್ಕೆ ಪ್ರಭುದೇವರ, ಚನ್ನಬಸವೇಶ್ವರ ದೇವರ, ಸ್ವಯ ವಚ
ನವೆ ಸಾಕ್ಷಿ. ಅದೆಂತೆಂದೊಡೆ,

"ವಚನ" ಕೃತಾಯುಗದಲ್ಲಿ ಜಗಹಿತಾರ್ಥವಾಗಿ ಬಂದು ದೇವಾಂಗ
ನೆಂಬ ಗಣೇಶ್ವರನಾಗಿ ಆರಾಧಿಸುವಲ್ಲಿ ಭಕ್ತಿಕಾರಣ ಸ್ಥೂಲಕಾಯನೆಂಬ
ಜಂಗಮವಾಗಿ ಬಂದು ಲಿಂಗಾರ್ಚನೆಯುವಾಡಿ, ಹೋದನು. ತ್ರೇತಾ

ಯುಗವಲ್ಲಿ ಜಗಹಿತಾರ್ಥವಾಗಿ ಬಂದು ಘಂಟಾಕರ್ಣನೆಂಬ ಗಣೇಶ್ವರ
ನಾಗಿ ಬಂದು ಆರಾಧಿಸುವಲ್ಲಿ, ಭಕ್ತಿಕಾರಣ ಶೂನ್ಯಕಾಯನೆಂಬ ಜಂಗ
ಮವಾಗಿ ಬಂದು ಲಿಂಗಾರ್ಚನೆಯ ಮಾಡಿ ಹೋದನು. ದ್ವಾಪರದಲ್ಲಿ ಜಗ
ಹಿತಾರ್ಥವಾಗಿ ವೃಷಭನೆಂಬ ಗಣೇಶ್ವರನಾಗಿಬಂದು ಆರಾಧಿಸುವಲ್ಲಿ, ಭಕ್ತಿ
ಕಾರಣ ಅನುನಿಷನೆಂಬ ಜಂಗಮವಾಗಿ ಬಂದು, ಲಿಂಗಾರ್ಚನೆಯ ಮಾಡಿ
ಹೋದನು. ಕಲಿಯುಗದಲ್ಲಿ ಜಗಹಿತಾರ್ಥವಾಗಿ, ಬಸವನೆಂಬ ಗಣೇಶ್ವ
ರನಾಗಿಬಂದು, ಗುರು, ಲಿಂಗ, ಜಂಗಮ, ಪಾದೋದಕ, ಪ್ರಸಾದವ
ಕೊಡಯನೆಲ್ಲರಿಗೆ ತೋರಿ ಆರಾಧಿಸುವಲ್ಲಿ, ಭಕ್ತಿಕಾರಣ ಪ್ರಭುವೆಂಬ
ಜಂಗಮವಾಗಿ ಲಿಂಗಾರ್ಚನೆಯುವಾಡಬಂದ. ಇಂತೀ ಪರಶಿವಲಿಂಗವು
ಲೀಲಾವಿನೋದಕ್ಕೆ ದೇವ ಭಕ್ತನೆಂಬ ಉಭಯನಾಮವ ಧರಿಸಿ, ಕ್ರಿಯಾಂ
ಗದಿಂ ಬಂಮದನರಿಯದೆ, ಶಾಪದಿಂದ ಬಂದರೆಂದು ಸಂಕಲ್ಪಿಸಿ ನುಡಿವ
ರಿಗೆ,ನಾಯಕನರಕ ತಪ್ಪದು ಕೂಡಲಚನ್ನ ಸಂಗಮದೇವಾ.

ಇನ್ನು ಪ್ರಭುದೇವರ ಗದ್ಯ॥ ಶ್ರೀಮತ್ಪರಮ ಪರಮಾನಂದ, ಪರಂ
ಜ್ಯೋತಿ ಪರಮೇಶ್ವರ ಅಗಮ್ಯ ಅಗೋಚರ ಅಪ್ರಮೇಯ ಅನಾಮಯ
ಅನೌಪಮ್ಯ ಅಪ್ರತರ್ಕ್ಯ, ಮಹಾಜ್ಞಾನ ಪ್ರಭಾಮಯ, ಯಮ, ನಿಯಮ
ಆಸನ ಪ್ರಾಣಾಯಾಮ,, ಪ್ರತ್ಯಾಹಾರ, ಧ್ಯಾನ, ಧಾರಣ, ಸಮಾಧ್ಯ
ಷ್ಟಾಂಗಯೋಗೀಶ್ವರ ದೇಹೇಂದ್ರಿಯ ಮನಃ ಪ್ರಾಣಾಪಂಕಾರಾದಿ ಗುಣ
ಧರ್ಮ ಕರ್ಮ ನಿರ್ಲೇಪನ ಸಕಲ ಭುವನಾಂತರಂಗ, ನಿತ್ಯನಿರ್ಮಲಸ್ವ
ರೂಪ, ಶಿವಶರಣ ಹೃತ್ಕಮಲಕರ್ಣಿಕಾವಾಸ, ಮುಕ್ತ ಮುಧುಕರಾಯ
ಮಾನ ಇಷ್ಟಲಿಂಗ ಪ್ರಾಣಲಿಂಗ ತೃಪ್ತಿಲಿಂಗಾಂಕಂಗಳೇಸ, ಗುರುಲಿಂಗ
ಜಂಗಮ ಪ್ರಸಾದ ಪಾದೋದಕಾದಿ ಪಂಚಾಚಾರ ಪ್ರತಿಷ್ಠಾಪನಾಚಾರ್ಯ,
ಭಕ್ತ, ಮಾಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣೈಕ್ಯಾದಿ ಷಟ್ಸ್ಥಲ
ಚಕ್ರವರ್ತಿ, ಬಸವ ಚನ್ನಬಸವರಾಜ ಪ್ರಾಣನಾಯಕ, ಪರಮ ಶ್ರೀ ವೀರ
ಶೈವಾಚಾರ ವಿರೋರತ್ನ, ಶ್ರೀ ವೀರಶೈವಾಚಾರ ಪ್ರಮಥನಾಯಕ, ಶ್ರೀ
ವೀರಶೈವಾಚಾರ ದೀಕ್ಷಾಚಾರ್ಯ, ಮರ್ತ್ಯಲೋಕ ಪಾವನಕಾರಣಾವತಾರ
ಅನುಪಮ ಶ್ರೀ ಚರಣಾಂಭೋಜಕರ್ಣಿಕಾವಾಸ, ಗುಹೇಶ್ವರನಾಮಾವೃತ
ಸ್ವೀಕಾರಸಂತುಷ್ಟ, ಶ್ರೀಮತ್ಸಕಲ ಜಗದಾಚಾರ್ಯರುನುಪ್ಪ ಅಲ್ಲಮಪ್ರ
ಭುದೇವರು ಚನ್ನಬಸವರಾಜದೇವರು ಮುಖ್ಯವಾದ, ಅಸಂಖ್ಯಾತಮ
ಹಾಗಣಂಗಳೊಡನೆ ಮಹಾನುಭಾವ ಪ್ರಸಂಗವುಂಮಾಡಿದ ಶೂನ್ಯಸಂ

ಪಾದನೆಯೊಳ್ ಸಪ್ತೋಷ್ಠಿ ಕಥಾಪ್ರಸಂಗವನು ಮುಕ್ತಕವಾಗಿರ್ದ ಶಿವಾ
ಪ್ರೀತವಚನಂಗಳನು, ಉತ್ತರ ಪ್ರತ್ಯುತ್ತರಸಂಬಂಧವಾಗಿ ಸೇರಿಸಿ ಶಿವಗಣ
ಪ್ರಸಾದಿ ಮಹಾದೇವಯ್ಯಗಳು ಮರ್ತ್ಯಲೋಕದ ಮಹಾ ಗಣಂಗಳಿಗೆ
ಈ ಮಹಾನುಭಾವ ಪ್ರಸಂಗಮಂ ಸಮರ್ಪಿಸಿದಲ್ಲಿ ಸಿದ್ಧರಾಮೇಶ್ವರ ದೇವ
ರಿಗೆ ಉಪದೇಶಕ್ರಮವಿಲ್ಲದಿರ್ದೊಡೆ, ಗುಮ್ಮಳಾಪುರದ ಸಿದ್ಧಲಿಂಗದೇವರು
ಸಮಸ್ತ ಪುರಾತನರ ವಚನಸನ್ಮತವಿಂ ಸಂಗ್ರಹಿಸಲು, ಆ ಕ್ರಮವಿಡಿದು
ಈ ಶೂನ್ಯಸಂಪಾದನೆಯ ಸೇರಿಸಿ ಶಿವಗಣಂಗಳಿಗೆ ಸಮರ್ಪಿಸಿದೆನು.

ಪಿಂಡಸ್ಥಲ.

ಪ್ರಥಮವಲ್ಲಿ ಪ್ರಭುದೇವರು ನಿರೂಪಿಸಿದ ಪಿಂಡಸ್ಥಲದ ವಚನ॥
ಕಲ್ಲೊಳಗಣ ಪಾವಕನಂತೆ, ಉದಕದೊಳಗಣ ಪ್ರತಿಬಿಂಬದಂತೆ, ಬೀಜ
ದೊಳಗಣ ವೃಕ್ಷದಂತೆ, ಶಬ್ದದೊಳಗಣ ನಿಃಶಬ್ದದಂತೆ, ಗುಹೇಶ್ವರ ನಿಮ್ಮ
ಶರಣ ಸಂಬಂಧ ॥೧॥

ಕಲ್ಲೊಳಗಣ ಕಿಚ್ಚು ಉರಿಯ ಬಲ್ಲುದೆ? ಬೀಜದೊಳಗಣ ವೃಕ್ಷ
ಉಲಿಯಬಲ್ಲುದೆ? ತೋರಲಿಲ್ಲಾಗಿ ಬೇರಲಿಲ್ಲಾರಿಗೆಯು, ಗುಹೇಶ್ವರ ನಿಂದ
ನಿಲವನನುಭವ ಸುಖಿ ಬಲ್ಲಾ ॥೨॥

ಪಿಂಡ ಜ್ಞಾನಸ್ಥಲ.

ಇಂತು ಪಿಂಡದಲ್ಲಿ ಶಿವತತ್ವವನಡಗಿಸಿಕೊಂಡಿರ್ಪ ಆತ್ಮನ ಅಂತ
ರಂಗದೊಳಗಣ ಶಿವತತ್ವವೇ ಜ್ಞಾನಾಂಕುರ ಸ್ವರೂಪವಾಗಿ, ಆ ಸುಜ್ಞಾನ
ದೃಷ್ಟಿಯಿಂ ತಿಳಿದು ನೋಡಿ, ನಾನೀ ಮಾಂಸ ಪಿಂಡದುತ್ಪತ್ತಿ ಸ್ಥಿತಿಲ
ಯದವನಲ್ಲ. ಈ ಬ್ರಹ್ಮಾಂಡಾದಿ ಸಮಸ್ತ ಪ್ರಪಂಚುಗಳು ತೋರದ ಮುನ್ನ
ಆದಿ ಚಿತ್ ಶಕ್ತಿಯಿಂದುದಯಿಸಿದೆನೆಂದು, ಆತ್ಮನು ತನ್ನ ತಾನೇ ವಿವೇಕಿ
ಸುತ್ತಿರ್ದನೆಂದು, ಪ್ರಭುದೇವರು ನಿರೂಪಿಸುತ್ತಿರ್ದರದೆಂತೆಂದೊಡೆ,

॥ವಚನ॥ ಆದಿ ಆಧಾರ ವಿಲ್ಲದಂದು, ಹಮ್ಮು ಬಿಮ್ಮುಗಳಿಲ್ಲದಂದು,
ಸುರಾಳ ನಿರಾಳವಿಲ್ಲದಂದು, ಶೂನ್ಯ ನಿಃಶೂನ್ಯವಿಲ್ಲದಂದು, ಸಚರಾಚರ
ವಲ್ಲಿ ರಜನೆಗೆ ಬಾದಮಂದು, ಗುಹೇಶ್ವರನ ಶರಣನುದಯಿಸಿದನಂದು. ॥೩॥

ನಾದ, ಬಿಂದು ಕಳೆಗಳಿಲ್ಲದಂದು, ನಿರ್ಭಯನೆಂಬ ಗಣೇಶ್ವರನು
ಉತ್ಪತ್ತಿ ಸ್ಥಿತಿಲಯಂಗಳಿಲ್ಲದಂದು, ಅಕ್ಷಯನೆಂಬ ಗಣೇಶ್ವರನು ಏದುಸೇ
ವಂಗಳಿಲ್ಲದಂದು, ಓಂಕಾರನೆಂಬ ಗಣೇಶ್ವರನು ಯುಗಜುಗಂಗಳಿಲ್ಲದಂದು,
ಊರ್ಧ್ವಮುಖನೆಂಬ ಗಣೇಶ್ವರನು ಗುಹೇಶ್ವರನೆಂಬ ಲಿಂಗವಿಲ್ಲದಂದು,
ನಿರ್ವಾಯನೆಂಬ ಗಣೇಶ್ವರನು ॥೪॥

ಇಂತು ನಿಃಕಲ ಪರಶಿವಲಿಂಗವೆ ತನ್ನ ಲೀಲಾವಿನೋದದಿಂದೆ,
ಅನಂತಕೋಟಿ ಬ್ರಹ್ಮಾಂಡಂಗಳನು ತನ್ನಲ್ಲಿಯೆ ಹುಟ್ಟಿಸಿ, ವಿಲಾಸಿಸುತ್ತಿರ್ಪ
ಪರಶಿವಲಿಂಗದ ಸಕಲ ನಿಃಕಲಕ್ಕೆ ಕಾರಣವೆ ಪ್ರಭುದೇವರು. ಆ ಪ್ರಭು
ದೇವರು ಭಕ್ತಿಕಾರಣ ನಾಲ್ಕು ಯುಗಂಗಳಲ್ಲಿ ಅವತರಿಸಿದಲ್ಲಿ ನಿರ್ವಾ
ಯನಿರಂಜನ ಮಾಯಾಕೋಳಾಹಳನೆಂಬುದೆ ಸತ್ಯ. ಹೀಗಲ್ಲದೆ ಮಾಯಾ
ಶಕ್ತನು ಮಾಯಾವಶಗತನೆಂದು ನುಡಿವವರಿಗೆ ಗುರು ಲಿಂಗ ಜಂಗಮ
ದ್ರೋಹ ತಪ್ಪದು. ಮಾಯಾ ಕೋಳಾಹಾಳನೆಂಬುದಕ್ಕೆ ಹಡಪದಪ್ಪಣ್ಣಗಳ
ವಚನವೇ ಸಾಕ್ಷಿ. ಅದೆಂತೆಂದೊಡೆ,

॥ವಚನ॥ ಬ್ರಹ್ಮ ವಿಷ್ಣುಗಳ ಮಾಯೆ ತೊತ್ತಳಿಮುಳಿದಂದು, ದೇವ
ದಾನವ ಮಾನವರ ಮಾಯೆ ಅಗಿವಗಿದು ತಿಂಬುದು, ರುದ್ರಗಣ ಪ್ರಮ
ಥಗಣಂಗಳೆಂಬವರ ಮಾಯೆ ಮರುಳ್ಮಾಡಿ ಕಾಡುವಂದು, ಸೊಸಲಕಣ್ಣ
ಪಂಚಮುಖ ದಶಭುಜದವರಿಗೆ ಮಾಯೆ ಅರ್ಧಾಂಗಿಯಾದಂದು, ಅಷ್ಟ
ಶತ ಸಹಸ್ರ ಋಷಿಗಳ ಮಾಯೆ ತಪೋಮದದಲ್ಲಿ ಕೆಡಹುವಂದು, ನಾನು
ಮಾಯಾಕೋಳಾಹಳನಾಗಿರ್ದೆನು ಕಾಣಾ ಗುಹೇಶ್ವರ. ॥೫॥

ಇಂತು ಪ್ರಭುದೇವರು ಮರ್ತ್ಯಲೋಕದಲ್ಲಿ ನಾಲ್ಕು ಯುಗಂಗ
ಳಲ್ಲಿಯೂ ಅನಾದಿಗಣೇಶ್ವರತ್ವಮಂ ತಾಳಿ ನಾನು ಮಾಯಾ ಕೋಳಾ
ಹಳನಾಗಿ ಬಂದೆನೆಂದು ನಿರೂಪಿಸಿದ ವಚನ. ॥

ಕೃತಯುಗದಲ್ಲಿ ನಾನು ಭಕ್ತಿಕಾರಣ ಸ್ಥೂಲಕಾಯನೆಂಬ ಗಣೇ
ಶ್ವರನಾಗಿರ್ದೆನಯ್ಯ! ತ್ರೇತಾಯುಗದಲ್ಲಿ ನಾನು ಭಕ್ತಿಕಾರಣ ಶೂನ್ಯಕಾ
ಯನೆಂಬ ಗಣೇಶ್ವರನಾಗಿರ್ದೆನಯ್ಯ! ದ್ವಾಪರದಲ್ಲಿ ನಾನು ಭಕ್ತಿಕಾರಣ
ಅನುಮಿಷನೆಂಬ ಗಣೇಶ್ವರನಾಗಿರ್ದೆನಯ್ಯ! ಕಲಿಯುಗದಲ್ಲಿ ನಾನು ಭಕ್ತಿ
ಕಾರಣ ಅಲ್ಲಮಪ್ರಭುದೇವರೆಂಬ ಗಣೇಶ್ವರನಾಗಿರ್ದೆ ಕಾಣಾ ಗುಹೇ
ಶ್ವರಾ ॥

ಸಂಸಾರ ಹ್ಯೇಯಸ್ಥಲ.

ಇಂತು ಅನಾದಿ ಗಣೇಶ್ವರತ್ವಮಂ ನಿರೂಪಿಸಿದ ಪ್ರಭುದೇವರು ಆದಿ ಚಿಚ್ಛಕ್ತಿಯಿಂದಮಯಿಸಿದನೆಂದರಿದಾತ್ಮನು ತನ್ನಿಂದನ್ಯವಾದ ಸಂಸಾರ ಭ್ರಾಂತಿಯಂ ನಿವೃತ್ತಿ ಮಾಡುತ್ತಿರ್ದನೆಂದು ನಿರೂಪಿಸಲು ಸಂಸಾರ ಹ್ಯೇಯ ಸ್ಥಲವಾದುದು.

॥ವಚನ॥ ಕಾಯದ ಮೊದಲಿಂಗೆ ಬೀಜ ಎಂಬುದೆಂದರಿಯದೀ ಲೋಕವೆಲ್ಲ. ಇಂದ್ರಿಯಂಗಳು ಬೀಜವಲ್ಲ. ಆ ಕಳಾಭೇದವಲ್ಲ. ಸ್ಪಷ್ಟ ಬಂದೆರೆಗಿತ್ತಲ್ಲ. ಇದಾವಂಗೆ ತಿಳಿಯಬಾರದಾಗಿ, ಶುದ್ಧ ಸುಯಿಧಾನವಲ್ಲ ಕಾಣಾ ಗುಹೇಶ್ವರಾ ॥೬॥

ಹೆಳ್ಳೊಳಗೆ ಉಳ್ಳಿ ಬರುತ್ತಿರಲು, ಸೊಪ್ಪೆ ತೆರೆಗಳು ತಾಗದಿಪ್ಪವೆ? ಸಂಸಾರ ಸಾಗರದೊಳಗೆ ಮುಳುಗಾಡುತ್ತಿಪ್ಪ ಪ್ರಾಣಿಗಳಿಗೆ ಸುಖ ದುಃಖಂಗಳು ,ತಾಗದಿಪ್ಪವೆ? ಇದು ಕಾರಣ ಮೂರ್ತಿಯಾದುದಕ್ಕೆ ಪ್ರಳಯ ತಪ್ಪದು ಕಾಣಾ ಗುಹೇಶ್ವರಾ ॥೮॥

ಆಯಿತ್ತೆ ಉದಯಮಾನ, ಹೋಯಿತ್ತೆ ಅಸ್ತಮಾನ, ಆಳಿದವ ನಿರಲಾದ ನಿರ್ಮಿತಂಗಳೆಲ್ಲ ಕತ್ತಲೆ ಕವಿಯಿತ್ತು. ಮೂರು ಲೋಕದೊಳಗೆ ಇವರಜ್ಜುಗವೇನು ಹೇಳಾ ಗುಹೇಶ್ವರಾ? ॥೯॥

ಸಂಸಾರವೆಂಬ ಹೆಣ ಬಿದ್ದರಿ ತಿನಬಂದ ನಾಯ ಜಗಳವ ನೋಡಾ! ನಾಯ ಜಗಳವ ನೋಡಿ ಹೆಣ ನಗುತ್ತಿದೆ. ಗುಹೇಶ್ವರ ಲಿಂಗವಲ್ಲಿಲ್ಲ ಕಾಣೆರಯ್ಯ ॥೧೦॥

ನೀರ ಜೊಂಬೆಯ ಜೋಹವ ತೊಟ್ಟು ಅಗ್ನಿ ಬಣ್ಣದ ಹೊದಿಕೆಯ ಹೊದ್ದು ಗಾಳಿಯ ಗತಿಯಲ್ಲಿ ಸುಳಿವಾಡುವ ಪ್ರಾಣಿಗಳು ದೇವರನೆತ್ತಬಲ್ಲರು ಹೇಳಾ ಗುಹೇಶ್ವರಾ? ॥೧೧॥

ನೆಲದ ಜೊಂಬೆಯ ಮಾಡಿ, ಜಲದ ಬಣ್ಣವನುಡಿಸಿ, ಹಲವು ಪರಿಯ ತ್ರಮದಲ್ಲಿ ಉಲಿವ ಗೆಜ್ಜೆಯಕಟ್ಟಿ, ವಾಯುವನಲನ ಸಂಚಕ್ಕೆ ಅರಳೆಲೆಯ ಶೃಂಗಾರವ ಮಾಡಿ, ಆಡಿಸುವ ಯಂತ್ರವಾಹಕನಾರೊ ಬಯಲಕಂಭಕ್ಕೆ ಶಂದು ಸ್ವಯವಾಗಿ, ಪರವ ನಿಲಿಗೊಳಿಸಿದನೆ. ಸ್ವಯವ ವ್ಯಯವಾಯಿತ್ತು ಕಾಣಾ ಗುಹೇಶ್ವರಾ ॥೧೨॥

ಮಾನವ ತೋರಿಪ ಆಕಳಿಗೆ ಕೊಳಗವ ತೋರಿಪ ಕೆಚ್ಚಲು, ತಾಳ ಮರವುದ್ದಿಹವೆರಡುಕೋಡು, ಅವನರಸ ಹೋಗಿ ಆರುದಿನ, ಅದು ಕೆಟ್ಟು ನೂರುದಿನ, ಅಘಟಿತಘಟಿತ ಅರಸುವ ಬಾರಯ್ಯ ಗುಹೇಶ್ವರಾ. ॥೧೩॥

ಅಡವಿಯೊಳಗೆ ಕಳ್ಳರು ಕಡವರವ ಸ್ವಾಮಿಯನು ಹುಡುಕಿ ಅರಸುತ್ತೈದಾರೆ. ಸೊಡರು ನಂದಿ ಕಾಣದೆ, ಅನ್ನಪಾನವ ಹಿರಿಯರು ಎಲ್ಲರು ಅವರ ಪಾನವನುಂಡು ಸುರಾಪಾನವ ಬೇಡುತ್ತೈದಾರೆ. ಅರಿವ ಹಾರುವನೊಬ್ಬ ಅರಿವ ತಲೆಯ ಹಿಡಿದುಕೊಂಡು, ಅಧ್ಯಾತ್ಮವಿಕಾರದ ನೆತ್ತರ ಕುಡಿವನು ಗುಹೇಶ್ವರಾ ॥೧೪॥

ಜಂಬೂ ದ್ವೀಪ ವ್ಯವಹಾರಿ ಕಂಡ ಬಂಡವ ತುಂಬಿ ಕುಂಭಿನಿಯುವರವ ಮೇಲೆ ಪಸಾರವನಿಕ್ಕಿದ ಉಪ್ಪಣ ತೃಷ್ಣೆ ಘನವಾಗಿ, ಕಡಲೇಳು ಕುಡಿದು ನೀರಡಿಸಿ ಜೊರಲುಗೊಂಡು ಬೆರಗಾದ ಶಿಶು ತಾಯ ಹೆಣನ ಹೊತ್ತುಕೊಂಡು ಹೆಸರು ಹೇಳುತ್ತೈದಾನೆ. ಗುಹೇಶ್ವರನ ನಿಲವ ವಸುಧೆಯಾಕೃತಿ ನುಂಗಿತ್ತು ॥೧೫॥

ಗಗನವ ಮೇಲೊಂದು ಅಭಿನವ ಗಿಳಿ ಹುಟ್ಟಿ ಪ್ರಳಯ ಸಂಭ್ರಮದಲ್ಲಿ ಮನೆಯುವಾಡಿತ್ತು. ಒಂದು ಗಿಳಿ ಇಪ್ಪತ್ತೈದು ಗಿಳಿಯಾಯಿತ್ತು. ಬ್ರಹ್ಮನಾ ಗಿಳಿಗೆ ಹಂಜರವಾದ. ವಿಷ್ಣುವಾ ಗಿಳಿಗೆ ಕೊಪ್ಪಿಗೂಳಾದ. ರುದ್ರನಾ ಗಿಳಿಗೆ ತಾ ಕೋಲನಾದ. ಇಂತೀ ಮೂವರ ಮುಂದಣ ಕಂದನ ನುಂಗಿದ ದೃಷ್ಟ ನಾನು ನಷ್ಟವಾಯಿತ್ತು ಕಾಣಾ ಗುಹೇಶ್ವರಾ ॥೧೬॥

ಮಾಯಾ ವಿಲಾಸ ವಿಡಂಬನಸ್ಥಲ.

ಇಂತೀ ಆತ್ಮನು ತನಗೆ ಇವಿರಿಟ್ಟು ತೋರುವ ಮಾಯೆಗೆ ತಾನನ್ಯವಾಗಿ, ಆ ಮಾಯಾವಿಲಾಸಮಂ ನಿವೃತ್ತಿ ಮಾಡುತ್ತಿರ್ದನೆಂದು ಪ್ರಭುದೇವರು ನಿರೂಪಿಸಲು, ಮಾಯಾವಿಲಾಸ ವಿಡಂಬನ ಸ್ಥಲವಾದುದು.

॥ವಚನ॥ ರಕ್ಕಸಿಗಿಬ್ಬರು ಮಕ್ಕಳು ತೊಟ್ಟಿಲ ಮೇಲೈವರು, ರಕ್ಕಸಿ ಬಾಣತಿಯಾದಡೆ ಮಕ್ಕಳಿಗಿನ್ನೆಂತೊ? ತೊಟ್ಟಿಲ ತೂಗುವೆ. ಜೋಗುಳವಾಡುವೆ. ರಕ್ಕಸಿ ಬಾಣತಿಯ ತೊಟ್ಟಿಲ ನುಂಗಿತ್ತು. ಇದೇನು ಹೇಳಾ ಗುಹೇಶ್ವರಾ ॥೧೭॥

ಆಡಂಬರದೊಳಗಾಡಂಬರವಿದೇನೋ? ಹಾರಿತ್ತು ಬ್ರಹ್ಮನೋಲಗ. ಕೆದರಿತ್ತಿದೇನಯ್ಯ! ಸಾರು ಸಾರೆನುತ್ತ ವಿಷ್ಣು ಅಜನ ನುಂಗಿ ರುವ್ರ. ಯೋ ನಿಯೊಳಗಡಗಿತ್ತಿದೇನೊ? ಬೇರಿಲ್ಲದ ಮರ ನೀರಿಲ್ಲದ ನೆಳಲಲ್ಲಿ ತೋರಿದ ಪ್ರತಿಬಿಂಬವನೇನೆಂಬೆ ಗುಹೇಶ್ವರಾ? ॥೧೮॥

ಕೋಣನ ಕೊಂಬಿನ ತುದಿಯಲ್ಲಿ, ಏಳನೂರೆಪ್ಪತ್ತು ಸಿಂದಿಯ ಬಾವಿ, ಬಾವಿಯೊಳಗೊಂದು ಬಗರಿಗೆ, ಬಗರಿಗೆಯೊಳಗೊಬ್ಬ ಸೂಳೆ ನೋಡಯ್ಯ. ಸೂಳೆಯ ಕೊರಳಲ್ಲಿ ಏಳನೂರೆಪ್ಪತ್ತು ಆನೆ ಏರಿತ್ತ ಕಂಡಿ ಗುಹೇಶ್ವರಾ ॥೧೯॥

ಪಂಚಾಶತಕೋಟಿ ವಿಸ್ತೀರ್ಣ ಭೂಮಂಡಲವನೊಂದು ತಲೆ ಇಲ್ಲದ ಮುಂಡ ಬಂದು ನುಂಗಿತ್ತ ಕಂಡೆ. ತಲೆ ಇಲ್ಲದೆ ನಾನು ಕಂಡು ಬೆರ ಗಾದೆನು. ನವಖಂಡಮುಂಡಲ ಭಿನ್ನವಾದಂದು ಆ ತಲೆಯ ಕಂಡವ ರುಂಟೆ ಗುಹೇಶ್ವರಾ? ॥೨೦॥

ಊರಮಧ್ಯದ ಕಣ್ಣ ಕಾಡಿನೊಳಗೆ ಏದು ಹೆಣ ಬಿದ್ದೈದಾವೆ. ಬಂದು ಬಂದು ಅಳುವರ ಬಳಗ ಘನವಾದ ಕಾರಣ ಹೆಣನು ಬಯ್ದು ಕಾಡು ನಂದದು, ಮಾಡು ಉರಿಯಿತ್ತು ಗುಹೇಶ್ವರಾ ॥೨೧॥

ಕೆಂಡದ ಗಿರಿಯ ಮೇಲೊಂದು ಅರಗಿನ ಕಂಭವಿದ್ದುದ ಕಂಡೆ. ಅರಗಿನ ಕಂಭದ ಮೇಲೊಂದು ಹಂಸೆ ಇದ್ದುದ ಕಂಡೆ. ಕಂಭ ಬೆಂದು ಹಂಸೆ ಹಾರಿತ್ತು ಗುಹೇಶ್ವರಾ ॥೨೨॥

ಭೂತ ಭೂತವಕೂಡಿ, ಅದ್ಭುತವಾಯಿತ್ತು. ಕಿಚ್ಚು ಕಿಚ್ಚು ಕೂಡಿತ್ತು. ನೀರುನೀರು ಕೂಡಿತ್ತು. ಉರಿ ಪವನದೊಳಗೆದ್ದು ವಾಯುವಿಮ್ಮಡಿಸಿತ್ತು ಗುಹೇಶ್ವರಾ ॥೨೩॥

ಅಂಗದ ಕೊನೆಯ ಮೇಲಣ ಕೋಡಗ ಕೊಂಬಿಂಗೆ ಹಾರಿತ್ತಯ್ಯ! ಒಂದು ಜೋಡ್ಯವ ನೋಡಾ. ಕೆಯ್ಯ ನೀಡಲು ಮೆಯ್ಯನೆಲ್ಲವ ನುಂಗಿತ್ತು. ಒಯ್ಯನೆ ಕರೆವರೆ ಮುಂದು ಬಂದು ನಿಂದಿತ್ತು. ಮುಯ್ಯಾಂತರೆ ಬಯಲಾಯಿತ್ತು ಗುಹೇಶ್ವರಾ. ॥೨೪॥

ಒರಿವಪ್ಪ ಜಲಧಿಯ ಮಡುವಿನೊಳಗೆ ಕರಿಯ ಕಬ್ಬಿಲ ಜಾಲವ ಬೀಸಿದ ನೋಡಯ್ಯ! ಅರಿಯದ ತಲೆ ಐದು, ಕರಿಯ ತಲೆ ಐದು

ಮುಂಪೈದಾಸೆ ನೋಡಯ್ಯ. ಕರಿಯ ಕಬ್ಬಿಲ ಜಾಲವ ಹೊತ್ತುಕೊಂಡು ಹೋದರೆ ನೇತ್ರದಲೋಕುಳಿಯನಾಡಿತ್ತ ಕಂಡೆ ಗುಹೇಶ್ವರಾ. ॥೨೫॥

ಭೂಮಿಯ ಕಠಿಣವನು, ಆಕಾಶದ ವೃದುವನು, ತಿಳಿವ ಗಮನ ವಲ್ಲಿಯೇ ಸಿಂದಿತ್ತು. ಉದಕದೊಳಗೆ ಹುಟ್ಟಿದ ತೃಷೆ ಉದಕವ ನರಸಿ ತ್ತಲ್ಲಾ! ಒಳಗೆ ಸತ್ತು ಹೊರಗೆ ಆಡುತ್ತಿದೆ. ಗುಹೇಶ್ವರನಲ್ಲಿಯೆ ನಿಂದನು. ॥೨೬॥

ಹುಲಿಯ ತಲೆ ಹುಲ್ಲೆ, ಹುಲ್ಲೆಯ ತಲೆ ಹುಲಿ. ಎರಡರ ನಡು ಒಂದಾ ಯಿತ್ತು. ಹುಲಿಯಲ್ಲ. ಹುಲ್ಲೆಯಲ್ಲ. ಕೆಲದಲೊಂದು ಬಂದು ಮೆಲುಕಾ ಡುತ್ತ ಇದ್ದಿತ್ತು. ತಲೆ ಇಲ್ಲದ ಮುಂಡ ತರಗೆಲೆಯ ಮೆದ್ದಡೆ, ಎಲೆ ಮರಿ ಯಾಯಿತ್ತು ಗುಹೇಶ್ವರಾ. ॥೨೭॥

ಅರಗಿನ ಪುತ್ಥಳಿಯನುರಿ ಕೊಂಡರೆ, ಉದಕ ಬಾಯಾರಿತ್ತದೇನೊ? ಆಗಿ ಎಂಬ ಬಾವಿ ಎನಗೀಯಿಂದೊ ಬಾವಿಯನಗಿವಾತ ಸತ್ತ ಬಾವಿ ಬತ್ತಿತ್ತು. ಇದುಕಾರಣ ಮೂರು ಲೋಕವೆಲ್ಲವು ಬರಿದೆ ಸೂರೆ ಹೋಯಿತ್ತು ಗುಹೇಶ್ವರಾ. ॥೨೮॥

ಗುರು ಕರುಣ.

(ಪ್ರಥಮೋಪದೇಶ)

ಇಂತು ಮಾಯಾ ವಿಲಾಸ ನಿವೃತ್ತಿಯಂ ಮಾಡಿ, ಸಕಲ ಪ್ರಪಂಚು ವ್ಯಾಪ್ತಿಗಳೆಲ್ಲವನು ಮರೆದ ಆತ್ಮಂಗೆ ಗುರುಕರುಣದಿಂದಲ್ಲದೆ ಮುಕ್ತಿಯಾಗ ದೆಂಬುದನು ತೋರುವಂತೆ, ಪ್ರಭುದೇವರು ತಮ್ಮ ಮೂಲಜ್ಞಾನ ದೃಷ್ಟಿ ಯಿಂ ಅನುವಿಷದೇವರು ತಮಗೆ ಗುರುವೆಂದರಿದು ಬಪ್ಪಲ್ಲಿ ಗೊಗ್ಗೆಯ್ಯ ನೆಂಬ ಮಹಾ ಶರಣನು ಒಂದು ತೋಟದಲ್ಲಿ ಕೃಷಿಯಂ ಮಾಡುತ್ತಿರಲಲ್ಲಿ ಸಾರ್ದು, ಅದಂ ವಿಡಂಬಿಸಿ, ನಾನೊಂದು ತೋಂಟವ ಮಾಡಿದೆನೆಂದು ಪರಮಾರ್ಥ ಸೂಚಕನಾಗಿ ನಿರೂಪಿಸಿದ ಪ್ರಸ್ತಾವದ ವಚನ॥

ತನುವ ತೋಟವ ಮಾಡಿ, ಮನವ ಗುದ್ದಲಿಯ ಮಾಡಿ, ಆಗಿದು ಕಳೆದೆನಯ್ಯ. ಭ್ರಾಂತಿನ ಬೇರ ಒಡೆದು ಸಂಸಾರದ ಹೆಂಟೆಯ ಬಗಿದು ಬಿತ್ತಿದೆನಯ್ಯ ಬ್ರಹ್ಮ ಬೀಜವ. ಅಖಂಡ ಮಂಡಲವೆಂಬ ಬಾವಿ, ಪವನವೆ ರಾಟಾಳ, ಸುಷುಮ್ನದಿಂದುದುಕವ ತಿದ್ದಿ ಬಸವಗಳೈವರು ಹಸಗೆಡಿಸಿಹ ವೆಂದು, ಸಮತೆ ಸೈರಣೆಯೆಂಬ ಬೇಲಿಯ ನಿಕ್ಕಿ ಆವಾಗಳು ಈ ತೋಂಟ ದಲ್ಲಿ ಜಾಗರವಿದ್ದು ಸಸಿಯ ಸಲಹಿದೆನು ಕಾಣಾ ಗುಹೇಶ್ವರಾ. ॥೨೯॥

ಇಂತು ಪ್ರಭುದೇವರು ಗೊಗ್ಗೆಯ್ಯನ ಸಂಬೋಧಿಸಿ ತಿಳುಪಿ ತಾವು ನವಮಾಸತೀವಿದ ಗರ್ಭಿಣಿಯಂತೆ ಶಿವತತ್ವ ವಿದ್ಯೆಯೊಳಗೆ ಸಂಪೂರ್ಣ ವಾಗಿ ಎಡೆಗೊಂಡು, ಗುರು ಹಸ್ತ ಬಂದು ಸೋಂಕದ ಮುನ್ನವೆ ಶಿವಿ ಕರ್ಪು ರದಂತಾದಪುದೆಂಬ ಭಾವವಿದಿರಿಂಗೆ ಸೂಚಿಸುತ್ತಮಿರೆ ಗುರುವಿಂದ ಮುನ್ನವೆ ಶಿಷ್ಯನು. ಗುರುವೆಂಬ ಶಿವಾದ್ವೈತ ವಾಕ್ಯ ಸತ್ಯವಾದಂತೆ ಅಂತರಂಗ ದೊಳು ಗುರುಭಾವ ತಲೆದೋರುತ್ತಿರ್ಪ ಅಲ್ಲಮಪ್ರಭುದೇವರು ತಮ್ಮ ಮೂಲ ಜ್ಞಾನದಿಂದ ಅನುವಿಷ ದೇವರ ಸಮಾಧಿಯಂ ಕಂಡು ಒಳಪೊ ಕ್ಕುನೋಳ್ಪಾಗಳು ಒಂದು ದೀಪ್ತಿ ಬೆಳಗುತ್ತಿರೆ ಕಂಡು, ಸ್ವಸ್ಥ ಪದ್ಮಾಸನ ದಲ್ಲಿ ಕುಳ್ಳಿರ್ದು ಕರಸ್ಥಲದೊಳು ಅವೃತ ಲಿಂಗಮಂ ಪಿಡಿದು, ಆ ಲಿಂಗ ದೊಳು ಆಲಿಂಗನವಾಗಿ, ಕರಣಂಗಳೆಲ್ಲ ನಿಃಕರಣವನೈದಿ, ಭಾವನಿರ್ಭಾವ ದೋಳ್ಮಿಂದು ಸೋಟೆ ನಟ್ಟು ದೃಷ್ಟಿ ನೈಷ್ಠಿಸಿ ಯುಪೆಹಳಚದೆ ಅರಿವು ಕರಿಗೊಂಡು ತಾನೆಂಬುದು ತರಹರವಾಗಿ, ನೀನೆಂಬುದು ನಿಷ್ಪತ್ತಿಯಾಗಿ, ಉಭಯ ಸಂಪು ಕೆಡಗಿ ಸ್ಪಯವಾಗಿ, ಮಸೋಲಯಸ್ಥಾನದೊಳು ಸರ್ವ ಚೈತನ್ಯವು

ನೈದಿ, ತನು ಪರಮು ಕಾಷ್ಮಿಯೊಳು ಪರವಶವಾಗಿ, ಊರ್ಧ್ವಶೂನ್ಯ, ಮಧ್ಯಶೂನ್ಯ, ನಿರಾಮಯಂ ಸರ್ವ ಶೂನ್ಯ ಮನಾಭಾಸಂ ಸಮಾಧಿ ತಸ್ಯ ಲಕ್ಷಣಂ॥ ಎಂಬ ಸಿದ್ಧಾಂತ ವಾಕ್ಯಾರ್ಥಮುಂ, ತನ್ನೊಳು ಪೂರಿತ ವಾಗಿ ನಿಜ ಸಮಾಧಿಯೊಳು ಮೂರ್ತಿಗೊಂಡಿರ್ಪ್ಪ ಆ ಪನ್ನಿರುವಂ ಕಂಡ ಪ್ರಸ್ತಾವದ ವಚನ॥

ಪುಣ್ಯವುಳ್ಳ ಕಾಲಕ್ಕೆ ಪಾಷಾಣ ಪರುಷನಪ್ಪುದು ತಪ್ಪದು ನೋಡಯ್ಯ! ಮಣ್ಣು ಹೊನ್ನಪ್ಪುದು. ಮುನ್ನ ಮುನ್ನವೆ ಅಚ್ಚೊತ್ತಿದ ಭಾಗ್ಯವೆನ್ನ ಕಣ್ಣ ಮುಂದೆ ಕಾಣಬಂದಿತ್ತು ನೋಡಾ! ಮಣ್ಣುಮರೆಯ ದೇಗುಲ ದೊಳಗೊಂದು ಮಾಣಿಕ್ಯವ ಕಂಡ ಬಳಿಕ, ಇನ್ನು ಮುನ್ನಿನಂತಪ್ಪುದೆ ಗುಹೇಶ್ವರಾ? ॥೩೦॥

ಅರಸುವಬಳಿ ಕಾಲ ಸುತ್ತಿತ್ತಿಂಬಂತೆ, ಬಯಸುವ ಬೆಯಕೆ ಕೈಸಾ ರುವಂತೆ, ಬಡವ ನಿಧಾನವನೆಡಹಿ ಕಂಡಂತೆ, ನಾನರಸುತ್ತಲೊರಸುತ್ತ ಬಂದು ಭಾವಕ್ಯಗವ್ಯನ ಕಂಡೆನಯ್ಯ! ಎನ್ನ ಅರಿವಿನ ಹರಿವ ಕಂಡೆ ನಯ್ಯ! ಎನ್ನ ಒಳಹೊರಗೆ ಸರ್ವಾಂಗ ಪರಮ ಪ್ರಕಾಶದೊಳು ಬೆಳಗುವ ಜ್ಯೋತಿಯ ಕಂಡೆ, ನೋಡಾ! ಕುರುಹಳಿದ ಕರಸ್ಥಲದ ನಿಬ್ಬೆರಗಿನ ನೋ ಟದಎನ್ನ ಪರಮ ಗುರುವ ಕಂಡು, ಬದುಕಿದೆನು ಕಾಣಾ ಗುಹೇಶ್ವರಾ॥೩೧॥

ಇಂತು ಅನುವಿಷ ದೇವರ ಕಂಡು ಈತನೇ ಗುರು ನಾನೇ ಶಿಷ್ಯ ನೆಂದು ಈ ಶ್ರೀ ಗುರುವಿನ ಚರಣವಿಡಿದು, ಅತೀತವಾದ ಪರವಸ್ತುವನ ರಿದೆನೆಂದು ನಿಶ್ಚೈಸಿದ ಪ್ರಸ್ತಾವದ ವಚನ॥

ಕಂಡುದ ಹಿಡಿಯಲೊಲ್ಲದೆ, ಕಾಣದುದ ಹಿಡಿದೆನೆಂದು ಸಿಕ್ಕದೆಂಬ ಬಳಲಿಕೆಯ ನೋಡಾ! ಕಂಡುದನೆ ಕಂಡು ಗುರುಸಾದವ ಹಿಡಿವಲ್ಲಿ ಕಾಣದುದ ಕಾಣಬಹುದು ಗುಹೇಶ್ವರಾ ॥೩೨॥

ಆ ಶ್ರೀ ಗುರುಮೂರ್ತಿಯಂ ನೋಡಿ, ಕೊಂಡಾಡಿದ ಪ್ರಸ್ತಾವದ ವಚನ॥

ಕಾಯದಲಾದ ಮೂರ್ತಿಯಲ್ಲ. ಜೀವದಲಾದ ಮೂರ್ತಿಯಲ್ಲಾ! ಪ್ರಾಣನಲಾದ ಮೂರ್ತಿಯಲ್ಲ. ಪುಣ್ಯದಲಾದ ಮೂರ್ತಿಯಲ್ಲ. ಮುಕ್ತಿ ಯಲಾದ ಮೂರ್ತಿಯಲ್ಲ. ಯುಗದಲಾದ ಮೂರ್ತಿಯಲ್ಲ. ಜುಗದಲಾದ ಮೂರ್ತಿಯಲ್ಲ. ಶಿವನಲಾದ ಮೂರ್ತಿಯಲ್ಲ. ಶಕ್ತಿಯಲಾದ ಮೂರ್ತಿಯಲ್ಲ.

ಇದೆಂತಹ ಮೂರ್ತಿಯೆಂದು ಉಪಮಿಸುವೆ? ಕಾಣಬಾರದ ಕಾಯ, ನೋಡಬಾರದ ತೇಜ, ಉಪಮಿಸಬಾರದ ನಿಲವು. ಕಾರಣ ನಿಡಿದು ಕಣ್ಣ ನೋಚರವಾದ ಸುಖವನೇನೆಂದು ಹೇಳುವೆ ಗುಹೇಶ್ವರಾ?॥೩೫॥

ಸ್ಫಟಿಕದ ಘಟವಂತೆ, ಒಳಹೊರಗಿಲ್ಲ ನೋಡಾ! ವಿಗಡ ಚರಿತ್ರಕ್ಕೆ ಬೆರಗಾದೆನು. ನೋಡುವರೆ ಕಾಣಬರುತ್ತಿದೆ. ಮುಟ್ಟುವರೆ ಕೈಗೆ ಸಿಲುಕದು. ಹೊದ್ದುವರೆ ಸಮೀಪ, ಹತ್ತಿ ಸೇರುವರೆ ಅತ್ತತ್ತ ತೋರುತ್ತದೆ. ಆಕಾರವನು ನಿರಾಕಾರ ನುಂಗಿ, ಬಯಲ ಸಮಾಧಿಯಲ್ಲಿ ಸಿಲುಕಿತ್ತು ನೋಡಾ! ದರುಶನದಿಂದಮೃತಾಹಾರವಾಯಿತ್ತು. ಬೆರಸಿದಡಿನ್ನೆಂತೊ ಗುಹೇಶ್ವರಾ॥೩೬॥

ಇಂತು ಪ್ರಭುದೇವರು ಅನುಮಿಷದೇವರ ಮೂರ್ತಿಯಂ ಕೊಂಡಾಡಿ, ಈ ಶ್ರೀ ಗುರುವಿನ ಕೈಯಲಿ ಉಪದೇಶವ ಪಡೆದಿಹೆನೆಂದರೆ ಈ ಮಹಾತ್ಮನು ತಾನಿದಿರೆಂಬುದನರಿಯನು. ನಿಃಶಬ್ದವೇಧಿಸಿ ಮುಗ್ಧನಾಗಿರ್ದಹನಾಗಿ ಇದಿರಿಟ್ಟು ಉಪದೇಶವ ಮಾಡಲವನಲ್ಲ. ಎನಗೆ ನಾನೇ ಗುರು ಉಪದೇಶವ ಪಡೆಯಬೇಕೆಂದು ನಿಶ್ಚೈಸಿದ ಪ್ರಸ್ತಾವದ ವಚನ॥

ನಡೆ ನುಡಿ ಇಲ್ಲದ ಗುರುವ ಕಂಡು, ಉಪದೇಶವ ಪಡೆಯಲೆಂದು ಹೋದರೆ, ಒಡನೆ ನುಡಿಯ ನುಡಿಸಿದರೆ ಕೇಳಾ! ಕಡೆ ಮೊದಲ ಕಾರ್ಯವೆಂತಪ್ಪುದೊ ಅಯ್ಯ? ಮೂಗ ಮೂಗರ ಪ್ರಸಂಗವಂತೆ ಇದೆ. ಎನ್ನೊಳಗೆ ಅರುವಿನ ಪರಿಮಳ. ಹೊರಗೆ ನೋಡಿದರೆ ಮುಗ್ಧವಾಯಿತ್ತು. ಇದೆಂತು ಉಪಮಿಸುವೆ? ಆನೆಯ ಮುದ ಬೆಡಗ ಇದು ತನ್ನಿಂದ ತಾನೆ ಇಪ್ಪುದಲ್ಲದೆ, ಭಿನ್ನವಲುಂಟೆ ಗುಹೇಶ್ವರಾ?॥೩೭॥

ಗುರುವನು ತನ್ನನು ವಿಭಾಗಿಸಿ ನೋಡಿ ನಿಶ್ಚೈಸಿದ ಪ್ರಸ್ತಾವದ ವಚನ॥

ಒಂದೆಂಬೆನೆ? ಎರಡಾಗಿದೆ. ಎರಡೆಂಬೆನೆ? ಒಂದಾಗಿದೆ. ಒಂದೆಂಬ ಸಂದೇಹವಿದೇನೊ? ಅಗಲಲಿಲ್ಲದ ಕೂಟಕ್ಕೆ ಬೆಚ್ಚಿ ಬೆರಗಾದ ಉಪದೇಶ ಗುರುಶಿಷ್ಯರೆಂಬ ಭಾವಕ್ಕೆ ಭೇದ ಉಂಟೆ ಗುಹೇಶ್ವರಾ?॥೩೮॥

ಮತ್ತಾ ಗುರುವಿನ ಸನ್ನಿಧಿಯಲ್ಲಿ ಜ್ಞಾನಲಿಂಗೋಪದೇಶ ಕ್ರಮವ ಬಿನ್ನಪಂ ಗೈವ ಪ್ರಸ್ತಾವದ ವಚನ॥

ಕಾಣಬಾರದ ಗುರುವು ಕಂಗೆ ಗೋಚರವಾದರಿ ಹೇಳಲಿಲ್ಲದ ಬಿನ್ನಪ, ಮುಟ್ಟಲಿಲ್ಲದ ಹಸ್ತ ಮಸ್ತಕ ಸಂಯೋಗ. ಹೂಸಲಿಲ್ಲದ ವಿಭೂತಿಯ ಪಟ್ಟ, ಕೇಳಲಿಲ್ಲದ ಕರ್ಣ ಮಂತ್ರ, ತುಂಬಿ ತುಳುಕದ ಕಲಶಾಭಿಷೇಕ, ಆಗಮ

ನಿಲ್ಲದ ದೀಕ್ಷೆ, ಪೂಜೆಗೆ ಬಾರದ ಲಿಂಗ, ಸಂಗವಿಲ್ಲದ ಸಂಬಂಧ ನ್ಯಯ ಮಪ್ಪ ಅನುಗ್ರಹವ ಅನುಗೊಂಬಂತೆ ಮಾಡಾ ಗುಹೇಶ್ವರಾ ॥೩೭॥

ನೀನೆನಗೆ ಗುರುವಪ್ಪೊಡೆ, ನಾ ನಿನಗೆ ಶಿಷ್ಯನಪ್ಪೊಡೆ, ಎನ್ನ ಕಾಯದ ಕರ್ಮವ ತೊಡೆದು, ಎನ್ನ ಕರಣಾದಿ ಗುಣಂಗಳ ಕಳೆದು, ನೀನೆನ್ನ ಕಾಯದಲ್ಲಿ ಅಡಗಿ, ನೀನೆನ್ನ ಪ್ರಾಣದಲ್ಲಿ ಅಡಗಿ, ನೀನೆನ್ನ ಭಾವದಲ್ಲಿ ಅಡಗಿ, ನೀನೆನ್ನ ಕರಸ್ಥಲಕ್ಕೆ ಬಂದು ಕಾರುಣ್ಯವ ಮಾಡು ಗುಹೇಶ್ವರಾ ॥೩೮॥

ಆದಿಯಿಂದತ್ತತ್ತಲೆನಗೆ ನೀನು ಗುರುವಯ್ಯ! ಅನಾದಿಯಿಂದತ್ತತ್ತಲೆನಗೆ ನೀನು ಗುರುವಯ್ಯ! ಎರಡು ನಾನು ಹುಟ್ಟದ ಮುನ್ನ ನಿಮಗೆ ನಾನು ಶಿಷ್ಯನಯ್ಯ! ಎನ್ನ ಭಾವ ಕಾಯದೊಳಗೆ ಭ್ರಮೆಯ ಕಳೆದು, ಎನ್ನ ಕಾಯದೊಳಗೆ ಮರಹ ಕಳೆದು, ಎನ್ನೊಳಗೆ ತಿಳಿವಿನ ಬಗೆಯ ತೋರುತ್ತ ಹೊರಗೆ ನುಡಿಯುವಂತಿರ್ದಡೆ ಬಿಡೆನು ನಾನು ನೋಡಾ ನಿಮ್ಮ ಶ್ರೀ ಚರಣವ. ಮಾಡಿದಡಂತು ಮಹಾಪ್ರಸಾದವೆಂದು ಕೈಕೊಂಬೆನು. ಮಾಡದಿರ್ದೊಡೆ ನೀವೆನಾನಾಗಿ ಮಹಾಪ್ರಸಾದವೆಂದು ಕೈಕೊಂಬೆನು. ಇಂತು ಆವ ತೆರದಿಂದಾದರು ಎನ್ನೊಡಲ ನಿಮ್ಮಲ್ಲಿ ಸವೆದು ಪಡಿವೆ ನಿಮ್ಮ ಕರುಣವ ಗುಹೇಶ್ವರ ನಿಮ್ಮ ಇರವಿನ ಪರಿಯಿಂತುಟು ನೋಡಾ ॥೩೯॥

ಮತ್ತಾ ಗುರುವಿನಲ್ಲಿ ಪ್ರಭುದೇವರು ಅಭಿನ್ನಕ್ರಿಯೆ ನಿಶ್ಚೈಸಿದ ಪ್ರಸ್ತಾವದ ವಚನ॥

ಜ್ಯೋತಿಯೊಳಗಿರ್ದ ಕರ್ಪುರಕ್ಕೆ ಅಪ್ಪುವಿನೊಳಗಡಗಿಪ್ಪ ಉಪ್ಪಿಂಗೆ ಶ್ರೀ ಗುರುವಿನೊಳಗಿಪ್ಪ ಶಿಷ್ಯಂಗೆ ಬೇರೆ ಬೇರೆ ಕ್ರಿಯಾವರ್ತನೆಯುಂಟೆ ಗುಹೇಶ್ವರಾ? ॥೪೦॥

ಗುರು ಶಿಷ್ಯ ಭಾವದಲ್ಲಿ ಅಭೇದ್ಯನೆಂದರಿದ ಪ್ರಭುದೇವರು ತಮ್ಮಂತರಂಗದ ಬೋಧಾವತಾರ್ಯನು ಆ ಶ್ರೀ ಗುರುವೆಂದರಿದು ನಿಶ್ಚೈಸಿ, ಅನುಮಿಷ ದೇವರ ಶ್ರೀ ಪಾದಕ್ಕೆ ಶರಣೆಂದು ಆ ಕರಸ್ಥಲದ ಲಿಂಗವ ತಾನೆ ಅವಗ್ರಹಿಸಿ ಕೊಳಲು, ಆ ಶ್ರೀ ಗುರುಮೂರ್ತಿ ನಿರ್ವಯಲನೈದಲು ಅಷ್ಟಚರ್ಮಾಂಗಳು ಸಂಚ ತಪ್ಪಿ ನೆಲಕ್ಕೆ ಉದುರಲು, ಮನ ಸಂಚಲತ್ವವನೈದಿ ಅನುತಾಪಂ ಒಟ್ಟ ಪ್ರಸ್ತಾವದ ವಚನ॥

ಆಣವಮಲ ಮಾಯಾಮಲ ಕಾರ್ಮಿಕಮಲವೆಂಬ ಮಲತ್ರಯಂಗಳ ಕಳೆದುಳಿದು, ನಿರ್ಮಲನಾದ ಶಿಷ್ಯನು ಕಾಯಜೀವದ ಭ್ರಾಂತುಸೂತಕ

ಹಿಂಗಿ ನಿಃಶಂಕನಾದ ಗುರು, ಈ ಉಭಯ ಭಾವದೊಳಗೆ ಆವುದು ಮುಂದು ಆವುದು ಹಿಂದೆಂದರಿಯಬಹುದು. ಕರಸ್ಥಲಕ್ಕೆ ಕಾರುಣ್ಯವ ಮಾಡಿದರೆ, ಮನಸ್ಥಲಕ್ಕೆ ಹಂಗಿಲ್ಲ. ಮನಸ್ಥಲದಲ್ಲಿ ಸೆರೆಗೊಡ್ಡಿ ಬೇಡಿದರೆ ಕರಸ್ಥಲದ ಲಿಂಗ ಕೈಸಾರಿತ್ತು. ಗುರುಸ್ಥಲದ ನಿಲವು ಪರಸ್ಥಲವಲ್ಲಡಗಿದರೆ ಭಾವ ಬಳಲಿತ್ತಿದೇನೊ ಗುಹೇಶ್ವರಾ ॥೪೧॥

ನಿರ್ಣಯವನರಿಯದ ಮನವೇ ಮುನುಡವನಾಹಾರವಗೊಂಡೆಯಲ್ಲ! ಮಾಯಾಸೂತ್ರವಿದೇನೊ! ಕಂಗಳೊಳಗಣ ಕತ್ತಲೆ ತಿಳಿಯದಲ್ಲ! ಬೆಳಗಿನೊಳಗಣ ಶೃಂಗಾರ ಬಳಲುತ್ತಿದೇನೋ ಗುಹೇಶ್ವರಾ ॥೪೨॥

ಇಂತು ಅನುಮಿಷ ದೇವರು ನಿಜವನ್ಯೈದಲು ಅನುತಾಪಿಸುತ್ತಿದ್ದ ಪ್ರಭುದೇವರು ತನ್ನ ತಾ ಸಂತೈಸಿಕೊಂಡು ತಿಳಿದು ನೋಡಿ ಆ ಗುರುವಿನ ಚೈತನ್ಯ ಲಿಂಗದಲ್ಲಿ ಆಡಗಿತ್ತು. ಆಲಿಂಗವೆನ್ನ ಕರಸ್ಥಲಕ್ಕೆ ಬಂದಿತ್ತು. ಅದು ಕಾರಣ ಶ್ರೀ ಗುರುವೆನ್ನ ಕರಸ್ಥಲದಲ್ಲಿ ಮನಸ್ಥಲದಲ್ಲಿ ಸಂಪೂರ್ಣವಾಗಿ ನೆಲೆಗೊಂಡನಲ್ಲದೆ, ಅನ್ಯಭಾವ ವಿಷಯದಿಂದ ಅಳಿದುದಿಲ್ಲವೆಂದು, ಮನವ ನಿಶ್ಚೈಸಿಕೊಂಡ ಪ್ರಸ್ತಾವದ ವಚನ॥

ಆಹಾ ಮನವೇ, ಮರೆದೆಯಲ್ಲ. ನಿನ್ನ ಪೂರ್ವಪರದ ಘನ ಮನದೊಳಗಡಗಿ ಆ ಮನ ಲಿಂಗದೊಳಗಡಗಿ, ಆ ಲಿಂಗವೆನ್ನ ಕರಸ್ಥಲಕ್ಕೆ ಬಂದ ಬಳಿಕ ಅಳಿಯಿತ್ತು, ಅಗಲಿತ್ತು ಎಂಬ ಭಾವ ಭ್ರಾಂತು ಇದೇನೊ? ಜನನವಿಲ್ಲದ ಘನಕ್ಕೆ ಮರಣವುಂಟೆ? ತೆರಹಿಲ್ಲದ ನಿಜವು ತನ್ನಲ್ಲಿ ತಾನೆ ನೀನಾಗಿ ಪ್ಪುದಲ್ಲದೆ ಇದಿರಿಟ್ಟು ತೋರದೆಂಬ ಅಜ್ಞಾನವಿದೇನೊ? ಜನನವಿಲ್ಲದೆ ನೀನಾನೆಂಬುದು ಮಾದು ತಾನೆಯಾಗಿ ಸಾಧ್ಯವಾಯಿತ್ತು. ಇದನೇನೆಂಬೆ ಗುಹೇಶ್ವರಾ? ॥೪೩॥

ಕಾಣದುದ ನರಸುವರಲ್ಲದೆ ಕಂಡುದ ನರಸುವರೆ? ಘನಕ್ಕೆ ಘನವಾದ ವಸ್ತು ತಾನೆ ಗುರುವಾದ, ತಾನೆ ಲಿಂಗವಾದ, ತಾನೆ ಜಂಗಮವಾದ, ತಾನೆ ಪ್ರಸಾದವಾದ, ತಾನೆ ಮಂತ್ರವಾದ, ತಾನೆ ಯಂತ್ರವಾದ, ತಾನೆ ಸಕಲ ವಿದ್ಯಾಸ್ವರೂಪನಾದ. ಇಂತಿವನೊಳಕೊಂಡು, ಎನ್ನ ಕರಸ್ಥಲಕ್ಕೆ ಬಂದು ಇನ್ನು ನಿರ್ವಿಕಾರ ಕಾಣಾ ಗುಹೇಶ್ವರಾ ॥೪೪॥

ಇಂತು ಅನುತಾಪ ಸಂತಾಪಂಗಳ ಎರಡನು ಮರೆದು, ಶ್ರೀ ಗುರು ನಿತ್ಯನೆಂದರಿದ ಪ್ರಭುದೇವರು ಆ ಶ್ರೀ ಗುರುವೆ ಪ್ರಾಣಲಿಂಗ ಸಂಬಂಧಿ ನೆಂದು ಸ್ತುತಿಸುವ ಪ್ರಸ್ತಾವದ ವಚನ॥

ಪ್ರಾಣಲಿಂಗವೆಂಬ ಶಬ್ದಕ್ಕೆ ನಾಚಿತ್ತು ನಾಚಿತ್ತು ಮನ. ಪ್ರಾಣ ಹೋದರೆ ಕಾಯ ಬಿಟ್ಟರೆ ಲಿಂಗ ಒಂದೆಸೆಯಾದರೆ ನಾಚಿತ್ತು ನಾಚಿತ್ತು ಮನ. ಪ್ರಾಣ ಲಿಂಗ ಸಂಬಂಧಿ ಗುಹೇಶ್ವರ ನಿಮ್ಮ ಶರಣ ಅನುಮಿಷನೆಂಬುದ ನಾನು ಇಂದರಿದೆನು ॥೪೫॥

ಇಂತು ಪ್ರಭುದೇವರು ಅಂತಪ್ಪ ಶ್ರೀಗುರುಮೂರ್ತಿಯನೆ ತಮ್ಮ ಹೃದಯಕಮಲ ಮಧ್ಯದಲ್ಲಿ ಪ್ರಾಣಲಿಂಗವೆಂದರಿದು ಕಂಡು ಮನಃಪುಷ್ಪದಿಂ ಪೂಜಿಸಿ ಪರಸು ಹರುಷಿತನಾದ ಪ್ರಸ್ತಾವದ ವಚನ॥

ಕಸ್ತೂರಿಯ ಮೃಗ ಬಂದು ಸುಳಿಯಿತ್ತಯ್ಯ. ಸಕಲವಿಸ್ತಾರದ ರೂಪು ಬಂದು ಮುಂದೆ ನಿಂದಿತ್ತಯ್ಯ. ಆವ ಗ್ರಹ ಬಂದು ಸೊಂಕಿತ್ತೆಂದರಿಯೆನು. ಹೃದಯಕಮಲ ಮಧ್ಯದಲ್ಲಿ ಶ್ರೀಗುರುವನರಿದುಕಂಡು ಪೂಜಿಸಿ ಗುರುವಿಖ್ಯಾತನೆಂಬುದನರಿದೆ ನೋಡಾ! ಗುಹೇಶ್ವರಲಿಂಗದಲ್ಲಿ ಹಿಂದಣ ಹುಟ್ಟು ಅರತು ಹೋದುದ ಕಂಡೆನು ॥೪೬॥

ಇಂತು ಶ್ರೀಗುರುಪೂಜೆಯವಾಡಿ, ಆ ಗುರುವಿನಲ್ಲಿ ಪರವಶನಾದ ಪ್ರಸ್ತಾವದ ವಚನ॥

ಎನ್ನಮನವ ಕೊನೆಯ ಮೇಲೆ ಅಂಗವಿಲ್ಲದರೂಪನಕಂಡು, ನಾನುಬೆರಗಾದೆ. ಅಂತರಂಗದ ಆತ್ಮನೊಳಗೆ ಅನುಮಿಷ ನಿಜೈಕ್ಯ ಗುಹೇಶ್ವರನಲ್ಲಯ್ಯನಕಂಡು, ಬೆರಗಾದೆನು ॥೪೭॥

ಆ ಶ್ರೀಗುರುವಿನಲ್ಲಿ ತನ್ನಲ್ಲಿ ಏಕೋಭಾವವನೈದಿದ ಪ್ರಸ್ತಾವದ ವಚನ॥

ಗುರುವಿನ ಪರಿ ವಿಪರೀತವಾಯಿತ್ತಯ್ಯ! ಭ್ರಮರಕೀಟನ್ಯಾಯದಂತಾಯಿತ್ತು. ಗುರು ತನ್ನ ನೆನೆವನ್ನ ಬರ ಎನ್ನನಾ ಗುರುವ ಮಾಡಿದನು. ಇನ್ನು ಶಿಷ್ಯನಾಗಿ ಶ್ರೀಗುರುವ ಪೂಜಿಸುವರಾರುಹೇಳಾ ಗುಹೇಶ್ವರಾ? ॥೪೮॥

ಗುರುಶಿಷ್ಯ ಸಂಬಂಧವನರಸಲೆಂದು ಹೋದರೆ, ತಾನೇ ಗುರುವಾದ, ತಾನೇ ಶಿಷ್ಯನಾದ, ತಾನೇ ಲಿಂಗವಾದ. ಗುಹೇಶ್ವರ ನಿಮ್ಮ ಶರಣನ ಕೈಯಲ್ಲಿ ಲಿಂಗವ ಕೊಟ್ಟರೆ ಭಾವ ಬತ್ತಲೆಯಾಯಿತ್ತು ನೋಡಾ ॥೪೯॥

ಇಂತು ಗುರುವಿನಲ್ಲಿ ತನ್ನಲ್ಲಿ ಸಮರಸಭಾವವನೈದಿ ಪ್ರಭುದೇವರು ತಮ್ಮ ಕರಸ್ಥಲದ ಲಿಂಗವ ನೋಡಿ, ಆ ಲಿಂಗಭಾವ ಆಲಿಂಗನವಾಗಿ ದೃಷ್ಟಿ

ನಟ್ಟ ಮನಮುಟ್ಟಿ ಹಾರೈಸಿ ತನಗೆ ತಾನಾಶ್ಚರ್ಯಂ ಬಡುತ್ತಿರ್ದ ಪ್ರಸ್ತಾವದ ವಚನ॥

ಬಟ್ಟೆಯ ಬಡಿವ ಕಲ್ಲಂಗೆ ಜೀವು ಸಂದು ಕಳವು ದೊರಕಿದಂತಾಯಿತ್ತು. ಕುರುಡನೆಡಹುತ್ತ ತಡಹಿ ಹಿಡಿದು ಕಂಡಂತಾಯಿತ್ತು. ನಿರ್ಧನಿಕ ಧನವ ಬಯಕೆಯಲ್ಲಿ ನಡೆವುತ್ತ ಎಡಹಿವ ಕಲ್ಲು ಪರುಷವಾದಂತಾಯಿತ್ತು. ಆರಸುವಂಗೆ ಅರಿಕೆ ತಾನಾದಂತಾಯಿತ್ತು. ಎಲೆ ಗುಹೇಶ್ವರ ನೀನೆನಗೆ ದೊರಕುವವೆಂಬುದು ನಾ ಮುನ್ನ ಮಾಡಿದ ಸುಕೃತದ ಫಲವನೇನ ಬಣ್ಣಿಪೆ ಹೇಳಾ ಗುಹೇಶ್ವರಾ? ॥೫೦॥

ಮುನ್ನಿನ ಪರಿಯಂತುಟಲ್ಲ. ಆದಡಿಂತಹುದೆ? ಆಗದೊಡಿಂತಾಯಿತ್ತು. ಬಲ ಉಪದೇಶದ ಬಯಕೆ ತಾರ್ಕಣ್ಯಗಂಡಂತೆ ಗುಹೇಶ್ವರ ಲಿಂಗವು ತನುವ ತನ್ನತ್ತಲೊಯಿದಾ ॥೫೧॥

ಎತ್ತಣ ಮಾಮರ ಎತ್ತಣ ಕೋಗಿಲೆ, ಎತ್ತಣಿಂದೆತ್ತ ಸಂಬಂಧವಯ್ಯ? ಪೆಟ್ಟಿದ ನೆಲ್ಲಿಯ ಕಾಯಿ ಸಮುದ್ರದೊಳಗಣ ಉಪ್ಪ ಎತ್ತಣಿಂದೆತ್ತ ಸಂಬಂಧವಯ್ಯ? ಗುಹೇಶ್ವರ ಲಿಂಗಕ್ಕು ಎನಗು ಎತ್ತಣಿಂದೆತ್ತ ಸಂಬಂಧವಯ್ಯ?

ಆ ಲಿಂಗದ ಮಹಾತ್ಮೆಯ ನೋಡಿ ಶಬ್ದ ಮುಗ್ಧವಾದ ಪ್ರಸ್ತಾವದ ವಚನ॥

ಕಾಣಬಾರದ ಲಿಂಗವೆನ್ನ ಕರಸ್ಥಲಕ್ಕೆ ಬಂದರೆ ಹೇಳಲಮ್ಮಿ, ಕೇಳಲಮ್ಮಿ ಎನಗಿದು ಸೋಜಿಗ. ಗುಹೇಶ್ವರನೆಂಬ ಲಿಂಗ ನಿರಾಕಾರ ಬಯಲು. ಸಾಕಾರವಾಗಿ ಎನ್ನ ಕರಸ್ಥಲಕ್ಕೆ ಬಂದರೆ ಹೇಳಲಮ್ಮಿ ಕೇಳಲಮ್ಮಿ. ॥೫೩॥

ಆ ಲಿಂಗದಲ್ಲಿ ಪರವಶನಾಗಿರ್ದ ಪ್ರಸ್ತಾವದ ವಚನ॥

ತನು ತರಹರಂಬೋಗಿ ಮನವು ನಿಮ್ಮಲ್ಲಿ ಸಿಲುಕಿತಯ್ಯ! ನೋಟವೆ ಪ್ರಾಣವಾಗಿ ಆಪ್ಯಾಯನ ನಿಮ್ಮಲ್ಲಿ ಅರತುದಯ್ಯ! ಸಿಲುಕಿತ್ತು ಶೂನ್ಯದೊಳಗೆ ಗುಹೇಶ್ವರ ನಿರಾಳಾ. ॥೫೪॥

ನಿಮ್ಮ ನೋಡುವ ಸುಖವನ್ನಕ್ಕರ ಬೆರಿಸಲೆಲ್ಲಿಯುದಯ್ಯ? ನಿಮ್ಮ ಬೆರಿಸುವ ತವಕವನ್ನಕ್ಕ ನೋಟ ಹಿಂಗದು. ನೋಡಿ ಕೂಡಿ ಸೈನೆರಗಾದ ಸುಖವನೇಸೆಂದುಪಮಿಸುವೆನಯ್ಯ ಗುಹೇಶ್ವರಾ! ॥೫೫॥

ಇಂತು ಗುರುಕರುಣದಿಂದೊವಗಿದ ಇಷ್ಟ ಲಿಂಗದಲ್ಲಿ ವಿಶ್ವಾಸ ಬಲಿದಲ್ಲಿ ಆಯತ ಲಿಂಗ, ಆ ಇಷ್ಟಲಿಂಗದ ಭಾವ ಮನೋ ವೇದ್ಯವಾದಲ್ಲಿ ಸ್ವಾಯತಲಿಂಗ, ಇಷ್ಟಲಿಂಗದ ಭಾವ ಮನೋವೇದ್ಯ ಸುಖವು ಭಿನ್ನವಾಗಿ ತೋರದೆ, ಅನುಪನು ಪರಿಣಾನು ಪರಿಪೂರಿತವಾದಲ್ಲಿ ಸನ್ನಿಹಿತ ಲಿಂಗ, ಇಂತು ಇಷ್ಟ ಪ್ರಾಣ ಭಾವ ಲಿಂಗಂಗಳು ತನುತ್ರಯಂಗಳಲ್ಲಿ ಆಯತ ಸ್ವಾಯತ ಸನ್ನಿಹಿತಂಗಳಾಗಲು, ಆ ಶರಣನ ಷಡಂಗದಲ್ಲಿ ಷಡ್ವಿಧ ಲಿಂಗ ಸಂಬಂಧವಾದುದೆ ಷಟ್‌ಸ್ಥಲಂಗಳೆಂದು ಪ್ರಭು ದೇವರು ನಿರೂಪಿಸಿದರದೆಂತೆಂದೊಡೆ, ಭಕ್ತಿಸ್ಥಲದ ವಚನ॥

ಪ್ರಣತಿಯು ಇದೆ, ಬತ್ತಿಯು ಇದೆ, ಜ್ಯೋತಿಯ ಬೆಳಗುವರೆ ತೈಲವಿಲ್ಲದೆ ಎಂತಪ್ಪುದಯ್ಯ. ಗುರುವು ಅಯಿದಾನೆ. ಲಿಂಗವು ಅಯಿದಾನೆ. ಶಿಷ್ಯಂಗೆ ಜ್ಞಾನೋದಯವಾಗದನ್ನಕ್ಕ, ಭಕ್ತಿ ಎಂತಳವಡವುದಯ್ಯ. ಸೋಹಂ ಎಂಬುದ ಕೇಳಿ ದಾಸೋಹವ ಮಾಡದಿರ್ದಡೆ, ಅತಿಗಳೆದೆ ನಾನು ಗುಹೇಶ್ವರಾ॥೫೬॥ ಅನ್ಯ ರಜವ ಬೆರಿಸದೆ, ತನ್ನ ರಜವ ಭಾವಿಸದೆ, ರವಿಯ ಬೆಳಸಬಳಸದೆ, ಲಿಂಗದ ಬೆಳಸ ತಂದು ಜಂಗಮದಲ್ಲಿ ಸವಿಸುತ್ತಿಪ್ಪನು. ಆ ಭಕ್ತನಲ್ಲಿ ಗುಹೇಶ್ವರನಿಪ್ಪನು॥೫೭॥ ಮುಂದು ಜಾವದಲೆದ್ದು ಲಿಂಗದಂಗಿಯ ಮುಟ್ಟಿ, ಸುಪ್ರಭಾತದಲೆದ್ದು ಶಿವಭಕ್ತರ ಮುಖವ ನೋಡುವುದು ಹುಟ್ಟಿದುದಕ್ಕೆ ಸಫಲ ನೋಡಯ್ಯ. ಸತ್ಯ ವಚನವಿಂತೆಂದುದು. ಇದಿಲ್ಲದವರನೊಲ್ಲೆ ಗುಹೇಶ್ವರಾ॥೫೮॥

ಇಂತು ವಿಶ್ವಾಸ ಪ್ರಾಣವಾಗಿಪ್ಪ ಭಕ್ತನ ಆ ವಿಶ್ವಾಸದೊಳಗಣ ಏಕೋನಿಷ್ಠೆ ಎಂತಿದ್ದುದೆಂದೊಡೆ, ಮುಂದೆ ಮಹೇಶ್ವರ ಸ್ಥಲವಾಮುದು.

ಕೊಟ್ಟ ಕುದುರೆಯನೇರಲರಿಯದೆ, ಮತ್ತೊಂದ ಕುದುರೆಯ ಬಯಸುವವರು, ವೀರರೂ ಅಲ್ಲ, ಧೀರರೂ ಅಲ್ಲ. ಇದು ಕಾರಣ ಮೂರು ಲೋಕವೆಲ್ಲ ಹಲ್ಲಣವ ಹೊತ್ತುಕೊಂಡುಬಳಲುತ್ತ ಇದ್ದಾರೆ ಗುಹೇಶ್ವರಾ॥

ಭಕ್ತ ಭಕ್ತರೆಂಬರು ಪೃಥ್ವಿಯ ಪೂರ್ವಾಶ್ರಯವ ಕಳೆಯದನ್ನಕ್ಕರ, ಅಪ್ಪುವಿನ ಪೂರ್ವಾಶ್ರಯವ ಕಳೆಯದನ್ನಕ್ಕರ, ತೇಜದ ಪೂರ್ವಾಶ್ರಯವ ಕಳೆಯದನ್ನಕ್ಕರ, ವಾಯುವಿನ ಪೂರ್ವಾಶ್ರಯವ ಕಳೆಯದನ್ನಕ್ಕರ, ಆಕಾಶದ ಪೂರ್ವಾಶ್ರಯವ ಕಳೆಯದನ್ನಕ್ಕರ, ಸೋಮಸೂರ್ಯರ ಪೂರ್ವಾಶ್ರಯವ ಕಳೆಯದನ್ನಕ್ಕರ, ಆತ್ಮನ ಪೂರ್ವಾಶ್ರಯವ ಕಳೆಯದನ್ನಕ್ಕರ, ಭಕ್ತ

ಕೆಂದು ಲಿಂಗನ ಪೂಜಿಸುವವರ ಕಂಡು ಬೆರಗಾದೆನು ಗುಹೇಶ್ವರಾ॥೮॥
ಹರಿದು ಹತ್ತಿ ಮುಟ್ಟಿ ಹಿಡಿದಿಹೆನೆಂದು ಜಾರಿ ಉರುಳಿ ಬಿದ್ದರು ಅನಂ
ತರು. ಹಿಡಿದಿಹೆನೆಂಬವರೆಲ್ಲರು ಹೆಣನುಂಡು ಹೋದರು. ನಾ ಹಿಡಿದು
ಬಂದಿವಡೆ ಬಂದಿಯಾಯಿತ್ತು ಗುಹೇಶ್ವರಾ॥೯॥ ಅಷ್ಟವಿಧಾರ್ಚನೆ
ಷೋಡಶೋಪಚಾರಂಗಳ ಹಂಗು ಹರಿ ಇಲ್ಲದೆ ಮಾಡುವೆ. ನಾ ಮಾಡುವ
ಕ್ರಿಗಳೆಲ್ಲವು ನೀನೆಯಾದಕಾರಣ ಗುಹೇಶ್ವರನಿಮ್ಮಲ್ಲಿ ತದ್ಗತವಾದೆನು॥೧೦॥

ಇಂತು ವಿಶ್ವಾಸದಿಂದ ಭಕ್ತನಾಗಿ ಆ ವಿಶ್ವಾಸದೊಳಗಣ ನಿಷ್ಠೆಯಿಂ
ಮಹೇಶ್ವರನಾಗಿ, ಆ ನಿಷ್ಠೆಯೊಳಗೆ ಅತ್ತಿತ್ತ ಓಸರಿಸದೆ ಸಾವಧಾನಿಯಾ
ಗಿರ್ದ ಭೇದವೆಂತಿದ್ದಿರ್ದುದೆಂದೊಡೆ, ಮುಂದೆ ಪ್ರಸಾದಿಸ್ಥಲವಾದುದು॥

ತ್ರಿವಿಧದ ನಿತ್ಯ ತ್ರಿವಿಧದ ಅನಿತ್ಯವನಾರು ಬಲ್ಲರಯ್ಯ? ತ್ರಿವಿಧಕ್ಕೆ
ತ್ರಿವಿಧವನಿತ್ತು ತ್ರಿವಿಧ ಪ್ರಸಾದವ ಕೊಳಬಲ್ಲರೆ ಅತನೆ ತ್ರಿವಿಧನಾಥನೆಂ
ಬೆನು. ಅತನೆ ವೀರನೆಂಬೆನು. ಅತನೆ ಧೀರನೆಂಬೆನು. ಗುಹೇಶ್ವರ
ಲಿಂಗ ಪ್ರಸಾದಿ ಎಂದೆನು॥೧೫॥ ಅರ್ಪಿತ ಅನರ್ಪಿತವನಾರು ಬಲ್ಲರಯ್ಯ!
ಅರ್ಪಿಸಿಕೊಂಬುದು ಅನರ್ಪಿತ, ಅರ್ಪಿಸದೆ ಕೊಂಬುದು ಅರ್ಪಿತ. ಅರ್ಪಿಸಿ
ಅರ್ಪಿಸದೆ ಕೊಳಬಲ್ಲರೆ ಗುಹೇಶ್ವರ ನಿಮ್ಮ ಪ್ರಸಾದಿ॥೧೪॥ ತನುವತಾ
ಗದಮುನ್ನ ಮನವ ತಾಗದ ಮುನ್ನ ಆಪ್ಯಾಯನ ಬಂದು ಎಡೆಗೊಳ್ಳದ
ಮುನ್ನ, ಅರ್ಪಿತವ ಮಾಡಬೇಕು. ಗುರುವಿನ ಕಯ್ಯ ಲಿಕಿತವಾಗದ
ಮುನ್ನ ಅರ್ಪಿತವ ಮಾಡಬೇಕು. ಎಡದಕಯ್ಯಲ್ಲಿ ಕೆಚ್ಚು ಬಲದ ಕೈ
ಯಲ್ಲಿ ಹುಲ್ಲು. ಉರಿಯಹತ್ತಿತ್ತು ಗುಹೇಶ್ವರ ನಿಮ್ಮ ಪ್ರಸಾದಿಯಾ॥೧೫॥

ಇಂತು ವಿಶ್ವಾಸದಿಂ ಭಕ್ತನಾಗಿ, ಆ ವಿಶ್ವಾಸದೊಳಗಣ ನೈಷ್ಠೆ
ಯಿಂದ ಮಹೇಶ್ವರನಾಗಿ, ಆ ನಿಷ್ಠೆಯೊಳಗಣ ಸಾವಧಾನದಿಂ ಪ್ರಸಾದಿ
ಯಾಗಿ, ಆ ಸಾವಧಾನದೊಳಗಣ ಸ್ವಾನುಭಾವ ವಿವೇಕದಿಂ ಪ್ರಾಣಲಿಂ
ಗಿಯಾಗಿ, ಲಿಂಗಪ್ರಾಣಿಯಾಗಿರ್ದ ವರ್ತನವೆಂತಿರ್ದಿತೆಂದೊಡೆ, ಮುಂದೆ
ಪ್ರಾಣಲಿಂಗಿಸ್ಥಲವಾದುದು.

॥ವಚನ॥ ಉದಕಮೂರ್ತಿಯಾಗಿ ಉದಯವಾಯಿತ್ತು. ಪಿಂಡಿಗೆ
ಯಲ್ಲಿ ಮೂಲ ಸ್ಥಾನ ಸ್ಥಾಪ್ಯವಾಯಿತ್ತು. ಸ್ಪದೇಹ ಶಿವಪುರದಲ್ಲಿ ಪಾಯು
ಪೂಜಾರಿಯಾಗಿ, ಪರಿಮಳ ದಿಂಡೆಯ ಕಟ್ಟಿ, ಪೂಜಿಸುತ್ತಿದ್ದಿತ್ತು. ನವದ್ವಾ
ರಶಿವಾಲಯದ ಆದಿ ಮಧ್ಯಸ್ಥಾನದಲ್ಲಿ ಗುಹೇಶ್ವರನೆಂಬ ಲಿಂಗವಲ್ಲಿಯೆ

ನಿಂದಿತ್ತು॥೬॥ ಕಂಗಳ ಬೆಳಗ ಕಲ್ಪಿಸಬಾರದು. ಕರ್ಣದ ನಾದ ವರ್ಣಿ
ಸಬಾರದು. ಜಿಹ್ವೆಯ ರುಚಿಗೆ ಪ್ರತಿ ಇಲ್ಲವೆಂದಿತ್ತು. ಮತಿಗೆ ಮಹಾ ಘನ
ವಪ್ಪ ಸುಕ್ಷುಮವ ನಾಳದ ಸುಯಿಧಾನವ ಪ್ರಮಾಣಿಸಬಾರದು. ಅಣು
ರೇಣು ತೃಣ ಕಾಷ್ಠದೊಳಗೆ ಸೂಕ್ಷ್ಮನಷ್ಟಯ ನಿಂದ ನಿರಾಳ ಗುಹೇಶ್ವರಾ॥೭॥
ಕಂಗಳಾಲಿಯ ಕರಿಯ ನಾಳದಲ್ಲಿ ಈರೇಳು ಭುವನವಡಗಿದವು. ನಾಟ
ನಾಟ್ಯ ನಟಿಸಿತ್ತು. ಆಡುವ ಸೂತ್ರದ ಪರಿಯನೋಡಾ! ಗುಹೇಶ್ವರ
ನಿರಾಳ ಚೈತನ್ಯನು॥೮॥

ಇಂತು ವಿಶ್ವಾಸದಿಂ ಭಕ್ತನಾಗಿ ಆ ವಿಶ್ವಾಸದೊಳಗಣ ನಿಷ್ಠೆ ಮಹೇ
ಶ್ವರನಾಗಿ, ಆ ನಿಷ್ಠೆಯೊಳಗಣ ನಿರಂತರ ಸಾವಧಾನಾರ್ಪಿತದಿಂ ಪ್ರಸಾ
ದಿಯಾಗಿ, ಆ ಪ್ರಸಾದವಧಾನಾರ್ಪಿತದೊಳಗಣ ಸ್ವಾನುಭಾವ ವಿವೇಕದಿಂ
ಪ್ರಾಣಲಿಂಗಿಯಾಗಿ, ಆ ಸ್ವಾನುಭಾವ ವಿವೇಕದೊಳಗಣ ಅರಿವಿನಿಂ ಶರ
ಣನಾದ ಭೇದವೆಂತಿರ್ದುದೆಂದೊಡೆ, ಮುಂದೆ ಶರಣಸ್ಥಲವಾದುದು.

॥ವಚನ॥ ನೆನಹು ಸತ್ತಿತ್ತು. ಭ್ರಾಂತು ಬೆಂದಿತ್ತು. ಅರಿವು ಮರೆ
ಯಿತ್ತು. ಕುರುಹು ಗೆಟ್ಟಿತ್ತು. ಅಲ್ಲಿ ಗತಿಯನರಸಲುಂಟೆ? ಮತಿಯನರ
ಸಲುಂಟೆ? ಅಂಗವೆಲ್ಲ ನಷ್ಟವಾಗಿ, ಲಿಂಗದಲ್ಲಿ ಲೀಯ್ಯವಾಗಿ ಕಂಗಳಂಗದ
ಕಳೆಯ ಬೆಳಗಿನ ಭಂಗ ಹಿಂಗಿತ್ತು ಗುಹೇಶ್ವರಾ॥೯॥ ಉಪಾಧಿಕನ ಮನವು
ಉಪಾಧಿರಹಿತನ ಮನವು ನಿಂದಲ್ಲಿಯೇ ನಿವಾತವಾಯಿತ್ತು. ಆನಂದದಭಾ
ವವು ಬಿಂದು ತಾನಳಿದು ನಿಂದಲ್ಲಿಯೇ ನಿವಾಸವಾಯಿತ್ತು. ಲಿಂಗದ ಬೆಳಗು
ಪ್ರಜ್ವಲಿಸುವದ ಕಂಡೆನು ಗುಹೇಶ್ವರಾ॥೭೦॥ ತಲೆಯ ಮೇಲೆ ಇದ್ದಿತ್ತು.
ತಲೆಯ ತಲೆ ಆ ತಲೆಯ ನುಂಗಿತ್ತು. ಸತ್ತು ಹಾಲಸವಿಯ ಬಲ್ಲರೆ, ಎರಡರ
ಕೀಲ ಬಲ್ಲರೆ ಹೇಳಿರಿ. ಶಿಸುವು ಕಂಡ ಕನಸಿನ ತೃಪ್ತಿಯ ನಿಮ್ಮಲ್ಲಿಯೇ
ಕಂಡೆನು ಗುಹೇಶ್ವರಾ॥೭೧॥ ಇಂತು ವಿಶ್ವಾಸದಿಂ ಭಕ್ತನಾಗಿ, ಆ ವಿಶ್ವಾಸ
ದೊಳಗಣ ನೈಷ್ಠೆಯಿಂ ಮಹೇಶ್ವರನಾಗಿ, ಆ ನಿಷ್ಠೆಯೊಳಗಣ ಸಾವಧಾ
ನದಿಂ ಪ್ರಸಾದಿಯಾಗಿ, ಆ ಸಾವಧಾನದೊಳಗಣ ಸ್ವಾನುಭಾವದಿಂ ಪ್ರಾಣ
ಲಿಂಗಿಯಾಗಿ, ಆ ಸ್ವಾನುಭಾವದೊಳಗಣ ಅರಿವಿನಿಂ ಶರಣನಾಗಿ, ಆ
ಅರಿವು ನಿಜದಲ್ಲಿ ಸಮರಸಭಾವವನೈದಿದ ನಿರ್ಭಾವ ಪದದೊಳು ನಿಂದ
ಭೇದವೆಂತಿರ್ದುದೆಂದೊಡೆ, ಮುಂದೆ ಐಕ್ಯಸ್ಥಲವಾದುದು.

॥ವಚನ॥ ಭಾವಕ್ಕೆ ಇಂಬಿಲ್ಲ. ಶಬ್ದ ವಿನಾಸಲು ನೋಡಾ! ನುಡಿಗೆಡೆ
ಇಲ್ಲ. ಎಡೆಗೆ ಕಡೆಯಿಲ್ಲ ಗುಹೇಶ್ವರನೆಂಬ ಶಬ್ದವೇಧಿಸಲೊಡನೆ॥೭೨॥

ನಿರ್ವಿಕಲ್ಪಿತವೆಂಬ ನಿಜಮೊಳೈಯ್ಯ! ನಿರಹಂಭಾವದಲ್ಲಿ ನಾನಿದ್ದೆನು. ನೋಡಿಹೆನೆಂದೊಡೆ ನೋಡಲಿಲ್ಲ. ಕೇಳಿಹೆನೆಂದೊಡೆ ಕೇಳಲಿಲ್ಲ. ಘನ ನಿರಂಜನದ ಬೆಳಗು ಇಂಬಾದುದನೇನೆಂಬೆ ಗುಹೇಶ್ವರಾ?॥೭೩॥ ನಿಜವ ನರಿದ ನಿಶ್ಚಿಂತನೇ, ಮರಣವ ಗೆಲಿದ ಮಹಂತನೇ, ಘನವನೊಳಕೊಂಡ ಮಹಿಮನೇ, ಪರವನೊಳಕೊಂಡ ಪರಿಣಾಮಿಯೇ, ಬಯಲಲ್ಲಾದ ಭರಿತನೇ, ಗುಹೇಶ್ವರಲಿಂಗ ನಿರಾಳವನೊಳಕೊಂಡ ಸಹಜನೇ॥೭೪॥

ಇಂತು ಷಟ್‌ಸ್ಥಲವು ಷಡಂಗದಲ್ಲಿ ಸಮರಸವನೈದಿ ಸರ್ವಾಚಾರ ಸಂಪತ್ತು ನಿಷ್ಪತ್ತಿಯಾಗಿ, ಮಹಾಜ್ಞಾನವೇ ತಾನಾಗಿ, ನಿಂದ ನಿಜಪದ ಸ್ಥಲವಾಗಿ, ಅಲ್ಲಿ ಅಗಮ್ಯವೇ ಗಮನವಾಗಿ, ಪರವೆಂಬುದೇ ನಾಮವಾಗಿ ನಿರಾಕಳಿರಿತವೆಂಬ ಜಂಗಮಸ್ಥಲವನಳವಡಿಸಿ, ನಿಃಶಬ್ದವೆಂಬ ವಚನಾನುಭಾವವಮಂ ತನ್ನನಾತ್ಮೈಯಿಸಿದ ಮಹಾನುಭಾವಿಗಳಿಗೆ ನಿರೂಪಿಸ ಲೆಳಸಿ ಕಾಯವೆಂಬ ಕಂಥೆಯ ಧರಿಸಿ ನಿಂದಲ್ಲಿ ನೆಳಲಿಲ್ಲದೆ, ಸುಳಿದರೆ ಹೆಜ್ಜೆ ಇಲ್ಲದೆ, ಸುಳಿವ ಅಲ್ಲಮ ಪ್ರಭುರಾಯನ ಜಂಗಮಸ್ಥಲದ ನಿಲುಕಡೆ ಎಂತಿರ್ದುದೆಂದೊಡೆ, ಆ ಪ್ರಸ್ಥಾವದ ವಚನ॥

ಪರಮ ಪರತತ್ವ ಪರಮಾರ್ಥಪರಾ ಪರವಾಙ್ಮನಕ್ಕ ಗೋಚರ, ಶಬ್ದ ಗಂಭೀರ ಉಪಮಾತೀತ, ಉನ್ನತ ಪರಶಿವಜ್ಞಾನ ಜ್ಯೋತಿ ಸುಜ್ಞಾನ ಪ್ರಭೆಯ ಬೆಳಗಿನೊಳಗೆ ಸುಳಿದಾಡುವ ಮಹಾ ಮಹಿಮಂಗೆ ಶಿವಜ್ಞಾನವೆ ಶೃಂಗಾರ, ಮಹಾ ಬೆಳಗೆ ವಿಭೂತಿ, ಪಂಚಬ್ರಹ್ಮವೇ ದರುಶನ, ಗಗನ ಸ್ಥಾನವೇ ಕಂಥೆ, ಆಕಾಶವೇ ಟೊಪ್ಪರ, ಅಜಾಂಡ ಬ್ರಹ್ಮಾಂಡವೆ ಕರ್ಣ ಕುಂಡಲ, ಆದಿ ಆಧಾರವೆ ಕಕ್ಷೆಪಾಳ, ಅನಾಹತವೆ ಒಡ್ಯಾಣ, ಅದ್ವೈತವೆ ಯೋಗವಟ್ಟಿಗೆ, ಅಗಮ್ಯವೆ ಯೋಗವಾಪುಗೆ, ಅಚಲಿತವೆ ಖರ್ಪರ, ಅಪ್ರಮಾಣವೆ ಲಾಕುಳ ಅವಿಡಾರವೆ ಸುಳಿಹು, ಅಕಲ್ಪಿತವೆ ಭಿಕ್ಷ, ಕೊಂಡುವೆ ಗಮನ, ನಿಂದುದೆ ನಿವಾಸ, ನಿಶ್ಚಿಂತವೆಂಬ ಆಶ್ರಮದೊಳಗೆ ನಿರಾಕುಳವೆಂಬ ಸಿಂಹಾಸನವನಿಕ್ಕಿ, ಗಗನ ಗಂಭೀರದ ಬಾವಿಯೊಳಗೆ ಅಗೋಚರದ ಅಗ್ನಿವಣೆಯ ತಂದು, ಮಹಾಘನ ಪ್ರಾಣಲಿಂಗಕ್ಕೆ ಮಂಗಳ ಬೆಳಗಿನಲ್ಲಿ ಮಜ್ಜನಕ್ಕೆರದು, ಬಿಂದ್ವಾಕಾಶವೆ ಗಂಧ, ಮಹದಾಕಾಶವೆ ಅಕ್ಷತೆ. ಪರಾಪರವೆ ಪತ್ರೆ ಪುಷ್ಪ, ನಿರ್ಮಳವೆ ಲಿಂಗಾರ್ಚನೆ, ಮಹಾ ಪ್ರಕಾಶವೆ ಪೂಜೆ, ನಿತ್ಯ ನಿರಂಜನವೆ ಧೂಪಾರತಿ, ಸಕಲ ಭುವನಾದಿ ಭುವನಂಗಳೆಲ್ಲ ಸುಯಿಧಾನ ಆಚಾ

ರವೆ ಅರ್ಪಿತ, ಮಹಾ ತತ್ವವೆ ಶಿತಾಳ, ಅಖಂಡಿತವೆ ಅಡಕೆ, ಏಕೋಭಾವವೆ ಎಲೆ, ಶುದ್ಧ ಶಿವಾಚಾರವೆ ಸುಣ್ಣ, ವಿವೇಕ ವಿಚಾರದಿಂ ತಾಂಬೂಲವಮಂ ಸ್ವೀಕರಿಸಿ, ಮಹಾ ಲಿಂಗದ ಪರಿಣಾಮವೆ ಪ್ರಸಾದ, ಸಮ್ಯ ಜ್ಞಾನವೆ ಸಂತೋಷ, ಸಹಜ ನಿರಾಭಾರಿಗಳ ಮೇಳದಿಂ ನಿಸ್ಸೀಮ ನಿಭ್ರಾಂತಿನ ಸುಸಂಗದಲ್ಲಿ ನಿರಾಶೆ ಪಥವೆ ಅನುಕೂಲ ನಿಃಶಬ್ದವೆ ಅನುಭಾವ, ಅನುವಮದ ನಿಃಶೂನ್ಯವೆ ವಿಶ್ರಾಮ, ನಿರಾಕಾರವೇ ಗಮನ, ನಿರಂತರ ಪಾತಾಳ ಊರ್ಧ್ವ ಪವನ, ತ್ರಿಭುವನ ಗಿರಿಯೆಂಬ ಪರ್ವತವನೇರಿ, ಕಾಯವೆಂಬ ಕದಳಿಯ ಹೊಕ್ಕು, ಸುಳಿದಾಡುವ ಮಹಾ ಮಹಿಮಂಗೆ ಇಹಲೋಕವೇನು, ಪರಲೋಕವೇನು? ಅಲ್ಲಿಂದತ್ತತ್ತಗಮ್ಯ ನಿರಾಳ ಪರಮ ಜ್ಞಾನ ಸಿದ್ಧಿ ಮಹಾ ಲಿಂಗದ ಬೆಳಗು ಗುಹೇಶ್ವರಾ ನಿಮ್ಮ ನಿಜವನರಿತ ಮಹಾ ಮಹಿಮಂಗೆ ನನೋ ನನೋ ಎಂಬೆನು. ॥೭೫॥

ಇಂತಪ್ಪ ಜಂಗಮಸ್ಥಲವ ನಿಂಬುಗೊಂಡು, ಸಕಲ ಪುರಾತನ ಗಣಂಗಳಂ ಕೃತಾರ್ಥರಂ ಮಾಡಲೋಸುಗ ಸುಳಿದಾಡುತಿರ್ದ ಪ್ರಸ್ಥಾವದ ವಚನ॥

ಕಾಲಿಲ್ಲದ ಗಮನ, ಕೈಯಿಲ್ಲದ ಸೊಂಕು, ಬಾಯಿಲ್ಲದ ರುಚಿ, ಭಾವವೆ ಖರ್ಪರವಾಗಿ, ಪರಮ ದೇಹಿ ಎಂದು ಬೇಡುವ ಪರಮನ ತೋರಾ ಗುಹೇಶ್ವರಾ॥೭೬॥ ಕಣ್ಣ ಕಟ್ಟಿಗೆಯಾಗಿ, ಕೈಯ ಕಪ್ಪರವಾಗಿ, ಕಿವಿಯೆ ಸಕಲ ಪುರಾತನರ ಕಾರುಣ್ಯವೆನುತ್ತೆ, ಮನದ ಭಿಕ್ಷವನುಂಡು, ತನು ಪರಿಣಾಮವನೈದಿಹ ಘನ ಮಹಿಮರ ತೋರಾ ಗುಹೇಶ್ವರಾ॥೭೭॥ ಕಂಡುದೆಲ್ಲ ಪಾವನ. ಕೇಳಿತ್ತೆಲ್ಲ ಪರಮಬೋಧೆ. ಮುಟ್ಟಿತ್ತೆಲ್ಲವು ಪರುಷದ ಸೋಂಕು. ಒಡನೆ ಕೂಡಿದವರೆಲ್ಲರು ಸದ್ಯೋನ್ಮುಕ್ತರು. ಸುಳಿದ ಸುಳುಹೆಲ್ಲ ಜಗ ಪಾವನ. ಮೆಟ್ಟಿದ ಧರೆ ಎಲ್ಲವು ಅವಿಮುಕ್ತಿ ಕ್ಷೇತ್ರ. ಸೋಂಕಿದ ಜಲವೆಲ್ಲವು ಪುಣ್ಯತೀರ್ಥಂಗಳು. ಶರಣೆಂದುಭಕ್ತಿಯ ಮಾಡಿದವರೆಲ್ಲರು ಸಾಯುಜ್ಯರು ಗುಹೇಶ್ವರ ನಿಮ್ಮ ಸುಳುಹಿನ ಸೊಗಸ ಉಪಮಿಸಬಾರದು.॥೭೮॥

ಇತಿ ಶ್ರೀಮತ್ಸಕಲ ಗಣ ಪುರಾತನರೊಳ್ ಪ್ರಭುದೇವರು ಮಹಾನುಭಾವ ಸಂಗೋಷ್ಠಿಯಂ ಮಾಡಿದ ಶೂನ್ಯಸಂಪಾದನೆಯೊಳ್ ಪ್ರಥಮೋಪದೇಶ ಸಮಾಪ್ತ.

ಮುಕ್ತಾಯಕ್ಕಗಳ ಸಂಪಾದನೆ.

(ದ್ವಿತೀಯೋಪದೇಶ.)

ಕಾಯ ಗುಣ ದೂರನಲ್ಲಮರಾಯನು ಮುಕ್ತಾಯಿ ಗೊಲವಿನಿಂ ನಿಜ ಪದವನು ಪಾಯದೊಳಿತ್ತುದ ಪೇಳ್ದೆ ನಿರಾಯಾಸದಿಂ ಶರಣ ಜನರ ಕಿವಿಗಿ ನಿದೆನಿಸಲ್॥

ಆದೆಂತೆಂದೊಡೆ॥ ಆ ಪ್ರಭುದೇವರು ಮರ್ತ್ಯ ಲೋಕವನೆಯ್ದಿ ಪಾವನವ ಮಾಡುತ್ತ ಸತ್ಯ ಸದಾಚಾರವಂತರಪ್ಪ ಶಿವಲಿಂಗೈಕ್ಯರಂ ತನ್ನಂತೆ ಮಾಡುತ್ತ ಶ್ರೀ ವೀರಶೈವಾಚಾರದ ಘನಮಂ ಕರತಳಾಮಳಕವಾಗಿ, ಸಮಸ್ತರೊಳು ತೊಳಗಿ ಬೆಳಗಿ ತೋರುತ್ತೆ ಶಿವಾದ್ವೈತ ತತ್ವ ಭೇದಂಗಳನು ಶಿವಸುಖಿಗಳೊಳು ಕೃಪೆಯಿಂ ನಿರೂಪಿಸುತ್ತೆ ಸ್ವಾನುಭಾವಗಮ್ಯರೊಳು ಸಮ್ಮೋಳನಂಗೈವುತ್ತೆ ಸಮ್ಯಕ್ ಶರಣರೊಳು ಸಮರಸಮಂ ಕೈಗೊಡುತ್ತಾ ಪರಸ್ಥಲದ ಲಿಂಗಮಂ ಕರಸ್ಥಲದೊಳು ಸೈತಿಟ್ಟು ಪಿರಿದೀ ನೋಟವೆ ಪ್ರಾಣವಾಗಿ, ಭಾವವೇ ನಿಬ್ಬೆರಗಿನ ನಿಲವಾಗಿ ಜ್ಞಾನವೇ ಸರ್ವಾಂಗಲಿಂಗವಾಗಿ ಮನವೇ ಕರಸ್ಥಲದೊಳು ಲಯವಾಗಿ, ಆ ಕಾಯವೇ ಕಾಯವಾಗಿ, ಬಲದಹಸ್ತದೊಳು ವೀಣಾದಂಡಮಂ ಪಿಡಿದು, ಪರಮಾನಂದ ರಸ ಒಸರಲು ಪಾಡುವ ಸ್ವರವೆ ನಾದ, ಬ್ರಹ್ಮ ತರಹರವಾಗಿ, ದಿವ್ಯ ವಚನಾಮೃತಂಗಳಂ ಪಾಡುತ್ತಂ ಲೋಕದ ಲಜ್ಜಾಭಿಮಾನಂಗಳನರಿಯದೆ ದಿಗಂಬರವೇಷದಿಂ ಇತರೇತರಂಗಳಂ ಮರೆದು, ತನ್ನೊಳು ತನ್ನ ನಿಜದ ನಿಲವ ನೋಡುತ್ತ ಇಂತನಂತದೇಶಂಗಳೊಳು ಸುಳಿದು ದೇಶಾಂತರಮಂ ನಟಿಸಿ ತೋರುತ್ತೆ ಬರುತ್ತಿರಲತ್ತ ಕೈಲಾಸದಲ್ಲಿ ಸಮಸ್ತ ಪ್ರಮಥ ಗಣಂಗಳೊಳಗೋರ್ವ ಗಣಾಧೀಶ್ವರನು ಜಗಹಿತಾರ್ಥವಾಗಿ, ಮರ್ತ್ಯಕ್ಕೆ ಅವತರಿಸಿ ಅಜಗಂಣನೆಂಬಭಿನಾಮದಿಂ ಗುಪ್ತ ಭಕ್ತಿಯಿಂದಿರ್ದು ತಮ್ಮ ನಿರವಯ ಪದದೊಳು ನಿಜವನೈದಲು, ಅಸ್ಸ ಮುಕ್ತಾಯಕ್ಕಗಳು ಅಜಗಣ್ಣನಗಲ್ದ ವಿಯೋಗಾವಸ್ಥೆಯಿಂ ಪ್ರಲಾಪಿಸುತ್ತಿರಲು, ಆ ಪ್ರಲಾಪಮಂ ಪ್ರಭುದೇವರು ಕಂಡು ಈಕೆ ಮಹಾಜ್ಞಾನಿಯೆಂದರಿದು, ನಿಂದುನೋಡುತ್ತಿರ್ಪ ಪ್ರಸ್ತಾವದೊಳು ಮುಕ್ತಾಯಕ್ಕಗಳು ಪ್ರಲಾಪಿಸುತ್ತಿರ್ದ ಪ್ರಸ್ತಾವದ ವಚನ॥

ಅರಿವನಣಲೊಳಗಿಕ್ಕಿ ಅಗಿವುತಿದೆ ಮರ್ತ್ಯಲೋಕವೆಲ್ಲವು. ಅರಿವು ಉಳಿಯಲರಿಯದೆ ಕೆಟ್ಟತ್ತು ಲೋಕವೆಲ್ಲವು. ನಾನೆಂತು ಬದುಕುವೆನಣ್ಣಾ ಕತ್ತಲೆ ಬೆಳಗ ಕಾಂಬ ಸಂದೇಹಿ ನಾನೊಬ್ಬಳು. ಎನ್ನ ಕಣ್ಣ ಕಟ್ಟ ಕನ್ನಡಿಯ ತೋರಿತ್ತು ಅಜಗಣ್ಣ ನಿನ್ನ ಯೋಗಾ॥೧॥ ಅಂಧಕನ ಕೈಯ್ಯ ಅಂಧಕ ಹಿಡಿವಂತಿರಬೇಕು. ಮೂಗನ ಕೈಯ್ಯಲ್ಲಿ ಕಾವ್ಯವ ಕೇಳಿವಂತಿರಬೇಕು. ಪರ್ಣಾದೊಳಗೆ ಪ್ರತಿಬಿಂಬದಂತೆ ಹಿಡಿವರಿಗಳವಲ್ಲದಿರಬೇಕು. ಅಣ್ಣ ಕೂರ್ಮನ ಶಿಶುವಿನ ಸ್ನೇಹದಂತಿರಲೊಲ್ಲದೆ, ಆರೂಢ ಗೆಟ್ಟಯೊ ಅಜಗಣ್ಣಾ॥೨॥ ರವಿ ಯೊಳಗಡಗಿದ ಪ್ರತಿಬಿಂಬದಂತೆ ಹಿಡಿವರಿಗಳವಲ್ಲದಿರಬೇಕು. ಅಣ್ಣ ನಿಮ್ಮೊಳಗಡಗಿದ ಭೇದವ ಭಿನ್ನವ ಮಾಡುವರೆ? ಅಣ್ಣ ನಿಮ್ಮ ನುಡಿಗಳೆಲ್ಲವು ಪ್ರತಿಬಿಂಬಗಳಾದವೆ? ಕೊಡನೊಳಗಣ ಜ್ಯೋತಿಯ ಅಡಗಿಸಲರಿಯದೆ ಮಿಗೆವರಿದಂತಾದೆಯೋ ಅಜಗಣ್ಣಾ? ॥೩॥ ಸ್ಫಟಿಕ ಪ್ರಜ್ವಲದಿಂ ಜ್ಯೋತಿ ಘಟವೊಳಗೆ ತೋರುತ್ತಿದೆ. ದಿಟಪುಟವನತಿಗಳೆದು, ಸಟೆಯ ಬಯಸುವರೆ, ಅಂತರಂಗದ ಸುದ್ದಿಯ ಬಹಿರಂಗಕ್ಕೆತಂದು, ಸಂಶ್ಲೇಷಿಸಲರಿಯದೆ ಮರುಳಾವಿರಣ್ಣಾ. ಮಂತ್ರದಕೀಲು ಕೂಟದ ಸಂಚದಭೇದವು ತಪ್ಪಿ ಮಂತ್ರ ಭಿನ್ನವಾಗಿ ನುಡಿವರೆ ಅಣ್ಣಾ?॥೪॥

ಇಂತು ತನ್ನ ಅರಿವಿನಮುಂದೆ, ಇದಿರಿಟ್ಟು ತೋರುವ ಪರವಸ್ತುವಿನಲ್ಲಿ ವಿಕಳಾವಸ್ಥೆಯನೈದಿ ನೆರೆವ ಭರದಿಂದಿರ್ಪ ಮುಕ್ತಾಯಕ್ಕಗಳನು ಪ್ರಭುದೇವರು ನುಡಿಸಿದ ಪ್ರಸ್ತಾವದ ವಚನ.

ಅಂಗ್ಯೆಯೊಳಗೊಂದು ಅರಳ್ದ ತಲೆಯ ಹಿಡಿದುಕೊಂಡು, ಕಂಗಳ ಮುತ್ತು ಪವಣಿಸುವಾಕೆ ನೀನಾರುಹೇಳಾ. ಸಂದ ಸಂಪಿಗೆಯರಳ್ದಿ ತುಂಬಿ ಬಂದುಂಬ ಭೇದವನರಿಯದೆ ಹಂಬಲಿಸುವ ಪರಿತಾಪವೇನುಹೇಳಾ? ಒಂದೊಂ ಜೆನೆ? ಎರಡಾಗಿದೆ. ಎರಡೆಂಬೆನೆ? ಒಂದಾಗಿದೆ. ಅರಿವಿನೊಳಗಣ ಮರಹಿ ದೇನು ಹೇಳಾ? ದುಃಖವಿಲ್ಲದುದಕ್ಕೆ ಅಕ್ಕೆ ಇಲ್ಲದನುತಾಪ ನಮ್ಮ ಗುಹೇಶ್ವರಲಿಂಗದಲ್ಲಿ ತೋರುತ್ತಿದೆ. ನೀನಾರು ಹೇಳಾ ಎಲೆ ಅವ್ವಾ? ॥೫॥

ಈ ಹೀಗೆಂದು ಪ್ರಭುದೇವರು ಬೆಸಗೊಳಲು ಮುಕ್ತಾಯಕ್ಕಗಳು ತನ್ನ ಕುರುಹ ಹೇಳಿದ ಪ್ರಸ್ತಾವದ ವಚನ.

ಆರೆಂದು ಕುರುಹ ಬೆಸಗೊಳಲು ಏನೆಂದು ಹೇಳುವೆನಯ್ಯ! ಕಾಯದೊಳಗೆ ಮಾಯವಿಲ್ಲ. ಭಾವದೊಳಗೆ ಭ್ರಮೆ ಇಲ್ಲ. ಕರೆದು ಬೆಸಗೊಂಬರೆ ಕುರುಹಿಲ್ಲ. ಒಬ್ಬರಿಗು ಹುಟ್ಟದೆ, ಅಯೋನಿಯೊಳು ಬಂದು ದುರ್ಬುದ್ಧಿ

ಯಾದವಳಸೆನೆಂಬೆನಣ್ಣಾ? ತಲೆಯಳಿದು ತಲೆಗೆಟ್ಟು ಬೆಳಗುವ ಜ್ಯೋತಿ ಎನ್ನ ಅಜಗಣ್ಣ ತಂದೆಯ, ಬಿನ್ನ ಬಳಿಯವಳು ನೀನಾರಯ್ಯ?॥೬॥

ಈ ಹೀಗೆಂದು ಮುಕ್ತಾಯಕ್ಕಗಳು ತಮ್ಮ ಕುರುಹ ಹೇಳಲು ಆ ಪ್ರಭು ದೇವರು ಕೇಳಿ ಹರುಷಿತರಾದ ಪ್ರಸ್ಥಾವದ ವಚನ॥

ಕಾಣದುದ ಕಂಡೆ, ಕೇಳದುದ ಕೇಳಿದೆ, ಮುಟ್ಟಬಾರದುದ ಮುಟ್ಟಿದೆ, ಅಸಾಧ್ಯವ ಸಾಧಿಸಿದೆ, ತಲೆಗೆಟ್ಟುದ ತಲೆವಿಡಿದೆ, ನೆಲೆಗೆಟ್ಟುದ ನಿರ್ಧರಿಸಿದೆ, ಗುಹೇಶ್ವರ ನಿಮ್ಮ ಶರಣ ಅಜಗಣ್ಣಂಗೆ ಶರಣೆಂದು ಬದುಕಿದೆನು. ॥೭॥

ಈ ಹೀಗೆಂದು ಪ್ರಭುದೇವರು ಅಜಗಣ್ಣ ದೇವರ ನಿಜವನರಿದು, ಶರಣು ಮಾಡಿದರೆ ಅವರ ಕುರುಹ ನರಿಯಬೇಕೆಂದು ಮುಕ್ತಾ ಯಕ್ಕಗಳು ಬೆಸಸೊಂಡ ಪ್ರಸ್ಥಾವದ ವಚನ॥

ಸಚ್ಚಿದಾನಂದಸ್ವರೂಪವಾದ ವಾಙ್ಮನಕ್ಕ ಗೋಚರವಾದ ಜ್ಞಾನ ಕ್ರಿಯೆ ನೊಳಕೊಂಡು, ನಿಂದ ಜಂಗಮವೆ ಅಂಗ ಪ್ರಾಣವಾದ ಶರಣರನೊಳ ಕೊಂಡು, ಚಿದ್ಘನದೊಳಗೆ ಅವಿರಳೈಕ್ಯವಾದ ಎನ್ನ ಅಜಗಣ್ಣ ತಂದೆಯ ನರಿದು, ಶರಣೆಂಬುವಾತ ನೀನಾರು ಹೇಳಯ್ಯ?॥೮॥

ಈ ಹೀಗೆಂದು ಕೇಳಿದ ಮುಕ್ತಾ ಯಕ್ಕಗಳಿಗೆ ಪ್ರಭುದೇವರು ತಮ್ಮ ಕುರುಹ ಹೇಳುವ ಪ್ರಸ್ಥಾವದ ವಚನ॥

ಶರಣು ಶರಣಾರ್ಥಿ ಎಲೆ ತಾಯಿ, ಧರೆ ಆಕಾಶ ಮನೆಗಟ್ಟದಂದು, ಹರಿವನಿಲ ಅಗ್ನಿ ಜಲ ಮೊಳೆದೋರದಂದು, ಹುಟ್ಟಿದಳಿವ್ಮಪ್ಪೆ! ಅದಕ್ಕೆ ಮುನ್ನವೆ ಹುಟ್ಟಿದೆ. ಬೆಳೆದ ನಮ್ಮಯ್ಯ. ಈ ಇಬ್ಬರ ಬಸಿರಲ್ಲಿ ಬಂದೆ. ನಾನು ಎಮ್ಮ ತಂಗಿಯಪ್ಪಿವರು ಪೊರೆಗೆಟ್ಟು ಹೆಂಡಿರಾದರೆ ನಗೆ. ಕಾಮಬಾಣ ತಾಗದೆ, ಅವರ ಸಂಗವ ಮಾಡಿದೆನು. ನಾ ನಿಮ್ಮ ಭಾವನಲ್ಲಯ್ಯನು. ನೀನೆನಗೆ. ನಗೆಪೆಣ್ಣು. ನಮ್ಮ ಗುಹೇಶ್ವರನ ಕೈ ವಿಡಿದು ಪರಮ ಸುಖಿಯಾಗಿ ಕಳವಳ ಕಂಡೆರವಿದೇನು ಹೇಳಾ?॥೯॥

ಈ ಹೀಗೆಂದು ಪ್ರಭುದೇವರು ತಮ್ಮ ಪೂರ್ವಾಪರ ಸಂಬಂಧಮಂ ನಿರೂಪಿಸಲು, ಆ ಮುಕ್ತಾಯಕ್ಕಗಳು ಕೇಳಿ ಹರುಷಿತೆಯಾದ ಪ್ರಸ್ಥಾವದ ವಚನ॥

ದೇವ ದೇವ ಶರಣಾರ್ಥಿ ಅವಧರಿಸಯ್ಯ! ಕೇಳಿದ ಸುಖ ಕಿವಿಗೆ ಬೇಟ ವಾಯಿತ್ತು. ಕಿವಿಗಳ ಬೇಟ ಕಂಗಳ ಮುಂದೆ ಮೂರ್ತಿಗೊಂಡಿತ್ತು. ಕಂಗಳ

ಮುಂದೆ ಕಂಡ ಸುಖವು ಮನಕ್ಕೆ ವೇದ್ಯವಾಯಿತ್ತು. ತ್ರಿವ ಶರಣರ ದೆರು ಶನವ ಸುಖವನೇನೆಂದೆನ್ನಬಹುದು? ಮದವಳಿದು ಮಹವ ನೊಡಗೂಡಿದ ಎನ್ನ ಅಜಗಣ್ಣನಗಲಿದ ಮಹಿಮ ನಿಮ್ಮ ಸಂಗದಲ್ಲಿ ಸ್ವಯವಾಯಿತ್ತು ಕಾಣಾ ಪ್ರಭುವೆ. ॥೧೦॥

ಇಂತು ಮುಕ್ತಾಯಕ್ಕಗಳು ನಿಮ್ಮ ವರುಶನದಿಂದವೇ ಕೃತಾರ್ಥ ಳಾದೆನೆಂದು ಬಿನ್ನಪಂಗೈಯ್ಯಲು, ಆ ಪ್ರಭುದೇವರು ಅಕೆಯ ಅನುತಾಪವುಂ ಸಂಶೈಸಿ ನಿಲಿಸುವ ಪ್ರಸ್ಥಾವದ ವಚನ॥

ಅರಿಪರತು ಮರಹುಗೆಟ್ಟ ತನ್ನಲ್ಲಿ ತಾನೆ ಸನ್ನಿಹಿತನಾದಂಗೆ ಮಣಿ ಸುವರೆ ಹೇಳಾ! ಅಳೋಕಿಸುವರೆ ಹೇಳಾ! ಒಡಲಿಲ್ಲದಾತಂಗೆ, ಎಡೆಯ ಲೊಂದು ಅಳಿವುಂಟೆಂದು ಹೇಳುವ ಮಾತು ಭ್ರಾಂತು ನೋಡಾ. ಎರಡಿ ಲ್ಲದ ಐಕ್ಯಂಗೆ ಒಳ ಹೊರಗಿಲ್ಲ ನೋಡಾ! ಗುಹೇಶ್ವರನ ಶರಣ ಅಜಗ ಣ್ಣಂಗೆ. ॥೧೧॥

ಈ ಹೀಗೆಂದು ಪ್ರಭುದೇವರು ನಿರೂಪಿಸಲು, ಅಜಗಣ್ಣನು ಪರಮ ಯೋಗೀಶ್ವರನು, ಸುಜ್ಞಾನ ಪರಿಪೂರ್ಣನು, ಅಂತರಂಗದಲ್ಲಿ ಅವಿರಳ ಲಿಂಗೈ ಕ್ಯನು, ಬಹಿರಂಗ ವ್ಯವಹಾರ ದೂರಸ್ಥನು, ಸರ್ವ ಕಾರಣ ನಿರ್ಮುಕ್ತನು ಸರ್ವಾಂಗರಹಿತನು, ನಿತ್ಯ ನಿಜತತ್ವದಲ್ಲಿ ಮನೋವೇದ್ಯನು, ಸಚ್ಚಿದಾ ನಂದ ರಸಾರ್ಣವನು, ಸದ್ಯೋನ್ಮುಕ್ತನು. ಸರ್ವ ಕ್ರಿಯಾತೀತನು, ನಿಃಶಬ್ದ ಗಂಭೀರನು, ನಿರುಪಮ ಚರಿತ್ರನು, ನಿಸ್ಸಂಸಾರನು, ಸಕಲತತ್ವ ಶಿರೋರತ್ನನು, ಶರೀರನಿಡಿದು ಸಂಗ ರಹಿತನು, ಇಂದ್ರಿಯಂಗಳ ವಿಡಿದು ನಿಃಕಾಮನು, ಗಮನವಿಡಿದು ಅಗಮ್ಯನು, ವಿವೇಕನಿಡಿದು ನಿರ್ವಿಚಾರನು. ಅರುಹು ವಿಡಿದು ತ್ರಿಪುಟಿ ರಹಿತನು, ಘನವಲ್ಲಿ ಗಂಭೀರನು, ಸೆನಹಿನಲ್ಲಿ ನಿಸ್ಸಂ ಚಲನು, ನುಡಿಯಲ್ಲಿ ಪರವಶನು, ಗತಿಯಲ್ಲಿ ಇಹಪರವೆಂಬೆರಡು ಹೊದ್ದದ ನಿರಾಶಾಭರಿತನು, ಸ್ಥಿತಿಯಲ್ಲಿ ನಿಃಸ್ಥಿತನು, ಇರವಿನಲ್ಲಿ ಸರ್ವತಿವನು. ಇಂತಪ್ಪ ಮಹಾಮಹಿಮನ ನಗಲಿ ನಾನೆಂತು ಜೀವಿಸುವೆನೆಂದು ಮುಕ್ತಾಯಕ್ಕಗಳು ಬಿನ್ನೈಸುತ್ತಿರ್ದ ಪ್ರಸ್ಥಾವದ ವಚನ॥

ಅಂಬರದಲಾಡುವ ತುಂಬಿಯು ಬಿಂಬದ ಕಂಬನಿಯೊಳಗಣ ರತ್ನದ ಬಯಕೆಯ ಅಧ್ಯಂತವನೇನೆಂಬೆನಯ್ಯ? ವೇದಶಾಸ್ತ್ರ ಶ್ರುತಿ ಸ್ಮೃತಿಗಳು ಸ್ತುತಿಯಿಸಲರಿಯವು. ನಾದವಲ್ಲ, ಸುನಾದದ ನಿಲವಲ್ಲ. ಭೇದಿಸುವಡೆ

ಅಗಮ್ಯ ನೋಡಾ! ಸೊಲ್ಲಿಲ್ಲದ ಸೊಮ್ಮಿಲ್ಲದ ಘನವನೇನೆಂಬೆನು? ಎಂತು ಮರೆಪೆನಯ್ಯ ಎನ್ನ ಅಜಗಣ್ಣ ತಂದೆಯನು? ॥೧೨॥

ಹೀಗೆಂದು ಮುಕ್ತಾಯಕ್ಕಗಳು ಬಿನ್ನೈಸಲು ಅವಕ್ಕೆ ಪ್ರಭುದೇವರು ನಿರೂಪಿಸಿದ ಪ್ರಸ್ಥಾವದ ವಚನ॥

ಕಂಡೆನೆಂಬುದು ಕಂಗೆ ಮರವೆ. ಕಾಣೆನೆಂಬುದು ಮನದ ಮರವೆ. ಕೂಡಿದೆನೆಂಬುದು ಅರಿವಿನ ಮರವೆ. ಅಗಲಿದೆನೆಂಬುದು ಮರಹಿನ ಮರವೆ. ಇಂತು ಕಂಡಿ ಕಾಣೆ ಕೂಡಿದೆನಗಲಿದೆನೆಂಬ ಭ್ರಾಂತಿ ಸೂತಕವ ತಿಳಿದು ನೋಡಲು, ಗುಹೇಶ್ವರನೆಂಬ ಲಿಂಗವನನಗಲಲೆಡೆ ಇಲ್ಲ ಕೇಳಾ ಎಲೆ ತಾಯೆ. ॥೧೩॥

ಇದಕ್ಕೆ ಮುಕ್ತಾಯಕ್ಕಗಳು ಕೊಟ್ಟ ಪ್ರತ್ಯುತ್ತರ.

ಕಣ್ಣ ಮೊದಲಲ್ಲಿ ಕುಳ್ಳಿರ್ಮ ಬಣ್ಣದೋರುವ ಪರಿಯ ನೋಡಾ. ಬಣ್ಣವಿಲ್ಲದ ಬಣ್ಣವನುಟ್ಟು ಸುಳಿದ ಅಜಗಣ್ಣನ ಯೋಗಕ್ಕೆ ಬೆರಗಾದೆನು. ಈ ಅರಿವೆಂತುಟಿಲ್ಲವನೊಳಗಿಟ್ಟುಕೊಂಡನು ಶಿವಗಣಸಂಚ ಶಿವಯೋಗಿ ಅಜಗಣ್ಣ ದೇವನು. ॥೧೪॥ ಮತ್ತಂ ನೀರಬೊಂಬೆಗೆ ಸಿರಾಳದ ಗೆಜ್ಜೆಯ ಕಟ್ಟಿ ಬಯಲ ಬೊಂಬೆಯ ಕೈಯ್ಯಲ್ಲಿ ಕೊಟ್ಟು, ಮುದ್ದಾಡಿಸುತ್ತಿರ್ದನಯ್ಯ. ಕರ್ಪುರದ ಪುತ್ಥಳಿಗೆ ಅಗ್ನಿಯ ಸಿಂಹಾಸನವನಿಕ್ಕಿ ಅಗ್ನಿ ಕರಗಿ ಕರ್ಪುರ ಉಳಿಯದಕ್ಕೆ ಬೆರಗಾದೆನಯ್ಯ ಎನ್ನ ಅಜಗಣ್ಣನ ಯೋಗಕ್ಕೆ. ॥೧೫॥

ಇಂತು ದೇಹವಿದ್ದು ದೇಹವಿಲ್ಲದೆ ತನ್ನರಿವುದೋರದೆ ತಾನೆಂಬ ಸ್ವರೂಪವನು ಶಿವತತ್ವ ಸ್ವರೂಪದಲ್ಲಿ ನಿರ್ವಹಿಸಿ ತಾ ತನ್ನ ತಪ್ಪಿಸಿಕೊಂಡು, ಹೋದನೆಂದು ಮುಕ್ತಾಯಕ್ಕಗಳು ಬಿನ್ನೈಸಲು, ಆ ಪ್ರಭುದೇವರು ನಿರೂಪಿಸಿದ ಪ್ರತ್ಯುತ್ತರ.

ಅಳಿವನಲ್ಲ, ಉಳಿವನಲ್ಲ, ಘನಕ್ಕೆ ಗಮನವಲ್ಲ, ಮನಕ್ಕೆ ಸಾಧ್ಯನಲ್ಲ, ತನ್ನ ತಪ್ಪಿಸಿ ಇದ್ದವರ ಸೊಪ್ಪಿಸಿದೆನೆಂಬ ಭಿನ್ನ ಭಾವಿಯಲ್ಲ. ಗುಹೇಶ್ವರನ ಶರಣ ಅಜಗಣ್ಣನ ಅಂತಿಂತೆನಬಾರದು ಕೇಳಾ ತಾಯೆ. ॥೧೬॥

ಈ ಹೀಗೆಂದು ಪ್ರಭುದೇವರು ನಿರೂಪಿಸಲು, ಅವಕ್ಕೆ ಮುಕ್ತಾಯಕ್ಕಗಳು ಕೊಟ್ಟ ಪ್ರತ್ಯುತ್ತರ.

ತನುವಿಡಿದೆನಾಗಿ ಅನುವನರಿಯದೆ ಕೆಟ್ಟೆನು. ಮನವಿಡಿದೆನಾಗಿ ಅರಿವು ಉಳಿಯದೆ ಕೆಟ್ಟೆನು. ಭಾವದ ಬಯಕೆ ಹಿಂಗದಾಗಿ, ವಿಯೋಗಿಯಾಗಿ ಕೆಟ್ಟೆನು. ಅರಿವ ನುಡಿದು, ಮರಹಿನೊಳಗಾದೆನು. ಎನ್ನ ಕಾಣದೆ ಭಿನ್ನ ಜ್ಞಾನಿಯಾದೆನು. ಅಜಗಣ್ಣನೆಂಬ ಮಹಿಮನು ಘನವೇದ್ಯನಾಗಿ. ಎನ್ನ ಮತಿಗೆ ಮರವೆಯ ಮಾಡಿ, ಹೋದನು. ॥೧೭॥

ಈ ಹೀಗೆಂದು ಮುಕ್ತಾಯಕ್ಕಗಳು ಬಿನ್ನೈಸಲು, ಪ್ರಭುದೇವರು ಕೊಟ್ಟ ಪ್ರತ್ಯುತ್ತರವು.

ತನು ಉಂಟೆಂದರೆ ಪಾಶಬದ್ಧ. ಮನ ಉಂಟೆಂದರೆ ಭವಕ್ಕೆ ಬೀಜ. ಅರಿವ ನುಡಿದು ಕೆಟ್ಟೆನೆಂದರೆ ಅಜ್ಞಾನ. ಭಾವದಲ್ಲಿ ನಿಲುಕಿದನೆಂಬ ಮಾತು ಬಯಲ ಭ್ರಮೆ ನೋಡಾ! ಒಮ್ಮೆ ಕಂಡೆ, ಒಮ್ಮೆ ಕಾಣೆ, ಒಮ್ಮೆ ಕೂಡಿದೆ ಒಮ್ಮೆಯಗಲಿದೆನೆಂದರೆ ಕರ್ಮ ಬೆಂಬತ್ತಿ ಬಿಡದು. ನಿನ್ನೊಳಗೆ ನೀ ತಿಳಿದು ನೋಡಲು, ಭಿನ್ನ ಉಂಟೇ? ಗುಹೇಶ್ವರಲಿಂಗವನರಿವರೆ ನೀನೆಂದೇ ತಿಳಿದು ನೋಡಾ ಮರುಳೆ. ॥೧೮॥

ಪರತತ್ವವೆಂಬುದು ಬೇರಿಲ್ಲ. ನಿನ್ನಿಂದ ನೀ ತಿಳಿದು ನೋಡಿನಲು, ಅವಕ್ಕೆ ಮುಕ್ತಾಯಕ್ಕಗಳು ಕೊಟ್ಟ ಪ್ರತ್ಯುತ್ತರ.

ಹಿಡಿದಾಚಾರವು ಬಿಡದನ್ನಕ್ಕರ, ಎನ್ನಅರಿವು ಮರೆಯದನ್ನಕ್ಕರ, ಎನ್ನ ಮನವ ಸುಡದನ್ನಕ್ಕರ, ಎನ್ನ ಬೆಡಗಿನ ಗುರುವ ತೊರೆಯದನ್ನಕ್ಕರ, ಉಸುರುವುದೆಂತಪ್ಪುದು ಹೇಳಾ. ಹೋಹ ಬಟ್ಟೆಯನರಿಯದನ್ನಕ್ಕರ ತಾನಾಗಬಾರದು ಕಾಣಾ ಎನ್ನ ಅಜಗಣ್ಣ ತಂದೆಯಂತೆ. ॥೧೯॥

ದೇಹೇಂದ್ರಿಯ ಮನಃ ಪ್ರಾಣಾದಿ ಸೂತಕಂಗಳು ಹಿಂಗದನ್ನಕ್ಕರ, ಉತ್ಪತ್ತಿ ಸ್ಥಿತಿ ಲಯಂಗಳ ಭೇದವ ತಿಳಿಯದನ್ನಕ್ಕರ, ಲಿಂಗದಲ್ಲಿ ಇದಿರಿಟ್ಟು ಮಾಡುವ ಕ್ರಿಯಾಸೂತಕ ಹಿಂಗದನ್ನಕ್ಕರ, ತಾನು ಶಿವನಾಗಬಾರದೆಂದು ಮುಕ್ತಾಯಕ್ಕಗಳು ಬಿನ್ನೈಸಲು, ಅದಕ್ಕೆ ಪ್ರಭುದೇವರು ನಿರೂಪಿಸಿದ ಪ್ರಸ್ಥಾವದ ವಚನ॥

ಇಲ್ಲದ ಶಂಕೆಯನುಂಟೆಂದು ಭಾವಿಸಿ, ಅದು ಕಣ್ಣ ಮುಂದೆ ರೂಪಾಗಿ ಕಾಡುತ್ತಿಪ್ಪುದು. ಇಲ್ಲದ ತನುವನುಂಟೆಂಬನ್ನಕ್ಕರ ಅದೇ ಮಾಯೆಯಾಗಿ ಕಾಡುತ್ತಿಪ್ಪುದು. ನಿಃ ಕ್ರಿಯಾಲಿಂಗಕ್ಕೆ ಕ್ರಿಯಾಂತಲ್ಲವೆ ಆಗದೆಂಬವರ

ನಿಯಬಾರದು. ಗುರುವಚನದಿಂದಲ್ಲದೆ ತನ್ನ ತಾನರಿಯಬಾರದು. ಹಿಂಪಣ ಜನ್ಮದಲ್ಲಿ ಲಿಂಗದ ಪೂಜೆಯಿಂದ ಜ್ಞಾನೋದಯವಾದರೆ ಗುರು ವಿಲ್ಲದ ಮುನ್ನ ಆಯಿತ್ತೆನ್ನಬಹುದೆ? ತನ್ನಲ್ಲಿ ತಾನೆ ಸನ್ನಿಹಿತನಾದೆನೆಂದರೆ ಗುರುವಿಲ್ಲದೆ ಆಗದು ಕೇಳಾ. ಎನ್ನ ಅಜಗಣ್ಣನೆಂಬ ಗುರುವಿಲ್ಲದೆ ಆ ರೂಢಿಯ ಕೂಟ ಸಮನಿಸದು ಕೇಳಾ. ॥೨೩॥

ಇಂತು ಗುರುಕರುಣವಿಲ್ಲದೆ ತಾನಾಗದೆಂದು ಮುಕ್ತಾಯಕ್ಕಗಳು ಬಿನ್ನೈಸಲು, ಅವಕ್ಕೆ ಪ್ರಭುದೇವರು ಕೊಟ್ಟ ಪ್ರತ್ಯುತ್ತರ.

ಗುರುವಿಂಗು ಶಿಷ್ಯಂಗು ಆವುದು ದೂರ, ಆವುದು ಸಾರೆಂಬುದನಾರು ಬಲ್ಲರು? ಗುರು ಶಿಷ್ಯನಾದ ತನ್ನ ವಿನೋದಕ್ಕೆ. ಶಿಷ್ಯನೆ ಗುರುವಾದ ತನ್ನ ವಿನೋದಕ್ಕೆ. ಕರ್ಮವೆಂಬ ಕಾಟಿಲ್ಯ ಎದೆಯೊಕ್ಕ ಕಾರಣ ಭಿನ್ನವಾಗಿ ಇದ್ದಿತ್ತೆಂದರೆ ಅದು ನಿಶ್ಚಯವಹುದೆ? ಆದಿ ಅನಾದಿಯಿಂದತ್ತತ್ತ ಮುನ್ನ ಪರತತ್ವವುಂ ತಿಳಿದು ನೋಡಲು, ನೀನೆ ಸ್ವಯಂಜ್ಯೋತಿ ಪ್ರಕಾಶನೆಂದರಿಪುಲು, ನಿನಗೆ ನೀನೆ ಗುರುವಲ್ಲದೆ ನಿನ್ನಿಂದಧಿಕವಪ್ಪ ಗುರು ಉಂಟೇ? ಇದು ಕಾರಣ ಗುಹೇಶ್ವರಲಿಂಗವು ತಾನೆ ಎಂಬುದನು ನಿನ್ನಿಂದರಿಯಬೇಕು ನೋಡಾ. ॥೨೪॥

ಇಂತು ಅನಾದಿಯಲ್ಲಿ ನೀನೆ ಪರಶಿವನಾಗಿಪ್ಪಲ್ಲಿ ನಿನಗಾರು ಗುರು ವಿಲ್ಲ. ಮಧ್ಯದಲ್ಲಿ ಕರ್ಮವೆಂಬ ಕನ್ನಡವ ಕಟ್ಟಿದಲ್ಲಿಯು ನಿನ್ನ ಜ್ಞಾನೋದಯದಿಂದ ನಿನ್ನ ನೀ ತಿಳಿದೆಯಲ್ಲದೆ ಅನ್ಯರ ಕೈಯಲ್ಲಿ ಆಗದು. ಇದು ಕಾರಣ ನೀನೆ ಪರತತ್ವ ತಿಳಿದು ನೋಡೆಂದು ಪ್ರಭುದೇವರು ನಿರೂಪಿಸಲು, ಅವಕ್ಕೆ ಮುಕ್ತಾಯಕ್ಕಗಳು ಕೊಟ್ಟ ಪ್ರತ್ಯುತ್ತರ.

ತನ್ನ ತಾನರಿದವಂಗೆ ಅರಿವೆ ಗುರು. ಅರಿವರತು ಮುರಹು ನಷ್ಟವಾಗಿದ್ದಲ್ಲಿ ದೃಷ್ಟ ನಷ್ಟವೆ ಗುರು. ತಾನಾದಲ್ಲಿ ಮುಟ್ಟಿ ತೋರಿದವರಿಲ್ಲವಾದೆನು? ಸಹಜವ ನೆಲೆಗೊಳಿಸದವ ನಿರ್ಣಯ, ನಿಷ್ಪತ್ತಿಯೇ ಗುರು ನೋಡಾ! ಗುರು ತಾನಾವಡೂ ಗುರುವಿಡಿದಿರಬೇಕು. ಎನ್ನ ಅಜಗಣ್ಣ ನಂತೆ. ॥೨೫॥

ಇಂತು ಅವ ತಿರದಲ್ಲಿಯು ಗುರುವಿಡಿದಲ್ಲಿಪೆ ಆಗದೆಂದರಿ ಪ್ರಭುದೇವರು ಕೊಟ್ಟ ಪ್ರತ್ಯುತ್ತರ.

ಸೆಂದುಸಂಶಯ ಮುಂದುಗೆಡಿಸುತ್ತಿಪ್ಪುದು ಕೇಳಾ. ಮನವ ಮನೆಯ ಮಾಡಿಕೊಂಡಿಪ್ಪ ಲಿಂಗದ ಅನುವನರಿದುಬಲ್ಲಿರೆ, ಗುಹೇಶ್ವರನೆಂಬ ಲಿಂಗ ಮೂಸವಿಲ್ಲ ಕೇಳಾ ಮರುಳೆ. ॥೨೨॥

ಈ ಹೀಗೆಂದು ಪ್ರಭುದೇವರು ನಿರೂಪಿಸಲು, ಅವಕ್ಕೆ ಮುಕ್ತಾಯಕ್ಕಗಳು ಕೊಟ್ಟ ಪ್ರತ್ಯುತ್ತರ.

ತನುವಿನೊಳಗೆ ತನುವಾಗಿ ಮನದೊಳಗೆ ಮನವಾಗಿ, ಪ್ರಾಣದೊಳಗೆ ಪ್ರಾಣವಾಗಿಪ್ಪುದೆಂದರೆ ಕೆಲಬರಿಗೆ ಅರಿಯಬಪ್ಪುದೆ? ಅಂತರಂಗದೊಳಗೆ ಅವೆ ಎಂದರೇನು ಹೇಳಾ! ಮನಮುಟ್ಟಿ ಕಾಣಬಾರದು. ಬಹಿರಂಗವಲ್ಲಿ ಅವೆ ಎಂದರೆ ಪೂಜಿಸುವನ್ನಕ್ಕರ ಕಾಣಬಾರದು. ಸಾಕಾರವಲ್ಲದೆ ನಿರಾಕಾರ ಲಿಂಗವು ವ್ಯಾಕುಲವುಳ್ಳನ್ನಕ್ಕರ ಸಾಧ್ಯವಾಗದು. ಎನ್ನ ಮನದೊಳಗೆ ಘನವನನುಗೊಳಿಸಿ ತೋರುವರಿಲ್ಲದ ಕಾರಣ ಎನ್ನ ಅಜಗಣ್ಣನಿಕ್ಕಿದ ಸರಿಮೊಡಕಿಂಗೆ ಜೀರಣವೆನು ಕಾಣಾ ಪ್ರಭುವೆ. ॥೨೩॥

ಈ ಹೀಗೆಂದು ಮುಕ್ತಾಯಕ್ಕಗಳು ಬಿನ್ನೈಸಲು, ಪ್ರಭುದೇವರು ಕೊಟ್ಟ ಪ್ರತ್ಯುತ್ತರ.

ತೆರಹಿಲ್ಲದ ಘನವು ಕುರುಹಿಂಗೆ ಬಾರದ ಮುನ್ನ ತೋರಿಪವರಾರು ಹೇಳಾ ಮಹಾಲಿಂಗೈಕ್ಯವನು? ಆ ರೂಢಿಯ ಕೂಟದಲ್ಲಿ ನಾನಾರನು ಸಾಕ್ಷಿಯ ಕಾಣೆ. ಬೇರು ಮಾಡಿ ನುಡಿಯಬಹುದೆ ಪ್ರಾಣಲಿಂಗವನು? ಅರಿವು ಸ್ವಯವಾಗಿ ಮುರಹು ನಷ್ಟವಾಗಿದ್ದರೆ, ಗುಹೇಶ್ವರನೆಂಬ ಲಿಂಗವು ತಾನೆ ನೋಡಾ. ॥೨೪॥

ಇಂತು ಉಪದೇಶದಿಂ ಮುನ್ನವೆ ಸಂಸಾರ ವ್ಯಾಪ್ತಿಯಂ ತೊಲಗಿಸಿ ತನಗೆ ತಾನೆ ಲಿಂಗದಲ್ಲಿ ಲಿಯ್ಯವಾಗಬೇಕೆಂಬ ಬುದ್ಧಿ ಹುಟ್ಟಿದ ಬಳಿಕ ಒಂದು ಗುರೂಪಾವಸ್ಥೆಯಂ ಮಾಡಿದ ಶಿಷ್ಯನು ತನ್ನಿಂದ ತಾನೆ ತಿಳಿದು, ತನ್ನ ತಾನೆ ಶಿವನೆಂದರಿಯಬೇಕಲ್ಲದೆ, ಭಿನ್ನನಾಗಿ ಜರಸಲಾಗದೆಂದು ಪ್ರಭುದೇವರು ನಿರೂಪಿಸಲು, ಅದಕ್ಕೆ ಮುಕ್ತಾಯಕ್ಕಗಳು ಕೊಟ್ಟ ಪ್ರತ್ಯುತ್ತರ.

ಗುರುವಚನದಿಂದಲ್ಲದೆ, ಲಿಂಗವನರಿಯಬಾರದು. ಗುರುವಚನದಿಂದಲ್ಲದೆ ಜಂಗಮವನರಿಯಬಾರದು. ಗುರುವಚನದಿಂದಲ್ಲದೆ ಪ್ರಸಾದವ

ಸಂದುಸಂಶಯ ಮುಂದುಗೆಡಿಸುತ್ತಿಪ್ಪುದು ಕೇಳಾ. ಮನವ ಮನೆಯ ಮಾಡಿಕೊಂಡಿಪ್ಪ ಲಿಂಗದ ಅನುವನರಿದುಬಲ್ಲರೆ, ಗುಹೇಶ್ವರನೆಂಬ ಲಿಂಗ ಮೂರವಿಲ್ಲ ಕೇಳಾ ಮರುಳೆ. ॥೨೦॥

ಈ ಪೀಗೆಂದು ಪ್ರಭುದೇವರು ನಿರೂಪಿಸಲು, ಅವಕ್ಕೆ ಮುಕ್ತಾಯಕ್ಕಗಳು ಕೊಟ್ಟ ಪ್ರತ್ಯುತ್ತರ.

ತನುವಿನೊಳಗೆ ತನುವಾಗಿ ಮನದೊಳಗೆ ಮನವಾಗಿ, ಪ್ರಾಣದೊಳಗೆ ಪ್ರಾಣವಾಗಿಪ್ಪುದೆಂದರೆ ಕೆಲಬರಿಗೆ ಅರಿಯಬಪ್ಪುದೆ? ಅಂತರಂಗದೊಳಗೆ ಅದೆ ಎಂದರೇನು ಹೇಳಾ! ಮನಮುಟ್ಟಿ ಕಾಣಬಾರದು. ಬಹಿರಂಗದಲ್ಲಿ ಅದೆ ಎಂದರೆ ಪೂಜಿಸುವನ್ನಕ್ಕರ ಕಾಣಬಾರದು. ಸಾಕಾರವಲ್ಲದೆ ನಿರಾಕಾರ ಲಿಂಗವು ವ್ಯಾಕುಲವುಳ್ಳನ್ನಕ್ಕರ ಸಾಧ್ಯವಾಗದು. ಎನ್ನ ಮನದೊಳಗೆ ಘನವನನುಗೊಳಿಸಿ ತೋರುವರಿಲ್ಲದ ಕಾರಣ ಎನ್ನ ಅಜಗಣ್ಣನಿಕ್ಕಿದ ಸರಿಮೊಡಕಿಂಗೆ ಬೆರಗಾದೆನು ಕಾಣಾ ಪ್ರಭುವೆ. ॥೨೧॥

ಈ ಪೀಗೆಂದು ಮುಕ್ತಾಯಕ್ಕಗಳು ಬಿನ್ನೈಸಲು, ಪ್ರಭುದೇವರು ಕೊಟ್ಟ ಪ್ರತ್ಯುತ್ತರ.

ತೆರಹಿಲ್ಲದ ಘನವು ಕುರುಹಿಂಗೆ ಬಾರದ ಮುನ್ನ ತೋರಿದವರಾರು ಹೇಳಾ ಮಹಾಲಿಂಗೈಕ್ಯವನು? ಆ ರೂಢಿಯ ಕೂಟದಲ್ಲಿ ನಾನಾರನು ಸಾಕ್ಷಿಯ ಕಾಣೆ. ಬೇರು ಮಾಡಿ ನುಡಿಯಬಹುದೆ ಪ್ರಾಣಲಿಂಗವನು? ಅರಿವು ಸ್ವಯವಾಗಿ ಮರಹು ನಷ್ಟವಾಗಿದ್ದರೆ, ಗುಹೇಶ್ವರನೆಂಬ ಲಿಂಗವು ತಾನೆ ನೋಡಾ. ॥೨೨॥

ಇಂತು ಉಪದೇಶದಿಂ ಮುನ್ನಪೆ ಸಂಸಾರ ವ್ಯಾಪ್ತಿಯಂ ತೊಲಗಿಸಿ ತನಗೆ ತಾನೆ ಲಿಂಗದಲ್ಲಿ ಲಿಯ್ಯವಾಗಬೇಕೆಂಬ ಬುದ್ಧಿ ಹುಟ್ಟಿದ ಬಳಿಕ ಒಂದು ಗುರೂಪಾಸನ್ನಿಯಂ ಮಾಡಿದ ಶಿಷ್ಯನು ತನ್ನಿಂದ ತಾನೆ ತಿಳಿದು, ತನ್ನ ತಾನೆ ಶಿವನೆಂದರಿಯಬೇಕಲ್ಲದೆ, ಭಿನ್ನನಾಗಿ ಜರಸಲಾಗದೆಂದು ಪ್ರಭುದೇವರು ನಿರೂಪಿಸಲು, ಜಡಕ್ಕೆ ಮುಕ್ತಾಯಕ್ಕಗಳು ಕೊಟ್ಟ ಪ್ರತ್ಯುತ್ತರ.

ಗುರುವಚನದಿಂದಲ್ಲದೆ, ಲಿಂಗವನರಿಯಬಾರದು. ಗುರುವಚನದಿಂದಲ್ಲದೆ ಜಂಗಮವನರಿಯಬಾರದು. ಗುರುವಚನದಿಂದಲ್ಲದೆ ಪ್ರಸಾದವ

ನರಿಯಬಾರದು. ಗುರುವಚನದಿಂದಲ್ಲದೆ ತನ್ನ ತಾನರಿಯಬಾರದು. ಹಿಂದಣ ಜನ್ಮದಲ್ಲಿ ಲಿಂಗದ ಪೂಜೆಯಿಂದ ಜ್ಞಾನೋದಯವಾದರೆ ಗುರು ವಿಲ್ಲವ ಮುನ್ನ ಆಯಿತ್ತೆನ್ನಬಹುದೆ? ತನ್ನಲ್ಲಿ ತಾನೆ ಸನ್ನಿಹಿತನಾದೆನೆಂದರೆ ಗುರುವಿಲ್ಲದೆ ಅಗದು ಕೇಳಾ. ಎನ್ನ ಅಜಗಣ್ಣನೆಂಬ ಗುರುವಿಲ್ಲದೆ ಆ ರೂಢಿಯ ಕೂಟ ಸಮನಿಸದು ಕೇಳಾ. ॥೨೩॥

ಇಂತು ಗುರುಕರುಣವಿಲ್ಲದೆ ತಾನಾಗದೆಂದು ಮುಕ್ತಾಯಕ್ಕಗಳು ಬಿನ್ನೈಸಲು, ಅವಕ್ಕೆ ಪ್ರಭುದೇವರು ಕೊಟ್ಟ ಪ್ರತ್ಯುತ್ತರ.

ಗುರುವಿಂಗು ಶಿಷ್ಯಂಗು ಅವುದು ದೂರ, ಅವುದು ಸಾರೆಂಬುದನಾರುವಲ್ಲರು? ಗುರು ಶಿಷ್ಯನಾದ ತನ್ನ ವಿನೋದಕ್ಕೆ. ಶಿಷ್ಯನೆ ಗುರುವಾದ ತನ್ನ ವಿನೋದಕ್ಕೆ. ಕರ್ಮವೆಂಬ ಕೌಟಿಲ್ಯ ಎಡೆಯೊಕ್ಕ ಕಾರಣ ಭಿನ್ನವಾಗಿ ಇದ್ದಿತ್ತೆಂದರೆ ಅದು ನಿಶ್ಚಯವಹುದೆ? ಆದಿ ಅನಾದಿಯಿಂದತ್ತತ್ತ ಮುನ್ನ ಪರತತ್ವವುಂ ತಿಳಿದು ನೋಡಲು, ನೀನೆ ಸ್ವಯಂಜ್ಯೋತಿ ಪ್ರಕಾಶನೆಂದರಿಯಲು, ನಿನಗೆ ನೀನೆ ಗುರುವಲ್ಲದೆ ನಿನ್ನಿಂದಧಿಕವಪ್ಪ ಗುರು ಉಂಟೇ? ಇದು ಕಾರಣ ಗುಹೇಶ್ವರಲಿಂಗವು ತಾನೆ ಎಂಬುದನು ನಿನ್ನಿಂದರಿಯಬೇಕು ನೋಡಾ. ॥೨೪॥

ಇಂತು ಅನಾದಿಯಲ್ಲಿ ನೀನೆ ಪರಶಿವನಾಗಿಪ್ಪಲ್ಲಿ ನಿನಗಾರು ಗುರುವಿಲ್ಲ. ಮಧ್ಯದಲ್ಲಿ ಕರ್ಮವೆಂಬ ಕನ್ನಡವ ಕಟ್ಟಿದಲ್ಲಿಯು ನಿನ್ನ ಜ್ಞಾನೋದಯದಿಂದ ನಿನ್ನ ನೀ ತಿಳಿದೆಯಲ್ಲದೆ ಅನ್ಯರ ಕೈಯಲ್ಲಿ ಆಗದು. ಇದು ಕಾರಣ ನೀನೆ ಪರತತ್ವ ತಿಳಿದು ನೋಡೆಂದು ಪ್ರಭುದೇವರು ನಿರೂಪಿಸಲು, ಅದಕ್ಕೆ ಮುಕ್ತಾಯಕ್ಕಗಳು ಕೊಟ್ಟ ಪ್ರತ್ಯುತ್ತರ.

ತನ್ನ ತಾನರಿದವಂಗೆ ಅರಿವೆ ಗುರು. ಅರಿವರತು ಮರಹು ನಷ್ಟವಾಗಿದ್ದಲ್ಲಿ ದೃಷ್ಟವೆ ನಷ್ಟವೆ ಗುರು. ತಾನಾದಲ್ಲಿ ಮುಟ್ಟಿ ತೋರಿದವರಿಲ್ಲವಾದೆನು? ಸಹಜವ ತಲೆಗೊಳಿಸದವ ನಿರ್ಣಯ, ನಿಷ್ಪತ್ತಿಯೇ ಗುರು ನೋಡಾ! ಗುರು ತಾನಾದಡೂ ಗುರುವಿಡಿದಿರಬೇಕು. ಎನ್ನ ಅಜಗಣ್ಣ ನಂತೆ. ॥೨೫॥

ಇಂತು ಆವ ತೆರದಲ್ಲಿಯು ಗುರುನಿಡಿದಲ್ಲದೆ ಆಗದೆಂದರೆ ಪ್ರಭುದೇವರು ಕೊಟ್ಟ ಪ್ರತ್ಯುತ್ತರ.

ಅರಿವೆನರಿದಿಹೆನೆಂಬುದು ಮರವೆ. ಮರಹ ಮರದಿಹೆನೆಂಬುದು ಮರವೆ. ಸಾಕಾರ ನಷ್ಟ ನಿರಾಕಾರ ದೃಷ್ಟವೆಂಬುದೇ ಭಾವದ ಬಳಿಕ. ಗುರು ವೆಂಬುದು ಶಿಷ್ಯನೆಂದಲ್ಲಿಯೇ ಹೋಯಿತ್ತು. ಶಿಷ್ಯನೆಂಬುದು ಗುರುವೆಂದ ಲ್ಲಿಯೇ ಹೋಯಿತ್ತು. ನಿರ್ಣಯದಲ್ಲಿ ನಿಸ್ಪೃಹ್ಯನಾಗಿಹೆನೆಂದರೆ ಎಚ್ಚರಿ ಕೆಯಲ್ಲಿ ತಪ್ಪಿತ್ತು. ಸಹಜ ಸಂಬಂಧಕ್ಕೆ ಗುರುವಲ್ಲದೆ ಸಹಜಕ್ಕೆ ಗುರು ಉಂಟೆ? ಗುಹೇಶ್ವರಲಿಂಗದಲ್ಲಿ ಪರವೆಂದಲ್ಲಿ ಗುರು ಉಂಟಲ್ಲದೆ ಸ್ವಯವೆಂ ದಲ್ಲಿಯೇ ನುಡಿಯಲಿಲ್ಲ. ॥೨೬॥

ಇಂತು ತಾನೆ ಲಿಂಗವಾದಿಹೆನೆಂಬನ್ನಕ್ಕರ ಗುರು ಉಂಟಲ್ಲದೆ ತಾನು ತಾನೆಯಾವ ಬಳಿಕ ಗುರು ತಾನೇಕೆಂದು ಪ್ರಭುದೇವರು ನಿರೂ ಪಿಸಲು, ಅದಕ್ಕೆ ಮುಕ್ತಾಯಕ್ಕಗಳು ಕೊಟ್ಟ ಪ್ರತ್ಯುತ್ತರ.

ಅಪ್ಪೈತವ ನೆಲೆಸೊಳಿಸಿ ಎರಡಳಿದೆನೆಂಬುದು ಶಿಸು ಕಂಡ ಕನಸಿ ನಂತಿರಬೇಕಲ್ಲದೆ, ನುಡಿದು ಹೇಳುವನ್ನಕ್ಕರ ಭಿನ್ನವಲ್ಲವೇ ಹೇಳಾ? ಅರಿ ವರತು ಮರಹು ನಷ್ಟವಾಗಿ, ಗುರುವ ತೋರಿದೆನೆಂಬವರು ಇದಿರಿಂಗೆ ಕರುಳ ತಲೆಯನರಹುವ ಪರಿ ಎಂತು ಹೇಳಾ? ಮನದ ಕೊನೆಯ ಮೊನೆಯ ಮೇಲಣ ಅರುಹಿನ ಕಣ್ಣ ಮುಂದೆ ಸ್ವಯಂ ಪ್ರಕಾಶ ತೋರು ತ್ತಿರ್ದಡೆ ತಾನಾಗಬಲ್ಲನೆ? ನೆರೆಯರಿತು, ಮರೆಯ ಬಲ್ಲರೆ ಎನ್ನ ಅಜಗ ಣ್ಣನಂತೆ ಶಬ್ದ ಮುಗ್ಧವಾಗಿರಬೇಕಲ್ಲದೆ, ಶಬ್ದ ಸಂದಣಿಯ ಮಾತು ಸಮಯವಲ್ಲ ನೋಡಾ ಪ್ರಭುವೆ. ॥೨೭॥

ನಿನ್ನ ನೀನರಿತು ಪರಬ್ರಹ್ಮವಾದೆನೆಂದರೆ ನಿಃಶಬ್ದ ವೇದ್ಯವಾಗಿರಬೇ ಕಲ್ಲದೆ, ಶಬ್ದ ಸಂದಣಿ ಹಿಂಗದೆಂದರೆ ಪ್ರಭುದೇವರು ಕೊಟ್ಟ ಪ್ರತ್ಯುತ್ತರ.

ಪ್ರಾತೆಂಬುದು ಜ್ಯೋತಿರ್ಲಿಂಗ. ಸ್ವಯವೆಂಬುದು ಪರತತ್ವ. ತಾಳೋಪ್ಪ ಸಂಪುಟವೆಂಬುದು ನಾಪಬಿಂದುಕಳಾತೀತ. ಗುಹೇಶ್ವರನ ಶರಣರು ನುಡಿದು ಸೂತಕಿಗಳಲ್ಲ ಕೇಳಾ ಮರುಳೆ. ॥೨೮॥

ಶಿವಶರಣರು ಶಬ್ದ ಸೂತಕಿಗಳಲ್ಲವೆಂದು ಪ್ರಭುದೇವರು ನಿರೂಪಿ ಸಲು, ಅದಕ್ಕೆ ಮುಕ್ತಾಯಕ್ಕಗಳು ಕೊಟ್ಟ ಪ್ರತ್ಯುತ್ತರ.

ನಡೆದು ನಡೆದು ನಡೆಯ ಕಂಡವರು ನುಡಿದು ನುಡಿದು ಹೇಳುತ್ತಿ ಹರೆ? ನುಡಿದು ನುಡಿದು ಹೇಳುವನ್ನಕ್ಕರ ನಡೆದುದೆಲ್ಲ ಹುಸಿ ಎಂಬೆನು.

ಮಾತಿನ ಮಥನದಿಂದರಿವ ಕಾರಣ ಮಥನದಿಂದಾದನಲ್ಲದೆ, ಅನುಪಮ ಸ್ವರಭೇದವಾದ ಪರಿ ಎಂತು ಹೇಳಾ! ಇದಿರ ಗೆಲಬೇಕೆಂದು, ನುಡಿ ದುಕೊಂಡರೇನು? ಮನಕ್ಕೆ ಮನವೇ ಸಾಕ್ಷಿಯಾಗಿ ನಿಷ್ಪತ್ತಿಯಲ್ಲ ನೋಡಾ! ಎನ್ನ ಅಜಗಣ್ಣ ತಂದೆ ಶಬ್ದಕ್ಕೆ ಹೇಸಿ ಮುಗುದನಾದನು. ॥೨೯॥

ಇಂತು ಇದಿರ ಗೆಲಬೇಕೆಂದು ನುಡಿದ ನುಡಿಗಳಿವಲ್ಲದೆ ಅರಿವನ ರಿದು ಮರೆದ ನುಡಿಗಳಿವಲ್ಲ. ಸಹಜ ಜ್ಞಾನ ನಿನಗಿಲ್ಲವೆಂದು ಬಿನ್ನೈ ಸಲು, ಪ್ರಭುದೇವರು ಕೊಟ್ಟ ಪ್ರತ್ಯುತ್ತರ.

ತನ್ನ ತಾನರಿದರೆ ನುಡಿ ಎಲ್ಲ ಪರತತ್ವ ನೋಡಾ! ತನ್ನ ತಾ ನುರಿದರೆ ನುಡಿ ಎಲ್ಲ ಮಾಯೆ ನೋಡಾ! ಅರಿದು ಮರೆದ ಶಿವಯೋಗಿಯ ಶಬ್ದವೆಲ್ಲವು ಉಪದೇಶವಲ್ಲದೆ ಭಿನ್ನ ಉಂಟೆ? ನಿನ್ನ ಮನದ ಕಳವ ಳವ ತಿಳುಹಲೆಂದು ಮಾತನಾಡಿಸಿ ನೋಡಿದಡೆ ಎನ್ನ ಮನದೊಳಗೆ ಕಂದುಕಲಿ ಎಂಬುದಿಲ್ಲ ನೋಡಾ. ನಮ್ಮ ಗುಹೇಶ್ವರ ಲಿಂಗಕ್ಕೆ ನೀನು ಕರುಣದ ಶಿಸುವಾದಕಾರಣ ಬಾಯ್ದೆರೆದೆನಲ್ಲದೆ ಭಿನ್ನ ಉಂಟೆ ಹೇಳಾ ಮರುಳೆ. ॥೩೦॥

ಈ ಹೀಗೆಂದು ಪ್ರಭುದೇವರು ನಿರೂಪಿಸಲು, ಅದಕ್ಕೆ ಮುಕ್ತಾ ಯಕ್ಕಗಳು ಕೊಟ್ಟ ಪ್ರತ್ಯುತ್ತರ.

ನುಡಿಯ ಹಂಗಿನ್ನು ನಿಮಗೆ ಹಿಂಗದು. ನಡೆಯನೆಂತು ನೀವು ಪರರಿಗೆ ಹೇಳುವಿರಿ? ಒಡಲು ಹಂಗಿನ ಸುಳುವು ಬಿಡದು ಎನ್ನೊಡನೆ ಮತ್ತ್ಯಾತರನು ಭಾವವಣ್ಣ ತಾನಾದಲ್ಲದೆ ಇದಿರಿಂಗೆ ಹೇಳಬಹುದೆ? ಅರಿವ ತೋರಬಲ್ಲರೆ ತನ್ನನರುಹದೆ ಅರುಹುವನು ಕಾಣಾ ಎನ್ನ ಅಜ ಗಣ್ಣ ತಂದೆ ॥೩೧॥

ನಿನಗಿನ್ನು ಒಡಲ ಹಂಗು ಬಿಡದು. ಮಾತಿನ ಮಥನ ಹಿಂಗದು. ಎನಗೇತರರಿವ ಹೇಳಿಹೆ ಹೋಗೆಂದು ಮುಕ್ತಾಯಕ್ಕಗಳು ಬಿನ್ನೈಸಲು, ಅದಕ್ಕೆ ಪ್ರಭುದೇವರು ಕೊಟ್ಟ ಪ್ರತ್ಯುತ್ತರ.

ಅಂಗದ ಕಳೆಯ ಲಿಂಗದಲ್ಲಿ ಅರಿತ ಬಳಿಕ ಅಂಗವೆಂಬ ಶಂಕೆ ಇಲ್ಲ ನೋಡಾ ಶರಣಂಗೆ. ಪ್ರಾಣದ ಕಳೆ ಅರುಹಿನಲ್ಲಿ ಅರಿತಬಳಿಕ ಶಬ್ದ ಸಂದಣಿಗೆ ಹಂಗಿಲ್ಲ ನೋಡಾ! ಶರಣಂಗೆ ನಡೆದರೆ ನಿರ್ಗಮನ, ನುಡಿ ದರೆ ನಿಶ್ಶಬ್ದ. ಗುಹೇಶ್ವರನ ಶರಣಂಗೆ ಕುರುಹಿಲ್ಲ ಕೇಳಾ ಎಲೆ ಅಪ್ಪ ॥೩೨॥

ಅಂಗ ಅನಂಗವೆಂಬೆರಡು ಅಳಿದು, ನಿಜದಲ್ಲಿ ನಿಂದ ಲಿಂಗೈಕ್ಯನ ಅಂಗದಲುಳ್ಳ ಕ್ರಿಗಳೆಲ್ಲವು ಲಿಂಗಕ್ರಿಗಳು ನೋಡಾ! ಮನೋಲಯವಾ ನಿಪ್ಪ ನಿಜಲಿಂಗೈಕ್ಯನ ಅನುಭಾವವೆಲ್ಲವು ಜ್ಞಾನಶಬ್ದನೋಡಾ! ತನ್ನಲ್ಲಿ ತಾನು ತದ್ಗತವಾಗಿಪ್ಪ ಶಿವಯೋಗಿಗೆ ಭಿನ್ನವಿಲ್ಲ ನೋಡಾ ಗುಹೇಶ್ವರ ಸಾಕ್ಷಿಯಾಗಿ. ॥೩೬॥

ಈ ಹೀಗೆಂದು ಪ್ರಭುದೇವರು ತಮ್ಮ ನಿಜಪದದ ನಿಲವ ನಿರೂಪಿಸಲು, ಅದಕ್ಕೆ ಮುಕ್ತಾಯಕ್ಕಗಳು ಕೊಟ್ಟ ಪ್ರತ್ಯುತ್ತರ.

ಸಿಡಿಲು ಹೊಯ್ದ ಬಾವಿಗೆ ಸೋಪಾನವೇಕೋ? ನೆರೆ ಅರಿದ ಬಳಿಕ ಮತ್ತೆ ಮತಿ ಹುಟ್ಟಲುಂಟೆ? ಸೊಡರುಳ್ಳ ಮನೆಗೆ ಮತ್ತೆ ತಮಂಧವೆಂಬುದೇನೊ? ತನ್ನಲ್ಲಿ ತಾನು ತದ್ಗತವಾದ ಬಳಿಕ ಜೊಮ್ಮ ಪರಜೊಮ್ಮವಾವೆನೆಂಬುದಿಲ್ಲ ನೋಡಾ ಎನ್ನ ಅಜಗಣ್ಣ ತಂದೆಗೆ. ॥೩೭॥

ಈ ಹೀಗೆಂದು ಮುಕ್ತಾಯಕ್ಕಗಳು ಬಿನ್ನೈಸಲು, ಅದಕ್ಕೆ ಪ್ರಭುದೇವರು ಕೊಟ್ಟ ಪ್ರತ್ಯುತ್ತರ.

ನುಡಿಯಿಂದ ನಡೆಗೆಟ್ಟಿತ್ತು. ನಡೆಯಿಂದ ನುಡಿಗೆಟ್ಟಿತ್ತು. ಭಾವ ಮನ ಸುಟ್ಟು ಅದು ತಾನೆ ನಾಚಿ ಮಾದುದು ನೋಡಾ! ಗುಹೇಶ್ವರನೆಂಬ ಅರಿವು ಸಿನೆ ಬಂಜೆಯಾದುದಲ್ಲಾ! ॥೩೮॥

ಈ ಹೀಗೆಂದು ಪ್ರಭುದೇವರು ತಮ್ಮ ನಿಜಪದದ ನಿಲವ ನಿರೂಪಿಸಲು, ಇದಕ್ಕೆ ಮುಕ್ತಾಯಕ್ಕಗಳು ಪರಾಮರಿಸಿದ ಪ್ರತ್ಯುತ್ತರ.

ಅಹುದಹುದು. ಶಿವಶರಣರ ಮಹಿಮೆಯು ಆರಿಗೆಯು ಕಾಣಬಾರದು. ಕಬ್ಬುನ ಉಂಡ ನೀರಿನಂತೆ, ಕೆಂಬಿಸಿಲುಂಡ ಅರಿಸಿನದಂತೆ, ಉರಿಯೊಗಡಗಿರ್ದ ಕರ್ಪ್ಪುರದಂತೆ, ಬಯಲನಪ್ಪಿದ ವಾಯುವಿನಂತೆ, ಇಪ್ಪ ನಿಲವ ನುಡಿದು ಹೇಳಿಹೆನೆಂಬ ಮಾತಿಂಗೆ ಅಳವಡುವುದೆ? ಅರಿವಡೆ ಮತಿಯಿಲ್ಲ, ನೆನೆವಡೆ ಮನವಿಲ್ಲ. ಅಜಗಣ್ಣ ತಂದೆಯ ಸೊಳಕೊಂಡಿಪ್ಪ ನಿಮ್ಮ ಮಹಿಮೆಗೆ ನಮೋ ನಮೋ ಎನುತಿರ್ದೆನು. ॥೩೯॥

ಈ ಹೀಗೆಂದು ಮುಕ್ತಾಯಕ್ಕಗಳು ಬಿನ್ನೈಸಲು, ಅದಕ್ಕೆ ಪ್ರಭುದೇವರು ನಿರ್ವಯಲ ಸಮಾಧಿಯ ಭೇದಮಂ ನಿರೂಪಿಸುತ್ತಿರ್ದ ಪ್ರಸ್ತಾವದ ವಚನ.

ಈ ಹೀಗೆಂದು ಪ್ರಭುದೇವರು ನಿರೂಪಿಸಲು, ಅದಕ್ಕೆ ಮುಕ್ತಾಯಕ್ಕಗಳು ಕೊಟ್ಟ ಪ್ರತ್ಯುತ್ತರ.

ಕೈಯ್ಯವು ಕುರುಹು. ಬಾಯದು ಜೊಟ್ಟಿ. ಉಲಿಯದಿರೊ ಉಲಿಯದಿರೊ. ಭಾವ ವಾಕಲ್ಲ ಕೊಡನಲ್ಲಿ ಮುತ್ತು ಮಾಣಿಕ್ಯವ ತುಂಬಿ ಎತ್ತ ಪರಿಲ್ಲದೆ ಸಖಿಯರನರಸುತ್ತಿಪ್ಪೆ. ಮನದ ತನುವಿನಲ್ಲಿ ಆ ತನುವಿನ ಮನದಲ್ಲಿ ತನಗೆ ತಾನೆತ್ತಿಕೊಂಡರೆ ಮನ ಮೀರಿವಪ್ಪಿ ಕರಗಿ ಉಕ್ಕಿತ್ತು ನವ್ಯ ಅಜಗಣ್ಣನ ಜೋಗ. ॥೩೫॥

ಇಂತು ಜಲಬಿಂದು ಸ್ವರೂಪವಪ್ಪ ನಿನ್ನ ತನುವೆಂಬ ಘಟದಲ್ಲಿ ಜ್ಞಾನವೆಂಬ ರತ್ನವ ತುಂಬಿ ನಿನಗೆ ನೀನೆ ಧರಿಸಲರಿಯದೆ, ಇನ್ನ ಸಖಿಯರನರಸುತ್ತಿಪ್ಪ ನಿನ್ನ ಅರಿವೇತರವೆಂದು ಮುಕ್ತಾಯಕ್ಕಗಳು ಬಿನ್ನೈಸಲು, ಅದಕ್ಕೆ ಪ್ರಭುದೇವರು ಕೊಟ್ಟ ಪ್ರತ್ಯುತ್ತರ.

ಅರಹುಗೆಟ್ಟ ಮರಹಳಿದು ಭಾವ ಭ್ರಾಂತು ನಿಭ್ರಾಂತವಾದವರ ಕೈಯಲ್ಲಿ ಕುರುಹನರಸುವರೆ ಹೇಳಾ? ತಾನಳಿದು ತಾನುಳಿದು ತಾನು ತಾನಾದ ನಿಜಶರಣಂಗೆ ಅಂತರಂಗವಲ್ಲಿ ಒಂದರಿವುಂಟೆ? ಗುಹೇಶ್ವರನ ಕರಣನ ನಿಲವು ಕಾಯಗೊಂಡವರ ಕಣ್ಣಿಂಗೆ ಸಂದೇಹವಾಗಿಪ್ಪುದು. ನಿಸ್ಸಂದೇಹಿಗಳಿಗೆ ನಿಜವಾಗಿಪ್ಪುದು ನೋಡಾ ಮರುಳೆ. ॥೩೪॥

ಈ ಹೀಗೆಂದು ಪ್ರಭುದೇವರು ನಿರೂಪಿಸಲು, ಈ ಉತ್ತರಕ್ಕೆ ಮುಕ್ತಾಯಕ್ಕಗಳು ಕೊಟ್ಟ ಪ್ರತ್ಯುತ್ತರ.

ನುಡಿಯೆಸೆಂಬಲ್ಲಿಯೆ ನುಡಿಯುದೆ, ನಡೆಯಸೆಂಬಲ್ಲಿಯೇ ನಡೆಯುದೆ. ಭಾವಿಸೆಸೆಂಬಲ್ಲಿಯೆ ಭಾವವದೆ, ಅರಿದು ಮರೆದನೆಂದಲ್ಲಿಯೆ ಅರಿವು ಮರವೆಯದೆ, ಅಂಗದಲ್ಲಿ ಲಿಂಗ ಲೀಯ್ಯವಾಯಿತ್ತೆಂದರೆ, ಅಲ್ಲಿಯೇ ಲಿಂಗವದೆ, ಅನಂಗ ಸಂಗಿಯಾದೆನೆಂಬಲ್ಲಿಯೆ ವಿಷಯಸೂತಕವದೆ, ತಾನೆ ತಾನಾದೆನೆಂಬಲ್ಲಿಯೆ ನೀನೆಂಬುವದೆ. ಅರಿದು ಮರೆದ ಪರಿ ಎಂತು ಹೇಳಾ! ಅರಿವು ನಷ್ಟವಾಗಿ, ಮರಹು ಲಯವಾಗಿಪ್ಪರೆ ಎನ್ನ ಅಜಗಣ್ಣ ತಂದೆಯಲ್ಲದೆ, ಮತ್ತಾರನು ಕಾಣೆ. ॥೩೫॥

ಈ ಹೀಗೆಂದು ಮುಕ್ತಾಯಕ್ಕಗಳು ಬಿನ್ನೈಸಲು, ಅದಕ್ಕೆ ಪ್ರಭುದೇವರು ಕೊಟ್ಟ ಪ್ರತ್ಯುತ್ತರ.

ಮುಕ್ತಿಗೆ ಮುಖವಾಗಿ, ಯುಕ್ತಿಗೆ ಹೊರಗಾಗಿ.ಅರಿವಿಂಗೆ ಅರಿವಾಗಿಪ್ಪ ಭೇದ ಕಾಣ ಬಂದಿತ್ತು ನೋಡಾ! ಅರಿವರತು ಮರಹುವಾಗಿಪ್ಪ ಭೇದ ಕಾಣ ಬಂದಿತ್ತು ನೋಡಾ! ಅರಿವರತು ಮರಹು ನಷ್ಟವಾಗಿಪ್ಪುದು. ನಿಸ್ಸಲ್ಲಿ ಸನ್ನಿಹಿತವಾಗಿಪ್ಪುದು. ಗುಹೇಶ್ವರನಶರಣ ಅಜಗಣ್ಣನ ನಿಲವು ಬಯಲ ಬೆಸಸಿದ ಮರೀಚಿಯಂತಾಯಿತ್ತು. ಬೆರಸಿ ನೋಡಾ ಜೀವಚ್ಚಲದೆ.॥೪೦॥

ಇಂತು ಪ್ರಭುದೇವರು ಮಹಾಲಿಂಗೈಕ್ಯವ ಭೇದಮಂ ನಿರೂಪಿಸಲು, ಮುಕ್ತಾಯಕ್ಕಗಳು ಆ ಉಪದೇಶಮಂ ಮನೋಲಯ ಸ್ಥಾನದೊಳು ಧರಿಸಿ, ನಿತ್ಯ ನಿರವಯಲ ಸಮಾಧಿಯೊಳು ನಿಜವನೈದಿದ ಪ್ರಸ್ತಾವದ ವಚನ.

ಘನಮಹಿಮ ಶರಣರ ಸಂಗದಿಂದೆ ಘನಕ್ಕೆ ಘನವೇಷ್ಯನಾದ ಬಳಿಕ ಅರಿಯಲಿಲ್ಲ ಮರೆಯಲಿಲ್ಲ ಕೂಡಲಿಲ್ಲ ಆಗಲಲಿಲ್ಲ. ಮನ ಮೇರೆದಪ್ಪಿ ನಿರವಯಲಾವ ಸುಖವು ಶೂನ್ಯ ನಿಃಶೂನ್ಯವೆಂದು ನುಡಿಯಲುಂಟೆ? ರಬ್ಬ ಮುಗ್ಧವಾಗಿ ಎನ್ನ ಅಜಗಣ್ಣ ತಂದೆಯ ಬೆರಸಿದ ಬಳಿಕ ಉರಿ ಉಂಡ ಕರ್ಪುರದಂತಾದೆನಯ್ಯಾ॥೪೧॥

ಇತಿ ಶ್ರೀಮತ್ಸಕಲಗಣ ಪುರಾತನ ಪ್ರಭುದೇವರು ಮಹಾನುಭಾವ ಸಮ್ಮೋಷ್ಠಿಯಂ ಮಾಡಿದ ಶೂನ್ಯ ಸಂಪಾದನೆಯೊಳ್ ಮುಕ್ತಾಯಕ್ಕಗಳ ಸಂಪಾದನೆಗಂ ದ್ವಿತೀಯೋಪದೇಶ ಸಮಾಪ್ತ.

ಸಿದ್ಧರಾಮಯ್ಯ ದೇವರ ಸಂಪಾದನೆ.

(ತೃತೀಯೋಪದೇಶ.)

॥ಕಂದ॥ ಗುಡಿ ಗೋಪುರ ಕೆರೆಯಾರವೆ ಗಡಣಗಳಂ ಬಿಡಿಸಿ ಯಲ್ಲಮ ಪ್ರಭುರಾಯನು॥ ವೃಢ ಸಿದ್ಧರಾಮಗೊಲಿಂ ಸಡಗರದಿ ನಿಜವನಿತ್ತುದೆಂತೆನೆ ಪೇಳ್ದೆಂ॥೧॥

ಅದೆಂತೆಂದೊಡಾ ಪ್ರಭುದೇವರು ಮುಕ್ತಾಯಕ್ಕಗಳ ಪ್ರಲಾಪಮಂ ನಿಲಿಸಿ, ಮಹಾನುಭಾವಮಂ ಬೋಧಿಸಿ, ಅಜಗಣ್ಣ ದೇವರ ನಿಲವನು ಅಕೆಯ ಸರ್ವಾಂಗದೊಳು ಪ್ರತಿಷ್ಠಿಸಿ, ಕೋರಿ, ನಿರವಯಲ ಸಮಾಧಿಯೊಳು ನಿಲಿಸಿ, ಅಲ್ಲಿಂ ಸೊನ್ನಲಿಗೆಯ ಪುರಕ್ಕೆ ಅಭಿಮುಖವಾಗಿ ಬರುತ್ತಿರಲತ್ತ ಕೈಲಾಸದಲ್ಲಿ ಪರಮೇಶ್ವರನ ಶುದ್ಧ ಸಾತ್ವಿಕವೇ ಜಗಹಿತಾರ್ಥವಾಗಿ ಬರುತ್ತ, ಮರ್ತ್ಯಕ್ಕೆ ಅವತರಿಸಿ, ಸಿದ್ಧರಾಮೇಶ್ವರನೆಂಬಭಿಧಾನದಿಂದೆ ಕೆರೆ ಅರವಟಿಗೆ ಗುಡಿ ಗೋಪುರಂಗಳಂ ರಚಿಸುತ್ತಿರಲು, ಅಲ್ಲಿಗೆ ಪ್ರಭುದೇವರು ಬಂದು ಆ ಪುರದ ಜನಪದದ ನಿರವಯಂ ಕಂಡು, ವಿಡಂಬಿಸುವ ಪ್ರಸ್ತಾವದ ವಚನ॥

ಧರೆಯ ಮೇಲೊಂದು ಪಿರಿಪಪ್ಪ ಸಂತೆಯ ನೆರವಿಗೆ ಬಂದವರ ನೇನೆಂಬೆನು? ಪರಿಪರಿಯ ಭಂಡದ ವ್ಯವಹಾರದೊಳಗೆ ಕೂಡಲಿಲ್ಲ ಕೊಳಲಿಲ್ಲ. ವೃಥಾ ವಿಲಾಸವಿದೇನೋ? ಅರಿ ಮರುಳೆಂಬ ಶಿವನು ನೆರೆ ಮರುಳೆಂಬ ಜಗವ ಹುಟ್ಟಿಸಿದ ಪರಿಯ ಕಂಡು ಬೆರಗಾದೆ ಗುಹೇಶ್ವರಾ.॥೧॥ ಮತ್ತಂ, ಸಾಗರದೊಳಗಿಪ್ಪ ಪ್ರಾಣಿಗಳು ಮತ್ತೊಂದೆಡೆಯಲ್ಲಿ ಇರಬಲ್ಲವೆ? ಭವಸಾಗರದೊಳಗಿಪ್ಪ ಜೀವಿಗಳಿಗೆ ಅದೇ ಗತಿಯಲ್ಲದೆ, ಬೇರೆ ಮತ್ತೊಂದೆಡೆಯುಂಟೆ? ಗುಹೇಶ್ವರನ ಲೀಲೆ ಜಗನ್ಮಯವಾದಡೆ ನಾನು ಬೆರಗಾದೆನು. ॥೨॥

ಇಂತು ಪುರ ಜನಂಗಳಂ ನೋಡಿ ವಿಡಂಬಿಸುತ್ತ ಬರಲು, ಮುಂದೆ ಲಿಪ್ತದ ಮೇಲೆ ತೊಂಬತ್ತಾರು ಸಾವಿರ ಶಿವಾಲಯಂಗಳಂ ಮಾಡುತಿಪ್ಪುದಂ ಕಂಡು, ವಿಡಂಬಿಸುವ ಪ್ರಸ್ತಾವದ ವಚನ॥

ಕಲ್ಲ ಪೇಸರ ಮಾಡಿ, ಕಲ್ಲ ಮನೆಯ ಮಾಡಿ. ಆ ಕಲ್ಲು ಕಪ್ಪ ಮೇಲೆ ಕೆಡೆದರೆ, ಪೇವರೆತ್ತ ಹೋಪರೋ? ಲಿಂಗ ಪ್ರತಿಷ್ಠೆಯ ಮಾಡುವ ನರಿಗೆ ನಾಯಕ ನರಕ ತಪ್ಪದು ಗುಹೇಶ್ವರಾ. ॥೩॥ ಮತ್ತಂ, ದೇಹವೆ ಪೇಗುಲವಾಗಿರಲು, ಜೇರೆ ಮತ್ತೆ ದೇಗುಲವೇಕಯ್ಯ? ಪ್ರಾಣವೆ ಲಿಂಗವಾಗಿರಲು, ಜೇರೆ ಮತ್ತೆ ಲಿಂಗವೇಕಯ್ಯ? ಹೇಳಲಿಲ್ಲ ಕೇಳಲಿಲ್ಲ. ಗುಹೇಶ್ವರ ನೀನು ಕಲ್ಲಾದರೆ ನಾನೇನಪ್ಪೆನಯ್ಯ? ॥೪॥

ಇಂತು ಶಿವಾಲಯ ಪ್ರತಿಷ್ಠೆಯಂ ನೋಡಿ ಹಾಸ್ಯನುಂ ಮಾಡುತ್ತ ಬರಲು ಮುಂದೆ ಕೆರೆಯ ಕಟ್ಟಿಸುವವರ ಕಂಡು ವಿಡಂಬಿಸುವ ಪ್ರಸ್ಥಾವದ ವಚನ॥

ಅನ್ನವನಿಕ್ಕಿ ನನ್ನಿಯ ನುಡಿದು, ಅರವಟಿಗೆಯ ನಿಕ್ಕಿ ಕೆರೆಯ ಕಟ್ಟಿಸಿದರೆ, ಮರಣದಿಂದ ಮೇಲೆ ಸ್ವರ್ಗ ಉಂಟಲ್ಲದೆ, ಶಿವನ ನಿಜವು ಸಾಧ್ಯವಾಗದು. ಗುಹೇಶ್ವರನ ಅರಿವ ಶರಣಂಗೆ ಆವ ಫಲವು ಇಲ್ಲ. ॥೫॥

ಸಿದ್ಧರಾಮಯ್ಯ ದೇವರು ಕೆರೆಯ ಕಟ್ಟಿಸುವದನು ವಿಡಂಬಿಸಿ ನಾನೊಂದು ಕೆರೆಯ ಕಟ್ಟಿಸಿದೆನೆಂದು ಪರವಾರ್ಥ ಸೂಚಕವಾಗಿ ನಿರೂಪಿಸಿದ ಪ್ರಸ್ಥಾವದ ವಚನ॥

ತನುವೆಂಬ ಏರಿಗೆ ಮನವೆಂಬ ಕಟ್ಟೆ, ಆಚಾರವೆಂಬ ಸೋಪಾನ, ಪರಮಾನಂದವೆಂಬ ಜಲವ ತುಂಬಿ, ಕೆರೆಯ ಕಟ್ಟಿಬಲ್ಲವರನಾರನು ಕಾಣೆ. ನಾನು ಕಟ್ಟಿದ ಕೆರೆ ಸ್ಥಿರವಾಯಿತ್ತು ಗುಹೇಶ್ವರ ನಿಮ್ಮಾಣೆ. ॥೬॥ ಮತ್ತಂ, ವಿಡಂಬನ ಕೆರೆಯ ಕಟ್ಟಿಸುವ ಒಡ್ಡನ ಪ್ರತಾಪವನೇನೆಂಬೆನಯ್ಯ? ನೆಲವನಗಿದು ಜಲವ ತೆಗೆದೆನೆಂಬ ಬಳಲಿಕೆಯ ನೋಡಾ! ಒಂದ ಕಲ್ಲ ಕಡಿದು ಮತ್ತೊಂದು ಕಲ್ಲಿಗೆ ಭೋಗವ ಕೊಟ್ಟೆಹೆನೆಂಬ ಅಜ್ಞಾನವಿದೇನೋ, ಗುಹೇಶ್ವರಾ? ಈ ಇರವಿನ ಪರಿಗೆ ಬೆರಗಾದೆನು. ॥೭॥

ಇಂತು ಕೆರೆಯ ಕಟ್ಟಿಸುವವನು ವಿಡಂಬಿಸುತ್ತಿರಲು, ಆ ಕೆರೆಯ ಕಟ್ಟುವ ಒಡ್ಡರುಗಳೊಡನೆ ಒಡ್ಡ ರಾಮಯ್ಯನಿದ್ದಹನೆ ಎಂದು ಬೆಸಗೊಂಬ ಪ್ರಸ್ಥಾವದ ವಚನ॥

ಒಳಗೆ ತೊಳೆದು ಜಲವ ತುಂಬಲರಿಯದ ಅರಿ ಮರುಳನೇನಾದಪೆ ಳೆ. ಜಲವ ಸಂಗವ ತೊಳೆಯಲೀಯದೆ, ಜಲವ ಬಯಸುವನೆಂತಿ

Vijay College
LIBRARY,
VIJAY COLLEGE,
BUARUR.

ರ್ವಹ ಹೇಳಿರೆ? ನೆಲನ ಶೋಧಿಸಿ, ನೆಲೆಯನರಿಯದೆ ಕೆರೆಯ ಕಟ್ಟಿಸುವ ಒಡ್ಡರಾಮಯ್ಯನ ಇರವೆಂತು ಹೇಳಿರೆ? ನಮ್ಮ ಗುಹೇಶ್ವರನ ನಿಲವ ನರಿಯದ ಸಿದ್ಧರಾಮನೆಂತಿರ್ದಹ ಹೇಳಿರೆ? ॥೮॥

ಇಂತು ಒಡ್ಡರಾಮಯ್ಯನೇನಾಗಿರ್ದಹನೆಂದು ಪ್ರಭುದೇವರು ಕೆರೆಯ ಕಟ್ಟಿಸುವಂತಹ ಗುಡ್ಡರುಗಳ ಬೆಸಗೊಳಲು, ಅವರೆಲ್ಲರು ಗುರುನಿಂದೆಯ ಕೇಳಿ ಸುನ್ಮನಿರಬಾರದೆಂದು ಕಲ್ಲು ಗುಂಡು ಬಡಿಗೆಗಳಿಂದಿಟ್ಟು ನೋಯಿಸಲು ಆ ಪ್ರಭುದೇವರ ತಾಗಿದಂತಹ ಗಾಯಗಳೆಲ್ಲವು ಮರಳಿ ಗುಡ್ಡರುಗಳನೆ ತಾಗಲು, ಆ ಪ್ರಸ್ಥಾವಕ್ಕೆ ಪ್ರಭುದೇವರು ಪೇಳಿದ ವಚನ॥

ಗುರುವೆಂದರಿಯರು, ಹಿರಿಯರೆಂದರಿಯರು, ದೇವರೆಂದರಿಯರು, ಭಕ್ತರೆಂದರಿಯರು, ಲಿಂಗವೆಂದರಿಯರು, ಜಂಗಮವೆಂದರಿಯರು, ಬಂದವರನರಿಯರು, ನಿಂದವರ ನಿಲವನರಿಯರು. ಶಿವಶರಣರ ನೋಯಿಸುವ ಪಾತಕರನೇನೆಂಬೆ? ಗುಹೇಶ್ವರ ನಿಮ್ಮ ಮನ ನೊಂದ ನೋವು ಬರಿದೆ ಹೋಗದು. ॥೯॥ ಮತ್ತಂ, ಸಹಜವ ನುಡಿದರೆ ಸೇರುವರಿಲ್ಲ ಕಾಣಿರಣ್ಣ. ಅಸಹಜಕ್ಕಲ್ಲದೆ ಲೋಕ ಭಜಿಸದು. ಕೆರೆಯ ಕಟ್ಟಿಸುವವನ ಕಂಡು, ಒಡ್ಡ ರಾಮಯ್ಯನೆಂದರೆ ಮುಳಿಸಿಂದ ಲಿಂಗ ತನುವ ನೋಯಿಸುವರೆ? ನಮ್ಮ ಗುಹೇಶ್ವರ ಲಿಂಗವು ಜಗದೊಳಗೆ ಪರಿಪೂರ್ಣವಾದ ಕಾರಣ ಶರಣನ ನೋವು ಮರಳಿ ಪಾತಕರ ತಾಗಿದರೆ, ಅಲ್ಲಯ್ಯ ನೋಡಿ ನಗುತಿರ್ದನು ॥೧೦॥ ಮತ್ತಂ, ತಾಯಿಗಾದ ಸುಖ ದುಃಖಿಂಗಳು ಬಸಿರ ಶಿಸುವಿಂಗೆ ನೋಡಯ್ಯ! ಶಿವಶರಣರಿಗೆ ಮಾಡಿದ ಸುಖ ಮಃಖಿಂಗಳು ಶಿವನ ತಾಗುವವು, ಕರಣವುಳ್ಳವರು/ ಮರಣವಿಲ್ಲದವಂಗೆ ಮುನಿದರೆ ತನುವುಳ್ಳವರ ಮುಟ್ಟುವವಲ್ಲದೆ, ಒಡಲಿಲ್ಲದಾತನ ಮುಟ್ಟಬಲ್ಲುದೆ? ಗುಹೇಶ್ವರ, ಕೆಂಡವ ಗೊರಲೆ ಮುಟ್ಟಬಲ್ಲುದೆ? ॥೧೧॥

ಇಂತಪ್ಪ ಅಜ್ಞಾನಿಗಳಿಗೆ ಉಪದೇಶವ ಮಾಡಿದ ಸಿದ್ಧರಾಮಯ್ಯನನು, ಆ ಶಿಷ್ಯರು ಮಾಡಿದ ಪಾಪ ತಾಗುವದೆಂದು ಪ್ರಭುದೇವರು ನಿರೂಪಿಸಿದ ಪ್ರಸ್ಥಾವದ ವಚನ॥

ಜಗದ ಜನವ ಹಿಡಿದುಕೊಂಡು, ಒಂದು ಉಪದೇಶವ ಮಾಡಿದ ಗುರುವಿಂಗೆ ಆ ಉಪದೇಶವ ಕೊಟ್ಟು ಕೊಂಡ ಮಾರಿಂಗೆ ಹೋಹುದಲ್ಲದೆ, ಅಲ್ಲಿ ನಿಜವಳ ವಡದು. ತಿರನರಿಯದ ಸಂಸಾರ ಜೀವಿಗಳು ಮಾಡಿದ

ದೋಷ ತಮ್ಮ ನುಂಗಿ, ಆ ಗುರುವಿಂಗೆ ಉಪಹತಿಯ ಮಾಡುವುದ
ನೋಡಾ! ಗುಹೇಶ್ವರ ತಾನಿಟ್ಟ ಬೇತಾಳ ತನ್ನನೆ ತಿಂದರೆ ಬೇ
ಬೇಡೆನಲುಂಟೆ? ॥೧೨॥

ಇಂತು ಪ್ರಭುದೇವರ ನೋಯಿಸಿದ ನೋವು ಆ ಗುಡ್ಡಗಳ್ಳ
ಮರಳಿ ತಾಗಲು, ಆ ಘಾಯಂಗಳ ವೇದನೆಯಿಂ ಗೋಳಿಡುತ್ತ, ಬೆ
ಬಂದು ಸಿದ್ಧರಾಮಯ್ಯ ದೇವರಿಗೆ ಮೊರೆ ಇಟ್ಟು ದೂರಿ ದೇವ ಆವನೊ
ಓರ್ವ ಇಂದ್ರ ಜಾಲಕನು ನಿಮ್ಮನು ಬಾಯಿಗೆ ಬಂದಂತೆ ನಿಂದಿಸುತ್ತ
ರಲು. ನಾವೆಲ್ಲರು ಗುರುನಿಂದೆಯಂ ಕೇಳಿ ಸುಮ್ಮನೆ ಇರಬಾರದೆಂ
ಕಲ್ಲು ಗುಂಡುಗಳನಿಟ್ಟು ನೋಯಿಸಲು, ಆತನ ತಾಗಿದಂತ ಘಾಯಗಳ
ಳಿವು ನಮ್ಮನೆ ತಾಗಿ ದೆಸೆದೆಸೆಯಿಂದೆಲ್ಲರು ನೊಂದು ಗಾಸಿಯಾದೆ
ನೆಂಮ ಬಿನ್ನೈಸಲು. ಸಿದ್ಧರಾಮ ತಂದೆಗಳು ಬಂದು, ಈತನು ಪ್ರಭು
ದೇವರೆಂದು ವಿಚಾರಿಸಿ ನೋಡದೆ, ಕ್ರೋಧಕ್ಕೆ ಮನವನೆಡೆಗೊಟ್ಟು, ಆ
ಗುಡ್ಡರುಗಳ ನೋವೆ ತನ್ನ ನೋವಾಗಿ, ಕೈಕೊಂಡು ನುಡಿದ ಪ್ರಸ್ಥಾ
ವದ ವಚನ॥

ಎಲೆಯಯ್ಯ, ನಿಮ್ಮವರ ನೋವೆ ಎನ್ನ ನೋವು ನೋಡಾ. ಕಂಡ
ಕಂಡು ಸೈರಿಸಲಾರದೆ ನೊಂದೆನಯ್ಯ! ನಿಮ್ಮವರೊಡನೆ ವರ ಸೊರಸಾ
ದಿಪ್ಪವರ ಕಂಡರೆ ನಾನವರಿಗೆ ಮುನಿವೆ ನೋಡಾ. ಕಪಿಲಸಿದ್ಧ ಮಲ್ಲಿ
ನಾಥ ನೀನವರಲ್ಲಿಪ್ಪೆಯಾಗಿ ॥೧೩॥

ಇಂತು ಕ್ರೋಧಿಸಿ ಸಿದ್ಧರಾಮಯ್ಯ ದೇವರು ನೊಸಲ ಕಣ್ಣ ತೆಗೆದ
ಪ್ರಸ್ಥಾವದ ವಚನ॥

ಯಕ್ಕೆ ನಿಂಡುಗಳೆಂಬವರು ಮುಕ್ಕಣ್ಣ ನಿಮ್ಮ ಗಣಂಗಳು ಬತ್ತಿ
ಕರೆಸೆ ಬಾಯ ಬಿಟ್ಟಂತೆ ಮೊರೆ ಇಟ್ಟು ಬರಲು, ಹೊತ್ತಿದ ಅಂಗಾಲ
ಕಿಚ್ಚು ನೆತ್ತಿಗೆ ಮುಟ್ಟಿದವರಿ ಚಕ್ಷನೆ ಕಪಿಲಸಿದ್ಧ ಮಲ್ಲಿನಾಥ ನೊಸಲ
ಕಣ್ಣ ತೆಗೆದನು. ॥೧೪॥

ಇಂತು ನೊಸಲ ಕಣ್ಣ ತೆಗೆದ ಸಿದ್ಧರಾಮಯ್ಯ ದೇವರು ಆ
ನೊಸಲ ಕಣ್ಣಿನೆ ಬೆಸನಿತ್ತ ಪ್ರಸ್ಥಾವದ ವಚನ॥

ಬ್ರಹ್ಮನಾದಡಾಗಲಿ, ವಿಷ್ಣುವಾದಡಾಗಲಿ, ಇಂದ್ರನಾಪಡಾಗಲಿ,
ಚಂದ್ರನಾದಡಾಗಲಿ, ಎಮ್ಮ ಶಿವಶರಣರ ನೋವು ಎಮ್ಮ ನೋವು

ನೋಡಾ! ಅವರನೊರಸುನೆ ನುರುಹುವೆನೆಂದು ಕಪಿಲ ಸಿದ್ಧಮಲ್ಲಿ
ಕಾರ್ಜುನ ತನ್ನ ನೊಸಲ ಕಣ್ಣಿಂಗೆ ಬೆಸನ ನಿತ್ತರೆ ನಿಲಬಲ್ಲ ಗರುವರ
ನಾರನು ಕಾಣೆ. ॥೧೫॥

ಇಂತು ನೊಸಲ ಕಣ್ಣಿನ ಕಿಚ್ಚಿಂಗೆ ಬೆಸನ ನಿತ್ತ ಸಿದ್ಧರಾಮಯ್ಯ
ದೇವರು ಆ ನೊಸಲ ಕಣ್ಣಿನ ಮಹಾ ಜ್ವಾಲಾ ಜ್ವಾಲೆಯ ನೋಡಿ
ನೋಡಿ, ಆಶ್ಚರ್ಯಬಡುತ್ತಿರ್ದ ಪ್ರಸ್ಥಾವದ ವಚನ॥

ಅಯ್ಯ ನಿಮ್ಮ ಮೂರ್ತಿಯ ನೋಡಿಹೆನೆಂದರೆ ದೃಷ್ಟಿಯಾನವು.
ನಿಮ್ಮ ತೇಜವನಾರು ನೋಡಲಂಮರಯ್ಯ! ನಿಮ್ಮ ತೇಜವ ನೋಡುವ
ನರಿಗೆಯುಪವಿಸಬಾರದು. ನೀವು ಮುನಿದು ನೊಸಲ ಕಣ್ಣ ತೆರೆದರೆ
ಅವಕ್ಕೆ ಇದಿರಪ್ಪರು ಇನ್ನಾರು ಹೇಳಯ್ಯ? ಕಪಿಲ ಸಿದ್ಧಮಲ್ಲಿಕಾರ್ಜುನ
ನಿಮ್ಮ ತೇಜ ಮೂರು ಲೋಕವ ನುಂಗಿದರೆ, ನಾನು ನೋಡಿ ಕಣ್ಣ
ಮುಚ್ಚುತಿರ್ದೆನು. ॥೧೬॥

ಇಂತು ಸಿದ್ಧರಾಮಯ್ಯ ದೇವರ ನೊಸಲ ಕಣ್ಣಿನ ಮಹಾ ಜ್ವಾಲೆಯ
ದಾಳಿ ಬ್ರಹ್ಮಾಂಡ ಮಂಡಲಮಂ ಮುಸುಕುತ ಬಪ್ಪುದಂ ಕಂಡು,
ಅಲ್ಲಮ ಪ್ರಭುದೇವರು ನಿರೂಪಿಸಿದ ಪ್ರಸ್ಥಾವದ ವಚನ॥

ಕಾಡಗಿಚ್ಚಿದ್ದರೆ ಅಡವಿಯೆ ಗುರಿ. ನೀರುಗಿಚ್ಚಿದ್ದರೆ ಸಮುದ್ರವೆ ಗುರಿ.
ಒಡಲಗಿಚ್ಚಿದ್ದರೆ ಆ ತನುವೇ ಗುರಿ. ಕಾಲಾಗ್ನಿ ಎದ್ದರೆ ಆ ಲೋಕಂ
ಗಳೆ ಗುರಿ. ಶಿವಶರಣರ ಮನದಲ್ಲಿ ಕೋಪಾಗ್ನಿ ಎದ್ದರೆ ನಿಂದಕರೆ ಗುರಿ.
ಗುಹೇಶ್ವರ ನಿಮ್ಮ ಮಾಯೆಯ ಹೊಡಗಿಚ್ಚಿಂಗೆ ನಾನು ಗುರಿಯಲ್ಲ
ಕೇಳಾ॥೧೭॥

ಇಂತು ಭೂಮಿ ಆಕಾಶ ಮುಂಡಲಮುಂ ತುಡುಂಕುತಂ ಬಪ್ಪ
ಮಹಾ ಜ್ವಾಲೆಯನು ಇದೆಲ್ಲಿಯದೆಂದು ತಿಳಿದು ನೋಡಿ, ಸಿದ್ಧರಾಮಯ್ಯ
ದೇವರ ನೊಸಲ ಕಣ್ಣು ಕಿಚ್ಚೆಂದರಿದ ಪ್ರಸ್ಥಾವದ ವಚನ॥

ಕಾಯ ಗುಣವಳಿದು, ಮಾಯೆಯು ಮದವ ಮುರಿದು, ಕಾಮಕ್ರೋ
ಧಂಗಳೆಲ್ಲವು ಪೆರಿ ಹಿಂಗಿ ಹೋದವು. ಅಂಗವೆಲ್ಲವು ಲಿಂಗ ಲಿಯ್ಯ
ವಾಗಿ, ಕಂಗಳ ಕಳೆಯ ಬೆಳಗಳಿದು, ಗುಹೇಶ್ವರನ ವಿರಹದುರಿಯೊಳಗೆ
ಬೆಂದವರ ಮರಳಿ ಸುಟ್ಟಿಹೆನೆಂಬ ಸಿದ್ಧರಾಮಯ್ಯ ಮರುಳ ನೋಡಾ. ॥೧೮॥

ಮತ್ತಂ, ತಾಪತ್ರಯದಲ್ಲಿ ಬೆಂದ ಒಡಲ ಹಿಡಿದು ತಂದು, ಜ್ಞಾನವೆಂಬ ಉರಿಗೆ ಆಹುತಿಯ ಕೊಟ್ಟವನ ಜ್ಞಾನವೆಂಬ ಕಾಯವ ಹಿಡಿದು, ನಿಃಶೂನ್ಯವೆಂಬ ತೇಜದಲ್ಲಿ ಸುಟ್ಟವನ, ನಿಃಶೂನ್ಯವೆಂಬ ಶಬ್ದವ ಸುಟ್ಟು ಭಸ್ಮವ ಧರಿಸಿದ ಲಿಂಗೈಕ್ಯನ, ಲೋಕದ ಸ್ಥಿತಿಗತಿಯ ಮರೆದು ನಿರ್ವಾಣದಲ್ಲಿ ಸಿಂದವನ, ಗುಹೇಶ್ವರ ಲಿಂಗದಲ್ಲಿ ತನ್ನ ಮರೆದ ಅಲ್ಲಯ್ಯನ, ಕೋಪದ ಕಿಚ್ಚಿನಲ್ಲಿ ಸುಟ್ಟಹೆನೆಂಬ ಸಿದ್ಧರಾಮಯ್ಯನನೇನೆಂಬೆನು? ॥೧೯॥

ಇಂತು ತನ್ನ ಮಹಾತ್ಮೆಯ ನಿರೂಪಿಸುತ್ತಿರ್ದ ಪ್ರಭುದೇವರು ಸಿದ್ಧರಾಮಯ್ಯ ದೇವರ ಗರ್ವಮಂ ಮುರಿದು, ನೊಸಲ ಕಣ್ಣಿನ ಮಹಾ ಜ್ವಾಲೆಯಂ ತಮ್ಮ ಶ್ರೀಪಾದದೊಳಗಡಗಿಸಿಕೊಂಡ ಪ್ರಸ್ಥಾವದ ವಚನ॥

ನಿಮ್ಮ ಶಕ್ತಿ ಜಗದೊಳಗಿಪ್ಪುದು. ಜಗದ ಶಕ್ತಿ ನಿಮ್ಮೊಳಗಿಪ್ಪುದು. ಜಗಕ್ಕೆ ನಿನಗೆ ಭೇದವಾದುದಕ್ಕೆ ಬೆರಗಾದೆನು. ಅಂದೊಮ್ಮೆ ತ್ರಿಪುರವ ಸುಟ್ಟಲ್ಲಿ ನಾಚಿತ್ತು ಎನ್ನ ಮನವು. ಕಾಮನನುರುಹಿ ಕರ್ಮ ಹರಿಸಿಕೊಂಡರೆ ನಿನ್ನ ಅಹಂಕಾರವ ನೋಡಿ, ಹೇಸಿತ್ತು ಎನ್ನ ಮನವು. ಕಾಲನ ಸುಟ್ಟು ಜೊಟ್ಟನಿಟ್ಟರೆ, ಎನಗೆ ನಗೆಗೆಡೆಯಾಯಿತ್ತು. ನಿಮ್ಮ ಘನವೆನಗೆ ಗುಹೇಶ್ವರ ನೀ ಮುನಿದು ನೊಸಲ ಕಣ್ಣ ತೆರೆದರೆ, ಎನ್ನಂ ಗಾಲೊಳಗಡಗಿತ್ತಯ್ಯ ನಿಮ್ಮ ಕೋಪಾ. ॥೨೦॥

ಇಂತು ನೊಸಲ ಕಣ್ಣಿನ ಮಹಾ ಜ್ವಾಲೆಯನು ಪ್ರಭುದೇವರು ತಮ್ಮಂಗಾಲೊಳಗೆ ಅಡಗಿಸಿಕೊಂಡು ಸಿದ್ಧರಾಮಯ್ಯ ದೇವರ ಶಕ್ತಿಯ ನೋಡಬೇಕೆಂದು ತಾವು ತಮ್ಮ ಅಂಗಾಲೊಳಗೆ ಉರಿಗಣ್ಣ ತೆಗೆದಿಹೆನೆಂದು ಉದ್ಯೋಗಿಸಿದ ಪ್ರಸ್ಥಾವದ ವಚನ॥

ಹರನ ಕರುಣವ ಪಡೆದ ಸಾಮರ್ಥ್ಯದ ಬಲುಹಿಂದ ಶಿವಶರಣರೊಡನೆ ಸೆಣಸಿದರೆ ಲೇಸುಂಟೆ? ಅಘಟಿತ ಘಟಿತರಿಗೆ ಅಘಟಿತರುಂಟು ನೋಡಾ! ನೊಸಲಲೊಬ್ಬರು ಕಣ್ಣ ತೆಗೆದರೆ ಅಂಗಾಲಲೊಬ್ಬರು ಕಣ್ಣ ತೆಗೆವರು. ಗುಹೇಶ್ವರನ ಶರಣರು ಉಪಮಾತೀತರು. ॥೨೧॥

ಈ ಹೀಗೆಂದು ಪ್ರಭುದೇವರು ಅಂಗಾಲ ಕಣ್ಣ ತೆಗೆದ ಪ್ರಸ್ಥಾವದ ವಚನ॥

ಎರಡು ಕಣ್ಣುಳ್ಳರೆ ಚತುರ್ಭುಜನೆಂಬೆನು. ಮೂರು ಕಣ್ಣುಳ್ಳರೆ ಮಹೇಶ್ವರನೆಂಬೆನು. ಮೈ ಎಲ್ಲ ಕಣ್ಣಾದರೆ ಸದಾಶಿವನೆಂಬೆನು. ಗುಹೇ

ಶ್ವರ ನಿಮ್ಮ ಶರಣಂಗೆ ಅಂಗಾಲ ಕಣ್ಣು ಮೂಡಿದರೆ, ನಿರುಪನು ಮಹಿಮ ಅಲ್ಲಯ್ಯನೆಂಬೆನು. ॥೨೨॥

ಇಂತು ಅಂಗಾಲೊಳಗೆ ಮೂಡಿದ ಕಂಗಳ ತೇಜವ ನೋಡಿ ಪ್ರಭುದೇವರು ಕೊಂಡಾಡುತಿರ್ದ ಪ್ರಸ್ಥಾವದ ವಚನ॥

ನಿಮ್ಮ ತೇಜವ ನೋಡಲೆಂದು ಪೆರೆ ಸಾರಿ ನೋಡುತ್ತಿರಲು, ಶತ ಕೋಟಿ ಸೂರ್ಯರು ಮೂಡಿದಂತಿರ್ದುದಯ್ಯ! ಮಿಂಚಿನ ಬಳ್ಳಿಯ ಸಂಚವ ಕಂಡೆ. ಎನಗಿದು ಸೋಜಿಗವಾಯಿತ್ತು. ಗುಹೇಶ್ವರ ನೀನು ಜ್ಯೋತಿರ್ಲಿಂಗನಾದರೆ ಉಪಮಿಸಿ ನೋಡಬಲ್ಲವರಿಲ್ಲಯ್ಯ. ॥೨೩॥

ಇಂತಪ್ಪ ಅಂಗಾಲ ಕಣ್ಣಿನ ಮಹಾ ಜ್ವಾಲೆಯಂ ಪ್ರಭುದೇವರು ಸಿದ್ಧರಾಮಯ್ಯ ದೇವರ ಬಳಿಗೆ ಹೋಗೆಂದು ಪೆಸಸಿ ಕಳುಹುವ ಪ್ರಸ್ಥಾವದ ವಚನ॥

ಕಾಲಾಗ್ನಿ ಎಂಬ ಕಾಡಗಿಚ್ಚೆದ್ದು ಲೋಕವ ಸುಟ್ಟಿತ್ತೆಂದರೆ, ಶಿವ ಶರಣರಂಜರು. ಶಶಿಧರ ಮುನಿದು ಬಿಸಿಗಣ್ಣ ತೆರೆದರೆ ಶಿವಶರಣರದನು ಮನಸಿಂಗೆ ತಾರರು. ಅಸನಾಕ್ಷ ಲಿಂಗವ ತಮ್ಮ ವಶಕ್ಕೆ ತಂದ ಶರಣರು ಮುನಿದು ಉರಿಗಣ್ಣ ತೆರೆದರೆ, ಚತುರ್ದಶ ಭುವನದೊಳಗೆ ಆರು ಗುರಿ ಇಲ್ಲ. ಗುಹೇಶ್ವರ ನಿಮ್ಮ ಅರುಹಿನ ಬೆಳಗು ಬಿಸಿಯಾದರೆ ಸಿದ್ಧರಾಮಯ್ಯ ದೇವರೆಂಬ ಶಿವಯೋಗಿಯ ಹೃದಯವೆ ಗುರಿ ಎಂದು ಬೆಸಸಿದನಲ್ಲಮಯ್ಯನು. ॥೨೪॥

ಇಂತು ತೇಜೋಮಯವಾಗಿ ಅಷ್ಟ ದಿಕ್ಕುಗಳನಾಲಿಂಗಿಸುತ್ತ, ಧರೆಯಾಕಾಶವನಾಗುಳಿಸಿ ನುಂಗುತ್ತ, ಸಚರಾಚರಂಗಳ ನುಃಪೆಂದು ಊದುತ್ತ, ಸಪ್ತ ಸಮುದ್ರಂಗಳನಾಪೋಷಣಂಗೊಳ್ಳುತ್ತ, ಭುಗಿಲ್ ಭುಗಿಲೆಂಬ ಮಹಾ ರಭಸಕ್ಕೆ ಬ್ರಹ್ಮಾಂಡ ಕಟಾಹಂ ಬೀರುತ್ತ, ಚತುರ್ದಶ ಭುವನವೆಲ್ಲಂ ಪ್ರಳಯಕಾಲ ತುಂಬದ ಮುನ್ನವೆ ಮಹಾ ಪ್ರಳಯ ಬಂದಿತ್ತೆಂದು ಜಗ್ಗನೆ ಉರಿವುತ್ತ, ಹರಿ ವಿರಿಂಚಿ ಮೊದಲಾದ ಸಮಸ್ತ ದೇವರ್ಕಳೆಲ್ಲ ಶಿವಧೋ ಎಂದು ಕೈಲಾಸದತ್ತಲೋಡುತ್ತ ಮಿರಲನಂತಮುಖ ಒಂದೇ ಮುಖವಾಗಿ, ಒಂದೆ ಮುಖ ಅನಂತ ಮುಖವಾಗಿ ಬಪ್ಪ ಮಹಾ ತೇಜೋರಾಶಿಯಂ ಕಂಡು ಸಿದ್ಧರಾಮ ತಂದೆಗಳು ಇದೆಲ್ಲಿಯ ಮಹಾ ಜ್ವಾಲೆಯೆಂದು,

ನಡೆದು ಬಂದರೆ. ನಾನರಿಯದೆ ಮರುಳುಗೊಂಡೆನೆಂದು ಎನ್ನ ಮನದೊಳಗೆ ಪ್ರೇರಣೆ ಮಾಡಿದ ಆತನನರಿಸಿಕೊಂಡು ಬಂದೆನ್ನ ಹೃದಯದಲ್ಲಿ ಇಂಬಿಟ್ಟುಕೊಂಬೆ ಎನ್ನ ಕಪಿಲ ಸಿದ್ಧಮಲ್ಲಿಕಾರ್ಜುನ ॥೨೯॥ ಮತ್ತಂ, ತನ್ನ ನರಸಿ ಬಪ್ಪವರ ತಾನರಸಿ ಬಪ್ಪ ನೋಡಾ! ಎನ್ನ ದೇವನೆಲ್ಲಿದ್ದನಲ್ಲಿಗೆ ಹೋಗಿ ಬಾರಾ ಎಂದು ಮನದೊಳಗೆ ಅಜ್ಞೆಯ್ತಿತ್ತಿಕೊಂಬಿನೆನ್ನ ಕಪಿಲ ಸಿದ್ಧಮಲ್ಲಿಕಾರ್ಜುನಾ ॥೩೦॥

ಇಂತು ಪ್ರಭುದೇವರನರಸಿಕೊಂಡು ಬರುತ್ತಿಪ್ಪ ಸಿದ್ಧರಾಮಯ್ಯ ದೇವರೊಡನೆ ಗುಡ್ಡಗಳು ದೇವಾ ಆತನು ನಿಂದಿರೆ ನೆಳಲಿಲ್ಲ, ಸುಳಿದರೆ ಹೆಜ್ಜೆ ಇಲ್ಲ. ಕಾಯವಿದ್ದು ಕಾಯವಿಲ್ಲ. ನೀವಿನ್ನು ಆವ ಪರಿಯಲ್ಲಿ ಮುನಿಸ ತಿಳುಹಿತಿಪ್ಪಿರಿ ಎಂದೆನೆ, ಆ ಗುಡ್ಡಗಳೊಡನೆ ನುಡಿವ ಪ್ರಸ್ಥಾವದ ವಚನ॥

ಅವನಾದ ಗತಿಯ ನಾನಪ್ಪೆ. ಅವನಿಂದ ನಿಲುವ ನಿಲುವೆನು. ಆತ ಬಿಟ್ಟುದ ಬಿಡುವೆನು. ಅವನ ಬೆಂಬಳಿಯ ಸಲಿಸುವೆ. ಎನ್ನ ಮನಃ ಪ್ರಾಣವನವನ ಮೇಲಿಕ್ಕಿ ನೆರೆವೆ. ಕಪಿಲ ಸಿದ್ಧಮಲ್ಲಿಕಾರ್ಜುನ ॥೩೧॥ ಮತ್ತಂ, ಮದಹಸ್ತಿ ಮದಹಸ್ತಿಯ ಹಿಡಿವುದಲ್ಲದೆ, ಮತ್ತೊಂದ ಹಿಡಿಯದು. ಅರೂಪು ಅರೂಪ ಹಿಡಿವುದಲ್ಲದೆ, ಮತ್ತೊಂದ ಹಿಡಿಯದು. ರೂಪಿಲ್ಲದಾತನ ರೂಪಿಗೆ ಹಿಡಿವೆನು ಕಪಿಲ ಸಿದ್ಧಮಲ್ಲಿಕಾರ್ಜುನ ॥೩೨॥ ಹರಿದು ಹತ್ತುವೆನವನ. ಹತ್ತಿ ಮನಮುಟ್ಟಿ ಹಿಡಿವೆನವನ. ಮಹಾ ಪ್ರಚಂಡ ಮನದಿಂದೆ ಕಪಿಲಸಿದ್ಧ ಮಲ್ಲಿಕಾರ್ಜುನನ ಹಿಡಿವೆನು ॥೩೩॥

ಹೀಗೆಂದು ನುಡಿವ ಸಿದ್ಧರಾಮ ತಂದೆಗಳೊಡನೆ, ಆ ಗುಡ್ಡಗಳು ದೇವಾ ಆತನ ಕೋಪಾರೂಢಿಯಿಂದೊಗೆದ ಅಂಗಾಲ ಕಣ್ಣಿನ ಜ್ವಾಲೆಯ ನಿಲಿಸುವ ಪರಿ ಎಂತೆನೆ, ಅವರಿಗೆ ಕೊಟ್ಟ ಪ್ರತ್ಯುತ್ತರ.

ಅಂಗಾಲ ಕೋಪವ ಮನಕ್ಕೆ ತಂದಿಪ್ಪವನ, ಮನದ ಕೋಪವ ಹೃದಯದಲ್ಲಿ ಇಟ್ಟುಕೊಂಡಿಪ್ಪವನ, ಅವನ ಪಾದಕ್ಕೆ ಎನ್ನ ನೊಸಲ ತಂಪು ತಂದು ತಳಿವೆ. ಎನ್ನ ನೊಸಲ ಅಮೃತದಿಂದೆ ಅವನ ತಿಳುಪುವೆನು ಕಪಿಲ ಸಿದ್ಧಮಲ್ಲಿಕಾರ್ಜುನಾ. ॥೩೪॥

ಇಂತು ಗುಡ್ಡಗಳೊಡನೆ ಪ್ರಸಂಗಿಸುತ್ತ ಬಂದು ಸಿದ್ಧಮಯ್ಯ ದೇವರು ಪ್ರಭುದೇವರ ದರುಶನವಾಗಿ ಅವರ ಶ್ರೀ ಮೂರ್ತಿಯ ನೋಡಿ ನೋಡಿ, ಹರುಷಾಶ್ರುಗಳೊಳಗೆ ಓಲಾಡುತ್ತಿರ್ಪ ಪ್ರಸ್ಥಾವದ ವಚನ॥

ನಿನೇಕದಿಂ ತಿಳಿದು, ಈತನು ತಿವನಲಾ ಎಂದು ತರಿದು, ಅನುತಾಪಿಸುತ್ತಿರ್ಪ ಪ್ರಸ್ಥಾವದ ವಚನ॥

ಯುಗ ಜುಗ ಮಡಿವಂದು ಧಿಗಿಲು ಭುಗಿಲೆಂದು ಮುಸುಕಿದ ಮಹಾ ಜ್ವಾಲೆ ಇದೇನೋ? ಇದೆನ್ನ ಕಂಗೆ ಗೋಚರವಾಯಿತ್ತಲೆಯಯ್ಯ! ನೀವೆಂದರಿಯೆನಯ್ಯ! ನಾ ಎನ್ನ ಕಾಯದ ಕಳವಳದಲ್ಲಿ ಇದ್ದಿನಲ್ಲದೆ ನೀವೆಂಬ ಬಗೆದೋರದೆ ಕೆಟ್ಟೆನಲೆಯಯ್ಯ! ಆಳ್ದನೊಡನೆ ಆಳು ಮುನಿದರೆ ಆರು ಕೆಡುವರು ಹೇಳಾ ಕಪಿಲ ಸಿದ್ಧಮಲ್ಲಿಕಾರ್ಜುನಾ? ॥೨೫॥ ಮತ್ತಂ, ಅರಿಯಬಾರದ ಘನವನರಿದು ಸಾಧಿಸಿದೆ. ಘನಮಹಿಮ ಶರಣರ ಮುಂದೆ ಎನ್ನ ಪ್ರತಾಪ ನಿಲುಕದೆ ಅವರಿಪ್ಪರು. ಲಿಂಗವ ಪ್ರಭೆಯೊಳಗೆ ನಾನಿಪ್ಪೆನು. ಅಹಂಕಾರವ ಪಂಜರದೊಳಗೆ ಎನ್ನ ನೊಸಲ ಕಣ್ಣಿನ ಕಿಚ್ಚುಡಿಗಿ, ಲಜ್ಜಿತನಾಗಿ ಮರಳಿ ಬಂದೆನ್ನ ಸುತ್ತಿ ಮುತ್ತಿತ್ತು. ನಾನು ಶರಣೆಂಬ ಗುರುವಚನ ನಿದಿರೆದ್ದು ಕೊಲುವರೆ ಕಪಿಲ ಸಿದ್ಧಮಲ್ಲಿನಾಥನೊಳಗೆ ಅಳಿದಿನಲ್ಲದೆ ಉಳಿವನಲ್ಲ. ॥೨೬॥

ಮತ್ತಂ, ಅನುತಾಪಗೈವ ಪ್ರಸ್ಥಾವದ ವಚನ॥

ಕಾಲವೇಕೆ ಬಾರದಯ್ಯ! ಇಂದಿನ ಅವಸ್ಥೆಗೆ ಲಿಖಿತವೇಕೆ ತೊಡೆಯದಯ್ಯ! ಇಂದಿನ ಅವಸ್ಥೆಗೆ ಇನಿತು ಲೇಸು ಬಾರದೇಕಯ್ಯ! ಎನ್ನ ದೇವ ಕಪಿಲ ಸಿದ್ಧಮಲ್ಲಿಕಾರ್ಜುನ ನಿಮಗೆ ಕೂರ್ತು ಅವಸ್ಥೆಯೊಳಗೆ ಲಿಖಿತ ತೊಡೆಯದು, ಪ್ರಾಣ ಬಿಡದು. ಇಂತಿರಿಸದಿರಾ ಎನ್ನ ದೇವರ ದೇವಾ ॥೨೭॥ ಮತ್ತಂ, ಕಳವಳದ ಕಂದೆರವೆಗೋಳು ಮಾಡಿದೆ. ಹಾ! ಹಾ! ಎಲೆ ಅಯ್ಯ, ಎನ್ನ ವಿಕಾರದಲ್ಲಿ ಗುರಿ ಮಾಡಿದಿರಯ್ಯ. ಕೋಪದ ಕಾಡಗಿಚ್ಚಿಗೆ ಅಡವಿಯ ಗುರಿ ಮಾಡಿದಿರಯ್ಯ ಎನ್ನ ಕಪಿಲ ಸಿದ್ಧಮಲ್ಲಿಕಾರ್ಜುನ॥ ೨೮॥

ಇಂತು ಅನುತಾಪಮಂ ಸಂತೈಸಿಕೊಂಡು, ಪ್ರಭುದೇವರ ಶ್ರೀಪಾದದಲ್ಲಿಗೆ ಅರಿಸಿಕೊಂಡು ಬರುತ್ತಿರ್ಪ ಪ್ರಸ್ಥಾವದ ವಚನ॥

ನಟ್ಟಡವಿಯೊಳಗೆ ಇರುಳು ಪಗಲೆನ್ನದೆ ನಾನು ಅಪ್ಪಾ ಅಯ್ಯ ಎಂದು ಅರಸುತ್ತ ಹೋದರೆ, ನಾನಿದ್ದೇನೆ ಬಾ ಮಗನೆ ಎಂದು ಕರದೆನ್ನ ಕಂಬನಿ ತೊಡೆದು ನಿಜಪ ತೋರಿದ ದೇವನ ಪಾದವಿಂದೆನ್ನಲ್ಲಿಗೆ

ಅರಲುಗೊಂಡ ಕೆರೆಗೆ ತೊರೆ ಬಂದು ಹಾಯಿದಂತೆ. ಎಲೆ ಅಯ್ಯ ನಿಮ್ಮ ಕಂಡು ಕಂಗಳು ಕಡೆಗೋಡಿವರಿದವಯ್ಯ! ಎನ್ನ ಮನಕ್ಕೆ ಮನ ವೇದ್ಯವಾದರೆ, ಕೈಮರೆದಿನೆಲೆ ಹಾ ಅಯ್ಯ. ಕಪಿಲ ಸಿದ್ಧಮಲ್ಲಿನಾಥನ ಕಂಡ ಸುಖವು ಆರಿಗೆಯು ಇಲ್ಲ. ॥೩॥ ಮತ್ತಂ, ಅಯ್ಯ ನಿನ್ನ್ಯ ಕಂಡು ಕಂಗಳು ನೋಡಲಮ್ಮದೆ ಬೆಚ್ಚಿ ಬೆದರಿದವಯ್ಯ! ನೀನು ಶತಕೋಟಿ ಸೂರ್ಯ ಪ್ರಕಾಶಕ್ಕತೀತನು. ನಿನ್ನ ಕಂಡ ಬಳಿಕ ಕರ್ಮ ಉಂಟೆ ಕಪಿಲ ಸಿದ್ಧಮಲ್ಲಿಕಾರ್ಜುನ? ॥೩॥

ಇಂತು ಪ್ರಭುದೇವರ ಮೂರ್ತಿಯಂ ಕಂಡು, ಸಿದ್ಧರಾಮಯ್ಯ ದೇವರು ಆ ಪ್ರಭುದೇವರ ಶ್ರೀಪಾದಕ್ಕೆ ನಮಸ್ಕಾರಮಂ ಮಾಡುವ ಪ್ರಸ್ತಾವದ ವಚನ॥

ಎಲೆ ಅಯ್ಯ ಎನ್ನ ಶಿರ ನಿನ್ನ ಚರಣವ ಮುಟ್ಟಿವ ಬಳಿಕ್ಕ, ಎನ್ನಲ್ಲಿ ಗುಣದೋಷವನರಸುವರೆ? ಭೃತ್ಯಾಪರಾಧ ಸ್ವಾಮಿನೋ ದಂಡ ಕಪಿಲಸಿದ್ಧ ಮಲ್ಲಿಕಾರ್ಜುನದೇವ ತ್ರಾಹಿ ತ್ರಾಹಿ ಕಾಯಯ್ಯ. ॥೨॥

ಇಂತು ನಮಸ್ಕಾರದೊಳು ತನ್ನನ ಮರೆದು ಸ್ತೋತ್ರಮುಂ ಮಾಡುವ ಪ್ರಸ್ತಾವದ ವಚನ॥

ನಿಮ್ಮ ನಿಜದಂತ್ಯವನಾರು ಬಲ್ಲರಯ್ಯ! ಚತುರ್ದಶ ಭುವನಂಗಳೆಲ್ಲವು ನಿಮ್ಮ ಕರಸ್ಥಲದೊಳಡಗಿಪ್ಪವಯ್ಯ! ನಿಮಗೆಣೆಯಪ್ಪ ದೇವರುಂಟೆ ಕಪಿಲ ಸಿದ್ಧಮಲ್ಲಿಕಾರ್ಜುನಾ? ॥೩॥ ಮತ್ತಂ, ಹರಿ ಎಂಬಾತ ನಿಮ್ಮ ಚರಣವನರಿಯ. ಬ್ರಹ್ಮನೆಂಬಾತ ನಿಮ್ಮ ಮುಕುಟವನರಿಯ. ಯತಿಪ್ರತಿಗಳೆಂಬವರು ನಿಮ್ಮ ಹೊಗಳಲರಿಯರು. ಸಮಸ್ತ ದೇವರ್ಕಳು ನಿಮ್ಮ ರೋಮ ಪ್ರವಾಣವನರಿಯರು. ಶತಕೋಟಿ ಸೂರ್ಯರು ನಿಮ್ಮ ಬೆಳಗ ಕಾಣಲರಿಯರು. ಕಪಿಲ ಸಿದ್ಧಮಲ್ಲಿಕಾರ್ಜುನ ನಾ ನಿಮ್ಮ ಅರಿಯಬಲ್ಲವನೇ ಅಯ್ಯ? ॥೩॥ ನೆನಿಸುವೆ ಮರಸುವೆ. ಎನ್ನ ಗುಣದೋಷ ನಿಮ್ಮದು. ಕೇಳಯ್ಯ ಎನ್ನ ಬಿನ್ನಪವ! ನಿಮ್ಮ ನೆನವ ನಾನಲ್ಲ ಕಂಡಯ್ಯ. ನಿಮ್ಮಿಂದ ನಿಮ್ಮ ನೆನೆಸಿಪೆನು. ಕೃಪೆ ಮಾಡಾ ಕಪಿಲ ಸಿದ್ಧಮಲ್ಲಿಕಾರ್ಜುನ ॥೪॥ ಮತ್ತಂ, ಕೈಗಳ ಬೆಚ್ಚಿ ಬಿಸಾಟರೆ ಬಿಡೆನು... ಮೈಗಳ ಕಡಿದು ಹರಹಿದಡೆ ಬಿಡೆನು ನಿಮ್ಮ ಚರಣವನ್ನು. ಎನ್ನ ತನುವಳಿದರೆ ನಿಮ್ಮ

ಪ್ರಾಣನ ತನುವಿಂದ ಹೊದ್ದುವೆನು ಕಾಣಾ ಕಪಿಲ ಸಿದ್ಧಮಲ್ಲಿಕಾರ್ಜುನ ॥೪॥

ಇಂತು ಸಿದ್ಧರಾಮಯ್ಯ ದೇವರು ಸ್ತೋತ್ರಮುಂ ಮಾಡುತ್ತಿರಲು, ಆ ಪ್ರಭುದೇವರು ಆ ಸ್ತೋತ್ರಮುಂ ಜರಿದು ತಮ್ಮ ನಿಲವ ಹೇಳುವ ಪ್ರಸ್ತಾವದ ವಚನ॥

ಕಾಯಗೊಂಡ ಮಾನವರಂತೆ ಕೈಗೆ ಸಿಲುಕ. ಪ್ರಾಣವಿಡಿದ ಜೀವಿಗಳಂತೆ ಎಡೆಯಾಡದಿಪ್ಪ. ಕಾಂಬಡೆ ಕಂಗಳತೆ ಇಲ್ಲ. ಕೇಳುವಡೆ ಕಿವಿಗಳತೆ ಇಲ್ಲ. ಗುಹೇಶ್ವರನ ನಿಲವು ಬರಿಯ ಸ್ತೋತ್ರಕ್ಕೆ ನಿಲುಕದು ಕಾಣಾ ಸಿದ್ಧರಾಮಯ್ಯ. ॥೪॥ ಮತ್ತಂ, ಕಣ್ಣಿಂಗೆ ಕಾಂಬಡೆ ರೂಪಲ್ಲ. ಕೈಕ್ಕೆ ಸಿಲುಕುವರೆ ದೇಹಿಯಲ್ಲ. ನಡೆದಡೆ ಗಮನಿಯಲ್ಲ. ನುಡಿದಡೆ ವಾಚಾಳನಲ್ಲ. ನಿಂದಿಸಿದವಗೆ ಹಗೆಯಲ್ಲ. ಹೊಗಳಿದವಗೆ ಕೆಳೆಯಲ್ಲ. ಗುಹೇಶ್ವರನ ನಿಲವು ಮಾತಿನ ಮಾಲೆಗೆ ಸಿಲುಕುವುದೆ? ಸಿದ್ಧರಾಮಯ್ಯ ನೀನು ಮರುಳಾದೆಯಲ್ಲ. ॥೪॥

ಈ ಹೀಗೆಂದು ಪ್ರಭುದೇವರು ನಿರೂಪಿಸಲು, ಸಿದ್ಧರಾಮಯ್ಯದೇವರು ಕೊಟ್ಟ ಪ್ರತ್ಯುತ್ತರ.

ಸ್ತೋತ್ರವೆಂಬವು ನೀ ಮಾಡಲಾದವು ಕಂಡಯ್ಯ! ಮೂರ್ತಿ ಎಂಬುದು ನೀ ನೆನೆದಡಾದುದು ಕಂಡಯ್ಯ! ಆ ಮೂರ್ತಿ ಎಂಬುದು ನಿನ್ನ ಸ್ವಾನುಭಾವ ಕಂಡಯ್ಯ! ಎನ್ನ ಹೃತ್ಕಮಲದೊಳಗೆ ಹುಟ್ಟುವ ಸ್ಮರಣೆ ನಿನ್ನ ಗತಿ ನೋಡಯ್ಯ! ಕಪಿಲ ಸಿದ್ಧಮಲ್ಲಿನಾಥಯ್ಯ ನೀನು ಸ್ತೋತ್ರಪ್ರಿಯನಲ್ಲದೆ ಇದ್ದರೆ, ಬಾಣನುಯೂರ ಹಲಾಯುಧಂಗೆ ಒಲಿದೆ ಎಂತು ಹೇಳಯ್ಯ. ॥೪॥

ಈ ಹೀಗೆಂದು ಸಿದ್ಧರಾಮಯ್ಯ ದೇವರು ವಿಸ್ಮೈಸಲು, ಅದಕ್ಕೆ ಪ್ರಭುದೇವರು ಕೊಟ್ಟ ಪ್ರತ್ಯುತ್ತರ.

ವಚನದ ರಚನೆ ಎಂಬ ಮಾತಿನ ಬಣಬೆಯ ಪರಿಯಲ್ಲ ನೋಡಾ! ಹೊಗಳಿ ಕಂಡವರೆಲ್ಲರು ಮೂರ್ತಿಗೊಳಗಾದರು. ವೇದಶಾಸ್ತ್ರ ಶ್ರುತಿಸ್ಮೃತಿಗಳು ಹೊಗಳಿ ಕಾಣವೆಂಬುದ ಗುಹೇಶ್ವರ ಸಾಕ್ಷಿಯಾಗಿ, ಮೂರು ಲೋಕ ಬಲ್ಲುದು ಕಾಣಾ ಸಿದ್ಧರಾಮಯ್ಯ. ॥೪॥

ಈ ಹೀಗೆಂದು ಪ್ರಭುದೇವರು ನಿರೂಪಿಸಲು, ಅದಕ್ಕೆ ಸಿದ್ಧರಾ
ಮಯ್ಯ ದೇವರ ಬಿನ್ನಹ.

ದೇವಪ್ರಿಯನಲ್ಲಯ್ಯ ನೀನು, ಶಾಸ್ತ್ರಪ್ರಿಯನಲ್ಲಯ್ಯ ನೀನು, ನಾದ
ಪ್ರಿಯನಲ್ಲಯ್ಯ ನೀನು, ಸ್ತೋತ್ರಪ್ರಿಯನಲ್ಲಯ್ಯ ನೀನು, ಮುಕ್ತಿಪ್ರಿಯನ
ಲ್ಲಯ್ಯ ನೀನು. ಯುಕ್ತಿಪ್ರಿಯನಲ್ಲಯ್ಯ ನೀನು. ನೀನು ಇವೆಲ್ಲಕ್ಕು ಸಾಧ್ಯ
ಕಂಡಯ್ಯ! ನೀನು ಭಕ್ತಿಪ್ರಿಯನೆಂದು ಮರೆಹೊಕ್ಕೆ ಕಾಯಯ್ಯ ನೀನು
ಕಪಿಲ ಸಿದ್ಧಮಲ್ಲಿಕಾರ್ಜುನ. ॥೪೭॥

ಈ ಹೀಗೆಂದು ಸಿದ್ಧರಾಮಯ್ಯ ದೇವರು ನೀನು ಭಕ್ತಿಪ್ರಿಯನೆಂದು
ನಂಬಿದೆನೆಂದು ಬಿನ್ನೈಸಲು, ಅದಕ್ಕೆ ಪ್ರಭುದೇವರು ಕೊಟ್ಟ ಪ್ರತ್ಯುತ್ತರ.

ಭಕ್ತಿ ಯುಕ್ತಿಯನಾರು ಬಲ್ಲರು? ಬಲ್ಲವರನಾರನು ಕಾಣೆ. ತನ್ನ
ಮರೆದು ಇದಿರ ಹರಿದು ಇರಬಲ್ಲರೆ, ಆತ ಭಕ್ತ. ಆ ಶಿವಭಕ್ತಂಗೆ ಶಿವ
ನೊಲಿವನು. ನುಡಿಯಲ್ಲಿ ಭಕ್ತಿಯನಾಡಿ ನಡೆಯಲಿಲ್ಲದಿರ್ದಡೆ ಕಡೆಮುಟ್ಟ
ಶಿವನೊಲಿವುದು ಹುಸಿ. ಮರೆದು, ಕೋಪದುರಿಯನುಗುಳಿ ಅರಿವು
ಬಂದೆರಗಿದೆನೆಂಬ ನುಡಿಗೆ ಒಲಿವನೇ ನಮ್ಮ ಗುಹೇಶ್ವರಲಿಂಗವು? ॥೪೮॥

ಈ ಹೀಗೆಂದು ಪ್ರಭುದೇವರು ನಿರೂಪಿಸಲು, ಅದಕ್ಕೆ ಸಿದ್ಧರಾ
ಮಯ್ಯ ದೇವರ ಬಿನ್ನಹ.

ಎನ್ನ ಕೋಪವೆಂಬುದು ಎನ್ನ ಕಣ್ಣ ನೋಡಯ್ಯ! ನಾನೇತರೊ
ಗೇನು ಹೇಳಯ್ಯ! ನಿಮ್ಮ ಜ್ಞಾನದ ತೇಜದ ಮುಂದೆ ಎನ್ನರಿವೇತರದು
ಹೇಳಯ್ಯ! ಎನ್ನ ದಿಟದ ಭಕ್ತಿ ನಿಮ್ಮ ರೂಪು ಕಂಡಯ್ಯ! ಎನ್ನಸಟೆಯ
ಭಕ್ತಿಯು ನಿಮ್ಮ ರೂಪು ಕಂಡಯ್ಯ! ಎನಗೆ ಬೇರೆ ಸ್ವತಂತ್ರ ಉಂಟೆ
ಕಪಿಲ ಸಿದ್ಧಮಲ್ಲಿನಾಥಾ? ॥೪೯॥

ಈ ಹೀಗೆಂದು ಸಿದ್ಧರಾಮಯ್ಯ ದೇವರು ಬಿನ್ನೈಸಲು, ಅದಕ್ಕೆ
ಪ್ರಭುದೇವರು ಕೊಟ್ಟ ಪ್ರತ್ಯುತ್ತರ.

ಕೋಪ ತಾಪವೆಂಬುದು ಅರಿವಿನೊಳಗೆ. ಭಕ್ತಿಮುಕ್ತಿ ಎಂಬುದು
ನಿತ್ಯದೊಳಗೆ. ಭಾವದ ಬಗೆಗೆ ಬಣ್ಣವಿಟ್ಟುಕೊಂಡರೆ ನಿರ್ಭಾವಿಕಂ ಗೆಲಿದು
ಸಹಜವಹುದೆ? ಬಂದ ಶರಣರ ನಿಲವನರಿದು, ಸಂದುಸಂಶಯವನಳಿದು

ನಂಬಿದಿದ್ದರೆ ಹಿಂದುಮುಂದಾಗಿ ಹೋಹನು ಕಾಣಾ ನಮ್ಮ ಗುಹೇಶ್ವರ
ಲಿಂಗವು. ॥೫೦॥

ಈ ಹೀಗೆಂದು ಪ್ರಭುದೇವರು ಮುನಿದು ಹಿಂದು ಮುಂದಾಗಲು
ಸಿದ್ಧರಾಮ ತಂದೆಗಳು ಅಡ್ಡ ಬಿದ್ದು ಬಿನ್ನೈಸುವ ಪ್ರಸ್ತಾವದ ವಚನ॥

ಹಿರಿದು ಅಗ್ರಹದಿಂದೆ ನೀನೆನ್ನ ಮೇಲಿಕ್ಕಿ ಒಲ್ಲೆ ಸಾರೆಂದರೆ ಹೋಹೆ
ಕಾಣಾ ಅಯ್ಯ! ಕೈಯ್ಯ ಹಿಡಿದರೆ ಅಂತು ಮುರುಚುವೆ. ಎನ್ನ ಉರವ
ಲಪ್ಪಿ ಹಿಡಿದಡೆಂತು ಮುರುಚುವೆ? ನೀನಿಂತು ಹೋಹ ಪರಿಯ ನಿಲಿ
ಸುವೆನು ಕೇಳ ಗಡಾ! ಸೂಕ್ಷ್ಮತನುವಿನಲ್ಲಿ ಹಿಡಿದರೆ, ಎಂತು ಮುರು
ಚುವೆ ಹೇಳಾ, ಕಪಿಲ ಸಿದ್ಧಮಲ್ಲಿಕಾರ್ಜುನಾ? ॥೫೧॥

ಈ ಹೀಗೆಂದು ಸಿದ್ಧರಾಮಯ್ಯ ದೇವರು ಬಿನ್ನೈಸಲು, ಅದಕ್ಕೆ
ಪ್ರಭುದೇವರು ಕೊಟ್ಟ ಪ್ರತ್ಯುತ್ತರ.

ಅಂಗದಲಪ್ಪಿದೆನೆಂದರೆ ಸಿಲುಕದು. ಪ್ರಾಣದಲಿ ಅಪ್ಪಿದೆನೆಂದರೆ
ಸಿಲುಕದು. ಭಾವದಲಿ ಅಪ್ಪಿದೆನೆಂದರೆ ಸಿಲುಕನು. ಸೂಕ್ಷ್ಮ ತನುವಿನ
ಮನದ ಕೊನೆಯ ಮೇಲೆ ಅಪ್ಪಿದೆನೆಂದರೆ ಸಿಲುಕದು. ಭಾವಾತೀತವಾದ
ನಿರಾಕಾರದ ಘನವು ಸುಜ್ಞಾನಮುಖ್ಯ ಸಾಧ್ಯನೋಡಾ! ಗುಹೇಶ್ವರನ ಶರ
ಣರನಿನ್ನಾವ ಪರಿಯಲ್ಲಿ ತಡೆದು ನಿಲಿಸುವೆ ಹೇಳಾ ಸಿದ್ಧರಾಮಯ್ಯ? ॥೫೨॥

ಈ ಹೀಗೆಂದು ಪ್ರಭುದೇವರು ನಿರೂಪಿಸಲು, ಅದಕ್ಕೆ ಸಿದ್ಧರಾಮಯ್ಯ
ದೇವರು ಬಿನ್ನೈಸಿದ ಪ್ರಸ್ತಾವದ ವಚನ॥

ಎನ್ನನಾಗಳೆ ಬಂದಿವಿಡಿದೆ ಗಡಾ ನೀನು. ನಮ್ಮ ಹಿಡಿವರೆ
ಹಿಡಿವ ತನುವರೆ ತನು ಬೇರಾದವರು ನಿಮ್ಮ ಹಿಡಿವರೆ ಹಿಡಿವರು.
ಕೈಯ್ಯರೆ ಕೈ ಬೇರಾದವರು ನಿಮ್ಮ ಹಿಡಿವರೆ ಹಿಡಿವರು. ಕಣ್ಣೆರೆ ಕಣ್ಣು
ಬೇರಾದವರು ಇನಿಸುಳ್ಳರು ಮೊದಲಾಗಿ ನಿಮ್ಮ ಹಿಡಿಯಲಾರರು. ಕಪಿಲ
ಸಿದ್ಧಮಲ್ಲಿನಾಥ ನಿಮ್ಮ ಹಿಡಿದು ತಡೆಯುವನನೇತರವನಲ್ಲ. ಕರು
ಣಿ ಬಾರಾ ಎನ್ನ ದೇವರ ದೇವಾ. ॥೫೩॥

ಈ ಹೀಗೆಂದು ಸಿದ್ಧರಾಮಯ್ಯ ದೇವರು ಬಿನ್ನಪಂಗೈದು ತಮ್ಮ
ಮಕ್ಕಳ ಬಿಜಯಂಗೈವುದು ಎಂದೆನಲು, ಪ್ರಭುದೇವರು ನಿಮ್ಮ ಮುತ

ಅನಂತ ವೇದಂಗಳೆಲ್ಲವು ನಿನ್ನ ಮುಂದೆ ಉಸುರಿಕ್ಕಲಮ್ಮದೆ ಮೂಗರಾ
ಗಿವೆ. ನಿಮಗಾನಿದಿರುತ್ತರ ಕೊಟ್ಟು ಕೆಟ್ಟ ಕೇಡಿಂಗೆ ಏನೆಂಬೆನಲೆಯಯ್ಯ?
ಕಪಿಲ ಸಿದ್ಧಮಲ್ಲಿಕಾರ್ಜುನ ನಾನುಭಯ ಭ್ರಷ್ಟನೆಂಬುದ ನೀವೇ
ಬಲ್ಲಿರಿ. ॥೫॥ ಮತ್ತಂ, ಅಯ್ಯ ನಿಮ್ಮ ಕಂಡಾಕ್ಷಣದಲ್ಲಿ ನಂಬಿ ನಚ್ಚಿ
ಶರಣು ಹೋಗಲರಿಯದೆ ಕವ್ವನೆ ಕೆಟ್ಟೆ. ಅಹಂಕಾರವ ಹೊತ್ತುಕೊಂಡು
ಕೆಟ್ಟೆನಯ್ಯ. ಕೆಡಿಸಿ ಮರುಗಿ ಅರಿಸಿಹೆನೆಂಬ ಮರುಳ ನಾನಯ್ಯ! ಕಪಿಲ
ಸಿದ್ಧಮಲ್ಲಿನಾಥಯ್ಯ ಹಾಲಲದು ನೀರಲದು. ನೀನೇ ಗತಿ ಮತಿ. ॥೫॥
ಮತ್ತಂ, ಎನ್ನ ಭರಭಾರ ನಿಮ್ಮದಯ್ಯ! ಎನ್ನ ಹಾಸಿವೃದ್ಧಿ ನಿಮ್ಮ
ದಯ್ಯ! ಎನ್ನ ಕರಕರ ಕಾಡದಿರು ತಂದೆ. ನಿನ್ನ ಕಾಟ ಎನ್ನ ಪ್ರಾಣ
ಸೋಟ. ಕಪಿಲ ಸಿದ್ಧಮಲ್ಲಿನಾಥ ಕೊಲ್ಲು ಕಾಯೆ. ನಿಮ್ಮ ಧರ್ಮದವ
ನಾನು. ॥೫॥

ಇಂತು ಕಿಂಕುರ್ವಾಣತೆಯಲ್ಲಿ ಸಿದ್ಧರಾಮಯ್ಯ ದೇವರು ಪ್ರಭುದೇ
ವರ ಚರಣದ ಮೇಲೆ ಬಿದ್ದು ಅಳುತ್ತಿರಲು, ಆ ಪ್ರಭುದೇವರು ಕರು
ಣದಿಂ ಶಿರವ ಹಿಡಿದೆತ್ತಿದ ಪ್ರಸ್ಥಾವದ ವಚನ.

ಹೊರಗಾದಿ ಬಂದನೆಂದು ನುಡಿಸಲೊಲ್ಲದೆ ನುಮ್ಮಸಿಪ್ಪೆನು. ಎನ್ನ
ಮನ ನೊಂದು ತಾಗಿದರೆ, ನಿಮ್ಮತ್ತ ಮುಂದಾದೆನು. ಬಿಕ್ಕುತ್ತ ಬೆದ
ರುತ್ತ ಕಾಲ ಮೇಲೆ ಬಿದ್ದರೆ, ಕಂಗಳ ಉದಕ ಮಜ್ಜನಕ್ಕೆರೆದಂತಾಯಿತ್ತು.
ಅಂತಿದ್ದರಿ ಕಂಡು, ನೆಗಹಿದೆನು ನಮ್ಮ ಗುಹೇಶ್ವರಲಿಂಗವ. ॥೬೦॥

ಇಂತು ಅಳುತ್ತಿಪ್ಪ ಸಿದ್ಧರಾಮಯ್ಯ ದೇವರು ಬಿನ್ನೈಸಿದ ವಚನ॥

ಎನ್ನ ತನು ಕರಗಿ ನುನ ಕೊರಗಿದ ದುಃಖನಿವಾರವಯ್ಯ! ಅಯ್ಯಯ್ಯ
ಎಂದು ಅಳುವ ಅಕ್ಕೆ ಇದಾರದಯ್ಯ! ಮರಹೆಂಬ ಕೂರಸಿಗೆ ಗುರಿ ಮಾಡಿ
ದವರಾರಯ್ಯಾ! ಹಾ! ಹಾ!! ಎಂಬ ಧ್ವನಿಯ ಕೇಳಲಾರದೆ ಕಂಡು
ಕರುಣದಿಂದೆ ಶಿರವ ಹಿಡಿದೆತ್ತಿ ಎನ್ನ ಕಣ್ಣ ನೀರ ತೊಡೆದನು ಕಪಿಲ
ಸಿದ್ಧಮಲ್ಲಿನಾಥಯ್ಯನು. ॥೬೧॥

ಇಂತು ಸಿದ್ಧರಾಮಯ್ಯ ದೇವರ ಕಿಂಕುರ್ವಾಣತೆಯಂ ಕಂಡು
ಕೃಪೆಯಿಂದ ಶಿರವ ಹಿಡಿದೆತ್ತಿ ಕಣ್ಣ ನೀರ ತೊಡೆದು ಆ ಪ್ರಭುದೇವರು
ಪ್ರಸನ್ನರಾಗಿ, ಪರಮಯೋಗಿ. ಶುದ್ಧ ಸಾತ್ವಿಕಯೋಗಿ, ಸಚ್ಚಿದಾನಂದ
ಯೋಗಿ, ನಿತ್ಯ ಪರಿಪೂರ್ಣಯೋಗಿ, ಶಿವಯೋಗಾವ್ಯಕ್ತ ಸೇವ್ಯ ಸಂತು

ಷಿಂದೇನು? ಇವ್ವ ತಾವಿನಲ್ಲಿದ್ದು ಭಕ್ತಿಯ ಮಾಡಿ, ಪರಿಣಾವಿಸುವ
ದಲ್ಲದೆ, ನಾವತ್ತ ಬರಲಾರೆವೆಂದು, ನಿರೂಪಿಸಿದ ಪ್ರಸ್ಥಾವದ ವಚನ॥

ಗತಿಗೆಟ್ಟು, ಧೃತಿಗೆಟ್ಟು, ಮತಿಗೆಟ್ಟವ ನಾನೈಯ್ಯ. ನಡೆವರಿ ಶಕ್ತಿ
ಇಲ್ಲ. ನುಡಿವರಿ ಜಿಪ್ಪೆ ಇಲ್ಲ. ಇದಿರಲೊಬ್ಬರ ಉಪಚಾರ ಸೇರದು
ನೋಡಾ! ಎಮಗೆ ಬಂದ ಬರವನರಿದು, ನಿಂದ ನಿಲವನರಿದು, ಕೂಡ
ಬಲ್ಲರೆ ಶರಣಂಗೆ ಬೇರೊಂದೇಕಾಂತವೆಂಬ ಸಂದೇಹ ಉಂಟೆ? ತೆರಹಿ
ಲ್ಲದ ಘನವನೊಳಕೊಂಡ ಬಳಿಕ ಬರಲೆಡೆಯುಂಟೆ ನಮ್ಮ ಗುಹೇಶ್ವರ
ಲಿಂಗಕ್ಕೆ? ॥೫೪॥

ಈ ಹೀಗೆಂದು ಪ್ರಭುದೇವರು ನಿರೂಪಿಸಲು, ಅದಕ್ಕೆ ಸಿದ್ಧರಾ
ಮಯ್ಯ ದೇವರ ಬಿನ್ನಹ. ಭಕ್ತವತ್ಸಲನೆನಿಸಿ ಇಲ್ಲಿಯ ಪರಿಯಂತರ
ಬಿಜಯಂ ಗೈದು, ಇನ್ನು ಬಾರೆವೆಂಬುದಕ್ಕೆ ಕಾರಣವೇನು ಹೇಳೆಂದು
ಬಿಸಗೊಂಬ ಪ್ರಸ್ಥಾವದ ವಚನ॥

ತೆರಹಿಲ್ಲದ ಘನ ತೆರಹಿಲ್ಲದ ಕುರುಹಿಂಗೆ ಬಂದ ಕಾರಣವೇನು
ಹೇಳಾ ಎಲೆ ಅಯ್ಯ? ಭಕ್ತಿಕಾರಣದ ಇಚ್ಛೆಗೆ ಬಂದ ಬಳಿಕ ಉಪ
ಚಾರಕ್ಕೆ ತೆರಹುಂಟೆ? ಕಪಿಲ ಸಿದ್ಧಮಲ್ಲಿನಾಥ ಬಿಜಯಮಾಡು ಕರುಣ
ಗಳರಸಾ ॥೫೫॥

ಈ ಹೀಗೆಂದು ಸಿದ್ಧರಾಮಯ್ಯ ದೇವರು ಬಿನ್ನೈಸಲು, ಅದಕ್ಕೆ
ಪ್ರಭುದೇವರು ಕೊಟ್ಟ ಪ್ರತ್ಯುತ್ತರ.

ಭೃತ್ಯನಿದ್ದ ತಾವಿಂಗೆ ಕರ್ತು ಬಂದರೆ ಅತ್ತಿತ್ತ ಹರಿಯದೆ, ನಂಬ
ದೇಕು ನೋಡಾ! ಕರ್ತನ ಕಂಡು ಭೃತ್ಯನುರಿಯನುಗುಳಿದರೆ, ಬಳಿಕ
ಕರ್ತೃತನ ಭೃತ್ಯಭಾವಕ್ಕೆ ಸಂಬಂಧವೇನು? ತಪ್ಪಿ ತಪ್ಪಿ ತಿದ್ದಿಕೊಂಡಿಹೆ
ನೆಂದರೆ ಹಸನಾಗಬಲ್ಲುದೆ? ಗುಹೇಶ್ವರ ಲಿಂಗನ ಶರಣನಾರೆಂಬುದ ನೀನೆತ್ತ
ಬಲ್ಲೆ ಹೋಗಾ ಮರುಳ ಸಿದ್ಧರಾಮಾ? ॥೫೬॥

ಈ ಹೀಗೆಂದು ಪ್ರಭುದೇವರು ನಿರೂಪಿಸಲು, ಸಿದ್ಧರಾಮಯ್ಯ
ದೇವರು ನೊಂದು ಅತ್ಯಂತ ಭೀತಿಯನೈದಿ, ಬಿನ್ನೈಸಿದ ಪ್ರಸ್ಥಾವದ ವಚನ॥

ಎನ್ನ ಒಳಗು ಮಾಡಿ ನೋಡುವಿರಿ. ಎನ್ನಲ್ಲೇನುಂಟಯ್ಯ? ನುಡಿ ಇಲ್ಲದ
ಭವ ನೀನು ನುಡಿಗಲಿತನೆಂದರೆ, ನಿಮ್ಮ ನೊಡಂಬಡಿಸಲಾನು ಸಮರ್ಥನೆ?

ಷ್ಟಯೋಗಿ, ಪರಮಾನಂದಯೋಗಿ, ಸಕಲ ಕರಣಗುಣ ರಹಿತಯೋಗಿ, ಸರ್ವೇಂದ್ರಿಯ ಸುಖ ನಿರ್ಮಲಯೋಗಿ. ಸಂಸಾರ ವನದಾವಾನಲಯೋಗಿ, ಮಾಯಾಹರ ಯೋಗಿ, ಮಾಯಾ ಮಪ ಮೂರ ಮಾಯಾ ಮವ ಮಥನಯೋಗಿ, ಸಗುಣಯೋಗಿ, ಸನ್ನಿಧಾನಯೋಗಿ, ನಿರ್ಗುಣಯೋಗಿ, ನಿರಂಜನಯೋಗಿ, ಸಕಲ ನಿಃಕಲತತ್ವ ಶಿರೋರತ್ನಯೋಗಿ, ಅಖಂಡ ಪರಿಪೂರ್ಣಯೋಗಿ, ಅಪ್ರಮಾಣ ಗುಣಭರಿತಯೋಗಿ, ಅಪ್ರತರ್ಕ್ಯ ಚಾರಿತ್ರಯೋಗಿ, ಅಸಾಧ್ಯ ಸಾಧಕಯೋಗಿ, ಅಭೇದ್ಯಭೇದಕಯೋಗಿ, ಸುಜ್ಞಾನ ಪ್ರಭಾಮಯಯೋಗಿ, ಮಹಾಜ್ಞಾನೈಕ್ಯ ಚೈತನ್ಯಯೋಗಿ, ಕಾಯಗುಣ ಧರ್ಮ ಕರ್ಮ ಸಂಹಾರಯೋಗಿ, ಬ್ರಹ್ಮಾಂಡ ಸಂದೋಹ ಸಂಭೂತ ಕಾರಣಯೋಗಿ, ನಿರವಯ ನಿರ್ಲೇಪ ನಿಃಪಾಪಯೋಗಿ, ಇಹಲೋಕ ಪರಲೋಕ ಗತಿ ರಹಿತಯೋಗಿ, ಎಂದು ಕೊಂಡಾಡಿ, ಆ ಸಿದ್ಧರಾಮಯ್ಯ ದೇವರ ಬಿಗಿದಪ್ಪಿಕೊಂಡ ಪ್ರಸ್ಥಾವದ ವಚನ॥

ನಿಮ್ಮಲ್ಲಿ ಸನ್ನಿಹಿತನಾಗಿ, ನಿಜವನರಿತು ಬೆರಸಿದ ಶಿವಯೋಗಿಯ ಕಂಡರಿ, ಎನ್ನ ಮನವಗಲಲಾರದಯ್ಯ! ಎನ್ನ ತನು ಒಪ್ಪದಿರಲಾರದಯ್ಯ! ಎನ್ನ ಶಬುದ ಹೊಗಳಿವಲ್ಲದೆ ಸೈರಿಸದಯ್ಯ. ಗುಹೇಶ್ವರ, ನಿಮ್ಮ ಶರಣ ಸಿದ್ಧರಾಮಯ್ಯನನಪ್ಪಿನೊಪ್ಪಳಿದು, ನಸೋ ನಸೋ ಎನುತಿರ್ದೆನು. ॥೮॥ ಮತ್ತಂ, ಕಾಯದೊಳಗೆ ಕಡಣವಿಲ್ಲ. ಪ್ರಾಣದೊಳಗೆ ಭಾವವಿಲ್ಲ. ಭಾವದೊಳಗೆ ಭ್ರಮೆ ಇಲ್ಲ. ನವನಾಳದೊಳಗೆ ಸುಳುಹು ಮುನ್ನಿಲ್ಲ. ಬ್ರಹ್ಮರಂಧ್ರದಲ್ಲಿ ಅರಿವರತ ಶಿವಯೋಗಿ ಗುಹೇಶ್ವರನ ಶರಣ ಸಿದ್ಧರಾಮಯ್ಯ, ನಿನ್ನ ಕಂಡೆನ್ನಭವಂ ನಾಸ್ತಿಯಾಯಿತ್ತು ಕೇಳಾ. ॥೯॥ ಮತ್ತಂ, ಯೋಗ ಶಿವಯೋಗವೆಂದೆಂಬರು. ಯೋಗವ ಹೊಲಬನಾರು ಬಲ್ಲರಯ್ಯ! ಹೃದಯ ಕಮಲಪತ್ರದಲ್ಲಿ ಭ್ರಮಿಸುವನ ಕಳಿದಲ್ಲದೆ, ಯೋಗವೆಂತಪ್ಪುದೋ? ಏಪತ್ತಿರಡಕ್ಷರವ ಲಿಪಿಯ ನೋಡಿ ನೋಡಿ, ಆರು ನೆಲೆಯ ಮೀರಿಪ್ಪ ಮನೆಮಾಡದೊಳಗೆ ಇರಬಲ್ಲರೆ ಅದು ಯೋಗ. ಸೋಹಂಮೆಂಬಲ್ಲಿ ಸುಳುಹಡಗಿ, ಮನ ನಷ್ಟವಾಗಿರಬಲ್ಲ ಕಾರಣ ಗುಹೇಶ್ವರ ಲಿಂಗದಲ್ಲಿ ನೀನು ಸ್ವತಂತ್ರ ಧೀರನೆಂಬುದು ಕಾಣ ಬಂದಿತ್ತು ಕಾಣಾ ಸಿದ್ಧರಾಮಯ್ಯ. ॥೬॥

ಈ ಹೀಗೆಂದು ಪ್ರಭುದೇವರು ನಿರೂಪಿಸಲು, ಅದಕ್ಕೆ ಸಿದ್ಧರಾಮಯ್ಯ ದೇವರ ಬಿನ್ನಹ.

ಯೋಗದ ಹೊಲಬ ನಾನೆತ್ತ ಬಲ್ಲೆನಯ್ಯ! ಯೋಗ ಶಿವಶಕ್ತಿ ಸಂಪುಟವಾಗಿಪ್ಪುದಲ್ಲದೆ, ಶಿವಶಕ್ತಿ ವಿಯೋಗವಾದ ಯೋಗವಿಲ್ಲವಯ್ಯ! ಹೃದಯ ಕಮಲದಲ್ಲಿ ಭ್ರಮಿಸದೆ ಇಪ್ಪಾತ ನೀನೆಯಲ್ಲದೆ ಎನಗೆ ಬೇರೆ ಸ್ವತಂತ್ರವಿಲ್ಲ ಕೇಳಾ ಕಪಿಲ ಸಿದ್ಧಮಲ್ಲಿಕಾರ್ಜುನ. ॥೫॥ ಉತ್ಪತ್ತಿ ಸ್ಥಿತಿ ಲಯವಿಲ್ಲದಭವ ನೀನು. ಕಂಡಯ್ಯ! ಎನಗೆ ಬೇರೆ ಸ್ವತಂತ್ರವಿಲ್ಲ ಕೇಳಾ. ನಿನ್ನ ಇಚ್ಛಾಮಾತ್ರದಿಂದ ನಾನಿಪ್ಪೆನು. ಹಿರಿಯ ನೀನೇ ದೇವಾ ಕಪಿಲ ಸಿದ್ಧಮಲ್ಲಿಕಾರ್ಜುನ ನಾನೇತರೊಳಗಪ್ಪೆನು ಹೇಳಾ ಪ್ರಭುವೆ. ॥೬॥

ಈ ಹೀಗೆಂದು ಸಿದ್ಧರಾಮಯ್ಯ ದೇವರು ಬಿನ್ನೈಸಲು, ಪ್ರಭುದೇವರು ನಿರೂಪಿಸಿದ ಪ್ರಸ್ಥಾವದ ವಚನ.॥

ಮನಮನ ಬೆರಸಿದವರೆಂತಿಪ್ಪರವರ ಪರಿಯನರಿಯು ಬಾರದು ಕೇಳಾ! ಇದಿರಿಂಗೆ ಇಚ್ಛೆಯರಿಯದಿಪ್ಪರು. ಒಳಗೆ ನೋಡಿದರೆ ಬಟ್ಟಬಯಲಲಿಪ್ಪರು. ಗುಹೇಶ್ವರನ ಶರಣರು ತಾವಿಲ್ಲದ ಮಹಿಮರೆಂಬುದೆ ನಿಸ್ಸಂದೇಹ ನೋಡಾ ಸಿದ್ಧರಾಮಯ್ಯ. ॥೭॥

ಈ ಹೀಗೆಂದು ಪ್ರಭುದೇವರು ನಿರೂಪಿಸಲು, ಅವಕ್ಕೆ ಸಿದ್ಧರಾಮಯ್ಯ ದೇವರ ಬಿನ್ನಹ.

ಅಪ್ಪುದನಲ್ಲದುದನೊಪ್ಪವ ಮಾಡುವಿರಿ. ಅಯ್ಯ ನಿನ್ನೊಲವು ಫಲವು ಕಂಡಯ್ಯ! ನೀನಿಂತು ನೋಡಿದವರವರಂತಿಪ್ಪುದಲ್ಲ ಪೆಂಬುದಕ್ಕಿ ಕಾಣಾ ಕಪಿಲ ಸಿದ್ಧಮಲ್ಲಿಕಾರ್ಜುನ. ॥೮॥

ಈ ಹೀಗೆಂದು ಸಿದ್ಧರಾಮಯ್ಯ ದೇವರು ಬಿನ್ನೈಸಲು, ಆ ಪ್ರಭುದೇವರು ಸಂತೋಷಿಸಿದ ಪ್ರಸ್ಥಾವದ ವಚನ.॥

ಸ್ವತಂತ್ರ ಪರತಂತ್ರಕ್ಕೆ ಆವುದು ಚಿನ್ಹ ನೋಡಾ! ತಾನೆಂಬುದನು. ಇದಿರೆಂಬುದ ಮರೆದು, ಭಾವ ದಗ್ಧವಾಗಿರ ಬಲ್ಲರೆ, ಅದು ಸ್ವತಂತ್ರ. ನೀನೆಂಬುದ ಧಿಕ್ಕರಿಸಿ, ತಾನೆಂಬುದ ನಿಃಕರಿಸಿ ಉಭಯ ಭಾವದಲ್ಲಿ ಸನ್ನಿಹಿತನಾಗಿರ ಬಲ್ಲಡೆ ಪರತಂತ್ರ. ಪರತಂತ್ರ ಸ್ವತಂತ್ರವೆಂಬರಡನು ನಿರಿಸದೆ ತನ್ನ ಮರೆದಿಪ್ಪನೆ ಉಸವಾತೀತನು. ಗುಹೇಶ್ವರನ ಶರಣರು ಧೀರವಿಲ್ಲದ ಸಿದ್ಧೇಸ್ವರಿಗಳೆಂಬುದು ಇಂದಿನಗೆ ಕಾಣ ಬಂದಿತ್ತು ನೋಡಾ ಸಿದ್ಧರಾಮಯ್ಯ. ॥೯॥

ನೀನು ನಿರ್ದೋಷಿ ಎಂದು ಎನಗೆ ಅರಿಯು ಬಂದಿತ್ತೆಂದು ಪ್ರಭು ದೇವರು ನಿರೂಪಿಸಲು, ಅವಕ್ಕೆ ಸಿದ್ಧರಾಮಯ್ಯ ದೇವರು ಬಿನ್ನೈಸಿದ ಪ್ರಸ್ತಾವದ ವಚನ॥

ಮಾತು ಕನ್ನಡ್ಡರ ದೇಹ ಹಿಂಗದು. ನೆನಹು ಕನ್ನಡ್ಡರ ಪ್ರಾಣಸೂತಕ ಬಿಡದು. ಕಾಯದ ಜೀವದ ಹೊಲಿಗೆಯ ಸಂದ ಬಿಚ್ಚಲರಿಯದವನು ಆನು ನಿರ್ದೋಷಿ ಎಂದರೆ ನಗರೇ ನಿಮ್ಮ ಪ್ರಮಥರು? ಎನ್ನ ಅಂತರಂಗದಲುಳ್ಳ ಅವಗುಣವ ಹಿಂಗಿಸಿ ನಿನ್ನಂತೆ ಮಾಡಿದಡಾನುಳುವೆನಲ್ಲದೆ ಬೇರೆ ಗತಿಯ ಕಾಣೆ ನೋಡಯ್ಯ. ಕಪಿಲ ಸಿದ್ಧಮಲ್ಲಿನಾಥ ಹಿಂದೆ ಇಲ್ಲವಹೆನು ಮುಂದೆ ತಪ್ಪೆನು. ॥೭೦॥

ಈ ಬಿನ್ನಹಕ್ಕೆ ಪ್ರಭುದೇವರು ಮಚ್ಚಿ ಆ ಸಿದ್ಧರಾಮಯ್ಯ ದೇವರ ಕೈವಿಡಿದುಕೊಂಡು, ಏಕಾಂತ ಸಮಾಧಿಸ್ಥಾನಕ್ಕೆ ಬಿಜಯಂಗೈದ ಪ್ರಸ್ತಾವದ ವಚನ.॥

ಅಹುದಹುದು. ಭಕ್ತಿಭಾವದ ಭಜನೆ ಎಂತಿಹುದೆಂದರೆ, ಅಂತರಂಗದ ಅರುಹಿಂಗೆ ಆಚಾರವೇ ಕಾಯ. ಆಚಾರ ಕಾಯವಿಲ್ಲದಡೆ, ಅರಿವಿಂಗಾಶ್ರಯವಿಲ್ಲ. ಅರಿವು ಆಚಾರದಲ್ಲಿ ಸಮಪೇಧಿಸಿದ ಲಿಂಗೈಕ್ಯನ ಕ್ರಿಯಾಬದ್ಧನೆಂದು ನುಡಿದರೆ, ಪಂಚ ಮಹಾ ಪಾತಕ. ನಿನ್ನ ಅರಿವಿಂಗೆ ಆಚಾರಕ್ಕೆ ಆಳಾಗಿ ನಮ್ಮ ಗುಹೇಶ್ವರನು ನಿನ್ನ ಕೈವಶಕ್ಕೆ ಒಳಗಾದನು. ನಿನ್ನ ಸುಖಸಮಾಧಿಯ ತೋರಬಾರಾ ಸಿದ್ಧರಾಮಯ್ಯ ॥೭೧॥

ಇಂತು ಸಿದ್ಧರಾಮಯ್ಯ ದೇವರ ಕೈವಿಡಿದುಕೊಂಡು, ಪ್ರಭುದೇವರು ಏಕಾಂತ ಸಮಾಧಿಗೆ ಬಿಜಯಂಗೈವ ಪ್ರಸ್ತಾವದೊಳು ಸಿದ್ಧರಾಮಯ್ಯ ತಂದೆಗಳು ಬಿನ್ನೈಸಿದ ಪ್ರಸ್ತಾವದ ವಚನ.॥

ಎಮ್ಮನಲ್ಲಸೊಲಿದು ಒಲಿಸಿ ಕಾಡುತ್ತಿದ್ದರಿ, ಬಾರಾ ಬಾರಾ ಎಂದೆನ್ನ ಕರಣ ಹರಣವ ತೋರಿದರಿ, ತಾನೇ ಒಲಿದು ಬಂದೆನ್ನ ತಲೆಯ ಹಿಡಿದು. ನೆಗಹಿ ಎನ್ನ ಮನೆಗೆ ಬಂದ ಕಪಿಲ ಸಿದ್ಧಮಲ್ಲಿನಾಥನ ಒಲುಮೆಯ ಸೊನವನೇನೆಂದುಪಮಿಸುವೆನು? ॥೭೨॥

ಇಂತು ಪ್ರಭುದೇವರು ಮಠಕ್ಕೆ ಬಿಜಯಂಗೈದಲ್ಲಿ ಆ ಸಿದ್ಧರಾಮಯ್ಯ ದೇವರು ತಮ್ಮ ಪೀಠದ ಕೃಪೆಯಿಂದ ಬಂದರೆಂದು ಬಿನ್ನೈಸಿದ ಪ್ರಸ್ತಾವದ ವಚನ ॥

ಅಂಗವನದು ನಿಂದವನೆಂದು ನಾನರಿಯೆ. ಘನಲಿಂಗದಲ್ಲಿ ಸಲೆ ಬೆರೆದವನೆಂದು ನಾನರಿಯೆ. ಆವ ವೇಷದಲ್ಲಿ ನೀ ಬಂದು ನಿಂದಡಾವ ನಾನರಿಯೆ. ಕ್ರೋಧವೆಂಬ ಸಂಸಾರ ಸಾಗರದಲ್ಲಿ ಸಾಧನೆಯ ಮಾಡಬಾರದು ಪ್ರಭುದೇವರ ಸುಳುಹು ಅಘಟಿತವಾಯಿತ್ತು ಕಪಿಲ ಸಿದ್ಧಮಲ್ಲಿಕಾರ್ಜುನ. ॥೭೩॥

ಇಂತು ಸಿದ್ಧರಾಮಯ್ಯ ದೇವರು ಪ್ರಭುದೇವರಿಗೆ ತಮ್ಮ ಹೃದಯಕಮಲವೆಂಬ ಸಿಂಹಾಸನವನ್ನಿಕ್ಕಿ ಪಾದಾರ್ಚನೆಯಮಾಡಿ, ಅಷ್ಟವಿಧಾರ್ಚನೆ ಷೋಡಶೋಪಚಾರದಿಂದರ್ಚಿಸಿ, ಪಾದೋದಕವಂ ಕೊಂಡು ಪರಮ ಪುರುಷನನ್ಯೈದಿದ ಪ್ರಸ್ತಾವದ ವಚನ.॥

ಅಯ್ಯ ಅಯ್ಯ ನೀವು ಬಾರದಿರ್ದಡೆ ಅಂತು ಹಂಬಲಿಸುತ್ತಿದೆ. ನೀನೆನ್ನ ಹಂಬಲವ ಕೇಳಿ ಕರುಣದಿಂದೆ ಭೋರನೆ ಬಂದರೆ ಆನು ತಳವೆಳಗಾಗಿ ಅವಗುಣವೆಂಬ ರಜವ ಕಳೆದು, ಕಂಬಳಿಯ ಪೀಠವನೊಲ್ಲದೆ ಹೃದಯ ಪೀಠವನಿಕ್ಕಿ ಮೇಲುಪ್ಪರಿಗೆಯ ಒರತೆಯ ಅಗ್ಗಣಿಯ ತಂದು, ಪಾದಾರ್ಚನೆಯ ಮಾಡಿ, ಎರಡೆಸಳ ಕಮಲವನೆರಡು ಪಾದಕ್ಕೆ ಪೂಜಿಸಿ, ಕಂಗಳ ತಿರುಳ ತೆಗೆದು, ಆರತಿಯನೆತ್ತಿ, ಉಸಿರ ನುಂಗಿದ ಪರಿಮಳದ ಧೂಪವ ಬೀಸಿ, ನೆತ್ತಿಯಾ ಪರಿಯಾಣದೊಳಿಟ್ಟು, ಬೋನವ ಗಡಣಿಸಿದರೆ, ಸುಯಿಧಾನ ಸನೆಯುಡೆ ಆರೋಗಣೆಯ ಮಾಡಿ ಉಂಡು, ಬಾಯ್ದೊಳೆದರೆ ಸಂದೇಹವಾದುದೆಂದು ಮೇಲು ಸೆರಗಿನೊಳು ತೊಡೆದುಕೊಂಡು, ಬಾಯ ನುಚ್ಚಳ ದೆಗೆಯದೆ, ತ್ರಿಕರಣವೆಂಬ ತಾಂಬೂಲವನವಧರಿಸಿದ ಭಾವದ ಕನ್ನಡವ ಹರಿದು ಹಾಯ್ದುದಾತನ ಪಾದಕ್ಕೆ ನಾನು ಶರಣೆಂದು ಪಾದೋದಕವ ಕೊಂಡೆ. ಅತನ ಪ್ರಸಾದಕ್ಕೆನ್ನ ಸೆರಗ ಹಾಸಿ ಆರೋಗಿಸಿ ಸುಖಿಯಾದೆನು. ಕಪಿಲಸಿದ್ಧಮಲ್ಲಿಕಾರ್ಜುನಯ್ಯ ನಿಮ್ಮ ಶರಣ ಪ್ರಭುದೇವರ ಕರುಣವೆನಗೆ ಸಾಧ್ಯವಾದ ಪರಿಯನೇನೆಂದುಪಮಿಸುವೆನು? ॥೭೪॥

ಇಂತು ಪ್ರಭುದೇವರ ಶ್ರೀಪಾದವನು ಅಷ್ಟವಿಧಾರ್ಚನೆ ಷೋಡಶೋಪಚಾರದಿಂದ ಪೂಜಿಸಿದ ಸಿದ್ಧರಾಮಯ್ಯ ದೇವರು ಕೃಪೆಯಿಂದಲೆನ್ನ ಶೋಧಿಸಿ ಎಂದು ಬಿನ್ನೈಸುವ ಪ್ರಸ್ತಾವದ ವಚನ. ॥

ಆದಿಯಲ್ಲಿ ನಿಮ್ಮಿಂದಲಾದೆನಯ್ಯ! ಅನಾದಿಯಲ್ಲಿ ನಿಮ್ಮಲ್ಲಿ ತನ್ನನಾಗಿ ಇದ್ದೆನಯ್ಯ! ನಿಮ್ಮ ಹಸ್ತ ಮುಟ್ಟಿದಲ್ಲಿ ನಿಮ್ಮನೆನ್ನ ಮನದೊಳ

ಗಟ್ಟುಕೊಂಡಿದ್ದೆನಯ್ಯ! ಕಾಯವೆಂಬ ಕಪಟವನೊಪ್ಪಿ ನಿಮ್ಮ ನರಸಿ ಕೊಂಡಿದ್ದರೆ. ನಿನ್ನ ಬೆಂಬಳಿಯ ಸಂಪು ಕಂಡೆನಯ್ಯ! ಕಪಿಲ ಸಿದ್ಧಮಲ್ಲಿ ನಾಥಯ್ಯ, ಎನ್ನ ಅಂತರಂಗವ ಶುದ್ಧವ ಮಾಡಿ ತಿಳುಹಾ ನಿಮ್ಮ ಧರ್ಮ ॥೬೫॥

ಈ ಹೀಗೆಂದು ಸಿದ್ಧರಾಮಯ್ಯ ದೇವರು ಬಿನ್ನೈಸಲು, ಅದಕ್ಕೆ ಪ್ರಭು ದೇವರ ನಿರೂಪ.

ಅವಿಯಲ್ಲಿ ಗುರುಬೀಜವಾವ ಪಿಂಡಕ್ಕೆ ಅನಾದಿ ಎಂಬುದನೊ ಬ್ಬರು ತಿಳುಹಲುಂಟೆ? ಅವಿ ಕಾಯ ಅನಾದಿ ಪ್ರಾಣವಾಗಿಪ್ಪ ಯೋಗವ ಭೇದಿಸಿ ತನ್ನೊಳಗೆ ತಾನೆ ತಿಳಿದು ನೋಡಲು, ಕೋಹಂ ಸೆಂಬುದು ತಾನೆ ಸತ್ಯ ನೋಡಾ! ಗುಹೇಶ್ವರಲಿಂಗದ ನಿಲವು ಹೇಳಿ ಕಂಡಿಹೆನೆಂದಡೆ ಅಸಾಧ್ಯ ಕಾಣಾ ಸಿದ್ಧರಾಮಯ್ಯ ॥೬೬॥

ಈ ಹೀಗೆಂದು ಪ್ರಭುದೇವರು ನಿರೂಪಿಸಲು ಅದಕ್ಕೆ ಸಿದ್ಧರಾಮ ದೇವರ ಬಿನ್ನಹ.

ಎಲೆ ಅಯ್ಯ ನಿನ್ನ ಕಂಡ ಬೆಳಗಿನ ಪರಿಯ ಕೇಳು ಕಂಡಾ! ನಾನಾ ರೆಂಬುವ ತಿಳಿದು ನೋಡಿ ಕಂಡುಕಂಡು ಬೆಳಗು ಕಾಂಬ ಪರಿ ಎಂತು ಹೇಳಾ! ಕಂಡುವ ಕಂಡು, ಕಾಯದೊಳಗೆ ಸಂತವಿಡುವ ಪರಿ ಎಂತಯ್ಯ! ಕಪಿಲ ಸಿದ್ಧಮಲ್ಲಿನಾಥಯ್ಯ, ನೀಸೆನ್ನ ಮನವ ತಿಳಿವಡೆ, ಅಸಾಧ್ಯ ಉಂಟೆ ದೇವರ ದೇವಾ ॥೬೭॥

ಈ ಹೀಗೆಂದು ಸಿದ್ಧರಾಮಯ್ಯ ದೇವರು ಬಿನ್ನೈಸಲು, ಅದಕ್ಕೆ ಪ್ರಭು ದೇವರು ನಿರೂಪಿಸಿದ ವಚನ. ॥

ತನ್ನನರಿಯೆನೆಂಬುದು ಅಜ್ಞಾನ ನೋಡಾ! ಅರಿಯದೆ ಅಜ್ಞಾನವನ ಳಿಗಳೆದ, ಜ್ಞಾನವ ಕಾಣೆನೆಂಬುದು ವಿಪರೀತ ಭಾವ ನೋಡಾ! ಎಲ್ಲ ವನು ತೋರುವ ಘನವನೆಲ್ಲಿಯೂ ಕಾಣಬಾರದು. ಕಾಣಬಾರದ ನಿಜವ ತೋರಬಾರದು. ತೋರಬಾರವ ಮಹವ ತಿಳಿಯಬಹುದೆ? ಗುಹೇಶ್ವರ ಲಿಂಗದಲ್ಲಿ ಬಯಕೆಯುಳ್ಳನ್ನಕ್ಕರ ತವಕವಿಡಿಗೊಂಡಿಪ್ಪ ಕಾರಣ, ತಿಳುಹ ಲಿಲ್ಲವೆಂಬುವ ಸಿನ್ನ ನೀ ತಿಳಿದು ನೋಡಾ ಸಿದ್ಧರಾಮಯ್ಯ ॥೬೮॥

ಈ ಹೀಗೆಂದು ಪ್ರಭುದೇವರು ನಿರೂಪಿಸಲು ಅದಕ್ಕೆ ಸಿದ್ಧರಾಮಯ್ಯ ದೇವರು ಬಿನ್ನೈಸಿದ ಪ್ರಸ್ಥಾವದ ವಚನ ॥

ಕಂಡ ಕನಸು ದಿಟವಾಗಿ ಕಂಡೆನೆಂಬೆ. ಕಂಡೆನೆಂಬುದು ಬಿನ್ನಪವು. ಕಂಡುವ ಕಾಣೆನೆಂಬುವ ಎರಡನು ಅರಿಯದೆ, ತವಕ ತಲ್ಲಣಕ್ಕೆ ಎಡೆಯಾದೆನು. ತವಕವ ಕೂಟ ನಿಮ್ಮಲ್ಲಿ ತದ್ಗತವಾದೆನು. ಕಪಿಲ ಸಿದ್ಧಮಲ್ಲನಾಥಯ್ಯ, ನಿಮ್ಮ ಕರುಣವೆನಗೆ ಸಾಧ್ಯವಾಯಿತ್ತು ॥೬೯॥

ಕೂಡುವ ತವಕವೆ ನಿಮ್ಮಲ್ಲಿ ಸಮರಸವಾಯಿತ್ತೆಂದು ಸಿದ್ಧರಾಮ ಯ್ಯದೇವರು ಬಿನ್ನೈಸಲು, ಅದಕ್ಕೆ ಪ್ರಭುದೇವರು ನಿರೂಪಿಸಿದ ಪ್ರಸ್ಥಾವದ ವಚನ ॥

ಬಯಕೆ ಎಂಬುದು ದೂರದ ಕೂಟ. ಬಯಸೆನೆಂಬುದು ಕೂಟದ ಸಂದು. ಈ ಉಭಯವು ಕಪಟದ ಕನ್ನಡ ವಲ್ಲದೆ ಸಹಜವಲ್ಲ. ಕೂಡಿ ಕಂಡ ಪರಿಯೆಂತು ಹೇಳಾ! ಇನ್ನು ಲಿಂಗೈಕ್ಯವನು ಕೂಪ ತಾವಿನಲ್ಲಿ ಸಂಪಶನಾನೆನೆಂಬ ಮಾತು ಮೆಚ್ಚುವನೆ ನಮ್ಮ ಗುಹೇಶ್ವರಲಿಂಗವು? ॥೭೦॥

ಇಂತು ಲಿಂಗದಲ್ಲಿ ಕೂಪರಾಗಿದ್ದಲ್ಲಿ ಭೇದ ಬುದ್ಧಿ ಎಡೆಗೊಂಡಿಪ್ಪು ದಲ್ಲದೆ, ಸಮರಸಭಾವವಿಲ್ಲೆಂದು ಪ್ರಭುದೇವರು ನಿರೂಪಿಸಲು, ಅದಕ್ಕೆ ಸಿದ್ಧರಾಮಯ್ಯ ದೇವರು ಬಿನ್ನೈಸಿದ ಪ್ರಸ್ಥಾವದ ವಚನ॥

ನೀ ಕೂಪನಾಗಿದ್ದಲ್ಲಿ ಕೂಪೆ ನೋಡಯ್ಯ! ನೀ ಒಲ್ಲದಿದ್ದರೆ ಒಲ್ಲೆ ನೋಡಯ್ಯ! ಎನ್ನರಿವು ಮರವೆ ಇಬ್ಬರಿಗೂ ಸಮ ನೋಡಯ್ಯ. ಎನ್ನ ಬಯಕೆಯೊಳಗಣ ಬಯಕೆಯ ನಿಧಾನವು ನೀನೆಂದು ಕಂಡ ಬಳಿಕ ಬಯಸುವಾತ ನೀನೆ ಕಾಣಾ ಕಪಿಲ ಸಿದ್ಧಮಲ್ಲಿನಾಥಯ್ಯಾ. ॥೭೧॥

ಈ ಹೀಗೆಂದು ಸಿದ್ಧರಾಮಯ್ಯ ದೇವರು ಬಿನ್ನೈಸಲು, ಅದಕ್ಕೆ ಪ್ರಭುದೇವರು ನಿರೂಪಿಸಿದ ಪ್ರಸ್ಥಾವದ ವಚನ॥

ಬಯಸುವ ಬಯಕೆ ನೀನಾದ ಪರಿ ಎಂತು ಹೇಳಾ! ಅರಸುವ ಅರಿಕೆ ನೀನಾದ ಪರಿ ಎಂತು ಹೇಳಾ! ಕಾಯವೆ ಲಿಂಗ, ಪ್ರಾಣವೆ ಶರಣನಾದ ಶರಣಂಗೆ, ಜೇಡೆ ದೇವಾಲಯವ ಮಾಡಿಸಲೇಕೆ ಹೇಳಾ? ಗುಹೇಶ್ವರ ಲಿಂಗವು ಸಾಧ್ಯವಾಯಿತ್ತೆಂಬುದ ಮಾತಿನಲ್ಲಿ ಕಂಡೆನಲ್ಲದೆ ಕಾಯದಲ್ಲಿ ಕಾಣೆ ನೋಡಾ ಸಿದ್ಧರಾಮಯ್ಯ. ॥೭೨॥

ಈ ಹೀಗೆಂದು ಪ್ರಭುದೇವರು ನಿರೂಪಿಸಲು ಅದಕ್ಕೆ ಸಿದ್ಧರಾಮಯ್ಯ ದೇವರು ಬಿನ್ನೈಸಿದ ಪ್ರಸ್ಥಾವದ ವಚನ॥

ಅಣುವಿನೊಳಗೆ ಅಣುವಾಗಿಪ್ಪಿರಿ. ಎಲೆ ದೇವಾ ನೀವು. ಮನದೊ
ಳಗೆ ಘನವಾಗಿಪ್ಪಿರಿ. ಎಲೆ ದೇವಾ. ಜಗದೊಳಗೆಲ್ಲಿಯು ನೀವಿಲ್ಲದೆಡೆ
ಯುಂಟೆ? ಎಂಬತ್ತುನಾಲ್ಕು ಲಕ್ಷ ಶಿವಾಲಯಂಗಳ ನೀವು ಮಾಡಿ ಬೆಳಗು
ವುದ ಕಂಡು ನಾನು ಮಾಡಿದೆನಹುದೆ. ಕಪಿಲ ಸಿದ್ಧಮಲ್ಲಿನಾಥಯ್ಯ
ನನಗೆ ಬೇಕಿ ಸ್ವತಂತ್ರವಿಲ್ಲವೆಂದರಿಯೆನು. ॥೮೩॥

ಈ ಹೀಗೆಂದು ಸಿದ್ಧರಾಮಯ್ಯ ದೇವರು ಬಿನ್ನೈಸಲು, ಅದಕ್ಕೆ
ಪ್ರಭುದೇವರ ಪ್ರತ್ಯುತ್ತರ.

ಕಡಿನಾಡ ಲಿಂಗವ ನಡುನಾಡಿಗೆ ತಂದೆನೆಂಬೆಂಬ ಅಹಂಕಾರ ಮುಂದು
ಸೊಂದು ಇದೆಯಲ್ಲ! ಎಂಬತ್ತುನಾಲ್ಕು ಲಕ್ಷ ಶಿವಾಲಯಂಗಳೆಂಬ ಸಿಯಲ
ಪ್ಪನು ಇದೆನು ಹೇಳಾ? ಆ ಮಹಾ ಘನಲಿಂಗಕ್ಕೆ ಜಗದ ಜೀವರಾ
ತಿಗಳು ಶಿವಾಲಯವ ಮಾಡಬಲ್ಲವೆ? ನಿನ್ನ ಲಕ್ಷವ ಮೇಲೆ ತೊಂಬತ್ತಾರು
ಸಾವಿರ ಲಿಂಗವ ನಿನ್ನ ಎದೆಯಲ್ಲಿ ಇರಿಸಿಕೊಳ್ಳಲರಿಯದ ಕಾರಣ ಗುಹೇ
ಶ್ವರ ಲಿಂಗವು ನಿನ್ನ ತಪ್ಪಿಸಿ ಹೋದುದ ಸುದೆಯಲ್ಲ ಸಿದ್ಧರಾಮಯ್ಯ. ॥೮೪॥

ಈ ಹೀಗೆಂದು ಪ್ರಭುದೇವರು ನಿರೂಪಿಸಲು, ಅದಕ್ಕೆ ಸಿದ್ಧರಾ
ಮಯ್ಯ ದೇವರ ಬಿನ್ನಹ.

ಸಕಲ ಲಿಂಗವ ಹಿಡಿದು ಅಗಲಡೆ ನಡೆ ಎಂದಿರಾಗಿ ನಡೆವುತ್ತಿ
ರ್ದೆನು. ಲಿಂಗ ಪ್ರತಿಷ್ಠೆಯ ಮಾಡೆಂದು ಎನಗೆ ನಿರೂಪಿಸುತ್ತಿರ್ದ
ಕಾರಣ ಮಾಡುತ್ತಿರ್ದೆನಲ್ಲದೆ ಎನಗೆ ಬೇರೆ ಸ್ವತಂತ್ರ ಉಂಟೆ? ಹಿಂದೆ
ನೀವು ಕೊಟ್ಟ ನಿರೂಪ ನಿಮಗೆ ಹುಸಿಯಾದರೆ ಇನ್ನು ಮುಂದೆ ಸ್ವಯ
ವಪ್ಪಂತೆ ನಡಿಸಾ ಕಪಿಲ ಸಿದ್ಧಮಲ್ಲಿನಾಥಯ್ಯ. ॥೮೫॥

ಇಂತು ನಾನು ಮಾಡುವುದೆಲ್ಲವು ನಿಮ್ಮಾಧೀನವಲ್ಲದೆ, ಎನಗೆ
ಬೇರೆ ಸ್ವತಂತ್ರ ಉಂಟೆ? ಮುಂದೆ ನಿಮ್ಮಲ್ಲಿ ನಿಜವಳವಡುವಂತೆ ಮಾಡಾ.
ಎಂದುದ ಸಿದ್ಧರಾಮಯ್ಯ ದೇವರು ಬಿನ್ನೈಸಲು, ಅದಕ್ಕೆ ಪ್ರಭುದೇ
ವರು ನಿರೂಪಿಸಿದ ಪ್ರಸ್ತಾವದ ವಚನ॥

ಕೆರೆ ದೇಗುಲಂಗಳೆಲ್ಲವು ಹಿಂದಣ ಅಡಿವಜ್ಜೆಗೊಳಗು. ಕರ್ಮ ಕಾಂಡ
ಯೋಗಂಗಳೆಲ್ಲವು ಭವದ ತೆಕ್ಕೆಗೆ ಒಡನು. ಹಿಂದಣ ಮುಂದಣ ಸಂದ
ನಳಿದು, ಗುಹೇಶ್ವರ ಲಿಂಗದಲ್ಲಿ ಸಂದಿರಬೇಕು ಸಿದ್ಧರಾಮಯ್ಯ. ॥೮೬॥

ಈ ಹೀಗೆಂದು ಪ್ರಭುದೇವರು ನಿರೂಪಿಸಲು, ಅದಕ್ಕೆ ಸಿದ್ಧರಾ
ಮಯ್ಯ ದೇವರ ಬಿನ್ನಹ.

ಕೃಷಿಯ ಮಾಡಿ ಉಣ್ಣಾದೆ ಹಸಿವು ಹರಿವ ಪರಿ ಇನ್ನೆಂತೋ? ಕರ್ಮ
ಯೋಗವ ಮಾಡದೆ ನಿರ್ಮಲ ಸುಚಿತ್ತವನರಿವ ಪರಿ ಇನ್ನೆಂತೋ?
ಬೇಯದೆ ಅರಸನವನುಂಬ ತಾವಾವುದು ಕಪಿಲ ಸಿದ್ಧಮಲ್ಲಿಕಾರ್ಜುನ
ಲಿಂಗಕ್ಕೆ? ॥೮೭॥

ಅದಕ್ಕೆ ಪ್ರಭುದೇವರು ನಿರೂಪಿಸಿದ ಪ್ರಸ್ತಾವದ ವಚನ॥

ಕರ್ಮವೇ ಪ್ರಾಣವೆಂದು ಮಾಡುವಾಗ ಜ್ಞಾನವನರಿವ ನೆಲೆ
ಬದ್ಧವಿನ್ನಾವುದು? ಸಾಪನ್ನಕ್ಕೆ ಸಾಧನೆಯ ಮಾಡಿ, ಕಾದುವ ತಾವಿ
ನ್ನಾವುದು? ಅರಿದುದನತಿಗಳೆದು ಮೇಲರಿದುದ ಕರಿಗೊಳುತ್ತ ತುಪ್ಪವ
ನೀಡಿದ ತಂಡುಲದಂತೆ ಕಾಯದ ಪಸೆ ಶುದ್ಧವಾಗಿರಬೇಕು ಗುಹೇಶ್ವರ
ಲಿಂಗವನರಿವುದಕ್ಕೆ ಸಿದ್ಧರಾಮಯ್ಯ. ॥೮೮॥

ಇದಕ್ಕೆ ಸಿದ್ಧರಾಮಯ್ಯ ದೇವರು ಬಿನ್ನೈಸಿದ ಪ್ರಸ್ತಾವದ ವಚನ॥

ಕೈಯಲ್ಲಿ ಹಿಡಿದು ಕಾಂಬುದು ಕರ್ಮದ ಪೂಜೆಯಲ್ಲವೆ? ಮನ
ದಲಿ ನೆನೆದು ಮಾಡುವದೆಲ್ಲವು ಕಾಯದ ಕರ್ಮವಲ್ಲದೆ? ಭಾವ ಶುದ್ಧ
ವನರಿವ ಪರಿ ಇನ್ನಾವುದು ಕಪಿಲ ಸಿದ್ಧಮಲ್ಲಿಕಾರ್ಜುನ? ॥೮೯॥

ಇದಕ್ಕೆ ಪ್ರಭುದೇವರು ನಿರೂಪಿಸಿದ ಪ್ರಸ್ತಾವದ ವಚನ॥

ಜೆನ್ನವನೊರೆಯ ಬಹುದಲ್ಲದೆ, ಬಣ್ಣವನೊರೆಯಬಹುದೆ? ಹೂವ್ವ
ನುಡಿಯ ಬಹುದಲ್ಲದೆ, ಗಂಧವ ನುಡಿಯಬಹುದೆ? ಕರ್ಮವ ಮಾಡ
ಬಹುದಲ್ಲದೆ ವಸ್ತುವನರಿಯಬಹುದೆ? ಗುಹೇಶ್ವರನ ನೆನೆಯ ಬಹುದಲ್ಲದೆ
ಲಿಂಗವು ತಾನಾಗಬಾರದು ಸಿದ್ಧರಾಮಯ್ಯ. ॥೯೦॥

ಅದಕ್ಕೆ ಸಿದ್ಧರಾಮಯ್ಯ ದೇವರ ಪ್ರತ್ಯುತ್ತರ.

ಬಣ್ಣವಿಲ್ಲದ ಚಿನ್ನ ನಾನುಕ್ತರ್ಹವಾದ ಪರಿ ಇನ್ನೆಂತಯ್ಯ!
ನೂಪೊಡೆದು ವಾಸನೆ ಮೂಡಿದ ತಾವಿನಲ್ಲಿ ವಾಸನೆ ನಿಂದುದಿಲ್ಲವೆ?
ಅಯ್ಯಾ, ಕ್ರಿಯಾ ಶುದ್ಧವಾದಲ್ಲಿ ಕಪಿಲ ಸಿದ್ಧಮಲ್ಲಿಕಾರ್ಜುನ ಲಿಂಗವು
ತಾನೆ ಶುದ್ಧವಾಗಿಪ್ಪನು. ॥೯೧॥

ಅದಕ್ಕೆ ಪ್ರಭುದೇವರು ಕೊಟ್ಟ ಪ್ರತ್ಯುತ್ತರ.

ರಾಗವಡಗಿ ತಾಮಸ ನಿಂದು ಅಹಂಕಾರದ ಗಿರಿಯುಡುಗಿ, ಮಾತಿನ ಬಣಬೆಯ ಮೆದೆಯ ಸುಟ್ಟು, ಕಾಯ ಕರ್ಮದಲ್ಲಿ ಸವೆಯುತ್ತ, ಜೀವ ಸಕಲ ಸಂಸಾರದಲ್ಲಿ ನೋವುತ್ತ, ಮತ್ತೆ ಭಾವ ಶುದ್ಧ ಉಂಟೆ ಗುಹೇ ಶ್ವರ ಲಿಂಗಕ್ಕೆ? ॥೨॥

ಇದಕ್ಕೆ ಸಿದ್ಧರಾಮಯ್ಯ ದೇವರು ಕೊಟ್ಟ ಪ್ರತ್ಯುತ್ತರ.

ನುಡಿದಿಹೆನೆಂಬ ಉಲುಹಿನ ಗಲಭೆಯ ತೋಟೆ ಬಡದು. ಉತ್ತಮ ಮಧ್ಯಮ ಕನಿಷ್ಠವೆಂದು ತಿರುಗಿ ಕಂಡಿಹೆನೆಂಬ ಕಾಲಿನ ಎಡೆಯಾಟ ಬಿಡದು. ಎನಗೆ ಗರ್ವ ಮೊದಲಾದವಲ್ಲಿ ನಿಮಗೆ ಗರ್ವ ವೆಗ್ಗಳವಾಯಿತ್ತು ಉಭಯವ ತೋಟೆಯ ನಾನಿನ್ನಾರಿಗೆ ಹೇಳುವೆ ಕಪಿಲ ಸಿದ್ಧಮಲ್ಲಿಕಾರ್ಜುನ? ॥೩॥

ಅದಕ್ಕೆ ಪ್ರಭುದೇವರು ನಿರೂಪಿಸಿದ ಪ್ರಸ್ಥಾವದ ವಚನ॥

ಪ್ಪೀರಕ್ಕೆ ತವರಾಜನ ಹೊಯಿದಲ್ಲಿ ಬೇರೆ ಲೇಸು ಕಷ್ಟವನರಿಸುವರೆ? ಅಂಗಕ್ಕೆ ತಿಮಿರವಾದಲ್ಲಿ ಅಂಗುಲಿ ಮುಟ್ಟಿ ಅಂಗವ ತಿಮಿರವ ಕೆಡಿಸಿದರೆ, ಅಂಗಕ್ಕೆ ಮಿಥ್ಯ ಉಂಟೆ? ಎನ್ನಂಗವು ತಾನಾದ ಕಾರಣ ನೀನೆಂಬ ನಾಮ ಬೇರಿಲ್ಲ, ಗುಹೇಶ್ವರ ಲಿಂಗವು ನೀನಾದ ಕಾರಣ. ॥೪॥

ಮತ್ತಂ, ಕರಜರಣಾದಿಗಳು ಬೇರಾದವಲ್ಲದೆ, ಅರಿದು ಮುಟ್ಟುವ ಪೊಂದೇ ಅತ್ಯವು. ಬಿಂದುವಿನೊಂದು ನಾರವಲ್ಲಿ ಸಸಿ ಹಲವು ನಾವು ಬೆಳೆವಂತೆ ಗುಹೇಶ್ವರ ಲಿಂಗದಲ್ಲಿ ನಾ ನೀನೆಂಬ ಭಾವವಿಲ್ಲ ಸಿದ್ಧರಾಮಯ್ಯ ॥೫॥

ಅವಕ್ಕೆ ಸಿದ್ಧರಾಮಯ್ಯದೇವರು ಕೊಟ್ಟ ಪ್ರತ್ಯುತ್ತರ.

ಭೂಮಿಯೊಂದೇ ಎಂಡಡೆ ಜಿಳಿವ ವೃಕ್ಷ ಹಲವು ತೆರನುಂಟು. ಉದಕ ಒಂದೇ ಎಂಡಡೆ, ಸವಿ ನಾರವ ಸಂಪದ ಬೇರುಂಟು. ನಿನ್ನ ಒಳಗು ನಾನಾದೊಡೆ ತಾಮಸದ ರಾಗ ವಿರಾಗವಾಗದು. ಕಪಿಲ ಸಿದ್ಧ ಮಲ್ಲಿಕಾರ್ಜುನ ಲಿಂಗವೆಂಬ ಪುರುಷ ರತಿ ಕೂಟಸ್ಥವಿಲ್ಲ ॥೬॥

ಇಂತು ನಿನ್ನೊಳಗೆ ನಾನಾದೊಡೆ ಲಿಂಗದಲ್ಲಿ ಏಕತ್ವ ಘಟಿಸದೆಂದು ಸಿದ್ಧರಾಮಯ್ಯ ದೇವರು ಬಿನ್ನೈಸಲು, ಘನ್ನ ವೃಕ್ಷಿಂದರಿವ ಲಿಂಗತ್ರ

ಯದ ಸಂಬಂಧವಲ್ಲದೆ ಘನಲಿಂಗದಲ್ಲಿ ಏಕತ್ವ ಘಟಿಸದೆಂದು ಪ್ರಭುದೇವರು ನಿರೂಪಿಸಿದ ಪ್ರಸ್ಥಾವದ ವಚನ.

ಕಂಗಳು ಜ್ಯೋತಿರ್ಲಿಂಗೈಕ್ಯದಲ್ಲಿ ಉಭಯ ಪ್ರತಿಷ್ಠೆಯ ಲಿಂಗ, ಪ್ರಸ್ಫುರಂಧ್ರದಲ್ಲಿ ಅಮೃತಲಿಂಗ ಉಂಟೆಂಬ ತ್ರಿವಿಧದ ಸಂದನಳಿಯಬೇಕು. ಸಿದ್ಧರಾಮಯ್ಯ ಗುಹೇಶ್ವರಲಿಂಗವನರಿಯಬೇಕು. ॥೯॥

ಅವಕ್ಕೆ ಸಿದ್ಧರಾಮಯ್ಯ ದೇವರ ಪ್ರತ್ಯುತ್ತರ.

ಕಾಯ ಸೊನೆಯರತಲ್ಲದೆ ಹಣ್ಣಿನ ಸೊನೆ ರಸ ಚಿನ್ಹ ದೋರದು. ಕಾಯದ ಕರ್ಮವ ಮಾಡಿ ಜೀವಜ್ಞಾನವನರಿದು, ತ್ರಿವಿಧ ಭಾವಶುದ್ಧಿ ಯಾದಲ್ಲದೆ ಮೇಲೆ ಕಾಣಲಿಲ್ಲ ಕಪಿಲ ಸಿದ್ಧಮಲ್ಲಿಕಾರ್ಜುನ ಲಿಂಗವಾ ॥೭॥

ಅವಕ್ಕೆ ಪ್ರಭುದೇವರು ಕೊಟ್ಟ ಪ್ರತ್ಯುತ್ತರ.

ಇಕ್ಷು ದಂಡಕ್ಕೆ ಕೀಳು ಮೇಲಲ್ಲದೆ, ಸರ್ಕರೆಯ ದಂಡಕ್ಕೆ ಕೀಳು ಮೇಲುಂಟೆ? ಪರುಷ ಪಾಷಾಣಕ್ಕೆ ಕೀಳು ಮೇಲಲ್ಲದೆ, ಕಡೆಯಾಣೆ ಗುಂಟೆ? ವಾರಿಗಲ್ಲು ಉಂಟು ಇಲ್ಲವೆಂಬ ಸಂದೇಹ ನಿಂದಲ್ಲಿ ಗುಹೇಶ್ವರಲಿಂಗವು ತಾನೆ ಸಿದ್ಧರಾಮಯ್ಯ ॥೮॥

ಹೀಗೆಂದು ಪ್ರಭುದೇವರು ನಿರೂಪಿಸಲು, ತ್ರಿವಿಧಲಿಂಗ ಸಂಬಂಧ ವಳವಡುವಂತೆ ಮಾಡಾ ಎಂದು ಸಿದ್ಧರಾಮಯ್ಯ ದೇವರು ಬಿನ್ನೈಸಿದ ಪ್ರಸ್ಥಾವದ ವಚನ.

ನಾನೇನ ಮಾಡುವದಿಲ್ಲವನು ನೀನೆಂದೆ ಇದ್ದೆನಯ್ಯ. ನಾನೇನ ಮಾಡುವದಿಲ್ಲವನು ನೀನೆಯಲ್ಲವೆಂದಡೆ ಅದು ಮಾಣಲಿ. ನಿಮ್ಮಾಣತಿ ಕಾಣಬಾರದ ಘನವ ಕಾಯದಲ್ಲಿ ಧರಿಸಿ ಹೇಳಬಾರದ ನಿಜವ ಮನದಲ್ಲಿ ಸೆಲೆಸೊಳಿಸಿ ತೋರಬಾರದ ಕುರುಹ ಎನ್ನರಿವಿನಲ್ಲಿರಿಸಿ, ಇನ್ನು ನಿಮ್ಮ ಕಾಂಬಂತೆ ಮಾಡಾ ಕಪಿಲ ಸಿದ್ಧಮಲ್ಲಿನಾಥಯ್ಯ. ॥೧೦॥

ಹೀಗೆಂದು ಸಿದ್ಧರಾಮಯ್ಯ ದೇವರು ಬಿನ್ನೈಸಲು, ಅದಕ್ಕೆ ಪ್ರಭುದೇವರ ಪ್ರತ್ಯುತ್ತರ.

ತೋರಬಾರದ ಘನವ ಹೇಳಲೆಂದೆನ್ನೈಯ್ಯ. ಹೇಳಬಾರದ ಘನವ ತೋರಲೆಂದಿನಯ್ಯ. ಶರ ಸಂಧಾನವ ಪರಿಯ ನೋಡಾ! ಗುಹೇಶ್ವರ ಲಿಂಗವು ಕಲ್ಪಿತವಲ್ಲ ನೋಡಯ್ಯ. ॥೧೧॥

ಪರಬ್ರಹ್ಮವೆಂಬುದನು ಕಲ್ಪಿಸಿ ಪೇಳಬಾರದು ನೋಡಯ್ಯ. ಕಲ್ಪಿಸಿ ತೋರಬಾರದೆಂದು ಪ್ರಭುದೇವರು ನಿರೂಪಿಸಲು, ಅದಕ್ಕೆ ಸಿದ್ಧರಾಮಯ್ಯ ದೇವರ ಬಿನ್ನಹ.

ಬೆರಸಿ ಬೆಚ್ಚಾತನ ಕಂಡೆನಯ್ಯ. ಆತನ ಬಟ್ಟೆಯ ಕಾಸೆ ನೋಡಯ್ಯ! ಶರೀರ ವಿಡಿದಿಪ್ಪ ಕತಕೋಟಿ ಜೀವಂಗಳ ಭೇದವನರಿಯೆನು. ನಿಮ್ಮ ನಾನೆತ್ತ ಬಲ್ಲೆನಯ್ಯ? ನೀವು ಮಾಡಿದ ಬೆಂಬಳಿಯಲ್ಲಿ ಹೊರೆಗಾಣೆದಿಪ್ಪೆನಲ್ಲದೆ ನಾ ಬೇರೆ ಕಾಂಬುದು ಹುಸಿ. ನೀ ತೋರಯ್ಯ ಎನಗೆ ಕಪಿಲ ಸಿದ್ಧಮಲ್ಲಿನಾಥಯ್ಯ. ॥೧೮॥

ಹೀಗೆಂದು ಸಿದ್ಧರಾಮಯ್ಯ ದೇವರು ಬಿನ್ನೈಸಲು, ಅದಕ್ಕೆ ಪ್ರಭುದೇವರು ನಿರೂಪಿಸಿದ ಪ್ರಸ್ಥಾವನ ವಚನ॥

ಅಭ್ಯಾಸದ ಮಾತಲ್ಲ, ಶ್ರೋತೃವ ಸುಖವಲ್ಲ, ಶಾಸ್ತ್ರದ ಅನುಭವ ಮಾತಲ್ಲ, ಒಡಗಣ ಮಾತಲ್ಲ, ಹೊರಗಣ ಮಾತಲ್ಲ. ಇವರಂಗವನರಿಯದೆ, ಅನುಭಾವವ ಮಾತಿ ಫಲವೇನಯ್ಯ? ಗುಹೇಶ್ವರ ಲಿಂಗವು ಉಪಮಾತೀತ ನೋಡಾ ಸಿದ್ಧರಾಮಯ್ಯಾ. ॥೧೯॥

ಇಂತು ಪರಬ್ರಹ್ಮನೆಂಬುದು ಆರಿಗು ತೋರಬಾರದ ಉಪಮಾತೀತವೆಂದು ಪ್ರಭುದೇವರು ನಿರೂಪಿಸಲು. ಅದಕ್ಕೆ ಸಿದ್ಧರಾಮಯ್ಯ ದೇವರು ಬಿನ್ನೈಸಿದ ಪ್ರಸ್ಥಾವದ ವಚನ॥

ಉಪಮೆ ಉನುಪಮೆ ಎಂಬುದು ನಿಮ್ಮಾಧೀನ ಕಂಡಯ್ಯ! ಹೇಳಿಪ ಕೇಳಿಪೆನೆಂಬುದು ನೀವೆ ಕಂಡಯ್ಯ! ಎನ್ನಂತರಂಗಕ್ಕೆ ಬಹಿರಂಗಕ್ಕೆ ಭಾವೆ ಕರ್ತಾರವೆ ಕಾರಣ ನಿಮ್ಮ ನಿಜವ ಹೇಳದಿರ್ದಡೆ, ಎಂತುಳಿವೆನಯ್ಯ ಕಪಿಲ ಸಿದ್ಧಮಲ್ಲಿನಾಥಯ್ಯ? ॥೧೦॥ ಮತ್ತಂ, ಕಾಯವಿಡಿದಿಹ ಸ್ಮಕ್ಕೆ ಕಾಮವೆ ಮೂಲ. ಜೀವ ವಿಡಿದಿವನ್ಮಕ್ಕು ಕ್ರೋಧವೇ ಮೂಲ. ಸ್ಥಾವರಿಯುಕ್ತನ್ಮಕ್ಕೆ ಸಕಲ ವಿಷಯಕ್ಕೆ ಆಸೆಯೇ ಮೂಲ. ಎನ್ನ ಆಸೆಯ ಪಾಶ ಗಾಸಿಮಾಡುತ್ತಿದೆ. ವಿಷಯೋಗವ ಬೇಸಿನ ತಾಪ ತೋನಾ ಕಪಿಲ ಸಿದ್ಧಮಲ್ಲಿಕಾರ್ಜುನ. ॥೧೦॥

ಹೀಗೆಂದು ಸಿದ್ಧರಾಮಯ್ಯ ದೇವರು ಬಿನ್ನೈಸಲು, ಅದಕ್ಕೆ ಪ್ರಭುದೇವರು ಕಾಯವ ಜೀವವ ಸಂದುಭೇದವ ವಿಸರಿಸಿ ತೋರುವ ಪ್ರಸ್ಥಾವದ ವಚನ॥

ದೇಹ ಭಾವವಳಿದಲ್ಲದೆ, ಜೀವ ಭಾವವಳಿಯದು. ಜೀವ ಭಾವ ಪಲ್ಲದೆ ಭಕ್ತಿ ಭಾವವಳವಡದು. ಭಕ್ತಿ ಭಾವವಳವಟ್ಟಲ್ಲದೆ, ಅರಿವು ತಲೆದೋರದು. ಅರಿವು ತಲೆದೋರಿದಲ್ಲದೆ, ಕುರುಹು ನಷ್ಟವಾಗದು. ಕುರುಹು ನಷ್ಟವಾದಲ್ಲದೆ, ಮಾಯೆ ಹಿಂಗದು. ಇದು ಕಾರಣ ಕಾಯವ ಜೀವದ ಹೊಲಿಗೆಯಳಿದ ಭೇದವ ತಿಳಿಯ ಬಲ್ಲರೆ ಗುಹೇಶ್ವರಲಿಂಗವ ಅರಿವು ಸಾಧ್ಯವಪ್ಪುದು ಕಾಣಾ ಸಿದ್ಧರಾಮಯ್ಯ. ॥೧೦॥

ಕಾಯದ ಜೀವದ ಸಂದು ಭೇದವಳಿದು, ನೋಡ ಬಲ್ಲರೆ, ನಿಜವು ಸಾಧ್ಯವಹುದೆಂದು ಪ್ರಭುದೇವರು ನಿರೂಪಿಸಲು, ಅದಕ್ಕೆ ಸಿದ್ಧರಾಮಯ್ಯ ದೇವರ ಬಿನ್ನಹ.

ನೀರು ಕ್ಷೀರದ ಸಂದುಗಳ ಹಂಸೆ ಬಿಚ್ಚಬಲ್ಲುದು ನೋಡಯ್ಯ! ದೇಹದ ಜೀವದ ಸಂದುಗಳ ನೀವು ಬಿಚ್ಚಬಲ್ಲಿರಲ್ಲದೆ ನಾನೆತ್ತ ಬಲ್ಲೆನಯ್ಯ? ನೀನಿಕ್ಕಿದ ತೊಡಕ ಬಿಡಿಸ ಬಾರದು. ನೀ ಬಿಡಿಸಿದ ತೊಡಕ ನಿಕ್ಕ ಬಾರದು. ಕಪಿಲ ಸಿದ್ಧಮಲ್ಲಿನಾಥಯ್ಯ ನೀನೆನ್ನ ಕಾಯವ ಜೀವವ ಹೊಲಿಗೆಯ ಬಿಡಿಸಾ ನಿಮ್ಮ ಧರ್ಮ. ॥೧೦೭॥

ಹೀಗೆಂದು ಸಿದ್ಧರಾಮಯ್ಯ ದೇವರು ಬಿನ್ನೈಸಲು, ಅದಕ್ಕೆ ಪ್ರಭುದೇವರು ನಿರೂಪಿಸಿದ ಪ್ರಸ್ಥಾವದ ವಚನ॥

ಕಾಯದ ಕಳವಳವ ಕಾಣೆನೆಂದಲ್ಲಿ ಹೋಯಿತ್ತು. ಜೀವದ ದುಷ್ಕೃತ ಮಾರನೆಂದಲ್ಲಿ ಹೋಯಿತ್ತು. ಕಾಯ ಜೀವವೆಂಬ ಸೂತಕ ಮನ ನಿರ್ಮಲವಾವಲ್ಲಿ ಹೋಯಿತ್ತು. ಗುಹೇಶ್ವರನೆಂಬ ಲಿಂಗವನರಿಯ ಬೇಕಾದರೆ, ನಿನ್ನೊಳಗೆ ತಿಳಿದು ನೋಡಾ ಸಿದ್ಧರಾಮಯ್ಯ. ॥೧೦೮॥ ನಿನ್ನೊಳಗೆ ತೊಳೆದು ನಿರ್ಮಲವ ಮಾಡಲು ಸರ್ವ ಸಂದೇಹವಳಿದು, ಶಿವತತ್ವ ಸಾಧ್ಯವಪ್ಪುದೆಂದು ಪ್ರಭುದೇವರು ನಿರೂಪಿಸಲು, ಅದಕ್ಕೆ ಸಿದ್ಧರಾಮಯ್ಯ ದೇವರ ಬಿನ್ನಹ.

ಅಯ್ಯ ಮನದ ರಜದ ಮಣ್ಣಗಳಿಮನವು ಕಾಂತಿಯ ಉದಕವ ತೆಗೆವೆನಯ್ಯ? ಜಲಕವನೆ ಮಾಡಿ ಯೋಗಕಂಪನಿಕ್ಕಿ ಹುದುಗುವೆನಯ್ಯ. ಅದನೊಂದು ಎಡೆಗೆ ತಂದು, ಬಟ್ಟೆ ಗಾಣವಲ್ಲಕ್ಕಿ ಹಿಳಿವೆನಯ್ಯ. ಹಿಳಿವ ರಸವ ಕಂಸ ಕೊಡುವ ಒಡೆಯ ನೀನೇ ಕಪಿಲಸಿದ್ಧ ಮಲ್ಲಿನಾಥಾ ॥೧೦೯॥

ಗ್ರಂಥಾಲಯ
ಬಿ ಂ. ಡಿ. ಇ. ಸಂಸ್ಥೆ
ಕ್ಷಣ ಎ. ಎ. ಪಾಟಿಯಿಂದ ಪೂಸ್ತಕ ಪಡೆದ
ವಚನ ಪಿತಾಮಹ ಡಾ॥ ಫ.ಗ .ಹಳಕಟ್ಟಿ ಸಂಶೋಧನ ಕೇಂದ್ರ

ಹೀಗೆಂದು ಸಿದ್ಧರಾಮಯ್ಯ ದೇವರು ಬಿನ್ನೈಸಲು, ಇವಕ್ಕೆ ಪ್ರಭು ದೇವರು ನಿರೂಪಿಸಿದ ಪ್ರಸ್ಥಾವದ ವಚನ ॥

ಮನವ ತೊಳೆದು, ನಿರ್ಮಲವ ಮಾಡಿಹೆನೆಂಬ ಯೋಗ ವೆಂತುಂಟೋ ? ಮನವ ಹಿಡಿದು ತಡೆದಿಹೆನೆಂಬವರ ನುರುಳ್ಮಾಡಿ ಕಾಡಿತ್ತು ನೋಡಾ ಮನವು. ಮನವ ವಿಕಲ್ಪಜ್ಞಾನದಿಂದ ಅರಿದು ಅದ ರುದ್ಧವ ಮಾಡಿಹೆನೆಂಬುದು ತಾನೆ ಮನ ನೋಡಾ! ನಮ್ಮ ಗುಹೇಶ್ವರ ಲಿಂಗವ ಅನುವನರಿದಿಹೆನೆಂಬರೆ ಮನವಿಲ್ಲದಿರಬೇಕು ನೋಡಾ ಸಿದ್ಧ ರಾಮಯ್ಯ ॥೧೧೦॥

ಹೀಗೆಂದು ಪ್ರಭುದೇವರು ನಿರೂಪಿಸಲು, ಅದಕ್ಕೆ ಸಿದ್ಧರಾಮಯ್ಯ ದೇವರ ಪ್ರತ್ಯುತ್ತರ.

ಮನವೆಂಬ ಸಂಕಲ್ಪವ ನರಿಯೆನು, ಸಂಕಲ್ಪ ಸಿದ್ಧಿಯಾಯಿತ್ತಾಗಿ. ಸಂಕಲ್ಪವೆಂಬ ಸಂಬಂಧವನರಿಯೆನು, ನಿಮ್ಮ ವಿಚಾರ ಎಡೆಗೊಂಡಿತ್ತಾಗಿ. ನಿಮ್ಮ ವಿಚಾರವೇ ಅಂತರಂಗದೊಳಗೆ ತುಂಬಿತ್ತಾಗಿ, ಎನ್ನ ಮನವ ಮುಂದೆಯಲ್ಲ ನೀನೆಯಾಗಿರ್ದೆಯಾಗಿ ಕಪಿಲಸಿದ್ಧ ಮಲ್ಲಿನಾಥಯ್ಯ ॥೧೧೧॥

ಹೀಗೆಂದು ಸಿದ್ಧರಾಮಯ್ಯ ದೇವರು ಬಿನ್ನೈಸಲು , ಅದಕ್ಕೆ ಪ್ರಭು ದೇವರ ಪ್ರತ್ಯುತ್ತರ.

ವಿಚಾರವೆಂಬುದು ಸಂದೇಹಕ್ಕೊಳಗು ನೋಡಾ! ವಿಚಾರಿಸುವ ಸ್ಮಕ್ಕರ ನೀ ನಾನೆಂಬುವೆತ್ತ ಬಲ್ಲೆ? ಮರುಳೆ ವಾಙ್ಮನಾತೀತವಾದ ಘನವು ವಿಚಾರಕ್ಕೆ ನಿಲುಕುವುದೆ? ಗುಹೇಶ್ವರಲಿಂಗವು ತನ್ನ ತಿಳಿದು ನೋಡಿಹೆ ನೆಂಬವರ ವಿಚಾರವೆಂಬ ಬಲೆಯಲ್ಲಿ ಕೆಡಹಿದನು. ॥೧೧೨॥

ಹೀಗೆಂದು ಪ್ರಭುದೇವರು ನಿರೂಪಿಸಲು, ಅದಕ್ಕೆ ಸಿದ್ಧರಾಮಯ್ಯ ದೇವರು ಬಿನ್ನೈಸಿದ ಪ್ರಸ್ಥಾವದ ವಚನ.

ವಿವೇಕ ವೆಂಬುದು ಬೇರಿಲ್ಲ ಕಂಡಯ್ಯ! ವಿವೇಕ ನವನಾಳದ ಸುಳುಹು. ತೊಡೆದು ಸುನಾಳವ ಶುದ್ಧವ ಮಾಡುವೆ. ಅಷ್ಟದಳ ಕಮ ಲವನು ಊರ್ಧ್ವಮುಖವ ಮಾಡಿ, ನಿಜಪದದಲ್ಲಿ ನಿಲಿಸಿದೆ. ಐವತ್ತಿರಡ ಕ್ಷರವ ತಿಳಿದು ನೋಡಿ ಏಕಾಕ್ಷರದಲ್ಲಿ ನಿಲಿಸುವೆ. ಕಪಿಲ ಸಿದ್ಧಮಲ್ಲಿ ನಾಥ ಎನ್ನ ವಿಚಾರವ ಹರಣ ನೀವೇ ಬಲ್ಲಿರಿ. ॥೧೧೩॥

ಹೀಗೆಂದು ಸಿದ್ಧರಾಮಯ್ಯ ದೇವರು ಬಿನ್ನೈಸಲು, ಅದಕ್ಕೆ ಪ್ರಭು ದೇವರ ಪ್ರತ್ಯುತ್ತರ.

ಯೋಗ ವಿಯೋಗವೆಂಬ ಹೊಲಬ ನಲ್ಲವರನಾರನು ಕಾಣೆನು. ನವನಾಳದ ಸುಳುಹ ತಿಳಿದೆನೆಂಬುದು ಯೋಗವಲ್ಲ. ಐವತ್ತಿರಡಕ್ಷರವ ಕಾಣನವ ತಿಳಿದು ನೋಡಿ ಹೃದಯ ಕಮಲದ ಕರ್ನಿಕೆಯಲ್ಲಿ ನಿಕ್ಕಿಪೆ ನೆಂಬುದು ಯೋಗವಲ್ಲ. ಬಹಿರಂಗವೆಂಬರೆ ಕ್ರಿಯಾ ರಹಿತ. ಅಂತರಂ ಗವೆಂಬರೆ ವಾಙ್ಮನಾತೀತ. ಗುಹೇಶ್ವರನೆಂಬ ಲಿಂಗವು ಷಡುಚಕ್ರದ ಮೇಲೆಲ್ಲ ಕಾಣಾ ಸಿದ್ಧರಾಮಯ್ಯ. ॥೧೧೪॥

ಹೀಗೆಂದು ಪ್ರಭುದೇವರು ನಿರೂಪಿಸಲು, ಅದಕ್ಕೆ ಸಿದ್ಧರಾಮಯ್ಯ ದೇವರ ಬಿನ್ನಹ.

ಅಂತರಂಗದಲ್ಲಿ ನಿಮ್ಮ ನೋಡುವನಲ್ಲ ಕೇಳು ಕಂಡಾ. ಎಲೆ ಅಯ್ಯ ಬಹಿರಂಗದಲ್ಲಿ ಬಳಸುವನಲ್ಲ ಕೇಳು ಕಂಡಾ. ಎಲೆ ಅಯ್ಯ ಸುಷುಮ್ನಾ ಬಟ್ಟೆಯ ತುದಿಯ ನಡರಿ ಸಾವಿರ ದಳದ ಮಂಟಪದಲ್ಲಿ ನಿಮ್ಮ ನೆಲೆ ಗೊಂಡಿಪ್ಪೆ ನೋಡಾ ಕಪಿಲ ಸಿದ್ಧಮಲ್ಲಿನಾಥಯ್ಯ. ॥೧೧೫॥

ಹೀಗೆಂದು ಸಿದ್ಧರಾಮಯ್ಯದೇವರು ಬಿನ್ನೈಸಲು, ಅದಕ್ಕೆ ಪ್ರಭು ದೇವರ ಪ್ರತ್ಯುತ್ತರ.

ಸ್ಪಷ್ಟ ಪದ್ಮಾಸನದಲ್ಲಿ ಕುಳ್ಳಿರ್ದು ನೆಟ್ಟಿಲುವ ಮುರಿದು ನಿಷ್ಠೆಯಿಂದ ಹಿಂದಣ ಬಟ್ಟೆಯ ತೆಗೆದು ಉಪೃತವನುಂಡಿಹೆನೆಂಬವರ ಕೇಡಿಂಗೆ ಕಡೆ ಇಲ್ಲ. ಅತ್ಯತಿಷ್ಠದ್ದಶಾಂಗುಲವೆಂಬ ಶ್ರುತಿಯ ನೋಡಲು, ಮುಟ್ಟಿ ನೆಲೆ ಗೊಳಿಸುವ ತಾವುಂಟೆ? ಸ್ಥಾನ ಮಾನವೆಂಬ ಮಾತಿಂಗೆ ದೂರವಾವ ಘನವ ಬ್ರಹ್ಮರಂಧ್ರದಲ್ಲಿ ಕಂಡೆನೆಂದರೆ ಕಾಣಬಹುದು. ನಮ್ಮ ಗುಹೇಶ್ವರ ಲಿಂಗವು ಕಲ್ಪಿತಕ್ಕೆ ದೂರ ಕೇಳಾ ಸಿದ್ಧರಾಮಯ್ಯ. ॥೧೧೬॥

ಪರಬ್ರಹ್ಮನೆಂಬುದನು ಬ್ರಹ್ಮರಂಧ್ರದಲ್ಲಿ ನೆಲೆಗೊಳಿಸಿದೆನೆಂಬುದು ಕಲ್ಪಿತವಲ್ಲದೆ ನಿರ್ವಿಕಲ್ಪಿತವಲ್ಲವೆಂದು ಪ್ರಭುದೇವರು ನಿರೂಪಿಸಲು, ಅದಕ್ಕೆ ಸಿದ್ಧರಾಮಯ್ಯ ದೇವರ ಬಿನ್ನಹ.

ನಾ ನಿಮ್ಮ ರೂಪ ವಿಚಾರಿಸುವನಲ್ಲ ಕೇಳಾ! ನಿಮ್ಮ ಧ್ಯಾನವಲ್ಲಿ ಪ್ರಾಪ್ತನಲ್ಲ ಕೇಳಾ! ಅತ್ಯತಿಷ್ಠದ್ದ ಶಾಂಗುಲವಲ್ಲಿ ನಿಮ್ಮ ನೆಲೆಸಿ ನಾನೊಂದಿಡಿಯಲ್ಲಿ ಇಷ್ಟಾತನಲ್ಲ ಕೇಳಾ. ಓಂಕಾರವೆಂಬ ಪೀಠಕ್ಕೆ ನಾನಾಗಿ

ನಿಃಶಬ್ದವೆಂಬ ಲಿಂಗವ ನೆಲೆಗೊಳಿಸಿ ಬೆರಸಿ ಬೇರಿಲ್ಲದೆ ಇಪ್ಪೆ ನೋಡಯ್ಯ ಕಪಿಲ ಸಿದ್ಧಮಲ್ಲಿನಾಥಯ್ಯ ನೀನು ಪ್ರಣವ ರೂಪಾಗಿ. ॥೧೧೭॥

ಹೀಗೆಂದು ಸಿದ್ಧರಾಮಯ್ಯ ದೇವರು ಬಿನ್ನೈಸಲು ಅದಕ್ಕೆ ಪ್ರಭು ದೇವರ ಪ್ರತ್ಯುತ್ತರ.

ಲಿಂಗವೇ ಪೀಠವಾಗಿ, ನಾವವೇ ಲಿಂಗವಾಗಿರೆ, ಅದು ಭಿನ್ನಲಿಂಗ ನೋಡಾ! ಕಳೆ ಎಂಬ ಪೂಜೆ ನಿರ್ಮೂಲ್ಯವಾಗಿ ನಾದಬಿಂದು ಕಳಾತೀತ ನೋಡಾ! ಮಹಾಘನ ಲಿಂಗೈಕ್ಯವು ಅಲ್ಲಿ ಇಲ್ಲಿ ಸಿಲುಕದು. ಅಚಲವಪ್ಪ ನಿರಾಕಾರಪ್ರಣಮ ರೂಪೆಂದು ಹೆಸರಿಡಬಹುದೆ? ನಮ್ಮ ಗುಹೇಶ್ವರನ ನಿಲವು ನಿರಂಜ ಬ್ರಹ್ಮಮುಖ್ಯತೆ ಎಂಬುದನರಿಯಾ ಸಿದ್ಧರಾಮಯ್ಯ? ॥೧೧೮॥

ಹೀಗೆಂದು ಪ್ರಭುದೇವರು ನಿರೂಪಿಸಲು, ಅದಕ್ಕೆ ಸಿದ್ಧರಾಮಯ್ಯ ದೇವರ ಬಿನ್ನಪ.

ನಾದ ಬಿಂದು ಎಂಬಲ್ಲಿ ಅಂಗಲಿಂಗಸಂಬಂಧವೆಂಬೆನಯ್ಯ! ನಾದ ಪ್ರಾಣಬಿಂದು ಕಾಯವಾದ ಕಾರಣ ನಾದ ಸ್ವರವಲ್ಲ ಬಿಂದು ಕಾಯವಲ್ಲ. ಉಭಯ ಸೂತಕ ರಹಿತ ಕಂಡಯ್ಯ! ನಾದ ಬಿಂದುವಿನ ಒಡ್ಡಣೋರಿ ಮನ ಮಗ್ನವಾದ ನಿಲವ ಕಪಿಲ ಸಿದ್ಧಮಲ್ಲಿಕಾರ್ಜುನ ನೀನೆ ಬಲ್ಲೆ. ॥೧೧೯॥

ನಾವಬಿಂದು ಕಳಾತೀತವಾದ ಮಹಾ ಘನದೊಳಗೆ ಮನ ಮಗ್ನವಾಗಿ ನಾನಿಪ್ಪೆನೆಂದು ಸಿದ್ಧರಾಮಯ್ಯ ದೇವರು ಬಿನ್ನೈಸಲು, ಅದಕ್ಕೆ ಪ್ರಭು ದೇವರು ಕೊಟ್ಟ ಪ್ರತ್ಯುತ್ತರ.

ಅರಿವನರಿವು, ಮರಹ ಮರೆವು, ಸಂಕಲ್ಪ ಸಂಶಯವಳಿವ ನಿಲವ ನಾವು ಪರಿ ಎಂತು ಹೇಳಾ? ಅರಿವೆನೆಂದರೆ ಜ್ಞಾನಕ್ಕೆ ದೂರ. ಮರೆವೆನೆಂದರೆ ಮನಕ್ಕೆ ದೂರ. ಅರಿವು ಮರೆವೆನೆಂದರೆ ಉಪಮೆಗೆ ದೂರ. ನಿರ್ಭಾವದ ಹೊಲಿಗೆಯಲ್ಲಿ ಭಾವ ಸಂಕಲ್ಪ ಬಿಡದು. ನಮ್ಮ ಗುಹೇಶ್ವರ ಲಿಂಗವಲ್ಲಿ ಮನ ಮಗ್ನಯೋಗ ನಿನಗೆಂತು ಸಾಧ್ಯವಾಯಿತ್ತು ಹೇಳಾ ಸಿದ್ಧರಾಮಯ್ಯ? ॥೧೨೦॥

ಹೀಗೆಂದು ಪ್ರಭುದೇವರು ನಿರೂಪಿಸಲು, ಅದಕ್ಕೆ ಸಿದ್ಧರಾಮಯ್ಯ ದೇವರು ಬಿನ್ನೈಸಿದ ಪ್ರಸ್ಥಾವದ ವಚನ.

ಎನ್ನ ಮನಕ್ಕೆ ಮತ್ತೊಂದು ಇಂಬಿಲ್ಲ ಕಂಡಯ್ಯ. ನಿಮ್ಮ ನೆನೆವೆ ನಾನು. ನೀನು ಎನ್ನ ನೆನೆವೆ ಕಂಡಯ್ಯ. ನಿನಗೆಯು ಎನಗೆಯು ಒಮ್ಮನ ನೋಡಯ್ಯ! ನೀ ಮನಮುಕ್ತನಾದ ಕಾರಣ ನಿನ್ನೊಡನೆ ಎನ್ನ ಮನಮುಕ್ತ ನೋಡಯ್ಯ ಕಪಿಲಸಿದ್ಧ ಮಲ್ಲಿನಾಥಯ್ಯ. ॥೧೨೧॥

ಹೀಗೆಂದು ಸಿದ್ಧರಾಮಯ್ಯ ದೇವರು ಮನಮಗ್ನವಪ್ಪ ಮಹಾನುಭಾವವುಂ ಬಿನ್ನೈಸಲು, ಅದಕ್ಕೆ ಪ್ರಭುದೇವರು ನಿರೂಪಿಸಿದ ಪ್ರಸ್ಥಾನವ ವಚನ. ॥

ಮನ ಉಂಟಿ ಮರುಳೇ ಶಿವಯೋಗಿಗೆ? ಮತ್ತೊಮ್ಮೆ ಮನ ಮಗ್ನ ಉಂಟಿ ಶಿವಯೋಗಿಗೆ? ಇಲ್ಲದ ಮನ ಉಂಟೆಂದು ನುಡಿದು ಅಡಗಿಸಿದೆನೆಂಬ ಮಾತು ಮನವ ನೆಲೆ ಮಾಡಿ ತೋರುತ್ತಿದೆ ಗುಹೇಶ್ವರನನರಿದ ಶರಣಂಗೆ ತೋರಲಿಲ್ಲ ಅಡಗಲಿಲ್ಲ ಕೇಳಾ. ॥೧೨೨॥

ಹೀಗೆಂದು ಪ್ರಭುದೇವರು ನಿರೂಪಿಸಿದ ಮಹಾನುಭಾವವ ನಿಃಪತಿಗೆ ಸಿದ್ಧರಾಮಯ್ಯ ದೇವರು ಬಿನ್ನೈಸಿದ ಪ್ರಸ್ಥಾವದ ವಚನ. ॥

ಮನ ಮಗ್ನವಾದ ಯೋಗವೆಂದಡೇನು ಕೊರತೆ ಹೇಳಾ ಎಲೆ ಅಯ್ಯ? ಮನವಿಲ್ಲದ ಬಚ್ಚಬರಿಯ ಬೊಮ್ಮವೆಂದಡೇನು ಹೆಚ್ಚು ಹೇಳಾ ಎಲೆ ಅಯ್ಯ? ನುಡಿವ ಮಾತಿನಲ್ಲಿ ನಿವರ ತೋರುತ್ತಿದೆ ಎಂದಡೆ ತಾತ್ಪರ್ಯವಂತ ಪ್ಪನೆ ಕಪಿಲ ಸಿದ್ಧಮಲ್ಲಿನಾಥ? ॥೧೨೩॥

ಹೀಗೆಂದು ಬಿನ್ನೈಸಿದ ಸಿದ್ಧರಾಮಯ್ಯ ದೇವರ ನಿಜಾನುಭಾವಕ್ಕೆ ಪ್ರಭುದೇವರು ನಿರೂಪಿಸಿದ ಪ್ರಸ್ಥಾವದ ವಚನ. ॥

ಮನ ಮಗ್ನವೆಂತಪ್ಪುದು, ಅಂತೆ ಇರಬೇಕಲ್ಲದೆ ಮತ್ತೊಂದು ಮನ ಪೆಂಬುದುಂಟೆ ಹೇಳಾ! ಅರಿವು ಮರೆವುದ ಅರಿದು ಮರೆದೆನೆಂಬ ಜ್ಞಾನ ಉಂಟೆ? ಗುಹೇಶ್ವರ ಲಿಂಗವು ಅರಿದೆನೆಂಬಲ್ಲಿಯೇ ಮನವ ಮರೆಮಾಡಿ ಕಾಡುವನು. ॥೧೨೪॥

ಹೀಗೆಂದು ಪ್ರಭುದೇವರು ನಿರೂಪಿಸಿದ ಮಹಾ ವಾಕ್ಯಕ್ಕೆ ಸಿದ್ಧರಾಮಯ್ಯ ದೇವರು ಬಿನ್ನೈಸಿದ ಪ್ರಸ್ಥಾವದ ವಚನ. ॥

ಅಂಗದಂತೆ ಲಿಂಗ ಲಿಂಗದಂತೆ ಅಂಗವಾದ ಬಳಿಕ, ಅಂಗದಂತೆ ಲಿಂಗೈಕ್ಯ ಲಿಂಗದಂತೆ ಅಂಗೈಕ್ಯ. ಮನವೆ ಲಿಂಗ ಲಿಂಗವೇ ಮನವಾದ

ಬಳಿಕ ಮಾತು ಮಾತುಗಳೆಲ್ಲ ಹೊಳ್ಳಾದ ಕಾರಣ ಲಿಂಗೈಕ್ಯವೆ? ಸ್ಮರಶಬ್ದ ಸಂದಣಿಗೆ ಇನ್ನು ತೆರಹುಂಟೆ? ಕಪಿಲ ಸಿದ್ಧಮಲ್ಲಿನಾಥ ಇನ್ನು ನಿಮ್ಮ ದೇವರೆಂದು ಅರಸಲುಂಟೇ ಇಲ್ಲವೇ ಎಂಬುವನು ತಿಳುಹಿಕೊಡಾ ಎಲೆ ಅಯ್ಯ. ॥೧೫॥

ಹೀಗೆಂದು ಪರತತ್ವದ ಅರಿವಿಂಗೆ ಹಂವ ನುಡಿದು ನಿಮ್ಮನರಸಲುಂಟೊ ಇಲ್ಲವೊ ಎಂಬುವ ನೀವೆ ನಿರೂಪಿಸಿ ಎನಲು, ಅದಕ್ಕೆ ಪ್ರಭುದೇವರು ನಿರೂಪಿಸಿದ ಪ್ರಸ್ಥಾವದ ವಚನ. ॥

ಕರ್ಪುರದ ಗಿರಿಯನುರಿ ಹಿಡಿದ ಬಳಿಕ ಇದ್ದಿಲುಂಟೆ? ಮುಂಜಿನ ಶಿವಾಲಯಕ್ಕೆ ಬಿಸಿಲ ಕಲಶ ಉಂಟೇ? ಕೆಂಡದ ಗಿರಿಯ ಅರಗಿನ ಬಾಣದ ಲಿಚ್ಚಡೆ ಬಳಿಕ ಮುರಳಿ ಬಾಣವನರಸಲುಂಟೆ? ಗುಹೇಶ್ವರ ಲಿಂಗವನರಿದಬಳಿಕ, ದೇವರೆಂದು ಅರಸಲುಂಟೆ ಸಿದ್ಧರಾಮಯ್ಯ? ॥೧೬॥

ಹೀಗೆಂದು ಪ್ರಭುದೇವರು ನಿರೂಪಿಸಿದ ಮಹಾನುಭಾವಕ್ಕೆ ಸಿದ್ಧರಾಮಯ್ಯದೇವರು ಬಿನ್ನೈಸಿದ ಪ್ರಸ್ಥಾವದ ವಚನ. ॥

ಅಯ್ಯ, ನಿಮ್ಮ ದೇವರೆಂದು ಭಾವಿಸಲರಿಯೆನು ಕೇಳಾ. ಎನ್ನ ಮನವ ನುಂಗಿದೆ ಎಂದು ಹಿಂದೆ ನಿಮಗಾನು ಬಿನ್ನಹವ ಮಾಡಿದ ಕಾರಣ ಎನ್ನ ಒಕಹೊರಗೆ ನೀನೆ ಕಂಡಯ್ಯ! ನಿಮ್ಮೊಳಗೆ ಅಡಗಿದ ನುಡಿಯನೊಕಕೊಂಡ ಅರಿವು ಅರಿದರಿದು ಮರೆದ ಪರಿ ಎಂತಯ್ಯ ಕಪಿಲ ಸಿದ್ಧಮಲ್ಲಿನಾಥಯ್ಯ. ॥೧೭॥

ಹೀಗೆಂದು ಸಿದ್ಧರಾಮಯ್ಯ ದೇವರ ಶಿವಾದ್ವೈತ ವಾಕ್ಯಕ್ಕೆ ಪ್ರಭುದೇವರು ಸರ್ವಶೂನ್ಯ ಸಮಾಧಿಯ ನಿಲವ ನಿರೂಪಿಸಿದ ಪ್ರಸ್ಥಾವದ ವಚನ. ॥

ಅರಿವೆನೆಂಬುದು ತಾ ಬಯಲು. ಅರಿಯೆನೆಂಬುದು ತಾ ಬಯಲು. ಮರೆದೆನೆಂಬುದು ತಾ ಬಯಲು. ಅರುಹಿನ ಕುರುಹಿನ ಮರಹಿನೊಳಗೆ ಗುಹೇಶ್ವರನೆಂಬುದು ತಾ ಬಯಲು. ॥೧೮॥

ಇಂತು ಪ್ರಭುದೇವರು ನಿರೂಪಿಸಿದ ಮಹಾ ವಾಕ್ಯವಾದ ಸ್ವಾನುಭಾವೋಪದೇಶದಿಂ. ಸಿದ್ಧರಾಮಯ್ಯ ದೇವರು ಪ್ರಸನ್ನತ್ವಮಂ ಪಡೆದು

ಪರಬ್ರಹ್ಮವೊಳು ನಿರ್ವಾಣವೆಂತಪ್ಪುದೆಂದು ಪ್ರಭುದೇವರ ಬೆಸಗೊಂಡ ಪ್ರಸ್ಥಾವದ ವಚನ. ॥

ಅಯ್ಯ. ಕಬ್ಬುನ ನೀರನೊಳಕೊಂಡಂತೆ, ಶಬ್ದ ನಿರಾಳವನೊಳಕೊಂಡಂತೆ, ಮರೀಚಿಯ ಬಯಲನೊಳಕೊಂಡಂತೆ, ಎನ್ನನೆಂದೊಳಕೊಂಬಿ ಹೇಳಾ ಕಪಿಲ ಸಿದ್ಧಮಲ್ಲಿಕಾರ್ಜುನ? ॥೧೯॥

ಹೀಗೆಂದು ಸಿದ್ಧರಾಯಯ್ಯ ದೇವರು ಬಿನ್ನೈಸಲು, ಅದಕ್ಕೆ ಪ್ರಭುದೇವರು ನಿರೂಪಿಸಿದ ಮಹಾನುಭಾವದ ವಾಕ್ಯವೆಂತಿರ್ದುದೆಂದೊಡೆ, ಆ ಪ್ರಸ್ಥಾವದ ವಚನ. ॥

ತೆರಹಿಲ್ಲದ ಘನವ ಮನ ಒಳಕೊಂಡು, ತೆರಹಿಲ್ಲದ ಮನವ ಘನ ಒಳಕೊಂಡು, ತನಗೆ ತಾ ತರಹರವಾದ ಬಳಿಕ, ಮುರಳಿ ಇನ್ನು ಇಂಬು ನೊಡಲುಂಟೆ? ಗುಹೇಶ್ವರನ ಲೀಲೆ ಮಾಬನ್ನಕ್ಕರ ಉರಿಯೊಳಗಣ ಕರ್ಪುರದಂತೆ ಇರಬೇಕು ಕಾಣಾ ಸಿದ್ಧರಾಯಯ್ಯ. ॥೨೦॥

ಇಂತು ಪ್ರಭುದೇವರು ನಿರ್ವಾಣದ ನಿಲುಕಡೆಯ ನಿರೂಪಿಸಲು, ಅದಕ್ಕೆ ಸಿದ್ಧರಾಮಯ್ಯ ದೇವರು ಇಂತೀ ಕರ್ಮಕ್ರಿಯೆಗಳಿಂದ ನಿಮ್ಮ ಕಂಡೆನು, ಸುಕೃತದ ದೆಸೆಯಿಂದ ಎನಗೆ ನಿಜವು ಸಾಧ್ಯವಾಯಿತ್ತೆಂದು ಬಿನ್ನೈಸಿದ ಪ್ರಸ್ಥಾವದ ವಚನ. ॥

ಕೆರೆ ತೊರೆ ದೇಗುಲದ ಕಡೆಯಿಂದ ನಿಮ್ಮ ಕಂಡೆ, ಎಡಹುವ ಕಲ್ಲ ತೆಗೆವ ಮರೆಯಲ್ಲಿ ನಿಧಾನವ ಕಂಡಂತೆ, ಎನ್ನ ಮರವೆಯ ತಮದ ಅಡ್ಡಿಗೆ ದಿನಮಣಿ ಜನಿಸಿದಂತೆ, ಕಪಿಲ ಸಿದ್ಧಮಲ್ಲಿಕಾರ್ಜುನ ಲಿಂಗವೆಂಬ ಭ್ರಾಂತು ಸ್ಪಯವಾಯಿತ್ತು ಪ್ರಭುದೇವರ ಕಾರುಣ್ಯದಿಂದೆ. ॥೨೧॥

ಇಂತು ಸಿದ್ಧರಾಮಯ್ಯ ದೇವರು ನಿಮ್ಮಿಂದ ಪರಬ್ರಹ್ಮ ಸ್ವರೂಪಾಸೆನೆಂದು, ಬಿನ್ನೈಸಲು ಅದಕ್ಕೆ ಪ್ರಭುದೇವರು ಆ ಸಿದ್ಧರಾಮಯ್ಯ ದೇವರ ಸಮರಸವ ಕಂಡು ಕೊಂಡಾಡಿದ ಪ್ರಸ್ಥಾವದ ವಚನ. ॥

ನಿರ್ವಿಕಲ್ಪ ಅದ್ವೈತವ ನೋಡಿರಿ. ಬೆಳಗಿನ ಬೆಳಗು ಅಡಗಿತ್ತು ನೋಡಿರಿ. ಚಂದ್ರ ಸೂರ್ಯರು ಭೂಲೋಕವೊಳಕೊಂದಾರುವ ಕಾಣಿ. ಜ್ಯೋತಿ

ಳಗೆ ನಷ್ಟವ ಕೈಯ್ಯಲ್ಲಿ ಹಿಡಿದು ದೃಷ್ಟವ ಕಂಡಿಹೆನೆಂದರೆ ಕಪಿಲ ಸಿದ್ಧ ಮಲ್ಲಿನಾಥಯ್ಯನು ಸಾಧ್ಯವಹ ಪರಿಯ ಹೇಳಾ ಪ್ರಭುವೇ. ॥೧೩೫॥

ಇಂತು ಕುರುಹಿಡಿದು ನಿರವಯಲಿಂಗವನರಿವ ಪರಿ ಹೇಗೆಂದು ಸಿದ್ಧರಾಮಯ್ಯ ದೇವರು ಬಿನ್ನೈಸಲು ಅದಕ್ಕೆ ಪ್ರಭುದೇವರು ನಿರೂಪಿಸಿದ ಪ್ರಸ್ಥಾವದ ವಚನ. ॥

ಇಷ್ಟಲಿಂಗದ ಪ್ರಾಣಲಿಂಗದ ಭೇದವನಾರು ಬಲ್ಲರು ಹೇಳಾ? ಅಂತರಂಗವೆಂಬ ಶಬ್ದದಕ್ಕೆ ಬಹಿರಂಗ ಮುಂದುಗೊಂಡಿಪ್ಪುದು. ಮನವನೆಡೆಗೊಂಡ ಲಿಂಗವು ವಿಚಾರ ವ್ಯಾಕುಳಕ್ಕೆ ಒಳಗಾಗಬಾರದೆಂದು ಮನ ಭಾವ ಜ್ಞಾನ ನೋಟವ ತಂದು ಕರಸ್ಥಲದಲ್ಲಿ ನಿಕ್ಷೇಪಿಸಿ ಅಂತರಂಗ ಬಹಿರಂಗವೆಂಬುದನರಿದು ಅನುಮಿಷನಾಗಿಪ್ಪನಾ ಶರಣನು. ಪ್ರಾಣಲಿಂಗದ ಪ್ರಸನ್ನಮುಖವ ನೋಡಿ ಪರಿಣಾಮಿಸಲೋಸುಗ ಕರತೇಜವೆಂಬ ದರ್ಪಣವ ಹಿಡಿದು, ಇರ್ಪನು ನೋಡಾ ಗುಹೇಶ್ವರ ಲಿಂಗವಲ್ಲಿ ನಿಜವನೈದಿಹೆನೆಂದರೆ ಕುರುಹುನಿಡಿದು, ಕುರುಹು ಗೆಡಬೇಕು ಸಿದ್ಧರಾಮಯ್ಯ. ॥೧೩೬॥

ಹೀಗೆಂದು ಪ್ರಭುದೇವರು ತಮ್ಮ ಕರಸ್ಥಲದ ಇಷ್ಟಲಿಂಗದ ಸಂಬಂಧದ ಘನ ವಿವೇಕಮುಖದಿಂದ ತಿಳುಹಿ ತೋರಲು, ಆ ಸಿದ್ಧರಾಮಯ್ಯ ದೇವರು ಪರಮ ಹರುಷಿತರಾಗಿ ಆ ಕರಸ್ಥಲದ ಲಿಂಗದಲ್ಲಿ ಅಡಗಿಪ್ಪ ನಿರ್ದೇಶ ಎಷ್ಟು ಭೇದವೆಂದು, ಬೆಸಗೊಂಬ ಪ್ರಸ್ಥಾವದ ವಚನ. ॥

ಅಯ್ಯ ನಿಮ್ಮ ಕರಸ್ಥಲದ ಘನಲಿಂಗವನುಪಮಿಸ ಬಲ್ಲವರಿಲ್ಲವಯ್ಯ. ನಿಮ್ಮ ಮಹಿಮೆಯನರಿವನೇ ನಾನೇತರೊಳಗೇನಯ್ಯ! ಆ ಇಷ್ಟಲಿಂಗದೊಳಗೆ ಮುಟ್ಟಿದ ಶರಣನೊಳಗೆ ಮುಟ್ಟಿವ ಕರಸ್ಥಲವೆಷ್ಟೆಂಬುದ ತಿಳುಹಿ ಎನ್ನನುಳುಹಿಕೊಳ್ಳಾ ಕಪಿಲ ಸಿದ್ಧಮಲ್ಲಿಕಾರ್ಜುನ. ॥೧೩೭॥

ಹೀಗೆಂದು ಸಿದ್ಧರಾಮಯ್ಯ ದೇವರು ಇಷ್ಟಲಿಂಗದೊಳಗಣ ಸೂಕ್ಷ್ಮ ಭೇದವ ಕೇಳಲು, ಆ ಪ್ರಭುದೇವರು ಸೂಕ್ಷ್ಮದ ಸ್ಥಿತಿಯನು ಸಂಗನಬಸವಣ್ಣಂಗಲ್ಲದೆ ಬಲ್ಲ. ಆತನಲ್ಲಿ ನಿನಗೆ ತಿಳುಹಿ ಕೊಡುಹುವೆನೆಂದು ನಿರೂಪಿಸಿದ ಪ್ರಸ್ಥಾವದ ವಚನ. ॥

ಆಯತಲಿಂಗವಿಡಿದು, ಸ್ವಾಯತಲಿಂಗವ ಕಾಣಬೇಕು ಸಿದ್ಧರಾಮಯ್ಯ. ಸ್ವಾಯತಲಿಂಗವಿಡಿದು, ಜಂಗಮ ಲಿಂಗವ ಕಾಣಬೇಕು ಸಿದ್ಧರಾಮಯ್ಯ. ಜಂಗಮಲಿಂಗವಿಡಿದು, ಗುರುಲಿಂಗವ ಕಾಣಬೇಕು ಸಿದ್ಧರಾ

ಇಲ್ಲದ ಜಿಗಿನ ಪ್ರಭೆಯೋ ಗುಹೇಶ್ವರಲಿಂಗವಲ್ಲಿ ಸಿದ್ಧರಾಮಯ್ಯ ದೇವರ ಮಹಾಘನವ ನಾನೇನೆಂಬೆನು. ॥೧೩೪॥

ಹೀಗೆಂದು ಪ್ರಭುದೇವರು ನಿರೂಪಿಸಲು, ಸಿದ್ಧರಾಮಯ್ಯ ದೇವರು ಪ್ರಭುದೇವರ ಕರಸ್ಥಲವ ಲಿಂಗವ ಅಪ್ಪಂತಮುಂ ಕೇಳಿದ ಪ್ರಸ್ಥಾವದ ವಚನ. ॥

ಅಯ್ಯ ನಿಮ್ಮ ಸರ ಉಂಡ ಸಬುದವೆನ್ನ ಮನಕ್ಕೆ ವೇದ್ಯವಾಯಿತ್ತು. ನಿಮ್ಮ ನಿಜ ಉಂಡ ನಿಲವು ಎನ್ನ ಮತಿಗೆ ವೇದ್ಯವಾಯಿತ್ತು. ನಿಮ್ಮ ಕರುಣ ಪ್ರಸಾದವೆನ್ನ ಸರ್ವಾಂಗಕ್ಕೆ ವೇದ್ಯವಾಯಿತ್ತು. ನಿಮ್ಮ ಕಾಯ ವಿಡಿದಿಪ್ಪ ಕರಸ್ಥಲದ ಕಾರಣವ ಹೇಳಾ ಕಪಿಲ ಸಿದ್ಧಮಲ್ಲಿನಾಥ ॥೧೩೮॥

ಇಂತು ಸಿದ್ಧರಾಮಯ್ಯ ದೇವರು ಬಿನ್ನಪಂಗೈಯ್ಯಲು, ಪ್ರಭುದೇವರು ತಮ್ಮ ಕರಸ್ಥಲದ ಅನಾದಿ ಸಂಸಿದ್ಧಮುಂ ನಿರೂಪಿಸುತ್ತಿರ್ಪ ಪ್ರಸ್ಥಾವದ ವಚನ. ॥

ಅನಾದಿ ಗಣನಾಥನ ಶಿಷ್ಯನು ಆದಿಗಣನಾಥನು. ಆದಿಗಣನಾಥನ ಶಿಷ್ಯನು ಅಧ್ಯಾತ್ಮಗಣನಾಥನು. ಅಧ್ಯಾತ್ಮಗಣನಾಥನ ಶಿಷ್ಯನು ಆತ್ಮಗಣನಾಥನು. ಆತ್ಮಗಣನಾಥನ ಶಿಷ್ಯನು ವ್ಯೋಮಸಿದ್ಧಗಣನಾಥನು. ವ್ಯೋಮಸಿದ್ಧಗಣನಾಥನ ಶಿಷ್ಯನು ಬಸವನೆಂಬ ಗಣನಾಥನು. ಬಸವನೆಂಬ ಗಣನಾಥನ ಶಿಷ್ಯನು ಅನುಮಿಷನೆಂಬ ಗಣನಾಥನು. ಅನುಮಿಷನೆಂಬ ಗಣನಾಥನ ಶಿಷ್ಯನು ಅಲ್ಲಮಪ್ರಭುವೆಂಬ ಗಣನಾಥನು. ಇಂತು ಅನಾದಿವಿಡಿದು ಬಂದ ಅನುಪಮಲಿಂಗವು ಗುಹೇಶ್ವರನೆಂಬ ಹೆಸರನೊಳಕೊಂಡು ಎನ್ನ ಕರಸ್ಥಲಕ್ಕೆ ಸಾಧ್ಯವಾಯಿತ್ತು ಕಾಣಾ ಸಿದ್ಧರಾಮಯ್ಯ. ॥೧೩೯॥

ಹೀಗೆಂದು ಪ್ರಭುದೇವರು ತಮ್ಮ ಕರಸ್ಥಲದ ಲಿಂಗದ ಪೂರ್ವಾಪರಮಂ ತಿಳಿಯ ಪೇಳಲು, ಸಿದ್ಧರಾಮಯ್ಯ ದೇವರು ಇಷ್ಟಲಿಂಗವಿಡಿದು, ನಿಜಲಿಂಗೈಕ್ಯವ ಕಾಂಬ ಪರಿ ಹೇಗೆಂದು ಬೆಸಗೊಂಬ ಪ್ರಸ್ಥಾವದ ವಚನ. ॥

ಕಾಯವೇ ಪೀಠಿಕೆ ಪ್ರಾಣವೆ ಲಿಂಗವಾಗಿರಲು, ಬೇರೆಮತ್ತೆ ಕುರುಹೇಕಯ್ಯ? ಕುರುಹುವಿಡಿದು ಕೂಡುವ ನಿರವಯಲುಂಟಿ? ಜಗದೊ

ಮಯ್ಯ. ಗುರುಲಿಂಗವಿಡಿದು, ಶಿವಲಿಂಗವ ಕಾಣಬೇಕು ಸಿದ್ಧರಾ
ಮಯ್ಯ. ಶಿವಲಿಂಗವಿಡಿದು ಪ್ರಸಾದಲಿಂಗವ ಕಾಣಬೇಕು ಸಿದ್ಧರಾ
ಮಯ್ಯ. ಇಂತು ಷಟ್‌ಸ್ಥಲವಂತುವ ಸಂಧಿಸಿ ಒಂದು ಮಾಡಿಕೊಂಡಿಪ್ಪ
ಕರಸ್ಥಲದನುವನು ಗುಹೇಶ್ವರನ ಶರಣ ಸಂಗನಬಸವಣ್ಣ ಬಲ್ಲ, ಬೆಸ
ಗೊಂಬ ಬಾರಾ ಸಿದ್ಧರಾಮಯ್ಯ. ॥೧೩॥

ಇಂತು ಬಸವರಾಜ ದೇವರ ದರುಶನವಾಗಬೇಕು ನಡೆ ಎಂದು ಪ್ರಭುದೇವರು ನಿರೂಪಿಸಲು, ಅವಕ್ಕೆ ಸಿದ್ಧರಾಮಯ್ಯ ದೇವರು ಪರಮ ಹರುಷಿತರಾಗಿ ಬಿನ್ನೈಸಿದ ಪ್ರಸ್ತಾವದ ವಚನ॥

ಅಯ್ಯ ಕರಸ್ಥಲವ ಘನ ನಿಮ್ಮಲ್ಲಿರಲಿ. ಆಯ್ಯ, ನಿಮ್ಮ ಪರಸ್ಥಲದ ಘನವ ನಿಮ್ಮಲ್ಲಿರಲಿ. ಕರಸ್ಥಲವನೊಲ್ಲೆ, ಪರಸ್ಥಲವನೊಲ್ಲೆ. ಆವುದನು ಒಲ್ಲಿ ನೋಡಯ್ಯ. ಕಪಿಲ ಸಿದ್ಧಮಲ್ಲಿನಾಥಯ್ಯ, ನೀ ಒಲಿದು ಸಂಗನಬಸವಣ್ಣನ ಶ್ರೀ ಪಾದವ ತೋರಿಹೆನೆಂಬ ಮಾತಿಂಗೆ ಮಾರು ಹೋದೆನು. ಇನ್ನು ತೋರಿ ಎನ್ನನುಳುಹಿಕೊಳ್ಳಾ ಎನ್ನ ದೇವರ ದೇವಾ ॥೧೪॥

ಇಂತು ಸಿದ್ಧರಾಮಯ್ಯ ದೇವರು ಬಿನ್ನೈಸಲು, ಪ್ರಭುದೇವರು ಸಿದ್ಧರಾಮಯ್ಯ ದೇವರನೊಡಗೊಂಡು, ಕಲ್ಯಾಣದತ್ತಲಭಿಮುಖವಾಗಿ ಬರುತ್ತಿರ್ಪ ಪ್ರಸ್ತಾವದ ವಚನ.॥

ಅಂಗದಲ್ಲಿ ಆಚಾರವ ಸ್ವಾಯತವ ಮಾಡಿಕೊಂಡನು. ಆಚಾರದಲ್ಲಿ ಪ್ರಾಣವ ಸ್ವಾಯತವ ಮಾಡಿಕೊಂಡನು. ಪ್ರಾಣದಲ್ಲಿ ಲಿಂಗವ ಸ್ವಾಯತವ ಮಾಡಿಕೊಂಡನು. ಲಿಂಗದಲ್ಲಿ ಜಂಗಮವ ಸ್ವಾಯತವ ಮಾಡಿಕೊಂಡನು. ಜಂಗಮದಲ್ಲಿ ಪ್ರಸಾದವ ಸ್ವಾಯತವ ಮಾಡಿಕೊಂಡನು. ಪ್ರಸಾದದಲ್ಲಿ ನಿತ್ಯವ ಸ್ವಾಯತವ ಮಾಡಿಕೊಂಡನು. ನಿತ್ಯದಲ್ಲಿ ದಾಸೋಹವ ಸ್ವಾಯತವ ಮಾಡಿಕೊಂಡನು. ದಾಸೋಹದಲ್ಲಿ ತನ್ನ ಮರೆದು ನಿಶ್ಚಿಂತನಿವಾಸಿಯಾಗಿ ಐದಾನೆ. ನಮ್ಮ ಗುಹೇಶ್ವರಲಿಂಗದಲ್ಲಿ ಸಂಗನ ಬಸವಣ್ಣನ ಶ್ರೀಪಾದಕ್ಕೆ ಶರಣೆಂದು ಧನ್ಯರಾಗಬೇಕು ನಡೆ ಸಿದ್ಧರಾಮಯ್ಯ. ॥೧೫॥

ಇಂತೀ ಶ್ರೀಮತ್ಸಕಲಗಣ ಪುರಾತನರೊಳ್ ಪ್ರಭುದೇವರು ಮಹಾ ಸುಭಾವ ಸಂಗೋಷ್ಠಿಯಂ ಮಾಡಿದ ಶೂನ್ಯಸಂಪಾದನೆಯೊಳ್ ಸಿದ್ಧರಾಮಯ್ಯ ದೇವರ ಸಂಪಾದನೆಗಂ ತೃತೀಯೋಪದೇಶ ಸಮಾಪ್ತ.

ಬಸವನು ಚನ್ನಬಸವನಿಗೆ ಉಪದೇಶ ಸಂಪಾದನೆ.

(ಚತುರ್ಥೋಪದೇಶ.)

ಚನ್ನಬಸವೇಶಗೊಲವಿಂ ನಸ್ನಿಯೊಳುಪದೇಶವ ಶರಣ ಬಸವೇಶ್ವರ ತಾಂ॥ ಸನ್ನುತವಾಗಿತ್ತುದನೊಲವಿಂ ಬಿನ್ನವಿಸುವೆ ಶರಣಗಣರು ಅಹುದ ಹುದೆನಲು. ॥೧॥

ಅದೆಂತೆಂದೊಡೆ ಪ್ರಭುದೇವರು ಸಿದ್ಧರಾಮಯ್ಯ ದೇವರು ಬಸವ ರಾಜದೇವರ ಮಹಾತ್ಮೆಯಂ ಕೊಂಡಾಡುತ್ತ ಪರಮಾನಂದದೊಳೋಲಾ ಡುತ್ತ ಬರುತ್ತಿರಲತ್ತ, ಅಖಂಡಾದ್ವಯ ನಿತ್ಯ ನಿರವಯ ನಿಃಶೂನ್ಯವಪ್ಪ ನಿಃಕಲ ಪರಶಿವನ ಸ್ಥೂಲತತ್ವವೇ ಮರ್ತ್ಯಲೋಕದಲ್ಲಿ ಜಗಹಿತಾರ್ಥವಾಗಿ ಬಸವೇಶ್ವರ ನಾಮದಿಂದವತರಿಸಿ ಷಡುವರುಶನ ಷಣ್ಮತ ಷಟ್‌ಸಮಯ ಗಳಿಂದ ವೀರಶೈವ ಸದ್ಭಕ್ತಿ ವುಸುಳಿಸಿರಲಾ ಶಿವಭಕ್ತಿಯನುದ್ಧರಿಸಿ, ಸರ್ವಾ ಚಾರವನಿಂಬುಗೊಂಡು ಕಲ್ಯಾಣ ಪಟ್ಟಣದಲ್ಲಿ ಗುರುಲಿಂಗಜಂಗಮ ಭಕ್ತಿಯ ಮಾಡುತ್ತ, ನಿತ್ಯನೆಂಬತ್ತೆಂಟು ಪವಾಡಂಗಳಂ ಜಯಿಸುತ್ತಿರ್ಪ ಬಸವೇಶನೆಂತಾತನೆಂದೊಡೆ,

ಕೈವಂಗೆದೆಗೊಂತ, ವೈಷ್ಣವ ಜೀವಮೂತ ಜಂಝಾ ಮಾರುತ, ಚಾರ್ವಾಕ ಚೌವಂತಶೃಣಿ, ಬೌದ್ಧ ಧರ್ಮರ ಘಣೆ, ಕ್ಷಪಣ ವನದಾವಾ ನಲ, ನೈಯ್ಯಾಯಿಕ ಹರಿಣ ಶಾರ್ದೂಲ, ಭಾಟ್ಟ ಗೋಮತ ಶರಧಿಕುಂಭಜ, ಪ್ರಭಾಕರ ಕದಳೀ ಮತ್ತಗಜ, ಮಿಮಾಂಸ ಹಿಮ ಜೈತ್ರ, ವೈಶೇಷ ಲತಾಲವಿತ್ರ, ಕಪಾಲಿ ಕುಮುದ ಮಾರ್ತಂಡ, ಸಾಂಖ್ಯ ಮತ ಶರಭ ಬೇರುಂಡ, ಕರ್ಮವಾದ ಕುಧರ ಕುಲಿಶ, ಕಾಲವಾದ ಕಮಲತಾರೇಶ, ಮಂತ್ರವಾದ ಮುಷ್ಕಕಶೂಲ, ಮಾಯಾವಾದ ಮೂಲ ಕುದ್ದಾಲ, ಕೌಳ ಮತ ತರುದರಶು, ಕಾಳಾಮುಖ ಕಂಠ ಪಾಶ, ಶಾಕ್ತೇಯ ತಿಮಿರ ದೀಪ, ಸೌರಮತ ಪನ್ನಗ ಖಗಾಧಿಪನೆನಿಸಿ, ವೀರಶೈವ ಸದ್ಭಕ್ತಿಯ ವರ್ಧನಂ ಗೈವುತ್ತ ಶಿವ ಶರಣ ಸಾಗರಕ್ಕೆ ಪೂರ್ಣೇಂದುವಾಗಿ, ಸುಖವಿರುತ್ತಲೊಂ ದುದಿನ ಶಿವಲಿಂಗಾರ್ಚನೆಯಂ ಮಾಡುತ್ತ, ಲಿಂಗದೋಳ್ತಿಳಿದು ಆ ಲಿಂಗದ ಕಳೆ ಏಕವಾಗಿ, ವಾರಿ ವಾರಿ ಕೂಡಿದಂತೆ ಕ್ಷೀರ ಕ್ಷೀರ ಬೆರೆದಂತೆ, ರತ್ನ

ದೋಳ್ಕಳಿ ಬೆರಸಿಪ್ಪಂತೆ, ಅಂತರಂಗವ ಜ್ಞಾನ ಬಹಿರಂಗದ ಕ್ರಿ ಒಂದಾಗಿ, ಇಷ್ಟಲಿಂಗದ ಕಳಿ ಪ್ರಾಣಲಿಂಗಕ್ಕೆ ವೇದಿಸಿ, ಪ್ರಾಣಲಿಂಗ ಸಂಬಂಧವಪ್ಪ ಭೇದವು ಶರಣ ಸಂಗದಿಂದಲ್ಲದೆ, ದೊರೆಕೊಳ್ಳದೆಂದು ಜ್ಞಾನಮುಖದೊಳು ನಿರೀಕ್ಷಿಸುತ್ತಿರಲು, ನಿಃಕಲ ಪಂಥಿವನ ಸೂಕ್ಷ್ಮತತ್ವವೆ ಚನ್ನಬಸವೇಶ್ವರ ನೆಂಬ ನಾಮದಿಂದ ಮರ್ತ್ಯಕ್ಕವತರಿಸಿ, ಸಕಲ ಪ್ರಮಥರ್ಗೆ ಪಡುಸ್ಥಲವಂ ಜೋಧಿಸುವದಕ್ಕೆ ತಾನೇ ಕಾರಣವಾಗಿ, ಅಲ್ಲಮ ಪ್ರಭುದೇವರ ಬರವಿಂಗೆ ತಾನೆ ಮೂಲಿಗನಾಗಿ ಬಂದು ಆ ಬಸವೇಶ್ವರನ ಸ್ತೋತ್ರವುಂ ಮಾಡಿ, ಅನುಗ್ರಹಮುಂ ಪಡೆದರದೆಂತೆಂದೊಡೆ ಆ ಪ್ರಸ್ಥಾವದ ವಚನ. ॥

ಮೀನಜ ಕೋಮಜ ಋಷಿಯರು ಮೊದಲಾಗಿ ಅನಂತ ಕೋಟಿ ಹರಿಬ್ರಹ್ಮರಿಲ್ಲದಂದು, ಅಲ್ಲಿಂದತ್ತತ್ತ ನೀನೇಕೋ? ಲಿಂಗ ಒಬ್ಬನೆ ಶರಣ ಗುರುವೆ ಪರಮ ಗುರುವೆ ನೀನೆ, ಗತಿಯಯ್ಯ! ಆದಿ ಕುಳಕೆ ನೀನೆ ಮೂಲಿಗನಾಗಿ ಸುಳುಹುದೋರಿ ಪಾವನವ ಮಾಡಬಂದಿರಿ. ಬಹು ಮುಖ ಜೀವರಿಗೆ ಬಹು ಮುಖ ಪ್ರಸಾದವ ತೋರಿದಿರಯ್ಯ! ಭುವನವ ಸಲಹಲೆಂದು ಅವತರಿಸಿ ಆದಿಲಿಂಗ ಅವಾದಿ ಶರಣನೆಂಬುದು ತಪ್ಪದು. ನೀವು ಪುಟ್ಟಿಸಿದ ಘಟಕ್ಕೆ ಕಾರುಣ್ಯವ ಮಾಡಿ ಸಲಹಯ್ಯ ಕೂಡಲ ಚನ್ನಸಂಗಮದೇವಾ. ॥೧॥

ಇಂತು ಚಿಕ್ಕದಂಡಾಯಕರು ಉಪಾವಸ್ಥೆಯಂ ಮಾಡಲು ಬಸವರಾಜದೇವರು ಭಕ್ತಿಭಾವ ಸಂಪನ್ನನಾಗಿ ಸರ್ವವೂ ಸಂಗಮನಾಥನೆಂಬ ಭಾವದಿಂದೆ ನಾನು ಉಪದೇಶವ ಮಾಡಲಮ್ಮೆನೆಂದು ನಿರೂಪಿಸಿದ ಪ್ರಸ್ಥಾವದ ವಚನ. ॥

ಹೋ ಹೋ ನಾನೊಬ್ಬರಿಗೆ ಉಪದೇಶವ ಮಾಡಲಮ್ಮೆನು. ಮುನ್ನ ಲಾದವರು ತಮ್ಮಿಂದ ತಾವಾದರು. ಅವರೆಲ್ಲರು ನಿಜಲಿಂಗೈಕ್ಯರು. ನಾನೇನು ಮಾಡಲಿಲ್ಲ. ತತ್ಪ್ರವ ಹಿಡಿದವರಿಗೆ ತೊತ್ತಾಗಿ ನಡೆವೆನು. ಅಮರಗಣಂಗಳೇ ಸಾಕ್ಷಿ ಕೂಡಲ ಸಂಗಮದೇವರ ಮುಂದೆ ಭಾಷೆ ಪ್ರಸಾದವನಿಕ್ಕಲಮ್ಮೆನಯ್ಯ ಚನ್ನಬಸವಣ್ಣಾ. ॥೨॥

ಹೀಗೆಂದು ಬಸವರಾಜದೇವರು ನಿರೂಪಿಸಲು ಅದಕ್ಕೆ ಚನ್ನಬಸವಣ್ಣನು ನಿಮ್ಮ ಕರುಣದಿಂದೆ ಅನುಗ್ರಹವ ಪಡೆವನಲ್ಲದೆ ಬಿಡುವನಲ್ಲ ಅನಾದಿವಿಡಿದು ನಿಮ್ಮ ಶಿಷ್ಯನೆಂಬ ಭೇದವ ತೋರಿಸಿ ಒಡಂಬಡಿಸಿ ಉಪಾವಸ್ಥೆಯಂ ಮಾಡುವ ಪ್ರಸ್ಥಾವದ ವಚನ. ॥

ಅಂಜದಿರಿ ಅಂಜದಿರಿ ನಿಮ್ಮ ಪ್ರಮಥರ ಮುಂದೆ ನಿಮಗೆ ಅಹುದಹುದೆನಲು, ನಿಮಗನಾದಿಯ ಶಿಸು ನಾನಯ್ಯ ಅದೆಂತೆಂದೊಡೆ, ಜಲಗರ ಬೆಳೆಯಿತ್ತೆಂದು ಅಂಜಿ ಹೇಮರಸವ ಕುಡಿದಲ್ಲಿ ಒಳಗಿದ್ದ ಕಪಿಲಿಂಗಾರವ ಪೂಡನೆ? ಕೆಡುವುದೆ ಗುರುವಿನುಪದೇಶ? ಪಿಂಡವ ಮುರಿದಪುದೆ ಶಿವಜ್ಞಾನವು? ಪಿಂದೆ ಏಳುನೂರು ವರುಷ ಮಂಡೋದರಿಯ ಬಸಿರಲ್ಲಿರುವಯಂಗಯ್ಯನೆ ಇಂದ್ರಜಿತು? ನೀವು ನಾನು ಹೊಟ್ಟೆಯಲ್ಲಿರ್ದಂದು ವಿಭೂತಿಯ ಪಟ್ಟವ ಕಟ್ಟಿದಂದೆ ಅನುಗ್ರಹವಾಯಿತ್ತು ಕೂಡಲ ಚನ್ನಸಂಗಮದೇವಯ್ಯ ನಿಮ್ಮ ತೊತ್ತಿನ ತೊತ್ತು ಚನ್ನಬಸವಣ್ಣನು. ॥೩॥

ಹೀಗೆಂದು ಚಿಕ್ಕದಣ್ಣಾಯಕರು ಬಿನ್ನೈಸಲು, ಬಸವರಾಜ ದೇವರು ಎಲ್ಲ ಶಿವಭಕ್ತರಿಗು ಶಿಸುವಲ್ಲದೆ ಒಬ್ಬರಿಗೆ ನಾನು ಗುರುವಲ್ಲವೆಂದು ನಿರೂಪಿಸಿದ ಪ್ರಸ್ಥಾವದ ವಚನ॥

ಆದಿಅನಾದಿಯಿಂದತ್ತತ್ತ ಮುನ್ನ ಲಿಂಗಜಂಗಮವೆಂಬುದನಾರು ಬಲ್ಲರಿಲ್ಲೆಂದು, ಇದರ ಸಕೀಲ ಸಂಬಂಧವ ತಿಳುಹಲೆಂದು ಮರ್ತ್ಯಕ್ಕೆ ಕಳುಹಿದನು ಶಶಿಧರನು. ಅಂಗದ ಮೇಲೆ ಲಿಂಗವುಳ್ಳುದೆಲ್ಲವು ಸಂಗಮನಾಥನಲ್ಲದೆ ಮತ್ತಾರನು ಕಾಣೆ. ಶಿಷ್ಯಂಗೆ ಗುರು ಉಪದೇಶ ಮಾಡಬೇಕಲ್ಲದೆ, ಗುರುವಿಂಗೆ ಶಿಷ್ಯ ಅನುಗ್ರಹವ ಮಾಡಿದ ಠಾವುಂಟೆ? ಎನ್ನ ಅರುಹಿನ ಆದಿಗೆ ನೀನೇ ಕರ್ತನೆಂದು ನಾನಿರುತ್ತಿರಲು, ನಿನಗೆ ನಾನಿನ್ನ ಅನುಗ್ರಹವ ಮಾಡುವ ಪರಿ ಎಂತಯ್ಯ ಕೂಡಲ ಸಂಗಮದೇವರ ಸ್ವರೂಪೆಂದು, ನಿನ್ನ ಕಂಡಿಪ್ಪೆ ಕಾಣಾ ಚನ್ನಬಸವಣ್ಣಾ. ॥೪॥

ಹೀಗೆಂದು ಬಸವರಾಜ ದೇವರು ನಿರೂಪಿಸಲು, ಚಿಕ್ಕದಣ್ಣಾಯಕರು ಬಿನ್ನೈಸಿದ ಪ್ರಸ್ಥಾವದ ವಚನ. ॥

ಆದಿ ಲಿಂಗ ಅನಾದಿ ಶರಣನೆಂಬುದು ತಪ್ಪದು. ಆದಿ ಗುರು ಅನಾದಿ ಶಿಷ್ಯನೆಂಬುದು ತಪ್ಪದು. ಗುರುವಿಂಗೆ ಶಿಷ್ಯಂಗೆ ಏನು ದೂರ ಹೇಳಾ ದೇವಾ? ಮುಳ್ಳು ಗುತ್ತುವರಿ ತೆರಹಿಲ್ಲದ ಪರಿಪೂರ್ಣದ ಘನವು ಒಬ್ಬರಲ್ಲಿ ಒಂದು ಭಾವ ಉಂಟೆ? ಎನ್ನೊಳಗೆ ಬೆಳಗುವ ಜ್ಞಾನ ನಿನ್ನ ಹೃದಯ ಕಮಲಪೊಳಗಣ ಅವ್ಯಕ್ತಲಿಂಗ ನಿನ್ನೊಳಗೆ ತೊಳಗಿ ಬೆಳಗುವ ಜ್ಯೋತಿರ್ಲಿಂಗ ಎನ್ನ ಸುಜ್ಞಾನಲಿಂಗ ಒಂದರಲ್ಲಿ ಒಂದು ಬಿಚ್ಚಿ ಬೇರು ಮಾಡಬಾರದಾಗಿ, ಪ್ರಾಣಲಿಂಗ ಒಂದೆ ಉಪದೇಶ, ಒಂದೆ ಕ್ರಿಯಾಕರ್ಮ,

ಒಂದೆ ನೀವಿನ್ನು ಅವುದು ಬೇರು ಮಾಡಿ ನುಡಿವಿರಯ್ಯ! ಕಾಯವಲ್ಲಿ ಗುರುವಾಗಿ ಅಂತರಂಗಕ್ಕೆ ಸುಜ್ಞಾನೋಪದೇಶವ ಮುನ್ನವೆ ಮಾಡಿದ ಬಳಿಕ ಕ್ರಿಯೆಂದ ಮಾಡಲಮ್ಮೆನೆಂದರೆ ಹೋಹುದೆ ಕೂಡಲ ಚನ್ನ ಸಂಗಮದೇವರು ಸಾಕ್ಷಿಯಾಗಿ. ಎನಗೆ ನೀವು ಉಪದೇಶವ ಮಾಡಿದಿ ಮರ್ತ್ಯಲೋಕದ ಮಹಾಗಣಂಗಳ ಕೈಯ್ಯಲ್ಲಿ ಅಹುದಹುದೆನಿಸುವ ಕಾಣಾ ಬಸವಣ್ಣಾ. ॥೫॥

ಹೀಗೆಂದು ಚಿಕ್ಕದಣ್ಣಾಯಕರು ವಿನೈಸಲು, ಅವಕ್ಕೆ ಬಸವರಾಜ ದೇವರು ನಿರೂಪಿಸಿದ ಪ್ರಸ್ಥಾವದ ವಚನ.

ಗುರುವಿಂಗೆ ನೀನೆ ಕರ್ತ. ಲಿಂಗಕ್ಕೆ ನೀನೆ ಕರ್ತ. ಜಂಗಮಕ್ಕೆ ನೀನೆ ಕರ್ತ. ಪ್ರಸಾದಕ್ಕೆ ನೀನೆ ಕರ್ತ. ಉಪದೇಶಕ್ಕೆ ನೀನೆ ಕರ್ತ. ಕೂಡಲ ಸಂಗಮದೇವರು ಸಾಕ್ಷಿಯಾಗಿ ಎನಗೆಯು ನೀನೆ ಕರ್ತನಾದ ಕಾರಣ ನಾನು ಬೇಕೆನಲಮ್ಮೆ. ಬೇಡೆನಲಮ್ಮೆ ಕಾಣಾ ಚನ್ನಬಸವಣ್ಣಾ. ॥೬॥

ಎನಗೆ ನೀನೇ ಕರ್ತನಾದ ಕಾರಣ ನೀನೆ ಹಗೆ ಮಾಡಿದಡೆ ಆ ಹಗೆಯ ಪ್ರಸಾದವೆಂಬೆನಲ್ಲದೆ, ಬೇರೆ ಸ್ವತಂತ್ರವನರಿಯೆನೆಂದು ಬಸವರಾಜ ದೇವರು ನಿರೂಪಿಸಲು, ಚಿಕ್ಕದಣ್ಣಾಯಕರು ಆ ಉತ್ತರಕ್ಕೆ ಮಹಾ ಪ್ರಸಾದವೆಂದು ಅನುಗ್ರಹವ ಮಾಡಿಸಿಕೊಂಬ ಪ್ರಸ್ಥಾವದ ವಚನ. ॥

ದೇವ ದೇವ ಮಹಾಪ್ರಸಾದ ತನ್ನ ರೂಪ ತಿಳಿದು ನೋಡಬೇಕೆಂದು ಕನ್ನಡಿಯನುಪಾವಸ್ಥೆಯಂ ಮಾಡಲು, ಆ ಕನ್ನಡಿ ಬೇಕು ಬೇಡೆಂಬುದೇ ಅಯ್ಯ? ಪತಿಯಾಜ್ಞೆಯಿಂದ ಸತಿಪತಿಭಾವ ಧರಿಸೆಂದರೆ ಸಂಯೋಗ ಕಾಲದಲ್ಲಿ ಅಲ್ಲಪೆಂದೆನಬಹುದೇ? ನೀವೆ ಮಾಡಿದರೆ ನೀವೆ ಮಾಡಿದುದು. ನಾನೆ ಮಹಾಪ್ರಸಾದವ ಸ್ವೀಕರಿಸಿದರೂ ನೀವೆ ಮಾಡಿದುದು. ಅಂಗೈಯ್ಯ ಲಿಂಗದ ಲಕ್ಷಣವ ನೋಡಿ ಎಂದು ಕೈಯ್ಯಲ್ಲಿ ಕೊಟ್ಟರೆ, ಲಿಂಗದ ಲಕ್ಷಣವ ನೋಡಲಾಗದೆಂದು ಚನ್ನ ಸಂಗಮನಾಥನಕೋ ಎಂದು ಕೊಟ್ಟರೆ ಮಹಾಪ್ರಸಾದವೆಂದು ಕೈಕೊಂಡೆನು. ಗುರು ಬೆದರಿ ಅಂಜಿದರೆ ಮನವ ಸಂತೈಸಿ, ಏಕಾರ್ಥದ ಭೇದವ ತೋರಿ ಬಿನ್ನಹವ ಮಾಡಿದೆನು. ಕೂಡಲ ಚನ್ನಸಂಗಮ ದೇವರ ಮಹಾ ಮನೆಯ ಗಣಂಗಳು ಮೆಚ್ಚಲು ಸಂಗನ ಬಸವಣ್ಣನ ಕರುಣದ ಶಿಸುವೆಂಬುದ ಮೂರು ಲೋಕವೆಲ್ಲವು ಅರಿಪ ಜಯಜಯ ಎನುತಿದ್ದಿತು. ॥೭॥

ಮತ್ತಂ. ಕೃತಾಯುಗ, ತ್ರೇತಾಯುಗ, ದ್ವಾಪರ ಕಲಿಯುಗ ವಿಲ್ಲದಿಂದತ್ತತ್ತ ನೋಡಾ! ಧರೆಯು ಬ್ರಹ್ಮಾಂಡವು ಮೂರುತಿಗೊಳ್ಳದವಲಿಂದತ್ತತ್ತಲಾವ ಮಹಾಪ್ರಸಾದವ ಸಾಧಿಸಿ ತಂದು ಎನ್ನ ಕೈಯ್ಯಲ್ಲಿ ಕೊಟ್ಟನಯ್ಯ ನಿಕ್ಷೇಪವಾಗಿ ಕೂಡಲ ಚನ್ನಸಂಗೈಯ್ಯನಲ್ಲಿ ಬಸವಣ್ಣನೆಂಬ ಗುರುಲಿಂಗವು. ॥೮॥

ಇಂತು ಬಸವರಾಜ ದೇವರ ಕೈಯ್ಯಲ್ಲಿ ಉಪದೇಶವ ಪಡೆದು ಲಿಂಗಾನುಗ್ರಹವ ತಾಳ್ದ ಚಿಕ್ಕದಣ್ಣಾಯಕರು ತಮಗೆ ಲಿಂಗಸ್ಥಾಯತ ಸಂಬಂಧ ಸ್ವಯವಾದ ಭೇದಮಂ ವಿವೇಕದಿಂ ಪ್ರತಿಷ್ಠಿಸಿಕೊಂಡ ಪ್ರಸ್ಥಾವದ ವಚನ. ॥

ಭಾವದಲ್ಲಿ ಗಮನ, ಪ್ರಾಣದಲ್ಲಿ ಲೋಭ, ಜಿಹ್ವೆಯಲ್ಲಿ ರುಚಿ, ಶ್ರೋತ್ರದಲ್ಲಿ ಕುಶಬ್ದ, ನಾಸಿಕದಲ್ಲಿ ದುರ್ಗಂಧ, ನೋಟದಲ್ಲಿ ಕಾಮ, ಶಬ್ದದಲ್ಲಿ ವಿರೋಧ, ಇಂತಹ ಭವಿಯ ಕಳೆದು, ಭಕ್ತನ ಮಾಡಿದ ಪರಿ ಎಂತೆಂದಡೆ, ಆಕಾರವಿಲ್ಲದಂದಿನ, ನಿರಾಕಾರವಿಲ್ಲದಂದಿನ, ಕಾಮನ ಸುಟ್ಟ ಭಸ್ಮವಿಲ್ಲದಂದಿನ, ತ್ರಿಪುರವ ಸುಟ್ಟ ಭಸ್ಮವಿಲ್ಲದಂದಿನ, ಕಾಲನ ಸುಟ್ಟ ಭಸ್ಮವಿಲ್ಲದಂದಿನ, ಆದಿ ಆಧಾರವಿಲ್ಲದಂದಿನ, ಚಿದ್ವಿಭೂತಿಯನೆ ತಂದು, ಪಟ್ಟವ ಕಟ್ಟಿದರೆ, ಭಾವಕ್ಕೆ ಗುರುವಾಯಿತ್ತು. ಪ್ರಾಣಕ್ಕೆ ಲಿಂಗವಾಯಿತ್ತು. ಜಿಹ್ವೆಗೆ ಪ್ರಸಾದವಾಯಿತ್ತು. ಶ್ರೋತ್ರಕ್ಕೆ ಶಿವಮಂತ್ರವಾಯಿತ್ತು. ನಾಸಿಕಕ್ಕೆ ಸುಗಂಧವಾಯಿತ್ತು. ನೋಟಕ್ಕೆ ಜಂಗಮವಾಯಿತ್ತು. ಶಬ್ದಕ್ಕೆ ಸಂಭಾಷಣೆಯಾಯಿತ್ತು. ಇಂತು ಪೂರ್ವದ ಗುಣಂಗಳೆಲ್ಲವಕಳೆದು, ಪುನರ್ಜಾತನಾದ ಕಾರಣ ಕೂಡಲ ಚನ್ನ ಸಂಗಯ್ಯನಲ್ಲಿ ಬಸವಣ್ಣನಿಂದೆ ಸರ್ವಾಂಗ ಲಿಂಗವಾನೆನು. ॥೯॥

ಮತ್ತಂ, ಪೃಥ್ವಿ, ಅಪ್ಪು, ತೇಜ, ವಾಯು, ಆಕಾಶವೆಂಬ ಪಂಚ ಭೂತಂಗಳಲ್ಲಿ ಪಂಚಲಿಂಗ ಪ್ರತಿಷ್ಠೆಯ ಮಾಡಿದನಯ್ಯ! ಮನ, ಬುದ್ಧಿ, ಚಿತ್ತ, ಅಹಂಕಾರವೆಂಬ ಅಂತಃಕರಣ ಚತುಷ್ಟಯವಲ್ಲಿ ಚತುರ್ಮುಖ ಲಿಂಗವನು ಪ್ರತಿಷ್ಠೆಯ ಮಾಡಿದನಯ್ಯ! ಬಹಿರಂಗ ಹತವ ಮಾಡಿ ಶ್ರೋತ್ರ, ಘ್ರಾಣ, ತ್ವಕ್ಕು, ಜಿಹ್ವೆ, ನೇತ್ರ, ವಾಕ್ಕು, ಪಾಣಿ, ಪಾದ, ಪಾಯು, ಗುಹ್ಯಗಳೆಂಬ ದಶ ಇಂದ್ರಿಯಂಗಳಲ್ಲಿ ದಶಮುಖ ಲಿಂಗಪ್ರತಿಷ್ಠೆಯ ಮಾಡಿದನಯ್ಯ! ಅಂತರಂಗ ಬಹಿರಂಗ ಹತವ ಮಾಡಿದನಯ್ಯ, ಕೂಡಲ ಚನ್ನ ಸಂಗಮದೇವ ಎನ್ನ ಶ್ರೀಗುರು ಬಸವಣ್ಣನು. ॥೧೦॥

ಮತ್ತಂ, ಹಸ್ತ ಮಸ್ತಕ ಸಂಯೋಗವಾಗದ ಮುನ್ನ, ಯೌವ್ವನ
ಮಥನವಾಯಿತ್ತು. ಅವುದು ಅಂತರಂಗವೆಂಬೆ? ಅವುದು ಬಹಿರಂಗ
ವೆಂಬೆ? ಅವುದು ಆತ್ಮ ಸಂಗವೆಂಬೆ? ಹಸ್ತಮಸ್ತಕ ಸಂಯೋಗವೆಂಬುದೆ
ಬಹಿರಂಗ, ಮನ ಸಂಯೋಗವೆಂಬುದೆ ಅಂತರಂಗ. ಕೂಡಲ ಚನ್ನ
ಸಂಗೈಯ್ಯನಲ್ಲಿ ಆತ್ಮ ಸಂಗವಾಯಿತ್ತು. ॥೧೧॥

ಚನ್ನಬಸವರಾಜ ದೇವರು ತಮಗೆ ಉಪದೇಶವ ಮಾಡಿದ ಮಹಾ
ತ್ಮಿಯನು ವಿವೇಕಮುಖದಿಂದರಿದರಿದು, ಪರಿಣಾಮಿಸಿ ಕೃತನಿಶ್ಚಯವನೈದಿದ
ಪ್ರಸ್ತಾವದ ವಚನ.॥

ಪ್ರಥಮ ಗುರು ಕಾಣುವಿಕೆಯಾಗಿ ಕರ್ಮಂಗಳು ಬಿಚ್ಚಿಬೆದರಿದವು.
ಹುಸಿಯಾಮಿಷ ತಾಮಸ ಕುಟಿಲಂಗಳು ಕಳೆದು, ತಮಗೆನಿಂದಿರೆ ತಾವಿ
ಲ್ಲೆನುತ್ತಿರ್ದವು. ಸದ್ಗುರು ಕಾರುಣ್ಯ ಹಸ್ತ ಮಸ್ತಕ ಸಂಯೋಗವಾದಲ್ಲಿ
ಪೂರ್ವಗುಣವಳಿದು ಪುನರ್ಜಾತನಾಗಿ ಕರಣಾದಿ ಗುಣಂಗಳ ಕಳೆದು,
ವಲಿಂಗದಲ್ಲಿ ಉಳಿದು, ಅನುಪಮ ಸುಖಸಾರಾಯ ಶರಣನೆನಿಸಿದರೆ ಇವ
ರಿದು ಲಿಂಗದಲ್ಲಿ ತದ್ಗತನಾಗಿರ್ದೆನು. ಜಂಗಮದಲ್ಲಿ ಕರುಣವ ಪಡೆದು,
ಭವಿಯನೊಲ್ಲೆನೆಂದು ಬೇರೆ ನಿಂದ ಕಾರಣ ಕೂಡಲ ಚನ್ನಸಂಗಮದೇವ
ನಮ್ಮ ಶರಣ ಬಸವಣ್ಣ ಭವ ಕಲ್ಪಿತವ ಕಳೆದನು. ॥೧೨॥

ಮತ್ತಂ, ಚರಣವಿಡಿದಂಗೆ ಕರುಣಿ ಕಂದೆರವೆಯು ಮಾಡಬೇಕೆಂದು,
ಗುರುಹಿಂದ ಬಂದ ಕಾಯದ ಕರ್ಮವ ಕಳೆದು, ಕರುಣಿ ಕಂದೆರವೆಯ
ಮಾಡಿದ ಪ್ರಾಣಲಿಂಗ ಸಂಗವೆಂತಿದ್ದುದೆಂದರ್ಥ, ಆಲಿ ನುಂಗಿದ ನೋಟ
ದಂತೆ, ಬಯಲ ನುಂಗಿದ ಬ್ರಹ್ಮಾಂಡದಂತೆ, ಮುತ್ತನುಂಗಿದ ಉದಕದಂತೆ,
ಶಿಷ್ಪ ನುಂಗಿದ ಪರಿಮಳದಂತೆ ಇಪ್ಪ ಮಹಾನುಭಾವಿಗಳಿಗೆನ್ನ
ಕೂಡಲ ಗುರಿ ಮಾಡಿದೆಯಾಗಿ ಎನ್ನ ಒಡಲ ಪರಿಯಾಯ ಕೆಟ್ಟಿತ್ತಯ್ಯ
ಕೂಡಲ ಚನ್ನಸಂಗಮದೇವಾ. ॥೧೩॥

ಹರ ತನ್ನ ರೂಪವ ತೋರಬೇಕೆಂದು ಗುರುರೂಪಾಗಿ ಮರ್ತ್ಯಕ್ಕೆ
ಂದು ಮನಸ್ಥಲಕ್ಕೆ ಮಂತ್ರವಾದನು. ತನುಸ್ಥಲಕ್ಕೆ ಪ್ರಸಾದವಾದನು.
ರಸ್ಥಲಕ್ಕೆ ಲಿಂಗವಾದನು. ಪ್ರಾಣಸ್ಥಲಕ್ಕೆ ಜಂಗಮವಾದನು. ಇಂತೀ
ತ್ರಿವಿಧ ಸ್ವಾಯತವಾದನು ಕೂಡಲ ಚನ್ನಸಂಗನಬಸವಣ್ಣನು. ॥೧೪॥

ಮತ್ತಂ, ಮಾಂಸಪಿಂಡವೆಂದೆನಿಸದೆ, ಮಂತ್ರಪಿಂಡವೆಂದೆನಿಸಿದನು
ಸವಣ್ಣನು. ಪಾಯು ಪ್ರಾಣವೆಂದೆನಿಸದೆ, ಲಿಂಗ ಪ್ರಾಣವೆಂದೆನಿ

ಸಿದಾತ ಬಸವಣ್ಣನು. ಲಿಂಗ ಭರಿತನೆಂಬ ಶಬ್ದಕ್ಕೆ ಅಂಗವಿಸದೆ ಶರಣ
ಭರಿತ ಲಿಂಗವೆಂದೆನಿಸಿದನು ಕೂಡಲ ಚನ್ನಸಂಗನಲ್ಲಿ ಎನ್ನ ಪರಮ
ಗುರು ಬಸವಣ್ಣನು. ॥೧೫॥

ಮತ್ತಂ, ಆದಿ ಬಸವಣ್ಣ ಅನಾದಿ ಲಿಂಗವೆಂದೆಂಬರು. ಹುಸಿ
ಹುಸಿ. ಈ ನುಡಿಯ ಕೇಳಲಾಗದು. ಆದಿ ಲಿಂಗ ಅನಾದಿ ಬಸವ
ಣ್ಣನು. ಲಿಂಗವು ಬಸವಣ್ಣನ ಉದರದಲ್ಲಿ ಹುಟ್ಟಿತ್ತು. ಜಂಗಮವು
ಬಸವಣ್ಣನ ಉದರದಲ್ಲಿ ಹುಟ್ಟಿತ್ತು. ಪ್ರಸಾದವು ಬಸವಣ್ಣನನುಕರಿಸಲಾ
ಯಿತ್ತು. ಇಂತೀ ತ್ರಿವಿಧಕ್ಕೆ ಬಸವಣ್ಣನೆ ಕಾರಣನೆಂದರಿದೆನಯ್ಯ ಕೂಡಲ
ಚನ್ನ ಸಂಗಮದೇವಾ. ॥೧೬॥

ಮತ್ತಂ, ಲಿಂಗದ ಪೂರ್ವಾಶ್ರಯವಂ ಕಳೆದು, ಇದು ಪ್ರಾಣಲಿಂ
ಗವೆಂದು ತೋರಬಂದನಯ್ಯ ಬಸವಣ್ಣನು. ಲಾಂಛನದ ಪೂರ್ವಾಶ್ರ
ಯವ ಕಳೆದು ಲಿಂಗಜಂಗಮವೆಂದು, ತೋರ ಬಂದನಯ್ಯ ಬಸವಣ್ಣನು.
ಪ್ರಸಾದದ ಪೂರ್ವಾಶ್ರಯವ ಕಳೆದು, ಇದು ಮಹಾ ಪ್ರಸಾದವೆಂದು ತೋರ
ಬಂದನಯ್ಯ ಬಸವಣ್ಣನು. ಲಿಂಗ ಜಂಗಮ ಪ್ರಸಾದದ ಪೂರ್ವಾಶ್ರ
ಯವ ಕಳೆಯಲೆಂದು ಮರ್ತ್ಯಕ್ಕೆ ಜನಿಸಿದನಯ್ಯ ಕೂಡಲ ಚನ್ನಸಂಗ
ನಲ್ಲಿ ಬಸವಣ್ಣನು. ॥೧೭॥

ಮತ್ತಂ, ಸ್ತೋತ್ರ ಒಮ್ಮೆಯು ಶ್ರೀಗುರುವಿನ ಚರಣವ ನೆನೆಯ
ಲೊಡನೆ ಭವಬಂಧನ ಬಿಡುವುದು. ಗುರುವೆ ಶರಣು ಗುರುಲಿಂಗವೆ
ಶರಣು ಹರಿಬ್ರಹ್ಮಾದಿಗಳಿಗೆ ಅಗೋಚರವಾದ ಕೂಡಲ ಚನ್ನಸಂಗನೆಂಬ
ಲಿಂಗವ ತೋರಿದ ಬಸವಣ್ಣ ಗುರುವೆ ಶರಣು. ॥೧೮॥

ಮತ್ತಂ. ನಮಃ ಶಿವಾಯ ಲಿಂಗ, ಓಂ ನಮಃ ಶಿವಾಯ ಬಸವ
ಣ್ಣನು, ನಮಃ ಶಿವಾಯ ಲಿಂಗವು, ಓಂ ನಮಃ ಶಿವಾಯ ಬಸವಣ್ಣನು,
ಎನ್ನ ಮನಸ್ಥಲದೊಳಗೆ ಬೆಳಗಿ ತೋರಿದೆಯಾಗಿ, ಇದುಕಾರಣ ಕೂಡಲ
ಚನ್ನಸಂಗಯ್ಯ, ಆದಿ ಆಧಾರವಿಲ್ಲದಂದು ಮೊದಲಾಗಿ, ಓಂ ನಮಃ ಶಿವಾಯ
ವೆನುತಿರ್ದೆನು. ॥೧೯॥

ಮತ್ತಂ, ಬಸವಣ್ಣನು ಓಂಕಾರದಿಂದತ್ತತ್ತ ನಾದಬಿಂದುಕಳೆಗಳಿಂ
ದತ್ತತ್ತ, ಪ್ರಥಮಾಚಾರಿ ನೀನೆ. ಲಿಂಗಾಚಾರಿ ನೀನೆ. ಜಂಗಮಾಚಾರಿ
ನೀನೆ. ಪ್ರಸಾದಾಚಾರಿ ನೀನೆ, ಎನಗೆ ಸರ್ವಾಚಾರಿಯು ನೀನೆ. ಗತಿ

ಮತಿಯಾಗಿ ಎನ್ನನುಳುಹಿದ ಕಾರಣ ಕೂಡಲ ಚನ್ನ ಸಂಗಮದೇವಾ, ಆವ ನಿರ್ಣಯವಿಲ್ಲವೆಂದು ಓಂ ನಮಃ ಶಿವಾಯ ಎನುತಿರ್ದೆನು. ॥೨೦॥

ಇಂತು ಚಿಕ್ಕವಣ್ಣಾಯಕರು ಬಸವರಾಜ ದೇವರ ಕೈಯ್ಯಲ್ಲಿ ಅನುಗ್ರಹಮಂ ಪಡೆದು, ಪ್ರಾಣಲಿಂಗ ಸಂಬಂಧವಳವಟ್ಟು, ಅಂತರಂಗದ ಜ್ಞಾನ ಬಹಿರಂಗದ ಕ್ರಿಯಲ್ಲಿ ಸಮರಸವನೈದಿ ಸರ್ವಾಚಾರ ಸಂಪನ್ನನಾಗಿ ಕೃತಾರ್ಥನಾದ ಪರಮ ಹರುಷದಿಂದೆ ಬಸವರಾಜ ದೇವರ ಮಹಾತ್ಮೆಗೆ ನಮಸ್ಕಾರಮಂ ಮಾಡಿ, ಸ್ತೋತ್ರಮಂ ಮಾಡುತ್ತಿರಲು, ಆ ಬಸವರಾಜ ದೇವರು ಚನ್ನಬಸವಣ್ಣನ ಮಹಾತ್ಮೆಯಂ ನೋಡಿ ನೋಡಿ, ಪರಮ ಹರುಷಿತರಾಗಿರ್ದ ಪ್ರಸ್ಥಾವದ ವಚನ.॥

ಬಿತ್ತದೆ ಬೆಳೆಯದೆ ಬೆಳೆದ ಹೆಬ್ಬೆಳಸಿನ ರಾಸಿಯ ನೋಡಾ! ಸುಗಂಧ ಬಂಧ ಬಂಧುರವಂತೆ ಹುಟ್ಟುತ್ತಪೆ ಪರಿಮಳ. ಆದಿ ಅನಾದಿ ಇಲ್ಲದ ಮುನ್ನವೆ ತನ್ನಿಂದವೆ ತಾನಾಗಿರ್ದ ಕಾರಣ ಮುಟ್ಟದೆ ತಟ್ಟದೆ ಗುರುಕಾರುಣ್ಯವ ಪಡೆದು, ಲಿಂಗಸ್ಪಯವಾಗಿ, ಎನಗೆ ಗತಿ ಪಥವ ತೋರಿಸಬೇಕೆಂದು ಹಾಗಾವನು ಕೂಡಲ ಸಂಗಮದೇವರಲ್ಲಿ ಚನ್ನಬಸವಣ್ಣನು. ॥೨೧॥

ಮತ್ತಂ, ನಾನಾ ಸ್ಥಾನದಲ್ಲಿ ಬಂದು ತೊಳಲಿ ಬಳಲಿ ಅಳೆದುಳಿದು ನಿಂವ ನಿಲವನಲ್ಲ. ಮರ್ತ್ಯಲೋಕದಲ್ಲಿ ಶಿವಾಚಾರದ ಘನವು ಹೂಳಿ ಹೋಯಿತ್ತೆಂದು ಕರ್ತನು ತಾನೆ ಮಹಾಪ್ರಸಾದಿಯಾಗಿ ಉದಯವಾದನು. ಹಸ್ತ ಮಸ್ತಕ ಸಂಯೋಗವಿಲ್ಲದ ಮುನ್ನವೆ ಆದಿ ಗುರು ಅನಾದಿ ಶಿವನೆಂಬುವ ನೆಲೆಮಾಡಿ ಸಂಗಮನಾಥನೆಂಬ ಲಿಂಗವನೆನ್ನ ಕೈಯ್ಯಲ್ಲಿ ಕೊಟ್ಟು ಸಾಮರ್ಥ್ಯದಿಂದೆ ಅನುಗ್ರಹಿಸಿಕೊಂಡನು. ಎನ್ನ ಹಿಂದಣ ಪೂರ್ವಾಪರವನೆತ್ತಿ ತೋರಿ ತನ್ನತ್ತ ತೆಗೆದುಕೊಂಡನು ಕೂಡಲ ಚನ್ನಸಂಗಮದೇವರಲ್ಲಿ ಚನ್ನಬಸವಣ್ಣನು. ॥೨೨॥

ಮತ್ತಂ, ಅಯ್ಯ ನಿಮ್ಮ ಶರಣನ ಮರ್ತ್ಯಕ್ಕೆ ತಂದೆಯಾಗಿ ನೆನೆ ನೆನೆದು ಸುಖಿಯಾಗಿ ಅನು ಬದುಕಿದೆನಯ್ಯ! ಅದೇನು ಕಾರಣ ತಂದೆ ಎಂದರಿದೆನಯ್ಯ! ಎನ್ನ ಕಾರಣ ತಂದೆ ಎಂದರಿದೆನಯ್ಯ ಅರಿದಂದು ನಿಮ್ಮ ಶರಣನು ಆಚರಿಸುವ ಆಚರಣೆಯ ಕಂಡು ಕಣ್ದೆರೆದೆನಯ್ಯ ಕೂಡಲ ಸಂಗಮದೇವಾ. ॥೨೩॥

ಮತ್ತಂ. ಇಂದು ಹುಟ್ಟಿದ ಕೂಸಿಂಗೆ ಇಂದೇ ಜವ್ವನವಾಯಿತ್ತಯ್ಯ! ಆ ಕೂಸು ಬೀದಿಯಲ್ಲಿ ಒತ್ತೆಗೊಳಲು ನಿಂದಿತ್ತಯ್ಯ. ಇದರ ಸಂಗ ಸುಖಾನುಭವವನು ಕೂಡಲ ಸಂಗಮದೇವ ತಾನೆ ಬಲ್ಲ. ॥೨೪॥

ಇಂತು ಬಸವರಾಜ ದೇವರು ಚಿಕ್ಕವಣ್ಣಾಯಕರ ಸ್ತೋತ್ರಮಂ ಮಾಡಲು, ಆ ತನ್ನ ಬಸವರಾಜ ದೇವರು ಬಸವರಾಜ ದೇವರ ಪೂರ್ವಾಪರ ಸಂಬಂಧಮಂ ತಿಳಿಯ ಪೇಳಿ ಕೊಂಡಾಡುತ್ತಿರ್ದ ಪ್ರಸ್ಥಾವದ ವಚನ.॥

ಪ್ರಥಮ ಕಾಲದಲ್ಲಿ ನಿರಾಲಂಬಿಯಾಗಿರ್ದಿರಯ್ಯ! ದ್ವಿತೀಯ ಕಾಲದಲ್ಲಿ ತೇಜೋ ಮೂರ್ತಿಯಾಗಿರ್ದಿರಯ್ಯ! ತೃತೀಯ ಕಾಲದಲ್ಲಿ ನಾದಮೂರ್ತಿಯಾಗಿರ್ದಿರಯ್ಯ! ಚತುರ್ಥ ಕಾಲದಲ್ಲಿ ಚೈತನ್ಯರೂಪ ತಾಳ್ದಿರಯ್ಯ! ಪಂಚಮ ಕಾಲದಲ್ಲಿ ಧರ್ಮಮೂರ್ತಿಯಾಗಿರ್ದಿರಯ್ಯ! ಷಷ್ಠಮ ಕಾಲದಲ್ಲಿ ನೀವು ಪರಮಪುರುಷಾರ್ಥ ಸಾಧನವಾಗಿ ತ್ರಿವಿಧ ಭಕ್ತಿಗೆ ನೀವೆ ಕಾರಣವಾಗಿ ಬಂದಿರಿ. ನೀವು ಪ್ರಮಥರು ಸಹಿತ ಮುಟ್ಟಿ ಪ್ರಾಣಲಿಂಗದ ಪರಿವ ತೋರಿಸಬೇಕೆಂಬ ನಿಮಿತ್ಯ ಬೆಸನವಿಡಿದು, ನಿಮ್ಮ ಕರುಣದ ಶಿಸುವಾಗಿ ಹುಟ್ಟಿದೆ. ನಿಮ್ಮ ಕರಸ್ಥಲದಲ್ಲಿ ಕೂಡಲ ಚನ್ನ ಸಂಗಮದೇವ ನಿಮ್ಮ ಮಹಿಮೆಗೆ ನಮೋ ನಮೋ ಎನುತಿರ್ದೆನು. ॥೨೫॥

ಇಂತೀ ಚಿಕ್ಕದಣ್ಣಾಯಕರು ಪ್ರಾಣಲಿಂಗ ಸಂಬಂಧವ ಪರಿವ ತೋರಿಸಬೇಕೆಂಬ ನಿಮಿತ್ಯ ಬೆಸನನಿಡಿದು ಬಂದಿರೆಂದು ಬಿನ್ನೈಸಲು, ಅದಕ್ಕೆ ಬಸವರಾಜ ದೇವರು ನಿರೂಪಿಸಿದ ಪ್ರಸ್ಥಾವದ ವಚನ.॥

ಲಿಂಗ ಪ್ರಾಣದ ಸಕೀಲ ಸಂಬಂಧವೆಂತಿಪ್ಪುದೆಂದರಿಯೆನು. ಪ್ರಾಣ ಲಿಂಗದ ಸಕೀಲ ಸಂಬಂಧನೆಂತಿಪ್ಪುದೆಂದರಿಯೆನು. ಹುಸಿ ಹುಂಡನ ಮಾಡಿ, ಹೊರಗನೆ ಪೂಜಿಸಿ, ವೃಥಾ ದಿನಂಗಳು ಸವೆದು ಹೋದವು. ಕೂಡಲ ಸಂಗಮದೇವರಲ್ಲಿ ಎನ್ನ ಪ್ರಾಣ ನಿಕ್ಷೇಪವಹ ಭೇದವ ತೋರಾ ಚನ್ನಬಸವಣ್ಣಾ. ॥೨೬॥

ಹೀಗೆಂದು ಬಸವರಾಜ ದೇವರು ಬಿನ್ನೈಸಲು, ಆದಕ್ಕೆ ಚಿಕ್ಕವಣ್ಣಾಯಕರು ಪ್ರಾಣಲಿಂಗ ಸಂಬಂಧವ ಭೇದಮಂ ತಿಳುಹುತಿರ್ದ ಪ್ರಸ್ಥಾವದ ವಚನ.॥

ಹೋ ಹೋ, ಗುರುವೇ ನಿಮ್ಮ ಕರಕಮಲದಲ್ಲಿ ಉದಯಿಸಿ ಅಂಗದ ಮೇಲೆ ಲಿಂಗವ ಧರಿಸಿ, ಆ ಲಿಂಗದಲ್ಲಿ ಅಂಗವಾಗಿ, ಪ್ರಾಣಲಿಂಗ ಲಿಂಗ

ಪ್ರಾಣವೆಂಬುವ ನಾನು ಕಂಡೆನು. ನಿಮಗಾನು ತೋರಲು ಸಮರ್ಥನೆ? ಆಚಾರ ಅಂಗದ ಮೇಲೆ ನೆಲೆಗೊಂಡು ಇಷ್ಟಲಿಂಗದಲ್ಲಿ ದೃಷ್ಟಿನಟ್ಟು ಭಾವ ಸಂಪನ್ನನಾಗಿಪ್ಪ ನಿಮ್ಮ ಘನವ ನಾನೆತ್ತ ಬಲ್ಲೆನು? ಸುಜ್ಞಾನ ಸಮಾಧಿಯೊಳಗೆ ಬಯಕೆಯಡಗಿ ಪರಿಣಾಮ ಲಿಂಗದಲ್ಲಿ ಮನಸು ಲಯವಾಗಿ, ನಿಜಲಿಂಗಸಂಗದಲ್ಲಿ ತೃಪ್ತರಾಗಿಪ್ಪಿರಿ ನೀವು. ನಿಮ್ಮ ಘನವ ನಾನೆತ್ತ ಬಲ್ಲೆನು? ಆಂಗದ ಮೇಲೆ ಲಿಂಗವುಳ್ಳುದೆಲ್ಲವು ಸಂಗಮನಾಥನೆಂದಲ್ಲಿ ಜಂಗಮಲಿಂಗ ಪ್ರಾಣಿಯಾಗಿಪ್ಪಿರಿ ನೀವು. ನಿಮ್ಮ ಘನವ ನಾನೆತ್ತ ಬಲ್ಲೆನಯ್ಯ? ಲಿಂಗಕ್ಕೆ ಬಂದ ಪದಾರ್ಥವಲ್ಲವೆ ಕೊಳ್ಳಿಸಿದು ಮನ ನಿಸಲು ತನು ನಿಸಲು ಮಾಡಿ, ಸರ್ವಾಂಗವೆಲ್ಲವನು ಪ್ರಾಣದಲ್ಲಿ ಆರ್ಪಿಸಿ ನೀವು ತೊಲಗಿ ನಿರಾಭಾರಿಯಾಗಿ ಪ್ರಸಾದಲಿಂಗ ಪ್ರಾಣಿಯಾಗಿಪ್ಪಿರಿ. ನಿಮ್ಮ ಘನವ ನಾನೆತ್ತ ಬಲ್ಲೆನಯ್ಯ? ಅನಾದಿ ಶಿವಂಗೆ ಆಧಾರವಿಲ್ಲೆಂದು, ಅಖಂಡಿತವ ನಿನ್ನ ರೋಮದ ಕೊನೆಯಲ್ಲಿ ಧರಿಸಿ, ಮಹಾಲಿಂಗ ಪ್ರಾಣಿಯಾಗಿಪ್ಪಿರಿ ನೀವು. ನಿಮ್ಮ ಘನವ ನಾನೆತ್ತ ಬಲ್ಲೆನಯ್ಯ! ಕೂಡಲ ಚನ್ನಸಂಗಯ್ಯ ಸಾಕ್ಷಿಯಾಗಿ, ನಿಮ್ಮ ಪ್ರಾಣಲಿಂಗ ಸಂಬಂಧದ ಸೆರಗು ಸೋಂಕಿನ ಒಕ್ಕುಮಿಕ್ಕ ಪ್ರಸಾದಿ ನಾನು ಕಾಣಾ ಸಂಗನಬಸವಣ್ಣ. ॥೨೭॥

ಇಂತು ಪ್ರಾಣಲಿಂಗ ಸಂಬಂಧವ ನಿರ್ಣಯವುಂ ಉಪಾಯದಿಂ ಸ್ತೋತ್ರಮುಖದಿಂದವೆ ಚಿಕ್ಕದಣ್ಣಾಯಕರು ಹೇಳಿದ ಹಾಗೆ ಹೇಳಿ ತೋರಲು, ಅದಕ್ಕೆ ಬಸವರಾಜ ದೇವರು ಪ್ರಾಣಲಿಂಗವಲ್ಲಿ ಸಂಬಂಧವ ಭೇದವುಂ ತನ್ನೊಳು ತಾನೆ ಕಂಡು ಹಾರೈಸಿ ಹರುಷಂ ಬಟ್ಟು ಆ ಚಿಕ್ಕದಣ್ಣಾಯಕರ ಕೊಂಡಾಡಿದ ಪ್ರಸ್ಥಾವದ ವಚನ॥

ಅಯ್ಯ, ಮರದೊಳಗೆ ಅಗ್ನಿ ಇದ್ದರೇನಯ್ಯ! ಮಥನಿಸಿ ತೋರುವರಿಲ್ಲದನ್ನಕ್ಕರ ಕಾಣಬಹುದೆ? ಜಗದೊಳಗೆ ಕೂಡಿ ಪರಿಪೂರ್ಣ ಶಿವನೆಂದರೆ ಅಂತರಂಗವಲ್ಲಿ ಕಾಣ ಬಹುದೆ? ಆದಿಲಿಂಗ ಅನಾದಿಶರಣನ ಭೇದವ ತಿಳುಹಿ ನಿಜಪ್ರಾಣದೊಳಗಿಪ್ಪ ಸುಜ್ಞಾನ ಲಿಂಗವ ಕರಸ್ಥಲಕ್ಕೆ ತಂದು, ಆ ಕರಸ್ಥಲದ ಲಿಂಗವನ್ನ ಸರ್ವಾಂಗದೊಳಗೆ ಪ್ರತಿಷ್ಠಿಸಿ ತೋರಿ ನಿತ್ಯ ನಿತ್ಯ ನಿಜಲಿಂಗೈಕ್ಯವಹ ಹೊಲಬಿನ ಹರಿವ ತೋರಿಸಿ ಮರ್ತ್ಯಲೋಕದೊಳಗೆಲ್ಲ ಇಂದು ಮೊದಲಾಗಿ, ಪ್ರಾಣಲಿಂಗದ ಘನವ

ಪರಶಿವ ಭಕ್ತಿಯನುದ್ಧರಿಸಿದನು. ಕೂಡಲ ಸಂಗಮದೇವರಲ್ಲಿ ಚೆನ್ನಬಸವಣ್ಣನೆನ್ನ ನಾಗುಮಾಡಿ ಉಳುಹಿದನಾಗಿ, ನಾನು ಕೃತಾರ್ಥನಾದೆನೆಂದು ಬಸವರಾಜ ದೇವರು ನಿರೂಪಿಸಲು, ಅದಕ್ಕೆ ಚಿಕ್ಕದಣ್ಣಾಯಕರು ಬಿನ್ನಪಿಸಿದ ಪ್ರಸ್ಥಾವದ ವಚನ. ॥

ಮರ್ತ್ಯಲೋಕ ಶಿವಲೋಕವೆಂಬುದೊಂದು ನಿಚ್ಚಣಿಕೆಯಾದವು ನೋಡಾ! ದೇವ, ನೀವೀಕಲ್ಯಾಣಕ್ಕೆ ಬಂದವತರಿಸಿದಲ್ಲಿ ಸತ್ಯಶರಣರೆಲ್ಲರು ಪಾವನವ ಮಾಡಲೆಂದು ಬಂದರೆ ಜನ್ಮವಲ್ಲಿ ಬಂದನೆಂದು ನುಡಿಯಬಹುದೆ? ಕರ್ತು ರೂಪು ಭೃತ್ಯಂಗೆ ಬಂದಲ್ಲಿ ಆ ಭೃತ್ಯ ಕರ್ತನನ ನಸಿಕೊಂಡು ಬಂದವನಲ್ಲ. ಸತ್ಯಸದಾಚಾರವ ಹರಹಿ ಮರ್ತ್ಯರ ಪಾವನ ಮಾಡಿ, ನಿಜಲಿಂಗ ಸಮಾಧಿಯೊಳು ನಿಲ್ಲುವರಿನ್ನಾರು ಹೇಳಾ ನೀನಲ್ಲದೆ? ಕೂಡಲ ಚೆನ್ನಸಂಗಮದೇವರು ಸಾಕ್ಷಿಯಾಗಿ, ನಿಮಗೆ ಭವ ಉಂಟೆಂದು ಮನದಲ್ಲಿ ಹಿಡಿದರೆ ಸಂಗನಬಸವಣ್ಣ ನಿಮ್ಮ ಶ್ರೀಪಾದ ಪಾಣಿ. ॥೨೯॥

ನೀವು ಮರ್ತ್ಯಕ್ಕೆ ಬಂದರೇನು? ಶಿವಲೋಕದಲ್ಲಿ ಇದ್ದರೇನು? ನಿಮಗೆ ಭವಂಗಳಿಲ್ಲವೆಂದು ಚಿಕ್ಕದಣ್ಣಾಯಕರು ಬಿನ್ನೈಸಲು, ಅದಕ್ಕೆ ಬಸವರಾಜ ದೇವರು ಪರಮ ಹರುಷಿತರಾಗಿ ನಿಜ ಸಮಾಧಿಯೊಳು ಬೆರಿಸುವ ಭೇದ ಎನಗೆಂದು ಸಯವಪ್ಪುದೆಂದು ಉಪಾವಸ್ಥೆಯಂ ಮಾಡುವ ಪ್ರಸ್ಥಾವದ ವಚನ. ॥

ಲಿಂಗವ ಪೂಜಿಸಿ ಫಲವೆನಯ್ಯ ಸಮರತಿ ಸಮುಕಳಿ ಇಲ್ಲದನ್ನಕ್ಕರ? ಲಿಂಗವ ಪೂಜಿಸಿ ಫಲವೇನಯ್ಯ ಕೂಡಲ ಸಂಗಮದೇವರಲ್ಲಿ ನದಿಯೊಳಗೆ ನದಿ ಬೆರೆಯದನಕ್ಕರಾ? ॥೩೦॥

ಇಂತು ಬಸವರಾಜ ದೇವರು ಲಿಂಗದೊಳು ಒಡವೆರಸಿ ಬೆರಸಿ, ಸಮ ಸೈಕ್ಯ ಮನ ಮಗ್ನ ಯೋಗವೆಂದಾಗುವದೆಂದು ಚನ್ನಬಸವರಾಜ ದೇವರ ಬೆಸಗೊಳಲು, ಆ ಚನ್ನಬಸವರಾಜ ದೇವರು ಸುಜ್ಞಾನದೃಷ್ಟಿಯಿಂ ನೋಡಿ ಆ ಲಿಂಗದ ಪರಮಕಳಾ ಚೈತನ್ಯವೆ ಜಂಗಮ, ಆ ಜಂಗಮವೆ ಅನಾದಿ ಗಣನಾಥ ಅಲ್ಲಮಪ್ರಭುದೇವರು ನೀವು ಜಂಗಮ ಪ್ರಾಣಿ ಎಂಬುವ ನೋಡಿ ಅರಸಿಕೊಂಡು, ಬರುತ್ತಿಹರೆ ಅವರ ಬರವನೀಗವೆ ತೋರುವೆನೆಂದು ಬಿನ್ನೈಸುವ ಪ್ರಸ್ಥಾವದ ವಚನ. ॥

ಲಿಂಗಜಂಗನು, ಜಂಗಮಲಿಂಗದ ಮುಖವ ನೀವಲ್ಲದೆ ಇನ್ನು ಬಲ್ಲವರಾರಯ್ಯ? ಜಂಗದ ಮೇಲೆ ಲಿಂಗವುಳ್ಳವೆಲ್ಲವು ಸಂಗಮನಾಥನೆಂದಲ್ಲಿ ಪರವಾದಿ ಬಿಜ್ಜಳನು ಒಲೆದು ನೋಡಲೆಂದಟ್ಟಿದರೆ ಹಗರಣಿಗರ ಜಂಗಮ ಮುಖದಲ್ಲಿ ಲಿಂಗವ ಮಾಡಿದರಾರು ಹೇಳಾ ನೀವಲ್ಲದೆ? ಮರೆದ ಮಾನೀಷನ ಕರೆದು, ಓ ಎನಿಸಿ, ನುಡಿಸಿ, ಉಣಿಸಿ, ಜಂಗಮಲಿಂಗಪ್ರಾಣಿ ಸಂಗನ ಬಸವಣ್ಣನೆಂಬ ಧ್ವಜನನೆತ್ತಿ ಮೆರೆದವರಾರು ಹೇಳಾ ಈ ಕಲ್ಯಾಣದಲ್ಲಿ ನೀವಲ್ಲದೆ? ಜಂಗಮ ಮುಖದಿಂದಲ್ಲದೆ ಲಿಂಗವನರಿಯೆನೆಂದು, ಎನ್ನ ಮನಕ್ಕೆ ಸಂದೇಹವನೊಡ್ಡಿ ಜಾರಿದರೆ ನಾನು ಸೈರಿಸಬಲ್ಲೆನೆ? ನೀನು ಜಂಗಮ ಮುಖ ಲಿಂಗಸಂಬಂಧಿ ಎಂಬುದಕ್ಕೆ ಆದಿ ಗಣನಾಥನು ಅಲ್ಲಮಪ್ರಭುವೆಂಬ ನಾಮವ ಧರಿಸಿ ನಿನ್ನ ನರಸಿಕೊಂಡು ಬರುತ್ತಲ್ಲಿವಾಸಿ ಕೂಡಲ ಚನ್ನಸಂಗಮದೇವರು ಸಾಕ್ಷಿಯಾಗಿ, ಸಂಗನ ಬಸವಣ್ಣ ನೀನೆ ಜಂಗಮ ಪ್ರಾಣಿ ಎಂದು ನಾನು ನಂಬಿದೆನು. ॥೩೧॥

ಅಲ್ಲಮಪ್ರಭುದೇವರು ನಿಮ್ಮನರಸಿಕೊಂಡು ಬಪ್ಪುದನೀಗಳಿ ತೋರಿದಪೆನೆಂದು ಚಿಕ್ಕವಣ್ಣಾಯಕರು ಬಿನ್ನೈಸಲು ಅದಕ್ಕೆ ಬಸವರಾಜದೇವರು ಪರಮ ಹರುಷಿತರಾದ ಪ್ರಸ್ಥಾವದ ವಚನ. ॥

ಜಂಗಮಲಿಂಗವೆಂಬ ಭಾವ ಫಲಿಸಿದರೆ ಇಂದಿನ ಪುಣ್ಯಕ್ಕೆ ಸರಿಯುಂಟೆ? ಲಿಂಗದ ಒಡಲ ಮನೆ ಮಾಡಿಪ್ಪ ಜಂಗಮವೆನ್ನ ಕಣ್ಣ ಮುಂದೆ ತೋರಿದರೆ ಇಂದೆನ್ನ ಭಾಗ್ಯಕ್ಕೆ ಕಡೆ ಇಲ್ಲ. ಆ ಜಂಗಮವ ಬಿಟ್ಟಕ್ಕನ್ನ ಮನೆಗೆ ಬಂದಡೆ ಕೂಡಲ ಸಂಗಮದೇವರಲ್ಲಿ ಸಲುಗೆಯವರವ ಹಡೆವೆನು ಕಾಣಾ ಚನ್ನಬಸವಣ್ಣ ನೀನಹುದಿನಲು. ॥೩೨॥

ಹೀಗೆಂದು ಚಿಕ್ಕವಣ್ಣಾಯಕರು ಹಿರಿಯವಣ್ಣಾಯಕರು ತಮ್ಮೊಳಗೆ ತಾವು ಜ್ಞಾನಾನುಭಾವವ ಸಂಬಂಧಿಸಿ ನೋಡಿ ಕಂಡು ಈಗಳಿ ಪ್ರಭುದೇವರ ಬರವು ತಪ್ಪಲರಿಯದೆಂದು ಮಹಾನುಭಾವ ಗೋಷ್ಠಿಯೊಳಗೋಲಾಡುತ್ತಿರಲು, ಇತ್ತಲಾ ನಿಃಕಲ ಪರಶಿವತತ್ವದ ಕಾರಣಾವತಾರದ ಪ್ರಭುದೇವರು ಸಿದ್ಧರಾಮಯ್ಯ ದೇವರು ಸೊನ್ನಲಿಗೆಯ ಪುರವಂ ಸೊರವಮಟ್ಟಿಜನಂತ ದೇಶಂಗಳೊಳು ದೇಶಾಂತರವಂ ಮಾಡುತ್ತ ಹಲಕೆಲವು ದಿವಸಂಗಳಂ ಕಳಿವುತ್ತ ಬಂದು ಮರ್ತ್ಯಲೋಕದ ಸಕಲೈಶ್ವರ್ಯದ ಭಂಡಾರದ ನಿಜ ನಿಕಯವೆನಿಸಿಪ್ಪ, ಮತ್ತಂ, ಭೂಮಿಗೆ ಹೃತ್ಕಮಲಕರ್ಣಿಕಾವಾ

ವೆನಿಸಿಪ್ಪ ವಾಣಿಯ ಮುಖದರ್ಪಣವೆನಿಸಿರ್ಪ ಸಕಲ ಕರ್ಮಂಗಳಂ ತೀವುವ ಕರಂಡವೆನಿಸಿರ್ಪ ಸತ್ಯದ ಸಾಗರ, ಭಕ್ತಿಯ ತವರ್ಮನೆ, ಮುಕ್ತಿಗೆ ಮುಖ, ಪುಣ್ಯದ ಪುಂಜ, ಅಭಿನವ ಕೈಲಾಸವೆನಿಸಿಪ್ಪ ಶ್ರೀಕಲ್ಯಾಣಮಂ ಕಂಡು ಸೊಕ್ಕು ಇಲ್ಲಿ ಬಸವರಾಜ ದೇವರು ಮೂರ್ತಿಗೊಂಡು ಇರುತಿರ್ಪರೆಂದು ಅರಿದು ಆ ಪುರಕ್ಕೆ ವಂದನೆಯ ಮಾಡಿ ಸ್ತುತಿಸುತ್ತ ಆ ಪ್ರಭುದೇವರು ಸಿದ್ಧರಾಮಯ್ಯ ದೇವರಿಗೆ ಆ ಕಲ್ಯಾಣಪುರಮಂ ತೋರಿಸಿ ಕೊಂಡಾಡುತಿರ್ದ ಪ್ರಸ್ಥಾವದ ವಚನ.

ಕಲ್ಯಾಣವೆಂಬ ಪ್ರಣುತೆಯಲ್ಲಿ ಭಕ್ತಿರಸವೆಂಬ ತೈಲವನೆರೆದು, ಅಚಾರವೆಂಬ ಬತ್ತಿಯಲ್ಲಿ ಬಸವಣ್ಣನೆಂಬ ಜ್ಯೋತಿಯ ಮುಟ್ಟಿಸಲು ತೊಳಗಿ ಬೆಳಗುತ್ತಿರ್ದಿತ್ತೈಯ್ಯ ಶಿವನ ಪ್ರತಾಪ. ಆ ಬೆಳಗಿನೊಳು ಒಪ್ಪುತ್ತಿರ್ದ ನಯ್ಯ ಅಸಂಖ್ಯಾತ ಭಕ್ತ ಮಹಾಗಣಂಗಳು. ಶಿವ ಭಕ್ತರಿರ್ದ ಕ್ಷೇತ್ರ ಪುನಮುಕ್ತ ಕ್ಷೇತ್ರವೆಂಬುದು ಹುಸಿಯೆ? ಶಿವ ಭಕ್ತರಿರ್ದ ದೇಶ ಪಾವನವೆಂಬುದು ಹುಸಿಯೆ? ಗುಹೇಶ್ವರ ಲಿಂಗವಲ್ಲಿ ಎನ್ನ ಪರಮಾರಾಧ್ಯರು ಸಂಗನಬಸವಣ್ಣನ ಮಹಿಮೆಯ ನೋಡಾ ಸಿದ್ಧರಾಮಯ್ಯ. ॥೩೩॥

ಇಂತು ಪ್ರಭುದೇವರು ಸಿದ್ಧರಾಮಯ್ಯ ದೇವರಿಗೆ ಕಲ್ಯಾಣಪುರದ ಮಹಾತ್ಮೆಯಂ ಹೇಳಿ ಕೊಂಡಾಡುತಿರ್ಪ ತತ್ಕಾಲೋಚಿತದೊಳು ಆ ಪುರದ ದ್ವಾರವಟ್ಟದ ಮುಂದೆ ಶಾಸನದೊಳು ಕಲ್ಯಾಣದ ಮಹಾತ್ಮೆಯನು ಚನ್ನ ಬಸವರಾಜ ದೇವರು ವಿವರವಾಗಿ ವಚನ ರೂಪಕವಾಗಿ ಬರೆದಿರಲು, ಅದಂ ಪ್ರಭುದೇವರು ಕಂಡು ಓದಿ ನೋಡಿದ ಪ್ರಸ್ಥಾವದ ವಚನ.

ಸ್ವಸ್ತಿ ಸಮಸ್ತ ಪ್ರಶಸ್ತ ಸಹಿತ ಶ್ರೀಮತ್ಕಲ್ಯಾಣಪುರದ ಮಹಾತ್ಮೆಯಂತೆಂದೊಡೆ, ವಿಸ್ತರಿಸಿ ಪೇಳುವೆನು ಎಲ್ಲ ಶಿವಗಣಂಗಳು ಕೇಳಿ ಕೃತಾರ್ಥರಾಗಿರಯ್ಯ. ಹದಿನಾಲ್ಕು ಭುವನಕ್ಕೆ ಕಲಶವೆಂದೆನಿಸುವ ರುದ್ರಲೋಕವ ಮರ್ತ್ಯಲೋಕಕ್ಕೆ ತಂದು, ಕಲ್ಯಾಣವೆಂಬ ಪುರವಾಗಿ ಹುಟ್ಟಿತ್ತು ನೋಡಿರಯ್ಯ! ಅಲ್ಲಿ ಸತ್ಯರು, ಸಾತ್ವಿಕರು, ನಿತ್ಯರು, ನಿಜೈಕ್ಯರು, ಮಹಾಜ್ಞಾನಿಗಳು, ಪರಮ ಶಿವಯೋಗಿಗಳು, ಶಿವಾನುಭಾವಸಂಪನ್ನರು, ಶಿವಲಿಂಗಪ್ರಾಣಿಗಳು, ಶಿವಪ್ರಸಾದ ಪಾದೋದಕ ಸಂಬಂಧಿಗಳು, ಶಿವಾಚಾರ ವೇದ್ಯರು, ಶಿವಾಗಮಸಾಧ್ಯರು, ಶಿವಸಮಯ ಪಕ್ಷರುಗಳಲ್ಲದೆ ಮತ್ತಾರು ಅಲ್ಲಿಲ್ಲ

ನೋಡಿರಯ್ಯಾ. ಪಾಪಿಗಳು, ಕೋಪಿಗಳು, ಅಸತ್ಯರು, ಅನಾಚಾರಿಗಳು ಹೋಗಬಾರದು ಕಲ್ಯಾಣವ. ವಿಾರಿ ಹೊಕ್ಕಿಹೆನೆಂಬವರಿಗೆ ಬಾಳಬಾ ಯಿಧಾರೆ ನೋಡಯ್ಯ. ಆ ಮಹಾಕಲ್ಯಾಣವ ವಿಸ್ತಾರ ತಾನೆಂತೆಂದೊಡೆ, ಹನ್ನೆರಡು ಯೋಜನ ಪರಿ ಪ್ರಮಾಣದ ವಿಸ್ತೀರ್ಣ ಪಟ್ಟಣಕ್ಕೆ ಮುನ್ನೂ ರರುವತ್ತು ಬಾಗಿಲುವಾಡ, ಆ ಬಾಗಿಲಿಂಗೆ ನೂರುಐವತ್ತೈದು ವಜ್ರದ ಹಾರೆಯ ಕದಂಗಳು, ಇನ್ನೂರಿಪ್ಪತ್ತೈದು ಕಲುಗೆಲಸದ ದ್ವಾರವಟ್ಟಕ್ಕೆ ನಾನೂ ರುಐವತ್ತು ಸುವರ್ಣದ ಕೆಲಸದ ಕದಂಗಳು, ಅಲ್ಲಿ ನೂರುಹದಿನೈದು ಜೋರಗಂಡಿ, ಕದಕ್ಕೆ ನೂರುಹದಿನೈದು ಮೊಳೆಯ ಕಂದಗಳು, ಇಪ್ಪತ್ತು ಬಾಗಿಲು, ಅವಾರಿಯಾಗಿಪ್ಪವಾಗಿ, ಅವಕ್ಕೆ ಕದಂಗಳಿಲ್ಲ. ಆ ಪಟ್ಟಣಕ್ಕೆ ಬಳಸಿ ಬಂಪ ಕೋಟಿ ನಾಲ್ವತ್ತೆಂಟು ಯೋಜನ ಪರಿ ಪ್ರಮಾಣ, ಬಾಹ ತ್ತರಮನೆ ಲಕ್ಷ, ಮಾಂಡಲಿಕರ ಮನೆ ಲಕ್ಷ, ಸಾವಂತರ ಮನೆ ಲಕ್ಷ, ರಾಯ ರಾವುತರ ಮನೆಯೊಳಗಡಗಿಹ ಮನೆಗಳಿಗೆ ಲೆಕ್ಕವಿಲ್ಲ. ದ್ವಾದಶ ಯೋಜನ ವಿಸ್ತೀರ್ಣ ಸೂರ್ಯವೀಥಿ ನೂರಿಪ್ಪತ್ತು. ದ್ವಾದಶ ಯೋಜನ ಸೋಮವೀಥಿ ನೂರಿಪ್ಪತ್ತೈದು. ಅದಕ್ಕಿನ್ನಿಗಲಾದ ಒಳಕೇರಿ ಹೊರಕೇರಿಗೆ ಗಣನೆ ಇಲ್ಲ. ಆ ಪಟ್ಟಣದೊಳಗೆ ಲಕ್ಷದ ಮೇಲೆ ತೊಂಭತ್ತಾರು ಸಾವಿರ ಶಿವಾಲಯ. ಆ ಶಿವಾಲಯಂಗಳಿಗೆ ಮುಖ್ಯವಾದ ತ್ರಿಪುರಾಂತಕ ದೇವರ ಶಿವಾಲಯ. ಮುನ್ನೂರರುವತ್ತು ಪದ್ಮಪತ್ರ ತೀವಿದ ಸರೋವರಂಗಳು ಎರಡು ಲಕ್ಷವು. ಎಂಭತ್ತೈದು ಸಾವಿರದ ಏಳನೂರೆಪ್ಪತ್ತು ದಾಸೋಹದ ಮಠಗಳು. ಈ ದಾಸೋಹದ ಮಠಂಗಳಿಗೆ ಮುಖ್ಯವಾದ ಬಸವರಾಜ ದೇವರ ಮಠದ ವಿಸ್ತೀರ್ಣ ಎಂತೆಂದೊಡೆ, ಯೋಜನವರೆಯ ಬಿನ್ನಾಣದ ಕಲುಗೆಲಸದ ಪೌಳಿ, ಅತಿಸೂಕ್ಷ್ಮದ ಕುಸುರಿಗೆಲಸದ ದ್ವಾರವಟ್ಟವೈದು, ಪಂಚಾಕ್ಷರದ ಶಾಸನ ಮಿಸುನಿಯ ಕಂಭದ ತೋರಣಂಗಳಲ್ಲಿ ರುದ್ರಾ ಕ್ಷೆಯ ಸೂಸಕ, ಆ ಬಾಗಿಲುವಾಡದಲ್ಲಿ ಒಪ್ಪುತಿಪ್ಪವಯ್ಯ. ನಂದಿಯ ಕಂಭದ ಸುವರ್ಣದುಪ್ಪರಿಗೆ ಧ್ವಜ, ಉಪ್ಪರಗುಡಿ ಪತಾಕೆ, ವ್ಯಾಸನ ಧ್ವಜ ಒಪ್ಪುತಿಪ್ಪವಯ್ಯ! ಅದರ ಮಧ್ಯದಲ್ಲಿ ಬಸವರಾಜ ದೇವರ ಸಿಂಹಾಸನದ ವಿಸ್ತೀರ್ಣದ ಪ್ರಮಾಣ, ಸಹಸ್ರ ಕಂಭದ ಸುವರ್ಣದುಪ್ಪರಿಗೆ, ಆ ಮನೆ ಸೆತ್ತಿದ ಹೊನ್ನಕಲಶ ಸಾವಿರ, ಗುರಲಿಂಗಜಂಗಮಕೆ ಪಾದಾರ್ಚನೆಯ ಮಾಡುವ ಹೊಕ್ಕರಣೆ, ನಾಲ್ಕು ಪುರುಷ ಪ್ರಮಾಣದ ಘಾತ, ಅಲ್ಲಿ ತುಂಬಿದ ಪಾದೋದಕದ ತುಂಬನುಚ್ಚಲು, ಬಿಳಿವ ರಾಜಸಾಲೆಯ ಗದ್ದಿ

ಹನ್ನೆರಡು ಖಂಡಗ, ಆ ಯೋಜನವರೆಯ ಬಿನ್ನಾಣದ ಅರಮನೆಯ ವಿಸ್ತೀರ್ಣದೊಳಗೆ ಲಿಂಗಾರ್ಚನೆಯ ಮಾಡುವ ಮಠದ ಕಟ್ಟಳೆ ಲಕ್ಷದ ಮೇಲೆ ತೊಂಭತ್ತಾರು ಸಾವಿರ, ಇಂತೀ ಬಸವರಾಜ ದೇವರು ಮುಖ್ಯ ವಾದ ಅಸಂಖ್ಯಾತರ ಮಠಗಳು, ಆ ಕಲ್ಯಾಣದೊಳಗೆ ಎಷ್ಟು ಎಂದರೆ, ಹನ್ನೆರಡು ಸಾವಿರ ಕಟ್ಟಳೆಯ ನೇಮದ ಭಕ್ತರ ಮಠಂಗಳು, ಇ(ಎ?)ಪ್ಪ ತ್ತೆಂಟು ಸಾವಿರ ಮಹಾಮನೆಗಳು, ಆ ಕಲ್ಯಾಣದೊಳಗೆ ಹತ್ತುಸಾವಿರ ನಿತ್ಯ ನೇಮಿಗಳ ಮಠಂಗಳು. ಹದಿನೈದು ಸಾವಿರ ಚಿಲುಮೆಯ ಅಗ್ಗಪ ಣೆಯ, ವ್ರತಸ್ಥರ ಮಠಂಗಳು, ಐದುಸಾವಿರ ವ್ರತನೇಮಿಗಳ ಕಟ್ಟಳೆಯ ಮಠಂಗಳು, ಹನ್ನೆರಡು ಸಾವಿರ ಅಚ್ಚುಪ್ರಸಾದಿಗಳ ಮಠಂಗಳು ಒಂದು ಸಾವಿರ. ಅರವತ್ತುನಾಲ್ಕು ಶೀಲಸಂಪನ್ನರ ಮಠಂಗಳು ಒಂದುಸಾವಿರ. ಜಂಗಮಕ್ಕೆ ಆರೋಗಣೆಯ ಮಾಡಿಸುವ ದಾಸೋಹಿಗಳ ಮಠಂಗಳು ನೂವತ್ತೆರಡು ಸಾವಿರ. ನಿತ್ಯ ಐನೂರು ಜಂಗಮಕ್ಕೆ ಒಲಿದು ದಾಸೋ ಹವ ಮಾಡುವ ಸದಾಚಾರಿಗಳ ಮಠಂಗಳು ಐವತ್ತೆಂಟು ಸಾವಿರ. ನಿತ್ಯ ಸಾವಿರದ ನೂರು ಜಂಗಮಕ್ಕೆ ಒಲಿದು ದಾಸೋಹವ ಮಾಡುವ ದಾಸೋ ಹಿಗಳ ಮಠಂಗಳು ಹನ್ನೊಂದು ಸಾವಿರ. ನಿತ್ಯ ಆವಾರಿಯಿಂದ ಮಾಡುವ ಮಾಟ ಕೂಟದ ಸದ್ಭಕ್ತರ ಮಠಂಗಳು ಒಂದು ಲಕ್ಷ. ಜಂಗಮ ಸಹಿತ ಸಮಯಾಚಾರದಿಂದ ಲಿಂಗಾರ್ಚನೆಯ ಮಾಡುವ ಜಂಗಮ ಭಕ್ತರ ಮಠ ಎರಡು ಸಾವಿರದ ಏಳನೂರೆಪ್ಪತ್ತು. ಅಂತು ಎರಡು ಲಕ್ಷವು ಎಂಬತ್ತೈದು ಸಾವಿರದ ಏಳುನೂರೆಪ್ಪತ್ತು ಅಸಂಖ್ಯಾತರಿಗೆ ಮುಖ್ಯವಾಗಿ ರುದ್ರಲೋಕದಿಂದಿಳಿತಂದ ಪ್ರಮಥ ಗಣಂಗಳ ಮಠಂಗಳು ಏಳುನೂರೆ ಪ್ಪತ್ತು. ಇಂತೀ ಮಹಾಪ್ರಮಥರಿಗೆ ಪುರಾತರಿಗೆ ಅಸಂಖ್ಯಾತ ಮಹಾಗ ಣಂಗಳಿಗೆ ಪ್ರಮಥ ನಾಯಕನಾಗಿ, ಏಕಮುಖ, ದಶಮುಖ, ಶತ ಮುಖ, ಸಹಸ್ರಮುಖ, ಲಕ್ಷಮುಖ, ಕೋಟಿಮುಖ, ಅನಂತ ಕೋಟಿ ಮುಖವಾಗಿ, ಭಕ್ತರಿಗೆ ಒಡನಾಡಿಯಾಗಿಪ್ಪನು ಸಂಗನಬಸವಣ್ಣನು ಜಗ ದಾರಾಧ್ಯ ಬಸವಣ್ಣನು, ಪ್ರಮಥ ಗುರು ಬಸವಣ್ಣನು, ಶರಣ ಸನ್ನಿಹಿತ ಬಸವಣ್ಣ, ಸತ್ಯಸಾತ್ವಿಕ ಬಸವಣ್ಣ, ನಿತ್ಯನಿಜೈಕ್ಯ ಬಸವಣ್ಣ, ಷಡುಸ್ಥ ಲಸಂಪನ್ನ ಬಸವಣ್ಣ, ಸರ್ವಾಚಾರಸಂಪನ್ನ ಬಸವಣ್ಣ, ಸರ್ವಾಂಗ ಲಿಂಗಿ ಬಸವಣ್ಣ, ಸುಜ್ಞಾನ ಭರಿತ ಬಸವಣ್ಣ, ನಿತ್ಯಪ್ರಸಾದಿ ಬಸವಣ್ಣ, ಸಚ್ಚಿ ದಾನಂದ ಮೂರ್ತಿ ಬಸವಣ್ಣ, ಸದ್ಯೋನುಕ್ತಿ ರೂಪು ಬಸವಣ್ಣ, ಅಖಂಡ ಪರಿಪೂರ್ಣ ಬಸವಣ್ಣ, ಅಕಾಯ ಚಾರಿತ್ರ ಬಸವಣ್ಣ, ಅಸಾಧ್ಯ ಸಾಧವ

ಬರವಣ್ಣ, ಅಭೇದ್ಯ ಛೇದಕ ಬಸವಣ್ಣ, ಅನಾಮಯ ಮೂರ್ತಿ ಬಸ
ವಣ್ಣ, ಮಹಾಮನೆಯ ಮಾಡಿದಾತ ಬಸವಣ್ಣ, ರುದ್ರಲೋಕವ ಮರ್ತ್ಯಲೋ
ಕಕ್ಕೆ ತಂದಾತ ಬಸವಣ್ಣ, ಶಿವಾಚಾರದ ಘನವ ಮೆರೆದಾತ ಬಸವಣ್ಣ, ಇಂತಪ್ಪ
ಬಸವಣ್ಣನ ಭಕ್ತಿಯನು ಒರೆದೊರೆದು ನೋಡಿ, ಪ್ರಬಲಿತವ ಮಾಡುವ
ಅಶ್ವಪತಿ ಜಗಪತಿ ನರಪತಿರಾಯ ರಾಜಾಧಿರಾಜ ಬಿಜ್ಜಳರಾಯನು, ಆ ಬಸ
ವಣ್ಣನು ಆ ಕಲ್ಯಾಣ ಪಟ್ಟಣಮೊಳಗೆ ಸುಖಸಂಕಥಾ ವಿನೋದದಿಂದ
ರಾಜ್ಯಂಗೈವುತ್ತಿರಲು, ಆ ಕಲ್ಯಾಣದ ನಾಮವಸಿಡಿದು, ವಿವಾಹಕ್ಕೆ ಕಲ್ಯಾ
ಣವೆಂಬ ನಾಮವಾಯಿತ್ತು. ಲೋಕಮೊಳಗೆ ಕಲ್ಯಾಣವೇ ಕೈಲಾಸವೆ
ನಿಸಿತ್ತು. ಇಂತಪ್ಪ ಕಲ್ಯಾಣವ ದರುಶನವ ಮಾಡಿದರೆ, ಭವಂ ನಾಸ್ತಿ.
ಇಂತಪ್ಪ ಕಲ್ಯಾಣವ ನೆನೆದರೆ ಪಾಪಕ್ಷಯ. ಇಂತಪ್ಪ ಕಲ್ಯಾಣದ ಮಹ
ತ್ವವ ಕೇಳಿದರೆ ಕರ್ಮಕ್ಷಯವಹುದು. ಮೋಕ್ಷ ಸಾಧ್ಯವಹುದು. ಇಪ್ಪ
ತಾರಣ ಕೂಡಲ ಚನ್ನಸಂಗಮದೇವ ನಿಮ್ಮ ಭಕ್ತ ಬಸವಣ್ಣನಿದ್ದ ತಾಪ
ಮಹಾ ಕಲ್ಯಾಣವೆಂದರಿದು ದಿವ್ಯಶಾಸನವ ಬರೆದು ಪಠಿಸಿದ ಕಾರಣ ಎನ್ನ
ಭವಂ ನಾಸ್ತಿಯಾಯಿತ್ತಯ್ಯ. ॥೩೫॥

ಇಂತು ಪ್ರಭುದೇವರು ಕಲ್ಯಾಣಪುರದ ದ್ವಾರವಟ್ಟದ ಮುಂದಣ
ಶಾಸನಮಂ ಓದಿ ನೋಡಿ ಪರಮ ಹರುಷಿತರಾಗಿ, ಬಸವರಾಜ ದೇವರ
ಮಹಾತ್ಮೆಯನು ಸ್ತೋತ್ರಮಂ ಮಾಡುತ್ತ ಸಿದ್ಧರಾಮಯ್ಯ ತಂದೆಗಳೊ
ಡನೆ ನಿರೂಪಿಸುತ್ತಿರ್ದ ಪ್ರಸ್ಥಾವದ ವಚನ.॥

ಆದಿ ಆಧಾರವಿಲ್ಲದ ಆಗಮ ನಾಸ್ತಿಯಾಗಿಪ್ಪ ಸಾಗರ ವಿರಹಿತನ
ಅರು ಅರಿಯರಲ್ಲ. ದಶಮುಖದ ಮಾಣಿಕದ ಎಸಳು ಕಂಗಳು ಪರ್ಬಿ
ಸರಿಸಿದುದನಾರು ಅರಿಯರಲ್ಲ. ಹಿರಿದೊಂದು ಪೃಥ್ವಿಯು ಅತಿಶಯದ
ಅಪಾಗಿ ಪೃಥ್ವಿಗಿಂಬಾಗಿರ್ದುದನಾರು ಅರಿಯರಲ್ಲ. ಅಂತರಂಗದ
ಪಸವ ಪೆಟ್ಟು ನೋಡುತ್ತ ಬೆಡಗಿನ ತಾವರೆಯ ಮಧ್ಯದ ತಾರಕಿ
ನಾರು ಅರಿಯರಲ್ಲ. ಇನಶಶಿಗಳಿಬ್ಬರು ನಯನ ನೋಟದ ಪುಷ್ಪ
ಮಳವಾಗಿರ್ದುದನಾರು ಅರಿಯರಲ್ಲ. ಇಂಬು ನಯನದಲ್ಲಿ ಸಂಭ್ರಮ
ದ ರೂಪು ಮಹತ್ತಾಗಿರ್ದುದನಾರು ಅರಿಯರಲ್ಲ. ಸಾಗರದೊಳಗಣ
ಪ್ರೀತಿಯಂತೆ ಗುಹೇಶ್ವರ ಲಿಂಗದೊಳಗೆ ಎನ್ನ ಪರಮಾರಾಧ್ಯರು ಸಂಗನ
ಬಸವಣ್ಣನು ನಿಂದ ನಿಲವನುಪಮಿಸಬಾರದು ಕಾಣಾ ಸಿದ್ಧರಾಮಯ್ಯ. ॥೩೫॥

ಇಂತೀ ಪ್ರಭುದೇವರು ಸಿದ್ಧರಾಮಯ್ಯ ದೇವರೊಡನೆ ಬಸವರಾಜ
ದೇವರ ಮಹಾತ್ಮೆಯಂ ಕೊಂಡಾಡಿ ಹೇಳುತ್ತಿರಲು, ಆ ಸಿದ್ಧರಾಮಯ್ಯ
ದೇವರು ಪ್ರಭುದೇವರೊಡನೆ ಬಸವರಾಜ ದೇವರ ಮಹಾತ್ಮೆಯಂ ಕೊಂಡಾಡಿ
ಹೇಳುತ್ತಿರ್ದ ಪ್ರಸ್ಥಾವದ ವಚನ. ॥

ಯತ್ರ ಯತ್ರ ಮಹೇಶ್ವರರಿರ್ದ ಗ್ರಾಮ ತತ್ರ ತತ್ರ ಶಿವಲೋಕ
ನೋಡಾ ಎಲೆ ಅಯ್ಯ. ಸತ್ಯ ವಚನವು ತಪ್ಪವದೆ ಎಲೆ ಅಯ್ಯ? ಕಪಿಲ
ಸಿದ್ಧಮಲ್ಲಿನಾಥ ನಿಮ್ಮ ಶರಣರು ಮೆಟ್ಟಿ ನಿಂದ ಧರೆ ಪಾವನವೆಂಬುದು
ಇಂದೆನಗೆ ಅರಿಯ ಬಂದಿತ್ತೈಯ್ಯ. ॥೩೬॥

ಮತ್ತಂ, ಜಲದಲುದಯಿಸಿ ಮತ್ತೆ ಜಲವು ತಾನಲ್ಲ. ಜಲವೆಂದಿ
ಪ್ಪರು ಲೋಕದವರು. ಪರಮಗುರು ಬಸವಣ್ಣ ಜಗವ ಪಾಲಿಸ ಬರಲು, ಎನ್ನ
ಪಂಭವದ ದಂದುಗ ಹರಿಯಿತ್ತೈಯ್ಯ. ಆ ಸುದ್ದಿಯನರಿಯದೆ, ಬೇಕಾದ
ಕಡೆಯಲ್ಲಿ ಅನೇಕ ಜಡರೆಲ್ಲರು ನುಡಿವುತ್ತಿಹರು. ಸತ್ತ ಪ್ರಾಣವನೆತ್ತಿ ಒಪ್ಪಿಪ್ಪ
ನಿಶ್ಚಯವು ಮರ್ತ್ಯದವರಿಗುಂಟೆ ಶಿವಂಗಲ್ಲದೆ? ಶಿವ ಗುರು ಬಸವಣ್ಣ, ಬಸವ
ಗುರು ಶಿವನಾಗಿ ದೆಸೆಗೆಟ್ಟ ದೇವತಾಪಶುಗಳಿಗೆ ಪತಿಯಾದನು. ಬಸವ
ಣ್ಣನ ನೆನಹು ಸುಖ ಸಮುದ್ರವಯ್ಯ ಕಪಿಲ ಸಿದ್ಧಮಲ್ಲಿನಾಥ ಬಸವಣ್ಣನ
ತೋರಿದಿರಾಗಿ ನಾನು ಬದುಕಿದೆನು. ॥೩೭॥

ಇಂತು ಸಿದ್ಧರಾಮಯ್ಯ ದೇವರು ಬಸವರಾಜ ದೇವರ ಮಹಾ
ತ್ಮೆಯಂ ಕೊಂಡಾಡುತ್ತ ಬರುತ್ತಿರಲು, ಆ ಬಸವರಾಜ ದೇವರ ದ್ವಾರ
ವಟ್ಟದ ಮುಂದೆ ನಿಂದಲ್ಲಿ ಪ್ರಭುದೇವರು ಆ ಬಸವರಾಜ ದೇವರ ಮಹತ್ವ
ಕೊಂಡಾಡುವ ಪ್ರಸ್ಥಾವನ ವಚನ. ॥

ಕರ್ಮವಿಲ್ಲದ ಕಾಯ, ಕರಣವಿಲ್ಲದ ಪ್ರಾಣ, ಮಥನವಿಲ್ಲದ ಶಬ್ದ,
ಗಮನವಿಲ್ಲದ ಮನ, ಗುಹೇಶ್ವರನ ಬರವು ಸಂಗನಬಸವಣ್ಣನ ಅಂಗಳವ
ಕಂಡಲ್ಲಿ ತರಹರವಾಯಿತ್ತು ಕಾಣಾ ಸಿದ್ಧರಾಮಯ್ಯ. ॥೩೮॥

ಮತ್ತಂ, ಉಪಪಾತಕ ಮಹಾಪಾತಕಂಗಳ ಮಾಡಿದ ಕರ್ಮಂಗಳು
ಕೋಟಾನು ಕೋಟಿ ಒಬ್ಬ ಶಿವಭಕ್ತನ ಅಂಗಳವ ಕಂಡಲ್ಲಿ ಅಳಿದು
ಹೋಹುದು ನೋಡಾ! ಅದೇನು ಕಾರಣವೆಂದಡೆ, ಆ ಶರಣನ ಅಂತರಂಗ
ದಲ್ಲಿ ಶಿವನಿಪ್ಪನು. ಆ ಶಿವನಿದ್ದಲ್ಲಿ ಕೈಲಾಸವಿಪ್ಪುದು. ಆ ಕೈಲಾಸವಿದ್ದಲ್ಲಿ
ಮಹಾ ರುದ್ರಗಣಂಗಳಿಪ್ಪರು. ಅಲ್ಲಿ ಅಷ್ಟಾಷಷ್ಟಿ ತೀರ್ಥಂಗಳು ನೆಲಸಿ

ಸಾಯುಜ್ಯವೆಂಬ ಪದವಿಗೊಳಗಾದರು. ನಿಮ್ಮ ಸಂಗನಬಸವಣ್ಣ ಬಂದು ಕಲ್ಯಾಣದಲ್ಲಿ ಮನೆಯ ಕಟ್ಟಿದರೆ. ಮರ್ತ್ಯಲೋಕವೆಲ್ಲವು ಭಕ್ತಿಸಾಮ್ರಾಜ್ಯವಾಯಿತ್ತು. ಆ ಮನೆಗೆ ತಲೆವಾಗಿ ಹೊಕ್ಕವರಿಲ್ಲರು ನಿಜಲಿಂಗಪದವಂ ಪಡೆದರು. ಆ ಗೃಹವ ನೋಡಬೇಕೆಂದು ನಾನು ಹಲಕಾಲ ತಪಸಿದ್ದೆನು. ಕಪಿಲ ಸಿದ್ಧಮಲ್ಲಿನಾಥ ನಿಮ್ಮ ಶರಣ ಸಂಗನಬಸವಣ್ಣನ ಮಹಮನೆಗೆ ನಮೋ ನಮೋ ಎಂದು ಬದುಕಿದೆನು. ॥೪೫॥

ಇಂತೀ ಶ್ರೀಮತ್ಸಕಲಗಣ ಪುರಾತನರೊಳ್ ಪ್ರಭುದೇವರು ಮಹಾನುಭಾವ ಸಮ್ಮೋಹ್ಮಿಯಂ ಮಾಡಿದ ಶೂನ್ಯ ಸಂಪಾದನೆಯೊಳ್ ಬಸವರಾಜ ದೇವರು ಚನ್ನಬಸವರಾಜ ದೇವರಿಗೆ ಅನುಗ್ರಹಮಂ ಮಾಡಿದುದು ಚತುರ್ಥೋಪದೇಶ ಸಮಾಪ್ತ.

The Vijay College
LIBRARY,
VIJAY COLLEGE,
BIJAPUR.

ಪ್ರಭುದೇವರು ಕಲ್ಯಾಣಕ್ಕೆ ಬಂದ ಸಂಪಾದನೆ.

(ಪಂಚಮೋಪದೇಶ.)

ಲಿಂಗಾರ್ಚನೆಯಿಂದೇಳದೆ। ಮುಂಗಳಮಯ ಬಸವ ಚೆರರ ಕಳು ಹಲ್ಯಾ ಪ್ರಭು॥ ಲಿಂಗನದೆ ಜರಿದು, ಭಕ್ತಿಯ ಇಂಗಿತಮುಂ ಬೋಧಿಸಿದು ವನುಸುರುವೆನೊಲವಿಂ॥

ಅದೆಂತೆಂದೊಡೆ ಆ ಪ್ರಭುದೇವರು ಸಿದ್ಧರಾಮಯ್ಯದೇವರು ಬಸವರಾಜ ದೇವರ ಮಹಾತ್ಮೆಯಂ ಕೊಂಡಾಡುತ್ತ ದ್ವಾರವಟ್ಟದ ಮುಂದೆ ನಿಂದಿರಲು, ಆ ಪ್ರಸ್ತಾವದೊಳು ಹಡಪದಪ್ಪಣ್ಣಗಳು ಕಂಡು, ಪರಮ ಹರುಷಿತರಾಗಿ ಹೋಗಿ ಬಸವರಾಜ ದೇವರು ಲಿಂಗಾರ್ಚನೆಯಂ ಮಾಡುವ ವೇಳೆಯಲ್ಲಿ ವಿನ್ನಹಂ ಮಾಡುವ ಪ್ರಸ್ತಾವದ ವಚನ.॥

ದೇವ ದೇವ ಮಹಾಪ್ರಸಾದ ಕಂಗಳಲ್ಲಿ ಕರುಳಿಲ್ಲ. ಕಾಯದಲ್ಲಿ ಹೊರೆ ಇಲ್ಲ. ನುಡಿಯಲ್ಲಿ ಕಡಿ ಇಲ್ಲ. ನಡೆಯಲ್ಲಿ ಗತಿ ಇಲ್ಲ. ಇದೆಂತಹ ಸುಳುಹೆಂದರಿಯೆ. ಇದೆಂತಹ ನಿಲವೆಂದು ತಿಳಿಯಬಾರದು. ಮರುಳಲ್ಲದ ಮರುಳು, ಅರಿವಿಲ್ಲದೆ ಅರಿವು ಬಸವಪ್ರಿಯ ಕೂಡಲ ಚೆನ್ನಸಂಗಯ್ಯನ ಬರವು ಕೌತುಕವಾಯಿತ್ತು ಚಿತ್ರೈಸಯ್ಯ ಸಂಗನಬಸವಣ್ಣಾ. ॥೧॥

ಇಂತು ಹಡಪದಪ್ಪಣ್ಣಗಳು ಬಸವರಾಜದೇವರಿಗೆ ವಿನ್ನಹಂ ಮಾಡಲು ಆ ವೇಳೆಯಲ್ಲಿ ಶಿವಲಿಂಗಾರ್ಚನೆಯ ಪರಮ ಸುಖದೊಳೋಲಾಡುತ್ತ ಪರಪರಾಗಿರ್ದು ಸುಜ್ಞಾನಮುಖದಿಂದ ವಿವೇಕಿಸಿ ನೋಡಿ ಲಿಂಗಾರ್ಚನೆಯ ಬಿಟ್ಟು. ಎಳಲೊಲ್ಲದೆ ಎನ್ನ ಕಾಯವೇ ಭಕ್ತ ಪ್ರಾಣವೇ ಜಂಗಮ ಭಾವ ಬಳಿಕ ಅಲ್ಲಿ ಇಲ್ಲಿ ಎಂಬ ಭೇದವಿಲ್ಲೆಂದು ಏಕೋಭಾವಮಂ ದೃಢನಿಶ್ಚಯಮಂ ಮಾಡಿ, ಆ ಜಂಗಮವನೊಡಗೊಂಡು ಬಿನ್ನ ಎಂದು ಮುಂದೆ ಹಡಪದಪ್ಪಣ್ಣಗಳಿಗೆ ನಿರೂಪಿಸಿ ಕಳುಹುವ ಪ್ರಸ್ತಾವದ ವಚನ॥

ಕಾಯದ ಕೈಯ್ಯಲ್ಲಿ ಕರಸ್ಥಲ, ಪ್ರಾಣದ ಕೈಯ್ಯಲ್ಲಿ ಜಂಗಮಸ್ಥಲ, ಈ ಉಭಯ ಭಾವ ಶಿವಲಿಂಗಾರ್ಚನೆಯ ಪರಮಾನಂದ ಸುಖಸ್ಥಲ, ಕಾಯ ಭಕ್ತ ಪ್ರಾಣಜಂಗಮ ಆವುದು ಘನವೆಂಬಿ. ಆವುದು ಕಿರಿದೆಂಬಿ,

ಕೂಡಲ ಸಂಗನ ಶರಣರು ಬಂದರೆ ಉಪಚಾರಕ್ಕೆ ಇಂಬಿಲ್ಲ. ಕರುಣ ದಿಂದೆ ಬರಹೇಳಾ ಅಪ್ಪಣ್ಣಾ. ॥೨॥

ಹೀಗೆಂದು ಬಸವರಾಜ ದೇವರು ನಿರೂಪಿಸಿ ಹಡಪದಪ್ಪಣ್ಣಗಳ ಕರೆಯಲಟ್ಟಲು, ಆ ಅಪ್ಪಣ್ಣಗಳು ಬಂದು ಪ್ರಭುದೇವರ ಬಿಜಯ್ಯಂಗೆಯ್ಯಿಂದು, ಕರೆವ ಪ್ರಸ್ಥಾವದ ವಚನ. ॥

ಮನ ಮನವೇಕಾರ್ಥವಾಗಿ, ಕಾಯಕ್ಕೆ ಕಾಯ ಸಂಬಂಧವಾಗಿ, ಪ್ರಾಣಕ್ಕೆ ಪ್ರಾಣ ಸಮುದರುಶನವಾಗಿಪ್ಪವರಲ್ಲಿ ತರೆಮರೆ ಎಂಬುದಿಲ್ಲ ನೋಡಯ್ಯ! ಸಂಗ ನಿಸ್ಸಂಗವಾಗಿಪ್ಪವರಲ್ಲಿ ಉಪಡಾರಕ್ಕೆ ಇಂಬಿಲ್ಲ ನೋಡಯ್ಯ ಬಸವ ಪ್ರಿಯ ಕೂಡಲ ಚನ್ನಸಂಗಯ್ಯನ ಶರಣ ಬಸವಣ್ಣನಟ್ಟಿದನು. ಕೈಪಿಡಿ ಮಾಡು ಪ್ರಭುವೇ. ॥೩॥

ಹೀಗೆಂದು ಹಡಪದಪ್ಪಣ್ಣಗಳು ಬಿನ್ನಹಂ ಮಾಡಿ, ಬಿಜಯಂಗೈಯೆನಲು, ಆ ಪ್ರಭುದೇವರು ಅಟ್ಟಿಟ್ಟಿಕೆಯಲ್ಲಿ ಕರೆಯಲಟ್ಟಿದರೆಂದು ಮುನಿಸನೊಳಗಿಟ್ಟುಕೊಂಡು ನುಡಿವ ಪ್ರಸ್ಥಾವದ ವಚನ. ॥

ಮನ ಮನ ಒಂದಾಗಿ ತನು ತನು ಒಂದಾಗಿ ಬೆರಸಿದ ಬಳಿಕ ಕರೆಯಲಿಲ್ಲ ಕಾಲುನಿಡಿಲಿಲ್ಲ ಎಂದರಿದವರು ಉಪಚರಿಸಿ ಬರಹೇಳಿದರೆ ಅವಕೊರತೆ ನೋಡಾ! ಅಂಗದ ಕೈಯ್ಯಲ್ಲಿ ಕ್ರಿ ಇರಲು, ಮಾತಿನ ಅಪ್ಪೈತವೆಂತಪ್ಪುದೊ? ಅನಾಗದ ಮುನ್ನವೆ ತಾನಾದೆನೆಂಬವರಲ್ಲಿಗೆ ನಮ್ಮ ಗುಹೇಶ್ವರ ಲಿಂಗವು ಅಡಿ ಇಡುವನಲ್ಲ. ॥೪॥

ಅಂಗದಲ್ಲಿ ಕ್ರಿ ಇರಲು, ಮತ್ತೆ ಮಾತಿನಲ್ಲಿ ಅಪ್ಪೈತವನಾಡುವ ಭೃತ್ಯಾಚಾರ ಹೀನರ ಮನೆಗೆ ಬಾರೆನೆಂದು ಪ್ರಭುದೇವರು ನಿರೂಪಿಸಲು, ಆ ಹಡಪದಪ್ಪಣ್ಣಗಳು ಮರಳಿ ಬಂದು ಬಸವರಾಜ ದೇವರಿಂಗೆ ಬಿನ್ನಹಂ ಮಾಡುವ ಪ್ರಸ್ಥಾವದ ವಚನ.

ಅಂಗದ ಕಳಿ ಲಿಂಗದಲ್ಲಿ ಲಿಯ್ಯವಾಗದು. ಲಿಂಗದ ಕಳಿ ಅಂಗದಲ್ಲಿ ಲಿಯ್ಯವಾಗದು. ಮಾತಿನ ಮಾಲೆಯ ಜೊವ್ಯವೇತರದೊ? ಕಾಯ ಭಕ್ತನಾದರೆ ಭೃತ್ಯಾಚಾರ ವಿರಬೇಕು. ಪ್ರಾಣ ಜಂಗಮವಾದರೆ ಅರಿವಿರಬೇಕು. ಇಂತೀ ಭಕ್ತಿ ಜ್ಞಾನವುಳ್ಳವರಲ್ಲದೆ ಭಕ್ತರಲ್ಲ, ಶರಣರಲ್ಲ. ಹಿರಿಯರು ಬಂದರೆ ಇದಿರಿದ್ದು, ಬಾರದವರ ಮನೆಗೆ ಅಡಿವಿಡಿವೆಂದು

ಬಸವಪ್ರಿಯ ಕೂಡಲ ಚನ್ನಸಂಗನ ಶರಣರು ಕಾಡಿಹರು ಕೇಳಾ ಸಂಗನ ಬಸವಣ್ಣಾ. ॥೫॥

ಹೀಗೆಂದು ಅಪ್ಪಣ್ಣಗಳು ಬಿನ್ನೈಸಲು, ಬಸವರಾಜ ದೇವರು ಮರಳಿ ಕರೆಯ ಕಳುಹಿವ ಪ್ರಸ್ಥಾವದ ವಚನ. ॥

ಭಕ್ತನ ಕಾಯವ ಜಂಗಮು ಧರಿಸಿಪ್ಪ ನೋಡಾ! ಜಂಗಮದ ಪ್ರಾಣವ ಭಕ್ತ ಧರಿಸಿಪ್ಪ ನೋಡಾ! ಭಕ್ತನಲ್ಲಿಯು ಭಕ್ತಜಂಗಮವೆರಡು ಸನ್ನಿಹಿತ. ಜಂಗಮದಲ್ಲಿಯು ಜಂಗಮಭಕ್ತನೆಂಬೆರಡು ಸನ್ನಿಹಿತ. ಜಂಗಮಕ್ಕಾದರು ಭಕ್ತಿಯೇ ಬೇಕು. ಭಕ್ತಂಗೆ ಭಕ್ತಿಸ್ಥಲಬೇಕು. ಭಕ್ತನ ಅರ್ಥ ಪ್ರಾಣಾಭಿಮಾನಕ್ಕೆ ತಾನೆ ಕರ್ತನೆಂದು ಬಂದ ಜಂಗಮು ಆ ಭಕ್ತನ ಮನೆಗೆ ತಾನೆ ಕರ್ತನಾಗಿ ಹೊಕ್ಕು ತನು ಮನ ಧನಂಗಳನೆಲ್ಲವನೊಳಕೊಂಡು, ಆ ಭಕ್ತನ ಪಾವನವ ಮಾಡಬಲ್ಲರೆ ಆತ ಜಂಗಮನೆಂಬೆ. ಆ ಜಂಗಮದ ಗಳಗರ್ಜನೆಗೆ ಸೈರಿಸಿ ಮುಡುಹಿಂಗೆ ಮುನ್ನೂರ ಪಟ್ಟವ ಕಟ್ಟಿದರೆ ಆತ ಭಕ್ತನೆಂಬೆ. ತನ್ನ ಮಠಕ್ಕೆ ತಾ ಬಾಹರೆ ಮುನಿಸುಂಟೆ? ಕೂಡಲ ಸಂಗನ ಶರಣರ ಮನೆಯ ಬಾಗಿಲುಗಾಹಿ ನಾನಾಗಿರ್ದ ಕರ್ತರು ಗೃಹಕ್ಕೆ ಬಂದರೆ ಬೇಕು ಬೇಡೆನ್ನೆ. ॥೬॥

ಹೀಗೆಂದು ಬಸವರಾಜ ದೇವರು ಬಿನ್ನೈಸಲು, ಹಡಪದಪ್ಪಣ್ಣಗಳು ಪ್ರಭುದೇವರ ಕರೆವ ಪ್ರಸ್ಥಾವದ ವಚನ. ॥

ನಿಮ್ಮ ತನು, ನಿಮ್ಮ ಮನ, ನಿಮ್ಮ ಧನ, ನಿಮ್ಮದಲ್ಲದೆ ಅನ್ಯವೆಂದಣುಮಾತ್ರವಿಲ್ಲ ನೋಡಯ್ಯ! ಭಕ್ತನ ಮತವೆಂದು ಮುನ್ನವೆ ಅರಿವರಿದು ಬಂದು ಮತ್ತೊಂದ ನೆನೆವರೆ ಬಸವಪ್ರಿಯ ಕೂಡಲ ಚನ್ನಸಂಗಯ್ಯನ ಶರಣ ಬಸವಂಗೆ ಸ್ವತಂತ್ರ ಭಾವವುಳ್ಳಡೆ ನಿಮ್ಮ ಪಾದದಾಣೆ. ॥೭॥

ಹೀಗೆಂದು ಅಪ್ಪಣ್ಣಗಳು ಬಿನ್ನೈಸಲು, ಪ್ರಭುದೇವರು ನಿರೂಪಿಸಿದ ಪ್ರತ್ಯುತ್ತರ. ॥

ಭಕ್ತ ಜಂಗಮದ ಸಕೀಲ ಸಂಬಂಧವನಾರು ಬಲ್ಲರು ಹೇಳಾ! ಅರ್ಥವನೊಪ್ಪಿಸಿದಾತ ಭಕ್ತನಲ್ಲ. ಪ್ರಾಣವನೊಪ್ಪಿಸಿದಾತ ಭಕ್ತನಲ್ಲ. ಅಭಿಮಾನವನೊಪ್ಪಿಸಿದಾತ ಭಕ್ತನಲ್ಲ. ಅದೇನು ಕಾರಣವೆಂದರೆ, ಸತ್ಯ ಸದಾಚಾರಕ್ಕೆ ಸಲ್ಲನಾಗಿ. ಆ ಭಕ್ತನ ಮನೆಯ ಹೊಕ್ಕು ಪಾದಾರ್ಚ

ಸಿಯ ಮಾಡಿಸಿಕೊಂಡು ಒಡಲಕಕ್ಕುಲಿತಿಗೆ ಅಶನವನುಂಡು ವ್ಯಸನವ
ಕಕ್ಕುಲಿತಿಗೆ ಹಣವ ಬೇಡಿ. ಕೊಟ್ಟಡೆ ಕೊಂಡಾಡಿ. ಕೊಡದಿರ್ದಡೆ ದೂರಿ
ಕೊಂಡು ಹೋಹಾತ ಜಂಗಮವಲ್ಲ. ಆದಿ ಅನಾದಿಯಿಂದತ್ತತ್ತ ಮುನ್ನ
ಮಹಾ ಘನವ ಭೇದಿಸಿ ಕಂಡರಿದು, ಕಾಯವ ಜೀವವ ಹೊಲಿಗೆಯ
ಬಿಟ್ಟಿ ಬಿಸಾಡಿ ತನ್ನನೆ ಅರ್ಪಿಸಿ ಇರಬಲ್ಲಾತ ಭಕ್ತ. ಸುಳುಹಿನ ಸೂತಕ
ಪೈಸರವೆ ಒಡಲ ಕಳವಳದ ರುಚಿಗೆ ಹಾರೈಸದೆ, ಅರಿವೆ ಅಂಗವಾಗಿ
ಆಪ್ಯಾಯನವೆ ಭಕ್ತಿಯಾಗಿ ಕಿಂಕುರುವಾಣವೆಂಬ ಶಿವಮಂತ್ರಕ್ಕೆ ನಮೋ
ನಮೋ ಎನಬಲ್ಲರೆ ಆತ ಜಂಗಮ. ಆ ಜಂಗಮದ ಆ ಭಕ್ತನ ಸಮ್ಮೈ
ಳವೆ ಸಮ್ಮೈಳ. ಮಿಕ್ಕಿನ ಅರೆಭಕ್ತರೊಡೆತನ ಸಂಗ ನಮ್ಮ ಗುಹೇಶ್ವರ
ಲಿಂಗಕ್ಕೆ ಸೊಗಸದು. ॥೮॥

ಹೀಗೆಂದು ಪ್ರಭುದೇವರು ನಿರೂಪಿಸಲು, ಅದಕ್ಕೆ ಹಡಪದಪ್ಪಣ್ಣ
ಗಳು ಬಿನ್ನೈಸುವ ಪ್ರಸ್ತಾವದ ವಚನ. ॥

ಲಿಂಗಜಂಗಮ ಜಂಗಮಲಿಂಗವೆಂಬುದನಾರು ಬಲ್ಲರಯ್ಯ? ಮರ್ತ್ಯ
ಲೋಕ ಶಿವಲೋಕವಲ್ಲಿ ಬಸವಣ್ಣನಲ್ಲದೆ, ಲಿಂಗಕ್ಕಾಧಾರವಿಲ್ಲೆಂದು ಮರ್ತ್ಯ
ಲೋಕವಲ್ಲಿ ಬಂದವತರಿಸಿದನಯ್ಯ ಬಸವಣ್ಣನು! ಜಂಗಮಮುಖ ಲಿಂಗ
ವೆಂಬುದನರಿದು, ತನ್ನನರ್ಪಿಸಿ ಇದಿರ ತಪ್ಪಿಸಿ, ಇರಬಲ್ಲನಯ್ಯ ಬಸವ
ಣ್ಣನು. ಅಂಗಮುಖವೆಲ್ಲ ನಷ್ಟವಾಗಿ, ಭೃತ್ಯಾಚಾರವೆ ತನುವಾಗಿರಬ
ಲ್ಲನಯ್ಯ ಬಸವಣ್ಣನು. ಪ್ರಾಣಕಳೆಯರತು ಅಂತು ಜಂಗಮವೆ ಪ್ರಾಣ
ವಾಗಿ ಹಂಗು ಹರಿಯದಿರಬಲ್ಲನಯ್ಯ ಬಸವಣ್ಣನು. ಉಪಾಧಿ ಎಂಬ
ಕೀರ್ತಿವಾರ್ತೆಯನು ಜರಿದು, ನಿರುಪಾಧಿಕವೆಂಬ ವಿವೇಕಕ್ಕೆ ಅತೀತ
ನಾಗಿ ಸಹಜ ದಾಸೋಹಿಯಾಗಿರಬಲ್ಲನಯ್ಯ ಬಸವಣ್ಣನು. ಬಸವಪ್ರಿಯ
ಕೂಡಲ ಚನ್ನಸಂಗನಶರಣ ಬಸವಣ್ಣನೆ ನಿಮಗೆ ಭಕ್ತನಲ್ಲದೆ ಮತ್ತಾರನು
ಕಾಣೆನಯ್ಯಾ. ॥೯॥

ನಿಮಗೆ ಸಂಗನಬಸಣ್ಣನಲ್ಲದೆ ಮತ್ತಾರು ಭಕ್ತರಿಲ್ಲವೆಂದು ಅಪ್ಪಣ್ಣ
ಗಳು ಬಿನ್ನೈಸಲು, ಅದಕ್ಕೆ ಪ್ರಭುದೇವರು ನಿರೂಪಿಸಿದ ಪ್ರಸ್ತಾವದ ವಚನ. ॥

ನಿಮ್ಮಲ್ಲಿ ಭಕ್ತಿಯುಂಟು, ತಮ್ಮಲ್ಲಿ ಭಕ್ತಿಯುಂಟು, ಎಮ್ಮಲ್ಲಿ ಭಕ್ತಿ
ಯುಂಟು ಎಂದರೆ ಶಿವಶರಣರು ಮಚ್ಚುವರೆ? ಹೂಸಿ ಹುಂಡನೆ ಮಾಡಿ
ಬಾಯಸವಿಯ ನುಡಿವರೆಲ್ಲ ಭಕ್ತರಪ್ಪರೇ? ಮಾತಿನ ಅಪ್ಪಿತಪ ಕಲಿತು

ಮಾತಂಗೊಲಬಿಡುವರೆಲ್ಲ ಭಕ್ತರಪ್ಪರೇ? ಜೆಳ್ಳಿಗೆ ಮುಕ್ಕಳೆಂದರೆ ಬಳ್ಳ
ಪಾಲ ಕರೆವುದೆ ಮರುಳಿ? ಸಂಗನಬಸವಣ್ಣನೆಂದರೆ ಮಾತಿನ ಮಾತಿಂಗೆಲ್ಲ
ಭಕ್ತಿಯುಂಟೆ? ಬಂದ ಜಂಗಮದ ಇಂಗಿತಾಕಾರವನರಿದು ಇದಿರೆದ್ದು
ವಂದಿಸಿ ಕೈಮುಗಿದು, ನಡನಡುಗಿ ಕಿಂಕರನಾಗಿ ಭಯಭೀತಿ ಭೃತ್ಯಾ
ಚಾರವಾಗಿರಬಲ್ಲರೆ ಅದು ಭಕ್ತಿ, ಅದು ಮಾರ್ಗ. ಬಂದವರಾರೆಂದರಿ
ಯದೆ, ನಿಂದ ನಿಲವನರಿಯದೆ ಕೆಮ್ಮನೆ ಅಹಂಕಾರವ ಹೊತ್ತುಕೊಂಡು
ರಪ್ಪವಂಗೆ ನಮ್ಮ ಗುಹೇಶ್ವರ ಲಿಂಗನೊಲ್ಲ ನೋಡಾ ॥೧೦॥

ಹೀಗೆಂದು ಪ್ರಭುದೇವರು ಬಾರೆವೆಂದು ನಿರೂಪಿಸಲು, ಹಡಪದ
ಪ್ಪಣ್ಣಗಳು ಮರಳಿ ಬಂದು ಬಸವರಾಜ ದೇವರಿಗೆ ಬಿನ್ನೈಸುವ ಪ್ರಸ್ತಾ
ವದ ವಚನ. ॥

ದೇವ ದೇವ, ಮಹಾ ಪ್ರಸಾದ. ನಿಮ್ಮ ಶರಣರ ಮನೆಯ ಸಲು
ಗೆಯ ಬಂಟ ನಾನಲ್ಲಯ್ಯ! ತನುಮನಧನವ ಹಿಂದಿಕ್ಕಿಕೊಂಡಿಪ್ಪ ವಂಚ
ಕನಾನಯ್ಯ! ನಿಮ್ಮ ಶರಣರು ಎನ್ನಿಚ್ಛೆಗೆ ಬಪ್ಪರೆ? ಚಕಿತಮಭಿಧತ್ತೆ
ಭೈರಪಿ ಎನಲು ಎಮ್ಮ ನುಡಿ ನಿಮ್ಮ ಶರಣರ ತಾಗಬಲ್ಲವೆ? ಹಣೆಯ
ಕೊನೆಯ ತೋರಿ ಉದರವ ಹೊರೆವ ನಿಮ್ಮ ಮರೆಯಲಡಗಿಪ್ಪ ಹಡ
ಪಿಗ ನಾನಯ್ಯ. ಬಸವಪ್ರಿಯ ಕೂಡಲ ಚನ್ನಸಂಗನ ಶರಣರು ಎನ್ನ
ಮಾತಿಂಗೆ ಬಾರರು. ನೀವೆ ಹೋಗಿ ಬಿಜಯಂಗೈಸಿಕೊಂಡು ಬಾರಾ
ಸಂಗನಬಸವಣ್ಣಾ. ॥೧೧॥

ಮತಂ॥ ನಿನ್ನಳವಲ್ಲ, ಎನ್ನಳವಲ್ಲ. ಇದಾರಳವಲ್ಲದ ಘನವು
ನೋಡಯ್ಯ! ಕಾಬರಿಗೆ ಕಂಗಳಿಗೆ ಅಸಾಧ್ಯ. ಮುಟ್ಟುವರೆ ಸೋಂಕಿಂಗ
ಸಾಧ್ಯ. ಮಾತನಾಡಿಸಿ ನೋಡಿದರೆ ವಾಙ್ಮನಾತೀತ. ನಿಂದರೆ ನೆಳಲಿಲ್ಲ. ಸುಳಿ
ವರೆ ಹೆಜ್ಜೆ ಇಲ್ಲ. ಪ್ರಭುದೇವರೆಂಬ ಭಾವ ತೋರುತ್ತಿದೆ. ಬಸವಪ್ರಿಯ
ಕೂಡಲ ಚನ್ನಸಂಗಯ್ಯನ ಶರಣರ ಚರಣವಿಡಿವರೇಳಾ ಸಂಗನಬಸ
ವಣ್ಣಾ. ॥೧೨॥

ನಾನು ಭಕ್ತನಲ್ಲವಾಗಿ ನಿನ್ನಿಚ್ಛೆಗೆ ಬಾರರು. ನೀವೆ ಹೋಗಿ ಬಿಜ
ಯಂಗೈಸಿ ತನ್ನಿ ಎಂದು ಅಪ್ಪಣ್ಣಗಳು ಬಿನ್ನಹಂ ಮಾಡುವ ಪ್ರಸ್ತಾವ
ದೊಳು ಚಿಕ್ಕದವಣ್ಣಾಯಕರು ಬಂದು ಪ್ರಭುದೇವರು ಸಿದ್ಧರಾಮಯ್ಯ

ದೇವರು ಬಂದು ನಿಮ್ಮ ದ್ವಾರವಟ್ಟವ ಮುಂದೆ ನಿಂದೈದಾರೆ. ನೀವೆ ಬಿಜಯಂಗೈಸಿ ತನ್ನಿ ಎಂದು ಬಿನ್ನಹಂ ಮಾಡುವ ಪ್ರಸ್ಥಾವದ ವಚನ. ॥

ಲಿಂಗವೆ ಜಂಗಮ ಜಂಗಮವೆ ಲಿಂಗವೆಂದು ನಂಬಿ ಬಂದಲ್ಲಿ ಹೊರಹುಟ್ಟಿದ ಬಳಿಕ ಹಾಲಹರವಿಯೊಳಗೆ ಹುಳಿ ಹೊಕ್ಕಂತೆ, ನೋಡಯ್ಯ! ಅಂಗವ ಮೇಲೆ ಲಿಂಗವುಳ್ಳುದೆಲ್ಲವು ಸಂಗಮನಾಥನೆಂದು ನಂಬಿದ ನಂಬುಗೆಯು ಬಂದ ಶರಣರ ನಿಲವನರಿಯದಿದ್ದರೆ ತಪ್ಪಿತ್ತು ನೋಡಾ! ಗುರುವೆ ಸಂಗಮನಾಥ ಮನೆಗೆ ಅಂಗವಿತಿದು ಬಂದರೆ ಗಮ್ಮನೆ ಇದಿರೆದ್ದು ವಂದಿಸಬೇಕು ನೋಡಯ್ಯ! ಕೂಡಲ ಚನ್ನಸಂಗನ ಶರಣರು ಪ್ರಭುದೇವರು ಸಿದ್ಧರಾಮಯ್ಯ ದೇವರು ಬಂದು ಬಾಗಿಲಲ್ಲಿರಲು, ಕಣ್ಣರಿಯದಿದ್ದರೂ ಕರುಳರಿಯ ಬೇಡವೇ ಸಂಗನಬಸವಣ್ಣಾ. ॥೧೩॥

ಅಲ್ಲಮ ಪ್ರಭುದೇವರು ಸಿದ್ಧರಾಮಯ್ಯ ದೇವರು ಬಂದು ಬಾಗಿಲಲ್ಲಿರಲು, ಅಟ್ಟಾಟಿಕೆಯಲಿಂತು ತೆರಹು ಮರಹಾಗಿಪ್ಪುದು ನಿಮಗುಚಿತವಲ್ಲೆಂದು ಚಿಕ್ಕದಣ್ಣಾಯಕರು ಬಿನ್ನೈಸಲು, ಈ ವಾಕ್ಯವ ಕೇಳಿದಾಕ್ಷಣವೆ ಬಸವರಾಜ ದೇವರು ಹಮ್ಮದಂಬೋಗಿ ನಡುನಡುಗಿ ಭಯಾರ್ಣವ ದೊಳ್ಮುಕುಂಗಿ ಕಂಗಳ ಬಾಷ್ಪವಿನೊಳು ಮುಂದುಗಾಣದೆ ಚಿಕ್ಕದಣ್ಣಾಯಕರ ಪಾದದ ಮೇಲೆ ಬಿದ್ದು ಪ್ರಭುದೇವರ ಮುನಸ ತಿಳುಹಿಕ್ಕುಡು ಎಂದು ಬಿನ್ನಹಂ ಮಾಡುವ ಪ್ರಸ್ಥಾವದ ವಚನ. ॥

ಇನ್ನೇವೆನಿನ್ನೇವೆ? ಕೆವ್ಮನೆ ಕೆಟ್ಟೆನು. ನಿಮ್ಮ ಶರಣರು ಬಂದು ಬಾಗಿಲೊಳಿರಲು, ಗಮ್ಮನಿದಿರೆದ್ದು ವಂದಿಸಲರಿಯದೆ ಕೆಟ್ಟ ಕೇಡನೇನೆಂದು ಪಮಿಸುವೆನು? ಕೂಡಲ ಸಂಗಮದೇವ ನಾನುಭಯಭ್ರಷ್ಟನೆಂಬುದು ಎನಗಿಂದರಿಯಬಂದಿತ್ತು. ॥೧೪॥

ಮತ್ತಂ, ಮತಿಗೆಟ್ಟ ಧೃತಿಗುಂದಿ ಬೆಳ್ಳಾದೆನಯ್ಯ! ಗತಿಗೆಟ್ಟ ವ್ರತಗೆಟ್ಟ ಧಾತುಗೆಟ್ಟ ಬಾಹಿರ ನಾನಯ್ಯ! ಕಹಿ ಸೋರೆ ಮುತ್ತಂತಾಯಿತ್ತು. ಎನ್ನ ಭಕ್ತಿ ನಡೆದು ಲಿಂಗಜಂಗಮ ಮನೆಗೆ ಬಂದರೆ ಇಂಬುಗೊಳ್ಳಲರಿಯದೆ ಕೆಟ್ಟ ಕೇಡನೇನೆಂದು ಹವಣಿಸುವೆನಯ್ಯ! ನವರತ್ನವ ಕೆತ್ತು ಮಡುವಿನೊಳಗೆ ಹಾಯ್ದಿವ ಕಪಿಯಂತಾಯಿತ್ತೆನ್ನ ಭಕ್ತಿ. ಕೂಡಲ ಸಂಗಮದೇವರ ತಂದು ಕೆಟ್ಟರೆ ನಿಮ್ಮ ಚವ್ಮಾವುಗೆಯ ಹೊತ್ತುಕೊಂಡು ಕುಣಿದಾಡುವೆ ಕಾಣಾ ಚನ್ನಬಸವಣ್ಣಾ. ॥೧೫॥

ಹೀಗೆಂದು ಅತ್ಯಂತ ಭೀತನಾಗಿ ಬಿನ್ನಹಂ ಮಾಡುತ್ತಿರಲು, ಚಿಕ್ಕದಣ್ಣಾಯಕರು ಹಿಂಯದಣ್ಣಾಯಕರ ಪಾದಕ್ಕೆ ನಮಸ್ಕಾರಮುಂ ಮಾಡಿ ಬಿನ್ನೈಸಿದ ಪ್ರಸ್ಥಾವದ ವಚನ. ॥

ಹೋ ಹೋ ಗುರುವೆ ನಿಮ್ಮ ಚವ್ಮಾವುಗೆಯ ಬಂಟ ನಾನಾಗಲು, ಅಂಜುವರೇ ಅಳುಕುವರೇ? ಸಂಗಮನಾಥ ಬಂದು ನಿಮ್ಮ ಮನವ ನೋಡಲೆಂದು ತಮ್ಮನವ ನಷ್ಟ ನಿಕ್ಕಿವನೊಂದು ಲೀಲೆಯಿಂದ ಅದು ನಿಮಗೆ ಸಹಜವಾಗಬಲ್ಲುದೆ? ಮುಂಜಿನ ಮೋಹರ ರವಿಯ ಕಿರಣವ ಕಿಡಿಸಲಾಪವೆ? ನಿಮ್ಮ ನೆನೆವರಿಂಗೆ ಸಂಸಾರವಿಲ್ಲೆಂದು ಶ್ರುತಿಗಳು ಹೊಗಳುತ್ತಿರಲು, ನಿಮ್ಮರುವಿಂಗೆ ಕೇಡುಂಟೇ? ಕೂಡಲ ಚನ್ನಸಂಗನ ಶರಣರ ಕರೆವರೆ ಎನ್ನ ಮನವೆಂಬ ಚವ್ಮಾವುಗೆಯ ನೆಟ್ಟ, ನಡೆಯಾ ಸಂಗನಬಸವಣ್ಣ. ॥೧೬॥

ಹೀಗೆಂದು ಬಿನ್ನೈಸಲು, ಇದಕ್ಕೆ ಬಸವರಾಜ ದೇವರು ಚಿಕ್ಕದಣ್ಣಾಯಕರ ಪಾದದ ಕೃಪೆಯಿಂದ ಕಂಡು ನಾನು ಬದುಕಿದೆನೆಂದು ಕೃತನಿಶ್ಚಯವನೈದಿದ ಪ್ರಸ್ಥಾವದ ವಚನ. ॥

ನಂಬಿದೆನಯ್ಯ ನಾನು, ನಚ್ಚಿದೆನಯ್ಯ ನಾನು, ಬದುಕಿದೆನಯ್ಯ ನಾನು. ನಿಮ್ಮ ಕೃಪೆಯಿಂದ ಹಾಳುಕುಳಿಯಲ್ಲಿ ಬಿದ್ದ ಪಶುವಿನ ಕರವ ತೆಗೆದು ತಾಯುಮುಖವ ತೋರುವಂತೆ ಪಾಪಕೂಪದಲ್ಲಿ ಬಿದ್ದವನನೆಬ್ಬಿಸಿ ಕೂಡಲ ಸಂಗನ ಶರಣರ ಚರಣವ ತೋರಿ ಎನ್ನನುಳುಹಿದನು. ಹೋವ ಜೀವಕ್ಕೆ ತನ್ನ ಕರುಣವೆಂಬ ಮರುಜೀವಣೆಯ ಹಿಂಡಿ ಎತ್ತಿದನು ಚನ್ನಬಸವನಿಂದಲಿಂತಕ್ಕೆ ಬದುಕಿದೆನು. ॥೧೭॥

ಬಸವರಾಜ ದೇವರು ತಮ್ಮ ತಾಪೆ ಸಂತೈಸಿಕೊಂಬ ಕಾಲದೊಳು ಸೊಪ್ಪಳಬಾಚರಸರು ಬಂದು ಬಿನ್ನಹಂ ಮಾಡುವ ಪ್ರಸ್ಥಾವದ ವಚನ. ॥

ತೆರಹು ಮರಹೆಂಬುದು ನಿಮ್ಮ ಗುಣವಲ್ಲ. ಅವ್ಯತ ಸಾಗರದೊಳಗೆ ಜೀವಿನ ಬಿಂದು ಉಂಟಿ? ಮನವ ನೋಡಲೆಂದು ನಾಟಕವನೋಡಿವೆ ಅವಕ್ಕೆ ಸಹಜವಲ್ಲಾಗಿ, ಪೆರರಲಿಲ್ಲ. ಮಹಾದಾನಿ ಸೊಡ್ಡಳನವನ ಸೊಂದಿತ್ತೆಂದು ಅಂಜಬೇಡವೇಳಾ ಸಂಗನಬಸವಣ್ಣ. ॥೧೮॥

ಹೀಗೆಂದು ಸೊಡ್ಡಳ ಬಾಚರಸರು ವಿನ್ನಹಂ ಮಾಡಲು ಬಸವರಾಜ ದೇವರು ನಿರೂಪಿಸಿದ ಪ್ರಸ್ಥಾವದ ವಚನ. ॥

ಮಾರಾಂಕ ನಿರವಲ್ಲಿ ಘಾಯ ಖಂಡೆಯ ತೋರಿದಾತನೆ ತ್ರಿಪುರಾಂತಕ ಕೈಯ್ಯ ಕೈದು ಬಿಪ್ಪಲ್ಲಿ ಎತ್ತಿಕೊಟ್ಟಾತನೆ ಹಿತನು. ಕೂಡಲ ಸಂಗನ ಶರಣ ಸೊಡ್ಡಳ ಬಾಚರಸರ ಕರುಣ ಉಳ್ಳನ್ನಕ್ಕರ ಇನ್ನು ನಾನು ಅಂಜುವನಲ್ಲ ಕಾಣಾ ಚನ್ನಬಸವಣ್ಣಾ. ॥೧೯॥

ಹೀಗೆಂದು ಬಸವರಾಜ ದೇವರು ನಿರೂಪಿಸಿ ಲಿಂಗಾರ್ಚನೆಯಂ ಮಾಡುತ್ತ ಲಿಂಗಮಂ ಕರಸ್ಥಲದಲ್ಲಿ ಧರಿಸಿಕೊಂಡು, ಹನ್ನೆರಡು ಸಾವಿರ ಪದಾಕ್ಷಯಂ ಧರಿಸಿಕೊಂಡು, ಭಸ್ಮಾಂಗದ ಕಳೆ ಧಳಧಳಿಸಿ ಹೊಳೆವ ತ್ರಿಪುಂಡ್ರ ಆಭರಣದಿಂದೊಪ್ಪುತ್ತ, ಭಕ್ತವತ್ಸಲ, ಮುಕ್ತಿಯ ಮುಖದರ್ಪಣ, ಅಹಂಕಾರ ಕಾಸಾರ, ಶೃಂಗಾರ ಛೇದನ, ಕರುಣರಸ ಸಿಂಧು, ಷಡುಸ್ಥಲ ಸಂಧಾನನಿವಾಸ, ಶತಪಿಕಸ್ಥಲ ಮೂಲಿಗ, ಪಂಚಮುಖ ಪಂಚಲಿಂಗ ಸ್ಥಾಪನಾಚಾರ್ಯ, ಭಕ್ತಜನಹೃತ್ಕಮಲಾರ್ಕ, ಶರಣನಿಕುರುಂಬಾಭ್ರ ಶಶಾಂಕ, ಭವ ವಿಪಿನ ದಾವಾನಲ, ಭವಸಿಂಧು ವಡವಾಗ್ನಿ, ಬಸವ ದಂಡಾಧೀಶ್ವರನು ಚನ್ನಬಸವರಾಜ ದೇವರು ಹಡಪದಪ್ಪಣ್ಣಗಳು ಸೊಡ್ಡಳ ಬಾಚರಸರು ಗಮಿತ ಮುಖಯುಕ್ತರಾಗಿ, ನಿರೂಪಿಸಿದ ಪ್ರಸ್ಥಾವದ ವಚನ. ॥

ಲಿಂಗಾರ್ಚನೆಯ ಮಾಡುವೆನಯ್ಯ ಜಂಗಮವೆನ್ನ ಮಠಕ್ಕೆ ಬರ ಬೇಕೆಂದು. ಆ ಜಂಗಮವೆನ್ನ ಮಠಕ್ಕೆ ಬಂದರೆ ಲಿಂಗಾರ್ಚನೆಯ ಮಾಡು ಜಂಗಮಾರ್ಚನೆಯ ಮಾಡುವೆನು. ಅದೇನು ಕಾರಣವೆಂದರೆ ಆ ಲಿಂಗ ವಲ್ಲಿ ಫಲಉಂಟು, ಪದಉಂಟು, ಭವಉಂಟು. ಆ ಜಂಗಮದಲ್ಲಿ ಫಲ ವಿಲ್ಲ, ಪದವಿಲ್ಲ, ಭವನಾಸಿಯಾದ ಕಾರಣ "ಲಿಂಗಾರ್ಚನಂ ನ ಕರ್ತವ್ಯಂ ಕರ್ತವ್ಯಂ ಜಂಗಮಾರ್ಚನಂ॥ ಲಿಂಗ ಜಂಗಮ ಸಂಯುಕ್ತಂ ಜಂಗಮಾದಿ ವಿಶೇಷಿತಂ" ಎಂದುದಾಗಿ, ಕೂಡಲ ಸಂಗಮದೇವಯ್ಯ ನಾನಿನ್ನ ಭವಭವಾಂತರ ನಿಮ್ಮ ಜಂಗಮಾರ್ಚನೆಯ ಮಾಡುವೆನು. ॥೨೦॥

ಮತ್ತಂ, ಎನ್ನ ತನುವಿಡಿದವರ ತನುವ ಬೆರಿಸುವೆನು. ಎನ್ನ ಮನ ವಿಡಿದವರ ಮನವ ಬೆರಿಸುವೆನು. ಎನ್ನ ಶಿರವನವರ ಪಾದಕ್ಕೆ ಪೂಜೆಯ ಮಾಡುವೆನು. ಕೂಡಲ ಸಂಗನ ಶರಣನೊಡಗೊಂಡು ಬಂದೆನ್ನ ಭವವ ಹರಿವೆನು. ॥೨೧॥

ಹೀಗೆಂದು ಬಸವರಾಜ ದೇವರು ಲಿಂಗಾರ್ಚನೆಯಿಂದೆಸ್ವ ಚನ್ನ ಬಸವರಾಜ ದೇವರು ಮೊದಲಾದ ಅಸಂಖ್ಯಾತ ಗಣಂಗಳ ಕರಸ ಕೊಂಡು, ವಿಭೂತಿ ವೀಳೆಯವ ಕಾಣಿಕೆ ಸಹವಾಗಿ ನವರತ್ನಖಚಿತ ಒಡಗೂಡಿದ ದಿವ್ಯಾಂಬರಂಗಳಂ ಗುಡಿತೋರಣಂಗಳ ಕಟ್ಟಿ, ದೇವಾಂಗ ಮುಕ್ತಿಕದ ಸೆರಗಿನ ಸೀರೆಯಂ ನಡೆವುಡಿಯು ಹಾಸಿ, ಚೀನಚೀನಾಂಬರ ಪಲ್ಲಿ ಪವಳದ ಝುಲ್ಲರಿಯ ಮೇಲುಕಟ್ಟಂ ಕಟ್ಟಿ, ಕಳಸ ಕನ್ನಡಿಯಂ ಪಂಚ ಮಹಾವಾದ್ಯದಿಂ ಧೂಪಾರತಿ ಘಂಟೆ ಸಹವಾಗಿ, ಪ್ರಭು ದೇವರ ಕರೆಯ ಬಹ ಸಂಭ್ರಮದಿಂದಿರುತ್ತಿರಲಿತ್ತಲಾ ಪ್ರಭುದೇವರು ಬಸವ ರಾಜ ದೇವರ ತೆರಹು ಮರಹಂ ನೋಡಿ, ವಿಸ್ಮಯಂದಾಳ್ದು ಸಿದ್ಧರಾ ಮಯ್ಯ ದೇವರಿಗೆ ಹೇಳುವ ಪ್ರಸ್ಥಾವದ ವಚನ. ॥

ನೋಡಾ, ಸಿದ್ಧರಾಮಯ್ಯ ದೇವ ಅಗ್ಗಳಿಕೆ ಭಕ್ತರಿಗೆ ಅಹಂಕಾರ ವಾಯಿತ್ತು. ಭೃತ್ಯನಿದ್ದೆಡೆಗೆ ಕರ್ತನೆಯಿತಂದರೆ ಅಟ್ಟಾಟಿಕೆಯಲ್ಲಿ ಇಂತು ಕರೆನರುಂಟೆ? ಬಸವಣ್ಣನೊಳಗೆ ಇಂತು ಮರವೆ ಹುಟ್ಟಿದ ಬಳಿಕ ಉಳಿದ ಶಿವಭಕ್ತರ ಪಾಡೇನು ಹೇಳಾ? ಗುಹೇಶ್ವರ ಲಿಂಗವನು ಭಕ್ತಿಕತಿಯಿಂದೆ ಮನವಮುಟ್ಟಿ ಕರೆದರೆ ಹೋಹುದಲ್ಲದೆ ವ್ಯರ್ಥಕ್ಕೆ ಹೋಗಲಾರದು ನೋಡಯ್ಯಾ. ॥೨೨॥

ಹೀಗೆಂದು ಪ್ರಭುದೇವರು ನಿರೂಪಿಸಲು, ಅದಕ್ಕೆ ಸಿದ್ಧರಾಮಯ್ಯ ದೇವರು ಮರಳಿ ಪ್ರಭುದೇವರೊಡನೆ ವಿನ್ನಹಂ ಮಾಡುವ ಪ್ರಸ್ಥಾವದ ವಚನ. ॥

ನಿಮ್ಮ ಶಕ್ತಿ ಆತನಲ್ಲಿಪ್ಪುದು ಕಂಡೆಯ್ಯ! ಆತನ ಪ್ರಾಣ ನಿಮ್ಮಲ್ಲಿ ಪ್ಪುದು. ನಿಮ್ಮ ತಮ್ಮ ಛೇದವನಾರು ಬಲ್ಲರು ಹೇಳಯ್ಯ? ಕಪಿಲ ಸಿದ್ಧಮಲ್ಲಿನಾಥಯ್ಯ, ನಿಮ್ಮ ಶರಣ ಬಸವಣ್ಣನ ಅನುವ ನೀವೆ ಬಲ್ಲಿರಿ. ॥೨೩॥

ಇಂತು ಪ್ರಭುದೇವರು ಸಿದ್ಧರಾಮಯ್ಯ ದೇವರು ತಮ್ಮೊಳಗೆ ತಾವು ಬಸವರಾಜ ದೇವರ ಅಂತಸ್ಥಿತಿಗತಿಯನು ಪ್ರಸಂಗ ಮುಖದಿಂ ನುಡಿವುತ್ತಿರಲು, ಇತ್ತ ಬಸವರಾಜ ದೇವರು ಅಸಂಖ್ಯಾತ ಮಹಾಗಣಂಗಳು ಸಹಿತ ಬಂದು ಪ್ರಭುದೇವರ ಪಾದದರ್ಶನವಾದ ಪ್ರಸ್ಥಾವದ ವಚನ. ॥

ಭವರೋಗ ವೈದ್ಯನೆಂದು ನಂಬಿದೆ ನಾನು. ಒಮ್ಮಿಗೆ ಕರುಣಿಸಯ್ಯ! ಕಲಿದೇವಯ್ಯ ನೀನು ಒಮ್ಮಿಗೆ ಕರುಣಿಸಯ್ಯ! ಜಯ ಜಯ ಶ್ರೀ ಮಹಾ

ದೇವ ಎನುತಿರ್ದೆನು ಕೂಡಲ ಸಂಗಮ ದೇವಯ್ಯ ನಿಮ್ಮ ಶ್ರೀಪಾದಕ್ಕೆ ನಮೋ ನಮೋ ಎನುತಿರ್ದೆನು. ॥೨೪॥

ಕಂಡಡೆ ಕಡು ಸುಖವೆನಗೆ ಕಾಣದಿರ್ದೆಡೆಯವಕ್ಕೆಯಯ್ಯ! ತವ ಕವ ಸ್ನೇಹವ ದರ್ಶನವಲ್ಲಿ ತರಹರವಾಯಿತ್ತು. ಕೂಡಲ ಸಂಗಮ ದೇವಯ್ಯ ನಿಮ್ಮ ಶ್ರೀಪಾದವ ಕಂಡು ಧನ್ಯನಾದೆನು. ॥೨೫॥

ಮತ್ತಂ, ನಿಮ್ಮ ಶರಣರ ಕಂಡ ಕಡು ಸುಖವನೇನೆಂಬೆನಯ್ಯ? ಅದು ಸಾಲೋಕ್ಯವಂತುಟಲ್ಲ. ಅದು ಸಾಮೀಪ್ಯವಂತುಟಲ್ಲ. ಅದು ಸಾರೂಪ್ಯವಂತುಟಲ್ಲ. ಅದು ಸಾಯುಜ್ಯವಂತುಟಲ್ಲ. ಕೂಡಲ ಸಂಗನ ಶರಣರ ಪಾದ ದರ್ಶನವ ಕಂಡು ನಾನು ಧನ್ಯನಾದೆನು. ॥೨೬॥

ಮತ್ತಂ, ನಮಸ್ಕಾರಮಂ ಮಾಡುವ ಪ್ರಸ್ಥಾವದ ವಚನ.॥

ಮನ ಮನ ಮುಟ್ಟಿದ ಭಕ್ತಿಗೆ ತನುವೇ ಅರ್ಪಿತ. ತನು ಮುಟ್ಟಿದ ಭಕ್ತಿಗೆ ಮನವೆ ಅರ್ಪಿತವಯ್ಯ! ಎನ್ನ ತನುಮನವೆರಡು ನಿಮ್ಮ ಚರಣಕ್ಕೆ ವೇದ್ಯನೋಡಯ್ಯ! "ದೀರ್ಘದಂಡ ನಮಸ್ಕಾರಂ ನಿರ್ಲಜ್ಜಂ ಗುರುಸನ್ನಿಧೌ॥ ಶರೀರಮರ್ಥಪ್ರಾಣಂ ಚ ಸದ್ಗುರುಭ್ಯೋ ನಿವೇದಯೇತ್॥" ಎಂದುದಾಗಿ, ತ್ರಾಹಿ ತ್ರಾಹಿ ಶರಣಾರ್ಥಿ ನೀವೆ ಬಲ್ಲಿರಿ ಕೂಡಲ ಸಂಗಮದೇವಾ. ॥೨೭॥

ಮತ್ತಂ, ಎನ್ನ ಶರೀರ ನಿಮ್ಮ ಚರಣ ಒರಸೊರಸಿ ಬೆರಸಿ ಛೇದವಲ್ಲಯ್ಯ! ಎನ್ನ ಕಾಯದ ಕಪಟ ಎನ್ನ ಮನವ ವಿಕಾರ ನಿಮ್ಮ ಲಿಂಗ ಷ್ಕವ ಪೊಸೆಯ ಸೋಂಕಲೊಡನೆ ಹರಿದುದು ನೋಡಯ್ಯ! ಕೂಡಲ ಸಂಗಮದೇವಯ್ಯ ನಿಮ್ಮ ಶ್ರೀಪಾದ ಬೆಳಗ ಕಂಡು ಎನ್ನ ಅಂತರಂಗದ ಕತ್ತಲೆ ಓಡಿತ್ತಯ್ಯ. ॥೨೮॥

ಇಂತು ಬಸವರಾಜ ದೇವರು ದೀರ್ಘದಂಡ ನಮಸ್ಕಾರಮಂ ಮಾಡುತ್ತಿರಲು, ಪ್ರಭುದೇವರ ನಿಜ ಮೂರ್ತಿ ನಿರಾಕಾರಸ್ಥಲದೊಳು ನಿಂದು ನಮಸ್ಕಾರಾದಿ ಕ್ರಿಯಕಗೆಳಸಾಧ್ಯವಾಗಿರ್ದ ಪ್ರಸ್ಥಾವದ ವಚನ.॥

ರೂಪು ಅರೂಪಿನಲ್ಲಿ ನಿಂದಿತ್ತು. ಆ ರೂಪು ನಿಜರೂಪವ ನವಗ್ರಹಿಸಿತ್ತು. ನಿಜರೂಪು ನಿರ್ಣಯದಲ್ಲಿ ನಿಷ್ಪತ್ತಿಯಾಯಿತ್ತು. ನಿಷ್ಪತ್ತಿಯಾದ ನಿಜ ಶರಣರ ನಿಲವು ಕಾಯವಿಡಿದು ಕಂಡಿಹೆನೆಂದರೆ ಕಾಣಬಹುದೇ?

ಕೂಡಲ ಸಂಗಮ ದೇವರ ಶರಣ ಪ್ರಭುದೇವರ ನಿಲವು ಎನಗೆ ಸಾಧ್ಯವಪ್ಪುದೆ? ॥೨೯॥

ತೋರುವನಯ್ಯ ಶಿವನು ಕಂಗಳ ಮುಂದೆ. ಕಾಯಗೊಂಡು ಮನದ ಮುಂದೆ ಕನಸಾಗಿ ಕಾಡುವನಯ್ಯ ಶಿವನು. ಒಂದೆಡೆಯಲ್ಲಿದ್ದು ಹಲವು ಎಡೆಯಲ್ಲಿ ತೋರುವನು. ಹಲವು ಎಡೆಯಲ್ಲಿದ್ದು ಒಂದೆಡೆಯಲ್ಲಿ ರೂಪಾಗಿಪ್ಪನು. ಕೂಡಲ ಸಂಗಮದೇವರು ಚಿನುಮಯರಾಗಿ ಎನಗೆ ಅಸಾಧ್ಯನಾದನು. ॥೩೦॥

ಮತ್ತಂ, ಕಂಡಿಹರೆಂದು ಕಣ್ಣ ಮರೆಮಾಡಿದ. ಕೇಳಿಹರೆಂದು ಕಿವಿಗೆ ಮರೆಮಾಡಿದ. ಮುಟ್ಟಿಹರೆಂದು ಕೈಗೆ ಮರೆಮಾಡಿದ. ಸೋಂಕಿಹರೆಂದು ತನುವಿಂಗೆ ಮರೆಮಾಡಿದ. ನೆನೆದಿಹರೆಂದು ಮನಕ್ಕೆ ಮರೆಮಾಡಿದ. ಅರಿದಹರೆಂದು ಅಂತರಂಗವಲ್ಲಿ ಮರೆಮಾಡಿದ. ಪೂಜಿಸಿಹರೆಂದು ಕ್ರಿಗೆ ಮರೆಮಾಡಿದ. ಕೂಡಲ ಸಂಗಮದೇವರೊಡನೆ ಅಹಂಕಾರವ ಮಾಡಿ ಕೆಟ್ಟು ಕೇಡನೇನೆಂದುಪಮಿಸುವೆನು? ॥೩೧॥

ಇಂತು ಬಸವರಾಜ ದೇವರು ನಾನಾ ಭಕ್ತಕ್ರಿಯೆಗಳಿಂದ ಮುಟ್ಟಿಸೋಡಲು, ಆ ಪ್ರಭುದೇವರ ನಿಲವಸಾಧ್ಯವಾಗಿರಲು, ಎನ್ನ ಅಹಂಕಾರದಿಂದೆ ನಾನು ಕೆಟ್ಟಿನೆಂದು ಅನುತಾಪಾಗ್ನಿಯೊಳು ಕರಗಿ ಕೊರಗಿ ಮನ ನೊಂದು ವಿನ್ನಹಂ ಮಾಡಿದ ಪ್ರಸ್ಥಾವದ ವಚನ॥

ಶರಣೆಂದು ಪಾದವ ಹಿಡಿದಿಹೆನೆಂದರೆ ಚರಣದ ನಿಲವು ಕಾಣಬಾರದು. ಕುರುಹಿಡಿದಿಹೆನೆಂದರೆ ಕೈಗೆ ನಿಲುಕದು. ಬೆರಸಿ ಹೊಕ್ಕಿಹೆನೆಂದರೆ ಮುನ್ನವೆ ಅಸಾಧ್ಯ. ಅಕಟಕಟಾ! ಅಹಂಕಾರದಲ್ಲಿ ಕೆಟ್ಟಿನಲ್ಲ ಗುರುವೆ! ಎನ್ನ ಪರಮ ಗುರುವೇ ಬಾರಯ್ಯ ಅರಿಯದ ತರುಳನ ಅವಗುಣವ ನೋಡುವರೆ ಕೂಡಲ ಸಂಗಮದೇವಾ? ॥೩೨॥

ಮತ್ತಂ, ತ್ರಿವಿಧ ತ್ರಿವಿಧದಲ್ಲಿ ತಪ್ಪಿದ ತಪ್ಪುಕ ನಾನಯ್ಯ! ಒಮ್ಮಿಂಗೆ ಕರುಣಿಸಯ್ಯ! ಇದನಾದರು ಇನ್ನು ತಪ್ಪಿದೆನಾದರೆ ನೀವು ಮಾಡಿತ್ತೆ ಸಲುವುದು ಕೂಡಲ ಸಂಗಮದೇವಾ. ॥೩೩॥

ಮತ್ತಂ ಡಂಬು, ಪಳ್ಳು ಹುಸಿ ಎನ್ನವಯ್ಯ, ಡಂಭಕ ಮನದವ. ನಾನಯ್ಯ! ಎನ್ನಲ್ಲೇನವಸವಿರಿ? ನಿಮ್ಮ ನಂಬಿಯೂ ನಂಬದ ಡಂಭಕ

6274

ನಾನು. ಹಾವ ತೋರಿ ಹವಿಯ ಬೇಡುವಂತೆ ಎನ್ನ ಭಕ್ತಿ ಕೂಡಲ ಸಂಗನಮದೇವಾ. ॥೩೪॥

ಮತ್ತಂ, ಮಸಿಯನೇಸು ಕಾಲ ಬೆಳಗಿದರೆ ಬಿಳಿದಾಗ ಬಲ್ಲುದೆ? ಕರ್ಮಸ್ಥಿತಿ ಬೆನ್ನ ಬಿಡದು. ಅನಂತ ಕೋಟಿ ಸನ್ಮಾನವ ಮಾಡಿದಡೇನು? ಒಂದು ನಿಮಿಷವ ಉದಾಸೀನ ಕೆಡಿಸಿತ್ತು ಕೂಡಲ ಸಂಗಮದೇವ ನಿಮ್ಮ ನಂಬಿಯೂ ನಂಬದ ಡಂಭಕ ನಾನು. ॥೩೫॥

ಮತ್ತಂ, ಸ್ಥಾವರ ಜಂಗಮ ಒಂದೇ ಎಂದು, ಇದಿರ ನುಡಿಸಿ, ನುಡಿದು ನಾನೆಡಹುತಿಪ್ಪೆ. ಅನು ಸಹಜನಲ್ಲ. ಅನುಭಯಲಿಂಗ ಸಂಬಂಧಿ ಎಂಬ ನುಡಿ ಸುಡದಿಹುದೆ ಕೂಡಲ ಸಂಗಮದೇವಾ? ॥೩೬॥

ಮತ್ತಂ, ತಂದೆ ನೀವು, ತಾಯಿ ನೀವು, ಬಂಧು ನೀವು, ಬಳಗ ನೀವು. ನೀವಲ್ಲದೆ ಮತ್ತಾರು ಇಲ್ಲ. ಕೂಡಲ ಸಂಗಮದೇವ ಹಾಲವ್ವ ನೀರಲವ್ವ. ॥೩೭॥

ಎನ್ನವರೆನ್ನ ಕೊಂಡಾಡಿ ಹೊನ್ನ ಶೂಲಕ್ಕೆ ಇಕ್ಕಿದರು. ಅಹಂಕಾರ ಗಾಯದಲ್ಲಿ ನಾನೆಂತು ಬದುಕುವೆನು? ನಾನೆಂತು ಜೀವಿಸುವೆನು? ಜಂಗಮವಾಗಿ ಬಂದು, ಶೂಲವನಿಳುಹಿ ಪ್ರಸಾದವ ಮದ್ದನಿಕ್ಕಿ ಸಲಹು ಕೂಡಲ ಸಂಗಮದೇವಾ. ॥೩೮॥

ಇಂತು ಆ ಬಸವರಾಜ ದೇವರು ಅನುತಾಪದಿಂ ನೊಂದು ಅತ್ಯಂತ ಕಿಂಕರನಾಗಿ ವಿನ್ನಹಂ ಮಾಡುತ್ತಿರಲು, ಆ ಪ್ರಭುದೇವರು ಸಾಕಾರವಾಗಿ ಆಕ್ಷೇಪದಿಂದ ನಿರೂಪಿಸಿದ ಪ್ರಸ್ಥಾವದ ವಚನ.॥

ಲಿಂಗದೊಳಗೆ ಜಂಗಮ ಜಂಗಮದೊಳಗೆ ಲಿಂಗವೆಂದರಿದು, ಮರಳಿ, ಬರುದೊರೆ ಓಡುವರು. ಜಂಗಮವನಿನ್ನು ಬೆರಸಲೇತಕಯ್ಯ? ಆ ಲಿಂಗದೊಳಗೆ ಜಂಗಮವ ನರಸಿಕೊಂಬುದು. ಲಿಂಗಾರ್ಚನೆಯವಸರಕ್ಕೆ ಜಂಗಮ ಮನೆಗೆ ಬಂದರೆ ಲಿಂಗಾರ್ಚನೆಯ ಮಾದು ಜಂಗಮವಕ್ಕೆ ಇದಿರೆದ್ದು ವಂದಿಸಿ ಭಕ್ತಿಯ ಮಾಡಬಲ್ಲಾತನೆ ಭಕ್ತ. ಆ ಜಂಗಮ ಹೊರಗಿರಲು, ಲಿಂಗಾರ್ಚನೆಯ ಮಾಡುತ್ತಿಪ್ಪಾತನೇತರ ಭಕ್ತ? ಜಂಗಮದ ಮುಂದೆ ಲಿಂಗವ ಕೈಯ್ಯಲ್ಲಿ ಹಿಡಿದುಕೊಂಡು, ಸಹಪಂಕ್ತಿಯಲ್ಲಿ ಕುಳ್ಳಿರ್ದು ಪೂಜಿಸುವಾತ ಭೃತ್ಯಾಚಾರ ದ್ರೋಹನು. ಆ ಭಕ್ತನ ಮನೆಯ

ಹೊಗುವ ಜಂಗಮವೇ ಅಜ್ಞಾನಿ. ನಮ್ಮ ಗುಹೇಶ್ವರನ ಶರಣರ ಕೂಡ ಅಹಂಕಾರವ ಹೊತ್ತಿಪ್ಪವರ ಕಂಡಡೆ ನಾನೊಲ್ಲೆ ಕಾಣಾ ಸಂಗನಬಸವಣ್ಣಾ ॥೩೯॥

ಜಂಗಮವೆ ಹೊರಗಿರಲು ಲಿಂಗಾರ್ಚನೆ ಆವುದಯ್ಯ? ಪ್ರಾಣವ ಹೊರಗಿರಿಸಿ ಎಡೆಯಾಡುವ ದೇಹ ಉಂಟೆ? ಶರಣರು ಬಂದು ಬಾಗಿಲಲ್ಲಿ ನಿಂದಿರಲು, ತನ್ನ ತಾ ಮರೆದವರ ಕಂಡರೆ ನಮ್ಮ ಗುಹೇಶ್ವರ ಲಿಂಗ ಒಡೆಯ ಹಾಯ್ಕುದೆ ಮಾಣ್ಬನೆ? ॥೪೦॥

ಇಂತು ಬಸವರಾಜ ದೇವರು ಲಿಂಗಾರ್ಚನೆಯಂ ಮಾಡುತ್ತ ಶರಹುಮರಹಾಗಿರ್ದ ವೃತ್ತಾಂತಮಂ ಪ್ರಭುದೇವರು ಎಚ್ಚರಿಸಿ ಮೂದಲಿಸಿ ನಿರೂಪಮಂ ಕೊಡುತ್ತಿರಲು, ಆ ಬಸವರಾಜ ದೇವರು ಅತ್ಯಂತ ನೊಂದು ತಮ್ಮ ಲಿಂಗಾರ್ಚನೆಯ ತಾವೆ ಜರಿದು ತೋರುತ್ತಿರ್ದ ಪ್ರಸ್ಥಾವದ ವಚನ.॥

ಮುನ್ನೂರರುವತ್ತು ದಿನ ಸಾಧನೆಯ ಮಾಡಿ, ಕಳನನೇರಿ ಕೈವಲ್ಯದಂತಾಯಿತ್ತೆನ್ನ ಭಕ್ತಿ. ಎನಿಸು ಕಾಲ ಲಿಂಗಾರ್ಚನೆಯಂ ಮಾಡಿ ಏನೆ ನಯ್ಯ? ಎನ್ನ ಮನದಲ್ಲಿ ವೃಥವಿಡಿಯದನ್ನಕ್ಕರ, ಕೂಡನ ತುಂಬಿದ ಹಾಲನೊಡೆಯ ಹಾಯ್ಕಿ ಇನ್ನುಡುಗಿಹೆನೆಂದರೆ ಎನ್ನಳವೆ ಕೂಡಲ ಸಂಗಮದೇವಾ? ॥೪೧॥

ಎನಿಸು ಕಾಲ ಕಲ್ಲು ನೀರೊಳಗಿದ್ದರೇನು? ನೆನೆದು ಮೃದುವಾಗ ಬಲ್ಲುದೆ ಅಯ್ಯ? ಎನಿಸು ಕಾಲ ನಿಮ್ಮ ಪೂಜಿಸಿ ಏನೆನಯ್ಯ ಮನದಲ್ಲಿ ದೃಢವಿಲ್ಲದನ್ನಕ್ಕರ? ನಿಧಾನವ ಕಾಯಿದಿರ್ದ ಬೆಂತರನ ವಿಧಿ ಎನಗಾಯಿತ್ತು ಕಾಣಾ ಕೂಡಲ ಸಂಗನದೇವಾ. ॥೪೨॥

ಮತ್ತಂ, ಅಷ್ಟವಿಧಾರ್ಚನೆ, ಷೋಡಶೋಪಚಾರಂಗಳ ಅರಸರಿಯದ ಬಿಟ್ಟಿಯ ಮಾಡುವೆನು. ಎನ್ನ ತಾಗಿದ ಸುಖವನು ಜಂಗಮಾರ್ಪಿಸಲರಿಯದ ಉಪಚಾರಿಯಾನು. ಸ್ಥಾವರ ಜಂಗಮದ ಭೇದವ ಅರಿಯದ ಪೂಜಕ ನಾನು. ಮತ್ತೆ ನಾಚದೆ ಕೂಡಲ ಸಂಗನದೇವರನ್ನ ಪ್ರಾಣಲಿಂಗವೆಂಬ ಡಂಭಕ ನಾನು. ॥೪೩॥

ಮತ್ತಂ, ನೋಡುವರುಳ್ಳರೆ ಮಾಡುವೆ ದೇಹಾರವನು. ಎನಗೊಂದು ನಿಜವಿಲ್ಲ. ಎನಗೊಂದು ನಿಷ್ಪತ್ತಿ ಇಲ್ಲ ನೋಡಯ್ಯ! ಲಿಂಗವಗೊಂದು ನಿಜವಿಲ್ಲ.

ತೋರಿ ಉದಕವ ಹೊರೆವ ಭಂಗಗಾರನಾನಯ್ಯ ಕೂಡಲ ಸಂಗಮ ದೇವಯ್ಯ. ॥೪೪॥

ಲಿಂಗವೆಂತಿಪ್ಪುದೆಂದರಿಯೆನು. ಲಿಂಗದ ನಿಲವೆಂತುಟೆಂಬುದ ಹೋದ ಹೊಲಬನರಿಯೆನು. ಲಿಂಗಾರ್ಚನೆಯ ಮಾತು ಎನಗೇಕಯ್ಯ? ಜಂಗಮ ಲಿಂಗವಾಗಿ ಬಂದು ನೀವಿರುತ್ತಿರಲು, ಸ್ಥಾವರಕ್ಕೆ ಮಜ್ಜಿ ಮರುಳಾದೆನು. ಕೂಡಲ ಸಂಗಮದೇವ ಎನ್ನ ತಪ್ಪನೆಣಿಸಿಕೊಳ್ಳೆನೆಂದರೆ ಕಡೆಯಿಲ್ಲ. ॥೪೫॥

ಎನ್ನ ತಪ್ಪು ಅನಂತಕೋಟಿ. ನಿನ್ನ ಸ್ಥೈರಕ್ಕೆ ಕಡೆ ಇಲ್ಲವಯ್ಯ! ಇನ್ನು ತಪ್ಪಿದೆನಾದರೆ ನಿಮ್ಮ ಪಾದವೇ ದಿವ್ಯ. ಕೂಡಲ ಸಂಗಮದೇವಯ್ಯ ನಿಮ್ಮ ಪ್ರಮಥರ ಮುಂದೆ ಕಿನ್ನರಿ ಬೊಮ್ಮಣ್ಣಗಳ ಪಾದವೇ ಸಾಕ್ಷಿ. ॥೪೬॥

ಮುನ್ನ ತಪ್ಪಿದ ತಪ್ಪಲ್ಲವೆ ಇನ್ನು ತೆರಹು ಮರಹಾಗಿದ್ದೆನಾದರೆ ಕಿನ್ನರಿ ಬೊಮ್ಮಣ್ಣಗಳು ಸಾಕ್ಷಿಯಾಗಿ ನಿಮ್ಮ ಶ್ರೀಪಾದದಾಣೆ ಎಂದು ಬಸವರಾಜ ದೇವರು ಬಿನ್ನಹಂ ಮಾಡುತ್ತಿರಲು, ಆಲ್ಲಿ ಕಿನ್ನರಿ ಬೊಮ್ಮಯ್ಯ ತಂದಿಗಳು ಪ್ರಭುದೇವರೊಡನೆ ಬಿನ್ನಹಂ ಮಾಡುವ ಪ್ರಸ್ಥಾವದ ವಚನ. ॥

ತನು ನಿಜ್ಜ, ಮನ ಲಿಂಗವಾದ ಬಳಿಕ ಅನ್ಯವ ಬೇರೆ ಮತ್ತರಸಲುಂಟೆ? ತನುವೇ ಬಸವಣ್ಣ. ಮನವೇ ಪ್ರಭುದೇವರೆಂಬ ಘನ ಒಳಕೊಂಡಿದ್ದ ಬಳಿಕ ಗುಣಾವಗುಣವ ಸಂಪಾದಿಸುವರೆ ಮಹಾಲಿಂಗ ತ್ರಿಪುರಾಂತಕ ದೇವ ಸಂಗನಬಸವಣ್ಣನಲ್ಲಿ ನಿಮ್ಮಡಿಗಳಲ್ಲಿ ಸಂದು ಸಂಶಯವುಂಟೆ? ಬಿಜಯಂಗೈವುದಯ್ಯ ಪ್ರಭುವೆ. ॥೪೭॥

ಹೀಗೆಂದು ಕಿನ್ನರೀ ಬೊಮ್ಮಣ್ಣಗಳು ಬಿನ್ನೈಸುತ್ತಿರಲು, ಅದಕ್ಕೆ ಪ್ರಭುದೇವರು ನಿರೂಪಿಸಿದ ಪ್ರತ್ಯುತ್ತರ. ॥

ಜಂಗಮದಿಂಗಿತಾಕಾರವ ನೋಡಿ, ಲಿಂಗವೆಂದರಿದ ಸದ್ಭಕ್ತರು ಮನ ಮನ ಬೆರಸಿದ ಕೂರ್ಮನ ಶಿಸುವಿನ ಸ್ನೇಹದಂತೆ ಕಾಣದ ಮುನ್ನವೆ ತೆರಹಿಲ್ಲದಿರಬೇಕು ನೋಡಾ. ಬಂದ ಭರವನರಿಯದೆ ನಿಂದ ನಿಲವನರಿಯದೆ ಕಮ್ಮನೆ ಅಹಂಕಾರವ ಹೊತ್ತಿಪ್ಪವರ ನಮ್ಮ ಗುಹೇಶ್ವರ ಲಿಂಗನೊಲ್ಲ ಕಾಣಾ ಕಿನ್ನರಿ ಬೊಮ್ಮಣ್ಣ. ॥೪೮॥

ಹೀಗೆಂದು ಪ್ರಭುದೇವರು ಕಿನ್ನರಿ ಬೊಮ್ಮಣ್ಣಗಳೊಡನೆ ನಿರೂಪಿಸಲು. ಇದಕ್ಕೆ ಬಸವರಾಜ ದೇವರು ಕಿಂಕುರ್ವಾಣ ಭಾವದಿಂದೆ ಬಿನ್ನೈಸಿದ ಪ್ರಸ್ಥಾವದ ವಚನ. ॥

ಸತ್ಯ ಸದಾಚಾರ ಸಂಬಂಧವಾದ ಭೃತ್ಯಾಚಾರ ಎನಗಿಲ್ಲಯ್ಯ! ಆನು ನಿಮ್ಮ ಸೇವೆಯಲು ಎನಗೆ ಭಕ್ತಿ ಇಲ್ಲಯ್ಯ! ಕರುಣದಿಂದೆ ಕೈಪಿಡಿದಾತ ಕೂಡಲಸಂಗಮದೇವಾ. ॥೪೯॥

ಎನ್ನ ಅಹಂಕಾರವ ಅವಗುಣವ ಕಳೆದು, ಕೃತಾರ್ಥನ ಮಾಡಿಂದು ಬಿನ್ನಹಂ ಮಾಡುವ ಪ್ರಸ್ಥಾವದ ವಚನ. ॥

ಕರಗಿಸಿ ಎನ್ನ ಮನದ ಕಾಳಿಕೆಯ ಕಳೆಯಯ್ಯ! ಒಡೆಗೆ ಒಣ್ಣಕ್ಕೆ ತಂದೆನ್ನ ಪುಟವಿಕ್ಕಿ ನೋಡಯ್ಯ. ಕಡಿಹಕ್ಕೆ ಒಡಿಹಕ್ಕೆ ತಂದೆನ್ನ ಕಡೆಯಾಗಯ ಮಾಡಿ ನಿಮ್ಮ ಶರಣರ ಪಾದಕ್ಕೆ ತೊಡಿಗೆಯ ಮಾಡಿ ಸಲಹಯ್ಯ ಕೂಡಲಸಂಗಮದೇವಯ್ಯ ॥೫೦॥

ಈ ಹೀಗೆಂದು ಬಸವರಾಜ ದೇವರು ಬಿನ್ನೈಸಲು, ಇದಕ್ಕೆ ಪ್ರಭುದೇವರು ನಿರೂಪಿಸಿದ ಪ್ರಸ್ಥಾವದ ವಚನ ॥

ತನುವಿನಲ್ಲಿ ತನು ಸವೆಯದು. ಮನದಲ್ಲಿ ಮನ ಸವೆಯದು. ಧನದಲ್ಲಿ ಧನ ಸವೆಯದು. ಭಕ್ತಿ ಯುಕ್ತಿಯ ಮಾತು ನಿನಗೇಕೆ ಹೇಳಾ ಬಸವ? ಮಾಟಕೂಟವೆಂಬ ಕೀರ್ತಿಗೆ ಸಿಲ್ಕಿ ಜಂಗಮವೆ ಲಿಂಗವೆಂಬುದ ಮರೆದೆಯಲ್ಲ ಬಸವ? ಗುಹೇಶ್ವರನ ಶರಣರಿಗೆ ತ್ರಿಕರಣವನೊಪ್ಪಿಸಿದಲ್ಲದೆ ಭಕ್ತನಾಗಬಾರದು ಕಾಣಾ ಸಂಗನಬಸವಣ್ಣಾ ॥೫೧॥

ಹೀಗೆಂದು ಪ್ರಭುದೇವರು ನಿರೂಪಿಸಲು, ಬಸವರಾಜದೇವರು ತನು, ಮನ, ಧನಂಗಳನು ಮಂಚಕೆ ಇಲ್ಲದೆ ನಿಮಗರ್ಪಿಸಿದೆನೆಂಬ ಪ್ರಸ್ಥಾವದ ವಚನ. ॥

ಹೊನ್ನಿನೊಳಗೊಂದೊರೆಯು ಸೀರೆಯೊಳಗೊಂದೆಳೆಯು ಇಂದಿಂಗೆ ನಾಳಿಂಗೆ ಬೇಕೆಂದಿನಾವಕ್ಕೆ, ನಿಮ್ಮಾಣೆ, ನಿಮ್ಮ ಪ್ರಮಥರಾಣೆ. ನಿಮ್ಮ ಶರಣರಿಗಲ್ಲದೆ ಮತ್ತೊಂದನರಿಯೆನು ಕೂಡಲ ಸಂಗಮದೇವ ನಿಮ್ಮಾಣೆ. ॥೫೨॥

ಮತ್ತಂ॥ ತನುವ ಬೇಡಿದಡೀವೆ. ಮನವ ಬೇಡಿದಡೀವೆ. ಧನವ ಬೇಡಿದಡೀವೆ. ನಿಮ್ಮ ಶರಣರಿಗೆ ಎನಗೆ ಬೇಕೆಂಬ ಭಾವವನವಳ ಹೊರ್ವರಿ, ಧನವುಂಟೆಂಬ ನಿಮ್ಮ ಪಾವವಾಣೆ. ಮನ ವಚನ ಕಾಯವಲ್ಲಿ ನೀನರಿ

ಲ್ಲಿವೆ ವ.ತ್ತೊಂದ ನರಯೆನು. ಆರಿದರೆ ಕೂಡಲಸಂಗಮದೇವ ಭವ ಫೆಟ್ಟ
ದಪ್ಪಿಕ್ಕಯ್ಯಾ. ॥೫॥

ತನು ಮನ ಧನಂಗಳ ನಿಮಗರ್ಪಿಸಿ, ಶುದ್ಧವಾಗಿಪ್ಪೆನೆಂದು ಬಸವ
ರಾಜದೇವರು ವಿನ್ನಹಂ ಮಾಡಲು ಈ ಉತ್ತರಮಂ ಖಂಡಿಸಿ ನಿರೂಪಿಸಿದ
ಪ್ರಸ್ತಾವದ ವಚನ. ॥

ಮೇರು ಗಿರಿಗಳೆಲ್ಲವು ಪ್ರಮಥರೊಡವೆ. ರಜತಗಿರಿಗಳೆಲ್ಲವು ಪ್ರಮ
ತನರೊಡವೆ. ಚತುರ್ದಶ ಭುವನವೆಲ್ಲವು ಲಿಂಗದೊಡವೆ. ಪೃಥ್ವಿ ಎಂಬುದು
ಕರ್ತಾರನ ಕಮ್ಮಟ. ಅಜ್ಜಿನ ಮೂಳೆ ಬಾಣಸದ ಮನೆ ತನುಮನಧ
ನಂಗಳೆಲ್ಲವು ನಮ್ಮ ಗುಹೇಶ್ವರ ಲಿಂಗವ ಸೊಮ್ಮು. ನೀನೇನ ಕೊಟ್ಟು ಭಕ್ತ
ನಾವೆ ಹೇಳಾ ಬಸವಣ್ಣಾ? ॥೪॥

ಮತ್ತಂ ತನುವರ್ಪಿತವೆಂದರೆ ಗುರುದ್ರೋಹ, ಮನವರ್ಪಿತವೆಂದರೆ
ಲಿಂಗದ್ರೋಹ, ಧನವರ್ಪಿತವೆಂದರೆ ಜಂಗನುದ್ರೋಹ. ಇಂತೀ ತನು
ಮನ ಧನಂಗಳೆಂಬ ಅನಿತ್ಯವನು ನಿತ್ಯಕ್ಕರ್ಪಿಸಿ ಭಕ್ತನಾದೆನೆಂದರೆ ಅ
ಜ್ಞಾನ ನೋಡಾ! ಒಡೆಯರಿಗೆ ಉಂಡೆಯ ಮುರಿದಿಕ್ಕಿ ನಾ ಭಕ್ತನಾದೆ
ನೆಂಬ ಪಾತಕ ಸಜ್ಞಾನಿ ಶರಣರು ಮಚ್ಚುವರೆ? ನಮ್ಮ ಗುಹೇಶ್ವರ
ಲಿಂಗಕ್ಕೆ ನೀನಾವುದರಲ್ಲಿ ಏನನರ್ಪಿಸಿ ಭಕ್ತನಾದೆ ಹೇಳಾ ಬಸವಣ್ಣಾ ?॥೫॥

ಹೀಗೆಂದು ಪ್ರಭುದೇವರು ನಿರೂಪಿಸಲು, ಅದಕ್ಕೆ ಬಸವರಾಜ
ದೇವರು ಅನುತಾಪಂ ಬಟ್ಟು ಪ್ರಸ್ತಾವದ ವಚನ. ॥

ಎಳ್ಳಿಲ್ಲದ ಗಾಣವನಾಡಿದ ಎತ್ತಿನಂತಾಯಿತೆನ್ನ ಭಕ್ತಿ. ಉಪ್ಪ ಉಪ್ಪ
ನಲ್ಲಿ ಬಿದ್ದಿ ಮೆಲದಂತಾಯಿತ್ತೆನ್ನ ಭಕ್ತಿ. ಕೂಡಲಸಂಗಮದೇವ ನಾನು
ಮಾಡಿದೆನೆಂಬ ಕಿಚ್ಚು ಎನ್ನನೆ ಸುಟ್ಟಿತ್ತು. ಇನ್ನು ಸಾಲದೆ ಹೇಳಾ
ಪ್ರಭುವೆ? ॥೬॥

ಮತ್ತಂ ತನುವ ಕೊಟ್ಟಿಹೆನೆಂದು ನುಡಿದು, ಗುರುವಚನಕ್ಕೆ ಮೂ
ವಾದೆ; ಮನವ ಕೊಟ್ಟಿಹೆನೆಂದು ನುಡಿದು ಲಿಂಗಮುಖಕ್ಕೆ ದೂರವಾದೆ;
ಧನವ ಕೊಟ್ಟಿಹೆನೆಂದು ನುಡಿದು ಜಂಗಮ ಮುಖಕ್ಕೆ ದೂರವಾದೆ; ಕೂ
ಲಸಂಗಮದೇವಯ್ಯ ನಿಮಗೆ ಮಾಡಿದೆನೆಂದು ನುಡಿದು ಕೆಟ್ಟ ಕೇಡಿಂ
ಕಡೆ ಇಲ್ಲ. ॥೭॥

ಮತ್ತಂ, ನಾನು ಭಕ್ತನಲ್ಲಯ್ಯ! ನಾನು ಯುಕ್ತನಲ್ಲಯ್ಯ! ನಾನು
ಮುಕ್ತನಲ್ಲಿಯ್ಯ! ಕಟು ವೇಷದ ಡಂಭಕ ನಾನು ಕೂಡಲಸಂಗಮದೇ

ವ್ಯ ಭಕ್ತಿ ಮಳಲೊಟ್ಟಿ ಎಂಬುದ ನೀವು ತೋರಬುದಿರಾಗಿ, ಎನಗಿಂದ
ಭಯ ಬಂದಿತ್ತು. ॥೮॥

ಹೀಗೆಂದು ಬಸವರಾಜದೇವರು ಕಿಂಕುರ್ವಾಣದಿಂ ವಿಸ್ಮಿಸಲು,
ಅವಕ್ಕೆ ಪ್ರಭುದೇವರು ವಿಡಂಬಿಸುತಿರ್ದ ಪ್ರಸ್ತಾವದ ವಚನ ॥

ಸಜ್ಜನ ಸನ್ನಿಹಿತವಾದ ಭಕ್ತಿ ಹೊತ್ತಿಗೊಂದು ಸರಿಯುಂಟಿ ಹೇಳಾ ?
ಒಮ್ಮೆ ಅಹಂಕಾರ ಒಮ್ಮೆ ಕಿಂಕರವೆ? ಮನಕ್ಕೆ ಮನಸಾಕ್ಷಿಯಾಗಿ ಮಾಡುವ
ಭಕ್ತನಲ್ಲಿ ಗುಹೇಶ್ವರನಿಪ್ಪನಲ್ಲದೆ ಪ್ರಪಂಚಿನೊಳಗಿಲ್ಲ ಕಾಣಾ ಸಂಗನಬಸ
ವಣ್ಣಾ. ॥೯॥

ಮತ್ತಂ, ಜಂಗಮವೆ ಲಿಂಗವೆಂದು ನಂಬಿದ ಬಳಿಕ ಸಂದೇಹವಿಲ್ಲವೆ
ಇರಬೇಕು ನೋಡಾ! ಸಂದು ಸಂಶಯವಳಿದು, ಸಯವಾದ ಭಕ್ತಿ ಹಿಸ್ಸೆಟ್ಟಿ
ಹೋಯಿತ್ತು. ಒಪ್ಪಟ್ಟಿ ಬಳಿಕ ಕಿಂಕರನಾಗಿ, ಒಪ್ಪಟ್ಟಿ ಬಳಿಕ ಅಹಂಕಾರಿ
ಯಾದರೆ, ಹೊರಗೆ ನೂಕುವ ಕಾಣಾ ನಮ್ಮ ಗುಹೇಶ್ವರಲಿಂಗವು. ॥೧೦॥

ಹೀಗೆಂದು ಪ್ರಭುದೇವರು ನಿರೂಪಿಸಲು, ಇದಕ್ಕೆ ಬಸವರಾಜದೇವರು
ವಿಸ್ಮಿಸಿದ ಪ್ರಸ್ತಾವದ ವಚನ ॥

ಬೆದಕದಿರು, ಬೆದಕದಿರು. ಬೆದಕಿದಿರೆ ಹುರುಳಿಲ್ಲ. ಚಿತ್ತರಟ್ಟಿಯ
ಕಾಯ್ದಲ್ಲಿ ಮತ್ತೇನನರಸುವಿರಿ? ನಿಮ್ಮುತ್ತಮಿಕೆಯ ಮೆರಿಯುಯ್ಯ ಕೂಡಲ
ಸಂಗಮದೇವ. ॥೧೧॥

ಎನ್ನ ಚಿತ್ತ ಶುದ್ಧಿಯ ಹಣ್ಣು ನೋಡಯ್ಯ. ವಿಚಾರಿಸಿ ನೋಡಿದರೆ
ಹುರುಳಿಲ್ಲ ನೋಡಯ್ಯ! ಪ್ರಪಂಚಿನ ಡಂಭಿನಲ್ಲಿ ಎನ್ನನೊಂದು ರೂಪ
ಮಾಡಿ ನೀವಿರಿಸಿದಿರಿ ಕೂಡಲಸಂಗಮದೇವಾ. ॥೧೨॥

ಹೀಗೆಂದು ಬಸವರಾಜದೇವರು ವಿಸ್ಮಿಸಲು, ಅದಕ್ಕೆ ಪ್ರಭುದೇವರ
ಪ್ರತ್ಯುತ್ತರ, ॥

ಕೈಯ್ಯಲ್ಲಿ ದೊಣ್ಣೆ, ಮನದಲ್ಲಿ ಕ್ರೋಧ, ನುಡಿಸದಲ್ಲಿ ಕಿಂಕಲ, ಲಿಂಗದ
ಪಾತ್ರೆ ನಿನಗೇಕೆ ಹೇಳಾ ಬಸವ? ಜಂಗಮವೆ ಲಿಂಗವೆಂಬ ಶಬ್ದ
ಸೂತಕ ಉಂಟಲ್ಲದೆ ಸಜ್ಜನ ಸ್ಪೃತ್ತಿಯ ಮಾತು ನಿನಗೇಕೆ ಹೇಳಾ
ಬಸವ? ಕಬ್ಬುನದ ರೂಪು ಪರುಷವ ಮುಟ್ಟಿ ಕೊನ್ನಾಯಿತ್ತಲ್ಲದೆ ಪರುಷ
ವಾಗಬಲ್ಲುದೆ ಹೇಳಾ ಬಸವ? ಗುಹೇಶ್ವರನೆಂಬ ಪರುಷವ ಪುಟ್ಟಿ
ಯಸರಿವರೆ ತಿಳಿಯ ನೋಡಾ ಸಂಗನಬಸವಣ್ಣಾ. ॥೧೩॥

ಹೀಗೆಂದು ಪ್ರಭುದೇವರು ನಿರೂಪಿಸಲು, ಅದಕ್ಕೆ ಬಸವರಾಜ ದೇವರು ಬಿನ್ನೈಸಿದ ಪ್ರಸ್ತಾವದ ವಚನ. ॥

ಆನೆತ್ತ ಬಲ್ಲೆನಯ್ಯ ನಿಮ್ಮ ಭಕ್ತಿಯ ಘನವ? ನಾನೆತ್ತ ಬಲ್ಲೆನಯ್ಯ ನಿಮ್ಮ ಪ್ರಸಾದದ ನಿಲವ? ಕಾಯದ ಕಳವಳದ ಮರೆಯಲ್ಲಿಪ್ಪವರ್ಗೆ ನಂಬುಗೆಯು ಅಳವಡುವುದೆ? ಕೂಡಲಸಂಗಮದೇವ ಎನ್ನವಗುಣವ ನೋಡದೆ ಕರುಣದಿಂದೆ ಭಕ್ತಿಯ ನಿಲವ ತೋರಾ ತಂದೆ. ॥೬೪॥

ಹೀಗೆಂದು ಬಸವರಾಜದೇವರು ಬಿನ್ನೈಸಲು, ಅದಕ್ಕೆ ಪ್ರಭುದೇವರ ಪ್ರತ್ಯುತ್ತರ. ॥

ಕೂರ್ಮನ ಶಿಸುವಿನ ಸ್ನೇಹದಂತಿರಬೇಡಾ ಸಂಗನಬಸವಣ್ಣ. ಕಾಕ ಪಿಕ ಸಂಧಾನದಂತಿರಬೇಡಾ ಸಂಗನಬಸವಣ್ಣ. ಕೊಂಬೆಗೆ ತಪ್ಪದೆ ಹಾಯ್ದ ಕಪಿಯಂತಿರಬೇಡಾ ಸಂಗನಬಸವಣ್ಣ. ನೀರು ಕ್ಷೀರ ಭೇದಿಸಿ ತೆಗೆವ ಹಂಸೆಯಂತಿರಬೇಡಾ ಸಂಗನಬಸವಣ್ಣ. ಗುಹೇಶ್ವರಲಿಂಗವಲ್ಲಿ ಅವಧಾನ ತಪ್ಪಿ ಮರಳಿ ಅರಸಿದರುಂಟೆ ಹೇಳಾ ಸಂಗನಬಸವಣ್ಣಾ? ॥೬೫॥

ಹೀಗೆಂದು ಪ್ರಭುದೇವರು ನಿರೂಪಿಸಲು ಇವಕ್ಕೆ ಬಸವರಾಜದೇವರು ಬಿನ್ನೈಸಿದ ಪ್ರಸ್ತಾವದ ವಚನ. ॥

ಎನ್ನ ತನುವಿಂಗೆ ನೀನೊಡೆಯ. ಎನ್ನ ಮನಕ್ಕೆಯು ನೀನೊಡೆಯ. ಎನ್ನ ಧನಕ್ಕೆಯು ನೀನೊಡೆಯನಾವ ಬಳಿಕ ಎನ್ನರಿವು ನಿನ್ನದು, ಎನ್ನ ಮರಹು ನಿನ್ನದು. ಕೂಡಲಸಂಗಮದೇವ ಭೃತ್ಯಾಪರಾಧ ಸ್ವಾಮಿಗೋ ದಂಡವೆಂಬುದ ವಿಚಾರಿಸಿ ನೋಡಾ ಪ್ರಭುವೆ. ॥೬೬॥

ಹೀಗೆಂದು ಬಸವರಾಜದೇವರು ಬಿನ್ನೈಸಲು, ಅದಕ್ಕೆ ಪ್ರಭುದೇವರು ನಿರೂಪಿಸಿದ ಪ್ರಸ್ತಾವದ ವಚನ. ॥

ಈ ಬಾಳಲಾರದೆ ವಿಧಿಯು ಜೈವನೆಂಬ ನಾಣ್ಮಡಿಯಾಯಿತ್ತಲ್ಲ ಬಸವಣ್ಣ! ಅವಧಾನ ತಪ್ಪಿ ಆಚಾರಗೆಟ್ಟು ನಡೆದು ಶಿವಾಧೀನವೆಂದರೆ ಹೋಹುದೆ ಗುಹೇಶ್ವರ ಲಿಂಗದಲ್ಲಿ? ಈ ಬಣ್ಣಗೆಯ ಮಾತು ಸಲ್ಲದು ಕೇಳಾ ಸಂಗನಬಸವಣ್ಣಾ. ॥೬೭॥

ಲಿಂಗಜಂಗಮವ ಪೂಜಿಸಿ ಭಕ್ತನಾದೆನೆಂದರೆ ಭೃತ್ಯಾಚಾರ ಸದಾಚಾರವೆ ಹೊದಲು ನೋಡಾ! ವಿಶ್ವಾಸವುಳ್ಳ ಭಕ್ತಿ ಹೊರೆ ಇಲ್ಲ ನೋಡಾ! ಅಹಂಕಾರವೆಂಬ ಅಲಗ ಒಡಿದು ಮಾಡುವ ಭಕ್ತಿ ತನ್ನನೆ ಇರಿದು ಗುಹೇ

ಶ್ವರನೆಂಬ ಹಗೆಯ ಗೆಲುವರೆ ಅರಿವೆಂಬ ಅಲಗ ಅವಧಾನ ತಪ್ಪದೆ ಹಿಡಿಯಬೇಕು ನೋಡಾ ಸಂಗನಬಸವಣ್ಣಾ. ॥೬೮॥

ಹೀಗೆಂದು ಪ್ರಭುದೇವರು ನಿರೂಪಿಸಲು ಅದಕ್ಕೆ ಬಸವರಾಜ ದೇವರ ಬಿನ್ನಪ.

ಧ್ಯಾನ ವೈರಾನವೆಂಬ ಶಸ್ತ್ರವ ಹಿಡಿಯಲರಿಯದೆ, ಅಂಹಕಾರ ಧಾತಿಯ ಮೊನೆ ಅಲಗೆಂಬ ಶಸ್ತ್ರನ ಹಿಡಿದು ಕೆಟ್ಟಿನಯ್ಯ. ಅಂಜುವೆನಂಜುವೆನಯ್ಯ! ಜಂಗಮ ಲಿಂಗವೆಂಬ ಭಾಷೆ ಸಲ್ಲಟವಾಯಿತ್ತು! ಇನ್ನು ಜಂಗಮಲಿಂಗವೆಂಬ ಶಿಕ್ಷಾಶಸ್ತ್ರವಲ್ಲಿ ಎನ್ನ ಹೊಯ್ದು ಬೈದು ರಕ್ಷಿಸುವದು ಕೂಡಲಸಂಗಮದೇವಾ. ॥೬೯॥

ಹೀಗೆಂದು ಬಸವರಾಜದೇವರು ಬಿನ್ನೈಸಲು, ಅದಕ್ಕೆ ಮುಳಿಸ ತಿದ್ದಿ ತೋರಿ ನಿರೂಪಿಸಿದ ಪ್ರಸ್ತಾವದ ವಚನ. ॥

ಮನಕ್ಕೆ ಮನವೇಕಾರ್ಥವಾಗಿ, ಕಾಯಕ್ಕೆ ಕಾಯ ಸಮದರುಶನವಾಗಿ ಪ್ರಾಣಕ್ಕೆ ಪ್ರಾಣ ಸಮದರುಶನವಾಗಿದ್ದವರಲ್ಲಿ ಮನವಚನಕಾಯದಲ್ಲಿ ಶಬ್ದ ಸೂತಕ ಹುಟ್ಟಿದರೆ ಸೈರಿಸಬಾರದು ಕಾಣಾ ನಮ್ಮ ಗುಹೇಶ್ವರ ಲಿಂಗದಲ್ಲಿ ನೀನೆ ಭಕ್ತನಾದ ಕಾರಣ ಮುಳಿಸು ಮೊನೆದೋರಿತ್ತು ಕಾಣಾ ಸಂಗನಬಸವಣ್ಣಾ. ॥೭೦॥

ಮತ್ತಂ, ಸೂಳೆ ಹಲಬರನುರುಕಿದಳೆಂದು ನಿಂದಿಸುವರಿಲ್ಲ ಕೇಳಾ! ಪತಿವ್ರತೆ ತನ್ನ ಪುರುಷನಲ್ಲದೆ ಮತ್ತೊಬ್ಬನ ಮುಖವ ನೋಡಿದರೆ, ಅವಳು ಛಾಂಡಾಲಗತಿ ಎಂಬುದು ಲೋಕವೆಲ್ಲವು. ಕೀರ್ತಿ ವಾರ್ತೆಗೆ ಮಾಡುವ ಭಕ್ತ ತಪ್ಪಿದರೆ, ಅದ ಮನಕ್ಕೆ ತರಲಿಲ್ಲ. ಸಜ್ಜನ ಸದ್ಭಕ್ತಿಯಡಹಿದರೆ, ಅದ ಸೈರಿಸಬಾರದು ನೋಡಾ. ನಮ್ಮ ಗುಹೇಶ್ವರ ಲಿಂಗಕ್ಕೆ ಆದಿಯಿಂದತ್ತ ನೀನೆ ಭಕ್ತನಾದ ಕಾರಣ ಮನ ನೊಂದಿತ್ತು ಕಾಣಾ ಸಂಗನಬಸವಣ್ಣಾ. ॥೭೧॥

ಹೀಗೆಂದು ಪ್ರಭುದೇವರು ಮುಳಿಸ ತೋರಿ ಹೇಳುತ್ತಿರಲು, ಅದಕ್ಕೆ ಬಸವರಾಜದೇವರು ಅನುತಾಪದಿಂದೆ ಬಿನ್ನಪಂ ಮಾಡಿದ ಪ್ರಸ್ತಾವದ ವಚನ. ॥

ಎನ್ನ ನುಡಿ ಎನಗೆ ನಂಜಾಯಿತ್ತು. ಎನ್ನ ಅಲಗೆ ಎನ್ನ ಕೊಂದಿತ್ತು. ಆನು ಪಾಪಿಯಯ್ಯ. ಆನು ಕೋಪಿಯಯ್ಯ. ತರಳತನದಲ್ಲಿ ಕೆಟ್ಟಿನಯ್ಯ! ಭಕ್ತಿ ಯುಕ್ತಿಯ ಹೊಲಬನರಿಯದೆ, ಆನು ಮರುಳಾದೆನಯ್ಯ! ಆಗುಮಾಡಿ

ದರೆ ಆಳೆ ಕೆಡುವುದು. ನೀವು ಮುನಿದರೆ ನಾನೆ ಕೆಡುವೆನಯ್ಯ ಕೂಡಲಸಂಗ ಮದೇವಾ. ॥೭೨॥

ಮತ್ತಂ, ಒಲೆ ಹೊತ್ತಿ ಉರಿದರೆ ನಿಲಬಹುದಲ್ಲದೆ ನೆಲ ಹೊತ್ತಿ ಉರಿದರೆ ನಿಲಬಹುದೆ? ಏನಿ ನೀರುಂಬರೆ, ಬೇಲಿ ಕೈಯ್ಯ ಮೆಯ್ದರೆ, ನಾರಿ ತನ್ನ ಮನೆಯಲ್ಲಿ ಕಳವರೆ, ತಾಯ ಮೊಲೆವಾಲು ನಂಜಾಗಿ ಕೊಲುವರೆ ಇನ್ನಾರಿಗೆ ದೂರುವೆನಯ್ಯ? ಕೂಡಲಸಂಗಮದೇವ ನೀವು ಮುನಿದರೆ ನಾನು ಕೈಸಬಲ್ಲೆನೆ ಹೇಳಾ ಪ್ರಭುವೆ? ॥೭೩॥

ಮತ್ತಂ, ಎನ್ನ ಗುಣಾವಗುಣವ ಸಂಪಾದಿಸದಿರಯ್ಯ. ನಿಮಗಾನು ಸರಿಯೆ? ಅಪ್ರತಿಮ ಮಹಿಮ ನಿಮಗಾನು ಸರಿಯೆ? ಅಪ್ರತಿಮ ಕೂಡಲ ಸಂಗಮದೇವ ನೀವು ಮಾಡಲಾನಾವೆನು. ಎನ್ನೊಡನೆ ಮುನಿವರೆ ಎಲೆ ತಂದೆ ಹೇಳಾ? ॥೭೪॥

ಮತ್ತಂ, ಕಣ್ಣ ಕೋಪಕ್ಕೆ ಮುಂಪುವರಿಯದೆ ನುಡಿದೆನು. ಮನ ನಿಮ್ಮತ್ತ ಮುಂದಾಗಿ ಕಂಡೆನಯ್ಯ! ಸಖಿಯರಿಲ್ಲದೆ ಸುಖವ ಬಯಸಿವರುಂಟೆ? ಎನ್ನ ಮುನಿಸು ಎನ್ನಲ್ಲಿಯೆ ಅಡಗಿತ್ತು. ಇನ್ನು ಬಾರಾ ಎಲೆ ಪ್ರಭುವೇ ಕೂಡಲಸಂಗಮದೇವಾ. ॥೭೫॥

ಹೀಗೆಂದು ಬಸವರಾಜದೇವರು ಬಿನ್ನೈಸಲು, ಅದಕ್ಕೆ ಪ್ರಭುದೇವರು ಬಸವರಾಜದೇವರ ಮಹತ್ವವನೆತ್ತಿ ತೋರಿಸಿ ಆಕ್ಷೇಪಂ ಬಿಡುತ್ತಿದಪ್ರಸ್ತಾವದ ವಚನ. ॥

ಆರಾಧಿಸಿ ವಿರೋಧಿಸುವರೆ, ಪೂಜಿಸಿ ಪೂಜೆಯ ಮರೆವರೆ, ಜಂಗಮಲಿಂಗವೆಂದರಿದವರು ಸಂಜೆಲವಪ್ಪರೆ ಗಾಳಿಯು ಗಂಧವು ಕೂಡಿದಂತೆ, ಜಗಮೊಳಗೆ ಇದೆ ಕೀರ್ತಿವಾರ್ತೆಯ ಹಡಪಿಯಲ್ಲ ಬಸವಣ್ಣ. ನಿನ್ನ ಶಿಸುವಿನೊಡತನ ತಿರಹು ಮರಹ ವಸುಧೆಯೊಳಗಣ ಪ್ರಮಥರು ಮೆಚ್ಚುವರೆ, ತಿಳಿದು ನೋಡುವರೆ? ಗುಹೇಶ್ವರನ ಶರಣ ಅಲ್ಲಯ್ಯಂಗೆ ನೀನು ಪರಮಾರಾಧ್ಯರು ಕಾಣಾ ಸಂಗನಬಸವಣ್ಣಾ. ॥೭೬॥

ಎನಗೆ ನೀನು ಪರಮಾರಾಧ್ಯರಾಗಿ ಇಹುದ ಮರದಿಯಲ್ಲ ಎಂದು ಪ್ರಭುದೇವರು ನಿರೂಪಿಸಲು, ಅದಕ್ಕೆ ಬಸವರಾಜದೇವರು ಬಿನ್ನೈಸಿದ ಪ್ರಸ್ತಾವದ ವಚನ. ॥

ಎನ್ನ ಗತಿ ಮತಿ ನೀನೆ ಕಂಡಯ್ಯ! ಎನ್ನ ಗುರು ಪರಮ ಗುರು ನೀನೆ ಕಂಡಯ್ಯ! ಎನ್ನ ಅಂತರಂಗದ ಜ್ಯೋತಿ ನೀನೆ ಕಂಡಯ್ಯ. ಕೂಡಲಸಂಗಮದೇವ ನೀನೆ ಎನಗೆ ಗುರು, ನಾನೆ ನಿಮ್ಮ ಶಿಷ್ಯನೆಂಬುವ ನಿಶ್ಚಯವ ಸಿದ್ಧರಾಮಯ್ಯದೇವರು ಬಲ್ಲರು ಕೃಪೆ ಮಾಡಾ ಪ್ರಭುವೆ. ॥೭೭॥

ಎನ್ನ ಗುರು ಪರಮಗುರು ನೀನೆ ಎಂಬುದನು ನಾ ನಿಮಗೆ ಭಕ್ತನೆಂಬುದನು ಸಿದ್ಧರಾಮಯ್ಯ ದೇವರು ಬಲ್ಲರೆಂದು ಬಸವರಾಜದೇವರು ಬಿನ್ನಹಂ ಮಾಡಿ, ಮಠಕ್ಕೆ ಬಿಜಯಂಗೈಪುದೆಂದು ಬಿನ್ನೈಸುತ್ತಿರಲು, ಆ ಸಿದ್ಧರಾಮಯ್ಯ ದೇವರು ಪ್ರಭುದೇವರೊಡನೆ ಬಸವರಾಜದೇವರ ಕೊಂಡಾಡಿ ಆ ಬಸವರಾಜದೇವರ ಮಠಕ್ಕೆ ಬಿಜಯಂಗೈವುದೆಂದು ಬಿನ್ನೈಸುವ, ಪ್ರಸ್ತಾವದ ವಚನ. ॥

ಕೇಳು ಕೇಳು ಎಲೆ ಅಯ್ಯ. ಜಡ ಅನಾದಿ ಇಲ್ಲವೆಂದು, ಬಸವಣ್ಣನೆ ಭಕ್ತ, ನಾವು ಬಿಂದು ಕಳೆಗಳಿಲ್ಲವೆಂದು ನೀನೆ ಜಂಗಮ, ಶಿವಶಕ್ತಿ ಸಮುದಯವಾಗದ ಮುನ್ನ ಬಸವಣ್ಣನೆ ಭಕ್ತ, ಸುರಾಳ ನಿರಾಳವೆಂಬ ಶಬ್ದ ಹುಟ್ಟದ ಮುನ್ನ ನೀನೆ ಜಂಗಮ. ಈ ಉಭಯಭಾವದಲ್ಲಿ ಭೇದವುಂಟೆ? ಕಪಿಲ ಸಿದ್ಧಮಲ್ಲಿನಾಥಯ್ಯ, ಬಸವಣ್ಣನಾರೆಂಬುದ ನಿಮ್ಮಲ್ಲಿ ನೀವೆ ತಿಳಿದು ನೋಡಿ ಕೃಪೆ ಮಾಡಾ ಪ್ರಭುವೆ. ॥೭೮॥

ಇಂತು ಸಿದ್ಧರಾಮಯ್ಯ ದೇವರು ಬಸವರಾಜ ದೇವರ ಘನವ ತೋರಿ ಪ್ರಭುದೇವರಿಗೆ ಬಿನ್ನಹಂ ಮಾಡಲು, ಆ ಪ್ರಸ್ತಾವದೊಳು ಚಿಕ್ಕಬಣ್ಣಯ್ಯ ಕರು ಪ್ರಭುದೇವರಿಗೆ ನಮಸ್ಕಾರಮಂ ಮಾಡಿ ಬಿನ್ನೈಸುವ ಪ್ರಸ್ತಾವದ ವಚನ. ॥

ಶರಣು ಶರಣಾರ್ಥಿ ಮಹದೇವಾ. ಶರಣು ಶರಣಾರ್ಥಿ ಪರಬ್ರಹ್ಮ ಸ್ವರೂಪ. ಶರಣು ಶರಣಾರ್ಥಿ ನಿರಾಕಾರತತ್ಪರೆ. ನೀವೆ ಗತಿಮತಿ. ನಿಮ್ಮ ಚರಣಕ್ಕೆ ಶರಣಯ್ಯ. ಸತಿಪತಿಯ ಒಲುಮೆಯು ಮುನಿಸು ಅತಿ ಚೋದ್ಯ ಎಂಬುದು ತಪ್ಪದು ನೋಡಾ! ನಿಮ್ಮ ಶರಣ ಬಸವಣ್ಣನೊಡತನ ಮುನಿಸು ಎನ್ನ ಮನಕ್ಕೆ ಸಂಶಯ ತೋರದು ನೋಡಾ! ಸಂತೆಯ ನೆರೆ ಹಿಯಲ್ಲಿ ಅಭಿಮಾನವ ಮಾತ ಮಾರ ಬಹುದೆ? ಬೀದಿಯಲ್ಲಿ ನಿಂದು

ನುಡಿಯನುಭಾವದ ರಚ್ಚೆಯ ನಗೆಗೇಡ ನೋಡಯ್ಯ! ಸಂಗನಬಸವಣ್ಣನ ಸೊಳಗೆ ನಿನ್ನೊಳಗೆ ಭೇದವಿಲ್ಲವೆಂಬುದ ನೀವೆ ಅರಿದರಿದು ಮತ್ತೆ ಬಾ ನೆಂಬುದುಚಿತವೆ? ಕೂಡಲ ಸಂಗನ ಶರಣ ಬಸವಣ್ಣನೆ ನಿಮ್ಮ ಪ್ರಾಣ ವಾಗಿರುತ್ತಿರಲು, ಇನ್ನಾರೊಡನೆ ಮುನಿವಿರಿ ಕೃಪೆ ಮಾಡಾ ಪ್ರಭುವೆ? ॥೭॥

ಮತ್ತಂ॥ ಭಕ್ತರ ಹೆಚ್ಚು ಕುಂದೆಂಬುದನರಿಯಾ ಪ್ರಭುವೆ. ನಿನ್ನ ಪ್ರಾಣವೆ ಬಸವಣ್ಣನ ಪ್ರಾಣ. ಬಸವಣ್ಣನ ಪ್ರಾಣವೆ ನಿನ್ನಪ್ರಾಣ. ನಿನ್ನ ಕಾಯವೆ ಬಸವಣ್ಣನ ಕಾಯ. ಬಸವಣ್ಣನ ಕಾಯವೆ ನಿನ್ನ ಕಾಯ. ನೀವಿಲ್ಲದಿರೆ ಬಸವಣ್ಣನಿಲ್ಲ. ಬಸವಣ್ಣನಿಲ್ಲದಿರೆ ನೀವಿಲ್ಲ. ಇಂತೊಂದಾ ನೊಂದ ವಿಚ್ಛಿ ಬೇರು ಮಾಡಬಾರದೆಂಬುದನರಿದು, ಮತ್ತೆ ಬರಿದೆ ಮುನಿ ವರೆ? ಬಲ್ಲವರು ನಡೆವ ವಾರುವ ಮುಗ್ಗಿದೊಡೆ ನಡಿಸಿ ಕೊಂಬುದ ಲ್ಲದೆ, ನುಡಿಯ ಹರಿಯ ಹೊಯ್ವವರುಂಟೆ? ಲೋಕದೊಳಗೆ ಮರಹಿಂದ ಗುಣವ ಸಂಪಾದಿಸದೆ ಬಿಜಯಂಗೈವುದೈಯ್ಯ ನಿಮ್ಮ ಗೃಹಕ್ಕೆ ಕೂಡಲ ಸಂಗಮದೇವ ನಿಮ್ಮ ಶರಣ ಬಸವಣ್ಣನಾರೆಂಬುವ ನೀನೊಮ್ಮೆ ತಿಳಿದು ನೋಡಾ ಪ್ರಭುವೆ. ॥೮॥

ಇಂತು ಚಿಕ್ಕಬಸವಣ್ಣಾಯಕರು ಬಿನ್ನಪಂ ಗೈದಲ್ಲಿ ಮಡಿವಾಳ ತಂದೆ ಗಳು ಪ್ರಭುದೇವರಿಗೆ ಬಿನ್ನೈಸಿದ ಪ್ರಸ್ತಾವನ ವಚನ. ॥

ಶರಣು ಶರಣಾರ್ಥಿ ಎನ್ನ ಬಿನ್ನಪವನವಧರಿಸಯ್ಯ. ಬಸವಣ್ಣನ ಗುರು ರೂಪಾಗಿ ಮರ್ತ್ಯಕ್ಕೆ ಬಂದನು. ಚನ್ನಬಸವಣ್ಣನೆ ಲಿಂಗರೂಪಾಗಿ ಮರ್ತ್ಯಕ್ಕೆ ಬಂದರು. ಪ್ರಭುವೇ ನೀವು ಜಂಗಮ ರೂಪಾಗಿ ಮರ್ತ್ಯಕ್ಕೆ ಬಂದಿರಿ. ಭಕ್ತಿಯ ಬೆಳವಿಗೆಗೆ ಬಸವಣ್ಣನೆ ಕಾರಣಿಕನಾದ. ಅರಿವಿನ ಬೆಳೆ ವಿಗೆಗೆ ಚನ್ನಬಸವಣ್ಣನೇ ಕಾರಣಿಕನಾದ. ಈ ಇಬ್ಬರನು ಒಳಕೊಂಬ ಮಹಾಘನಕ್ಕೆ ನೀವು ಕಾರಣಿಕರಾದಿರಿ. ಇಂತು ಗುರುಲಿಂಗ ಜಂಗಮ ಒಂದೆಯಲ್ಲದೆ ಭಿನ್ನಭಾವವುಂಟೆ? ಬಸವಣ್ಣ ಚನ್ನಬಸವಣ್ಣನ ಬಿನ್ನಪವ ಪೊರೆದೆ ಬಿಜಯಂಗೈವುದಯ್ಯ ಕಲಿದೇವರ ದೇವಾ. ॥೮೧॥

ಇಂತು ಚಿಕ್ಕಬಸವಣ್ಣಾಯಕರು ಮಡಿವಾಳ ತಂದೆಗಳು ಬಿನ್ನಪಂ ಮಾಡಲು, ಪ್ರಭುದೇವರು ಪ್ರಸನ್ನರಾಗಿ, ನಿತ್ಯ ಬಸವಣ್ಣ, ಸಿರಂಜನ ಬಸ ವಣ್ಣ, ಸಚ್ಚಿದಾನಂದ ನಿತ್ಯ ಪರಿಪೂರ್ಣ ಬಸವಣ್ಣ, ಅಖಂಡಪಿಂಡ ಬಸ ವಣ್ಣ, ಶಿವಾಚಾರ ಚಕ್ರವರ್ತಿ ಬಸವಣ್ಣ, ಸರ್ವಾಚಾರ ಸಂಪನ್ನ ಬಸ

ವಣ್ಣ, ಪಡುಸ್ಥಲ ಬ್ರಹ್ಮರೂಪು ಬಸವಣ್ಣ, ಸರ್ವಾಂಗ ಲಿಂಗಮೂರ್ತಿ ಬಸವಣ್ಣ, ಸ್ಥಾನುಭಾವ ನಾರೋದ್ಧಾರ ಬಸವಣ್ಣ, ಜಂಗಮ ಪ್ರಾಣಲಿಂಗೈಕ್ಯ ಬಸವಣ್ಣ, ಆರೂಢ ದಾಸೋಹಿ ಬಸವಣ್ಣ, ನಿಃಸಂಗ ನಿಜರೂಪು ಬಸ ವಣ್ಣ, ಶಿವಸಮಯ ಪ್ರತಿಷ್ಠಾಚಾರ್ಯ ಬಸವಣ್ಣನೆಂದು ಬಸವರಾಜ ದೇವರ ಮಹಾತ್ಮೆಯನು ನಾನಾ ವಿಧವಿಂ ಸ್ತೋತ್ರಮಂ ಮಾಡಿ ಆ ಪ್ರಭುದೇವರು ತಾವು ನಮಸ್ಕಾರಮಂ ಮಾಡುವ ಪ್ರಸ್ತಾವನ ವಚನ॥

ಆಯತದಲ್ಲಿ ಪೂರ್ವಾಚಾರಿಯ ಕಂಡೆ, ಸ್ವಾಯತವಲ್ಲಿ ಪೂರ್ವಾ ಚಾರಿಯ ಕಂಡೆ, ಸನ್ನಿಹಿತದಲ್ಲಿ ಪೂರ್ವಾಚಾರಿಯ ಕಂಡೆ. ಗುಹೇಶ್ವರ ಲಿಂಗದಲ್ಲಿ ಪರಮ ಪೂರ್ವಾಚಾರಿ ಸಂಗನಬಸವಣ್ಣನ ಶ್ರೀ ಪಾದಕ್ಕೆ ನಮೋ ನಮೋ ಎಂದೆನಯ್ಯ. ॥೮॥

ಮತ್ತಂ। ಗುರುಸ್ಥಲ, ಲಿಂಗಸ್ಥಲ, ಜಂಗಮಸ್ಥಲ, ಪ್ರಸಾದಸ್ಥಲ, ಪಡಗಿ ಕರಸ್ಥಲವಿನ್ನಾರಿಗೆ ಸಾಧಿತ್ತು? ನಿರ್ವಂಚಕತ್ವದ ನಿತ್ಯ ನಿಜಸ್ಥಲ ವಾದ ಭಕ್ತಿಸ್ಥಲವಿನ್ನಾರಿಗೆ ಸಾಧಿತ್ತು ಬಸವಣ್ಣಂಗಲ್ಲದೆ? ಗುಹೇಶ್ವರ ನಿಮ್ಮ ಶರಣ ಸಂಗನಬಸವಣ್ಣನ ಸೊಲ್ಲೆಹೊಕ್ಕು ನಾನು ಬದುಕಿದೆನು. ॥೮॥

ಮತ್ತಂ॥ ಕುಲದೊಳಗೆ ಹುಟ್ಟಿ ಕುಲವ ಬೆರಸದೆ ತನ್ನ ನಿಲವ ಬಲ್ಲಿದಿಪ್ಪವರಾರು ಹೇಳಾ? ಹಬ್ಬದ ಮೂರು ಜೆಟ್ಟಕ್ಕೆ ತನ್ನ ಮನವ ಹಬ್ಬಲೀಯ್ಯದೆ ಲಿಂಗ ಜಂಗಮಕ್ಕೆ ಸವಿಸಿ ಸ್ವಯಲಿಂಗವಪ್ಪವರಿನ್ನಾರು ಹೇಳಾ? ಸ್ವಯೋಲಿಂಗ ಸ್ವಯೋಶರಣ ಸ್ವಯೋಭೋಗವೆಂದುದಾಗಿ ಗುಹೇಶ್ವರ ನಿಮ್ಮ ಶರಣ ಸಂಗನಬಸವಣ್ಣಂಗೆ ನಮೋ ನಮೋ ಎಂಬೆನು. ॥೮॥

ಮತ್ತಂ, ತನುವ ಗೆಲಲರಿಯದೆ, ಮನವ ಗೆಲಲರಿಯದೆ ಧನವ ಗೆಲಲರಿಯದೆ ಭ್ರಮೆಗೊಂಡಿತ್ತು ಲೋಕವೆಲ್ಲವು. ತನು ದಾಸೋಹಕ್ಕೆ ನವಿಸಿ ಮನವ ಲಿಂಗಧ್ಯಾನದಲ್ಲಿ ನವಿಸಿ ಧನವ ಜಂಗಮದಲ್ಲಿ ನವಿಸಿ ಗೆಲಬಲ್ಲರೆ ಸಂಗನಬಸವಣ್ಣನಲ್ಲದೆ ಮತ್ತಾರನು ಕಾಣೆ ಗುಹೇಶ್ವರ ನಿಮ್ಮ ಶರಣ ಸಂಗನ ಬಸವಣ್ಣಂಗೆ ನಮೋ ನಮೋ ಎನುತಿರ್ದೆನು. ॥೮॥

ಮತ್ತಂ, ಬಯಲಮೂರ್ತಿಗೆ ಅಳವಿಸಿದನೊಬ್ಬ ಶರಣ ಆ ಮೂರ್ತಿ ಯಲ್ಲಿ ಭಕ್ತಿ ಸ್ಥಾಯತವ ಮಾಡಿದನೊಬ್ಬ ಶರಣ. ಆ ಭಕ್ತಿಯನೆ ಸುಜ್ಞಾನವನು ಲಿಂಗ ಮುಖ ಸಮುಖವ ಮಾಡಿದನೊಬ್ಬ ಶರಣ. ಆ ಸುಜ್ಞಾನವನು ಲಿಂಗ ಮುಖ

ವಾಗಿ ಧರಿಸಿದನೊಬ್ಬ ಶರಣ. ಆ ಲಿಂಗವನು ಸರ್ವಾಂಗದಲ್ಲಿ ವೇಧಿ
ಕೊಂಡನೊಬ್ಬ ಶರಣ. ಆ ಸರ್ವಾಂಗವನೆ ನಿರ್ವಾಣ ಸಮಾಧಿಯ
ನಿಲಿಸಿದನೊಬ್ಬ ಶರಣ. ನಾನು ನಿರ್ವಾಣದಲ್ಲಿ ನಿಂದು ಅಗವ್ಯನಾಜಿನಿ
ದರೆ ಭಕ್ತಿ ಕಂಪಿತನೆನಿಸಿ ಎನ್ನ ತನ್ನಲ್ಲಿಗೆ ಬರಿಸಿಕೊಂಡನೊಬ್ಬ ಶರಣ.
ಗುಹೇಶ್ವರ ನಿಮ್ಮ ಶರಣ ಸಂಗನಬಸವಣ್ಣನ ಶ್ರೀಪಾದವ ಕಂಡು, ಶ
ಣೆಂದು ಬದುಕಿದೆನು. ॥೬೬॥

ಇಂತು ಪ್ರಭುದೇವರು ಪ್ರಸನ್ನರಾಗಿ ಬಸವರಾಜದೇವರ ಸ್ತೋತ್ರವಂ
ಮಾಡುತ್ತಿರಲು, ಆ ಬಸವರಾಜದೇವರು ಪ್ರಭುದೇವರ ಸ್ತೋತ್ರವಂ
ಮಾಡುವ ಪ್ರಸ್ತಾವವ ವಚನ. ॥

ಕಾಲಿಲ್ಲದೆ ನಡೆವನು, ಕೈಯ್ಯಿಲ್ಲದೆ ಪಿಡಿವನು, ಕಣ್ಣಿಲ್ಲದೆ, ನೋಡು
ವನು, ಸಹಜವಾಗಿ ಬೈಯಿಲ್ಲವ ಬಣ್ಣ ಮುಖನಿಲ್ಲವ ಕೂಟ ಅಲ್ಲಿ ಸೈರೆರಗಾಗಿ
ಸಿಲೆಯ ಮೇಲಿಹ ಒಡಲು ತನ್ನಶಾನಿಯದೆ ಜಿಡಪೆ ಎನ್ನ ಬೆಂಬತ್ತಿ
ಬಂದ ಪರಿಯನೋಡಾ. ಜಡವಿಡಿದ ಎನ್ನ ಕಾಯದ ಕಳವಳವ ತಿಳಿ
ಹಲೆಂದು, ಅಡಿ ಅಡಿಗೆ ಅನುಭಾವ ತೋರುತ್ತಿದ್ದಾನೆ. ಕುಳ್ಳಿಡೆಯಲ್ಲಿ,
ಕುಂಟನಿಪ್ಪಿಡೆಯಲ್ಲಿ, ಹೆಳವ ಎಲ್ಲಿ, ನೋಡಿದಡಲ್ಲಿ ಪರಿಪೂರ್ಣನು. ಮೆಲ್ಲ
ಮೆಲ್ಲನೆ ಒಳಗ ನೊರೆದು ತೋರುತ್ತಿದ್ದಾನೆ. ಬಲ್ಲವರೆಲ್ಲ ಬದುಕಿ ಎಂದು
ಳ್ಳಿಯ ಮೇಲೊಂದು ಬೆಳಗೊಡೆಯ ಹಿಡಿದು, ಬಲ್ಲಿದ ನಾನೆಯ
ತಡೆದು ನಿಲ್ಲಿಸಬಲ್ಲನು ಕೂಡಲಸಂಗಮ ದೇವರ ಮಹಮನೆಯಲ್ಲಿ ಪ್ರಭು
ದೇವರ ಪರಿಹೊಕ್ಕು ಬದುಕಿದೆ ನಾನು. ॥೬೭॥

ಮತ್ತಂ. ಆದಿಯನರುಹಿದ. ಅನಾದಿಯ ತೋರಿದ. ಇಹವ ಕೆಡಿಸಿದ.
ಪರವ ನಿಲಿಸಿದ. ಘನವ ತೋರಿದ. ಮನವು ಸರಸವಿಟ್ಟು ಅನುಭವ ತೋರಿದ.
ಆಯತವ ಮಾಡಿ, ತನುವ ಮರಸಿ, ಮಹಾ ತನುವ ನರುಹಿದ. ಹಿಂದಣ
ಪೂರ್ವಾಶ್ರಯವ ಹಿಂದುಮಾಡಿ ತೋರಿ, ಮುಂದಣ ಗತಿಯ ಸಂದೇಹವ
ಬಿಡಿಸಿದ. ಕೂಡಲಸಂಗಮದೇವರಲ್ಲಿ ಪ್ರಭುದೇವರ ಶ್ರೀಪಾದಕ್ಕೆ ನಮೋ
ನಮೋ ಎನುತಿರ್ದೆನು. ॥೬೮॥

ಮತ್ತಂ, ಸ್ತೋತ್ರದ ಪದಂಗಳು. ॥

ರಾಗ ಗುಜ್ಜರಿ ॥ ಗುರುಚರಣವೆ ಗತಿ, ಗುರುಚರಣವೆ ಮತಿ, ಗುರು
ರಬ್ಬ ಪರುಷಪಾವನನೆನಿಸಿಗೆ, ನ ಗುರೋರಧಿಕಂ ನ ಗುರೋರಧಿಕಂ ನಗ
ರೋರಧಿಕವೆನುತಿರ್ದವು ಶ್ರುತಿ ॥ಪಲ್ಲ॥

ಅಜಾತನಲ್ಲ ಅಜಾತಜನಿತನಲ್ಲ ಖೇಚರನಲ್ಲ, ಭೂಚರನಲ್ಲ, ಆಚರಿ
ಸುವನಲ್ಲ ಅನ್ಯಸುಖಂಗಳ ಭ್ರಾಂತನಲ್ಲದ ನಿಭ್ರಾಂತ ಲಿಂಗೈಕ್ಯನು. ॥೧॥

ಯತ್ರ ಯತ್ರ ಶಿವತತ್ವ ಸಾಧಕನಲ್ಲ, ಅಷ್ಟತನು ಮೂರುತಿಯಲ್ಲ,
ಅಷ್ಟಮದಂಗಳ ಮೆಟ್ಟಿಯೆ ನಿಲಿಸಿದ ಅಷ್ಟದಳ ಕಮಲಪೂಜಿತನು ನೀನೆ ॥೨॥

ಅಕಾರ ನಿರಾಕಾರ ಸನುಮತ ತಾನಾಗಿ ಮಾಕರಿಸುವನಲ್ಲ ಮನ
ದಿಚ್ಛೆಗೆ ಅಕಾರ ನಿರಾಕಾರ ಸಾಕಾರ ಸನುಮತನು ಏಕಾಂತದೊಳಗಿಪ್ಪ
ವಿಜ್ಞಾನರೂಪಂಗೆ. ॥೩॥

ಜೀವ ಜೀವಾದಿಗಳೊಳಗಣ ಅನ್ಯಭಿನ್ನ ಭಾವಕನಲ್ಲ, ಸಮಸ್ತವಾದ
ಜೀವಿಗಳ್ಗಸುಖಭೋಗ, ಅಣುರೇಣುಸ್ಥೂಲಸೂಕ್ಷ್ಮಕಾರಣಿಕನುಭಾವ ಭರಿತ
ನೀನೆ. ॥೪॥

ಭೃಂಗವು ಕುಸುಮ ಪರಿಮಳಕೆರಗುವಂತೆ, ಲಿಂಗ ಸಂಗಸುಖ
ನಿರ್ದೇಪ ಅಂಗಲಿಂಗ ಸಂಗವಾಗಿಪ್ಪ ಶಿವಯೋಗಿಸಂಗ ಕೂಡಲಸಂಗನಲ್ಲಿ
ಪ್ರಭುದೇವಾ. ॥೫॥

ಅಂತು ಪದಸಹ ವಚನ. ॥೬೯॥

ಇಂತೀ ಶ್ರೀಮತ್ಸಕಲಗಣ ಪುರಾತನರೊಳ್ ಪ್ರಭುದೇವರು ಮಹಾ
ನುಭಾವ ಸಂಗೋಷ್ಠಿಯಂ ಮಾಡಿದ ಶೂನ್ಯಸಂಪಾದನೆಯೊಳ್ ಬಸವೇ
ಶ್ವರನು ಪ್ರಭುದೇವರ ಮುನಿಸ ತಿಳುಹಿದ ಸಂಪಾದನೆಗೆ ಪಂಚನೋಸ
ದೇಶ ಸಮಾಪ್ತ ಮಂಗಳಮಹಾ. ಶ್ರೀ

ಮರುಳ ಶಂಕರದೇವರ ಸಂಪಾದನೆ.

(ಷಷ್ಠೋಪದೇಶ.)

॥ಕಂದ॥ ವರಬಸವ ದಂಡನಾಥನ। ನಿರಹಂಭಾವಕ್ಕೆ ಮೆಚ್ಚಿ ಬ್ಯ
ತಿರ್ಪ್ಪ ಪ್ರಭು॥ ಮರುಳುಶಂಕರನಿಕ್ಯವ। ನಿರದಿತ್ತುದ ಪೇಳ್ವೆ ಶರಣ
ನೇಕತಿಶಯದಿಂ॥

ಅವೆಂತೆಂದೊಡಾ ಪ್ರಭುದೇವರು ಬಸವರಾಜದೇವರು ಮಾಡು
ಸ್ತೋತ್ರಕ್ಕಂ ಮೆಚ್ಚಿ ಮುಂದಕ್ಕೆ ಗನಿಸುತ್ತಿರಲು, ಅಲ್ಲಿ ಪ್ರಮಥ
ತಿಂಥಿಣಿಯಿಂ ಅನುಭವ ಸಮ್ಮೋಷ್ಮಿಯಿಂ ಉಘೆ ಚಾಂಗು ಳಲಾ ಎಂಬ
ರಬ್ಬುವ ಸಡಗರದಿಂ ಬಸವರಾಜದೇವರ ರಾಜಭವನಕ್ಕೆ ಅತ್ಯಂತ ಸಂಭ್ರ
ಮದಿಂ ಪೋಪ ಪ್ರಸ್ಥಾವದೊಳು ಮುಂದೆ ಅಂಗಳದಲ್ಲಿ ಪ್ರಸಾದದ ಕುಂಡ
ಸಮೀಪಸ್ಥವಾಗಲು, ಲಲ್ಲಿರ್ದ ಮರುಳು ಶಂಕರದೇವರು ಶರಣ ತಿಂಥಿಣಿಯಂ
ಪ್ರಭುದೇವರ ಶ್ರೀ ಮೂರ್ತಿಯಂ ಕಂಡು, ಮೆಲ್ಲನೆ ಆ ಪ್ರಸಾದದ ಕುಂಡದಿಂ
ಪೊರಮಡುತಿರ್ದರದೆಂತೆನೆ॥

ವಸಂತ ಮಾರುತ ಬರಲು, ಚೂತದಿಂದಂಕುರಂ ಪೊರಮಡುವಂತೆ,
ಸ್ವಾತಿಯ ವರ್ಷದ ದಿನಕ್ಕೆ ಅಂಬುಧಿಯೊಳಗಿರ್ದ ಮೌಕ್ತಿಕ ಶಂಖ ಅಂಬುಧಿ
ಯೊಳಗಿರ್ದು ಕಾಣಬಪ್ಪಂತೆ, ಸೂಜಿಕಲ್ಲ ಕಾಣುತ್ತ ಸೂಜಿ ಮೆಲ್ಲನೆ ತನ್ನ
ಸ್ಥಾನದಿಂದೇಳುವಂತೆ, ಶಿವಯೋಗಾಸಂದದಲ್ಲಿ ತನುವ ಮರೆದಿರ್ದ ಶಿವ
ಯೋಗಿ ತನಗೆ ಶಿವಪ್ರಸನ್ನವಾಗಲು, ಮುಂದೆ ಶ್ರೀ ಶಿವನ ಚರಣಕಮ
ಲವಂ ಕಂಗಳಿಂದೊತ್ತಿಕೊಂಬೆನೆಂಬ ತೆರನಂತೆ ಪೌರ್ಣಮಿಯಾ ಚಂದ್ರಮ
ನುದಯಕ್ಕೆ ಸಿಂಧು ಮೆಲ್ಲನೆ ಮುಂದಕುಬ್ಬಿ ನಡೆಮು ಬಪ್ಪಂತೆ, ಮರುಳು
ಶಂಕರ ದೇವರು ಪ್ರಸಾದಕುಂಡದಿಂ ಪೊರಮಡುತಿರ್ದ ಪ್ರಸ್ಥಾವದೊಳು,
ಅಲ್ಲಿ ಅಲ್ಲಮಪ್ರಭುದೇವರಿಗೆ ಅವರ ನಿಲವ ತೋರಿಪದೆಂತೆನೆ. ॥

ಜ್ಞಾನಚಕ್ಷುವಿಂಗೆ ಅತ್ಮನ ನಿಲವು ತೋರಿದಂತೆ, ಅಂಜನವುಳ್ಳ
ನಿಗೆ ಕಡವರದಿರವ ತೋರಿವಂತೆ, ಅಲ್ಲಮಪ್ರಭುದೇವರಿಗೆ ಮರುಳುಶಂಕರ
ದೇವರ ನಿಲವು ಕಡೆಹೋಗಿ ತೋರುತ್ತಿರಲು, ಅಲ್ಲಿ ಪ್ರಭುದೇವರು ನಿಂತು
ಬಸವರಾಜದೇವರು ಮಾಡುವ ಸ್ತೋತ್ರಂಗಳಂ ಸಾಕೆಂದು ನಿರೂಪಿಸಿದ
ಪ್ರಸ್ಥಾವದ ವಚನ॥

ಮನವನ ಒಂದಾಗಿ ಅರಿಯು ಸಮವಾದ ಬಳಿಕ ಕೊಂಡಾಡಲಿಕ್ಕೆ
ಇಂಬುಂಟೆ ಹೇಳಾ? ಶಬ್ದಕ್ಕೆ ತೆರಹಿಲ್ಲ. ಗುಹೇಶ್ವರ ಲಿಂಗದಲ್ಲಿ ಬೆರಸಿ ಬೇರಿಲ್ಲ
ಕಾಣಾ ಸಂಗನ ಬಸವಣ್ಣಾ ॥೧॥

ಮತ್ತಂ, ಪ್ರಭುದೇವರು ಸ್ತೋತ್ರಮುಂ ನಿಲಿಸಿ ಒಂದಾಶ್ಚರ್ಯಮುಂ ಕಂಡೆ
ನೆಂದು ನುಡಿದ ಪ್ರಸ್ಥಾವದ ವಚನ. ॥

ನೀರು ಕ್ಷೀರದಂತೆ ಕೂಡಿದ ಭೇದವನಾರಿಗು ಹೇಳಲಿಲ್ಲ ಕೇಳಲಿಲ್ಲ.
ಪೆಳುಗಾರ ಬೆರಸಿ ಬೆಚ್ಚ ಬಂಗಾರಕ್ಕೆ ಸಂದುಂಟೆ ಹೇಳಾ? ಉರಿಯುಂಡ
ಕರ್ಪೂರದ ಪರಿಯಂತಿರ್ದುದಿವಿರಿಂಗೆ ಕೊಂಡಾಡಿ ಹೇಳಲುಂಟೆ? ಅದಂತಿ
ರಲಿ. ನಮ್ಮ ಗುಹೇಶ್ವರ ಲಿಂಗದ ಕಣ್ಣ ಮುಂದೆ ನಿಮ್ಮ ಧರ್ಮದಿಂದೆ
ಒಂದಾಶ್ಚರ್ಯಮುಂ ಕಂಡು ಬದುಕಿದೆನು ಕಾಣಾ ಸಂಗನಬಸವಣ್ಣಾ. ॥೨॥

ಹೀಗೆಂದು ಪ್ರಭುದೇವರು ನಿರೂಪಿಸಲು, ಬಸವರಾಜದೇವರು ನೀವು
ಕಂಡಾಶ್ಚರ್ಯವಾವುದೆಂದು ಬೆಸಗೊಂಬ ಪ್ರಸ್ಥಾವದ ವಚನ. ॥

ದೇವದೇವ ಮಹಾ ಪ್ರಸಾದ ನೀವೆಂದಂತೆ ನಿಮ್ಮ ಚರಣದಲ್ಲಿ ಸಂದು
ಭೇದವಿಲ್ಲದೆ ಇಪ್ಪೆನಲ್ಲದೆ, ಜೇರೆ ಭಿನ್ನನಾಗಿರ್ದೆನಾದರೆ ನೀವೆ ಸಾಕ್ಷಿ. ನಿಮ್ಮ
ಶ್ರೀಪಾದವ ಕಂಡೆನ್ನ ಭವಂ ನಾಸ್ತಿಯಾಯಿತ್ತು. ಕೂಡಲ ಸಂಗಮದೇವ
ನಿಮ್ಮಿಂದೊಂದಾಶ್ಚರ್ಯವಿಲ್ಲೆಂಬ ಕೃತಿ ಹೊಗಳುತ್ತಿರಲಾಗಿ, ನೀವು ಕಂಡಾ
ಶ್ಚರ್ಯವಾವುದೆನಗೊಮ್ಮೆ ನಿರೂಪಿಸಾ ಪ್ರಭುವೆ. ॥೩॥

ಇಂತು ಬಸವರಾಜದೇವರು ಮರುಳು ಶಂಕರದೇವರು ಗೋಷ್ಯದೊ
ಳಿರ್ದು ಪೊರಮಡುವದಂ ಕಂಡು ಆಶ್ಚರ್ಯಂ ಬಟ್ಟು ಅನುಭಾವದ
ಬೆಡಗಿನಿಂ ನುಡಿವ ಪ್ರಸ್ಥಾವದ ವಚನ. ॥

ಓಹೋ ನಮಃಶಿವಾಯ ಮಹಾದಾಕಾಶದ ಮರೆಯಲ್ಲಿರ್ದ ಶಾಂತಾ
ರ್ಕನ ನಿಲವು ದಶಮರುತನ ಹೊಯಿಲಿಲ್ಲದೆ ಬೆಳಗುವ ಲಿಂಗವಜ್ಞನ
ಜ್ಯೋತಿಯ ನಿಲವೊ, ತನ್ನಿಂದ ತಾನಾಗಿ ಮುಕ್ತಿಯೇ ಕರಿಗೊಂಡುದೋ,
ಧನಕದ ಕಾಂತಿಯ ನಿಲವೋ, ರುದ್ರಾಕ್ಷಿಯ ಪಂಗುಜೇಡವೆಂದು ಹೊದ್ದ
ಚರ್ಮದ ಹೊದಕೆಯಂ ತೆಗೆದ ಗಿಟಿಗಿಟಿ ಜಂತ್ರದ ನಿಲವೊ, ಅಲ್ಲಿ ತನ್ನ
ನಿಲವನರಿಯದೆ ವಾದಿಸುತ್ತಿರಲು, ಊರಲಿಂಗೋಪ್ಪನವಾದ ಊರಲಿಂಗದ
ನಿಲವೋ, ಆವ ನಿಲವೆಂದರಿಯ ಬಾರದು ಗುಹೇಶ್ವರನ ಕಂಗಳಿಗೆ ಒಂದಾ
ಗಿಯೂ ತೋರಿತ್ತು ಕಾಣಾ ಸಂಗನಬಸವಣ್ಣಾ. ॥೪॥

ಈಗೆಂದು ಪ್ರಭುದೇವರು ನಿರೂಪಿಸಲು, ಇವಕ್ಕೆ ಬಸವರಾಜ
ದೇವರು ನಿಮ್ಮಿಂದೊಂದಾಶ್ಚರ್ಯವಾವುದೆಂದು ಪ್ರಭುದೇವರು ಕೊಂಡಾ
ಡುವ ಪ್ರಸ್ತಾವದ ವಚನ. ॥

ದೇವರ ದೇವ ಮಲಯಜವಿಂದಂ ಮೇಲೆ, ಮಲಯಜ ಉಂಟೆ?
ಪರುಷದಿಂದಂ ಮೇಲಿ ಪರುಷವಾವುದುಂಟು ಅಯ್ಯ? ಅಮೃತ ಹಾರದಿಂದ
ಮೇಲೆ ಭೋಜನ ಉಂಟೆ ಅಯ್ಯ? ನಿಮ್ಮಿಂದೊಂದಾಶ್ಚರ್ಯವ ಕಂಡೆ
ನೆಂಬುದ ಎನಗೆ ನಿರೂಪಿಸಾ ಕೂಡಲ ಸಂಗಮದೇವಾ ಪ್ರಭುವೆ ॥೫॥

ಇಂತು ಬಸವರಾಜದೇವರು ನಿಮ್ಮಿಂದೊಂದಾಶ್ಚರ್ಯವಾವುದೆಂದು
ವಿಸ್ತರಿಸಲು ಅದಕ್ಕೆ ಪ್ರಭುದೇವರು ನಿರೂಪಿಸಿದ ಪ್ರಸ್ತಾವದ ವಚನ. ॥

ಎಲೆ ಬಸವಣ್ಣ, ನಾವು ಬಾಹುದಕ್ಕೆ ಮುನ್ನವೆ ಬಂದಿಹರೆಂದು
ಮುಖ ಸೂಚನೆ ಕೋರಿತ್ತಂದೆ. ಮನವ ವಿಚಾರಿ ಮುಂದಿಹದೇನು ಎಂಬುದ
ತಿಳಿ ಗುಹೇಶ್ವರ ಲಿಂಗದಲ್ಲಿ ಸಂಗನಬಸವಣ್ಣ. ॥೬॥

ಮತ್ತಂ, ಮರುಳ ಶಂಕರದೇವರು ಘನ ಪ್ರಸಾದದ ಕುಳಿಯೊಳಗೆ
ಒಕ್ಕು ಮಿಕ್ಕ ಪ್ರಸಾದಮಂ ಸ್ವೀಕರಿಸಿ ಹನ್ನೆರಡು ವರುಷ ಪರಿಯಂತರ
ತಮ್ಮ ನಿಜಸ್ವರೂಪನುಂ ಮರಸಿಕೊಂಡಿರುತ್ತಿರಲು, ಆ ಭೇದವಾರಿಗೂ
ಕಾಣಬಾರದೆಂದು ಪ್ರಭುದೇವರು ನಿರೂಪಿಸಿದ ಪ್ರಸ್ತಾವದ ವಚನ. ॥

ಬೀದಿಯಲ್ಲಿ ಬಿದ್ದ ಮಾಣಿಕ್ಯವು ಹೂಳಿದ್ದ ನಿಧಾನವಾರಿಗು ಕಾಣ
ಬಾರದು ನೋಡಾ! ಮರಣವುಳ್ಳವರಿಗೆ ಮರುಜೀವಣೆ ಸಿಕ್ಕುವುದೆ?
ಪಾಪಿಯ ಕಣ್ಣಿಂಗೆ ಪರುಷ ಕಲ್ಲಾಗಿ ಇಪ್ಪಂತೆ ಇಪ್ಪರಯ್ಯ ಶಿವಶರ
ಣರು. ನಮ್ಮ ಗುಹೇಶ್ವರನ ಶರಣ ಮರುಳು ಶಂಕರದೇವರ ನಿಲವ
ನೋಡಾ ಸಂಗನಬಸವಣ್ಣಾ. ॥೭॥

ಮತ್ತಂ, ಅಂಗಳಪ ಬಾಗಿಲದ ನೆರೆಯಲ್ಲಿ ನಿಂದಿರ್ದ ಲಿಂಗವನ
ರಿಯದಿಲ್ಲವೆ? ಸುಸಂಗಿ ನಿರಂಗ ನಿಃಕಳಬ್ರಹ್ಮ ಮರುಳು ಶಂಕರಲಿಂಗ ಪ್ರಸಾ
ದದ ಕುಳಿಯಲ್ಲಿ ನಿಜನಿವಾಸದಂಗವ ನೋಡು ಗುಹೇಶ್ವರಲಿಂಗದಲ್ಲಿ
ಸಂಗನಬಸವಣ್ಣಾ. ॥೮॥

ಮತ್ತಂ, ಆದಿಯನಂಗ ಮುಖಕರ್ಪಿಸಿ, ಅನಾದಿಯ ಪ್ರಾಣ ಮುಖ
ಕರ್ಪಿಸಿ ಮರವೆಂಬುದ ಅರುಹಿನ ಮುಖಕರ್ಪಿಸಿ, ತಾನೆಂಬುದ ನಿರ

ಕಾರದಲ್ಲಿ ನಿಲಿಸಿ, ಪರಿಣಾಮ ಪ್ರಸಾದದಲ್ಲಿ ತನ್ಮತನಾಗಿ ಪ್ರಸಾದವೆ
ಪ್ರಾಣವಾಗಿ, ಪ್ರಸಾದವೆ ಕಾಯವಾಗಿ, ಪ್ರಸಾದವೆ ಜ್ಞಾನವಾಗಿ, ಪ್ರಸಾ
ದವೆ ಧ್ಯಾನವಾಗಿ, ಪ್ರಸಾದವೆ ಲಿಂಗಭೋಗೋಪಭೋಗಿಯಾಗಿಪ್ಪ ನಮ್ಮ
ಗುಹೇಶ್ವರಲಿಂಗದಲ್ಲಿ ನಿಜಪ್ರಸಾದಿ ಮರುಳು ಶಂಕರದೇವರ ನಿಲವ
ನೋಡಾ ಸಂಗನಬಸವಣ್ಣಾ. ॥೯॥

ಈಗೆಂದು ಪ್ರಭುದೇವರು ಬಸವರಾಜದೇವರಿಗೆ ನಿರೂಪಿಸುತ್ತಿರಲು,
ಆ ಸಮಯದಲ್ಲಿ ಮರುಳು ಶಂಕರದೇವರು ಪ್ರಸಾದ ಕುಂಡದಿಂದ ನಲಿ
ನಲಿದು ಬಂದು ಪ್ರಭುದೇವರಿಗೆ ನಮಸ್ಕಾರಮಂ ಮಾಡಿದ ಪ್ರಸ್ತಾವದ
ವಚನ ॥

ಜಯ ಜಯ ತ್ರಾಹಿ ತ್ರಾಹಿ ಗರ್ಭದೊಳಗಣ ಶಿಶುವು ನವ ಮಾಸವ
ಹಾಸಿಸಿ ಕೊಂಡಿರ್ದಂತೆ ಇಪ್ಪೆನಯ್ಯ! ಎನ್ನ ಜನ್ಮ ಸಫಲವಾಯಿತ್ತು. ಶುದ್ಧ ಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭುವೇ ಶಾಂತ ಮಲ್ಲಿಕಾರ್ಜುನ ದೇವಯ್ಯ
ಬಸವರಾಜದೇವರ ವಯದಿಂದ ಪ್ರಭುದೇವರ ಶ್ರೀಮೂರ್ತಿಯಂ ಕಂಡು
ಬದುಕಿಪೆನು. ನಿಮ್ಮ ಧರ್ಮ ನಿಮ್ಮ ಧರ್ಮ ಶರಣುಶರಣಾರ್ಥಿ ಸಕಲ
ಪ್ರಾಣಿಗಳಿಗೆ ॥೧೦॥

ಮತ್ತಂ, ಎನಗೆ ಹರಿಯಿತ್ತು ತನುವೆಂಬ ಸಂಸಾರದ ಬಂಧ. ಅಡಗಿ
ಉಡಿಗಿ ಕಂಡಿಹೆನೆಂಬ ಭ್ರಮೆಭಾವಕ್ಕೆ ಬಯಲಾಯಿತ್ತು. ನಿತ್ಯ ನಿರಂಜನ
ಪರಂಜ್ಯೋತಿ ಪ್ರಕಾಶವಾಯಿತ್ತು. ಶುದ್ಧ ಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭುವೆ
ಶಾಂತ ಮಲ್ಲಿಕಾರ್ಜುನ ದೇವಯ್ಯ, ಪ್ರಭುದೇವರ ಕಾರುಣ್ಯದಿಂದೆ ಬದುಕಿ
ದೆನು. ॥೧೧॥

ಇಂತು ಮರುಳ ಶಂಕರ ದೇವರು ಸ್ತುತಿಸುತ್ತಿರಲು ಅದಕ್ಕೆ ಪ್ರಭು
ದೇವರು ಮರುಳು ಶಂಕರದೇವರ ನಿಲವ ಬಸವರಾಜದೇವರಿಗೆ ನಿರೂ
ಪಿಸಿದ ಪ್ರಸ್ತಾವದ ವಚನ. ॥

ಕಂಡೆಯಾ ಬಸವಣ್ಣ ಕಣ್ಣಿನೊಳಗಣ ಜೊಂಪೆಯ ಸೂತ್ರದ ಇರ
ವಿನಂತೆ, ಗುಂಪಣದೊಳಡಗಿ ತೋರುವ ವೃಕ್ಷ ಛಾಯೆಯಂತೆ, ನವಸೀ
ತಮೊಳಗುಗಿದ ನಾರದ ಸವಿಯಂತೆ, ಅಂಗವಿಲ್ಲದ ಕುರುಹು ಭಾವವಿಲ್ಲದ
ಬಯಲು, ಬೆಳಗನರಿಯದ ಜ್ಯೋತಿಯ ಕಂಡೆಯಾ ಗುಹೇಶ್ವರ ಲಿಂಗ
ದಲ್ಲಿ ಮರುಳ ಶಂಕರದೇವ ಸಂಗನಬಸವಣ್ಣಾ. ॥೧೨॥

ಹೀಗೆಂದು ಪ್ರಭುದೇವರು ಬಸವರಾಜದೇವಂಗೆ ಕೊಂಡಾಡಿ ಹೇಳುತ್ತಿರಲು, ಆ ಮರುಳು ಶಂಕರದೇವರು ನಿರಹಂಭಾವವಂ ಬಿನ್ನೈಸಿದ ಪ್ರಸ್ಥಾನದ ವಚನ. ॥

ಸಿಂಬಿಗೆ ರಂಬೆತನ ಉಂಟಿ? ಸಂಭ್ರಮವಳಿದುದಕ್ಕೆ ನವರಸವಂಗಳಕ್ಕೆಯುಂಟಿ? ಡಿಂಗರಿಗಂಗೆ ಸಮವೆಂಬ ಸಂಭ್ರಮ ಉಂಟಿ? ಪರಮ ಪದ ವಿಸಯಿಂ ಪಾಷಾಣದ ಕುಲ ಹರಿವಂತೆ ಬಂದೆಯಲ್ಲ ಶುದ್ಧ ಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭುವೆ ಶಾಂತಮಲ್ಲಿಕಾರ್ಜುನ ದೇವಯ್ಯ ಪ್ರಭುದೇವರ ಕಾರುಣ್ಯದಿಂದೆ ಬದುಕಿದೆನು.. ॥೫॥

ಇಂತು ಮರುಳು ಶಂಕರದೇವರು ನಿರಹಂಭಾನದಿಂದೆ ಬಿನ್ನೈಸಲು ಅವಕ್ಕೆ ಪ್ರಭುದೇವರು ಮರುಳ ಶಂಕರದೇವರ ಸ್ತುತಿಸಿದ ಪ್ರಸ್ಥಾವದ ವಚನ. ॥

ಕಂಡೆನಲ್ಲ ಕರುಳಿಲ್ಲದ ಕಲಿಯಾ ಕಂಡೆನಲ್ಲ ಯನ್ನವನಿಲ್ಲದ ದೇಹವ. ಕಂಡೆನಲ್ಲ ಕೈದುವಿಲ್ಲದ ಕಲಿತನವ. ಕಂಡೆನಲ್ಲ ಕುಸುಮವಿಲ್ಲದ ಗಂಧವ. ಕಂಡೆನಲ್ಲ ಗುಹೇಶ್ವರನ ಲಿಂಗದಲ್ಲಿ ಮರುಳು ಶಂಕರದೇವರೆಂಬ ನಾಮವಾ. ॥೬॥

ಹೀಗೆಂದು ಪ್ರಭುದೇವರು ಸ್ತುತಿಸುತ್ತಿರಲು, ಅದಕ್ಕೆ ಮರುಳು ಶಂಕರದೇವರ ಬಿನ್ನಹ,

ಬೆಟ್ಟನ ನೆಮ್ಮಿ ಕಟ್ಟಿಗೆಯ ತಳ್ಳುವದು ಅದಾವಚ್ಚರಿ? ಪ್ರಾಣಕ್ಕೆ ಹೊಣೆಯಾದಲ್ಲಿ ಕಾದುವದು ಅದಾವಚ್ಚರಿ? ಪರಕಾಯವ ತೊಟ್ಟಲ್ಲಿ ಅದು ಅಚ್ಚರಿ. ಆದಿ ಬಿರಿದ ನಿಮ್ಮ ಕಾರುಣ್ಯವಾಗಿದ್ದಲ್ಲಿ ಎನಗೆಲ್ಲಿಯ ಸುಖ? ಶುದ್ಧಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭುವೆ ಶಾಂತ ಚನ್ನಮಲ್ಲಿಕಾರ್ಜುನ ದೇವಯ್ಯ ಪ್ರಭುದೇವರ ದಯದಿಂದೆ ಬದುಕಿದೆನು. ॥೭॥

ಇಂತು ಮರುಳು ಶಂಕರದೇವರು ಪ್ರಭುದೇವರ ಸ್ತುತಿಸುತ್ತಿರಲು, ಆ ಸಮಯದೊಳು ಎಲ್ಲ ಪುರಾತರು ಕಂಡು, ಅತ್ಯಂತ ಆಶ್ಚರ್ಯಮಂ ಒಡುತ್ತಿರಲು, ಅಲ್ಲಿ ಬಸವರಾಜದೇವರು ಮರುಳು ಶಂಕರದೇವರ ನಿಲವ ಕಂಡು, ಚಿಂತಾಕ್ರಾಂತರಾಗಿ ನಡನಡುಗಿ ಇನಿತು ದಿನವೆನ್ನ ಅಂಗಳದಲ್ಲಿ ಮಹಾಲಿಂಗೈಕ್ಯನಪ್ಪ ಶರಣನಿರುತ್ತಿರಲು, ಈತನ ನಿಲವನರಿಯದೆ ಕೆಟ್ಟೆನೆಂದು ಅನುತಾಪಂ ಬಟ್ಟ ಪ್ರಸ್ಥಾವದ ವಚನ ॥

ಅಯ್ಯ ನಿಮ್ಮ ಶರಣರು ಬಂದೆನ್ನ ಅಂಗಳದೊಳಗೆ ರಕ್ಷಿಸಿದೆನೆಂದಿರಲು. ನಾನು ತೆರಹು ಮರಹಾಗಿರ್ದ ಕೆಟ್ಟೆನಯ್ಯ! ನಾನು ಕೆಟ್ಟುದಕ್ಕೆ ಮಿಂಗೆ ಕಡೆ ಇಲ್ಲವಯ್ಯ. ಕೂಡಲ ಸಂಗಮದೇವಯ್ಯ, ಎನ್ನ ಭಕ್ತಿ ಸಾನಿರ ಸೋಂಪಿಯ ಸೋಂತು ಹಾವರದಲ್ಲಿ ಆಳಿದಂತಾಯಿತ್ತಯ್ಯ. ॥೧॥

ಮತ್ತಂ, ಕಾಯದ ಕಪಟನ ಬಿಡದೆನಗೆಂತಯ್ಯ. ಮಾಯಾ ಪ್ರಪಂಚಿನ ಬಲೆಯೊಳಗೆ ಸಿಲುಕಿದೆ. ಪಾಯದ ಸಂಭ್ರಮವ ಹಿಡಿದವಗೆ ಇದಾವ ಭಾವದ ಮುಖವೆಂದರಿಯದೆ ಜ್ಞಾನಶೂನ್ಯನಾಗಿರ್ದೆನಯ್ಯ. ಅಷ್ಟಮದಂಗಳನು ಪೃಪ್ತಿಸಿ ಇದ್ದಿರಾಗಿ, ಕಟ್ಟಿಗ್ರದಿಂದೆ ನಿಮ್ಮ ಕಾಣಲೀಯವು. ಎನ್ನ ತನುವಿನ ಅವಗುಣವ ಮನದ ಮರ್ಕಟತನವ ಬಿಡಮ. ನೀನೆ ಗತಿ. ಕೂಡಲಸಂಗಮದೇವ ನಿಮ್ಮ ಶರಣರ ಇರವನರಿಯದೆ, ಭವಮಾಲೆಯಾಪೆನಯ್ಯ ॥೨॥

ಮತ್ತಂ, ಬಸವರಾಜದೇವರು ಈ ಮರುಳು ಶಂಕರದೇವರ ಕೃಪೆ ಎನಗಿನ್ನೆಂತಪ್ಪುದೊ ಎಂದು ಪ್ರಭುದೇವರ ಬೆಸಗೊಂಬ ಪ್ರಸ್ಥಾವದ ವಚನ ॥

ನಡುತೊರೆಯೊಳಗೆ ಹರುಗೋಲನಿಕ್ಕಿದಂತಾಯಿತ್ತೆನ್ನ ಭಕ್ತಿ. ಮರಸೇರಿ ಕೈಯ್ಯ ಬಿಟ್ಟಿಂತಾಯಿತ್ತೆನ್ನ ಭಕ್ತಿ. ಶಿವಶಿವ ಕೆಟ್ಟೆನಲ್ಲ ಗುರುವ. ಕೂಡಲ ಸಂಗಮದೇವ ಈ ಮರುಳುಶಂಕರದೇವರ ಕೃಪೆ ಎನಗಿನ್ನೆಂತಪ್ಪುದು ಹೇಳಾ ಪ್ರಭುವೆ? ॥೩॥

ಹೀಗೆಂದು ಬಸವರಾಜದೇವರು ಬಿನ್ನೈಸಲು, ಅವಕ್ಕೆ ಪ್ರಭುದೇವರು ಕೊಟ್ಟ ಪ್ರತ್ಯುತ್ತರ ॥

ಹೂವಿಡಿಯ ಹರಿದು, ಒತ್ತಿ ಹೆಣ್ಣ ಮಾಡಿಹೆನೆಂದರೆ ಹಣ್ಣಾಗಬಲ್ಲುದೆ? ಪರಿಮಳವಿಲ್ಲದ ನನೆಯನರಸಿ ಮುಡಿದಿಹೆನೆಂದರೆ ಸೌರಭ ಉಂಟಿ? ಶಿವಶರಣರ ನಿಲವ ಕಾಣಬ ಕಾಲಕ್ಕೆ ಕಾಣಬಹುದಲ್ಲದೆ, ಎಲ್ಲಿ ಹೊತ್ತ ಕಾಣಬಹುದೆ? ಆಹ ಕಾಲಕ್ಕೆ ತಾನೆಯಪ್ಪುದು. ಗುಹೇಶ್ವರನ ಶರಣರ ನಿಲವ ಕಂಡ ಬಳಿಕ ಮರಹು ಬೆಳಗ ಕಂಡ ಕಣ್ಣಲೆಯಂತೆ ನೋಡ ನೋಡಾ ಹರುಷವು ನೋಡಾ ಸಂಗನಬಸವಣ್ಣಾ ॥೪॥

ಹೀಗೆಂದು ಪ್ರಭುದೇವರು ನಿರೂಪಿಸಲು, ಅವಕ್ಕೆ ಬಸವರಾಜದೇವರು ಮರುಳ ಶಂಕರದೇವರ ಶ್ರೀಪಾದಕ್ಕೆ ಶರಣೆಂಬ ಪ್ರಸ್ಥಾವದ ವಚನ ॥

ಮುಗಿಲ ಮರೆಯ ಮಿಂಚಿನಂತೆ, ಒಡಲ ಮರೆಯ ಅತ್ಮನಂತೆ,
ನೆಲದ ವರೆಯ ನಿಧಾನದಂತೆ ಇಪ್ಪ ನಿಮ್ಮ ನಿಲವನಾರು ಬಲ್ಲರು? ದೇವ
ನಿಮ್ಮ ನಿಲವ ಹಲಕಾಲವಿಂದ ಕಂಡು ಕಂಡು ಕಡೆಗಾಣಿಸಿ ಮರೆದು ಮ
ಗಟ್ಟು ಮರುಳಾದೆನು. ಎನ್ನ ತಪ್ಪಿಂಗೆ ಕಡೆ ಇಲ್ಲ ಕಾಣಾ ತ್ರಾಹಿ ತ್ರಾಹಿ
ಕಾಯಯ್ಯ ಕೂಡಲಸಂಗಮದೇವಾ ॥೨೦॥

ನಿಮ್ಮ ಶರಣರ ಇರವನರಿಯೆನೆಂದು ಬಸವರಾಜದೇವರು ನೊಂದು
ಪ್ರಭುದೇವರಿಗೆ ಬಿನ್ನೈಸುತ್ತಿರಲು, ಅಲ್ಲಿ ಮರುಳುಶಂಕರದೇವರು ಬಸವ
ರಾಜದೇವರ ಕೊಂಡಾಡಿದ ಪ್ರಸ್ತಾವದ ವಚನ ॥

ಏಕ ಬೀಜಸಮಾಪೃಕ್ತಂ ಏಕ ಲಿಂಗಂ ತು ಪೂಜನಂ ॥ ಏಕ ಧ್ಯಾನ
ಸಮಾಚಿತ್ತಂ ಊರ್ಧ್ವಲಿಂಗಂ ತು ಪೂಜನಂ। ಏಕಾಕ್ಷರಂ ತು ಪೂಜಾನಾಂ।
ಮಹಾಲಿಂಗಂತು ದರ್ಶನಂ। ಇಂತೆಂದುದಾಗಿ ಇದು ಕಾರಣ ನಿಮ್ಮ ಶರಣ
ಬಸವಣ್ಣನು ಲೋಕದ ಮರ್ತ್ಯನೆಂದರೆ ಅಘೋರ ನರಕ ಕಾಣಾ. ಶುದ್ಧ
ಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭುವೆ ಶಾಂತಮಲ್ಲಿಕಾರ್ಜುನದೇವಯ್ಯ ನಿಮ್ಮ
ಶರಣ ಬಸವಣ್ಣನ ನಿಲವಿನ ಪರಿಯ ನೀವೆ ಬಲ್ಲಿರಲ್ಲದೆ ನಾನೆತ್ತ ಬಲ್ಲೆನಯ್ಯ
ನಿಮ್ಮ ಧರ್ಮ ನಿಮ್ಮ ಧರ್ಮ. ॥೨೧॥

ಇಂತು ಮರುಳುಶಂಕರದೇವರು ಬಸವರಾಜದೇವರ ಕೊಂಡಾಡು
ತ್ತಿರಲು, ಆ ಬಸವರಾಜದೇವರು ಮರುಳುಶಂಕರದೇವರ ಘನವನು ಚನ್ನ
ಬಸವರಾಜದೇವರಿಗೆ ನುಡಿದು ತೋರುವ ಹಾಗೆ ಕೊಂಡಾಡುತ್ತಿರ್ದ ಪ್ರಸ್ತಾ
ವದ ವಚನ ॥

ಕಂಗಳೊಳಗೆ ಕರುಳಿಲ್ಲ. ಕಾಯದೊಳಗೆ ನಾಯವಿಲ್ಲ. ಮನದೊ
ಳಗೆ ಅಹಂಕಾರವಿಲ್ಲ ದೇಹವೆಂದರಿಯೆ. ನಿರ್ದೇಹನೆಂದರಿಯೆ ಜಂತ್ರದ
ಸೂತ್ರದಂತಿಪ್ಪ ನಿಚ್ಚಟಗಿನ ಮೂರ್ತಿಯ ನೋಡಾ. ಲಿಂಗಜಂಗಮದ ಒಕ್ಕು
ಮಿಕ್ಕ ಪ್ರಸಾದವ ಕೊಂಡು ಮಿಕ್ಕು ವಿಶ್ವಾಸದಂತ ಮಹಾಪ್ರಸಾದಿಯ ನೋಡಾ!
ತನ್ನ ಕಂಡಹರೆಂದು ಜಗದ ಕಣ್ಣಿಂಗೆ ಮಾಯದ ಮಂಜ ಕವಿಸಿ ನಿಜಸದ
ದಲ್ಲಿ ತದುಗತನಾದನು. ಕೂಡಲಸಂಗಮದೇವರಲ್ಲಿ ಮರುಳು ಶಂಕರ
ದೇವರ ನಿಲವ ನೋಡಾ ಸಂಗನಬಸವಣ್ಣಾ ॥೨೨॥

ಹೀಗೆಂದು ಬಸವರಾಜದೇವರು ನಿರೂಪಿಸಲು, ಆ ಚನ್ನಬಸವರಾಜ
ದೇವರು ಮರುಳುಶಂಕರದೇವರ ನಿಲವ ನಿಮ್ಮಿಂದ ಕಂಡೆನೆಂದು, ಬಸವರಾಜ
ದೇವರಿಗೆ ಬಿನ್ನೈಸಿದ ಪ್ರಸ್ತಾವದ ವಚನ ॥

ಅಂಗವನಾಚಾರಕರ್ಪಿಸಿ, ಆಚಾರವನಂಗಕರ್ಪಿಸಿ, ಆಚಾರ ಲಿಂಗ
ಪ್ರಸಾದಿಯಾದ. ಪ್ರಾಣಲಿಂಗವ ಅಂಗದಲ್ಲಿ ಅರ್ಪಿಸಿ ಆ ಲಿಂಗವ ಪ್ರಾಣಕ್ಕೆ
ಅರ್ಪಿಸಿ ಪ್ರಾಣಲಿಂಗ ಪ್ರಸಾದಿಯಾದ. ದೇಹಭಾವವ ಅಂಹಕಾರದಾಸೋಹ
ಭಾವದೊಳಗಲ್ಲದೆ ಅಳಯದೆಂದು ಲಿಂಗಜಂಗಮಕ್ಕೆ ತೊತ್ತು ಒಕ್ಕು ಲಿಂಗ
ಜಂಗಮ ಪ್ರಸಾದಿಯಾದ ಸತ್ಯ ಶರಣರ ಅಂಗಳದೊಳಗೆ ಬಿದ್ದ ಅಗುಳನೆತ್ತಿ
ಕೊಂಡಿಪ್ಪೆನೆಂದು ನಿಮ್ಮ ಪ್ರಸಾದದ ಕುಳಿಯೊಳಗೆ ಹನ್ನೆರಡು ವರುಷ
ಪರ್ಯಂತರ ಪ್ರಸಾದಿಯಾಗಿರ್ದ ಕೂಡಲಸಂಗಮದೇವರಲ್ಲಿ ಮರುಳುಶಂಕರ
ದೇವರ ಶ್ರೀಪಾದದ ಘನವನು ನಿಮ್ಮಿಂದ ಕಂಡು ಬದುಕಿದೆನು ಕಾಣಾ
ಸಂಗನಬಸವಣ್ಣಾ. ॥೨೩॥

ಮರುಳುಶಂಕರದೇವರ ಘನವ ನಿಮ್ಮಿಂದ ಕಂಡು ಬದುಕಿದೆನೆಂದು,
ಚನ್ನಬಸವರಾಜದೇವರು ಬಸವರಾಜದೇವರ ಕೂಡ ವಿನ್ನಹಂ ಮಾಡು
ತ್ತಿರಲು, ಮತ್ತಂ ಮರುಳುಶಂಕರದೇವರು ಚನ್ನಬಸವರಾಜದೇವರ ಸ್ತುತಿಯ
ನೊಳಕೊಂಡು ನಿರೂಪಿಸಿದ ಪ್ರಸ್ತಾವದ ವಚನ. ॥

ಭಕ್ತ, ಮಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣ್ಯೈಕ್ಯ ಇಂತು
ಪಡುಪಲ ಚಕ್ರವರ್ತಿಯಯ್ಯ ಚನ್ನಬಸವಣ್ಣನು. ಷೋಡಶಾಧಾರಂ ಸರ್ವ
ಭೇದಂ, ಸರ್ವಾಚಾರಂ ತು ಲಿಂಗಯೊ ॥ ಪಡೂವಿ ತ್ರಿವಿಧಂ ವಿಕು
ತಸ್ಮಾತ್ ಲಿಂಗಪ್ರಯೋಜನಂ॥ ಇಂತೆಂದುದಾಗಿ, ಇಂತಪ್ಪ ಲಿಂಗಾಂಗಿ
ಯಯ್ಯ ಚನ್ನಬಸವಣ್ಣನು. ಆಚಾರವೆ ಕಾಯ, ಆಚಾರವೆ ಪ್ರಾಣ, ಆಚಾ
ರವೆ ಲಿಂಗ, ಆಚಾರವೆ ಸಂಗ, ಇಂತಪ್ಪ ಆಚಾರಸನ್ನಿಹಿತನಯ್ಯ ನಮ್ಮ
ಚನ್ನಬಸವಣ್ಣನು. ಶುದ್ಧ, ಸಿದ್ಧ, ಪ್ರಸಿದ್ಧ, ಪ್ರಸನ್ನ, ಪ್ರಭುವೆ ಶಾಂತ
ಮಲ್ಲಿಕಾರ್ಜುನ ದೇವಯ್ಯ, ನಿಮ್ಮ ಚನ್ನಬಸವಣ್ಣನು ಸರ್ವಾಚಾರಸಂಪ
ನ್ನನು ಇಂತಪ್ಪ ಚನ್ನಬಸವಣ್ಣನ ನಿಲವ ನೀವೆ ಬಲ್ಲಿರಲ್ಲದೆ ನಾನೆತ್ತ
ಬಲ್ಲೆನಯ್ಯ ನಿಮ್ಮ ಧರ್ಮ, ನಿಮ್ಮ ಧರ್ಮ. ॥೨೪॥

ಮತ್ತಂ, ಮರುಳುಶಂಕರದೇವರ ನಿಲವ ಚನ್ನಬಸವರಾಜ ದೇವರು
ಪ್ರಭುದೇವರಿಗೆ ಬಿನ್ನೈಸಿದ ವಚನ ॥

ತುದಿಮೊದಲಿಲ್ಲದ ಘನವ ನೋಡಾ. ಒಕ್ಕೊರಗಿಲ್ಲದ ಅನುವ ನೋಡಾ.
ಗುರುಲಿಂಗಜಂಗಮ ತಾನೆಯಾಗಿ. ಮತ್ತೆ ತಾನೆಂಬುದೇನು ಇಲ್ಲದ ಇಪ್ಪ
ಪರಿಯ ನೋಡಾ! ತನ್ನ ತಾ ನಿರ್ದೇಶವ ಮಾಡಿಕೊಂಡು ನಿಜಪದವನ್ನೈ

ದಿಪ್ಪ ಪರಿಯ ನೋಡಾ! ಕೂಡಲಸಂಗಮದೇವರಲ್ಲಿ ಪರಮ ಪ್ರಸಾ
ಯಾಗಿಪ್ಪ ಮರುಳುಶಂಕರದೇವರ ನಿಲವ ನೋಡಾ ಪ್ರಭುವೆ. ॥೫॥

ಇವಕ್ಕೆ ಪ್ರಭುದೇವರು ಪರಮ ಪ್ರಸಾದಿಯಾಗಿಪ್ಪ ಮರುಳುಶಂಕ
ರದೇವರ ನಿಲವ ಬಸವರಾಜದೇವರಿಂದೆ ಕಂಡೆನೆಂದು ಸಿದ್ಧರಾಮಯ್ಯ
ದೇವರೊಡನೆ ನಿರೂಪಿಸಿದ ಪ್ರಸ್ತಾವದ ವಚನ. ॥

ಅಂಗನಿಡಿದಂಗಿ ಎಂಜೆನೆ? ಆರಸೊಳಕೊಂಡನುಪವನ ನೋಡಾ?
ಮೂರರ ಹೊಲಿಗೆಯ ಬಿಚ್ಚಿ ಎಂಟೂತ್ಮ ಹರಿಗಳ ತನ್ನಿಚ್ಛೆಯೊಳ್ನಿಲಿಸಿದ
ನಿಜಸುಖಿಯ ನೋಡಾ! ತತ್ವ ಮೂವತ್ತಾರ ಏಸಾರಿ ಅತ್ತತ್ತಲೆ ತೋರ್ಪ
ಅಗವ್ಯನ ನೋಡಾ! ನಮ್ಮ ಗುಹೇಶ್ವರನ ಶರಣ ಅಲ್ಲಯ್ಯನ ಇರವ
ನೊಳಕೊಂಡ ಪರಮ ಪ್ರಸಾದಿ ಮರುಳುಶಂಕರದೇವರ ನಿಲವ ಬಸವ
ಣ್ಣನಿಂದೆ ಕಂಡೆ ನೋಡಾ ಸಿದ್ಧರಾಮಯ್ಯ. ॥೫॥

ಹೀಗೆಂದು ಸಿದ್ಧರಾಮಯ್ಯದೇವರೊಡನೆ ಪ್ರಭುದೇವರು ನಿರೂಪಿ
ಸುತ್ತಿರಲು, ಇವಕ್ಕೆ ಬಸವರಾಜದೇವರು ಸಿದ್ಧರಾಮಯ್ಯದೇವರಿಂದೆ ಪ್ರಭು
ದೇವರ ಕಂಡೆ. ಪ್ರಭುದೇವರಿಂದೆ ಮರುಳುಶಂಕರದೇವರ ಕಂಡೆನೆಂದು
ಕೊಂಡಾಡುವ ಪ್ರಸ್ತಾವದ ವಚನ. ॥

ಸತ್ಯಮುಕ್ತಿಯ ಕಳೆಯ ನೋಡಾ. ನಿತ್ಯ ತತ್ವದ ಇರವನೋಡಾ!
ಮೂರೊಂದಾವ ಆರೂಢನ ನೋಡಾ. ಕೂಡಲ ಸಂಗಮದೇವರಲ್ಲಿ ತಪ್ಪ
ತವಾಗಿಪ್ಪ ಮರುಳುಶಂಕರ ದೇವರ ನಿಲವ ಪ್ರಭು ಸಿದ್ಧರಾಮಯ್ಯ ದೇವ
ರಿಂದ ಕಂಡು ಬದುಕಿದೆನು ಬದುಕಿದೆನು. ॥೫॥

ಇಂತು ಬಸವರಾಜದೇವರು ಮರುಳುಶಂಕರದೇವರ ನಿಲವ ಪ್ರಭು
ಸಿದ್ಧರಾಮಯ್ಯ ದೇವರಿಂದೆ ಕಂಡು ಬದುಕಿದೆನೆಂದು ಸ್ತುತಿಸುತ್ತಿರಲು,
ಇವಕ್ಕೆ ಸಿದ್ಧರಾಮಯ್ಯದೇವರು ಮರುಳುಶಂಕರದೇವರ ನಿಲವ ಪ್ರಭು
ಬಸವಣ್ಣನಿಂದ ಕಂಡೆನೆಂದು, ಸ್ತುತಿಸಿದ ವಚನ. ॥

ಆದಿಯ ಮೂರ್ತಿಯಲ್ಲ, ಅನಾದಿಯ ಒಚ್ಚಬರಿಯ ಶೂನ್ಯವಲ್ಲ,
ಅಂಗವಿದ್ದು ಅಂಗವಿಲ್ಲ. ಸಂಗ ಘನಪದದಲ್ಲಿ ವೇದ್ಯವಾವ ಮರುಳುಶಂಕ
ರದೇವರ ನಿಲವ ಪ್ರಭು ಬಸವಣ್ಣನಿಂದೆ ಕಂಡು ಬದುಕಿದೆನು ಕಾಣ
ಕಪಿಲಸಿದ್ಧಮಲ್ಲಿಕಾರ್ಜುನ. ॥೫॥

ಹೀಗೆಂದು ಸಿದ್ಧರಾಮಯ್ಯದೇವರು ನಿರೂಪಿಸಲು, ಮತ್ತಂ, ಬಸವರಾಜ
ದೇವರು ಹಡಪದಪ್ಪಣ್ಣಗಳಿಂದೆ ಪ್ರಭು ಸಿದ್ಧರಾಮಯ್ಯ ದೇವರುಗಳ ನಿಲವ
ಕಂಡೆ. ಮತ್ತಂ. ಪ್ರಭು ಸಿದ್ಧರಾಮಯ್ಯ ದೇವರಿಂದೆ ಮರುಳುಶಂಕರ
ದೇವರ ಇರವ ಕಂಡೆನ್ನ ಜನ್ಮ ಸಫಲವಾಯಿತ್ತೆಂದು ಸ್ತುತಿಸಿದ ಪ್ರಸ್ತಾ
ವದ ವಚನ. ॥

ಏನೆಂದುಪಮಿಸುವೆನಯ್ಯ! ತನ್ನಿಂದ ತೋರದೆ ಗುರುಮುಖ
ದಿಂದ ತೋರಿದ ತನ್ನ ನಿಲವ ನಿರೂಪನು ಕಬ್ಬು ಮುಗ್ಧವಾಗಿದ್ದಿಡೆಯನಿ
ದಿರಿಂಗೆ ತೋರದೆ ಇರಪೆ ಪರವಾಗಿರ್ದ ಅಜಡನು ಇನನುದಯ ಕಾಲಕ್ಕೆ ಕುಕ್ಕು
ಟಪ್ಪನಿದೋರುವಂತೆ ಘನಮಹಿಮರ ವರುಶನದಿಂದೆ ಸತ್ಪ್ರಣಮನೆ ತಾನಾಗಿ
ನುಡಿದ ಮೂಲಿಗನು. ಕೂಡಲಸಂಗಮದೇವರಲ್ಲಿ ಬೆರಸಿ ಬೇರಿಲ್ಲದಿಪ್ಪ
ಮರುಳುಶಂಕರದೇವರ ನಿಲವ ಪ್ರಭು ಸಿದ್ಧರಾಮಯ್ಯದೇವರು ಹಡ
ಪದಪ್ಪಣ್ಣನಿಂದ ಕಂಡು, ಎನ್ನ ಜನ್ಮಸಫಲವಾಯಿತ್ತಯ್ಯ. ॥೫॥

ಹೀಗೆಂದು ಬಸವರಾಜದೇವರು ಮರುಳುಶಂಕರದೇವರ ಕೊಂಡಾ
ಡುತ್ತಿರಲು ಇದಕ್ಕೆ ಹಡಪದಪ್ಪಣ್ಣಗಳು ಪ್ರಭುದೇವರಿಂದೆ ಬಸವಣ್ಣ ನಿಂದೆ
ಮರುಳುಶಂಕರ ದೇವರ ಇರವ ಕಂಡು, ಬದುಕಿದೆನೆಂದು ಕೊಂಡಾಡಿದ
ಪ್ರಸ್ತಾವದ ವಚನ. ॥

ಯುಗಯುಗಂಗಳ ಅಳಿವು ಶಿವನಂಯೆದೆ ಹಗಲಿರುಳೆಂಬ ನೆನಹಿನಲು
ಅರಿಯದೆ ಲಿಂಗದಲ್ಲಿ ಪರವಶನಾಗಿರ್ದ ಪರಮ ಪರಿಣಾಮಿ ಏನೆಂದು
ಪಮಿಸುವೆನಯ್ಯ! ಆಹಾ ಎನ್ನ ಮುಕ್ತಿಯ ಮುಕುರವ ಇರವ ನೋಡಾ.
ಆಹಾ ಎನ್ನ ಸತ್ಯದ ಸ್ವಾನುಭಾವದ ಕಳೆಯ ನೋಡಾ. ಆಹಾ ಅಪ್ಪನ
ಪಂಗಳ ಹಂಗನುಳಿದು ನಿಷ್ಕೈ ನಿಬ್ಬೆರಗಾಗಿ ನಿಂದ ಚಿಚ್ಛಕ್ತಿಯ ನೋಡಾ!
ಬಸವಪ್ರಿಯ ಕೂಡಲ ಚನ್ನಸಂಗಮದೇವಯ್ಯ ಪರಮ ಪ್ರಸಾದಿ ಮರುಳು
ಶಂಕರದೇವರ ನಿಲವ ಪ್ರಭು ಬಸವಣ್ಣನಿಂದ ಕಂಡು ಬದುಕಿದೆನು
ಬದುಕಿದೆನು. ॥೫೦॥

ಹೀಗೆಂದು ಹಡಪದಪ್ಪಣ್ಣಗಳು ಮರುಳುಶಂಕರದೇವರ ಇರವ ಕೊಂಡಾ
ಡುತ್ತಿರಲು, ಇವಕ್ಕೆ ಮಡಿವಾಳಯ್ಯಗಳು ಪರಮ ಪರಿತೋಷರಾಗಿ ಮರು
ಳುಶಂಕರದೇವರ ನಿಲವ ಬಸವಣ್ಣನಿಂದೆ ಕಂಡು ಬದುಕಿದೆನೆಂದು
ಕೊಂಡಾಡುವ ಪ್ರಸ್ತಾವದ ವಚನ. ॥

ಮೂರನೊಳಕೊಂಡ ಲರ ವಿಾರಿ ನಿಂದ ಘನವನೇನೆಂಬೆನಯ್ಯ! ನುಡಿವರೆ ವಾಚಾತೀತ, ನೋಡುವರೆ ಕಂಗಳೆರಡ ಇವವಯ್ಯ! ಮುಂದೆ ಬೆಳಗೆ ತಾನಾಗಿ ನಿಂದ ಮರುಳುಶಂಕರದೇವರ ನಿಲವ ಬಸವಣ್ಣನಿಂದ ಕಂಡು ಬದುಕಿದೆನು ಕಾಣಾ ಕಲಿದೇವರ ದೇವಾ. ॥೩೧॥

ಹೀಗೆಂದು ಮರುಳುಶಂಕರದೇವರ ನಿಲವ ಮಡಿವಾಳಯ್ಯಗಳು ಕೊಂಡಾಡುತ್ತಿರಲು, ಅಲ್ಲಿ ಬಸವರಾಜದೇವರು ಮಡಿವಾಳಯ್ಯಗಳಿಂದ ಮರುಳುಶಂಕರದೇವರ ಇರವ ಕಂಡು ಬದುಕಿದೆನೆಂದು ಕಿನ್ನರ ಬ್ರಹ್ಮಯ್ಯಗಳ ಕೂಡೆ ನಿರೂಪಿಸಿದ ಪ್ರಸ್ಥಾವದ ವಚನ. ॥

ಎನ್ನ ವಚನದ ರಚನೆಯ ಮೆಚ್ಚಿ, ಅಡಿಗಡಿಗೆನ್ನ ಮನದ ಪ್ರೌಢಿಕೆಯ ತೊಳೆದು ಹೋದ. ಪ್ರಾಣವ ಮರಳಿ ತಂದು ರಕ್ಷಿಸಿದ. ಕೂಡಲಸಂಗಮದೇವಯ್ಯ ಮಡಿವಾಳಯ್ಯಗಳ ಕರುಣದಿಂದೆ ಮರುಳುಶಂಕರದೇವರ ನಿಲವ ಕಂಡು ಬದುಕಿದೆನು ಕಾಣಾ ಕಿನ್ನರ ಬ್ರಹ್ಮಯ್ಯ. ॥೩೨॥

ಹೀಗೆಂದು ಬಸವರಾಜದೇವರು ನಿರೂಪಿಸಲು, ಅವಕ್ಕೆ ಕಿನ್ನರಬ್ರಹ್ಮಯ್ಯಗಳು ಬಸವರಾಜದೇವರ ನುಡಿಯನೊಳಕೊಂಡು ಮರುಳುಶಂಕರದೇವರ ಕೊಂಡಾಡಿದ ಪ್ರಸ್ಥಾವದ ವಚನ. ॥

ಆಕಾರವೆಂಬೆನೆ? ನಿರಾಕಾರವಾಗಿದೆ. ನಿರಾಕಾರವೆಂಬೆನೆ? ಅತ್ತತ್ತ ತೋರುತ್ತದೆ. ತನ್ನನಳಿದು ನಿಜ ಉಳಿದು ಮಹಾಲಿಂಗ ತ್ರಿಪುರಾಂತಕನ ನಿಲವ ಕಂಡು, ಒಳಕೊಂಡ ಮರುಳುಶಂಕರದೇವರ ಮೂರ್ತಿಯನು ನಿನ್ನಿಂದ ಕಂಡು ಬದುಕಿದೆನು ಕಾಣಾ ಸಂಗನಬಸವಣ್ಣಾ. ॥೩೩॥

ಮತ್ತಂ, ಬಸವರಾಜದೇವರಿಂದೆ ಮರುಳುಶಂಕರದೇವರ ನಿಲವ ಕಂಡೆನೆಂದು ಕಿನ್ನರಬ್ರಹ್ಮಯ್ಯಗಳು ನಿರೂಪಿಸಲು, ಅದಕ್ಕೆ ಬಸವರಾಜದೇವರು ಕಿನ್ನರಬ್ರಹ್ಮಯ್ಯಗಳಿಂದೆ ಮರುಳುಶಂಕರದೇವರ ನಿಲವ ಕಂಡು ಬದುಕಿದೆನೆಂದು ಸ್ತುತಿಸಿದ ಪ್ರಸ್ಥಾವದ ವಚನ. ॥

ನಾನಾ ಯುಗಂಗಳಲ್ಲಿ ಬಂದಲ್ಲಿ ಇಂತಪ್ಪ ನಿಲವ ಕಂಡುದಿಲ್ಲವಯ್ಯ! ಅಂಗಮನ ಭಾವಕರಣಂಗಳ ಮಾಮು, ಕೂಡಲ ಸಂಗಮದೇವರ ನಿಲವ ನೊಳಕೊಂಡ ಮರುಳುಶಂಕರದೇವರ ನಿಲವ ನಿಮ್ಮಿಂದ ಕಂಡು ಬದುಕಿದೆನು ಕಾಣಾ ಕಿನ್ನರಬ್ರಹ್ಮಯ್ಯ. ॥೩೪॥

ಹೀಗೆಂದು ಎಲ್ಲ ಗಣಂಗಳು ಮರುಳುಶಂಕರದೇವರ ಸ್ತುತಿಸುತ್ತಿರಲು, ಅಲ್ಲಿ ಮರುಳುಶಂಕರದೇವರು ತಮ್ಮ ಸ್ತುತಿಸಿದ ಗಣಂಗಳ ಒಂದೇ ವಚನದಲ್ಲಿ ಕೊಂಡಾಡಿದ ಪ್ರಸ್ಥಾವದ ವಚನ ॥

ಎನ್ನ ವಿಜ್ಞಾನಾತ್ಮ ಚೇತನನಯ್ಯ ಪ್ರಭುದೇವರು. ಎನ್ನ ಪರಮಾತ್ಮ ಚೇತನನಯ್ಯ ಸಿದ್ಧರಾಮಯ್ಯದೇವರು. ಎನ್ನ ಚಿನ್ಮಯಾತ್ಮ ಚೇತನನಯ್ಯ ಸಂಗನಬಸವಣ್ಣನು. ಎನ್ನ ನಿರ್ಮಲಾತ್ಮ ಚೇತನನಯ್ಯ ಷಡುಸ್ಥಲ ಬ್ರಹ್ಮಿ ಚನ್ನಬಸವಣ್ಣನು. ಎನ್ನ ಮಹದಾತ್ಮ ಚೇತನನಯ್ಯ ಬಸವಣ್ಣನ ನಿಜಸುಖಿ ಅಪ್ಪಣ್ಣನು. ಎನ್ನ ಜೀವಾತ್ಮ ಚೇತನನಯ್ಯ ಮಡಿವಾಳ ಮಾಚಯ್ಯನು. ಎನ್ನರಿವಿನ ಚೇತನಾತ್ಮಕನಯ್ಯ ಕಿನ್ನರಯ್ಯನು. ಇಂತಪ್ಪ ಪ್ರಮಥರ ಕರುಣದಿಂದೆ ಶುದ್ಧ ಸಿದ್ಧ ಪ್ರಸಿದ್ಧ ಪ್ರಭುವೆ ಚನ್ನಮಲ್ಲಿಕಾರ್ಜುನ ದೇವಯ್ಯ ಬದುಕಿದೆನು ಕಾಣಾ ನಿಮ್ಮ ಧರ್ಮ ನಿಮ್ಮ ಧರ್ಮ. ॥೩೫॥

ಮತ್ತಂ, ಸರ್ವಜ್ಞನ ಹೆಡೆಯ ಮೇಲಿಪ್ಪ ಇಪ್ಪತ್ತೇಳು ಲೋಕವ ಕಂಡೆ. ಇಪ್ಪತ್ತೇಳು ಲೋಕದೊಳಿರ್ದ ಎಪ್ಪತ್ತೇಳು ಕರ್ಪುರದ ಗಿರಿಯ ಕಂಡೆ. ಎಪ್ಪತ್ತೇಳು ಕರ್ಪುರದ ಗಿರಿಯ ಮೇಲಿಪ್ಪ ಎಪ್ಪತ್ತೇಳು ಉರಿಯ ಕಂಭವ ಕಂಡೆ. ಎಪ್ಪತ್ತೇಳು ಉರಿಯ ಕಂಭವ ಮೇಲಿರ್ದ ಎಪ್ಪತ್ತೇಳು ಅರಗಿನ ಪುತ್ಥಳಿಯ ಕಂಡೆ. ಆ ಎಪ್ಪತ್ತೇಳು ಅರಗಿನ ಪುತ್ಥಳಿ ಕರಗಿ ಹೋದವು. ಎಪ್ಪತ್ತೇಳು ಕರ್ಪುರದ ಗಿರಿ ಉರಿದು ಹೋದವು. ಎಪ್ಪತ್ತೇಳು ಲೋಕ ಹಾಳಾದವು. ಆ ಸರ್ಪ ಬೆಂದು ಸತ್ತು ಹೋಯಿತು. ಇನ್ನು ನಿಷ್ಪತ್ತಿ ನಿರಾಳವೆಂಬ ನಿಜ ಒಳಕೊಂಡ ಬಳಿಕ ನಾನೆತ್ತ ಹೋದೆನಂದರಿಯೆನಯ್ಯ. ಶುದ್ಧ ಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭುವೆ ಶಾಂತ ಚನ್ನಮಲ್ಲಿಕಾರ್ಜುನ ದೇವಯ್ಯ ನಿಮ್ಮರ್ಪಣದ ಪರಿಯ ನೀವೆ ಬಲ್ಲಿರಲ್ಲದೆ ನಾನೆತ್ತ ಬಲ್ಲೆನಯ್ಯ ನಿಮ್ಮ ಧರ್ಮ ನಿಮ್ಮ ಧರ್ಮ. ॥೩೬॥

ಮತ್ತಂ, ಮರುಳುಶಂಕರದೇವರ ಐಕ್ಯ ॥

ಸಂಸಾರವೆಂಬ ಸಾಗರವ ದಾಂಟುವರೆ ಆರುಹೆಂಬ ಹರಿಗೋಲನಿಕ್ಕಿ ಜ್ಞಾನವೆಂಬ ಅಂಬಿಗ ಇಹರು ಗೋಲೊಳಗೆ ಕುಳಿರ್ದು ಸುಜ್ಞಾನವೆಂಬ ಸಟ್ಟುಗವ ಪಿಡಿದು ಮಹಾಜ್ಞಾನವೆಂಬ ಗಾತಗಳೆಯ ಪಿಡಿದು, ನಾನೀ ಹೊಳೆಯಂ ಕಂಡು ಅಂಬಿಗನ ಕೇಳಿದರೆ ನಾ ನಿನ್ನ ಹಾಯಿಸಿಕೊಟ್ಟಿಹೆನೆಂದನು. ನಾನು ನಿನ್ನ ನಂಬಿ ಹರಿಗೋಲನೇರಿದೆನು. ಕಾಣಾ ಅಂಬಿಗನಣ್ಣಾ, ಇಂದು ನಾನು ಹರಿಗೋಲಲ್ಲಿ ಕುಳಿದು ನಡುಹೊಳೆಯಲ್ಲಿ ಹೋಗ

ಲಿಕೆ ಕಾಮುವೆಂಬ ಕೊರಡು ಅದ್ದಿ ಬಿದ್ದಿತ್ತು. ಕ್ರೋಧವೆಂಬ ಮೊಸಳೆ ನೊಳಗೆ ಸಿಲ್ಕಿತ್ತು. ಅಹಂಕಾರವೆಂಬ ಮೀನ ಬಂದು ಸಿಂದಿತ್ತು. ಮಾಯೆ ಎಂಬ ಮೊಸಳೆ ಬಾಯ ಬಿಡುತ್ತಿದ್ದಿತ್ತು. ಮೋಹವೆಂಬ ನೊರೆ ಹೆಚ್ಚಿ ಬರುತ್ತಿದ್ದಿತ್ತು. ಲೋಭವೆಂಬ ಕಾಷ್ಠಪಲಿಗಳ ದೊಯ್ಯುತ್ತಿದ್ದಿತ್ತು. ಮತ್ಸರವೆಂಬ ಗಾಳಿ ತೆರೆ ಮುವೆಂಬ ಮರಹು ನೂಕುತ್ತಿದ್ದಿತ್ತು. ಇವೆಲ್ಲವ ಪುಹರಿಸಿ ಎನ್ನ ಹೊಳೆಯ ದಾಂಟಿಸಿ ಕೆಳಗು ಮಾಡುತ್ತಿದ್ದಿತ್ತು. ಈ ಹೊಳೆಯ ದಾಂಟಿಸಿದ ಕೂಲಿಯ ಸಿದನು ಅಂಬಿಗರಣ್ಣನು. ಈ ಹೊಳೆಯ ದಾಂಟಿಸಿದ ಕೂಲಿಯ ನೆನ್ನ ಬೇಡಿದರೆ ಕೂಲಿಯ ಕೊಡಲೇನು ಇಲ್ಲ ಎಂದರೆ ಕೈಸೆರೆಯಾಗಿ ಎನ್ನೊಳಮೊಯ್ದನಯ್ಯ! ಅರುವೆಯ ಕೊಟ್ಟ ಕೂಲಿಗೆ ಕರುವ ಕಾಯ್ದು ಕೊಂಪನಯ್ಯ! ಅರಿಯದೆ ಹರುಗೊಲನೇರಿ ತೊರೆ ದಾಂಟಿವ ಕೂಲಿಗೆ ಕರುವ ಕಾದೆ ಕಾಣಾ ಶುದ್ಧ ಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭುವೆ ಶಾಂತ ಮಲ್ಲಿಕಾರ್ಜುನ ದೇವಯ್ಯ, ನಿಮ್ಮ ನಂಬಿ ನಾನು ಕೆಟ್ಟ ನಾನು ಬಟ್ಟಬಯಲಾದೆನಯ್ಯ, ನಿಮ್ಮ ಧರ್ಮ ನಿಮ್ಮ ಧರ್ಮ. ॥೩೭॥

ಮತ್ತಂ, ಮರುಳುಶಂಕರದೇವರು ತಮ್ಮ ಐಕ್ಯದಲ್ಲಿ ಪ್ರಭುದೇವರ ಸ್ತೋತ್ರಮಂ ಮಾಡಿದ ಪ್ರಸ್ಥಾವದ ವಚನ. ॥

ನಿಸ್ಸಂಗತ್ವಂ ನಿರಾಭಾರಿ ನಿಸ್ಸೀಮಂ ನಿರುಪಾಧಿಕಂ ॥ ನಿರ್ದೇಹಂ ನಿರ್ಮಳಂ ನಿತ್ಯಂ। ಸತ್ಯಜಂಗಮ ಲಕ್ಷಣಂ॥ ಇಂತೆಂದುದಾಗಿ, ಶುದ್ಧ, ಸಿದ್ಧ, ಪ್ರಸಿದ್ಧ ಪ್ರಸನ್ನ ಪ್ರಭುವೆ ಶಾಂತ ಚನ್ನಮಲ್ಲಿಕಾರ್ಜುನ ದೇವಯ್ಯ, ನಿಮ್ಮ ಘನಕ್ಕೆ ಘನವಾದ ಪ್ರಭುದೇವರ ಘನವ ನೀವೆ ಬಲ್ಲಿರಿ. ನಾನೆತ್ತ ಬಲ್ಲೆನಯ್ಯ ನಿಮ್ಮ ಧರ್ಮ, ನಿಮ್ಮ ಧರ್ಮ. ॥೩೮॥

ಮತ್ತಂ, ಮರುಳುಶಂಕರದೇವರ ಐಕ್ಯ॥ ॥ಸಾಕ್ಷಿ॥ ಮಹಾಲಿಂಗಂ ತ್ರಯೋರ್ಲಿಂಗಂ। ತ್ರಿವಿಧಂ ಷಡ್ವಿಧೋರ್ಮುಖಂ ॥ ತ್ರಿವಿಧೈಕ ಮುಖೋ ಲಿಂಗಂ। ಮಹಾಲಿಂಗಂತುದರ್ಶನಂ ॥ ಇಂತೆಂದುದಾಗಿ, ಒಂದು ಮೂರು ಮಾಡಿಕೊಂಡನಯ್ಯ ನಮ್ಮ ಬಸವಣ್ಣನು. ಮೂರು ಆರ ಮಾಡಿಕೊಂಡನಯ್ಯ ನಮ್ಮ ಬಸವಣ್ಣನು. ಆರ ಮೂರ ಮಾಡಿಕೊಂಡನಯ್ಯ ನಮ್ಮ ಬಸವಣ್ಣನು. ಮೂರ ಒಂದ ಮಾಡಿಕೊಂಡನಯ್ಯ ನಮ್ಮ ಬಸವಣ್ಣನು! ಇಂತಪ್ಪ ಸರ್ವಾವಧಾನಿಯಯ್ಯ ನಮ್ಮ ಬಸವಣ್ಣನು. ಇಂತಪ್ಪ ಸರ್ವ ಸಂಗ ಪರಿತ್ಯಾಗಿಯಯ್ಯ ನಮ್ಮ ಬಸವಣ್ಣನು. ಇಂತಪ್ಪ ಸರ್ವ ಕರಣ ನಿರ್ಮೂಲನಯ್ಯ ನಮ್ಮ ಬಸವಣ್ಣನು. ಇಂತಪ್ಪ ಕಾರುಣ್ಯ ಪ್ರಸಾದಿ

ಯಯ್ಯ ನಮ್ಮ ಬಸವಣ್ಣನು. ಇಂತಪ್ಪ ಸರ್ವಾಂಗಲಿಂಗಿಯಯ್ಯ ನಮ್ಮ ಬಸವಣ್ಣನು. ಇಂತಪ್ಪ ಸರ್ವನಿರ್ವಾಣಿಯಯ್ಯ ನಮ್ಮ ಬಸವಣ್ಣನು. ಇಂತಪ್ಪ ಬಸವಣ್ಣನ ಮಹಿಮೆಯ ನೀವೆ ಬಲ್ಲಿರಿ. ಅಸಂಖ್ಯಾತ ಮಹಾಪ್ರಮಥರು ಪ್ರಭುದೇವರು ಮುಖ್ಯವಾದ ನಿಲವಿನ ಶ್ರೀ ಚರಣಕ್ಕೆ ನಾನು ಪರಮಾರ್ಥ ಶರಣಾರ್ಥಿ ಎಂದು ಶಬ್ದಮುಗ್ಧವಾಗಿ ಬುರಿಬುಂಡ ಕರ್ಪುರದಂತೆ ನಿಮ್ಮ ಶ್ರೀಚರಣವನೈದಿದೆನಯ್ಯ. ಶುದ್ಧ ಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭುವೆ ಶಾಂತ ಮಲ್ಲಿಕಾರ್ಜುನದೇವಯ್ಯ, ನಿಮ್ಮ ಬಸವಣ್ಣನ ಪ್ರಸಾದವ ಕೊಂಡು ನಾನು ಬದುಕಿದೆನು. ಬಸವಣ್ಣನ ಮುಂದೆ ಬಯಲಾಗಿ ಹೋದೆನಯ್ಯ ನಿಮ್ಮ ಧರ್ಮ, ನಿಮ್ಮ ಧರ್ಮ. ॥೩೯॥

ಇಂತು ಮರುಳುಶಂಕರದೇವರು ನಿರ್ವಯಲಾಗಲು, ಚನ್ನಬಸವರಾಜದೇವರು ಕೊಂಡಾಡಿದ ಪ್ರಸ್ಥಾವದ ವಚನ. ॥

ಮಾಡಬಾರದ ಭಕ್ತಿಯನೆ ಮಾಡಿ, ನೋಡಬಾರದ ನೋಟವನೆ ನೋಡಿ, ಕೂಡಬಾರದ ಕೂಟವನೆ ಕೂಡಿ, ಸ್ತುತಿಸುವರೆ ಸ್ತುತಿಗೆ ಬಾರದೆ ಮುಟ್ಟುವರಿಗೆ ಮುಟ್ಟಬಾರದೆ, ಒಟ್ಟಬಯಲಾಗಿ ಹೋದ ಮರುಳುಶಂಕರದೇವರ ಮಹಾತ್ಮೆಗೆ ನಮೋ ನಮೋ ಎಂದು ಬದುಕಿದೆನು ಕಾಣಾ ಕೂಡಲ ಚನ್ನಸಂಗಮದೇವಾ. ॥೪೦॥

ಇಂತು ಚನ್ನಬಸವರಾಜದೇವರು ಮರುಳುಶಂಕರದೇವರು ನಿರ್ವಯಲಾದೈದಿದಲ್ಲಿ ಕೊಂಡಾಡುತ್ತಿರಲು, ಆ ಪ್ರಸ್ಥಾವದೊಳು ಪ್ರಭುದೇವರು ಬಸವರಾಜದೇವರೊಡನೆ ನಿರೂಪಿಸಿದ ಪ್ರಸ್ಥಾವದ ವಚನ. ॥

ಕಾಮನ ಕಣ್ಣ ವಂಚಿ ಕಳೆದು, ಭೂಮಿಯ ತೈಲದ ಸೀಮೆಯ ಕಡಿಸಿ, ಹೋಮವನುರುಹಿ, ದಕ್ಷನ ತಲೆಯ ನರಿದ ನಿಸ್ಸೀಮ ಶರಣರ ನಿಲವನರಿಯಬಹುದೆ? ಅನುವಿಂಗ ಸಾಧ್ಯ ಉಪಮೆಗೆ ಕಡೆ ಮುಟ್ಟರು. ಗುಹೇಶ್ವರನ ಶರಣರಿಂತಹರೆಂಬುದ ಕಂಡಾ ಸಂಗನಬಸವಣ್ಣಾ? ॥೪೧॥

ಹೀಗೆಂದು ಪ್ರಭುದೇವರು ನಿರೂಪಿಸಲು, ಅದಕ್ಕೆ ಬಸವರಾಜದೇವರು ನಿರಾಕಾರವಾಗಿರ್ದ ಪ್ರಣಮವನು ನಿರವಯವನೈದುವದು ಸಾಧ್ಯವಲ್ಲದೆ ಕಾಯವು ಜಡವು ನಿರವಯವಹ ಘೇವವೆಂತೆಂದು ಪ್ರಭುದೇವರು ಪೇಳಗೊಂಬ ಪ್ರಸ್ಥಾವದ ವಚನ. ॥

ಲಿಂಗದಲ್ಲಿ ಅರ್ಪಿತವಾದ ಸುಖವು ಲಿಂಗದಲ್ಲಿ ಲಿಯ್ಯವಾಯಿತ್ತೆಂದರೆ ಲಿಂಗವ ಲಿಂಗದಲ್ಲಿ ನಿಷ್ಪಾಪಿಸಿಹೆನೆಂಬ ಕಾರಣವೇಕಯ್ಯ? ಶರಣಂಗೆ

ಪ್ರಾಣಲಿಂಗದಲ್ಲಿ ಸವನಿಸಿ ನಿರವಯವಾಗಬಹುದಲ್ಲವೆ, ಕರ್ಮದಿಂದ
ಕಾಯವ ಸವೆಸಿ ಸ್ವಯವಪ್ಪ ಪರಂ ಎಂತು ಹೇಳಯ್ಯ? ಕೂಡಲಸಂಗಮ
ದೇವಯ್ಯ ನಿಮ್ಮ ಶರಣರು ಕಾಯವಿಡಿದಿರ್ದು ನಿರ್ಮಾಯರಾಗಿಪ್ಪರಿ
ಹೇಳಯ್ಯ ನಿಮ್ಮ ಧರ್ಮ ನಿಮ್ಮ ಧರ್ಮ. ॥೪೫॥

ನಿಮ್ಮ ಶರಣರು ಶರೀರವಿರ್ದು ನಿಜದಲ್ಲಿ ನಿಂದ ಭೇದವ ನಿರೂಪಿಸಿ
ಎಂತು ಬಸವರಾಜದೇವರು ವಿನ್ನಹಂ ಮಾಡಲು, ಇದಕ್ಕೆ ಪ್ರಭುದೇವರು
ಮರುಳುಶಂಕರದೇವರೆಂಬ ಶರಣರ ಮಹಾತ್ಮೆಯಂ ನಿರೂಪಿಸಿದ ಪ್ರಸ್ತಾ
ವದ ವಚನ ॥

ಪದಂಗಳು॥ ರಾಗ. ಬಹುಳಿ

ಕರ್ಮಕಾಯನು ಅಲ್ಲ. ಬ್ರಹ್ಮಮೂರುತಿ ಅಲ್ಲ. ಪರಬ್ರಹ್ಮನನು ನುತಿ
ವಲ್ಲಿ ತಾನಿಲ್ಲದ ನಿರ್ಮೋಹಿ ॥ಪಲ್ಲ॥ ಮಾತಾಪಿತರುಗಳುದರಜಾತಜನಿ
ತನು ಅಲ್ಲ. ಶ್ವೇತ ಪೀತ ಕಪೋತ ಷಡುವರ್ಣರಹಿತ । ನವಮಾಸ
ತುಂಬಿದ ಮೂರುತಿಯು ತಾನಲ್ಲ । ಅವಿರಳ ಲಿಂಗದ ಕಳೆಯು ಬೆಳಗು ತಾ
ಶರಣಾ ॥೧॥ ನಡೆಯು ಕಲಿವಲ್ಲಿ ನೋಡಿಕೆಯು ಹಂಗಿಗನಲ್ಲ । ನುಡಿಯ
ಸತಗರದಲಾದ ಬಿಂದು ತಾನಲ್ಲ ॥ ಪದುಮ ಪರಿಮಳಕೆರಗುವ ಭ್ರಮರತಾ
ನಲ್ಲ। ಭವದ ಕುಳವನು ಗೆದ್ದನಿಭ್ರಾಂತ ಶರಣಾ ॥೨॥ ಜಾಗ್ರ ಸ್ವಪ್ನ ಸುಷುಪ್ತಿ
ಯಾಗು ಆನುವಿಷನಲ್ಲ। ಆಗಮ ಕುಳದಲಾದ ಭೋಗಿ ತಾನಲ್ಲ ॥ ತೇಜಸ್ಸು
ರಂಜನೆಯಗಣಿತ ಗುಣಿತನು ಅಲ್ಲ। ಸಹಜ ನಿತ್ಯನುತಾನ ಭೇದ್ಯ ಶರಣಾ॥೩॥
ಬಿಂದುಕಳೆ ಸುಖದ ಸಂಪರ್ಕದವ ತಾನಲ್ಲ । ಒಂದು ಛಂದದಲಿ
ಕಂದಮೂಲವನು ಗೆಲಿದ ॥ ಸಂದಳಿದ ಸ್ವಯ ಸುಖವನೊಂದು ಮಾಡುತಲಿ
ತ್ರಿ । ಬಂಧ ಭೇದವ ಗೆಲಿದ ನಿಷ್ಕಾಮಿ ಶರಣಾ. ॥೪॥ ಚಂಪ್ರಭರನು ಅಲ್ಲ,
ಚಂಪ್ರಪೂರಿತನಲ್ಲ, ಇಂಪ್ರ ಚಾಪದ ಪರಿಪ್ರಭವ ತಾನಲ್ಲ । ಭೃಂಗನುಂಗಿದ
ರುಚಿಯನೊಂದು ಮಾಡಿದ ಗುಹೇಶ್ವರನೆಂಬ ಲಿಂಗದ ಹಂಗಿನ
ಶರಣಾ. ॥೫॥

ಇಂತು ಪ್ರಭುದೇವರು ಮರುಳುಶಂಕರದೇವರ ಶರಣತ್ವದ ಮಹಾ
ತ್ಮೆಯ ನಿರೂಪಿಸಿದ ಪ್ರಸ್ತಾವದ ವಚನದಲ್ಲಿ ಬಸವರಾಜದೇವರು ವಿನ್ನಹಿ
ಸಿದ ಪ್ರಸ್ತಾವದ ವಚನ. ॥

ಅಯ್ಯ ನಿಮ್ಮ ಶರಣರು ಪರಮ ಸುಖಿಗಳಯ್ಯ. ಅಯ್ಯ ನಿಮ್ಮ ಶರ
ಣರು ಕಾಯವೆಂಬ ಕರ್ಮಕ್ಕೆ ಹೊರ್ವಡೆ ನಿಃಕಾಮಿಗಳಯ್ಯ. ಅಯ್ಯ ನಿಮ್ಮ
ಶರಣರು ಮನದಲ್ಲಿ ನಿರ್ಲೇಪ ಜ್ಞಾನಿಗಳಯ್ಯ! ಕೂಡಲಸಂಗಮದೇವಯ್ಯ
ನಿಮ್ಮ ಶರಣರ ಘನವನೆನಗೆ ಹೇಳಲು ನಾನು ಕೇಳಲಮ್ಮದೆ ನಮೋ ನಮೋ
ಎನುತಿರ್ದನು ಕಾಣಾ ಪ್ರಭುವೆ. ॥೪೮॥

ಪುತ್ರಂ, ಅಯ್ಯ ನಿಮ್ಮ ಶರಣರ ನಿಲವ ಸ್ವರ್ಗ ಮರ್ತ್ಯ ಪಾತಾ
ಳಕ್ಕೆ ಬಲ್ಲವರಿಲ್ಲವಯ್ಯ! ಅಘಟಿತಘಟಿತರು ಅಖಂಡಿತ ಮಹಿಮರು.
ನಿಜದಲ್ಲಿ ನಿರ್ಲೇಪ ಭಾವಕರು. ಕೂಡಲ ಸಂಗಮದೇವ ನಿಮ್ಮ ಶರಣರ
ನಿಲವನರಿವಡೆ ನಾನೇತರವನಯ್ಯ? ॥೪೯॥

ಇಂತು ಮರುಳುಶಂಕರದೇವರ ಘನವನು ಪ್ರಭುದೇವರು ಬಸವ
ರಾಜದೇವರು ಆಶ್ಚರ್ಯಂಗೊಂಡು ಕೊಂಡಾಡುತ್ತಿರಲು, ಅಲ್ಲಿ ಚಿಕ್ಕದಣ್ಣ
ಯ್ಯಕರು, ವಿನ್ನೈಸಿದ ಪ್ರಸ್ತಾವದ ವಚನ. ॥

ಕಾಯವಳಿದರೇನು? ಕಾಯ ಉಳಿದರೇನು? ಕಾಯ ಬಯಲಾದ
ರೇನು? ಮನ ಮನ ಲಯವಾಗಿ ಘನಕ್ಕೆ ಘನವಾದ ಶರಣರ ಕಂಡಡೆ
ಕೂಡಲ ಚನ್ನಸಂಗನೆಂಬ ಶಬ್ದವ ಮುಗುದವಾಗಿರಬೇಕಲ್ಲದೆ ಜೋಡ್ಯಕ್ಕೆ
ಕಾರಣವೇನು ಹೇಳಾ ಸಂಗನಬಸವಣ್ಣಾ? ॥೫೦॥

ಮತ್ತಂ, ಆದಿಯಲ್ಲಿ ಹುಟ್ಟಿತ್ತಲ್ಲ. ಅನಾದಿಯಲ್ಲಿ. ಜೆಳೆಯಿತ್ತಲ್ಲ.
ಮೂರ್ತಿಯಲ್ಲಿ ನಿಂದುವಲ್ಲ. ಆ ಮೂರ್ತಿಯಲಿ ಭಾವಿಯಲ್ಲ. ಅರವಿನೊ
ಳಗೆ ಅರಿದುವಲ್ಲ.. ಮರಹಿನೊಳಗೆ ಮರೆದುವಲ್ಲ. ಎಂತಿರ್ದಂತೆ ಪರ
ಕ್ಕೆ ನೋಡಾ. ಮನಮನಲಿಯ್ಯವಾಗಿ ಘನಕ್ಕೆ ಘನ ಒಂದಾದರಿ
ಮತ್ತೆ ಮನಕ್ಕೆ ವಿಸ್ಮಯವ ಮಾಡಲುಂಟೆ? ಕೂಡಲ ಚನ್ನಸಂಗನ ಶರ
ಣು ಕಾಯವೆಂಬ ಕಂಥೆಯ ಕಳೆದು ಬಯಲಾದರೆ ನಿಜವೆಂದು ಪರಿ
ಣಾಮಿಸಬೇಕಲ್ಲದೆ ಅಂತಿಂತೆನಲುಂಟೆ ಸಂಗನಬಸವಣ್ಣಾ? ॥೫೧॥

ಇಂತೀ ಶ್ರೀಮತ್ಸಕಲಗಣ ಮುರಾತನಶ್ರೀ ಪ್ರಭುದೇವರು ಮಹಾ
ಮಹಿಮ ಸಂಗೋಷ್ಠಿಯಂ ಮಾಡಿದ ಶೂನ್ಯಸಂಪಾದನೆಯೊಳ್ ಮರು
ಳುಶಂಕರದೇವರ ಸಂಪಾದನೆಗಂ ಪಟ್ಟಸೋಪವೇರ ಸಮಾಪ್ತ ಮಂಗಳ
ಮಹಾ. ॥ ಶ್ರೀ. ಶ್ರೀ. ಶ್ರೀ.

ಬಸವೇಶ್ವರನ ಸಂಪಾದನೆ.

(ಸಪ್ತಮೋಪದೇಶ.)

ಕಂದ॥ ಆದಿಅನಾದಿಯ ಭೇದವ। ನಾದರದಿಂ ತೋರಿ ಜಂಗವ ಪ್ರಾಣತ್ವದ। ಹಾದಿಯನರುಹಿಸಿ ಪ್ರಭುವರ ವೇದಿನಿಯೊಳ್ ಬಸವರಾಜ ಗುಸುರ್ಮದ ವೇಳ್ದೆಂ॥

ಅವೆಂತೆಂದೊಡಾ ಪ್ರಭುದೇವರು ಮರುಳುಶಂಕರದೇವರಿಗೆ ನಿರವಯಲ ನಿಜಮುಂ ಅರುಹಲು ಆ ಮರುಳುಶಂಕರದೇವರು ನಿರವಯಲ ನೈವಲು, ಅಲ್ಲಿ ಚನ್ನಬಸವರಾಜದೇವರು ಮಡಿವಾಳಯ್ಯಗಳು ಹಡಪದಪ್ಪಣ್ಣಗಳು ಸೊಡ್ಡಳ ಬಾಚರಸರು ಕಿನ್ನರ ಬ್ರಹ್ಮಯ್ಯಗಳು ಮುಖ್ಯವಾದ ಸಮಸ್ತ ಪುರಾತನರೆಲ್ಲ ಆಶ್ಚರ್ಯಂಗೊಂಡು ಆ ಮರುಳುಶಂಕರದೇವರ ಘನವ ಕೊಂಡಾಡುತ್ತಿರಲು, ಆ ಮಹಾಗಣತಿಂಥಿಣಿಯ ಬಸವರಾಜದೇವರು ನೋಡಿ, ಹೃದಯಕಮಲವಲರಿ ಹಾರೈಸಿ ಪೂರೈಸಿ ಪರಮಾನಂದದಿಂ ಕುಣಿದಾಡುತ್ತಿರ್ದ ಪ್ರಸ್ಥಾವದ ವಚನ.॥

ಸಸಿಯ ಮೇಲೆ ಸಾಗರವು ಪರಿಯಂತಾಯಿತ್ತಯ್ಯ ಎನ್ನ ಭಕ್ತಿ. ಅನಂದದಿಂ ಕುಣಿಕುಣಿದಾಡುವೆ. ಆನಂದದಿಂ ನಲಿನಲಿದಾಡುವೆ. ಕೂಡಲಸಂಗನ ಶರಣರು ಬಂದರೆ ಉಬ್ಬಿ ಕೊಬ್ಬಿ ನಲಿನಲಿದಾಡುವೆ. ॥೧॥

ಮತ್ತಂ, ಅಯ್ಯ ನಿಮ್ಮ ಶರಣರ ಸಂಗಸುಖವನೇನೆಂದುಪಮಿಸುವೆನಯ್ಯ? ನಿಮ್ಮ ಶರಣರ ಕೂಡಿ ಸಮಗೋಷ್ಠಿಯ ಮಾಡುವದನುಪಮಿಸಲಮ್ಮೆನಯ್ಯ. ಕೂಡಲಸಂಗ ನಿಮ್ಮ ಪ್ರಮಥರೆಲ್ಲರು ನೆರೆದ ಗಣತಿಂಥಿಣಿಯೊಳಗೆನ್ನನೇನೆಂದರಿಯದೆ ಅಗಲದಂತಿರಿಸಯ್ಯ! ನಾ ನಿಮ್ಮ ಧರ್ಮವ ಕವಿಲೆ. ॥೨॥

ಮತ್ತಂ, ಅಯ್ಯ ನಿಮ್ಮ ಮಹಾನುಭಾವಿಗಳ ಸಂಗದಿಂದೆನ್ನ ತನು ಶುದ್ಧವಾಯಿತ್ತು. ಮನ ಶುದ್ಧವಾಯಿತ್ತು. ಎನ್ನ ಸರ್ವಾಂಗ ಶುದ್ಧವಾಯಿತ್ತು. ವಾರಿಕಲ್ಲು ಪುತ್ಥಳಿಯನಪ್ಪಿಕೊಂಡಂತಾಯಿತ್ತು. ಕೂಡಲಸಂಗಮದೇವ ನಿಮ್ಮ ಶರಣ ಪ್ರಭುದೇವರ ಕೃಪೆಯಿಂದ ಎನಗೊದವಿದ ಘನವಪಮೆನೆಂದುಪಮಿಸುವೆನು? ॥೩॥

ಹೀಗೆಂದು ಬಸವರಾಜದೇವರು ವಿನ್ನೈಸಲು, ಇದಕ್ಕೆ ಪ್ರಭುದೇವರು ನಿರೂಪಿಸಿದ ಪ್ರಸ್ಥಾವದ ವಚನ.॥

ಕಾಯಗೊಂಡು ಹುಟ್ಟಿದವರು ದೇವರಾದಡಾಗಲಿ, ಇವರಾದಾಗಲಿ, ಮಾಯೆಯ ಸಾಧಿಸಿ ಗೆಲುವುದರಿದು ನೋಡಾ. ಮನದ ತಮಂಧವ ಗೆಲಿದು ನೆನೆದು ಸುಖಿಯಾದಿಹೆನೆಂಬವರ ಬೆಂಬತ್ತಿ ಕಾಡಿತ್ತು ಕರ್ಮ. ಗುಹೇಶ್ವರಲಿಂಗವ ಕಿರಿಕಿರಿದಾಗಿ ನೆನೆವರೆ, ಹಿರಿಹಿರಿದಾಗಿ ಕಾಡುವದು ನೋಡಾ ಮರಹು. ಸಂಗನಬಸವಣ್ಣ ನೀ ನೆನೆದ ನೆನಹು ಅದರಂತಹವಲ್ಲ ನೋಡಾ. ॥೪॥

ಹೀಗೆಂದು ಪ್ರಭುದೇವರು ನಿರೂಪಿಸಲು, ಇದಕ್ಕೆ ಬಸವರಾಜದೇವರು ವಿನ್ನೈಸಿದ ಪ್ರಸ್ಥಾವದ ವಚನ.॥

ಕರಿ ಘನ ಅಂಕುರ ಕಿರಿದೆನ್ನಬಹುದೆ ಅಯ್ಯ? ಗಿರಿ ಘನ ವಜ್ರ ಕಿರಿದೆನ್ನಬಹುದೆ ಅಯ್ಯ? ತಮಂಧ ಘನ ಜ್ಯೋತಿ ಕಿರಿದೆನ್ನಬಹುದೆ ಅಯ್ಯ? ಮರಹು ಘನ ನಿಮ್ಮ ನೆನಹು ಕಿರಿದೆನ್ನಬಹುದೆ ಅಯ್ಯ? ಕೂಡಲಸಂಗಮದೇವ ನಿಮ್ಮ ಕೃಪೆಯ ಘನವ ನೀವೆ ಬಲ್ಲಿರಿ. ॥೫॥

ನಿಮ್ಮ ಸ್ಮರಣೆಯ ಘನದ ಮುಂದೆ ಮಾಯೆ ನಿಲಲರಿಯದು; ನಿಮ್ಮ ನೆನಹು ಮಿಗಿಲುವ ಘನವಿಲ್ಲೆಂದು ಬಸವರಾಜದೇವರು ವಿನ್ನೈಸಲು, ಇದಕ್ಕೆ ಪ್ರಭುದೇವರು ನಿರೂಪಿಸಿದ ಪ್ರಸ್ಥಾವದ ವಚನ.॥

ನೆನೆದಿಹೆನೆಂದರೆ ಮನಕ್ಕೆ ನಿಲುಕದು. ಅರಿದಿಹೆನೆಂದರೆ ಕುರುಹಿಗೆ ಬಾರದು. ಕಂಡಿಹೆನೆಂದರೆ ಮೂರ್ತಿ ಅಲ್ಲ. ತನುವಿನೊಳಗಿಲ್ಲ. ಮನದೊಳಗಿಲ್ಲದ ಘನವು ನಿಮ್ಮ ಮನಕ್ಕೆ ವೇದ್ಯವಾದ ಪರಿ ಎಂತಯ್ಯ? ಗುಹೇಶ್ವರನೆಂಬ ಲಿಂಗವು ಜಗದ ಕಣ್ಣಿಂಗೆ ಕತ್ತಲೆಯ ಕವಿಸಿ ತಪ್ಪಿಸಿಕೊಂಡಿಪ್ಪ ಭೇದ ನಿನ್ನೊಳಗಡಗಿದ ಪರಿ ಎಂತು ಹೇಳಾ ಸಂಗನಬಸವಣ್ಣಾ? ॥೬॥

ವಾಙ್ಮನಾತೀತವಾದ ವಸ್ತು ನಿನ್ನ ಮನದೊಳಗಡಗಿದ ಪರಿ ಎಂತೆಂದು ಪ್ರಭುದೇವರು ಬೆಸಗೊಳಲು, ಅಲ್ಲಿ ಬಸವರಾಜದೇವರು ವಿನ್ನೈಸಿದ ಪ್ರಸ್ಥಾವದ ವಚನ.॥

ಜಗವಸುತ್ತಿಪ್ಪುದು ನಿಮ್ಮ ಮಾಯೆಯಯ್ಯ. ನಿಮ್ಮ ಸುತ್ತಿಪ್ಪುದು ಎನ್ನ ಮನ ನೋಡಯ್ಯ. ನೀನು ಜಗಕ್ಕೆ ಬಲ್ಲಿದನು. ನಿನಗೆ ನಾನು ಬಲ್ಲಿ

ವನು ಕಂಡಯ್ಯ. ಕಂಯು ಕನ್ನಡಿಯೊಳಗಡಗಿವಂತೆ. ಎನ್ನೊಳಗಡಗಿವಿ ಕೂಡಲಸಂಗಮದೇವಾ. ॥೬॥

ನೀನು ಮಹಾ ಘನ ಪರತತ್ವವಾದುದೇನು? ಎನ್ನ ಸೂಕ್ಷ್ಮವಪ ಅಂತರಂಗದೊಳಗೆ ಅಡಗಿದ್ದಿರೆಂದು ಬಸವರಾಜದೇವರು ಬಿನ್ನೈಸಲು ಇದಕ್ಕೆ ಪ್ರಭುದೇವರು ನಿರೂಪಿಸಿದ ಪ್ರಸ್ಥಾವದ ವಚನ. ॥

ಅಂತರಂಗವಲ್ಲಿ ಅಡಗಿತ್ತೆಂದರೆ ಭಾವಕ್ಕೆ ಪೂಜ್ಯವಿಲ್ಲ. ಬಹಿರಂಗವಲ್ಲಿ ಅಡಗಿತ್ತೆಂದರೆ ಕ್ರಿಯಾಬದ್ಧನಲ್ಲ. ಅರುಹಿನೊಳಗಡಗಿತ್ತೆಂದರೆ ಮತಿಗೆ ಹವಣಿಲ್ಲ. ಭಾವ ನಿರ್ಭಾವ ನಿಃಶೂನ್ಯವನು. ಕಾಂಬ ಪರಿ ಎಂತು ಹೇಳಾ? ಕಂಡು ತನ್ನೊಳಗಿಂಬಿಟ್ಟುಕೊಂಬ ಪರಿ ಎಂತು ಹೇಳಾ? ಗುಹೇಶ್ವರನೆಂಬ ಲಿಂಗವನರಿದು ಕೂಡಿ ಸುಖಿಯಹ ಪರಿ ಎಂತು ಹೇಳಾ ಸಂಗನಬಸವಣ್ಣಾ? ॥೮॥

ಹೀಗೆಂದು ಪ್ರಭುದೇವರು ನಿರೂಪಿಸಲು, ಇದಕ್ಕೆ ಬಸವರಾಜದೇವರು ಬಿನ್ನೈಸಿದ ಪ್ರಸ್ಥಾವದ ವಚನ. ॥

ಎನ್ನ ತನುಮನವೆಂಬೆರಡನು ಗುರುಕಳೆದು ಏಕವ ಮಾಡಿದನಾಗಿ ಎನ್ನಂತರಂಗ ಬಹಿರಂಗವೆಂಬೆರಡು ನಿಮ್ಮವು ನೋಡಾ! ನಿಮ್ಮಂತರಂಗದೊಳಗೆ ನಿಮ್ಮನಿಂಬಿಟ್ಟುಕೊಂಬೆ. ನಿಮ್ಮ ಬಹಿರಂಗವಲ್ಲಿ ನಿಮ್ಮ ನೀವಾಗಿ ಪೂಜಿಸುವೆನು. ನಿಮ್ಮ ಅರಿವಿನಿಂದ ನಿಮ್ಮನೆ ಅರಿವೆನು ಕಾಣಾ ಕೂಡಲಸಂಗಮದೇವಾ. ॥೯॥

ಇಂತು ಬಸವರಾಜದೇವರು ಬಿನ್ನೈಸಲು ಪ್ರಭುದೇವರು ನಿರೂಪಿಸಿದ ಪ್ರಸ್ಥಾವದ ವಚನ. ॥

ಸಂಗದಿಂದಾಯಿತ್ತು ತನು. ಆ ತನುವಿನಿಂದಾಯಿತ್ತು ಮರವೆ. ಆ ಮರವೆಯಿಂದಾಯಿತ್ತು ನೋಡಾ ನಾ ನೀನೆಂಬುದು. ನೀನೆಂಬ ಬಹಿರಂಗವಂತಿರಲಿ. ನಾನೆಂಬ ಅಂತರಂಗವಂತಿರಲಿ. ಉಭಯ ಲಾಭವಲ್ಲದೆ ನಿನ್ನಿಂದ ನೀನರಿದಿಹೆನೆಂಬುದು ವಿಪರೀತ ಭಾವ. ಈ ಅರಿವು ಮರವೆಯಾಟದ ಭ್ರಾಂತು ಬಿಡದು. ಗುಹೇಶ್ವರ ಲಿಂಗವು ನಿನ್ನಲ್ಲಿ ಸಿಂತ ಪರಿ ಎಂತು ಹೇಳಾ ಸಂಗನಬಸವಣ್ಣಾ? ॥೧೦॥

ಹೀಗೆಂದು ಪ್ರಭುದೇವರು ನಿರೂಪಿಸಲು, ಇದಕ್ಕೆ ಬಸವರಾಜದೇವರು ಬಿನ್ನೈಸಿದ ಪ್ರಸ್ಥಾವದ ವಚನ. ॥

ಮರುಳು ತಲೆ ಹೊರುಳು ತಲೆ ನೀನೆ ದೇವಾ. ಹೆಂಗಸು ಗಂಡಸು ನೀನೆ ದೇವಾ. ಎನ್ನುಕ್ಷನ ಗಂಡ ನೀನೆ ದೇವಾ, ಕೂಡಲ ಸಂಗಮದೇವ ಭ್ರಾಂತಳಿದ ಭಾವವು ನೆಲೆಗೊಂಡಿತ್ತಾಗಿ. ॥೧೧॥

ಇನ್ನರಿವು ಮರವೆಯು ಎನ್ನ ಶಕ್ತಿ ಶಿವಾತ್ಮತತ್ವವು ನೀವೆ ಅಲ್ಲವೆ ಅನ್ಯರಿಲ್ಲ. ಎನ್ನ ಸುಜ್ಞಾನ ಶಕ್ತಿಯಲ್ಲಿ ಲಿಂಗೋಪಭೋಗಿಯಾಗಿ ನೀನಲ್ಲದನ್ಯರಿಲ್ಲ. ಎನ್ನ ಭ್ರಾಂತಳಿದ ಭಾವವು ನೀವಲ್ಲದೆ ಇಲ್ಲವೆಂದು ಬಸವರಾಜದೇವರು ಬಿನ್ನೈಸಲು, ಇದಕ್ಕೆ ಪ್ರಭುದೇವರು ನಿರೂಪಿಸಿದ ಪ್ರಸ್ಥಾವದ ವಚನ. ॥

ಅಜ್ಞಾನ ಸುಜ್ಞಾನಗಳೆರಡರಿವನೆಂದರೆ ಶಿವಜ್ಞಾನಿಗಳು ಮುಚ್ಚುವರೆ? ಶಿವಶಕ್ತಿಗಳೆರಡು ನೀನೆ ಎಂದರೆ ಮಹಾನುಭಾವಿಗಳು ಪರಿಣಾಮಿಸುವರೆ? ತನ್ನ ತಾನಾರೆಂಬುದನರಿಯದೆ ಅನ್ಯವಿಲ್ಲವು. ಜೊನ್ನವೆಂಬ ಈ ಕರ್ಮದ ನುಡಿಯ ಮುಚ್ಚುವರೆ ನಮ್ಮ ಗುಹೇಶ್ವರ ಲಿಂಗವು? ॥೧೨॥

ಹೀಗೆಂದು ಪ್ರಭುದೇವರು ನಿರೂಪಿಸಲು, ಇದಕ್ಕೆ ಬಸವರಾಜದೇವರು ಬಿನ್ನೈಸಿದ ಪ್ರಸ್ಥಾವದ ವಚನ. ॥

ಅರಿವು ಬಿಡಿದು, ಅರಿವ ನರಿದು. ಅರಿವೆ ನೀನೆಂಬ ಭ್ರಾಂತು ಎನಗಿಲ್ಲವಯ್ಯ! ಮರಹು ಬಿಡಿದು ಮರಹ ಮರೆದು, ಮರಹು ನೀನೆಂಬ ನುರಹಿನವ ನಾನಲ್ಲವಯ್ಯ. ದೇಹ ಪ್ರಾಣಂಗಳ ಹಿಂಗಿ ದೇಹವಿಡಿದು ದೇಹ ನಿಮ್ಮದೆಂಬ ಭ್ರಾಂತು ಸಾವತಕಿ ನಾನಲ್ಲಯ್ಯ! ನಿನ್ನ ಅರಿವ ಅರಿವ ಭಿನ್ನ ವಿಟ್ಟ ಕಂಡೆನಾದರೆ ನಿಮ್ಮಾಣೆ ಕಾಣಾ ಕೂಡಲಸಂಗಮದೇವಾ. ॥೧೩॥

ಈ ವಚನದ ತಾತ್ಪರ್ಯವ ಕೇಳಿದ ಪ್ರಭುದೇವರು ದೇವಭಕ್ತನೆಂಬ ನಾಮಂಗಳೆರಡು ನಿಮ್ಮಲ್ಲಿ ತೋರುತ್ತ ಇವ್ವಾವೆ. ಇವು ಬಡಗನ ಪರಿ ಹೇಗೆಂದು ಬೆಸಗೊಂಬ ಪ್ರಸ್ಥಾವದ ವಚನ. ॥

ಕಾಯವಿಡಿದು ಲಿಂಗವಿದೆ. ಲಿಂಗವಿಡಿದು ಕಾಯವಿದೆ. ಅರಿವನಿಡಿದು ವಚನವಿದೆ. ವಚನವಿಡಿದು ತೋರುವ ಅರಿವಿದೆ. ಲಿಂಗಾಂಗವೆರಡು ನಿಮ್ಮಲ್ಲಿ ಐಕ್ಯವಾವ ಪರಿ ಎಂತುಟು ಹೇಳಾ? ಸ್ವರವಿಡಿದು ಶಬ್ದ ಸಮರಸವಾವ ಪರಿ ಎಂತು ಹೇಳಾ? ದೇವ ಭಕ್ತನೆಂಬ ನಾಮ ನೀಮೆ ಬಡಗಿ ಗುಹೇಶ್ವರ ಲಿಂಗದಲ್ಲಿ ತದ್ಗತವಾಗಿರ್ದ ಪರಿ ಎಂತು ಹೇಳಾ ಸಂಗನಬಸವಣ್ಣಾ? ॥೧೪॥

ಹೀಗೆಂದು ಪ್ರಭುದೇವರು ನಿರೂಪಿಸಲು, ಇದಕ್ಕೆ ಬಸವರಾಜದೇವರು ಬಿನ್ನೈಸಿದ ಪ್ರಸ್ತಾವನ ವಚನ. ॥

ಘನ ಗಂಭೀರ ಮಹಘನದೊಳಗೆ ಘನಕ್ಕೆ ಘನವಾಗಿರ್ದನಯ್ಯ! ಕೂಡಲ ಸಂಗಯ್ಯನೆಂಬ ಬೆಳಗಿನೊಳಗೆ ಬೆಳಗಾಗಿರ್ದು, ಶಬ್ದಮುಗ್ಧವಾಗಿರ್ದುದನೇನೆಂಬೆನಯ್ಯ. ॥೧೫॥

ಹೀಗೆಂದು ಬಸವರಾಜದೇವರು ಬಿನ್ನೈಸಲು, ಇದಕ್ಕೆ ಪ್ರಭುದೇವರು ಪ್ರಸನ್ನರಾಗಿ ಆ ಬಸವಣ್ಣನ ಸ್ತೋತ್ರವುಂ ಮಾಡುವ ಪ್ರಸ್ತಾವನ ವಚನ. ॥

ಉದಿಯ ಲಿಂಗವ ತೋರಿವ ಅನುಮಿಷನ ಕಂಡೆನಯ್ಯ ಇಂದು. ಕೃತಯುಗದ ಸ್ಕಂದನೆಂಬ ಗಣೇಶ್ವರನ ಕಂಡೆನಯ್ಯ ಇಂದು. ತ್ರೇತಾಯುಗದ ನೀಲಲೋಹಿತನೆಂಬ ಗಣೇಶ್ವರನ ಕಂಡೆನಯ್ಯ ಇಂದು. ದ್ವಾಪರಯುಗದ ವೃಷಭನೆಂಬ ಗಣೇಶ್ವರನ ಕಂಡೆನಯ್ಯ ಇಂದು. ಕಲಿಯುಗದಲ್ಲಿ ಅನುಮಿಷನೆಂಬ ಗಣೇಶ್ವರನ ಕಂಡೆನಯ್ಯ ಇಂದು. ಎನ್ನ ಕಂಡವರನು ಇಂದು ಕಂಡೆ ಕಾಣಾ ಗುಹೇಶ್ವರಾ. ॥೧೬॥

ಇಂತು ಪ್ರಭುದೇವರು ಬಸವರಾಜದೇವರ ಸ್ತೋತ್ರವುಂ ಮಾಡಲು, ಆ ಬಸವರಾಜದೇವರು ಆ ಪ್ರಭುದೇವರ ಸ್ತೋತ್ರವುಂ ಮಾಡುವ ಪ್ರಸ್ತಾವನ ವಚನ. ॥

ಮರುಗದ ಗಿಡುವಿನಂತೆ, ಹುಟ್ಟುತ್ತವೆ ಪರಿಮಳ. ಎರಪಿನ ಬಣ್ಣ ದೊರೆಗೆಡಸಿದ ಪರಿಯ ನೋಡಾ! ಹರನ ಪ್ರೇರಣೆಯೊಳಗೆ ಹಿರಿದೊಂದು ವಾರುಧಿ, ವಾರುಧಿಯೊಳಗಣ ಕಮಲ ಬಾಡಿ, ಕಮಲದೊಳಗೆ ಸುಳಿವ ಭ್ರಮರನ ಪಕ್ಕವ ಮುರಿದು ಉಳಿದರೆ ನಿರಂಜನವಾಯಿತ್ತು ನೋಡಾ! ಹರಿಗೊಯಿದ ಮಿಂಚಿನ ಗೊಂಚಲ ನೆರಿ ಓತು ಇಂದು ಕೋಟಿ ಪ್ರಳಯ ಕಾಂತಿಯನೊಳಕೊಂಡಂತೆ ಕೂಡಲಸಂಗಮದೇವರ ನೆರಿ ಓತು ಪ್ರಭುದೇವರ ಶ್ರೀಪಾದಪದ್ಮದಲ್ಲಿ ಭೃಂಗನಾಗಿ ಬದುಕಿದೆನು. ॥೧೭॥

ಹೀಗೆಂದು ಬಸವರಾಜದೇವರು ಸ್ತೋತ್ರವುಂ ಮಾಡುತ್ತಿರಲು, ಇದಕ್ಕೆ ಪ್ರಭುದೇವರು ಆ ಬಸವರಾಜದೇವರ ಕೊಂಡಾಡಿ ನಿರೂಪಿಸಿದ ಪ್ರಸ್ತಾವನ ವಚನ. ॥

ಆಯಿತ್ತು ಬಸವ ನಿನ್ನಿಂದ ಗುರುಸ್ಥಾಯಿತವೆನಗೆ. ಆಯಿತ್ತು ಬಸವ ನಿನ್ನಿಂದ ಲಿಂಗಸ್ಥಾಯಿತವೆನಗೆ. ಆಯಿತ್ತು ಬಸವ ನಿನ್ನಿಂದ ಜಂಗಮ

ಸ್ಥಾಯಿತವೆನಗೆ. ಆಯಿತ್ತು ಬಸವ ನಿನ್ನಿಂದ ಪ್ರಸಾದ ಸ್ಥಾಯಿತವೆನಗೆ. ಚತುರ್ವಿಧ ಸ್ಥಾಯಿತವನು ನೀನೆ ಮಾಡಿದೆಯಾಗಿ, ನಮ್ಮ ಗುಹೇಶ್ವರಲಿಂಗಕ್ಕೆ ವಿಳಾಸವಾದೆ ಎಲೈ ಸಂಗನಬಸವಣ್ಣಾ. ॥೧೮॥

ಇಂತು ಪ್ರಭುದೇವರು ಬಸವರಾಜದೇವರಿಂದೆ ಸರ್ವಸ್ಥಾಯಿತವ ಪಡೆದು, ಕೃತಾರ್ಥನಾದೆನೆಂದು ಆ ಬಸವರಾಜದೇವರೊಡನೆ ನಿರೂಪವ ಮಾಡಲು, ಇದಕ್ಕೆ ಬಸವರಾಜದೇವರು ನಾನು ನಿಮ್ಮಿಂದ ಸರ್ವವನು ಅರಿದೆನೆಂದು ಬಿನ್ನಹಂ ಮಾಡುವ ಪ್ರಸ್ತಾವನ ವಚನ. ॥

ಅಯ್ಯ ನಿಮ್ಮ ಮುಟ್ಟಿದ ಗುಣದಿಂದಲಾನು ಸಂಗನಬಸವಣ್ಣನಾಗಿ ಗುಹೇಶ್ವರನ ಶರಣನ ಮಹಾ ಬಸಿರೊಳಗೆ ಕಂದನಾಗಿರ್ದೆ ಕಾಣಾ ಕೂಡಲಸಂಗಮದೇವ. ॥೧೯॥

ಹೀಗೆಂದು ಬಸವರಾಜದೇವರು ಬಿನ್ನೈಸಲು, ಇದಕ್ಕೆ ಪ್ರಭುದೇವರು ಗುರುಲಿಂಗಜಂಗಮಸ್ವರೂಪವೆಂಬ ಮಹಾಘನವನು ಎನಗೆ ಕರತಳಾಮಳಕವ ಮಾಡಿ ನೀವೆ ತೋರಿಸಿಕೊಟ್ಟಿರೆಂದು ನಿರೂಪಿಸಿದ ಪ್ರಸ್ತಾವನ ವಚನ. ॥

ಗುರು ಒಂದೇ ಬಸಿರು, ಲಿಂಗ ಒಂದೇ ಬಸಿರು, ಜಂಗಮ ಒಂದೇ ಬಸಿರು, ಪ್ರಸಾದ ಒಂದೇ ಬಸಿರು. ಇವನಾರಯ್ಯ! ತ್ರಿಮಲೋಕ್ಯವ ಮಾಡಿ ತೋರಿದವರು ಇವನಾರಯ್ಯ? ಪ್ರಜ್ವಲಿತವ ಮಾಡಿ ಬೇರೆ ಬೇರೆ ಕರತಳಾಮಳಕವ ಮಾಡಿ ತೋರಿದವರು ಪೂರ್ವಾಚಾರಿ ಭಕ್ತಿಭಂಡಾರಿ ಬಸವಣ್ಣ ನೀನೆ ಗುಹೇಶ್ವರ ಲಿಂಗವ ತೋರಿದೆಯಾಗಿ ಲೋಕಾವಿಲೋಕವಿಲ್ಲದಾಯಿತ್ತು ಕಿಂಚಿತ್ತು. ॥೨೦॥

ಹೀಗೆಂದು ಪ್ರಭುದೇವರು ನಿರೂಪಿಸಲು, ಇದಕ್ಕೆ ಬಸವರಾಜದೇವರು ಬಿನ್ನೈಸಿದ ಪ್ರಸ್ತಾವನ ವಚನ. ॥

ಎನ್ನ ಅಂತರಂಗದೊಳಗೆ ಅರಿವಾಗಿ, ಎನ್ನ ಬಹಿರಂಗದೊಳಗೆ ಆಚಾರವಾಗಿ, ನೀನೆಡೆಗೊಂಡು ಎನ್ನ ಮನದೊಳಗೆ ಘನ ಸೆನಹಾಗಿ ಮೂರ್ತಿಗೊಂಡು, ಗುರುಸ್ಥಲ ಲಿಂಗಸ್ಥಲ ಜಂಗಮಸ್ಥಲ ಪ್ರಸಾದಿಸ್ಥಲವೆಂಬ ಚತುರ್ವಿಧವನು ಎನಗೆ ಸ್ಥಾಯಿತವ ಮಾಡಿ, ತೋರಿ ಪ್ರಾಣಲಿಂಗವೆಂಬ ಪಾವಿಯ ಸೆರಗ ತೋರಿಸಿ ಎಲ್ಲ ಅಸಂಖ್ಯಾತರನು ಪಾವನವ ಮಾಡಿಯಾಗಿ ಕೂಡಲಸಂಗಮದೇವ ನಿಮ್ಮಿಂದ ಸಕಲ ಸನುಮತವ ನಾನರಿದೆನಲ್ಲದೆ, ಎನ್ನಿಂದ ನೀನಾದೆನೆಂಬುವ ನಿಮ್ಮ ಪ್ರಮಥರು ಮೆಚ್ಚರು ಕಾಣಯ್ಯ. ॥೨೧॥

ಇವಕ್ಕೆ ಪ್ರಭುದೇವರು ಕೊಟ್ಟ ಪ್ರತ್ಯುತ್ತರ. ॥

ಆದಿಯ ಲಿಂಗ ನಿನ್ನಿಂದ ಎನಗಾಯಿತ್ತು. ಅನಾದಿಯ ಜ್ಞಾನ ನಿ
ನೆನೆವಡೆನಗಾಯಿತ್ತು. ನಿನ್ನ ಕೃಪೆಯಿಂದ ಪ್ರಾಣಲಿಂಗವೆಂದರಿದೆನೆಂಬು
ನಿಮ್ಮ ಪ್ರಮಥರೆ ಬಲ್ಲರು. ಗುಹೇಶ್ವರ ಸಾಕ್ಷಿಯಾಗಿ, ಸಂಗನಬಸವ
ನಿಮ್ಮ ಪ್ರಸಾದವ ಶಿಸು ನಾನು ನೋಡಯ್ಯ. ॥೨೫॥

ಹೀಗೆಂದು ಪ್ರಭುದೇವರು ನಿರೂಪಿಸಲು, ಅದಕ್ಕೆ ಬಸವರಾಜದೇ
ವರು ಬಿನ್ನೈಸಿದ ಪ್ರಸ್ತಾವದ ವಚನ. ॥

ಆದಿಯ ಭಕ್ತ, ಅನಾದಿಯ ಜಂಗಮ, ಆದಿಶಕ್ತಿ ಅನಾದಿಶಿವನ
ನೋಡಾ! ಎನ್ನ ಆದಿಯ ಪಿಂಡಕ್ಕೆ ನೀನೆ ಆಧಾರವಾಗಿ ತೋರಿದರೆ ನಿಮ್ಮ
ಹೃದಯ ಕಮಲದಲ್ಲಿ ನಿಮ್ಮ ಕಂಡೆನು. ಆ ಕಾಂಬ ಜ್ಞಾನವೆ ಜಂಗಮ.
ಜಂಗಮವ ಹಿಡಿದಲ್ಲದೆ ಲಿಂಗವ ಕಾಣಬಾರದು. ಆ ಜಂಗಮವ ಹಿಡಿದಲ್ಲದೆ
ಗುರುವ ಕಾಣಬಾರದು. ಆ ಜಂಗಮವ ಹಿಡಿದಲ್ಲದೆ ಪ್ರಸಾದವ ಕಾಣ
ಬಾರದು. ಕಾಯ ಭಕ್ತ ಪ್ರಾಣವೆ ಜಂಗಮ ಎಂಬ ವಚನವ ತಿಳಿಯಲು,
ಎನ್ನ ಪ್ರಾಣ ನೀವಲ್ಲದೆ ಮತ್ತಾರು ಹೇಳಯ್ಯ? ಇದುಕಾರಣ ನಿಮ್ಮ
ಘನವ ಕಿರಿದು ಮಾಡಿ, ಎನ್ನನೊಂದು ಘನವ ಮಾಡಿ ನುಡಿವಿರಿ ಕೂಡಲ
ಸಂಗಮದೇವಾ. ॥೨೬॥

ಹೀಗೆಂದು ಬಸವರಾಜದೇವರು ಬಿನ್ನೈಸಲು, ಇದಕ್ಕೆ ಪ್ರಭುದೇ
ವರ ಪ್ರತ್ಯುತ್ತರ. ॥

ಆದಿ ಜಂಗಮ ಅನಾದಿ ಭಕ್ತನೆಂಬುದನಾರು ಬಲ್ಲರು ಹೇಳಾ ಬಸ
ವಣ್ಣ? ನಿತ್ಯ ನಿರಾಕಾರ ಘನವು ಶಕ್ತಿ ಇಲ್ಲದೆ ಇದ್ದರೆ ಆಗಳಿ ಬಯಲು
ಹುದೆಂದು ನೀನು ಘನ ಚೈತನ್ಯವೆಂಬ ಕಾಯವ ಧರಿಸಿದರೆ, ಆ ಬಯಲು
ಪರಬ್ರಹ್ಮವೆಂಬ ನಾಮವನೈದಿತ್ತು ನೋಡಾ! ಮಹಾಘನವು ತನ್ನ ವಿನೋ
ದದಿಂದ ಸಾಕಾರವನೈದಿದರೆ ಧರ್ಮವೆಂಬ ಕಾಯವ ಧರಿಸಿ, ಆ ಮೂರ್ತಿಗೆ
ಆಧಾರವಾದಿಯಾಗಿ ಜಗದಕರ್ತ ಶಿವನೆಂಬ ನಾಮವಾಯಿತ್ತಲ್ಲ ಬಸವಣ್ಣ!
ನಿನ್ನಿಂದ ಜಂಗಮವೆ ಲಿಂಗವೆಂದು ನೀ ಭಾವಿಸಲಾಗಿ ನಿನ್ನ ಸನ್ನಿಧಿ
ಯಿಂದ ಪ್ರತಿನಿಧಿಯಾಯಿತ್ತು ನೋಡಾ ಬಸವಣ್ಣ! ಲಿಂಗವನು ನೀನು
ಹಿಡಿದು ಪೂಜಿಸಲಾಗಿ ಪೆಸರುವಡೆಯಿತ್ತು ನೋಡಾ ಬಸವಣ್ಣ! ಪ್ರಸಾ
ದವ ನೀನು ಕೊಂಡು ಪಥವ ತೋರಿದೆಯಾಗಿ, ಪ್ರಸಾದವು ನಿನ್ನಿಂದ
ಪೆಸರಾಯಿತ್ತು ನೋಡಾ ಬಸವಣ್ಣ! ಇದುಕಾರಣ ನೀನೆ ಅನಾದಿಭಕ್ತ,

ನಾನೆ ಅನಾದಿಯಿಂದತ್ತತ್ತ. ನೀನು ಮಾಡಲಾಗಿ ಅನಾದಿಸೆಂಬುದ ನಮ್ಮ
ಗುಹೇಶ್ವರ ಬಲ್ಲ ಕಾಣಾ ಸಂಗನಬಸವಣ್ಣ. ॥೨೪॥

ಹೀಗೆಂದು ಪ್ರಭುದೇವರು ನಿರೂಪಿಸಲು, ಇದಕ್ಕೆ ಬಸವರಾಜ
ದೇವರು ಬಿನ್ನೈಸಿದ ಪ್ರಸ್ತಾವನ ವಚನ. ॥

ಜಂಗಮನೆ ಜ್ಞಾನರೂಪು. ಭಕ್ತನೆ ಆಚಾರರೂಪೆಂಬುದು ತಪ್ಪದು
ನೋಡಾ ಅಯ್ಯ! ನಾನು ನಿಮ್ಮಲ್ಲಿ ಆಚಾರಿಯಾಗಬೇಕಯ್ಯ ಜ್ಞಾನವಿ
ಲ್ಲದನ್ನಕ್ಕರ? ತಲೆ ಇಲ್ಲದ ಮುಂಡದಂತೆ. ಜ್ಞಾನ ಉಯುವಾಗದ ಮುನ್ನವೆ,
ತರಿದೋರುವ ಆಚಾರ ಉಂಟೆ ಜಗದೊಳಗೆ? ಜ್ಞಾನದಿಂದೆ ಆಚಾರ,
ಜ್ಞಾನದಿಂದೆ ಅನುಭಾವ, ಜ್ಞಾನದಿಂದೆ ಪ್ರಸಾದವಲ್ಲದೆ, ಜ್ಞಾನವನುಳಿದು
ತೋರುವ ಘನವ ಕಾಣೆನು. ಎನ್ನ ಆಚಾರಕ್ಕೆ ನೀನು ಜ್ಞಾನರೂಪಾದ
ಕಾರಣ ಸಂಗನಬಸವಣ್ಣನೆಂಬ ಪೆಸರಾದೆನು. ಅನಾದಿಪರಶಿವನು
ನೀನೆಯಾಗಿ, ಘನಚೈತನ್ಯಾತ್ಮಕನೆಂಬ ಮಹಾಜ್ಞಾನವು ನೀನೆಯಾದೆಯಲ್ಲದೆ,
ನಾನೆತ್ತ ಶಿವತತ್ವವೆತ್ತವಯ್ಯ ಕೂಡಲಸಂಗಮದೇವರು ಸಾಕ್ಷಿಯಾಗಿ.
ನಾನು ಪ್ರಭುದೇವ ತೊತ್ತಿನ ಮಗನೆಂಬುದ ಮೂರುಲೋಕವೆಲ್ಲವು
ಬಲ್ಲವು ಕಾಣಾ ಪ್ರಭುವೆ. ॥೨೫॥

ಹೀಗೆಂದು ಬಸವರಾಜದೇವರು ಬಿನ್ನೈಸಲು, ಇವಕ್ಕೆ ಪ್ರಭುದೇ
ವರು ಪ್ರಸನ್ನರಾಗಿ ನಿರೂಪಿಸಿದ ಪ್ರಸ್ತಾವದ ವಚನ. ॥

ತನು ದಾಸೋಹ. ಉಪಯವಂಗಳೆಲ್ಲವು ಆಚಾರ. ಮನಪವನ ಪ್ರಾಣ
ವೆಂಬುದೆಲ್ಲ ಅರುಹಿನ ಮೂರ್ತಿ ನೋಡಾ! ಒಳಗು ಹೊರಗು ಹೊರ
ಸೊಕಗೆಂಬುದನರಿಯದ ಸತ್ಕ್ರಿಯಾಚಾರಿ ನೀನು. ನಿನ್ನಳವರಿಯಲಾನೇ
ತರವನಯ್ಯ? ಎನ್ನಂತರಂಗದಲ್ಲಿ ಅರಿವುಂಟಾದರೇನು? ಎನ್ನ ಕಾಯ
ದಲ್ಲಿ ಭಕ್ತಿ ಸ್ವಾಯತವಿಲ್ಲ. ಆಚಾರವೆಂಬುದತ್ತಲಿಲ್ಲ. ಸರ್ವಾಚಾರ
ಸಂಪನ್ನ ನಿನ್ನಳವ ನಾನೆತ್ತ ಬಲ್ಲೆನಯ್ಯ ಗುಹೇಶ್ವರ ಸಾಕ್ಷಿಯಾಗಿ? ನಿನ್ನ
ಮಹಾಮನೆಯ ಕಾವಲ ಬಂಟ ನಾನೆಂಬುವ ನಿಮ್ಮ ಪ್ರಮಥರೆಲ್ಲರು
ಬಲ್ಲರು ಕಾಣಾ ಸಂಗನಬಸವಣ್ಣ. ॥೨೬॥

ಹೀಗೆಂದು ಪ್ರಭುದೇವರು ನಿರೂಪಿಸಲು ಇದಕ್ಕೆ ಬಸವರಾಜದೇವರು
ಬಿನ್ನೈಸಿದ ಪ್ರಸ್ತಾವದ ವಚನ. ॥

ನಿಮ್ಮ ಕಂಡು ಕೈಮುಗಿದು ನಿಮಗೆ ಭಕ್ತನಾದೆನಲ್ಲದೆ ನಿನ್ನ ಕಾಣ
ದರೆ ಭಕ್ತಿಯುಂಟೆ ಅಯ್ಯ? ನಿಮ್ಮ ಮುಟ್ಟಿ ಪೂಜಿಸಿ, ಆಚಾರಿಯಾದೆ

ನಲ್ಲವೆ ನಿಮ್ಮ ಮುಟ್ಟಿದೊಡೆ ನನಗೆ ಅಚಾರವೆಲ್ಲಿಯದಯ್ಯ. ನಿಮ್ಮ ಘನವನು ಮನವಲ್ಲಿ ನೆನೆದು ಧರಿಸಿದ ಕಾರಣ ಜ್ಞಾನೋದಯವಾಯಿತ್ತಲ್ಲದೆ, ನೀವಿಲ್ಲದಡೆ ಎನಗೆ ಜ್ಞಾನವೆಲ್ಲಿಹುದಯ್ಯ? ಇಂತು ಅವ ಮುಖದಲ್ಲಿಯು ಎನ್ನನಾಗು ಮಾಡಲೆಂದು ನೀನು ಮುಂದುಗೊಂಡಿರ್ದ ಕಾರಣ ನಿನ್ನ ಸನ್ನಿಧಿಯಲಾನು ಸದಾಚಾರಿಯಾಪಡೆ ನಿಮಗಾನು ಸರಿಯೆ? ಕೂಡಲ ಸಂಗಮದೇವ ಜಂಗಮಮುಖದಿಂದ ಸಂಗನಬಸವಣ್ಣ ಬದುಕಿದನೆಂಬುದ ಮೂರು ಲೋಕವೆಲ್ಲವು ಬಲ್ಲದು ಕಾಣಾ ಪ್ರಭುವೆ. ॥೨೭॥

ಹೀಗೆಂದು ಬಸವರಾಜದೇವರು ಬಿನ್ನೈಸಲು, ಇದಕ್ಕೆ ಪ್ರಭುದೇವರು ನಿರೂಪಿಸಿದ ಪ್ರಸ್ತಾವದ ವಚನ. ॥

ಬಸವಣ್ಣ ನಿನ್ನ ಕಂಡು ಕಂಡು ಎನ್ನ ತನು ಬಯಲಾಯಿತ್ತು. ಬಸವಣ್ಣ ನಿನ್ನ ಮುಟ್ಟಿ ಮುಟ್ಟಿ ಎನ್ನ ಕ್ರಿಯೆ ಬಯಲಾಯಿತ್ತು. ಬಸವಣ್ಣ ನಿನ್ನ ನೆನೆದು ನೆನೆದು ಎನ್ನ ಮನ ಬಯಲಾಯಿತ್ತು. ಬಸವಣ್ಣ ನಿನ್ನ ಮಹಾನುಭಾವವ ಕೇಳಿಕೇಳಿ ಎನ್ನ ಭವಂ ನಾಸ್ತಿಯಾಯಿತ್ತು. ನಮ್ಮ ಗುಹೇಶ್ವರ ಲಿಂಗದಲ್ಲಿ ನೀನು ಅಜಾತನೆಂಬುದ ನೆಲೆವಾಡಿ ಭವ ಪಾಶಂಗಳ ಹರಿದಿಪ್ಪೆಯಾಗಿ, ನಿನ್ನ ಸಂಗದಿಂದಲಾನು ಬದುಕಿದೆನು. ॥೨೮॥

ಹೀಗೆಂದು ಪ್ರಭುದೇವರು ನಿರೂಪಿಸಲು, ಇದಕ್ಕೆ ಬಸರಾಜದೇವರು ಬಿನ್ನೈಸಿದ ಪ್ರಸ್ತಾವದ ವಚನ. ॥

ಜನನವಿಲ್ಲದ ಜನಿತನು ನೀನು ನೋಡಯ್ಯ. ಜನಿಯಿಸಿ ಸಂಸಾರವನರಿಯದ ನಿರ್ವಿಕಾರಿ ನೀನು ನೋಡಯ್ಯ. ಭವಬಂಧನಗಳಿಲ್ಲದ ನಿತ್ಯನಿಜತತ್ವವು ನೀನು ನೋಡಯ್ಯ. ನಿನ್ನ ಚರಣಸೇವೆಯ ಮಾಡಿ, ಎನ್ನ ಭವವ ಹರಿಯಲೆಂದಿಪ್ಪೆನಲ್ಲದೆ ನಿಮ್ಮ ಘನವೆಂತೆಂದು ಅರಿಯೆ ನೋಡಯ್ಯ. ಕೂಡಲಸಂಗಮದೇವ ನೀನು ಕೊಂಡಾಡಲಾನು ಪ್ರಾಪ್ತನೆ ಹೇಳಾ ಪ್ರಭುವೆ. ॥೨೯॥

ಹೀಗೆಂದು ಬಸವರಾಜದೇವರು ಬಿನ್ನೈಸಲು, ಅದಕ್ಕೆ ಪ್ರಭುದೇವರು ನಿರೂಪಿಸಿದ ಪ್ರಸ್ತಾವದ ವಚನ. ॥

ಆಚಾರವಂಗಲೇಪವಾಗಿ, ಕಾಯಸ್ಮುಕ್ತನು ನೀನು ನೋಡಯ್ಯ. ಅರಿವು ಅಂತರಂಗದಲ್ಲಿ ಭರಿತವಾಗಿಪ್ಪುದಾಗಿ ಮನೋಮುಕ್ತನು ನೀನು ನೋಡಯ್ಯ. ಆರ್ಪಿತ ಪರಿಣಾಮದಲ್ಲಿ ಅವಿರಳವಾಗಿಪ್ಪುದಾಗಿ, ಸರ್ವಾಂಗಲಿಂಗೈಕ್ಯ ನೋಡಾ. ಮುಕ್ತನಲ್ಲೆಂಬ ಬಳಕೆಯು ಮಾತಂತಿರಲಿ ಬಯಲ

ಕ್ರಿಯೆಯನೆ ಕಳೆದು ಭವದ ಬಟ್ಟೆಯ ಹರಿದಿಪ್ಪುದ ನಮ್ಮ ಗುಹೇಶ್ವರ ಲಿಂಗ ಬಲ್ಲನು. ನೀನು ಮರೆಯಾಗಿ, ನುಡಿವರೆ ಸಂಗನಬಸವಣ್ಣ? ॥೩೦॥

ನೀನು ಭವಬಂಧನಂಗಳ ಹರಿದು, ನಿರ್ಭಯನಾಗಿಪ್ಪ ಮಾತು ಸತ್ಯವೆಂದು ಪ್ರಭುದೇವರು ನಿರೂಪಿಸಲು, ಇದಕ್ಕೆ ಬಸನರಾಜದೇವರ ಪ್ರತ್ಯುತ್ತರ. ॥

ಜ್ಞಾನದ ಬಲದಿಂದ ಅಜ್ಞಾನ ಕೆಡುವುದು ನೋಡಯ್ಯ! ಜ್ಯೋತಿಯ ಬಲದಿಂದೆ ಕತ್ತಲೆ ಕೆಡುವುದು ನೋಡಯ್ಯ! ಸತ್ಯದ ಬಲದಿಂದ ಅಸತ್ಯ ಕೆಡುವುದು ನೋಡಯ್ಯ! ಕರುಣದ ಬಲದಿಂದ ಅವಲೋಹ ಕೆಡುವುದು ನೋಡಯ್ಯ! ಕೂಡಲಸಂಗಮದೇವಯ್ಯ ನಿನ್ನ ಅನುಭಾವವೆಂಬೆನ್ನ ಭವ ಕಿಟ್ಟದಲ್ಲೆನಬಹುದೆ ಪ್ರಭುವೆ? ॥೩೧॥

ಹೀಗೆಂದು ಬಸವರಾಜದೇವರು ಬಿನ್ನೈಸಲು, ಇದಕ್ಕೆ ಬಸವ ನಿನ್ನ ಮಹಾತ್ಮೆಯನು ನಾಲ್ಕು ಯುಗದಿಂದ ಬಲ್ಲೆನಾಗಿಯು ಆಚಾರ ಸ್ಥಾಯಿತವಾರ್ದ ಈ ಅವತಾರದಲ್ಲಿ ನಿಮ್ಮ ಮಹಿಮೆಯನರಿಯದೆ ಇಪ್ಪೆನೆಂದು ಪ್ರಭುದೇವರು ನಿರೂಪಿಸಿದ ಪ್ರಸ್ತಾವದ ವಚನ. ॥

ಕೃತಯುಗದಲ್ಲಿ ನೀನು ಸಂದನೆಂಬ ಗಣೇಶ್ವರನಾಗಿರ್ದುದ ಬಲ್ಲೆ. ತ್ರೇತಾಯುಗದಲ್ಲಿ ನೀನು ನೀಲಲೋಹಿತನೆಂಬ ಗಣೇಶ್ವರನಾಗಿರ್ದುದ ಬಲ್ಲೆನು. ದ್ವಾಪರದಲ್ಲಿ ನೀನು ವೃಷಭನೆಂಬ ಗಣೇಶ್ವರನಾಗಿರ್ದುದ ಬಲ್ಲೆನು. ಕಲಿಯುಗದಲ್ಲಿ ನೀನು ಬಸವನೆಂಬ ಗಣೇಶ್ವರನಾಗಿರ್ದು ಸರ್ವಾಚಾರಸಂಪನ್ನನಾಗಿ ಭಕ್ತಿಜ್ಞಾನವ ಕಂದೆರೆಯೆ ಮಾಡಿ ಶಿವಾಚಾರದ ಘನವ ಬೆಳವಿಗೆಯ ಮಾಡಿ, ಶಿವಭಕ್ತಿಧ್ವಜವನೆತ್ತಿಸಿ, ಮರ್ತ್ಯಲೋಕದೊಳಗೆ ಹರಹಿದ ಘೇದವ ಭೇದಿಸಿ ನೋಡಿದನು ಅರಿದೆ. ಗುಹೇಶ್ವರ ಸಾಕ್ಷಿಯಾಗಿ ನಿಮ್ಮ ಮಹಾತ್ಮೆಗೆ ನಮೋ ನಮೋ ಎಂಬೆ ಕಾಣಾ ಸಂಗನಬಸವಣ್ಣಾ. ॥೩೨॥

ಮರ್ತ್ಯಲೋಕದಲ್ಲಿ ಬಂದನಂತರಿಸಿ ಶಿವಾಚಾರದ ಘನವನು ಪ್ರತಿಷ್ಠೆಸಿ ತೋರಿ ಜಗದೊಳಗೆ ಮೆರೆವಲ್ಲಿ ನಿಮ್ಮ ಮಹಾತ್ಮೆಯನರಿಯೆನೆಂದು ಪ್ರಭುದೇವರು ನಿರೂಪಿಸಲು, ಇದಕ್ಕೆ ಬಸವರಾಜದೇವರು ಬಿನ್ನೈಸಿದ ಪ್ರಸ್ತಾವದ ವಚನ.

ಕಕ್ಷೆ, ಕರಸ್ಥಲ, ಉತ್ತುವಾಂಗ, ಉರ, ಸಿಜ್ಜೆ, ಅಂಗಸೋಂಕು, ಅಮೃತೋಕ್ಯವೆಂಬುದ ನಾನು ಮನದಲ್ಲಿ ಅರಿಯದಂದು, ಭಾವ ನಿರ್ಭಾವವೆಂ

ಬುದನರಿದು, ಆಯತ ಸ್ವಾಯತವ ಮಾಡಲ್ಕೆ ಬಂದ ಪದಾರ್ಥವ ಲಿಂಗ ಮುಖದಲ್ಲಿ ಅರ್ಪಿತವಾಗದಂದು, ಜಂಗಮಮುಖದಲ್ಲಿ ಬಂದ ಪದಾರ್ಥ ವಲ್ಲದೆ ಅರ್ಪಿತವಾಗದಂದು ಆ ಜಂಗಮವ ನನ್ನ ಮನದಲ್ಲಿ ನೆನೆದು ಕೊಂಡು ಆ ಜಂಗಮವ ದಾಸೋಹಕ್ಕೆ ಎನ್ನ ಮನವು ವೇದ್ಯವಾದಲ್ಲಿ ಅಂಗದ ಮೇಲೆ ಲಿಂಗ ಉಳ್ಳುದೆಲ್ಲವು ಸಂಗಮನಾಥನೆಂದರಿದಲ್ಲಿ ಲಿಂಗವ ಹುಸಿ, ಜಂಗಮವು ಹುಸಿ, ಎಂದು ಪರವಾದಿ ಬಿಜ್ಜಳನು ಸಂಪಾದಿಸುವಲ್ಲಿ ಅವರನು ಅವಿಗಣೇಶ್ವರನೆಂದರಿಯದೆ ತರ್ಕಿಸುವಲ್ಲಿ ಅವನೆನ್ನ ಭಕ್ತಿಗೆ ಒರೆಗಲ್ಲಾವಲ್ಲಿ ಅತನು ಭಕ್ತಿಯ ಪಥವಲ್ಲೆಂಬುದ ನಾನಹುದೆಂಬುದ ಈ ಎರಡನು ನೀನು ಸೂತ್ರಧಾರಿಯಾಗಿ ಅಡಿಸುವಲ್ಲಿ ಶಿವಭಕ್ತಿಯ ಮುಖ ಮುಸುಕ ತೆಗೆದಲ್ಲಿ ಮೂವತ್ತಾರು ಕೊಂಡೆಯುವ ಪರಿಹರಿಸಿ ಎಂಬತ್ತೆಂಟು ಪವಾಡವ ಮೆರೆದಲ್ಲಿ ಮುನ್ನೂರರುವತ್ತು ಸತ್ತ ಪ್ರಾಣವನೆತ್ತುವಲ್ಲಿ ಬಂದು ನೀನೇನಾಗಿರ್ದೆ ಹೇಳಾ ಕೂಡಲಸಂಗಮದೇವಾ? ॥೩೩॥

ಹೀಗೆಂದು ಬಸವರಾಜದೇವರು ತಮ್ಮ ಪೂರ್ವಾಪರ ಸಂಬಂಧದ ವೃತ್ತಾಂತಮಂ ಬಿನ್ನಪಂಗೈಯ್ಯಲು, ಪ್ರಭುದೇವರು ತಮ್ಮ ಪೂರ್ವಾಪರ ಸಂಗತ್ಯಮಂ ಬಸವಣ್ಣನಿಂದರಿದೆನೆಂದು ಪರಿಣಾಮಿಸಿ ನಿರೂಪಿಸಿದ ಪ್ರಸ್ತಾವದ ವಚನ. ॥

ಆದಿ ಗುರುಸ್ಥಲ, ಲಿಂಗಸ್ಥಲ, ಜಂಗಮಸ್ಥಲ, ಪ್ರಸಾದಿಸ್ಥಲ, ಪಾಮೋದಕಸ್ಥಲಂಗಳನಾರು ಬಲ್ಲರಯ್ಯ! ಆದಿಯು ತೋರಿಸಿದ, ಅನಾದಿಯನರುಪಿದ, ನಾವಬಿಂದು ಕಳೆಗಳ ಭೇದಮಂ ಭೇದಿಸಿ ತೋರಿದ, ಹುಟ್ಟುವದ ಮುಟ್ಟದೆ ತೋರಿದ, ಹುಟ್ಟದೆ ಇಪ್ಪುದ ಮುಟ್ಟಿ ತೋರಿದ, ಎನ್ನ ಅಂತರಂಗವನು ಮಾಡಿ ನಿಜಲಿಂಗವ ನೆಲೆಗೊಳಿಸಿದ, ಗುಹೇಶ್ವರನ ಶರಣ ಸಂಗನಬಸವಣ್ಣನಿಂದ ಸಕಲ ಸನುಮತವನರಿದೆನಯ್ಯ. ॥೩೪॥

ಮತ್ತಂ, ॥ಸ್ತೋತ್ರ॥ ಭವಕಲಿಕೆ ಮೂರ್ತಿಯಾರಾಧನೆ ನರಕ ಬೀಜ, ಲಿಂಗಾರಾಧನೆ ಭವಕ್ಕೆ ಬೀಜ, ಲಿಂಗಸ್ಪಾಯತ ಜಂಗಮವೆ ಪ್ರಾಣಲಿಂಗ. ಇದು ಕಾರಣ ಗುಹೇಶ್ವರ ಸಂಗನಬಸವಣ್ಣನ ಮರೆಹೊಕ್ಕ ಬದುಕಿದೆನು. ॥೩೫॥

ಹೀಗೆಂದು ಪ್ರಭುದೇವರು ಬಸವರಾಜದೇವರ ಸ್ತೋತ್ರಮಂ ಮಾಡಲು, ಆ ಬಸವರಾಜದೇವರು ಪ್ರಭುದೇವರೊಡನೆ ನಿಮ್ಮಿಂದಲಾನು ಸಕಲ ಸನುಮತವನರಿದೆನೆಂದು ಬಿನ್ನಪಂಗೈವ ಪ್ರಸ್ತಾವದ ವಚನ. ॥

ಲಿಂಗ ಜಂಗಮ ಜಂಗಮ ಲಿಂಗದೆಂಬುದನು ಎನಗೆ ತೋರಿದನಯ್ಯ? ಲಿಂಗವ ಪೂಜಿಸಿದರೆ ಭವ ಹರಿಯದೆಂದು ಜಂಗಮ ಮುಖವಾಗಿ ಬಂದು ಶಿಕ್ಷಿಸಿ ರಕ್ಷಿಸಿ, ಎನ್ನ ಆದಿ ಅನಾದಿಯು ತೋರಿ ಪ್ರಾಣಲಿಂಗ ಜಂಗಮವೆಂದು ಎನಗೆ ಪ್ರತಿಷ್ಠಿಸಿ ತೋರಿದಿರಾಗಿ, ಕೂಡಲಸಂಗಮದೇವ ನಿಮ್ಮಿಂದಲಾನು ಬದುಕಿದೆನು ಕಾಣಾ ಪ್ರಭುವೆ. ॥೩೬॥

ಇಂತೀ ಶ್ರೀಮತ್ಸಕಲಗಣ ಪುರಾತರೊಳ್ ಪ್ರಭುದೇವರು ಮಹಾ ಪ್ರಭಾವ ಪದ್ಧತಿಯಂ ಮಾಡಿದ ಶೂನ್ಯಸಂಪಾದನೆಯೊಳ್ ಪ್ರಭುದೇವ ಬಸವರಾಜದೇವರ ಸಂಪಾದನೆಗಂ ಸಪ್ತಮೋಪದೇಶ ಸಮಾಪ್ತ ಮಂಗಳಮಹಾ ಶ್ರೀ.

The Vijay College
LIBRARY,
VIJAY COLLEGE,
BIJAPUR.

ಚನ್ನಬಸವರಾಜದೇವರ ಸಂಪಾದನೆ.

(ಅಷ್ಟವೋಪದೇಶ.)

ಕಂದ॥ ಆಚಾರ ಭಕ್ತಿ ಅರಿವಿನ । ಸೂಚನೆಯಂ ಪ್ರಾಣಲಿಂಗ ಸಮರಸಮಂ ಪ್ರಭು॥ವಾ ಚನ್ನಬಸವರಾಜಗೆ ಸೂಚಿಸಿದುದ ಪೇಳ್ದೆ ಶರಣಜನರಹುದೆನಲು. ॥

ಅವೆಂತೆಂದೊಡಾ ಪ್ರಭುದೇವರು ಬಸವರಾಜದೇವರು ತಮ್ಮೊಳು ತಾವು ಮಹಾನುಭಾವ ಸಮ್ಮೋಷ್ಠಿಯಂ ಮಾಡುತ್ತಿಪ್ಪ ಪ್ರಸ್ತಾವದೊಳು ಚಿಕ್ಕದಣ್ಣಾಯಕರು ಆ ಪ್ರಭುದೇವರ ಬಸವರಾಜದೇವರ ಸಮರಸಭಾವಮಂ ಪರೀಕ್ಷಿಸಿ ನೋಡುವ ಪ್ರಸ್ತಾವದ ವಚನ. ॥

ಒಂದರೊಂದರ ಸಂಬಂಧ ಮತ್ತೊಂದಕ್ಕಳವಡದು. ಕಂದನೊಳಗಣ ಸ್ವಪ್ನ ಮುಂದುದೋರುವುದೆ? ಚಂದ್ರಕಾಂತದ ಸಿಲೆಯಲ್ಲಿ ರತ್ನಪ ಕಂಡೆನೆಂಬ ಅಹಂಕಾರ ನಿನಗೇಕೆ? ಶರಣಕಯ್ಯ ಕುರುಹಳಿಯದು ಬಾಯ ಮೋರೆ ಮಿಗೆ ಉರಿವುತ್ತಿದೆ ಕೂಡಲ ಚನ್ನಸಂಗಯ್ಯನಲ್ಲಿ ಬಸವನು ಪ್ರಭುವು ಇಬ್ಬರು ಮರುಳಾದರು. ॥೧॥

ಮತ್ತಂ, ಉಂಟೆಂಬುದ ಬಸವಣ್ಣ ಕೊಂಡ. ಇಲ್ಲೆಂಬುದನಲ್ಲವು ಕೊಂಡ. ಇನ್ನಾರನಹುದೆಂಬೆನು? ಇನ್ನಾರನಲ್ಲೆಂಬೆನು? ಇವರಿಬ್ಬರು ಫಲಕ್ಕೆ ಸಂಪನ್ನರಲ್ಲದೆ ಲಿಂಗಸಂಪನ್ನರ ಕಾಣೆ ಕೂಡಲಚನ್ನಸಂಗಮದೇವಾ. ॥೨॥

ಹೀಗೆಂದು ಚಿಕ್ಕದಣ್ಣಾಯಕರು ಪರೀಕ್ಷಿಸಿ ನೋಡಲು ಇದಕ್ಕೆ ಪ್ರಭುದೇವರು ಚಿಕ್ಕದಣ್ಣಾಯಕರೊಡನೆ ನಿರೂಪಿಸಿದ ಪ್ರಸ್ತಾವದ ವಚನ. ॥

ಅಂಗಸಂಸಾರ ಲಿಂಗದಲ್ಲಿ ಅರತು, ಕಾಯಜೆಂಬ ಸಂಬಂಧ ಸಂಶಯವಳಿದು, ನಿಃಸಂದೇಹಿಯಾಗಿಪ್ಪನು ನೋಡಾ ಬಸವಣ್ಣನು. ಪ್ರಾಣ ಭಾವವೆಂಬ ಶಂಕೆ ತಲೆದೋರದೆ ನಿಶ್ಶಂಕ ನಿಜೈಕ್ಯನಾಗಿಪ್ಪ ನೋಡಾ ಬಸವಣ್ಣನು. ಆ ಬಸವಣ್ಣನ ಅಂತರಂಗದಲ್ಲಿ ನಿಶ್ಚಿಂತ ನಿವಾಸಿಯಾಗಿರ್ದೆನು. ಆ ಬಸವಣ್ಣನ ಬಹಿರಂಗದಲ್ಲಿ ನಿರಾಲಂಬ ಜ್ಞಾನಿಯಾಗಿರ್ದೆನಾನು. ಬಸವಣ್ಣನೊಳಗೆ ಅಳವಡದೇನು? ಬಸವಣ್ಣನೆನ್ನ ಅಂತರಂಗದೊಳಗೆ ನಿಜನಿವಾಸಿಯಾಗಿಪ್ಪನು. ಒಂದಕ್ಕೊಂದು ಬಿಚ್ಚಿ ಬೇರು ಮಾಡಬಾರದು

ನೋಡಾ. ಗುಹೇಶ್ವರನ ಶರಣ ಸಂಗನಬಸವಣ್ಣ ಪ್ರಭುವೆಂಬರಡು ಭಾವ ಭ್ರಾಂತಿಯಳಿದು ನಿಭ್ರಾಂತಿ ಎಡೆಗೊಂಡಿತ್ತು ನೋಡಾ ಚನ್ನಬಸವಣ್ಣಾ. ॥೩॥

ಹೀಗೆಂದು ಪ್ರಭುದೇವರು ನಿರೂಪಿಸಲು. ಇವಕ್ಕೆ ಚಿಕ್ಕದಣ್ಣಾಯಕರು ವಿಸ್ಮಯಸಿದ ವಚನ. ॥

ಭಕ್ತಜಂಗಮದ ಸಕೀಲ ಸಂಬಂಧವೆಂತಿಪ್ಪುದುನಾರು ಬಲ್ಲರಯ್ಯ? ಭಾವಾತೀತ. ಭಕ್ತನೊಳಗೆ ಜಂಗಮವಡಗಿದಡೆ ಭಕ್ತನಾಗಿ ಕ್ರಿಯಾನಿಷ್ಪತ್ತಿಯಲ್ಲಿ ಸಮರಸ ಸುಖಿಯಾಗಿಪ್ಪನು ನೋಡಯ್ಯ. ಜಂಗಮದೊಳಗೆ ಭಕ್ತನಡಗಿದಡೆ ಕರ್ತೃ ಭೃತ್ಯಭಾವವಳಿದು ಸಂಬಂಧ ಸಂಶಯ ತಲೆದೋರದೆ ಅರಿವರತು ಮರಹು ನಷ್ಟವಾಗಿ ಸ್ವತಂತ್ರ ಶಿವಾಚಾರಿಯಾಗಿಪ್ಪನು ನೋಡಯ್ಯ. ಈ ಉಭಯ ಭಾವದ ಸಂಗ ಪರಿಣಾಮವ ಕಂಡು ಕೂಡಲ ಚನ್ನಸಂಗಯ್ಯನಲ್ಲಿ ಬಸವಪ್ರಭುದೇವರ ಶ್ರೀಪಾದಕ್ಕೆ ನಮೋ ನಮೋ ಎಂದು ಬದುಕಿದೆನು. ॥೪॥

ಮತ್ತಂ, ಎನ್ನರಿವಿನ ಕಣ್ಣಿನ ಕತ್ತಲೆಯ ಕಳೆದು ಬಲ್ಲರೆ ಸಂಗನ ಬಸವಣ್ಣನಲ್ಲದೆ ಮತ್ತಾರನು ಕಾಣೆನು. ಎನ್ನ ಭಾವ ನಿರ್ಭಾವದಲ್ಲಿ ನಿಲಿಸಿ ನಿಃಶೂನ್ಯವ ಮಾಡಿ, ಪರಮಸುಖವೊಳಗಿಸುವರೆ ಪ್ರಭುದೇವರಲ್ಲದೆ ಮತ್ತಾರನು ಕಾಣೆನು. ಕೂಡಲಚನ್ನಸಂಗಮದೇವರಲ್ಲಿ ಬಸವಪ್ರಭುದೇವರ ಶ್ರೀಪಾದಕ್ಕೆ ಶರಣೆಂದು ಬದುಕಿದೆನು. ॥೫॥

ಇಂತು ಚಿಕ್ಕದಣ್ಣಾಯಕರು ಬಸವರಾಜದೇವರನು ಪ್ರಭುದೇವರನು ಸ್ತೋತ್ರಮಂ ಮಾಡಲು. ಆ ಪ್ರಭುದೇವರು ಬಸವರಾಜದೇವರನು ಚನ್ನಬಸವರಾಜದೇವರನು ಸ್ತೋತ್ರಮಂ ಮಾಡಿದ ಪ್ರಸ್ತಾವದ ವಚನ. ॥

ಬಸವಣ್ಣ ಎಂಬಲ್ಲಿ ಎನ್ನ ಕಾಯ ಬಯಲಾಯಿತ್ತು. ಚನ್ನಬಸವಣ್ಣ ಎಂಬಲ್ಲಿ ಎನ್ನ ಪ್ರಾಣ ಬಯಲಾಯಿತ್ತು. ಈ ಉಭಯ ಸ್ಥಲದ ನಿರ್ಣಯದ ನಿಷ್ಪತ್ತಿ ಗುಹೇಶ್ವರಲಿಂಗ ಸಾಕ್ಷಿಯಾಗಿ, ಚನ್ನಬಸವಣ್ಣನಿಂದ ಸಾಧ್ಯವಾಯಿತ್ತು ಕಾಣಾ ಸಂಗನಬಸವಣ್ಣಾ. ॥೬॥

ಹೀಗೆಂದು ಚಿಕ್ಕದಣ್ಣಾಯಕರ ಸ್ತೋತ್ರಮಂ ಮಾಡಲು, ಬಸವರಾಜದೇವರು ಪ್ರಭುದೇವರನು ಚಿಕ್ಕದಣ್ಣಾಯಕರನು ಸ್ತೋತ್ರಮಂ ಮಾಡಿದ ಪ್ರಸ್ತಾವದ ವಚನ. ॥

ಅಂಗದ ಮೇಲೆ ಲಿಂಗಸ್ಥಾಯಿತವಾಗಿ, ಲಿಂಗಾರ್ಚನೆಯು ಮಾಡಿದೆ ಭವ ಹಿಂಗಿದೆಂದು ಪ್ರಾಣದ ಮೇಲೆ ಲಿಂಗಸ್ಥಾಯಿತವ ಮಾಡಿ, ಎನ್ನಂತರಂಗವ ಶುದ್ಧವ ಮಾಡಿ ಲಿಂಗೈಕ್ಯದ ಹೊಲಬ ತೋರಿದನಯ್ಯ ಚನ್ನಬಸವಣ್ಣನು. ಕಾಯದ ಕಳವಳ ದಾಸೋಹ ಮುಖದಲ್ಲಿ ಅಳಿವ ಹರಿಯದೆಂದು ಜಂಗಮಮುಖ ಲಿಂಗವಾಗಿ ಬಂದು ಎನ್ನ ರಕ್ಷಿಸಿ, ಶಿಕ್ಷಿಸಿ, ಎನ್ನ ಸಂಸಾರದ ಪ್ರಕೃತಿಯ ಹರಿದನಯ್ಯ ಪ್ರಭುದೇವರು. ಕೂಡಲಸಂಗಮದೇವರಲ್ಲಿ ಪ್ರಭುದೇವರ ಚನ್ನಬಸವಣ್ಣನ ಕರುಣದಿಂದಲಾನು ಬದುಕಿದೆನು. ॥೭॥

ಮತ್ತಂ, ಬಸವರಾಜದೇವರು ಚಿಕ್ಕವಣ್ಣಾಯಕರ ಸ್ತೋತ್ರವುಂ ಮಾಡುವ ಪ್ರಸ್ತಾವದ ವಚನ. ॥

ಭೂಮಿಯ ಸಾರಾಯದಲೊಂದು ತರು ಬೆಳೆಯಿತ್ತು. ನವರಸ ಫಲವನಿತ್ತಿತ್ತು ನೋಡಾ! ಏನೆಂದರಿಯದೆ ಎಂತೆಂದರಿಯದೆ ಮರುಳಾದೆನು ನಾನು. ಮಾರಾರಿಯ ಬಲೆಯಲ್ಲಿ ಸಿಲುಕಿದೆನಯ್ಯ. ಕೂಡಲಸಂಗಮದೇವಯ್ಯ ಚನ್ನಬಸವಣ್ಣನಿಂದಲಾನು ಬದುಕಿದೆನು. ॥೮॥

ಮತ್ತಂ, ಪ್ರಭುದೇವರು ಚನ್ನಬಸವರಾಜದೇವರ ಸ್ತೋತ್ರವುಂ ಮಾಡಿದ ಪ್ರಸ್ತಾವದ ವಚನ. ॥

ಬೆಳಗುವ ಜ್ಯೋತಿಯ ತಿರುಳಿನಂತೆ, ಹೊಳೆವ ಕಂಗಳ ಕಾಂತಿಯೊಳ ಹೊರಗೆನ್ನದೆ ಅಳವಟ್ಟು ಶಿವಯೋಗಿಯು ಕಂಡೆ ನೋಡಾ. ನಿಜವುಂಡ ನಿರ್ಮಳದ ಘನವ ಕಂಡು ಬೆರಗಾದೆ ನಾನು. ಗುಹೇಶ್ವರಲಿಂಗವಲ್ಲಿ ಚನ್ನಬಸವಣ್ಣನಿಂದಲಾನು ಬದುಕಿದೆನು. ॥೯॥

ಚನ್ನಬಸವರಾಜದೇವರೊಡನೆ ಬಸವರಾಜದೇವರು ಪ್ರಭುದೇವರ ಕೊಂಡಾಡಿದ ಪ್ರಸ್ತಾವದ ವಚನ. ॥

ಕಂಗಳಲ್ಲಿ ಕರಸ್ಥಲದ ನೋಟ. ಅಂಗವಿಕಾರವೆಂಬುದನರಿಯ ನೋಡಾ! ಮನದ ಕೊನೆಯ ಮೊನೆಯ ಮೇಲಣ ಅನುಭಾವ ಗವನ ಗಟ್ಟಿ ಭಾವ ನಿರ್ಭಾವವೆಂಬುದನರಿಯ ನೋಡಾ! ಕೂಡಲಸಂಗಮದೇವರಲ್ಲಿ ಪ್ರಭುದೇವರಿಂದಲಾನು ಬದುಕಿದೆನು ಕಾಣಾ ಚನ್ನಬಸವಣ್ಣಾ. ॥೧೦॥

ಇದಕ್ಕೆ ಪ್ರಭುದೇವರು ಚನ್ನಬಸವರಾಜದೇವರೊಡನೆ ಬಸವರಾಜದೇವರ ಸ್ತೋತ್ರವುಂ ಮಾಡಿದ ಪ್ರಸ್ತಾವದ ವಚನ. ॥

ಅಂಗದಲಳವಟ್ಟ ಲಿಂಗೈಕ್ಯನ ಸಂಗವನಾರಿಗೆಯೂ ಕಾಣಬಾರದು ನೋಡಾ. ಪ್ರಾಣದ ಕೊನೆಯ ಮೇಲೆ ಭಾವ ಸೂತಕದ ಹೊವಿಕೆಯ ಕಳೆದು ನಿರ್ಭಾವ ನಿಸ್ಸೂತಕಿಯಾಗಿಪ್ಪ ನಿಜಲಿಂಗಸಮಾಧಿಯ ಘನವು ಆರಿಗೆಯು ಕಾಣಬಾರದು ನೋಡಾ! ಗುಹೇಶ್ವರ ಲಿಂಗವಲ್ಲಿ ಸಂಗನಬಸವಣ್ಣನ ಕರುಣದಲಿವ ಕಂಡು ನಾನು ಬದುಕಿದೆನು ಕಾಣಾ ಚನ್ನಬಸವಣ್ಣಾ. ॥೧೧॥

ಹೀಗೆಂದು ಪ್ರಭುದೇವರು ಚನ್ನಬಸವರಾಜದೇವರೊಡನೆ ಬಸವರಾಜದೇವರ ಮಹಾತ್ಮೆಯಂ ಕೊಂಡಾಡಲು, ಆ ಚನ್ನಬಸವರಾಜದೇವರು ಪ್ರಭುದೇವರೊಡನೆ ಆ ಬಸವರಾಜದೇವರ ಮಹಾತ್ಮೆಯಂ ಕೊಂಡಾಡಿದ ಪ್ರಸ್ತಾವದ ವಚನ. ॥

ಹರನಟ್ಟಿದಾಗ್ರದ ಜಿಸನ ಗುರು ನಿರೂಪವೆಂದು ಕೈಕೊಂಡು ಕರುಣಿ ಬಸವಣ್ಣ ಕೈಲಾಸದಿಂದ ಗುರುಲಿಂಗಜಂಗಮಕ್ಕೆ ಭಕ್ತಿಯ ಮಾಡಬೇಕೆಂದು ಏಕನೂರೆಪ್ಪತ್ತು ಅಮರಗಣಂಗಳು ಸಹಿತ ಮರ್ತ್ಯಲೋಕಕ್ಕೆ ಬಂದನಯ್ಯ. ಶಿವಸಮಯಕಾಧಾರನಾದನಯ್ಯ ಲೋಕಾದಿಲೋಕಂಗಳಿಗೆ ಪರಮಗುರುವಾದನಯ್ಯ ಬಸವಣ್ಣನು. ಜಡರುಗಳ ಮನದ ಕತ್ತಲೆಯ ಕಳೆಯಬೇಕೆಂದು ಕಟ್ಟಿತ್ತು ಕಲ್ಯಾಣಪಟ್ಟಣದಲ್ಲಿ ಮಹಾಮಂಟಪವ. ಪರಮನಟ್ಟಿದ ಓಲೆ ಬಂದಿಳಿಯಿತ್ತು. ಬಿಜ್ಜಳನ ಸಿಂಹಾಸನದಲ್ಲಿ ಅದನು ತಂದು ಓದಿಸಿದರೆ ಸೃಷ್ಟಿಯ ಸೀನಜೋವರಿಗೆ ತಿಳಿಯದು. ಘಪ್ಪನ್ನ ದೇಶದ ಭಾಷೆಯ ಲಿಪಿಯು ಮುನ್ನವೆ ಅಲ್ಲ. ಇದನೋದಿದವರಿಗೆ ಆನೆ, ಸೇನೆ, ಕುದುರೆ, ಭಾಂಡಾರ, ಅರುವತ್ತಾರು ಕರಣಕರಿಗೆ ಮುಖ್ಯನ ಮಾಡುವೆನೆಂದು ಬಿಜ್ಜಳ ಭಾಷೆಗೊಡುತ್ತಿರಲು, ಹರ ನಿರೂಪನ ಸಿರದ ಮೇಲಿಟ್ಟ ಶಿವಶರಣೆಂದು ಬಸವಣ್ಣ ಪೆಟ್ಟ ನೋಡಿ, ತಗೆಸಿದನಯ್ಯ ಅರುವತ್ತಾರುಕೋಟಿ ವಸ್ತುವ. ಅರಮನೆಗೆ ರಾಜ್ಯಕ್ಕೆ ಒಡೆಯನಾಗಿ ಹರಗಣಂಗಳಿಗೆ ಗತಿ ಮತಿ ಜೈತನ್ಯನಾಗಿ ಕೂಡಲ ಚನ್ನಸಂಗಯ್ಯನಲ್ಲಿ ಅಂಡಜದೊಳಗಿರ್ದು ಶಿವನ ಭಂಡಾರಿಯಾದನಯ್ಯ ಎನ್ನ ತಂದೆ ಪೂರ್ವಾಚಾರಿ ಸಂಗನಬಸವಣ್ಣನು. ॥೧೨॥

ಭಕ್ತಿಯ ಕುಳಸ್ಥಳವನು ಮರ್ತ್ಯಲೋಕದಲ್ಲಿ ಹರಹಲೆಂದು ಬಂದ ಸಯ್ಯ ಬಸವಣ್ಣನು. ಆಚಾರ ಶಿವಾಚಾರದ ಮುಂದಣ ಕನ್ನಡವ ಕಳೆದು, ಕರತಳಾಮಳಕವ ಮಾಡಿದನಯ್ಯ ಬಸವಣ್ಣನು. ಪರವಾದಿ ಬಿಜ್ಜಳನು ಒರೆಗಲ್ಲ ಹಿಡಿದು ಶಿವಭಕ್ತಿಯ ಸಂಪಾದನೆಯ ಮಾಡುವಲ್ಲಿ

ಮೂವತ್ತಾರು ಕೋಂದೆಯರ ಪರಿಹರಿಸಿ, ಶಿವಾಚಾರವ ಧ್ವಜವನೆತ್ತಿಸಿದ ನಯ್ಯ ಬಸವಣ್ಣನು. ಕೂಡಲಚನ್ನಸಂಗಮದೇವರಲ್ಲಿ ಬಸವಣ್ಣನ ನಿಲವ ಹೊಗಳುವರೆ ಎನ್ನವಲ್ಲ ನಿನ್ನವಲ್ಲ ಕೇಳಾ ಪ್ರಭುವೆ. ॥೧೩॥

ಆ ಪ್ರಸ್ಥವಪೊಳು ಹಾಡಿ ಹೊಗಳುವ ಪದಂಗಳು ॥

ರಾಗ ಅಹರಿ.

ಆಚಾರ ಮುಂದುಳಿಯ ನಾನೇನೆಂದುಪಮಿಸುವೆ ಬೆಳಗಿನೊಳಗೆ ತೊಳಗಿ ಬೆಳಗುತಲಿರ್ದುದು ಆಚಾರ. ॥ಪಲ್ಲ॥ ಅರಿವಿನಾಚರಣೆಯ ತೆರನ ಹೇಳುತಲಿರ್ದುದು ॥ ಭೇದಾದಿಭೇದವ ಮಹಾಘನದಾಚಾರ. ॥೧॥ ಸ್ಫಟಿಕದ ಗಿರಿಯ ತಟದಲ್ಲಿರ್ದರೆ, ಘಟ ಹೊಳೆದುದು, ಒಳಹೊರಗೆನ್ನದೆ. ॥೨॥ ಪರುಷದ ಗಿರಿಯು ಕಡೆಯಲೆಂದು ಹೋದರೆ, ಹಿಡಿದುಳಿ ಕೊಡತಿ ಪರುಷವಾದ ಬಳಿಕ ಮತ್ತಾಚಾರಾ. ॥೩॥ ಮಾಣಿಕವ ಹಿಡಿದವನ ಕೈಯ್ಯ ಸೆಕೆಹತ್ತುವದೆ, ಲಿಂಗಜಂಗವು ಪ್ರಸಾದವೆಂದರಿದಾಚಾರ. ॥೪॥ ಸಂಪಿಗೆಯ ಪುಷ್ಪವಲ್ಲಿ ಕೆಂಪುಂಡ ಭ್ರಮರನಂತೆ, ಕೂಡಲ ಚನ್ನಸಂಗನಲ್ಲಿ ಶರಣಬಸವಣ್ಣಂಗಾಚಾರ. ॥೫॥

ಮತ್ತಂ, ॥ಸ್ತೋತ್ರ॥ ನಚ್ಚುಬಿಚ್ಚದೆ ಮನದಲ್ಲಿ ಅಜ್ಜೊತ್ತಿದಂತಿದ್ದಿತ್ತು. ಲಿಂಗವೆನ್ನದು, ಜಂಗಮವೆನ್ನದು, ಪ್ರಸಾದವೆನ್ನದು, ಅದು ತನ್ನಲ್ಲಿ ತಾನಾಗಿ ತಾನೆ ಭರಿತನು. ಕೂಡಲಚನ್ನಸಂಗಯ್ಯ ನಿಮ್ಮ ಶರಣ ಬಸವಣ್ಣನ ನಿಲವನುಪಮಿಸಬಾರದು. ॥೧೯॥

ಇಂತು ಚಿಕ್ಕದಣ್ಣಾಯಕರು ಪ್ರಭುದೇವರೊಡನೆ ಬಸವರಾಜದೇವರ ಮಹಾತ್ಮೆಯನು ಸ್ತೋತ್ರ ಮುಖದಿಂದ ಕೊಂಡಾಡಲು, ಆ ಪ್ರಭುದೇವರು ಚನ್ನಬಸವರಾಜದೇವರೊಡನೆ ಆ ಬಸವರಾಜದೇವರ ಮಹಾತ್ಮೆಯಂ ಕೊಂಡಾಡುತ್ತ ಹೇಳಿದ ಪ್ರಸ್ಥಾವದ ವಚನ. ॥

ಆದಿ ಅನಾದಿ ಎಂಬೆರಡರ ಮೂಲವನೆತ್ತಿ ಆದಿಲಿಂಗ ಅನಾದಿಜಂಗಮವೆಂಬ ಭೇದವ ವಿವರಿಸಿ ತೋರಿದನಯ್ಯ ಬಸವಣ್ಣನು. ಕಾಯದ ಜೀವದ ಸಂಬಂಧವ ಮಾಡಿ ತೋರಿದನಯ್ಯ ಬಸವಣ್ಣನು. ಎನ್ನ ಆದಿ ಅನಾದಿಯನು ಬಸವಣ್ಣನಿಂದ ತಿಳಿದು ನಮ್ಮ ಗುಹೇಶ್ವರಲಿಂಗದಲ್ಲಿ ಸುಖಿಯಾದೆನು ಕೇಳಾ ಚನ್ನಬಸವಣ್ಣಾ. ॥೨೦॥

ಆದಿಲಿಂಗ, ಅನಾದಿಜಂಗಮವೆಂಬ ಭೇದವನು ಎನಗೆ ಬಸವಣ್ಣ ತೋರಿಸಿ ಕೃತಾರ್ಥನ ಮಾಡಿದನೆಂದು ಪ್ರಭುದೇವರು ಚನ್ನಬಸವರಾಜದೇವರೊಡನೆ ನಿರೂಪಿಸಲು ಆ ಚನ್ನಬಸವರಾಜದೇವರು ಪ್ರಭುದೇವರೊಡನೆ ನಿನಗೆ ಆದಿ ಅನಾದಿಗತೀತವಾದ ಲಿಂಗವೆಂತು ಸಾಧ್ಯವಾಯಿತ್ತೆಂದು ಕೇಳುವ ಪ್ರಸ್ಥಾವದ ವಚನ. ॥

ಆದಿಯಲ್ಲಿ ಬಂದುದಲ್ಲ. ಅನಾದಿಬಿಂದುವಿನಲ್ಲಿ ಅದುದಲ್ಲ. ನಾದವು ಕಳೆನುಂಗಿ, ಕಳೆಯು ನಾದವು ನುಂಗಿ, ಹೊಳೆವ ಲಿಂಗ ನಿನಗೆಂತು ಸಾಧ್ಯವಾಯಿತ್ತು ಹೇಳಾ? ಅಪ್ಪಣೆ ಇಲ್ಲದ ಅಪ್ಪಣೆಸಲುವುದೇ ಜಗಸೊಕ್ಕಿಗೆ? ಇದುಕಾರಣ ಕೂಡಲ ಚನ್ನಸಂಗಮದೇವರಲ್ಲಿ ಆದಿ ಸೋಂಕು ನಿನಗೆಂತು ಸಾಧ್ಯವಾಯಿತ್ತು ಹೇಳಾ ಪ್ರಭುವೆ? ॥೧೧॥

ಹೀಗೆಂದು ಚಿಕ್ಕದಣ್ಣಾಯಕರು ಬೆಸಗೊಳಲು, ಇದಕ್ಕೆ ಪ್ರಭುದೇವರು ನಿರೂಪಿಸಿದ ಪ್ರಸ್ಥಾವದ ವಚನ. ॥

ಆದಿ ಅನಾದಿಗೆ ಭೇದ ಉಂಟೆ? ಆದಿ ಲಿಂಗ ಅನಾದಿ ಶರಣನೆಂಬುದ ತನ್ನಿಂದ ತಾ ಮಾಡಲಾಯಿತ್ತು. ಧರೆ ಆಕಾಶ ಭುವನ ಭವನಂಗಳು ಹುಟ್ಟಿದ ಮುನ್ನ ಅನಾದಿ ಪರಶಿವನು ತಾನೆ ತನ್ನ ಲೀಲೆಗೆ ಸಾಕಾರವ ಧರಿಸಿದಡೆ ಸಾಕಾರವೆ ಈ ಸಾಕಾರವಾಯಿತ್ತು. ಎನ್ನ ಸಾಕಾರದ ಆದಿಯನು ಎನ್ನ ನಿರಾಕಾರದ ಆದಿಯನು ಬಸವಣ್ಣ ಬಲ್ಲನಾಗಿ ಗುಹೇಶ್ವರ ಲಿಂಗದ ಘನವು ಬಸವಣ್ಣನಿಂದ ಎನಗೆ ಸಾಧ್ಯವಾಯಿತ್ತು ಕಾಣಾ ಚನ್ನಬಸವಣ್ಣಾ. ॥೨೨॥

ಅನಾದಿ ಪರಶಿವ ತತ್ವದ ಘನವು ಸಾಧ್ಯವಾದ ಭೇದವನು ಪ್ರಭುದೇವರು ನಿರೂಪಿಸಲು, ಅದಕ್ಕೆ ಚಿಕ್ಕದಣ್ಣಾಯಕರು ಪರಿಣಾಮಿಸಿ ಆ ಪ್ರಭುದೇವರು ಸ್ತುತಿಸಿದ ವಚನ. ॥

ಆಶ್ರುತವಿಲ್ಲದ ಅನುಭಾವ. ಸ್ಥಾಯತನಿಲ್ಲದ ಸಮಾಧಾನ. ಸನ್ನಿಹಿತವಿಲ್ಲದ ಸಂಬಂಧವನೇನನೆಸಬಹುದಯ್ಯ? ಘನ ಮನವ ಭೇದಿಸಿ ಆದಿ ಅನಾದಿಯನೊಳಕೊಂಡ ಆಧಾರವಿಲ್ಲದ ನಿಲವು ಸಾಧ್ಯವಾಯಿತ್ತು ನೋಡಾ! ಕೂಡಲ ಚನ್ನಸಂಗಮದೇವರ ಶರಣ ಪ್ರಭುದೇವರು ಅಜಾತನೆಂಬ ಭೇದವ ಎನಗೆ ತಿಳಿಯಿತ್ತು. ॥೨೩॥

ಇಂತು ಪ್ರಭುದೇವರು ಅಜಾತ ಪರಿವಸನೆಂದರಿಂದ ಚನ್ನಬಸವಣ್ಣನು ನುತ್ತಂ ಪ್ರಭುದೇವರಿಂದ ಸಮಸ್ತ ತತ್ವಂಗಳೆಲ್ಲ ಉತ್ಪತ್ಯವಾದವೆಂಬ ಭೇದವನರಿದು ಸ್ತುತಿಸುತ್ತಿರ್ದ ಪ್ರಸ್ಥಾವದ ವಚನ. ॥

ಬಯಲ ಮೂರ್ತಿಯಾಗಿ ನಿಂದನೊಬ್ಬ ಶರಣ. ಆತನ ವಿದ್ಯಾಬುದ್ಧಿಯಿಂದ ಹುಟ್ಟಿದಾತ ಬ್ರಹ್ಮ. ಆತನ ಶಾಂತಿಪೈರಣೆಯಿಂದ ಹುಟ್ಟಿದಾತ ವಿಷ್ಣು. ಆತನ ಕೋಪಕ್ರೋಧದಿಂದ ಹುಟ್ಟಿದಾತ ರುದ್ರ. ಈ ನೂರು ಸೀತವಂತಿರಲಿ. ಈ ತತ್ಪತ್ರಯಂಗಳಿಗೆ ತಾನೆ ಕಾರಣವಾಗಿಪ್ಪ ಶರಣನ ನಿಲವನರಿದು, ಶರಣೆನುತಿರ್ದನು ಕೂಡಲಚನ್ನಸಂಗಮದೇವಾ. ॥೨೪॥

ಇಂತು ಚಿಕ್ಕದಣ್ಣಾಯಕರು ಪ್ರಭುದೇವರ ಮೂಲ ಸಂಭೂತಿತತ್ವವನು ಆತನ ಮಹಾಘನವನು ವಿವೇಕದಿಂದರಿದು ಸ್ತುತಿಸುತ್ತಿರಲು, ಆ ಪ್ರಭುದೇವರು ಚಿಕ್ಕದಣ್ಣಾಯಕರ ಪೂರ್ವಾಪರ ಸಂಬಂಧವನರಿತೆನೆಂದು ಸ್ತುತಿಸುತ್ತಿರ್ದ ಪ್ರಸ್ಥಾವದ ವಚನ. ॥

ಅಯ್ಯಾ, ತತ್ವಾದಿ ತತ್ವಂಗಳಿಲ್ಲವೆಂದು, ಪ್ರಕೃತಿ ಪುರುಷರಿಲ್ಲವೆಂದು, ಜೀವಪರಮರೆಂಬ ಭಾವ ಲೀಲೆದೋರವೆಂದು, ಏನೇನು ಇಲ್ಲವೆಂದು, ಬಯಲು ಬಲಿದು ಒಂದು ಬಿಂದುವಾಯಿತ್ತು ನೋಡಾ! ಆ ಬಿಂದು ಅಕ್ಷರತ್ರಯದ ಗದ್ದುಗೆಯಲ್ಲಿ ಕುಳ್ಳಿರಲು, ಓಂಕಾರ ಉತ್ಪತ್ಯವಾಯಿತ್ತು. ಆ ನಾದದಲ್ಲಿ ಮೂರ್ತಿಗೊಂಡನೊಬ್ಬ ಶರಣ. ಆ ಶರಣನಿಂದಾಯಿತ್ತು ಪ್ರಕೃತಿ. ಆ ಪ್ರಕೃತಿಯಿಂದಾಯಿತ್ತು ಲೋಕ. ಲೋಕ ಲೌಕಿಕವನತಿಗಳೆದು ನಿಜವಲ್ಲಿ ನಿವಾಸಿಯಾಗಿಪ್ಪ ಗುಹೇಶ್ವರನ ಶರಣ ಚನ್ನಬಸವಣ್ಣನ ಘನವನು ಬಸವಣ್ಣನ ಕೃಪೆಯಿಂದರಿದು, ನಮೋ ನಮೋ ಎನುತಿರ್ದನು. ॥೨೫॥

ಇಂತು ಬಸವರಾಜದೇವರ ಕೃಪೆಯಿಂದ ಚನ್ನಬಸವರಾಜದೇವರ ನಿಜವನರಿದೆನೆಂದು ಪ್ರಭುದೇವರು ನಿರೂಪಿಸುತ್ತಿರಲು, ಆ ಚನ್ನಬಸವರಾಜದೇವರು ಪ್ರಭುದೇವರೊಡನೆ ಬಸವರಾಜದೇವರ ಘನವನು ಎನಸೆ ತೋರಿಸಿಕೊಡು ಎಂದು ಬಿನ್ನೈಸುತ್ತಿರ್ದ ಪ್ರಸ್ಥಾವದ ವಚನ. ॥

ನಿರಾಲಂಬದಲ್ಲಿ ನಿಜಲಿಂಗ ನಾನೆಂಬ ಮಹದಂಕಾರವೆ ಸಂಸಾರವಾಗಿ ಬಂದು ಬಳಲುವ ಭ್ರಾಂತಿ ಇನ್ನಾರಿಗೆ ತಿಳಿವುದಯ್ಯ, ಇನ್ನಾರು ಪರಿಹರಿಸುವರಯ್ಯ ಬಸವಣ್ಣನಲ್ಲದೆ? ಇದುಕಾರಣ ಕೂಡಲ ಚನ್ನ

ಸಂಗಮದೇವ ಬಸವಣ್ಣನ ಶ್ರೀಪಾದದ ಘನವನೊಮ್ಮೆ ಅರುಹಾ ಪ್ರಭುವೆ. ॥೨೬॥

ಎನಗಿಲ್ಲದ ಘನವನೇರಿಸಿ ನುಡಿದರೆ ಅದು ನಿಮ್ಮ ಲೀಲೆ. ನಾನದ ಬೇಕೆನ್ನೆ, ಬೇಡವೆನ್ನೆ. ಅವಂತಿರಲಿ. ನಿಮ್ಮ ಶ್ರೀಪಾದದ ಕೃಪೆಯಿಂದೆ ನಿಮ್ಮ ನಿಲವ ನಂದೆನು ಕೂಡಲ ಚನ್ನಸಂಗಮದೇವ ಎನಗೊಮ್ಮೆ ಬಸವಣ್ಣನ ಘನವನರುಹಾ ಪ್ರಭುವೆ. ॥೨೭॥

ಬಸವಣ್ಣನ ಘನವನರುಹೆಂದು ಚಿಕ್ಕದಣ್ಣಾಯಕರು ಪ್ರಭುದೇವರ ಬಿಸಗೊಳಲು, ಆ ಪ್ರಭುದೇವರು ಮರಳಿ ಚಿಕ್ಕದಣ್ಣಾಯಕರ ಬೆಸಗೊಂಬ ಪ್ರಸ್ಥಾವದ ವಚನ. ॥

ಅಪ್ಪಿತಪ್ಪೆಂಬ ಶಿಸುವೆನ್ನ ಕರಸ್ಥಲವ ಸೋಂಕಲೊಡನೆ ಎನ್ನ ತನ್ನಂತೆ ಮಾಡಿತ್ತಾಗಿ, ಎನ್ನ ನಾನೆಂಬ ವಿಚಾರವು ಅರತು ಹೋಯಿತ್ತು ಕೇಳಾ. ಮತ್ತೆ ಅನ್ಯ ವಿಚಾರವನೆಂತು ಅರಿಯೆ. ಎನ್ನ ಪೂರ್ವಾಪರ ನಿಮ್ಮಿಂದ ಅರಿಯಲೆಂದು ಬಂದು ನಿಮ್ಮ ಮರೆಹೊಕ್ಕೆನಾಗಿ ಸಂಗನಬಸವಣ್ಣನ ಮಹಿಮೆಯ ನಾನೆತ್ತ ಬಲ್ಲೆನು? ಗುಹೇಶ್ವರ ಸಾಕ್ಷಿಯಾಗಿ ಸಂಗನಬಸವಣ್ಣ ನಿನ್ನಂತರಂಗದೊಳಗೆ ಬೆಳಗುತ್ತೈದಾನೆ. ಎನಗೊಮ್ಮೆ ಬಸವಣ್ಣನ ಘನವ ತಿಳುಹಿಕೊಡಾ ಚನ್ನಬಸವಣ್ಣಾ. ॥೨೮॥

ಮತ್ತಂ, ಆದಿಯ ತೋರಿದೆ. ಅನಾದಿಯನರುಹಿದೆ. ಇಹವ ಕೆಡಿಸಿದೆ. ಪರವ ನಿಲಿಸಿದೆ. ಕಾಯ ಪ್ರಸಾದ, ಭಾವ ಪ್ರಸಾದ, ಜ್ಞಾನಪ್ರಸಾದವನೇಕವ ಮಾಡಿ ತೋರಿದೆ. ಪರವನೊಳಕೊಂಡು ಪರಿಣಾಮದಲ್ಲಿರಿಸಿದೆ. ಗುಹೇಶ್ವರನ ಶರಣ ಸಂಗನಬಸವಣ್ಣನ ಪೂರ್ವಾಪರವ ಹೇಳಿ ಎನ್ನನು ಸಹಕೊಳ್ಳಾ ಚನ್ನಬಸವಣ್ಣಾ. ॥೨೯॥

ಇಂತು ಬಸವರಾಜದೇವರ ನಿಲವನರುಹೆಂದು ಪ್ರಭುದೇವರು ಬೆಸಗೊಳಲು, ಅದಕ್ಕೆ ಚಿಕ್ಕದಣ್ಣಾಯಕರು ಪ್ರಭುದೇವರೊಡನೆ ಬಸವರಾಜದೇವರ ಪೂರ್ವಾಪರ ಸಂಬಂಧಮಂ ಸುಜ್ಞಾನದೃಷ್ಟಿಯಿಂದೀಕ್ಷಿಸಿ, ಬಿನ್ನೈಸುತ್ತಿರ್ದ ಪ್ರಸ್ಥಾವದ ವಚನ. ॥

ಒಂದು ಒಂದು ಇಲ್ಲವೆಂದು, ನಂದಿವಾಹನರಿಲ್ಲವೆಂದು, ಹಿಂದೆ ಹದಿನಾಲ್ಕು ಭುವನಂಗಳಿಲ್ಲವೆಂದು, ಅಂದಾರು ಲಿಂಗವ ಕಂಡವರಿಲ್ಲ. ಅಂದು ಲಿಂಗವ ಕಂಡು ಹೇಳಿದರೆ ಅತನೆ ಅಪ್ಪಿತ ಎಂಬೆ. ಅಂದು ಕೂಡಲ

ಚನ್ನಸಂಗಯ್ಯನಲ್ಲಿ ಬಸವಣ್ಣನೊಬ್ಬನೆ ಉದಯವಾಗಿರ್ದನು ಕೇಳಾ ಪ್ರಭುವೆ. ॥೩೦॥

ಮತ್ತಂ, ಕೃತಯುಗದಲ್ಲಿ ದೇವರು ದೇವಾಸುರನ ಕೊಲ್ಲುವಲ್ಲಿ ಪ್ರಮಥನೆಂಬ ಗಣೇಶ್ವರನಾಗಿರ್ದನು. ಗಜಾಸುರನ ಚರ್ಮವ ಬಿಚ್ಚಿ ತಜಾರಿಸಿ ಹೋದೆವಲ್ಲಿ ಉಗ್ರನೆಂಬ ಗಣೇಶ್ವರನಾಗಿರ್ದನು. ಆ ಸುರರ ತಿರೋಮಾಲೆಯ ಕೊರಳಲ್ಲಿ ಉರದಲ್ಲಿ ಹಾರವಾಗಿ ಧರಿಸಿ ಜಗಕ್ಕೆ ಜೂಬಾಗಿಪ್ಪಲ್ಲಿ ಶಂಕೆ ಇಲ್ಲದೆ ನಿಃಶಂಕನೆಂಬ ಗಣೇಶ್ವರನಾಗಿರ್ದನು. ಸಮಸ್ತ ದೇವರಿಗೆ ಕರುಣಾಸ್ಫುತವ ಸುರಿದು, ಸುಖವನಿತ್ತು ರಕ್ಷಿಸುವಲ್ಲಿ ಶಂಕರನೆಂಬ ಗಣೇಶ್ವರನಾಗಿರ್ದನು. ಜಾಳಂಧರನೆಂಬ ಅಸುರನ ಕೊಲುವಲ್ಲಿ ಜಾಣಂಗೆ ಜಾಣನಾಗಿ ವಿಚಿತ್ರನೆಂಬ ಗಣೇಶ್ವರನಾಗಿರ್ದನು. ತ್ರೇತಾಯುಗವಲ್ಲಿ ಕಾಳಾಂಧರದೊಳಗೆ ಶಿವನು ನಿಜಮಂದಿರವಾಗಿಪ್ಪಲ್ಲಿ ಕಾಲಾಗ್ನಿರುದ್ರನೆಂಬ ಗಣೇಶ್ವರನಾಗಿರ್ದನು. ಪಿತಾಸುರನೆಂಬ ದೈತ್ಯನ ಕೊಂದು ರಕ್ಷಿಸುವಲ್ಲಿ ಮಾತಾಪಿತನೆಂಬ ಗಣೇಶ್ವರನಾಗಿರ್ದನು. ತಾಳಾಸುರನೆಂಬ ದೈತ್ಯನ ಕೊಂಡು, ಜಗವ ರಕ್ಷಿಸಿ, ಸೃಷ್ಟಿಯ ಕಲ್ಪಿಸಿ, ಬ್ರಹ್ಮಾಂಡ ಭಾರ ಮುಂಧರಿಸುವಲ್ಲಿ, ತಾಳಮೇಳನೆಂಬ ಗಣೇಶ್ವರನಾಗಿರ್ದನು. ಜಗಪ್ರಳಯವಲ್ಲಿ ಜಗನ್ನಾಥನು ಅಳಿಯದೆ ಇಪ್ಪಲ್ಲಿ ಜನನಮರಣ ವರ್ಜಿತನೆಂಬ ಗಣೇಶ್ವರನಾಗಿರ್ದನು. ಜಗವೆಲ್ಲ ಶೂನ್ಯವೆಂದರೆ ನಾನೆ ಹುಟ್ಟಿಸಿದೆನೆಂದು ಆದಿಗಣನಾಥನೆಂಬ ಗಣೇಶ್ವರನಾಗಿರ್ದನು. ಸುರಾಸುರರ ಅಹಂಕಾರವಲ್ಲಿ ಹೆಚ್ಚಿ ಮೇರೆದಪ್ಪಿದಲ್ಲಿ ಗೂಳಿಯಾಗಿ ಹೋಗಿ ಎಲ್ಲರ ತೊತ್ತಳ ದುಳಿದು ಒಕ್ಕಲಿಕ್ಕಿ ಮಿಕ್ಕುಮಿಗೂರಿ ನಂದಿಮಹಂಕಾಳನೆಂಬ ಗಣೇಶ್ವರನಾಗಿರ್ದನು. ಉರಿಗಣ್ಣ ತೆರೆದರೆ ಉರಿದವು ಲೋಕಂಗಳೆಂದು, ಜಗವ ಒಂದಿಕ್ಕಿಕೊಂಡು ವಂಶ್ಯನೆಂಬ ಗಣೇಶ್ವರನಾಗಿರ್ದನು. ಉಮೆಯ ಕಲಾಣದಲ್ಲಿ ಕಾಲಲೋಚನನೆಂಬ ಗಣೇಶ್ವರನಾಗಿರ್ದನು. ಅಂಧಕಾಸುರನ ಕೊಲುವಲ್ಲಿ ನೀಲಲೋಹಿತನೆಂಬ ಗಣೇಶ್ವರನಾಗಿರ್ದನಯ್ಯ. ತ್ರಿಪುರ ದಹನವ ಮಾಡುವಲ್ಲಿ ಸ್ಕಂದನೆಂಬ ಗಣೇಶ್ವರನಾಗಿರ್ದನಯ್ಯ. ಬ್ರಹ್ಮ ಕಪಾಲ ವಿಷ್ಣು ಕಂಕಾಳವನಿಕ್ಕುವಲ್ಲಿ ನೀಲಕಂಠನೆಂಬ ಗಣೇಶ್ವರನಾಗಿರ್ದನು. ದ್ವಾಪರವಲ್ಲಿ ಲಿಂಗ ಪ್ರಾಣಸಂಯೋಗವಾಗಿ ವೃಷಭನೆಂಬ ಗಣೇಶ್ವರನಾಗಿರ್ದನು. ಇಂತು ನಾಲ್ಕು ಯುಗ ಹದಿನೆಂಟು ಜಗಂಗಳಂ ಮಡಿವಲ್ಲಿ ಹುಟ್ಟುವಲ್ಲಿ ನಂದಿಕೇಶ್ವರನೆಂಬ ಗಣೇಶ್ವರನಾಗಿರ್ದನಯ್ಯ! ಕಲಿಯುಗದಲ್ಲಿ ಗುರುಲಿಂಗಜಂಗಮವಾದೋವಕವ ಪೂರ್ವಾಶ್ರಯವಳಿದು, ಲಿಂಗವಾಗಿ, ಕುಕಸ್ಫಳವನಂತ ಮಹಂತ ಕೂಡಲಚನ್ನಸಂಗನ ಮಹಾಮನೆಯಲ್ಲಿ ಸರ್ವಾಚಾರ ಸಂಪನ್ನ ಬಸವಣ್ಣನೆಂಬ ಗಣೇಶ್ವರನಾರ್ದನು ಕೇಳಾ ಪ್ರಭುವೆ. ॥೩೧॥

ಇಂತು ಚಿಕ್ಕದಣ್ಣಾಯಕರು ಬಸವರಾಜದೇವರ ಪೂರ್ವಾಪರ ಸಂಗತ್ಯವಂ ಬಿನ್ನೈಸಲು, ಆ ಪ್ರಭುದೇವರು ಚಿಕ್ಕದಣ್ಣಾಯಕರಂ ಸಂತೈಸಿ ಕೊಂಡಾಡುವ ಪ್ರಸ್ಥಾವದ ವಚನ. ॥

ಅಂದದೀತನ ಮಾತ ಅಂಪಂದಿಗೆ ಅರಿಯಬಾರದು. ಹಿಂದೆ ಹೋದ ಯುಗ ಪ್ರಳಯಂಗಳ ಬಲ್ಲವರಾರಯ್ಯ! ಮುಂದೆ ಬಪ್ಪ ಯುಗಪ್ರಳಯಂಗಳ ಬಲ್ಲವರಾರಯ್ಯ! ಬಸವಣ್ಣನು ಆದಿಯಲ್ಲಿ ಲಿಂಗ ಶರಣನೆಂಬುದ ಭೇದಿಸಿ, ನೋಡಿ ಅರಿವರಿನ್ನಾರಯ್ಯ! ಲಿಂಗಜಂಗಮಪ್ರಸಾದದ ಮಹಾತ್ಮೆಗೆ ಬಸವಣ್ಣನೆ ಆದಿಯಾದನೆಂಬುದನರಿವ ಸ್ವಯಂಭು ಜ್ಞಾನ ಗುರೇಶ್ವರಲಿಂಗವಲ್ಲಿ ಚನ್ನಬಸವಣ್ಣನೊಬ್ಬನೆ. ॥೩೨॥

ಬಸವಣ್ಣನೆ ಆದಿ ಶರಣ. ಆತನ ಮಹಿಮೆಯನರಿಯುವ ನಿಮ್ಮ ಜ್ಞಾನಕ್ಕೆ ಪ್ರತಿ ಇಲ್ಲವೆಂದು ಪ್ರಭುದೇವರು ನಿರೂಪಿಸಲು. ಇದಕ್ಕೆ ಚನ್ನಬಸವರಾಜದೇವರು ಬಸವಣ್ಣನೆ ಆದಿ ಶರಣನೆಂದು ನುಡಿಯಲಾಗದೆಂದು ಪ್ರಭುದೇವರೊಡನೆ ಬಿನ್ನೈಸುವ ಪ್ರಸ್ಥಾವದ ವಚನ. ॥

ಆದಿ ಬಸವಣ್ಣನು ಅನಾದಿ ಲಿಂಗವೆಂಬುದು ತಾ ಹುಸಿ ಹುಸಿ. ಈ ನುಡಿಯ ಕೇಳಲಾಗದು. ಆದಿ ಲಿಂಗ ಅನಾದಿ ಬಸವಣ್ಣನು. ಲಿಂಗವು ಬಸವಣ್ಣನುದರದಲ್ಲಿ ಹುಟ್ಟಿತ್ತು. ಜಂಗಮವು ಬಸವಣ್ಣನ ಉದರವಲ್ಲಿ ಹುಟ್ಟಿತ್ತು. ಪ್ರಸಾದವು ಬಸವಣ್ಣನನುಕರಿಸಲಾಯಿತ್ತು. ಈ ತ್ರಿವಿಧಕ್ಕೆ ಬಸವಣ್ಣನೆ ಕಾರಣನೆಂದಂಪಿನಯ್ಯ ಕೂಡಲ ಚನ್ನಸಂಗಮದೇವಾ. ॥೩೩॥

ಹೀಗೆಂದು ಚಿಕ್ಕದಣ್ಣಾಯಕರು ಬಿನ್ನೈಸಲು. ಅವಕ್ಕೆ ಪ್ರಭುದೇವರು ನಿರೂಪಿಸಿದ ಪ್ರತ್ಯುತ್ತರ. ॥

ಕಾಯವಿಡಿದು ಹುಟ್ಟಿದಾತ ಕಾಲಾಗ್ನಿ ರುದ್ರನಾದರಾಗಲಿ, ಕಾಯವಿಡಿದು ಹುಟ್ಟಿದಾತ ಕಾಮಸಂಹಾರನಾಗಲಿ, ಕಾಯವಿಡಿದು ಹುಟ್ಟಿದಾತ ಅನಾದಿ ಪರಮೇಶ್ವರನಾಗಲಿ, ಅರಿವು ಸಾಧ್ಯವಾಗದು. ಅವರಿಗೆಯು ಗುಹೇ

ಪ್ರಲಿಂಗದಲ್ಲಿ ನೀನು ಕಾಯವಿಡಿದು ಕಪ್ಪತವ ಹೊವ್ವನೆಂಬುದ ಕಾಣ
ದಂದಿತ್ತು ನೋಡಾ ಚನ್ನಬಸವಣ್ಣಾ. ॥೩೪॥

ಇಂತು ಶರೀರವಿಡಿದು ದಿವ್ಯಜ್ಞಾನಿ ನೀನೊಬ್ಬನೆಂದು ಪ್ರಭುದೇವರು ನಿರೂಪಿಸಲು, ಇದಕ್ಕೆ ಚಿಕ್ಕದಣ್ಣಾಯಕರು ಕಾಯವಿಡಿದು ನಿನ್ನ ಕಂಡೆನೆಂದು ಬಿನ್ನೈಸಿದ ಪ್ರಸ್ಥಾವದ ವಚನ. ॥

ಕಾಯದಿಂದ ಲಿಂಗದರ್ಶನ, ಕಾಯದಿಂದ ಜಂಗಮದರ್ಶನ, ಕಾಯದಿಂದ ಪ್ರಸಾದ ಸಂಪತ್ತು. ಕೂಡಲಚನ್ನಸಂಗಯ್ಯ ಕಾಯದಿಂದ ನಿನ್ನ ಕಂಡೆನು. ॥೩೫॥

ಇಂತು ಶರೀರವಿಡಿದು, ನಿನ್ನ ಕಂಡೆನೆಂದು ಬಿನ್ನೈಸಲು ಇದಕ್ಕೆ ಪ್ರಭುದೇವರು ಆಚಾರ ಅಂಗವಾಗಿಪ್ಪಡೆ ನೀವಲ್ಲದೆ, ಮತ್ತಾರು ಇಲ್ಲವೆಂದು ಚಿಕ್ಕದಣ್ಣಾಯಕರ ಕೊಂಡಾಡಿದ ವಚನ. ॥

ಅಂಗವಿಡಿದು, ಅಂಗ ಅನಂಗವೆಂಬೆರಡನು ಹೊಂದಿದ ಮಹಿಮನ
ನೋಡಾ. ಅಂಗವೆ ಆಚಾರವಾಗಿರ ಬಲ್ಲ, ಆಚಾರವೆ ಅಂಗವಾಗಿರ ಬಲ್ಲ
ನಾಗಿ, ಅಂಗವಿಲ್ಲದ ಪ್ರತಿಮನ ನೋಡಾ. ಆಚಾರ ಸ್ವಾಯತ, ಆಚಾರವೆ
ಪ್ರಾಣ. ಗುಹೇಶ್ವರ ಲಿಂಗದಲ್ಲಿ ನಿನ್ನ ಆಚಾರವ ಭಿಕ್ಷವನಿಕ್ಕು ಚನ್ನಬಸ
ವಣ್ಣಾ. ॥೩೬॥

ನೀನು ಸದಾಚಾರವೆ ಸರ್ವಾಂಗವಾಗಿಪ್ಪೆಯಾಗಿ, ಎನಗೆ ನಿನ್ನ
ಸರ್ವಾಚಾರ ಸಂಪತ್ತಿನ ಕಾರುಣ್ಯ ಪ್ರಸಾದವನಿಕ್ಕೆಂದು ಪ್ರಭುದೇವರು
ನಿರೂಪಿಸಲು, ಇದಕ್ಕೆ ಚಿಕ್ಕದಣ್ಣಾಯಕರು ಆಚಾರವೆಂಬುದು ಸಂಗನ
ಬಸವಣ್ಣಂಗುಂಟಲ್ಲದೆ ಎನಗೆಲ್ಲಿಯದೆಂದು ಬಿನ್ನೈಸುವ ಪ್ರಸ್ಥಾವದ ವಚನ.

ಗುರುಲಿಂಗದಲ್ಲಿ ಅಂಗವಾಗಿ ಆಚಾರಲಿಂಗ ಪ್ರಸಾದಿಯಾದ. ಆಚಾರ
ಲಿಂಗದಲ್ಲಿ ಅವಧಾನಿಯಾಗಿ ಸರ್ವಾಚಾರ ಸಂಪನ್ನನಾದ. ಸರ್ವಾಚಾರ
ಸಂಪತ್ತಿನಲ್ಲಿ ಲಿಂಗೈಕ್ಯನಾಗಿಪ್ಪನು. ಕೂಡಲಚನ್ನಸಂಗಯ್ಯನಲ್ಲಿ ಸಂಗನ
ಬಸವಣ್ಣನು ಆಚಾರವ ಬಲ್ಲನಲ್ಲದೆ ನಾನೆತ್ತ ಬಲ್ಲೆನಯ್ಯ. ॥೩೭॥

ಮತ್ತಂ, ಆಚಾರವೆಂಬುದು ಅಗೋಚರ ನೋಡಯ್ಯ. ಮಾಡಿದ
ಲ್ಲಿವೆ ಬಲ್ಲ. ಒಡಲು ಹಿಡಿದರೆ ಹಿಡಿಯಲಿಲ್ಲವಯ್ಯ. ಮಾಟಕೂಟವೆಂಬ

ವನ ಕಳೆದಿಪ್ಪ ಕೂಡಲಚನ್ನಸಂಗಯ್ಯನ ಕೈಯಲ್ಲಿ ಆಚಾರವನು ಸಂಗನಬಸವಣ್ಣ ಬಲ್ಲ ನೋಡಾ ಪ್ರಭುವೆ. ॥೩೮॥

ಆಚಾರವನು ಬಸವಣ್ಣ ಬಲ್ಲನೆಂದು, ಚಿಕ್ಕದಣ್ಣಾಯಕರು ಬಿನ್ನೈಸಲು, ಆ ಬಸವಣ್ಣನಾಚಾರವೆಂತಿಪ್ಪುದೆಂದು ಪ್ರಭುದೇವರು ಚಿಕ್ಕದಣ್ಣಾಯಕರ ಬೆಸಗೊಂಬ ಪ್ರಸ್ಥಾವದ ವಚನ. ॥

ಆಯತ ಸ್ವಾಯತ ಸನ್ನಿಹಿತನಾಗಿ, ಆರಾಧ್ಯ ಲಿಂಗದಲ್ಲಿ ಅನುಭಾವಿಯಾಗಿಪ್ಪನು. ಜಂಗಮಲಿಂಗಪ್ರಾಣಿಯಾಗಿ ಪ್ರಾಣ ನಿಃಪ್ರಾಣವಾಗಿಪ್ಪ ಗುಹೇಶ್ವರಲಿಂಗದಲ್ಲಿ ಸಂಗನಬಸವಣ್ಣನ ಆಚಾರದ ಪರಿ ನಿನಗಲ್ಲದೆ ಅರಿಯಬಾರದು. ಎಸಗೊಮ್ಮೆ ತಿಳುಹಿಕೊಡಾ ಸಂಗನಬಸವಣ್ಣಾ. ॥೩೯॥

ಇಂತು ಬಸವರಾಜದೇವರ ಆಚಾರವನುವನು ಎನಗೊಮ್ಮೆ ತಿಳುಹಿಕೊಡೆಂದು ಪ್ರಭುದೇವರು ನಿರೂಪಿಸಲು, ಚಿಕ್ಕದಣ್ಣಾಯಕರು ಬಸವರಾಜದೇವರ ಸದಾಚಾರ ವರ್ತನೆಯ ಪ್ರಭುದೇವರೊಡನೆ ಬಿನ್ನೈಸಿದ ಪ್ರಸ್ಥಾವದ ವಚನ. ॥

ಆಚಾರವಂಗ ಸಂಬಂಧವಾದಲ್ಲಿ ಶ್ರೀಗುರು ಸನ್ನಿಹಿತ. ಅರಿವು ಮನ ಲಿಂಗ ಸಂಬಂಧವಾದಲ್ಲಿ ಶಿವಲಿಂಗ ಸನ್ನಿಹಿತ. ಈ ಉಭಯಸನ್ನಿಹಿತವಾದಲ್ಲಿ ಜಂಗಮಲಿಂಗ ಸನ್ನಿಹಿತ. ಇದುಕಾರಣ ಕೂಡಲಚನ್ನಸಂಗನಿನ್ನಲ್ಲಿ ತ್ರಿವಿಧ ಸಂಪನ್ನ ಶರಣ ಸಂಗನಬಸವಣ್ಣನು. ॥೪೦॥

ಗುರುವಿನಲ್ಲಿ ಸದಾಚಾರಿ, ಲಿಂಗದಲ್ಲಿ ಶಿವಾಚಾರಿ, ಜಂಗಮದಲ್ಲಿ ಸಮಯಾಚಾರಿ, ಪ್ರಸಾದದಲ್ಲಿ ಬ್ರಹ್ಮಚಾರಿ, ಆಚಾರದಲ್ಲಿ ಗುವಿಚಾರಿ, ಕೂಡಲಚನ್ನಸಂಗ ನಿನ್ನ ಶರಣ ಬಸವಣ್ಣನು. ॥೪೧॥

ಮತ್ತಂ, ಮರಕ್ಕೆ ಬಿತ್ತು ಹುಟ್ಟುವರೇನಯ್ಯ? ಬಿತ್ತಿಂಗೆ ಮರ ಹುಟ್ಟುವರೇನಯ್ಯ? ಮರದ ಬೆಸಿನ ಫಲದ ಪರಿಯ ಬೆಸಗೊಳ್ಳಲಿಲ್ಲ. ಪಸಿಪಲ್ಲಿ ಬಿಸಿತ್ರಿವಿಧವಾಯಿತ್ತು. ಕೂಡಲಚನ್ನಸಂಗನಿನ್ನ ಶರಣಬಸವಣ್ಣಂಗೆ. ॥೪೨॥

ಇಂತು ಚನ್ನಬಸವರಾಜದೇವರು ಸಂಗನಬಸವಣ್ಣನ ಸರ್ವಾಚಾರ ಸಂಪತ್ತು ಕೊಂಡಾಡಿ, ಪ್ರಭುದೇವರಿಗೆ ಬಿನ್ನೈಸಲು, ಆ ಪ್ರಭುದೇವರು ಬಸವರಾಜದೇವರು ಮಾಡಿದ ದಾಸೋಹವನು ಮನಸಿನಿ ನೋಡುವ ಪ್ರಸ್ಥಾವದ ವಚನ. ॥

ಲಿಂಗವಲ್ಲಿ ಅಂಗವಾಗಿ, ಅಂಗ ವಿರಹಿತನಾಗಿ ಫಲವೇನಯ್ಯ? ಜಂಗಮದಲ್ಲಿ ಸನ್ನಿಹಿತನಾಗಿ ದಾಸೋಹವ ಮಾಡಿ ಫಲವೇನಯ್ಯ? ನೀ ನಾನೆಂಬ ಭಾವವುಳ್ಳನ್ನೆರ ಜಂಗಮದಲ್ಲಿ ಸಮಯಾಚಾರಿಯಾಗಿಪ್ಪನ್ನೆರ, ಮಾಡುವ ಭಕ್ತಿಗ ಭಿನ್ನವಪೆ. ಗುಹೇಶ್ವರಲಿಂಗದಲ್ಲಿ ಸಂಗನಬಸವಣ್ಣಂಗೆ ಆಚಾರವೆ ತಿಳಿಯದು ನೋಡಾ ಚೆನ್ನಬಸವಣ್ಣಾ! ॥೪೩॥

ಇಂತು ಪ್ರಭುದೇವರು ಬಸವರಾಜದೇವರಿಗೆ ವರ್ತನೆ ತಿಳಿಯು ವೆಂದು ನಿರೂಪಿಸಲು, ಚಿಕ್ಕದಣ್ಣಾಯಕರು ಆ ಬಸವರಾಜದೇವರ ವರ್ತನೆಯ ನಿಲವನು ಪ್ರಭುದೇವರೊಡನೆ ವಿಸ್ತೈಸುತಿರ್ದ ಪ್ರಸ್ತಾವದ ವಚನ. ॥

ಸಂಗವಿಡಿವಡೆ ಸಂಗವಿಡಿದು ನೋಡದಿರಯ್ಯ! ಶರಣಸಂಗ ಸೂತಕಿಯಲ್ಲ. ಲಿಂಗ ಪರಿಚಿತನ ಸಂಗವಂತನೆನ್ನದಿರಯ್ಯ! ಶರಣ ಮನಬಂದಂತೆ ಮಾಡುವ ಆರಸಿ ಸಕಲಾಗಮಾಚಾರ್ಯನಪ್ಪ ಅಹುದಾಗದೆಂಬುದಿಲ್ಲ ನೋಡಯ್ಯ. ಕೂಡಲಚನ್ನಸಂಗ ನಿಮ್ಮ ಶರಣ ಬಸವಣ್ಣನು ಸಂಗಿಯಲ್ಲ ನಿಸ್ಸಂಗಿಯಲ್ಲ. ॥೪೪॥

ಅನೆಂಬುದಿಲ್ಲವಯ್ಯ ಲಿಂಗವೆಂಬ ಮಹಂತಂಗೆ. ಅಳಿಯನುಳಿಯು ನೋಡಾ. ವಿಂಚಿನ ಗೊಂಚಲಂತೆ ಹಿಂದೆ ರೂಸಾಗಿ ತೋರುತ್ತಿರ್ಪುದು. ಶರಣನೊಡಲುಗೊಂಡಡೆ ಸಾವಾಸ್ಯನೆ? ಪ್ರಕೃತಿಗುಣ ಭಿನ್ನಭಾವಿಯಲ್ಲ. ಕೂಡಲಚನ್ನಸಂಗ ನಿಮ್ಮ ಶರಣಬಸವಣ್ಣನ ಪರಿ ಬೇರೆ. ॥೪೫॥

ಮತ್ತಂ, ಅನಾಯಾಸದಿಂದ ಮನೆಯ ಮಾಡಿ ನಿರಾಯಾಸದಿಂದ ಪರಮಸುಖಿ. ರೂಹಿಸುವಲ್ಲಿ ರೂಪಾಧಿಕ. ನೋಡುವಲ್ಲಿ ನೋಟ ಘನ. ಇಂತಹ ಸಹಜ ಸಂಗಿಯ ನಿಲವಿನ ಪರಿ. ಉದರದೊಳಗಣ ಬಿಂಬ ಉದಯ ರತ್ನಸಂಚವಂತೆ ಕೂಡಲಚನ್ನಸಂಗ ನಿಮ್ಮ ಶರಣನ ಪರಿ ಬೇರೆ. ॥೪೬॥

ಮತ್ತಂ, ಶರಣನು ದೃಷ್ಟಾದೃಷ್ಟನಲ್ಲ ನರಿಯನು. ಸಾವಯವ ನಿರವಯವನೇನೆಂದು ವಿವರಿಸಿ ನುಡಿಯನು. ತಾನು ಸ್ವತಂತ್ರನಾಗಿ ಭಾವರಹಿತನು. ವಿಕೃತ ವೇಷದಿಂದ ಸುಕೃತವ ಜೋಡಿಸುವನಲ್ಲ. ಗುಣವಿಡಿದು ಮೂರ್ತಿಯಾವ ಉಪಜೀವಿಕನಲ್ಲ. ಕೂಡಲಚನ್ನಸಂಗ ನಿಮ್ಮ ಶರಣ ಸಾರಾಯಸನುಮತನು. ॥೪೭॥

ದೇಹಿಯಲ್ಲ ನಿರ್ದೇಹಿಯಲ್ಲ. ಜೋಧಕನಲ್ಲ ನಿರ್ಜೋಧಕನಲ್ಲ, ಕಾಮಿಯಲ್ಲ ನಿಃಕಾಮಿಯಲ್ಲ. ಆಸೆವಿಡಿದು ಬಂದ ಅನುಮಿಷನಲ್ಲ. ಭವ

ವರ್ಜಿತವಿದ ನಿರ್ಗುಣ ನೋಡಯ್ಯ ಕೂಡಲಚನ್ನಸಂಗ ನಿಮ್ಮ ಶರಣ ನೋಡಯ್ಯ. ॥೪೮॥

ಮೂರ್ತನಲ್ಲ, ಅಮೂರ್ತನಲ್ಲ. ಲಿಂಗದಲ್ಲಿ ಪ್ರಾಣಸಂಚಿತ, ಪ್ರಾಣ ಪ್ರಸಾರ ಸಂವರಣೆ, ಪ್ರಸಾದದಲ್ಲಿ ಕಾಯಾತ್ರಿತನು. ಲೋಕಲೌಕಿಕ ವಿಚಾರದುದಯನಲ್ಲ ಕೂಡಲಚನ್ನಸಂಗ ನಿಮ್ಮ ಶರಣನು. ॥೪೯॥

ಮತ್ತಂ, ಶರಣ ದೃಷ್ಟಾದೃಷ್ಟ ಕಾಣಯ್ಯ. ಮುಟ್ಟಿದ ಮುಟ್ಟುವನು ಕಾಣಯ್ಯ. ಆಗಿನ ಆಗು ಕಾಣಯ್ಯ. ಛೇದದ ಛೇದ ಕಾಣಯ್ಯ. ಅರಿವಿನ ಅರಿವು ಕಾಣಯ್ಯ. ಲಿಂಗದಲ್ಲಿ ಹಿಂಗದ ಬಿಂದು ಕೂಡಲಚನ್ನಸಂಗ ನಿಮ್ಮಲ್ಲಿ ಬಸವಣ್ಣ ಕಾಣಯ್ಯ. ॥೫೦॥

ಮತ್ತಂ, ಸಕಳ ನಿಃಕಳನಯ್ಯ. ನಿಃಕಳ ಸಕಳನಯ್ಯ. ಸಕಳನಾಗಿ ಸಂಸಾರಿಯಲ್ಲ. ನಿಃಕಳನಾಗಿ ವೈರಾಗಿಯಲ್ಲ. ಸಂಸಾರಿಯಲ್ಲದ ಸಂಗವು ವೈರಾಗಿಯಲ್ಲದ ನಿಃಸಂಗವು. ಉಭಯ ಸಂಗವಿಂದ ಮಹತ್ತನೈದಿಪ್ಪನಾಗಿ, ॥ ಸಾಕ್ಷಿ॥ ಸ್ಥಾವರಂ ಜಂಗಮಶ್ಚೈವ। ದ್ವಿವಿಧಂಲಿಂಗಮುಚ್ಯತೆ ॥ ಎಂದುದಾಗಿ, ಕೂಡಲಚನ್ನಸಂಗನಂತಿದ್ದುದಂತೆ ಇಪ್ಪನಲ್ಲದೆ ನಿಮ್ಮ ಶರಣ ಕ್ಷೀಣನಲ್ಲ. ॥೫೧॥

ಇಂತು ಚಿಕ್ಕದಣ್ಣಾಯಕರು ಬಸವರಾಜದೇವರ ನಿಲವಿನ ಮಹಾತ್ಮೆಯನು ನಾನಾವಿಧದಿಂ ಸ್ತೋತ್ರಮಂ ಮಾಡುತ್ತ ಪ್ರಭುದೇವರಿಗೆ ಬಿನ್ನಪಂಗೈಯ್ಯಲು, ಆ ಪ್ರಭುದೇವರು ಪ್ರಸನ್ನರಾಗಿ, ಚಿಕ್ಕದಣ್ಣಾಯಕರ ಕೊಂಡಾಡಿದ ಪ್ರಸ್ತಾವದ ವಚನ. ॥

ಅಂಗವೆಂಬ ಸಂಸಾರದೊಳಗೆ ಸವದರಿಲ್ಲರು. ಶಿವನನರಿವರೆ ಮನವೆಂಬ ಸಂಕಲ್ಪದ ಕುಣಿಗೆ ಒಳಗಾದರಿಲ್ಲರು. ಮಾಯೆಯ ಹೊಡೆಗಿಚ್ಚು ಗೆಲಬಲ್ಲರೆ ಗುಹೇಶ್ವರಲಿಂಗದಲ್ಲಿ ಸರ್ವಸಂದೇಹನಳಿದಿಪ್ಪ ಚನ್ನಬಸವಣ್ಣಂಗೆ ನಮೋ ನಮೋ ಎಂಬೆನು. ॥೫೨॥

ಮತ್ತಂ, ತಾನೆಂದೆನಲೊಲ್ಲದೆ ಗುರುವೆಂದು ಹಿಡಿದವನ, ಗುರುವೆಂಬಲ್ಲಿ ನೀನೆಂದು ನಡೆದವನ, ನೀನೆಂದಲ್ಲಿಯೆ ಲಿಂಗಜಂಗಮವೆಂಬ ಸಕೀಲ ಸಂಬಂಧವ ನೆರೆಗೊಳಿಸಿದವನ ಲಿಂಗಜಂಗಮದಲ್ಲಿ ತನ್ನ ಮರೆದು, ಕರಿಗೊಂಡ ಲಿಂಗೈಕ್ಯನ ಗುಹೇಶ್ವರಲಿಂಗದಲ್ಲಿಪ್ಪ ಚನ್ನಬಸವಣ್ಣನ ಶ್ರೀಪಾದಕ್ಕೆ ನಮೋ ನಮೋ ಎನುತಿರ್ದೆನು. ॥೫೩॥

ಇಂತು ಪ್ರಭುದೇವರು ಚಿಕ್ಕದಣ್ಣಾಯಕರ ಸ್ತೋತ್ರವುಂ ಮಾಡಲು ಆ ಚಿಕ್ಕದಣ್ಣಾಯಕರು ತಮ್ಮ ಸಂಸಾರ ಭ್ರಾಂತಿಯು ಪ್ರಭುದೇವರಿಂದ ತಿಳಿದು, ಕೃತಾರ್ಥನಾದೆನೆಂದು ಸ್ತೋತ್ರವುಂ ಮಾಡಿದ ಪ್ರಸ್ಥಾವದ ವಚನ. ॥

ಇಲ್ಲದ ಸಂಸಾರ ಕಣ್ಣ ಮುಂದೆ ರೂಪಾಗಿ ಕಾಡುತ್ತಿರ್ದರೆ ಸುಜ್ಞಾನವೆಂಬ ಅಂಜನವ ನಚ್ಚಿ ಸಕಲ ಭ್ರಮೆ ಎಂಬ ಕತ್ತಲೆಯ ಕಳೆದು, ನಿಜಲಿಂಗಸಂಬಂಧವ ನೆಲೆಗೊಳಿಸಿ ನಿತ್ಯದಲ್ಲಿ ಅಚ್ಚೊತ್ತಿದನಾಗಿ ಕೂಡಲಚನ್ನಸಂಗಯ್ಯನಲ್ಲಿ ಪ್ರಭುದೇವರ ಶ್ರೀಪಾದಕ್ಕೆ ನಮೋ ನಮೋ ಎಂಬೆನು. ॥೫೪॥

ಹೀಗೆಂದು ಸ್ತೋತ್ರಂಗೈದು ಬಿನ್ನಪಂ ಮಾಡಲು, ಮರಳಿ ಪ್ರಭುದೇವರು ಚಿಕ್ಕದಣ್ಣಾಯಕರ ಕೊಂಡಾಡಿದ ಪ್ರಸ್ಥಾವದ ವಚನ. ॥

ನರಲೋಕದ ನರರುಗಳೆಲ್ಲರು ನರಸಂಸಾರಕ್ಕೊಳಗಾದರು. ಸುರಲೋಕದ ಸುರರುಗಳೆಲ್ಲರು ಸ.ರಸಂಸಾರಕ್ಕೊಳಗಾದರು. ಮುನಿಲೋಕದ ಮುನಿಗಳೆಲ್ಲರು ತಪೋಸಂಸಾರಕ್ಕೊಳಗಾದರು. ಜಂಗಮುವ ಪೂಜಿಸುವರೆಲ್ಲರು ಸಾಯುಜ್ಯಸಂಸಾರಕ್ಕೊಳಗಾದರು. ರುದ್ರಲೋಕದ ರುದ್ರಗಣಂಗಳೆಲ್ಲರು ರುದ್ರಪದವೆಂಬ ಸಂಸಾರಕ್ಕೊಳಗಾದರು. ಲಿಂಗವ ಧರಿಸಿದವರೆಲ್ಲರು ಲಿಂಗಸಂಸಾರಕ್ಕೊಳಗಾದರು. ಪಾದೋದಕ ಪ್ರಸಾದ ಸಂಬಂಧಿಗಳೆಲ್ಲರು ಪ್ರಸಾದಸಂಸಾರಕ್ಕೊಳಗಾದರು. ಗುಹೇಶ್ವರಲಿಂಗದಲ್ಲಿ ಸರ್ವಸಂಸಾರ ವಿರಹಿತನು ಚನ್ನಬಸವಣ್ಣಂಗೆ ನಮೋ ನಮೋ ಎಂಬೆನು. ॥೫೫॥

ಇಂತು ಪ್ರಭುದೇವರು ಸ್ತೋತ್ರವುಂ ಮಾಡಲು, ಚಿಕ್ಕದಣ್ಣಾಯಕರು ತಾವು ಪ್ರಭುದೇವರ ಬೆರಸಿ ಕೃತಾರ್ಥರಾದೆವೆಂಬ ಭಾವವು ತೋರಿ ಆ ಪ್ರಭುದೇವರ ಕೊಂಡಾಡಿದ ಪ್ರಸ್ಥಾವದ ವಚನ.

ಎನ್ನ ಸಂಸಾರ ಸೂತಕವ ತೊಡೆದು ನಿಜಲಿಂಗವಲ್ಲಿ ನಿರಹಂಕಾರವೆಂಬ ಘನವ ತೋರಿದನಯ್ಯ ಒಬ್ಬ ಶರಣನು. ಎನ್ನ ಗಾರುವಿಲ್ಲವೆಂದು ಪ್ರಭುದೇವರೆಂಬ ಒಬ್ಬ ಶರಣನ ಕೃತಾರ್ಥನ ಮಾಡಿ, ಎನ್ನ ಕಣ್ಣ ಮುಂದೆ ಸುಳಿದನಯ್ಯ ಒಬ್ಬ ಶರಣನು. ಆ ಶರಣನ ಕೃಪೆಯಿಂದ ಪ್ರಭುದೇವರೆಂಬ ಘನವ ಕಂಡು ಮನ ಲೀಯವಾಗಿ, ಘನಘನ ಒಂದಾನ ಕಾರಣ

ಕೂಡಲಚನ್ನಸಂಗಯ್ಯನಲ್ಲಿ ಅಲ್ಲಯ್ಯನೆಂಬ ಮಹಿಮಗೆ ನಮೋ ನಮೋ ಎನುತಿರ್ದನು. ॥೫೬॥

ಇಂತು ಚಿಕ್ಕದಣ್ಣಾಯಕರು ತಮಗು ಪ್ರಭುವಿಗು ಒಂದೆ ಸಾಂಪ್ರದಾಯದಲ್ಲಿ ನಿಜಪದವು ಸಾಧ್ಯವಾಯಿತ್ತೆಂದು, ಬಿನ್ನಪಂಗೆಯ್ಯಲು, ಇವಕ್ಕೆ ಪ್ರಭುದೇವರು ಚಿಕ್ಕದಣ್ಣಾಯಕರೊಡನೆ ಇಬ್ಬರಿಗು ಒಂದೆ ತಾವಿನಲ್ಲಿ ಸಾಂಪ್ರದಾಯದಲ್ಲಿ ನಿಜವಪ್ಪವಟ್ಟ ಪರಿ ಎಂತೆಂದು ಬೆಸಗೊಂಬ ಪ್ರಸ್ಥಾವದ ವಚನ. ॥

ತಿಂಬ ಗಂಜಿಯ ಮೇಲೆ ಉಗುರು ಬಿದ್ದಂತಾಯಿತ್ತು. ಅರಸುವ ಬಳಿ ಕಾಲ ಸುತ್ತಿದಂತಾಯಿತ್ತು. ನಾನು ಬಯಸುವ ಬಯಕೆ, ತಾರ್ಕಣ್ಯ ಬಂದಿತ್ತು. ಗುಹೇಶ್ವರಲಿಂಗದಲ್ಲಿ ಎನಗು ನಿನಗು ಒಂದಾವ ಪರಿ ಎಂತು. ಹೇಳಾ ಚನ್ನಬಸವಣ್ಣಾ ? ॥೫೭॥

ಹೀಗೆಂದು ಪ್ರಭುದೇವರು ನಿರೂಪಿಸಲು, ಇದಕ್ಕೆ ಚಿಕ್ಕದಣ್ಣಾಯಕರು ಬಿನ್ನೈಸಿದ ಪ್ರಸ್ಥಾವದ ವಚನ. ॥

ಕಾಯ ಒಂದು ಪ್ರಾಣ ಒಂದು ಭಾವ ಒಂದು ಒಂದಲ್ಲದೆ ಎರಡುಂಟೆ? ಗುರು ಒಂದು ಲಿಂಗ ಒಂದು ಉಪದೇಶ ಒಂದು. ಕೂಡಲಚನ್ನಸಂಗಯ್ಯನಲ್ಲಿ ಶರಣ ಬಸವಣ್ಣನ ಗರುಡಿಯಲ್ಲಿ ಇಬ್ಬರಿಗೆಯು ಅಭ್ಯಾಸ ಒಂದೆ ಕಾಣಾ ಪ್ರಭುವೆ. ॥೫೮॥

ಹೀಗೆಂದು ಚಿಕ್ಕದಣ್ಣಾಯಕರು ಬಿನ್ನಪಂಗೈಯ್ಯಲು, ಆ ಪ್ರಭುದೇವರು ಬಸವಣ್ಣಂಗೆ ನಾವಿಬ್ಬರು ಶಿಷ್ಯರಾದೆವೆಂಬುದ ಬೆಸಗೊಂಬ ಪ್ರಸ್ಥಾವದ ವಚನ. ॥

ಒಂಭ ನೂಡ ಹೋದಲ್ಲಿ ಮತ್ತೊಂದಾಯಿತ್ತೆಂಬ ಮಾತು ದಿಟವಾಯಿತ್ತು ನೋಡಯ್ಯ. ನಿಮ್ಮ ಒಡತನ ಅನುಭಾವದಿಂದ ಗುರುಮುಖ ಸಾಧ್ಯವಾದುದಯ್ಯ. ಗುಹೇಶ್ವರಲಿಂಗದಲ್ಲಿ, ನನಗು ನಿನಗು ಉಪದೇಶ ಒಂದಾವ ಭೇದವ ಹೇಳಾ ಚನ್ನಬಸವಣ್ಣಾ? ॥೫೯॥

ಹೀಗೆಂದು ಪ್ರಭುದೇವರು ನಿರೂಪಿಸಲು, ಇದಕ್ಕೆ ಚಿಕ್ಕದಣ್ಣಾಯಕರು ಇಬ್ಬರಿಗೆಯು ಸಾಂಪ್ರದಾಯ ಒಂದಾವ ಭೇದವ ಬಿನ್ನೈಸುವ ಪ್ರಸ್ಥಾವದ ವಚನ. ॥

ಅಂಗ ಸಂಸಾರ ವಿರಹದೊಳು ಸನೆದು ಲಿಂಗವು ಲಿಂಗವನ್ನವ ಗ್ರಹಿಸಿಕೊಂಡು ಮೃತ್ಯುಕ ಪಂಜರದೊಳಗೆ ಭುಜಂಗ ತಲೆ ಎತ್ತಿ ನೋಡಲು, ಫಳಫಳನೆ ಹೊಳೆವ ಮಾಣಿಕ್ಯದ ಬೆಳಗುಗಳಿಸೆಯಿ ಸದ್ಯೋಜಾತನ ಜಟಾ ಮಕುಟವಸುತ್ತಿರ್ದ ಫಣೀಂದ್ರನಲ್ಲವೆ ಮತ್ತಾರು ಅಲ್ಲಸೆಂದು, ಶಿಖರವ ನೊವಲುಗೊಂಡು ಅಗುಳಿಸಲು, ಸುತ್ತಿರ್ದ ಫಣಿಸೂತ್ರವ ಕಂಡು ಚಕ್ಕನೆ ಕದವ ತೆರೆಯಲು, ವೃಷ್ಟಿ ವೃಷ್ಟವಾದನುಮಿಷನ ಕರಸ್ಥಲವ ಕಂಡು, ವೃಷ್ಟ ತನವಲ್ಲಿ ಲಿಂಗವ ತೆಗೆದುಕೊಂಡರೆ, ಸಂದು ಕಳಸಂಗಳು ತಪ್ಪಿ ಅಸ್ಥಿಗಳು ಬಳಬಳನುದುರಲು, ಆತನ ಬೆರಗು ನಿಮ್ಮ ಹೊಡೆದು ಖ್ಯಾತಿಯಾಯಿತ್ತು ನೋಡಯ್ಯ. ಅಲ್ಲಮಪ್ರಭುವೆಂಬ ನಾಮ ನಿನಗೆ ಭಕ್ತಿಪಕಮಳದಿಂದೆ ಬಂದಿಕಾರನಾಗಿ ಬಂದು ಹೊಕ್ಕಡೆ ಬದನೆಯ ಕಾಯಿಗಳು ಬಾಣಲಿಂಗವಾಗವೆ ನಮ್ಮ ಬಸವಣ್ಣನ ದೃಷ್ಟಿ ತಾಗಲು? ಇದುಕಾರಣ ಕೂಡಲಚನ್ನಸಂಗನಲ್ಲಿ ಅನುಮಿಷ ಪ್ರಭುವಿಂಗೆ ಬಸವಣ್ಣ ಗುರುವಾದ ಕಾರಣ ನಾನು ನಿನಗೆ ಚಿಕ್ಕ ತಮ್ಮ ಕೇಳಾ ಪ್ರಭುವೆ. ॥೬೦॥

ಅನುಮಿಷಂಗೆ ಲಿಂಗವ ಕೊಟ್ಟಾತ ಬಸವಣ್ಣ. ಆ ಲಿಂಗ ನಿನಗೆ ಸೇರಿತ್ತಾಗಿ ಬಸವಣ್ಣನ ಸಾಂಪ್ರದಾಯದ ಕಂದನು ನೋಡಾ ನೀನು. ಭಕ್ತಿ ನಳದುಳದಿಂದ ಚನ್ನಸಂಗಮನಾಥನೆಂಬ ಲಿಂಗವನವಗ್ರಹಿಸಿಕೊಂಡೆನಾಗಿ, ಬಸವಣ್ಣನ ಸಾಂಪ್ರದಾಯದ ಕಂದನು ನೋಡಾ ನಾನು. ಇಂತೀ ಇಬ್ಬರಿಗೆಯು ಒಂದೆ ಕುಳ ಸ್ಥಳವಾದ ಕಾರಣ ಕೂಡಲ ಚನ್ನಸಂಗಯ್ಯನಲ್ಲಿ ಬಸವಣ್ಣನ ಮಹಮನೆಯ ಪ್ರಸಾದ ಇಬ್ಬರಿಗೆಯು ಒಂದೆ ಕಾಣಾ ಪ್ರಭುವೆ. ॥೬೧॥

ಹೀಗೆಂದು ಚಿಕ್ಕದಣ್ಣಾಯಕರು ಬಿನ್ನೈಸಲು, ಇದಕ್ಕೆ ಪ್ರಭುದೇವರು ನಿರೂಪಿಸಿದ ಪ್ರತ್ಯುತ್ತರ. ॥

ಕಿರಿಯುರಾದಡೇನು? ಹಿರಿಯುರಾದಡೇನು? ಅರಿವಿಂಗೆ ಹಿರಿದು ಕಿರಿದುಂಟೆ? ಆದಿ ಅನಾದಿ ಇಲ್ಲದಂದು ಅಜಾಂಡ ಬ್ರಹ್ಮಾಂಡ ಕೋಟಿಗಳು ದಯವಾಗದಂದು, ಗುಹೇಶ್ವರ ಲಿಂಗವಲ್ಲಿ ನೀನೊಬ್ಬನೆ ಮಹಾಜ್ಞಾನಿ ಎಂಬುದ ಕಾಣಬಂದಿತ್ತು ಕಾಣಾ ಚನ್ನಬಸವಣ್ಣಾ. ॥೬೨॥

ಇದಕ್ಕೆ ಚಿಕ್ಕದಣ್ಣಾಯಕರ ಪ್ರತ್ಯುತ್ತರ. ॥

ಕಾಲುಂಡ ಸವಿಯು ಮೇಲುಂಡ ಪಂಕ್ತಿಯ ಹೇಳಬಹುದಲ್ಲದೆ ಸುಖ ಸೋಂಕಿನ ಸ್ವಾನುಭಾವವ ಹೇಳಬಾರದು ಕೇಳಬಾರದು. ಇಂಬಿನ ಸೋಂಕು ಸಂಬಂಧವಳಿದ ಬಳಿಕ ಉಸಹಾರ ಉಂಟೆ ಕೂಡಲ ಚನ್ನ

ಸಂಗಯ್ಯನ ಅರುಹಿಂದಲೆ ಅರಿವಿನಲ್ಲದೆ ಎನಗೆ ಬೇರೆ ಸ್ವತಂತ್ರವಿಲ್ಲ ಕಾಣಯ್ಯ. ॥೬೩॥

ನಾನು ನಿಮ್ಮ ಹಿಡಿದು ಅರಿವಿನಲ್ಲದೆ, ಸ್ವತಂತ್ರ ಜ್ಞಾನಿಯಲ್ಲವೆಂದು ಚಿಕ್ಕದಣ್ಣಾಯಕರು ಬಿನ್ನಪಂಗೈಯ್ಯಲು, ಇದಕ್ಕೆ ಪ್ರಭುದೇವರು ನಿರೂಪಿಸಿದ ಪ್ರತ್ಯುತ್ತರ. ॥

ಲಿಂಗವಿಡಿದು ಅರಿದರಿವು ಅರಿವಲ್ಲ, ಗುರುವಿಡಿದು ಅರಿದರಿವು ಅರಿವಲ್ಲ ಗುರುವಿಡಿದು ಲಿಂಗ ಉಂಟೆಂಬ ಕಲ್ಪಿತ ತನ್ನಿಂದ ತಾನಹುದಲ್ಲದೆ ಗುಹೇಶ್ವರಲಿಂಗದಲ್ಲಿ ಹಂಗು ಹರಿಯದನಕ್ಕರ ತಾನಾಗಬಾರದು ಕಾಣಾ ಚನ್ನಬಸವಣ್ಣ. ॥೬೪॥

ಹೀಗೆಂದು ಪ್ರಭುದೇವರು ನಿರೂಪಿಸಲು, ಇದಕ್ಕೆ ಚಿಕ್ಕದಣ್ಣಾಯಕರ ಪ್ರತ್ಯುತ್ತರ. ॥

ಗುರುವಿಲ್ಲದ ಲಿಂಗ ನಿನಗೆಲ್ಲಿಯದಯ್ಯ. ಕೊಂದೆ ನಿಮ್ಮಯ್ಯನಕೊಂಡೆ. ಲಿಂಗವನು ಅಂದು ನಿನಗೆ ಅನುಮಿಷ ಗುರುವಾದುದನಿಯಾ ಕೂಡಲಚನ್ನಸಂಗಯ್ಯನಲ್ಲಿ ಮೂರುಲೋಕವರಿಯೆ ಅಲ್ಲಮ ಪ್ರಭುದೇವಾ. ॥೬೫॥

ಅನುಮಿಷನ ಕೊಂದು ಲಿಂಗವಕೊಂಡ ಕಾರಣ ನೀನು ಗುರುದ್ರೋಹಿ ಎಂದು ಚಿಕ್ಕದಣ್ಣಾಯಕರು ನುಡಿಯಲು, ಇದಕ್ಕೆ ಪ್ರಭುದೇವರು ನಿರೂಪಿಸಿದ ಪ್ರತ್ಯುತ್ತರ. ॥

ಗುರುವಿನ ಪ್ರಾಣಲಿಂಗವಲ್ಲಿ ಲಿಯ್ಯವಾದ ಬಳಿಕ ಆ ಲಿಂಗವೆನ್ನ ಕರಸ್ಥಲಕ್ಕೆ ಬಂದಿತ್ತು ನೋಡಾ. ಇದಾನೆ ನೋಡಾ ಎನ್ನ ಗುರುವು ಅನುಮಿಷನೆನ್ನ ಕರಸ್ಥಲದಲ್ಲಿ ಇದಾನೆ ನೋಡಾ ಎನ್ನ ಗುರುವು ಅನುಮಿಷನೆನ್ನ ಜ್ಞಾನದೊಳಗೆ ಇದ್ದಾನೆ ನೋಡಾ! ಎನ್ನ ಗುರುವಿನ ಗುರುವು ಬಸವಣ್ಣನೆನ್ನ ಕಂಗಳ ಮುಂದೆ ಗುಹೇಶ್ವರ ಸಾಕ್ಷಿಯಾಗಿ ಎನ್ನ ಮೇಲೆ ಗುರುದ್ರೋಹವಿಲ್ಲ ಕಾಣಾ ಚನ್ನಬಸವಣ್ಣ. ॥೬೬॥

ಹೀಗೆಂದು ಪ್ರಭುದೇವರು ನಿರೂಪಿಸಲು, ಇದಕ್ಕೆ ಚಿಕ್ಕದಣ್ಣಾಯಕರು ಬಿನ್ನೈಸಿದ ಪ್ರತ್ಯುತ್ತರ. ॥

ನೋಡುವದೊಂದು ನುಡಿಸಿಕೊಂಬುವದೊಂದು ಎನ್ನಲ್ಲಿ ನಿನ್ನಲ್ಲಿ ಎಡೆಯುಂಟಲಾ. ಕರಸ್ಥಲದಲ್ಲಿ ಒಂದು, ಮನಸ್ಥಲದಲ್ಲಿ ಒಂದು, ಇನ್ನು

ನಿನ್ನಲ್ಲಿ ಎರಡುಂಟಲಾ ಕೂಡಲಚನ್ನಸಂಗಯ್ಯನಲ್ಲಿ ಗುಹೇಶ್ವರನೆಂಬ ಲಿಂಗವು ನಿನಗೆಂತು ಸಾಧ್ಯವಾಯಿತ್ತು ಹೇಳಾ ಪ್ರಭುವೆ? ॥೬೭॥

ಹೀಗೆಂದು ಚಿಕ್ಕದಣ್ಣಾಯಕರು ಬಿನ್ನೈಸಲು, ಇದಕ್ಕೆ ಪ್ರಭುದೇವರು ನಿರೂಪಿಸಿದ ಪ್ರತ್ಯುತ್ತರ. ॥

ಕರಸ್ಥಲದ ಲಿಂಗ ಮನಸ್ಥಲಕ್ಕೆ ನೇಮ್ಯನಾಗಿ, ಮನಸ್ಥಲದ ಲಿಂಗ ಮಹಾಸ್ಥಲಕ್ಕೆ ನೇಮ್ಯವಾಗಿ, ಮಹಾಸ್ಥಲವೆನ್ನ ಸರ್ವಾಂಗವೇದ್ಯವಾದ ಬಳಿಕ ಇನ್ನ ಭಿನ್ನಭಾವಕ್ಕೆ ತೆರಹುಂಟೆ ಹೇಳಾ? ಗುಹೇಶ್ವರನೆಂಬ ಪ್ರಾಣಲಿಂಗವು ಬೆರಸಿ ಸಮಧಾತುವಾದ ಬಳಿಕ ಎರಡೆಂಬುದಿಲ್ಲ ನೋಡಾ ಚನ್ನಬಸವಣ್ಣಾ. ॥೬೮॥

ಮತ್ತಂ, ಲಿಂಗ ಪ್ರಾಣ, ಪ್ರಾಣ ಲಿಂಗವಾಯಿತ್ತು. ಅಂಗ ಲಿಂಗ, ಲಿಂಗ ಅಂಗವಾಯಿತ್ತು. ಗುಹೇಶ್ವರ ಲಿಂಗದಲ್ಲಿ ಸರ್ವಾಂಗ ಪ್ರಾಣಲಿಂಗವಾಯಿತ್ತು ಕೇಳಾ ಚನ್ನಬಸವಣ್ಣ. ॥೬೯॥

ಈ ಪ್ರಸ್ತಾವದೊಳು ಪ್ರಭುದೇವರು ಪ್ರಾಣಲಿಂಗ ಸಂಬಂಧದ ಭೇದಮಂ ನಿರೂಪಿಸಿದ ಪದಂಗಳು.

ರಾಗ: ಮಧುಮಾಧವಿ

ನುಡಿಯ ಗಡದಣ ಬೆಳಗು ಮರುತ ಪರಿಮಳದಂತೆ ಭಾವವಿಲ್ಲದ ಬಯಲು ಪರವು ತಾನೆ ಅರಿವು ಕುರುಹಿನ ಮರಹು ತೆರಹಿಲ್ಲದಾ ಘನವು ನಿಂದ ನಿಜ ಪದದಿಂದ ಪ್ರಭೆಯಾದುದು ॥ಪಲ್ಲ॥ ಎಳೆಯ ಮಾಣಿಕದಂತೆ ಹೊಳೆವ ಜ್ಞಾನದ ಜ್ಯೋತಿ, ನವನಾಳದೊಳು ಪ್ರಾಣಲಿಂಗ ಭರಿತ ॥ ಪಿಂಡ ಬ್ರಹ್ಮಾಂಡವನು ವಿಚಾರಿತೋರುವ ವಚನ ಗಗನದುದಯದ ಮೇಲೆ ಘನಕೆ ಗಮನಾ. ॥೧॥ ಆಕಾಶದಿಂದತ್ತಲಾರು ಬಲ್ಲವರಿಲ್ಲ ಪಾತಾಳದ ಪ್ರಮಾಣ ಕಾಂಬರಾರು? ಆತುಮನ ಹಿಡಿವು ಪರವಾತುಮನ ಪರಿಭಾವನಾಂತು ನೋಡುವ ನೋಟ ಘನಕೆ ಗಮನಾ. ॥೨॥ ಇರುಳು ಮನವನೆ ನುಂಗಿ ಹಗಲು ಘನವನೆ ನುಂಗಿ, ಮಾತು ಮಧವನೆ ನುಂಗಿದಾತ ಭರಿತಾ ನೀತಿ ನಿಜ ನಿಂದಲ್ಲಿ ನಿಜದ ನಿರ್ಮಳ ಜ್ಯೋತಿ ಪ್ರಾಣಲಿಂಗದ ಘನ ಪ್ರಮಾಣೆ ಸಲ್ಲೊ ॥೩॥ ಅರು ದರುಶನದೊಡೆಯನಂತರಂಗದ ಲಿಪ್ಸನಾರಿಗಾವರು ಗಗನ ಭುವನ ಒಂದೆ ಹೃದಯ ಕಮಲದ ಬೆಳಗು ಪರಬ್ರಹ್ಮದಲ್ಲಿಯೆ ತುಂಬಿ, ಪರಿಣಾಮ ಪರಮಪದವಿಯ ತೋರಿತು. ॥೪॥ ಧರೆಗೆ ನಿದ್ರೆಯು ಇಲ್ಲ.

ಅವಯಕ್ಕೆ ಕನಸಿಲ್ಲ ಅಗ್ನಿ ಕಳವಳಕೆ ಒಳಗಾಗದೆಂತೋ ಸುಳಿವ ಪವನನು ತಾನು ತಾನುಸಕೊಂಡಿಹಗಾಗ ಬಯಲಿಂಗೆ ಭ್ರಮೆಯುಂಟಿ ಗುಹೇಶ್ವರಾ. ॥೪॥

ಹೀಗೆಂದು ಪ್ರಭುದೇವರು ತಮ್ಮ ಪ್ರಾಣಲಿಂಗದ ನಿರ್ಣಯವಂ ನಿರೂಪಿಸಲು, ಇದಕ್ಕೆ ಚನ್ನಬಸವದೇವರು ಬಿನ್ನೈಸಿದ ಪ್ರತ್ಯುತ್ತರ. ॥

ಮುಟ್ಟಿದ ಮುನ್ನ ಗುರು ಉಂಟು ಲಿಂಗ ಉಂಟು ಜಂಗಮ ಉಂಟು. ಪ್ರಸಾದ ಉಂಟು. ಮುಟ್ಟಿದ ಬಳಿಕ ಗುರುವಿಲ್ಲ, ಲಿಂಗವಿಲ್ಲ, ಜಂಗಮವಿಲ್ಲ, ಪ್ರಸಾದವಿಲ್ಲ. ಕೂಡಲ ಚನ್ನಸಂಗಯ್ಯನಲ್ಲಿ ಸ್ವಯವಿಲ್ಲವೆ ಪರವಿಲ್ಲವೆಂಬುದು ನಿನ್ಮುಲ್ಲೆ ಕಾಣ ಬಂದಿತ್ತು ಕಾಣಾ ಪ್ರಭುವೆ. ॥೭೫॥

ಹೀಗೆಂದು ಚಿಕ್ಕದಣ್ಣಾಯಕರು ಬಿನ್ನೈಸಲು, ಪ್ರಭುದೇವರು ನಿರೂಪಿಸಿದ ಪ್ರತ್ಯುತ್ತರ ॥

ಮನ ಮನ ಬೆರಸಿದನುಭಾವ ಘನಕ್ಕೆ ಘನ ಒಂದಾಯಿತ್ತು ನೋಡಾ! ಅದು ತನ್ನಲ್ಲಿ ತಾನು ತೃಪ್ತಿಯಾದ ನಿಜವು ನಿರ್ಣಯದ ಮೇಲೆ ನಿರ್ಧಾರವಾಯಿತ್ತು ನೋಡಾ! ಗುಹೇಶ್ವರಲಿಂಗದಲ್ಲಿ ಚನ್ನಬಸವಣ್ಣನಿಂದೆ ಸುಖಿಯಾದೆನು. ॥೭೬॥

ಹೀಗೆಂದು ಪ್ರಭುದೇವರು ನಿರೂಪಿಸಲು, ಇದಕ್ಕೆ ಚನ್ನಬಸವರಾಜದೇವರು ಪ್ರಭುದೇವರ ಸ್ತೋತ್ರವುಂ ಮಾಡಿ ತಮ್ಮ ಪರಿಣಾಮವ ಹೇಳಿದ ಪ್ರಸ್ತಾವದ ವಚನ. ॥

ಅರುಹಿನ ತೃಪ್ತಿಗೆ ಅನುಭಾವದಾಶ್ರಯ. ಲಿಂಗದ ಅನುಭಾವದಿಂದೆ ನಿಮ್ಮ ಕಂಡೆನು. ನಿಮ್ಮ ಕಂಡೆನ್ನ ಮರೆದೆ ಕಾಣಾ ಪ್ರಭುವೆ ಕೂಡಲ ಚನ್ನಸಂಗಮದೇವಾ. ॥೭೭॥

ನಿಮ್ಮ ಸಂಗದಿಂದಲಾನು ಲಿಂಗೈಕ್ಯವಾದೆನೆಂದು, ಚಿಕ್ಕದಣ್ಣಾಯಕರು ಬಿನ್ನೈಸಲು, ಇದಕ್ಕೆ ಪ್ರಭುದೇವರು ನಿಮ್ಮಿಂದ ಲಿಂಗೈಕ್ಯರಾದವೆಂದು ನಿರೂಪಿಸಿದ ಪ್ರಸ್ತಾವದ ವಚನ. ॥

ಸಚ್ಚಿ ಮುಚ್ಚಿನ ಲಿಂಗವಗ್ರಹಿಸುವಲ್ಲಿ ಮುಚ್ಚು ಒಳಕೊಂಡಿತ್ತು ನೋಡಾ! ಕರ್ಪೂರದ ಕರಡಿಗೆಯು ಗಾಸಿ ಮಾಡಿದಂತಾಯಿತ್ತು ನೋಡಾ! ಲಿಂಗಾನುಭಾವಿಗಳ ಸಂಗದಿಂದೆ ಕಂದೆರದು ಗುಹೇಶ್ವರಲಿಂಗದಲ್ಲಿ ಲೀಯವಾದೆನು ಕಾಣಾ ಚನ್ನಬಸವಣ್ಣಾ. ॥೭೮॥

ಅನುಭಾವಿಗಳ ಸಂಗದಿಂದೆ ಕೃತಾರ್ಥನಾದೆನೆಂದು ಪ್ರಭುದೇವರು ನಿರೂಪಿಸಲು, ಇದಕ್ಕೆ ಚಿಕ್ಕದಣ್ಣಾಯಕರು ಪ್ರಭುದೇವರ ಚನ್ನಬಸವರಾಜದೇವರ ಸಂಗಸುಖವ ಕೊಂಡಾಡಿದ ಪ್ರಸ್ತಾವದ ವಚನ. ॥

ಸಮ ಸುಖ ಸಂಧಾನವಿಲ್ಲದ ಸಂಗವ ನೋಡಾ. ತಾನು ವಿರೋಧವಿಲ್ಲದ ಸಂಗವ ನೋಡಾ. ಆವಾಗಲೂ ಅನುಭಾವವಿಲ್ಲದ ಸಂಗವ ನೋಡಾ. ಕೂಡಲಚೆನ್ನಸಂಗಯ್ಯನಲ್ಲಿ ಲಿಂಗ ಲೀಯವಾದ ಸಂಗವ ನೋಡಾ. ॥೬೯॥

ಹೀಗೆಂದು ಚಿಕ್ಕವಣ್ಣಾಯಕರು ಪ್ರಭುದೇವರನು ಬಸವರಾಜದೇವರನು ಸಮರಸಭಾವದಿಂದೆ ಕೊಂಡಾಡಲು, ಆ ಬಸವರಾಜದೇವರು ಚಿಕ್ಕವಣ್ಣಾಯಕರೊವನೆ ನಾನು ನೀನು ಶರಣ ಸಂಗಕ್ಕೆ ಸಮುವೇದಿಯಲ್ಲವೆಂದು ಭೀತಿಯಿಂದ ನುಡಿದ ಪ್ರಸ್ಥಾವದ ವಚನ. ॥

ಅಯ್ಯ, ನಿಮ್ಮ ಶರಣರೆನ್ನ ಪಾವನವ ಮಾಡಿ, ತಿಳುಹಿ ತಮ್ಮಂತೆ ಎನ್ನ ಮಾಡಿದ ಬಳಿಕ ನಾನು ಅವರು ಮಾಡಿದಂತೆ ಆದೆನಯ್ಯ. ನಾನೊಬ್ಬನು ನಿಮ್ಮ ಶರಣರ ಬಳಿಬಳಿಯವನು. ಕೂಡಲಸಂಗನ ಶರಣರು ಮಚ್ಚಿ ಎನಗೊಲಿವರೆ ನಾನು ಬದುಕಿದೆನಲ್ಲದೆ ಸಮರಸ ಸಂಗಕ್ಕೆ ಸರಿಯೆ ಹೇಳಾ ಚನ್ನಬಸವಣ್ಣಾ? ॥೬೦॥

ಇದಕ್ಕೆ ಚನ್ನಬಸವರಾಜದೇವರ ಪ್ರತ್ಯುತ್ತರ. ॥

ತೆರಪಿಲ್ಲದ ಘನವು ಮನದೊಳಗೆ ನಿಂದು ನೆಲೆಗೊಂಡ ಬಳಿಕ ಆ ಘನವ ತೆರೆಯ ಮರೆಯಲಡಗಿಸಿಹೆನೆಂದರೆ ಅಡಗುವದೆ? ಹಿಮಗಿರಿಯ ಕಮ್ಮ ಭೂಮಿಯಲಡಗಿಸಿಹೆನೆಂದರೆ ಆ ಕಳವು ಸಿಕ್ಕದೆಮಾಣ್ಬದೆ? ಕೂಡಲಚನ್ನಸಂಗನ ಶರಣ ಪ್ರಭುವಿನಲ್ಲಿ ಬೆರಸಿದ ಸುಖವ ಮರಸಿಹೆನೆಂದರೆ ಸಿನ್ನಳವೆ ಹೇಳಾ ಸಂಗನಬಸವಣ್ಣಾ? ॥೬೧॥

ಹೀಗೆಂದು ಚನ್ನಬಸವರಾಜದೇವರು ನಿರೂಪಿಸಲು, ಇದಕ್ಕೆ ಬಸವರಾಜದೇವರು ನಿರೂಪಿಸಿದ ಪ್ರತ್ಯುತ್ತರ. ॥

ಸಮ ರತಿ ಸಮ ಸಂಧಾನದ ಸಂಗಸುಖವು ನಿನ್ನಿಂದಲಿನಗೆ ಸಾಧ್ಯವಾಯಿತ್ತಲ್ಲದೆ ಎನಗೆ ತೋರಿದವರಾರು ಹೇಳಾ ಲಿಂಗೈಕ್ಯದ ಹೊಲಬ? ಕೂಡಲಸಂಗಮದೇವರ ಶರಣ ಪ್ರಭುದೇವರಲ್ಲಿ ನೀನೆನ್ನ ನಿರಿಸದನ್ನಕ್ಕ ನಾನು ಬಲ್ಲೆನೆ ಹೇಳಾ ಚನ್ನಬಸವಣ್ಣಾ? ॥೬೨॥

ಹೀಗೆಂದು ಬಸವರಾಜದೇವರು ನಿರೂಪಿಸಲು, ಇದಕ್ಕೆ ಚಿಕ್ಕವಣ್ಣಾಯಕರು ವಿನ್ನೈಸಿದ ಪ್ರಸ್ಥಾವದ ವಚನ. ॥

ಧರೆ ಆಕಾಶವಿಲ್ಲದಂದು, ಅನಲ ಪವನ ಜಲ ಕೂರ್ಮರಿಲ್ಲದಂದು, ಚಂದ್ರಸೂರ್ಯರೆಂಬವರು ಕಳಿದೋರದಂದು, ಆತ್ಮಸ್ಥಲ ಅನುಭಾವಕ್ಕೆ ಬಾರದಂದು ನಿತ್ಯ ನಿಜಲಿಂಗವ ಬಲ್ಲವರಾರಯ್ಯ ನೀವಲ್ಲದೆ? ಮಹಾಘ

ನವಾಹನವಾಗಿ ಜಗವ್ಯಾಪ್ತಲದಲ್ಲಿ ನಿಂದು ಧರಿತರಾಗಿರ ಬಲ್ಲವರಾರಯ್ಯ ನೀವಲ್ಲದೆ? ನಿಮ್ಮ ಒಕ್ಕುನಿಕ್ಕಿ ಶೇಷಪ್ರಸಾದದ ಕಾರುಣ್ಯದ ತಿಪ್ಪಾಗಿ ಒಡಲೊಳಗೆ ಇದ್ದಲ್ಲಿ ವಿಭೂತಿ ಪಟ್ಟವ ಕಟ್ಟಿ ಹಸ್ತಮಸ್ತಕ ಸಂಯೋಗವ ಮಾಡಿ, ಎನ್ನ ನುಳುಹಿದವರಾರಯ್ಯ ನೀವಲ್ಲದೆ? ಕೂಡಲಚನ್ನಸಂಗಮದೇವರ ಸಾಕ್ಷಿಯಾಗಿ, ನಾನು ನಿಮ್ಮ ಕರುಣದ ಕಂದನೆಂಬುದ ಮೂರು ಲೋಕವೆಲ್ಲ ಬಲ್ಲದು ಕಾಣಾ ಸಂಗನಬಸವಣ್ಣಾ. ॥೬೩॥

ಹೀಗೆಂದು ಚಿಕ್ಕವಣ್ಣಾಯಕರು ವಿನ್ನೈಸಲು, ಇದಕ್ಕೆ ಬಸವರಾಜದೇವರ ಪ್ರತ್ಯುತ್ತರ.

ಕೃತಯುಗ, ತ್ರೇತಾಯುಗ, ದ್ವಾಪರಯುಗ, ಕಲಿಯುಗಂಗಳು ಭವಚಕ್ರದಲ್ಲಿ ತಿರುಗುತ್ತಿಪ್ಪಲ್ಲಿ ಅನಂತ ಕೋಟಾನುಕೋಟಿ ಯುಗಂಗಳು ಮುಡಿದು ಹೋದವು. ಅನಂತ ಜಲಪ್ರಳಯಂಗಳು ಸರಿಸರಿದು ಹೋದವು. ಹದಿನಾಲ್ಕು ಲೋಕಂಗಳೆಂಬ ಅನಂತಕೋಟಿ ಬ್ರಹ್ಮಾಂಡಂಗಳೆಲ್ಲ ಲಯವಾಗಿ ಹೋದವು. ಇದರೊಳಗೆ ಆವ ಲೋಕದಲ್ಲಿ ಆವ ಯುಗದಲ್ಲಿ ಪ್ರಾಣ ಲಿಂಗ ಲಿಂಗಪ್ರಾಣವೆಂಬ ಭೇದವನರುಹಿದವರಾರು ಹೇಳಾ? ಗಂಗೆ ಗೌರೀವಲ್ಲಭರು ಮೊದಲಾದ ಅನಂತಕೋಟಿ ರುದ್ರಾದಿಗಳೆಲ್ಲರು ಪ್ರಾಣಲಿಂಗ ಸಂಬಂಧದ ಹೊಲಬನರಿಯದೆ ಅಣಿಮಾಡಿ ಚತುರ್ವಿಧ ಫಲಪ್ರಾಪ್ತಿಕ್ಕೆ ಒಳಗಾದರು. ಶಿವಾಚಾರದ ವಿಚಾರವನರಿಯದೆ, ಜಗವು ಕೆಟ್ಟಿಹುದೆಂದು ಪರಮ ಪುರುಷಾರ್ಥ ಕಾರಣವಾಗಿ, ಮರ್ತ್ಯಲೋಕದಲ್ಲಿ ಅವತರಿಸಿ ಗುರು ಲಿಂಗ ಜಂಗಮ ಪಾದೋದಕ ಪ್ರಸಾದವೆಂಬ ಪಂಚಾಚಾರವ ನೆಲೆಗೊಳಿಸಿ ಷಟ್ಸ್ಥಲವೆಂಬ ಮಹಾನುಭಾವಮಂ ಕರತಳಾಮಲಕವಾಗಿ ಸ್ಫಟಲಗೊಳಿಸಿ ಪ್ರಾಣ ಲಿಂಗ, ಲಿಂಗ ಪ್ರಾಣವೆಂಬ ಭೇದವನೆನಗೆ ತಿಳುಹಿ ಎನ್ನ ಭ್ರಾಂತಿಸೂತಕವ ಬಿಡಿಸಿ, ಲಿಂಗೈಕ್ಯವೆಂಬುದನೆನಗೆ ತೋರಿದಯಾಗಿ, ನಿನ್ನಿಂದಲಾನು ಸಂಗನಬಸವಣ್ಣನೆಂಬ ಹೆಸರು ವಡೆದೆನು ಕೂಡಲಸಂಗಮದೇವರು ಸಾಕ್ಷಿಯಾಗಿ, ಎನಗೆ ನೀನು ಪರಮಾರಾಧ್ಯ ಕಾಣಾ ಚನ್ನಬಸವಣ್ಣಾ. ॥೬೪॥

ಇತಿ ಶ್ರೀಮತ್ಸಕಲಗಣ ಪುರಾತನರೋಳ್ ಪ್ರಭುದೇವರು ಮಹಾಸಭಾವ ಸದ್ಭೋಧ್ಯಿಯಂ ಮಾಡಿದ ಶೂನ್ಯಸಂಪಾದನೆಯೊಳ್ ಪ್ರಭುದೇವರಚನ್ನಬಸವರಾಜದೇವರು ಸಂಪಾದನೆಗಂ ಅಷ್ಟಾವೋಪದೇಶ ಸಮಾಪ್ತ. ಮಂಗಳ ಮಹಾ ಶ್ರೀ.

ಮಡಿವಾಳಯ್ಯಗಳ ಸಂಪಾದನೆ.

ನವನೋಪದೇಶ.

ಕಂದ॥ ಗುರುಹರಚರ ಸಾಹಿತ್ಯವ। ನಿರುಗೆಯ ಸುಜ್ಞಾನದಿರವ ಘನ ಲಿಂಗೈಕ್ಯವ ॥ ಪರಮ ಪ್ರಭು ಮಡಿವಾಳಯ್ಯಂ । ಗೊರೆದುದ ನಾಂ ಪೇೞ್ದ ಶರಣ ಜನರಿಂಗೊಲವಿಂ ॥

ಅದೆಂತೆಂದೊಡಾ ಬಸವರಾಜದೇವರು ಚಿಕ್ಕದಣ್ಣಾಯಕರೊಡನೆ ಸ್ವಾನುಭಾವ ಸಂಗೋಷ್ಠಿಯಂ ಮಾಡುತ್ತಿರಲು, ಆ ಪ್ರಭುದೇವರು ಚನ್ನಬಸವರಾಜದೇವರ ಕೊಂಡಾಡಿದ ಪ್ರಸ್ಥಾವದ ವಚನ. ॥

ತನುವ ಗುರುವಿಂಗರ್ಪಿಸಿ, ಮನವ ಲಿಂಗಕ್ಕರ್ಪಿಸಿ, ಭಾವವ ಜಂಗಮಕ್ಕರ್ಪಿಸಿ, ನಿಜವ ತೃಪ್ತಿಯಲರ್ಪಿಸಿ, ಘನವನರಿವಿಂಗರ್ಪಿಸಿ, ಅರ್ಪಿತವ ಅನರ್ಪಿತವಾಗಿ, ಅನರ್ಪಿತವೆ ಅರ್ಪಿತವಾಗಿ ಅರ್ಪಿತ ಅನರ್ಪಿತಂಗಳಳದು, ನಿತ್ಯ ಪ್ರಸಾದಿಯಾಗಿ, ಪ್ರಸಾದವ ಹಾದಿಯನೆಲ್ಲರಿಗೆ ತೋರಿ ಮಹಾ ಪ್ರಸಾದವ ಬೆಳವಿಗೆಯ ಮಾಡಿದನು ಗುಹೇಶ್ವರನ ಶರಣ ಸಂಗನಬಸವಣ್ಣನು. ॥೧॥

ಹೀಗೆಂದು ಪ್ರಭುದೇವರು ಚಿಕ್ಕದಣ್ಣಾಯಕರ ಸ್ತೋತ್ರವಂ ಮಾಡುತ್ತಿರಲು, ಆ ಚಿಕ್ಕದಣ್ಣಾಯಕರು ಎನ್ನ ಶಿವಜ್ಞಾನವ ಕಂದಿರವಿಯು ಎನ್ನ ಮಹಾ ಪ್ರಸಾದಿತ್ವವು ಮಡಿವಳ ಮಾಚಿ ತಂದೆಯಿಂದಲು ಸಂಗನಬಸವಣ್ಣನಿಂದಲು ಆಯಿತ್ತೆಂದು ಬಿನ್ನಹಂ ಮಾಡುವ ಪ್ರಸ್ಥಾವದ ವಚನ. ॥

ನಿರವಯವಾದರೆ ಭಕ್ತಿ ತನುವಿನ ಸ್ವಾಯತವಾಯಿತ್ತು. ಮಹಾ ಪ್ರಸಾದವಾದಡೆ ಸಂಗನಬಸವಣ್ಣನ ಕರಸ್ಥಲದಲ್ಲಿ ಮೂರ್ತಿಯಾಯಿತ್ತು! ಮಹಾ ಪ್ರಸಾದವ ನಾನೆತ್ತ ಬಲ್ಲೆನಯ್ಯ! ಮಡಿವಾಳ ತೋರಲಿಕೆ ಅರಿವು ಕಂದರವಾದುದ ಕಂಡೆನು. ಬಸವಣ್ಣನಿಂದ ಭಕ್ತಿಯ ಮುಸುಕು ಕಂದಿರವಾಯಿತ್ತ ಕಂಡೆನು. ಕೂಡಲಚನ್ನಸಂಗಮದೇವಯ್ಯ ಮಡಿವಾಳನು ಬಸವಣ್ಣನು ಪದಾರ್ಥವನಾರೋಗಿಸಿ ಕೊಡುತ್ತ ಕರುಣಿಸಿದ ಪ್ರಸಾದಿಯಾನು ಕಾಣಾ ಪ್ರಭುವೇ. ॥೨॥

ಮತ್ತಂ, ಅನಾಥ ಮಹೇಶ್ವರನೆಂಬಾತಂಗೆ ಪ್ರಸಾದಿ ಸ್ಥಲದ ಪ್ರಸಾದಾಶ್ರಮದ ಭವಿತ್ವವ ನಿಃಕರಿಸಿ, ಪ್ರಸಾದವನು ನೆಲೆಗೊಳಿಸಿ ಅನ್ಯಥಾ

ಪದ ಆಧಾರ ಆಶ್ರಮವ ನಿಃಕರಿಸಿ ದ್ವಿಜಪ್ರಜತ್ರಜವೆಂಬ ಡಿಂಬವ ಮರ್ತ್ಯಕ್ಕೆ ಕಳುಹಿದಿರಿ. ಬಸವಣ್ಣನನು ಮಡಿವಾಳನನು ಒಡನೆ ಕಳುಹಿದಿ. ಕನ್ನಡಿಯಾಗಿ ಘನಕ್ಕೆ ಬಾರದಂತೆ ಭಾವವ ನಿಲಿಸಿದಿರಿ. ಬಳಿಕ ಲಿಂಗಸ್ಥಲ ಜಂಗಮಸ್ಥಲ ಪ್ರಸಾದಿಸ್ಥಲ ನಿರ್ಧಾರವಾದವು. ಚಿರಕಾಲದಲ್ಲಿ ಮಹಾ ಮನಾದ ಗಣ ಸಂಪೂರ್ಣನಾಗಿಪ್ಪನಯ್ಯ ಕೂಡಲಚನ್ನಸಂಗನ ಶರಣ ಬಸವಣ್ಣನು. ॥೩॥

ಹೀಗೆಂದು ಚಿಕ್ಕದಣ್ಣಾಯಕರು ನಿರೂಪಿಸಲು, ಇವಕ್ಕೆ ಮಡಿವಾಳ ತಂದೆಗಳು ಚನ್ನಬಸವಣ್ಣನ ಸ್ತುತಿಸುವ ಪ್ರಸ್ಥಾವದ ವಚನ. ॥

ಅಂಗವೆ ಲಿಂಗವಾಗಿ, ಲಿಂಗವೆ ಪ್ರಾಣವಾಗಿ, ಜಂಗಮವೆ ಸಂಗವಾಗಿ, ಸಂಗವೆ ಸುಸಂಗವಾಗಿ, ಪ್ರಾಣವೆ ಪ್ರಸಾದವಾಗಿ, ಪ್ರಸಾದವೆ ಪ್ರಾಣವಾಗಿ, ಇಂತೀ ತ್ರಿವಿಧದಲ್ಲಿ ಸಂಪನ್ನನಾದ ಸಮತಾ ಪ್ರಸಾದಿ, ಸನ್ನಿಹಿತ ಪ್ರಸಾದಿ, ಸಮಾಧಾನ ಪ್ರಸಾದಿ, ಕಲಿದೇವಯ್ಯ ಚನ್ನಬಸವಣ್ಣನ ಪ್ರಸಾದವ ಕೊಂಡು ನಾನು ಬದುಕಿದೆನು ಕಾಣಾ ಪ್ರಭುವೆ. ॥೪॥

ಹೀಗೆಂದು ಮಡಿವಾಳ ಮಾಚಿ ತಂದೆಗಳು ಪ್ರಭುದೇವರೊಡನೆ ಬಿನ್ನಹಂಗೆಯ್ಯಲು, ಆ ಪ್ರಭುದೇವರು ಮಡಿವಾಳ ತಂದೆಗಳ ಒರೆದು ನೋಡುವ ಪ್ರಸ್ಥಾವದ ವಚನ. ॥

ಎಂತಯ್ಯ ನೊಸಲಲ್ಲಿ ಕಣ್ಣು? ಮನಸಲ್ಲಿ ವಿರಸ ನುಡಿವುದೆಲ್ಲವು ಭಕ್ತಿರಸಜ್ಞಾನವೆಂತು ಹೇಳಾ? ನಿರಹಂಕಾರವೆಂತು ಹೇಳಾ? ಕುರುಹಿನ ಕುರುಹಿನ ಮರವೆ ಮಾತಿನೊಳಗಿದೆ. ನಿನ್ನಿಂದ ನಿಜಪದವೆಂತು ಸಾಧ್ಯವಪ್ಪುದು ಹೇಳಾ? ಕುರುಹಳಿದು ಕುರುಹನರಿಯಬಲ್ಲರೆ ಗುಹೇಶ್ವರಲಿಂಗವಲ್ಲಿ ಉಭಯಗೆಟ್ಟಲ್ಲದೆ, ಪ್ರಸಾದವಿಲ್ಲ ಕಾಣಾ ಮಡಿವಾಳ ಮಾಚಯ್ಯ.॥೫॥

ಹೀಗೆಂದು ಪ್ರಭುದೇವರು ಮಡಿವಾಳ ತಂದೆಗಳ ಸ್ಥಿತಿಗತಿಯನೊರೆದು ನೋಡಲು, ಇದಕ್ಕೆ ಮಡಿವಾಳ ತಂದೆಗಳು ತಮ್ಮ ಪೂರ್ವಾಪರ ಸಂಬಂಧದ ದೃಷ್ಟಾಂತವಂ ಪ್ರಭುದೇವರಿಗೆ ಬಿನ್ನಹಂ ಮಾಡುವ ಪ್ರಸ್ಥಾವದ ವಚನ. ॥

ಎನ್ನ ಆದಿಯನೆತ್ತುವೆನೆ? ಅದ ನೀನೆ ಬಲ್ಲೆ. ಘನ ಗಂಭೀರವಲ್ಲಿ ಹುಟ್ಟಿದಸೆಂಬುವ ಎನ್ನನಾದಿಯನೆತ್ತಿ ಜೇಳಿ ತೋರುವೆನೆ? ಅದ ನೀನೆ ಬಲ್ಲೆ ಎನಗೆ ಕಾಯವಿಲ್ಲೆಂಬುವನು. ಬಸವಣ್ಣನ ಕಾರಣ ಮರ್ತ್ಯಕ್ಕೆ ಬಂದರೆ ಒಡಲುಸಾಧಿ ಎಂಬುದಿಲ್ಲ ನೋಡಾ! ಒಡಲೆ ಬಸವಣ್ಣ ಪ್ರಾಣವೆ

ಚನ್ನಬಸವಣ್ಣ. ಎನ್ನ ಮಹಾಜ್ಞಾನವೆ ನೀವು ನೋಡಾ! ಇಂತು ಬ್ರ
ಡಿಲ್ಲದಿಪ್ಪಲ್ಲಿ ನುಡಿಯುದಗಿವ ಪರಿಯ ನಿಮ್ಮ ಶರಣಬಸವಣ್ಣ ಬಲ್ಲ ಕಾಣಾ
ಕಲಿದೇವರದೇವಯ್ಯ. ॥೬॥

ಇಂತು ಮಡಿವಾಳ ತಂದೆಗಳು ತಮ್ಮ ಪೂರ್ವಾಪರ ಸಂಬಂಧವ
ವೃತ್ತಾಂತವಮಂ ಬಿನ್ನಪಂಗೆಯ್ಯಲು ಇದಕ್ಕೆ ಪ್ರಭುದೇವರು ನಿರೂಪಿಪ
ಪ್ರಸ್ತಾವದ ವಚನ. ॥

ಗುರುವಿಮು, ಲಿಂಗವಿದು, ಜಂಗಮವಿದು, ಎಂಬ ಭೇದವ ವಿಕವ
ಮಾಡಿ ನಿನಗೆ ತೋರಿದವರಾರು ಹೇಳಾ? ಆದಿ ಅನಾದಿಯನು ಒಂದ
ಮಾಡುವ ಭಾವ ನಿರ್ಭಾವವನರುಹಿದವರಾರು ಹೇಳಾ? ದೀಕ್ಷೆ ಶಿಕ್ಷೆ
ಸ್ವಾನುಭಾವದ ಪರಿಯ ತೋರಿ ನಿಜದಲ್ಲಿ ನಿಲಿಸಿದವರಾರು ಹೇಳಾ?
ಗುಹೇಶ್ವರ ಲಿಂಗದಲ್ಲಿ ನಿನ್ನ ಆಯತವ ಹೇಳಾ ಮಡಿವಾಳಮಾಚಯ್ಯ. ॥೭॥

ಹೀಗೆಂದು ಪ್ರಭುದೇವರು ನಿರೂಪಿಸಲು, ಇದಕ್ಕೆ ಮಡಿವಾಳ ತಂದೆ
ಗಳು ಬಿನ್ನೈಸಿದ ಪ್ರತ್ಯುತ್ತರ.

ಗುರು ಸ್ವಾಯತವಾಯಿತ್ತು. ಎಂಟು ಭಾವ ಸ್ವಾಯತವಾಯಿತ್ತು. ಹದಿ
ನಾರು ತೆರನ ಭಕ್ತಿ ಸ್ವಾಯತವಾಯಿತ್ತು. ಅಷ್ಟವಿಧಾರ್ಚನೆ ಸ್ವಾಯತ
ವಾಯಿತ್ತು. ತ್ರಿವಿಧದ ಅರಿವು ಸ್ವಾಯತವಾಯಿತ್ತು. ಮಹಾಲಿಂಗದ
ನಿಲವು ಮಹಾಜಂಗಮದ ನಿಲವು ಸ್ವಾಯತವಾಯಿತ್ತು. ಶುದ್ಧಪ್ರಸಾದ
ತನುಸ್ವಾಯತವಾಯಿತ್ತು. ಸಿದ್ಧಪ್ರಸಾದ ಜೈತನ್ಯ ಸ್ವಾಯತವಾಯಿತ್ತು.
ಪ್ರಸಿದ್ಧ ಪ್ರಸಾದ ಮನಸ್ವಾಯತವಾಯಿತ್ತು. ವಾಮಭಾಗದಲ್ಲಿ ಮಹವು
ಉದಯವಾಯಿತ್ತು. ಶಿವಾಚಾರದಲ್ಲಿ ನಿರವಯ ಉದಯವಾಯಿತ್ತು. ನಿಜ
ಸ್ಥಾನ ಕರದಲ್ಲಿ ನಿಂದಿತ್ತು. ಕ್ಷೀರಕ ಸ್ಥಾನದಲ್ಲಿ ಸಾರಾಯವಾಯಿತ್ತು. ಅನು
ಭಾವದಲ್ಲಿ ಘನಗಮನವೆನಿಸಿತ್ತು. ಸ್ವಾನುಭಾವದಲ್ಲಿ ನಿಮ್ಮ ಬಸವಣ್ಣಂಗೆ
ಶರಣೆಂದಿತ್ತು. ನೆಮ್ಮುಗೆವಿಡಿದು ಬಸವಣ್ಣನ ಪ್ರಸಾದವ ಕೊಂಡಿತ್ತು. ನಿಮ್ಮ
ಬಸವಣ್ಣನ ಪ್ರಸಾದದಿಂದೆ ಇಂತಹ ಘನವು ಸ್ವಾಯತವಾಯಿತ್ತು. ನೀವು
ಬಸವಣ್ಣನಿಂದಾದಿರಂಗಿ ಬಸವಣ್ಣಂಗೆ ನಮೋ ಎಂಬೆನು ಕಾಣಾ ಕಲಿದೇ
ವರದೇವಾ ॥೮॥

ಮತ್ತಂ, ಒಬ್ಬಳು ಆದಿ ಯುಗದಲ್ಲಿ ಮಾಯಾಂಗನೆ ಹಲವು ಬಣ್ಣದ
ವಸ್ತ್ರವನುಟ್ಟುಕೊಂಡು ಹೆಡಗೆ ತುಂಬಿದ ದೇವರ ಹೊತ್ತುಕೊಂಡು.
ಓ ದೇವರ ಕೊಳ್ಳಿರಯ್ಯ ಓ ದೇವರ ಕೊಳ್ಳಿರಯ್ಯ, ಎಂದಳು. ಎಂದರೆ

ರನಾರು ಕೊಂಬವರಿಲ್ಲ. ನಾ ಒಂದರುವೆಯ ಕೊಟ್ಟು ಆ ದೇವರ
ನು ಎನ್ನ ಹೆತ್ತ ತಂದೆ ಬಸವಣ್ಣನ ಪ್ರಸಾದವಿಂದೆ ಬದುಕಿದೆನು
ಣಾ ಕಲಿದೇವರದೇವಾ ॥೯॥

ಎಲ್ಲ ಭಕ್ತಿಯ ಭೇದವನು ಎಲ್ಲ ಕೂಟದ ಭೇದವನು ಎಲ್ಲ ಶೀಲದ
ದವನು ನಾನು ನಿಮಗೆ ಬಿನ್ನೈಸುವೆನು ಕೇಳಯ್ಯ! ನೀನು ಕರ್ತನಾಗಿ
ನು ಭೃತ್ಯನಾಗಿ ಅವಧರಿಸಯ್ಯ ಎಲ್ಲ ಭೇದಂಗಳನು ಬಸವಣ್ಣ ಮಾಡಿ
ನು. ಆದಿ ಅನಾದಿಯ ಬಸವಣ್ಣ ಮಾಡಿದನು. ನಾಸ್ತಿ ಅಸಾಧ್ಯವ ಬಸ
ಣ್ಣ ಮಾಡಿದನು. ಲಿಂಗವನು ಜಂಗಮವನು ಬಸವಣ್ಣನೆ ಮಾಡಿದನು.
ನ್ನ ಸರ್ವಸ್ವಾಯತನನು ಬಸವಣ್ಣ ಮಾಡಿದ ಕಾರಣ ಆ ಬಸವಣ್ಣನ
ನೆನವ ಬದುಕಿದೆನು ಕಾಣಾ ಕಲಿದೇವರದೇವಾ ॥೧೦॥

ಮತ್ತಂ, ಮಡಿವಾಳಯ್ಯಗಳು ಬಸವರಾಜದೇವರ ತೋರಿ ಬಿನ್ನಪಂ
ಗೈಸ್ಯ ಪ್ರಸ್ತಾವದ ವಚನ ॥

ಶಿವ ತಾನೀತ ಮರ್ತ್ಯಲೋಕವ ಪಾವನವ ಮಾಡಲು, ಗುರುತಾ
ನೀತ ಎನ್ನ ಭವರೋಗವ ಛೇದಿಸಲು, ಭಕ್ತ ತಾನೀತನೆನಗೆ ವಿಸ್ತಾರವಾಗಿ
ಭಕ್ತಿಯ ಭೇದವ ತೋರಲು ಜಂಗಮ ತಾನೀತ ಅನಾದಿ ಸಂಸಿದ್ಧ ಘನ
ಮಹಿಮನಾಗಿ ಲಿಂಗವು ತಾನೀತನೆನಗೆ ಪ್ರಾಣಲಿಂಗ ತಾನಾಗಿ ಎನ್ನ ವಿಸ್ತ
ರವ ತಾನೀತನೆನ್ನ ನೀಲಕಡೆಯು ತಾನಾಗಿ ಎನಗೆ ಸರ್ವಸ್ವಾಯತವ
ಮಾಡಿದ ಮಹಿಮನೀತ ಕಾಣಾ ಕಲಿದೇವರದೇವಯ್ಯ ನಿಮ್ಮ ಶರಣಬಸ
ವಣ್ಣನು ॥೧೧॥

ಮತ್ತಂ, ಅರಿವನಾರಡಿಗೊಂಡಿತ್ತು. ಮರಹು ಮರಹನಾರಡಿಗೊಂ
ಡಿತ್ತು ಮಾಯೆ. ಮಾಯೆಯನಾರಡಿಗೊಂಡಿತ್ತು ಕರ್ಮ. ಕರ್ಮವನಾರಡಿ
ಗೊಂಡಿತ್ತು ತನು. ತನುವನಾರಡಿಗೊಂಡಿತ್ತು ಸಂಸಾರ ಮರಹು ಮಂಪ
ರಮನೆಂದರಿನು ಅರಿವ ಬಿಲಿಮಾಡಿ ತ್ರಿವಿಧ ಕೊಟ್ಟು ಗುರುವಿನ ಕೈಯಲ್ಲಿ
ಲಿಂಗವ ಕೊಂಡೆ ನೋಡಯ್ಯ! ನಾನು ಎನ್ನಂಬನಾಯಕದಲ್ಲಿ ನಿಲಿಸಿ ನಿಜ
ಸ್ಥಾಯತವ ಮಾಡಿದನು ಕಲಿದೇವರದೇವ ನಿಮ್ಮ ಶರಣಬಸವಣ್ಣನು ॥೧೨॥

ಹೀಗೆಂದು ಮಡಿವಾಳ ತಂದೆಗಳು ಬಿನ್ನಪಂಗೆಯ್ಯಲು, ಇವಕ್ಕೆ ಪ್ರಭು
ದೇವರು ನಿರೂಪಿಸಿದ ಪ್ರಸ್ತಾವದ ವಚನ. ॥

ಅರಿವು ಉದಯವಾದಲ್ಲದೆ ಮರಹು ನಷ್ಟವಾಗದು. ಮರಹು ನಷ್ಟವಾದಲ್ಲದೆ ಅರಿವು ಸ್ವಾಯತವಾಗದು. ಅರಿವು ಸ್ವಾಯತವಾಗಿ ತನ್ನ ಕೊಂಡ ಬಳಿಕ ಗುರುವಾರು, ಲಿಂಗವಾರು, ಜಂಗವಾರು, ಪಾದೋದಕವಾರು, ಪ್ರಸಾದವಾರು, ಅವುದು ಘನ, ಅವುದು ಕಿರಿದು ಹೇಳಾ? ಗುಹೇಶ್ವರಲಿಂಗದಲ್ಲಿ ಅರಿದು ಮರೆದ., ಉಸದೀಸವ ಹಡೆದವ ಮುಂದೆ ನಿಜವೆಂತು ಸಾಧ್ಯವಪ್ಪುದು ಹೇಳಾ ಮಡಿವಾಳಮಾಚಯ್ಯಾ? ॥೫॥

ಹೀಗೆಂದು ಪ್ರಭುದೇವರು ನಿರೂಪಿಸಲು, ಇದಕ್ಕೆ ಮಡಿವಾಳ ತಂದೆಗಳು ಬಿನ್ನೈಸಿದ ಪ್ರತ್ಯುತ್ತರ. ॥

ಅರಿದಲ್ಲದೆ ಗುರುವ ಕಾಣಬಾರದು. ಅರಿದಲ್ಲದೆ ಲಿಂಗವ ಕಾಣಬಾರದು. ಅರಿದಲ್ಲದೆ ಜಂಗಮವ ಕಾಣಬಾರದು. ಇಂತೀ ತ್ರಿವಿಧವು ಬಸವಣ್ಣನ ಕೃಪೆಯಿಂದಲೆನಗೆ ಸಾಧ್ಯವಾಯಿತ್ತಾಗಿ, ಛಿನ್ನವಿಲ್ಲ ಕಾಣಾ ಕಲಿದೇವರದೇವಾ ॥೫॥

ಇದಕ್ಕೆ ಪ್ರಭುದೇವರ ನಿರೂಪ.

ಗುರು ಸ್ವಾಯತವಾಯಿತ್ತು, ಲಿಂಗಸ್ವಾಯತವಾಯಿತ್ತು, ಜಂಗವು ಸ್ವಾಯತವಾಯಿತ್ತು. ಬಸವಣ್ಣನಿಂದಲೆಂದರೆ ತನುವಿಲ್ಲದಿರಬೇಕು. ಮನವಿಲ್ಲದಿರಬೇಕು. ಅರಿವರಿತು ಮರಹು ನಷ್ಟವಾಗಿರಬೇಕು. ಗುಹೇಶ್ವರಲಿಂಗದಲ್ಲಿ ನಿರ್ದೇಪಿಯಾದಲ್ಲದಿಲ್ಲ ಕಾಣಾ ಮಡಿವಾಳಮಾಚಯ್ಯ ॥೫॥

ಹೀಗೆಂದು ಪ್ರಭುದೇವರು ನಿರೂಪಿಸಲು, ಇದಕ್ಕೆ ಮಡಿವಾಳಯ್ಯ ತಂದೆಗಳ ಪ್ರತ್ಯುತ್ತರ. ॥

ತನುವಿನಲ್ಲಿ ಹೊರೆ ಇಲ್ಲ. ಮನದಲ್ಲಿ ವ್ಯಾಕುಳವಿಲ್ಲ. ಭಾವದಲ್ಲಿ ಬಯಕೆ ಇಲ್ಲ. ಅರಿವಿನಲ್ಲಿ ವಿಚಾರವಿಲ್ಲ. ನಿಜದಲ್ಲಿ ಅವಧಾನವಿಲ್ಲ. ನಿರ್ಲೇಪಸಂಗವಲ್ಲಿ. ಬಿಚ್ಚಿಜೇರಾಗಲಿಲ್ಲ. ಕಲಿದೇವರದೇವ ನಿಮ್ಮಲ್ಲಿ ಬೆರಸಿ, ಬೇರಾಗದಿರ್ದೆನು ॥೬॥

ಹೀಗೆಂದು ಮಡಿವಾಳ ತಂದೆಗಳು ಬಿನ್ನಪಂಗೈಯ್ಯಲು, ಇದಕ್ಕೆ ಪ್ರಭುದೇವರು ಕೊಟ್ಟ ಪ್ರತ್ಯುತ್ತರ. ॥

ತನುವಿನಲ್ಲಿಪ್ಪ ಲೋಭ. ಮನವ ಕದ್ದು ಮಾತನಾಡಿದರೆ ಆ ತನುವೆ ಮನ ರೂಪಾಗಿ ಕಾಣಬರುತ್ತಿದೆ. ಆ ಮನದಲ್ಲಿ ಬಯಕೆ ಸಮರತಿಯಾಗಿ, ಕಾಯದ ಕರುಳು ಲೋಭದ ಬಯಕೆಯೊಳಗದೆ. ಅರಿದೆನೆಂ

ದು ಮಾತನಾಡಿದರೆ ನವ್ಯ ಗುಹೇಶ್ವರಲಿಂಗವು ಮುಚ್ಚು ನೋಡಾ ಮಡಿವಾಳಮಾಚಯ್ಯ ॥೭॥

ಹೀಗೆಂದು ಪ್ರಭುದೇವರು ನಿರೂಪಿಸಲು, ಅದಕ್ಕೆ ಮಡಿವಾಳತಂದೆ ಬಿನ್ನೈಸಿದ ಪ್ರತ್ಯುತ್ತರ. ॥

ಕಾಯದ ಕರಸ್ಥಲದಲ್ಲಿ ಗುರುಸ್ವಾಯತವ ಮಾಡಿದೆನು. ಕ್ರೋಧವ ಮನದಲ್ಲಿ ಜಂಗಮಸ್ವಾಯತವ ಮಾಡಿದೆನು. ಲೋಭವಿಲ್ಲದೆ ಪ್ರಸಾದವ ಕೊಂಡೆನು. ಇಂತೀ ತ್ರಿವಿಧದಲ್ಲಿ ಶುದ್ಧನಾದೆನು ಕಾಣಾ ಕಲಿದೇವರದೇವ ನಿಮ್ಮಾಣೆ ॥೮॥

ಮತ್ರಂ ಎನ್ನ ಅಷ್ಟವಿಧಾರ್ಚನೆ ಶುದ್ಧವಾಯಿತ್ತಯ್ಯ ನೀವು ಮೂರ್ತಿಲಿಂಗವಾದ ಕಾರಣ. ಎನ್ನ ತನು ಮನ ಶುದ್ಧವಾಯಿತ್ತಯ್ಯ, ನೀವು ಜಂಗಮವಾದ ಕಾರಣ. ಎನ್ನ ಆಸ್ಯಾಯನ ಶುದ್ಧವಾಯಿತ್ತಯ್ಯ, ನಿಮ್ಮ ಪ್ರಸಾದವ ಕೊಂಬೆನಾಗಿ. ಎನ್ನ ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಂಗಳಳಿದವಯ್ಯ, ನೀವು ಜ್ಞಾನಲಿಂಗವಾದ ಕಾರಣ. ಇಂತೀ ಸರ್ವಾಂಗದಲ್ಲಿ ಸನ್ನಿಹಿತನಾದೆನು ಕಾಣಾ ಕಲಿದೇವರದೇವಾ ॥೯॥

ಹೀಗೆಂದು ಮಡಿವಾಳ ತಂದೆಗಳು ಬಿನ್ನೈಸಲು, ಇದಕ್ಕೆ ಪ್ರಭುದೇವರು ಮಡಿವಾಳ ತಂದೆಗಳ ಸಮರಸಭಾವವನೊರೆದು ನೋಡುವ ಪ್ರಸಾದ ಪದ ಪಚನ. ॥

ತನುಗುಣ ನಾಸ್ತಿಯಾಗಿ, ಮನಗುಣನಾಸ್ತಿ. ಧನಗುಣ ನಾಸ್ತಿಯಾದ ಬೀಸು? ಭಾವನಾಸ್ತಿಯಾಗಬೇಕು. ಭಾವ ನಾಸ್ತಿಯಾದಲ್ಲದೆ ಅರಿವು ನೆಲೆಗೊಳ್ಳದು. ಅರಿವು ನೆಲೆಗೊಂಡಲ್ಲಿ ಕುರುಹಿಂಗೆ ಹೊರಗು. ಕುರುಹೆನು ಕೂಡುವ ಪರಮು ಸುಖವು ಗುಹೇಶ್ವರ ಲಿಂಗದಲ್ಲಿ ನಿನಗೆ ಸಾಧ್ಯವಾವ ಪರಿಯ ಹೇಳಾ ಮಡಿವಾಳ ಮಾಚಯ್ಯ. ॥೧೦॥

ಹೀಗೆಂದು ಪ್ರಭುದೇವರು ಮಡಿವಾಳ ತಂದೆಗಳ ಒಳಗನೊರೆದು ನೋಡಲು, ಮರಳಿ ಆ ಮಡಿವಾಳ ತಂದೆಗಳು ಬಿನ್ನೈಸಿದ ಪ್ರತ್ಯುತ್ತರ. ॥

ಆಲೀಯ್ಯವಾಗಿ ಬಂದ ಪರಿಯ ಆಕಾರ ಉಕಾರ ಮಕಾರಂಗಳು ನೋಕದಿರ್ದ ಪರಿಯ ನಿರ್ದೇಪ ಸ್ಥಲವಾಧಾರವಾದ ಪರಿಯ ನಿಮ್ಮ ಕರುಣ ಬಸವಣ್ಣ ಬಲ್ಲನು ಬೆಸಗೊಳ್ಳಿ ಕಲಿದೇವರದೇವಾ. ॥೧೧॥

ಎನ್ನ ಅಂತಶ್ಶಿ ಗತಿಯ ಬಸವಣ್ಣ ಬಲ್ಲನಾಗಿ, ಅತನಿಂದಲಿ ಸರಿಯ ವಿಚಾರಿಸಿ ನೋಡಿ ಎಂದು ಮಡಿವಾಳ ತಂದೆಗಳು ಬಿನ್ನೈಸಲು, ಇದಕ್ಕೆ ಪ್ರಭುದೇವರು ಬಸವರಾಜದೇವರ ಬೆಸಗೊಂಬ ಪ್ರಸ್ಥಾವದ ವಚನ.

ನಮ ಮವ ಜೆರಿಸಿ ಸಮರತಿಯ ಸಂಗವಲ್ಲಿ ಸುಖಿಗಳಾಗಿಪ್ಪ ಶರಣ ಸಂಗಸುಖವನಾ ಶರಣರೆ ಒಲ್ಲರಲ್ಲವೆ ಕೆಲದಲ್ಲಿ ಇದ್ದವಂಗೆ ಅರಿಯಬಹುದಲ್ಲಿ ನಿಜಗುಣ ಧರಿತರು ಶಿವಶರಣರ ನಿಲವ ಕಂಡಿಹೆನೆಂದರೆ ಕಾಣಬಹುದಲ್ಲಿ ಗುಹೇಶ್ವರಲಿಂಗದಲ್ಲಿ ಮಡಿವಾಳಮಾಚಯ್ಯನ ಪರಿಯ ನೀನೆ ಬಲ್ಲೆ. ಎನ್ನ ಗೊಮ್ಮೆ ಹೇಳಾ ಸಂಗನ ಬಸವಣ್ಣಾ. ॥೨೨॥

ಹೀಗೆಂದು ಪ್ರಭುದೇವರು ಬೆಸಗೊಳಲು, ಬಸವರಾಜದೇವರು ಮರಳಿ ಪ್ರಭುದೇವರೊಡನೆ ಬಿನ್ನಸಂಗೈವ ಪ್ರಸ್ಥಾವದ ವಚನ. ॥

ಎನ್ನ ಕಾಯದ ಕತ್ತಲೆಯ ಕಳೆಯಲರಿಯೆನು. ಎನ್ನ ಜೀವದ ಸಿಲೆಯ ಗೆಲಲರಿಯೆನು. ಎನ್ನ ಭಾವದ ಸೂತಕವ ಕಳೆಯಲರಿಯೆನು. ನಾನೆಂತು ಬಲ್ಲೆನಯ್ಯ ನಿಮ್ಮ ಘನ ಮಹಿಮರ ನಿಲವ? ಕೂಡಲ ಸಂಗಮದೇವ ನಿಮ್ಮ ಶರಣರ ಮಡಿವಾಳವಾಚಿ ತಂದೆಯ ಘನವ ನೀವೆ ಬಲ್ಲಿರಿ. ॥೨೩॥

ಮತ್ತಂ, ಅಪುದನರಿಯೆ. ಹೋಪುದನರಿಯೆ. ಬಂಪುದನರಿಯೆ. ನಿಂಪುದನರಿಯೆ. ಒಳಗನರಿಯೆ. ಹೊರಗನರಿಯೆ. ಇಹವನರಿಯೆ. ಪರವನರಿಯೆ. ಭಾವವನರಿಯೆ. ನಿರ್ಭಾವವನರಿಯೆ. ಶೂನ್ಯವನರಿಯೆ. ನಿಃಶೂನ್ಯವನರಿಯೆ. ಕೂಡಲ ಸಂಗಮದೇವಯ್ಯ ಇವೆಲ್ಲವ ಮಾಡಿ ಕೂಡದಾತ ಮಡಿವಾಳ ಬಲ್ಲನಾಗಿ ನಾನೇನೆಂದರಿಯೆನಯ್ಯ. ॥೨೪॥

ಮತ್ತಂ, ಅಯ್ಯ ನಾನು ದಾಸೋಹವ ಮಾಡುವೆನಲ್ಲದೆ ಸಮಯವನರಿಯೆನಯ್ಯ. ನಾನು ಭಕ್ತಿಯ ಮಾಡುವೆನಲ್ಲದೆ ಭಾವವನರಿಯೆ. ಸಕಲ ಕುಳವ ವಿಚಾರಿಸಿದರೆ, ಎನ್ನಲ್ಲೇನು ಹುರುಳಿಲ್ಲ. ನಿಮ್ಮ ಶರಣರ ಸೋಂಕಿನಲ್ಲಿ ಶುದ್ಧನಾದೆನು ಕಾಣಾ. ಕೂಡಲ ಸಂಗಮದೇವರು ಸಾಕ್ಷಿಯಾಗಿ ಮಡಿವಾಳ ಮಾಚಿ ತಂದೆಗಳ ಶ್ರೀಪಾದಕ್ಕೆ ನಮೋ ನಮೋ ಎಂದು ಬದುಕಿದೆನು. ॥೨೫॥

ಈಗೆಂದು ಬಸವರಾಜದೇವರು ಬಿನ್ನೈಸಲು, ಪ್ರಭುದೇವರು ಆ ಬಸವರಾಜದೇವರ ಪರಿಯ ಹೇಳೆಂದು ಮಡಿವಾಳ ತಂದೆಗಳ ಬೆಸಗೊಂಬ ಪ್ರಸ್ಥಾವದ ವಚನ. ॥

ಯುಕ್ತಿಯು ಕೇಳಿದರೆ ಭಕ್ತಿಯು ತೋರಿನ. ಭಕ್ತಿಯು ಕೇಳಿದರೆ, ಯುಕ್ತಿಯು ತೋರಿದೆ. ನಿತ್ಯವ ಬೆಸಗೊಂಡರೆ ಅತ್ತತ್ತಲೋಸರಿಸಿದ. ಗುಹೇಶ್ವರನ ಶರಣ ಬಸವಣ್ಣ ಮರಿಗೆ ಮರಿಯುಸೊಪ್ಪಿ ಜಾರಿದನು. ಬಸವಣ್ಣನ ಪರಿ ಎಂತು ಹೇಳಾ ಮಡಿವಾಳಮಾಚಯ್ಯ? ॥೨೬॥

ಈಗೆಂದು ಪ್ರಭುದೇವರು ಬೆಸಗೊಳ್ಳಲು, ಆ ಮಡಿವಾಳ ತಂದೆಗಳು ಬಸವರಾಜದೇವರ ಮಹಾತ್ಮೆಯನು ಬಿನ್ನಪಂಗೆಯ್ವ ಪ್ರಸ್ಥಾವದ ವಚನ.

ಪ್ರಥಮಕಾಲದಲ್ಲಿ ದೇವಗಣ ಮಹಾಗಣ ಕಿನ್ನರಗಣ ಅಳಾಪಗಣ ಸಹಿತ ಸಂಗನಬಸವಣ್ಣನು ಗಣಪ್ರಸಾದಿಯಾಗಿ ಮರ್ತ್ಯಲೋಕಕ್ಕೆ ಮಹಪ್ರಮಥ ಶಿವಗಣಂಗಳ ಮಾಡಿದಾತ ಬಸವಣ್ಣನು. ಸ್ವರೂಪು ಸಾರಾಯವನು ಪದಾರ್ಥವೆಂದಾತ ಬಸವಣ್ಣನು. ಕಲಿದೇವಯ್ಯ ನಿಮ್ಮ ಶರಣ ನಿಂತಪ ಮಹಿಮನು. ॥೨೭॥

ಮತ್ತಂ, ಎಲ್ಲ ವರ್ಣನೆಗಳು ಸ್ವಾಪ್ನಪೊಳಗು. ಎಲ್ಲ ವಚನಂಗಳು ತಾಪದೊಳಗು. ಎಲ್ಲ ಸ್ತೋತ್ರಂಗಳು ಕ್ರೋಧದೊಳಗು. ಎಲ್ಲ ಅರಿವು ಮರಹನೊಳಗು. ಎಲ್ಲ ಮೂರ್ತಿಗಳು ಪ್ರಳಯದೊಳಗು. ಎಲ್ಲ ಗೀತಂಗಳು ಸಂವಾದದೊಳಗು. ಲಿಂಗಾನುಭಾವಿ ಇವನೊಂದುವನು ಮನದೊಳು ನೆನೆಯನೇನೆಂದು ಅರಿಯು. ಸ್ವತಂತ್ರನಿತ್ಯನಾಗಿ ಭಕ್ತಿ ದಾಸೋಹವನಿಮ್ಮಲ್ಲಿ ಬಸವಣ್ಣನಳವಡಿಸಿಕೊಂಡನು. ನಿಮ್ಮ ಬಸವಣ್ಣನಿಂತಹ ಸ್ವತಂತ್ರನಯ್ಯ ಕಲಿದೇವರದೇವಾ. ॥೨೮॥

ಮತ್ತಂ, ಆದಿ ಅನಾದಿ ಸಾಧ್ಯ ಅಸಾಧ್ಯಂಗಳಿಲ್ಲದಂದು, ಸ್ಥೂಲ ಸೂಕ್ಷ್ಮಂಗಳೆಂಬ ಮೂರ್ತಿಗಳಿಲ್ಲದಂದು, ಸಾಕಾರ ನಿರಾಕಾರವೆಂಬ ಶಾಖೆ ಹುಟ್ಟದಂದು, ಪಂಕರ ರಹಿತರ ಈಶ್ವರನೆಂಬ ಗಣಾಧೀಶ್ವರರಿಲ್ಲದಂದು, ಉಮೆಯ ಕಲ್ಯಾಣವಿಲ್ಲದಂದು, ಶಿವರತಿ ಮಹಾರತಿ ಬಸವಣ್ಣನೆಂಬ ಸೀಮಾಯಿತ್ತು. ಸರ್ವ ವಿಸ್ತೀರ್ಣವ ನಿರಾಕರಿಸಿ ಶಿವಲಿಂಗಾರ್ಚನೆಯ ತೋರಿದ. ನಿತ್ಯ ಲಿಂಗಾರ್ಚನೆಯಲ್ಲಿ ಪ್ರಸಾದ ಧ್ಯಾನ, ಜಂಗಮಾರ್ಚನೆಯಲ್ಲಿ ಪ್ರಸಾದಭೋಗವೆಂಬುದನು ಸಂಗನಬಸವಣ್ಣನಲ್ಲದೆ ಮತ್ತಾರು ಅರಿಯರು. ಭಕ್ತಿಯ ಕುಳಸ್ಥಳವ ನರಿಯುದೆ, ಎಲ್ಲರು ಎಂದಂತೆ ಎಂದರು. ಬಂದಲ್ಲಿಯೆ ಬಂದರು. ಇವ ನಿಃಕರಿಸಿ ಜಂಗಮವೇ ಲಿಂಗವೆಂದು ಸಂಗಸಾಹಿತ್ಯವಾದನು. ಬಸವಣ್ಣನಿಂತಹ ನಿತ್ಯನಯ್ಯ ಕಲಿದೇವದೇವಯ್ಯ. ॥೨೯॥

ಮತ್ತಂ. ಆಕಾರ ನಿರಾಕಾರವೆನುತಿಪರಿಲ್ಲರು. ಆಕಾರವೆನ್ನ. ನಿರಾಕಾರವೆನ್ನ. ಲಿಂಗಜಂಗಮ ಪ್ರಸಾದ ತನ್ಮತನಾದ ನಿಮ್ಮ ಬಸವಣ್ಣನಿಂತ ಸ್ವತಂತ್ರನಯ್ಯ ಕಲಿದೇವರದೇವಾ. ॥೩೦॥

ಮತ್ತಂ, ಬಸವಣ್ಣನ ನಡೆ ಪರುಷ. ಬಸವಣ್ಣನ ನುಡಿ ಪರುಷ. ಬಸವಣ್ಣನ ದೃಷ್ಟಿ ಪರುಷ. ಬಸವಣ್ಣನ ಹಸ್ತ ಪರುಷ. ಬಸವಣ್ಣನ ಭಾವ ಪರುಷ. ಬಸವಣ್ಣನ ಮನ ಪರುಷ. ತನುಮನಧನವ ವೇಧಿಸಿದಾತ ಬಸವಣ್ಣನು. ಬಸವಣ್ಣನ ನೆನೆವುದೇ ಲಿಂಗಾರ್ಚನೆ. ಬಸವಣ್ಣನ ನೆನೆವುದೆ ಪರತತ್ವ. ಬಸವಣ್ಣನ ನೆನೆವುವೆ ಕಲ್ಯಾಣವೆನಗೆ. ಕಲಿದೇವರದೇವಯ್ಯ ನಿಮ್ಮ ಶರಣ ಬಸವಣ್ಣನಿಂತಹ ಮಹಿಮ ನೋಡಯ್ಯ. ॥೩೧॥

ಇಂತು ಮಡಿವಾಳ ತಂದೆಗಳು ಪ್ರಭುದೇವರೊಡನೆ ಬಸವರಾಜದೇವರ ಮಹಾತ್ಮೆಯನು ಕೊಂಡಾಡಲು, ಇದಕ್ಕೆ ಪ್ರಭುದೇವರು ಪ್ರಸನ್ನರಾಗಿ, ಬಸವರಾಜದೇವರೊಡನೆ ಮಡಿವಾಳತಂದೆಗಳ ಕೊಂಡಾಡಿದ ಪ್ರಸ್ಥಾವದ ವಚನ. ॥

ವಾರಿಕಲ್ಲ ಪುತ್ಥಳಿಯನಪ್ಪಿಕೊಂಡಂತಾಯಿತ್ತು. ಅಗ್ನಿಯ ಮುಸುಕ ತೆಗೆದ ಕರ್ಪುರದಂತಾಯಿತ್ತು. ಕತ್ತಲೆಯೊಳಗೆ ಬೆಳಗು ಹೊಕ್ಕಂತಾಯಿತ್ತು. ಗುಹೇಶ್ವರನ ಶರಣ ಮಡಿವಾಳ ಮಾಚಿತಂದೆಯ ಕೃಪೆಯಿಂದ ಬಸವಣ್ಣ ನಿನ್ನನು ಮಡಿವಾಳನನು ನಿನ್ನಿಂದ ಕಂಡೆನಯ್ಯ. ॥೩೨॥

ಮತ್ತಂ, ಅಷ್ಟತನುವಿನ ಘಟ್ಟಿಯ ಕರಗಿಸಿ, ಕಟ್ಟಿಗ್ರ ಕಾಮ ಕ್ರೋಧ ಲೋಭ, ಮೋಹ, ಮದ, ಮತ್ಸರಂಗಳೆಂಬವನು ಸುಟ್ಟುರುಹಿ, ತನುವಿನ ಅವಲೋಹವ ಕೆಡಿಸಿ, ಮನದ ಸಂಚಲವ ನಿಲಿಸಿ, ಸಕಲ ಕರಣಂಗಳ ಅರಿವಿಂಗಾಹುತಿಯನಿಕ್ಕಿ, ಸುಜ್ಞಾನ ಪ್ರಭೆಯನುಟ್ಟು, ಸುಜ್ಞಾನಪ್ರಭೆಯ ಹೊದೆದು, ಸುಜ್ಞಾನ ಪ್ರಭೆಯ ಸುತ್ತಿ, ಸುಜ್ಞಾನ ಪ್ರಭೆಯ ಹಾಸಿ, ಮಹಾಜ್ಞಾನದಲ್ಲಿ ನಿರ್ಭಾವ ಸಂಪನ್ನನಾದ ಮಡಿವಾಳನ ಮಡಿಯ ಪ್ರಸಾದವ ನಾನು ಹೊದೆದ ಕಾರಣ ನಿರ್ಮಳನಾದೆನು, ನಿಜೈಕ್ಯನಾದೆನು, ನಿಶ್ಚಿಂತನಾದೆನು. ಇದು ಕಾರಣ ಗುಹೇಶ್ವರಲಿಂಗದಲ್ಲಿ ತೆರಹಿಲ್ಲದಿರ್ಪ ಮಡಿವಾಳನ ಪ್ರಸಾದದಿಂದ ನಿಮ್ಮ ಘನವನರಿದು ಬದುಕಿದೆನು ಕಾಣಾ ಸಂಗನಬಸವಣ್ಣಾ ॥೩೩॥

ಹೀಗೆಂದು ಪ್ರಭುದೇವರು ಮಡಿವಾಳಮಾಚಿತಂದೆಗಳ ಸ್ತುತಿಸಿ ಬಸವರಾಜದೇವರೊಡನೆ ನಿರೂಪಿಸಲು, ಆ ಮಡಿವಾಳ ಮಾಚಿ ತಂದೆಗಳು

ಪ್ರಭುದೇವರೊಡನೆ ಬಸವರಾಜದೇವರಿಂದ ನಿಮ್ಮ ಪ್ರಸಾದವ ನಿಲವ ಕಂಡೆವೆಂದು ಬಿನ್ನೈಸಿದ ಪ್ರಸ್ಥಾವದ ವಚನ. ॥

ಅಯ್ಯ ನಿಮ್ಮ ಪ್ರಸಾದವ ಮಹಿಮೆಯನೇನೆಂಬೆನಯ್ಯ! ವೇದಂಗಳಾಯವು. ಶಾಸ್ತ್ರಂಗಳರಿಯವು. ಛಲವ ಸಾಧಿಸಿ ತನುವ ದಂಡಿಸಿಯಾದಿ ಸಕಲ ಭೋಗಂಗಳ ಬಿಟ್ಟು ಸುಖದುಃಖವನನುಭವಿಸಿ ತಪ್ಪಿಲ್ಲದೆ ನಡದರೆ ಹಡೆವರಯ್ಯ ಒಚ್ಚಿ ಸ್ವರ್ಗದ ಭೋಗವನು. ಒಂದುವನು ಬಿಡಲಿಲ್ಲ. ಸಂದೇಹ ಮಾತ್ರವಿಲ್ಲ. ಅಗ ಬಿತ್ತಿ ಅಗ ಬೆಳೆವಂತೆ, ರೋಗಿ ಬಯಸಿತ್ತ ವೈದ್ಯ ಕೊಡುವಂತೆ, ಪಾಪದಂತಾದುದು ಪುಣ್ಯವನೆ ಮಾಡುವುದು. ಅತ ಉಂಡು ಉಪವಾಸಿ, ಬಳಸಿ ಬ್ರಹ್ಮಚಾರಿ ಎನಿಸುವ. ಹಿಡಿ ತಡಿಯಿಲ್ಲ. ನಡೆದುದೆ ಬಟ್ಟೆಯಾದ ಕಾರಣ ಪ್ರಸಾದದಿಂದತಃಪರವಿಲ್ಲ. ಪ್ರಸಾದಿಯಿಂದ ಮತ್ತಿಲ್ಲ. ಇಂತಪ್ಪ ಪ್ರಸಾದವನು ನಿಮ್ಮ ಶರಣ ಬಸವಣ್ಣ ತೋರಿದನಾಗಿ ಎನ್ನ ಭವಂ ನಾಸ್ತಿಯಾಯಿತ್ತು ಕಾಣಾ ಪ್ರಭುವೇ ಕಲಿದೇವರದೇವಾ ॥೩೪॥

ಇಂತು ಮಡಿವಾಳ ತಂದೆಗಳು ಪ್ರಭುದೇವರೊಡನೆ ಬಸವರಾಜದೇವರ ಕೊಂಡಾಡಿ ಬಿನ್ನೈಸಲು ಆ ಬಸವರಾಜದೇವರು ಮಡಿವಾಳ ತಂದೆಗಳ ಸ್ತುತಿಸಿದ ಪ್ರಸ್ಥಾವದ ವಚನ. ॥

ಕೋಟಿ ರುದ್ರರು ಮಡಿದರು. ಅನಂತಕೋಟಿ ಬ್ರಹ್ಮ ವಿಷ್ಣುಗಳು ಮಡಿದರು. ನರ ಸುರ ಗರುಡ ಗಂಧರ್ವರು ಮಡಿದರು. ಅವರ ಮಡಿಯೊಳಗೆ ತಾನಾಗದೆ ತಾನೊಂದು ಹೊಸ ಬಿಳಿದು ಮಡಿಯ ಮಾಡಿ, ಎನಗೆ ಹೊದಕೊಟ್ಟು ಎನ್ನ ಬದುಕಿಸಿಕೊಂಡಾತ ಮಡಿವಾಳ ಕಾಣಾ ಕೂಡಲಸಂಗಮದೇವಾ. ॥೩೫॥

ಇಂತು ಬಸವರಾಜದೇವರು ಮಡಿವಾಳ ತಂದೆಗಳ ಸ್ತುತಿಸುತ್ತಿರಲು, ಆ ಮಡಿವಾಳಮಾಚಿ ತಂದೆಗಳು ಬಸವರಾಜದೇವರೊಡನೆ ಪ್ರಭುದೇವರ ಕೊಂಡಾಡಿದ ಪ್ರಸ್ಥಾವದ ವಚನ. ॥

ಅಂಗಯ್ಯ ಲಿಂಗ ಕಂಗಳ ಸೋಂಟದಲ್ಲಿ ಬರತು ಲಿಂಗೈಕ್ಯನ ಮನವರಿವ ನಿರ್ಭಾವದಲ್ಲಿ ಬರತು ಲಿಂಗೈಕ್ಯವ ಸರ್ವಾಂಗ ನಿಷ್ಠೆ ನಿರ್ಣಯವಾದ ಲಿಂಗೈಕ್ಯ ನಿಜವನುಂಡು ತೃಪ್ತನಾದ ಲಿಂಗೈಕ್ಯ ಮಹವನವಗ್ರಹಿಸದ ಘನವೇದ್ಯನಾವ ಲಿಂಗೈಕ್ಯ ಕಲಿದೇವರದೇವ ಪ್ರಭುವೆಂಬ ಲಿಂಗೈಕ್ಯನ ಶ್ರೀಪಾದದಲ್ಲಿ ಮಗ್ನನಾಗಿರ್ದೆನು. ॥೩೬॥

ಮತ್ತಂ, ಗುರುವಾಗಿ ಉಪದೇಶವ ತೋರಿದನೀತ, ಲಿಂಗವಾಗಿ ಮನವನಿಂಬುಗೊಂಡಾತನೀತ, ಜಂಗಮವಾಗಿ ಅರ್ಥ ಪ್ರಾಣಾಭಿಮಾನವ ದರ್ಪವ ಕೆಡಿಸಿದನೀತ. ಪ್ರಸಾದವಾಗಿ ಎನ್ನಸರ್ವಾಂಗ ವನವಗ್ರಹಿಸಿದನೀತ. ಪಾದೋದಕವಾಗಿ ಎನ್ನ ಒಳಹೊರಗೆ ತೊಳೆದಾತನೀತ, ಕಲಿದೇವರ ದೇವ ಬಸವಣ್ಣ ತೋರಿದನಾಗಿ ಪ್ರಭುವೆಂಬ ಮಹಿಮನ ಸಂಗದಿಂದೆ ಬದುಕಿದೆನು. ॥೩೭॥

ಹೀಗೆಂದು ಮಡಿವಾಳ ತಂದೆಗಳು ಪ್ರಭುದೇವರ ಸ್ತುತಿಯಿಸಿ, ಬಸವರಾಜದೇವರೊಡನೆ ಬಿನ್ನೈಸಲು, ಆ ಬಸವರಾಜದೇವರು ಪ್ರಭುದೇವರೊಡನೆ ಮಡಿವಾಳ ತಂದೆಗಳ ಸ್ತುತಿಸಿದ ಪ್ರಸ್ಥಾವದ ವಚನ. ॥

ಎನ್ನ ಕಾಯವ ಶುದ್ಧವ ಮಾಡಿದಾತ ಮಡಿವಾಳ. ಎನ್ನ ಮನವ ನಿರ್ಮಳವ ಮಾಡಿದಾತ ಮಡಿವಾಳ. ಎನ್ನಂತರಂಗವ ಬೆಳಗಿದಾತ ಮಡಿವಾಳ. ಎನ್ನ ಬಹಿರಂಗವ ಬಿಡಿಸಿದಾತ ಮಡಿವಾಳ. ಕೂಡಲ ಸಂಗಮದೇವ ಎನ್ನ ನಿಮಗೆ ಯೋಗ್ಯನ ಮಾಡಿದಾತ ಮಡಿವಾಳ. ॥೩೮॥

ಮತ್ತಂ, ಸೂತ್ರಧಾರಿಯು ಮನದ ಪೈಲಿಗೆಯ ಕಳೆಯ ಬಂದನಯ್ಯ ಮಡಿವಾಳನು. ಎನ್ನ ಕಾಯದ ಪೈಲಿಗೆಯ ತಂದು ತನ್ನ ಮುಂದೆ ಇರಿಸಿದರೆ ಸಮತೆ ಎಂಬ ಕೂಪ ತೋಹಿನಲ್ಲಿ ಅದ್ದಿ ಅಟ್ಟಿ ಹಿಳಿದನಯ್ಯ. ಅವಗುಣವೆಂಬ ಪಂಚೇಂದ್ರಿಯ ವರ್ಗಂಗಳ ಜ್ಞಾನವೆಂಬ ನಿರ್ಮಳ ಜಲದಲ್ಲಿ ಅಲುಬಿ ಸೆಳೆದನಯ್ಯ. ರವಿ, ಶಶಿ, ಶಿಖಿಯ ತೇಜದಲ್ಲಿ ಆರಿಸಿದನು. ಚತುರ್ದಶ ಷೋಡಶವೆಂಬ ಗಳಿಗೆಯಂ ಮಾಡಿದನು. ಸಮಾಧಾನವೆಂಬ ಅಡೆಯು ಮೇಲಿರಿಸಿ ಸಮಗುಣವೆಂಬ ಕೊಡತಿಯಲ್ಲಿ ಹೊತ್ತು ಸಿದನು. ಹರಿಯಿತ್ತಯ್ಯ ಸೆರಗು ಮೂರಾಗಿ. ಆ ಮೂರರುವೆಯ ಕೊಟ್ಟಿನಯ್ಯ ಎನ್ನ ಕೈಯಲ್ಲಿ. ಆ ಅರುವೆಯ ಗುರುವಿಗೊಂದ ಕೊಟ್ಟಿನು. ಲಿಂಗಕ್ಕೊಂದ ಕೊಟ್ಟಿನು. ಜಂಗಮಕ್ಕೊಂದ ಕೊಟ್ಟಿನು. ಎನಗೆ ಕೊಟ್ಟ ಮೂರರುವೆಯನು ಒಂದು ಮಾಡಿ ಹೊದೆದುಕೊಂಡು ನಿಶ್ಚಿಂತವಾಗಿ ಮಡಿವಾಳನ ಕೃಪೆಯಿಂದಲಾನು ಬದುಕಿದೆನಯ್ಯ ಕೂಡಲಸಂಗಮದೇವಾ. ॥೩೯॥

ಮತ್ತಂ, ಮಡಿವಾಳ, ಮಡಿವಾಳನೆಂಬರು. ಮಡಿವಾಳನೆಂಬುವ ನಾರು ಅರಿಯರು. ಎನ್ನ ಮಲತ್ರಯದಲ್ಲಿ ಹೊದಕುಳಿಗೊಂಬ ಮನದ ಪೈಲಿಗೆಯ ತಂದು ನಾನು ತನ್ನ ಮನೆಗೆ ಕೊಂಡು ಹೋಗಿ ಹಾಯಿಕೆ

ಯ ಕೈಮುಟ್ಟದೆ ಅಗಡಿಂದ ತನ್ನ ಸಾದಪೊಗೆ ಮಿಟ್ಟಿ ಅಲುಬಿ ಸಿದಯ್ಯ. ತನ್ನ ನಿರ್ಮಲವ ಕೊಟ್ಟನೆನಗೆ. ಆ ಕೊಟ್ಟ ಬೀಳುಡಿಗೆಯ ಮಡಿದು ಕೊಂಡೆನಾಗಿ, ಆ ಮಡಿವಾಳ ಮಾಚಿ ತಂದೆಯ ಕೃಪೆಯಿಂದ ನಾನು ಬದುಕಿದೆನಯ್ಯ ಕೂಡಲಸಂಗಮದೇವಾ. ॥೪೦॥

ಹೀಗೆಂದು ಬಸವರಾಜದೇವರು ಮಡಿವಾಳ ಮಾಚಿ ತಂದೆಗಳ ಕೊಂಡಾಡಲು, ಆ ಮಡಿವಾಳ ತಂದೆಗಳು ಮರಳಿ ಆ ಬಸವರಾಜದೇವರ ಕೊಂಡಾಡುವ ಪ್ರಸ್ಥಾವದ ವಚನ. ॥

ಬಿಂದುವ ಹರಿದು, ನಾದವನತಿಗಳೆದು, ಕಳೆಯ ಬೆಳಗ ಸಾಧಿಸಿ, ಅಸಾಧ್ಯ ಸಾಧಕನಾದೆಯಲ್ಲ ಬಸವಣ್ಣ. ಕಾಯವ ಹೊದ್ದಿದ ಮಾಯೆಯ ಸೂಂಕದೆ ನಿರಾಳನಾಗಿ ನಿಂದೆಯಲ್ಲಿ ಬಸವಣ್ಣ. ನಿನ್ನ ನಾನವಗ್ರಹಿಸಿ ನಿನ್ನ ನೀನವಗ್ರಹಿಸಿ ಸಂದುಭೇದವಿಲ್ಲದಿರ್ಪಲ್ಲಿ ಹೊಗಳಲೆಂಬುಂಟೆ ಬಸವಣ್ಣ? ಕಲಿದೇವರ ದೇವನು ಕಾಯಗೊಂಡಿಪ್ಪುದ ನಿನ್ನಿಂದಲಾನು ಕಂಡೆ ನೋಡಾ ಸಂಗನಬಸವಣ್ಣಾ. ॥೪೧॥

ಹೀಗೆಂದು ಮಡಿವಾಳ ತಂದೆಗಳು ಬಸವರಾಜದೇವರ ಕೊಂಡಾಡುತಿರಲು, ಅದಕ್ಕೆ ಪ್ರಭುದೇವರು ಬಸವಣ್ಣನ ಕೃಪೆಯಿಂದ ನಿಮ್ಮ ಘನ ವನರಿದಿಹೆನೆಂದು ಮಡಿವಾಳ ತಂದೆಗಳ ಕೊಂಡಾಡುವ ಪ್ರಸ್ಥಾವದ ವಚನ. ॥

ಆದಿಯ ಕಂಡೆ. ಅನಾದಿಯ ಕಂಡೆ. ಘನವ ಕಂಡೆ. ಮನವ ಕಂಡೆ. ಅನುವ ಕಂಡೆ. ಆಯತ ಸ್ವಾಯತ ಸನ್ನಿಹಿತವ ಕಂಡೆ. ಗುಹೇಶ್ವರಲಿಂಗದಲ್ಲಿ ಬಸವಣ್ಣನ ಕೃಪೆಯಿಂದ ನಿನ್ನ ಕಂಡೆ ಕಾಣಾ ಮಡಿವಾಳಮಾಚಯ್ಯಾ. ॥೪೨॥

ಹೀಗೆಂದು ಪ್ರಭುದೇವರು ಮಡಿವಾಳತಂದೆಗಳ ಸ್ತೋತ್ರಮಂ ಮಾಡಲು, ಆ ಮಡಿವಾಳ ತಂದೆಗಳು ಬಸವಣ್ಣನ ಕೃಪೆಯಿಂದ ನಿನ್ನ ಕಂಡು ಬದುಕಿದೆನೆಂದು ಆ ಪ್ರಭುದೇವರ ಸ್ತೋತ್ರಮಂ ಮಾಡಿದ ಪ್ರಸ್ಥಾವದ ವಚನ. ॥

ಎಲೆ ಕಲಿದೇವರದೇವಯ್ಯ, ಆದಿಯ ಕುಳವು ಅನಾದಿಯ ಕುಳವು ನಿಮ್ಮ ಜಂಗಮ ಮೂರ್ತಿಯಲ್ಲಿ ನಿಂದಿತ್ತು. ಮೂಲರುದ್ರನ ಮೂಕ್ತಾಯ ನಿಮ್ಮ ಜಂಗಮ ಮೂರ್ತಿಯಲ್ಲಿ ನಿಂದಿತ್ತು. ಉಭಯ ಕುಳ ಕಿರಣ ಶಕ್ತಿ ನಿಮ್ಮ ಜಂಗಮ ಮೂರ್ತಿಯಲ್ಲಿ ನಿಂದಿತ್ತು. ಘನ ನಿರ್ಘನ ನಿಮ್ಮ ಜಂಗಮ ಮೂರ್ತಿಯಲ್ಲಿ ನಿಂದಿತ್ತು. ಆದಿ ಅನಾದಿಯು ನಿಮ್ಮ ಜಂಗಮ

ಮೂರ್ತಿಯಲ್ಲಿಯೆ ನಿಂದಿತ್ತು. ಸಾಧ್ಯ ಅಸಾಧ್ಯವು ನಿಮ್ಮ ಜಂಗಮ ಮೂರ್ತಿಯಲ್ಲಿ ನಿಂದಿತ್ತು. ಅರ್ಥ ಪ್ರಾಣಾಭಿಮಾನ ನಿಮ್ಮ ಜಂಗಮ ಮೂರ್ತಿಯಲ್ಲಿ ನಿಂದಿತ್ತು. ಆಂಗ ಲಿಂಗ ಸಂಗ ನಿಮ್ಮ ಜಂಗಮ ಮೂರ್ತಿಯಲ್ಲಿ ನಿಂದಿತ್ತು. ಅಷ್ಟವರ್ಣ ಕಮಲದ ಪತ್ರಕರ್ನಿಕೆಯರು ನಿಮ್ಮ ಜಂಗಮಮೂರ್ತಿಯಲ್ಲಿ ನಿಂದವು. ಎನ್ನ ನಡೆಗೆಟ್ಟಿತ್ತು ನಿಮ್ಮ ಜಂಗಮ ಮೂರ್ತಿಯಿಂದ. ಎನ್ನ ನುಡಿಗೆಟ್ಟಿತ್ತು ನಿಮ್ಮ ಜಂಗಮ ಮೂರ್ತಿಯಿಂದ. ಎನ್ನ ನೋಟ ಕೆಟ್ಟಿತ್ತು ನಿಮ್ಮ ಜಂಗಮಮೂರ್ತಿಯಿಂದ. ಎನ್ನ ನಾಟ ಸಮಾಪ್ತಿಯಾಯಿತ್ತು ನಿಮ್ಮ ಜಂಗಮ ಮೂರ್ತಿಯಿಂದ. ನಿಮ್ಮ ಪ್ರಸಾದದಿಂದ ತನುವಾಯಿತ್ತು ಬಸವಣ್ಣ ತೋರಿದ ಕಾರಣ. ನಿಮ್ಮ ಜಂಗಮಮೂರ್ತಿಯ ಕಂಡು ಬದುಕಿದೆನು ಕಾಣಾ ಕಲಿದೇವರದೇವಾ. ॥೪೩॥

ಹೀಗೆಂದು ಮಡಿವಾಳ ತಂದೆಗಳು ಬಸವರಾಜದೇವರ ಮುಖದಿಂದ ನಿಮ್ಮ ಮಹಾತ್ಮೆಯನರಿದು ಕೃತಾರ್ಥನಾದೆನೆಂದು ಪ್ರಭುದೇವರೊಡನೆ ಬಿನ್ನೈಸುತ್ತಿರಲು, ಇದಕ್ಕೆ ಬಸವರಾಜದೇವರು ಪ್ರಭುದೇವರೊಡನೆ ನಾನು ಮಡಿವಾಳ ತಂದೆಯ ಸಮರಸ ಭಾವದೊಳಿರ್ದೆನೆಂದು ಬಿನ್ನೈಸುವ ಪ್ರಸ್ತಾವದ ವಚನ. ॥

ಕಲ್ಪಿತವ ಕಳೆದ. ಅಕಲ್ಪಿತವ ತಿಳುಹಿದ. ಮನವ ಮಾಣಿಸಿ, ಘನವ ನೆಲೆಗೊಳಿಸಿದ. ತನುವ ಕೆಡಿಸಿ ಮನಸ್ಥಾಪ್ಯವ ಮಾಡಿದ. ಅಂತರಂಗದಲ್ಲಿ ಮಹಾಜ್ಞಾನವ ತುಂಬಿದ. ಬಹಿರಂಗದಲ್ಲಿ ಸದಾಚಾರವ ನೆಲೆಗೊಳಿಸಿದ. ನಿಮ್ಮ ಸಿಲವನೆನಗೆ ಒರೆದೊರೆದು ಹೇಳಿ ತೋರಿಸಿ, ಎನ್ನ ನಿಮ್ಮ ಶ್ರೀಪಾದಕ್ಕೆ ಯೋಗ್ಯನ ಮಾಡಿದ ಕೂಡಲಸಂಗಮದೇವಯ್ಯ ನಿಮ್ಮ ಮಹಾಮನೆಯಲ್ಲಿ ಮಡಿವಾಳನು ನಾನು ಕೂಡಿ ಸುಖದಲ್ಲಿ ಇದ್ದೆವಯ್ಯ. ॥೪೪॥

ಹೀಗೆಂದು ಬಸವರಾಜದೇವರು ಪ್ರಭುದೇವರೊಡನೆ ಮಡಿವಾಳ ತಂದೆಗಳ ತಮ್ಮ ಸಮರಸ ಸ್ವಾನುಭಾವವುಂ ಬಿನ್ನೈಸಲು, ಮಡಿವಾಳ ತಂದೆಗಳು ತಮ್ಮ ಬಸವರಾಜದೇವರ ಸಮರಸಭಾವವುಂ ಬಿನ್ನೈಸುತ್ತಿರ್ಪ ಪ್ರಸ್ತಾವದ ವಚನ. ॥

ಹೋಗಬಾರದು ಕಲ್ಯಾಣವನಾರಾದಡಿಯು. ಹೊಕ್ಕಡೇನು, ಕಲ್ಯಾಣದ ಸ್ಥಾನಮಾನಂಗಳನರಿಯಬಾರದು. ಕಲ್ಯಾಣದ ಕಡೆಯ ಕಾಣಬಾರದು. ಕಲ್ಯಾಣದೊಳಗೆ ಹೊಕ್ಕಿಹೆನೆಂದು ಕಲ್ಯಾಣ ಚಾರಿತ್ರನಾದೆನೆಂದು ದೇವದಾನವ ಮಾನವರೆಲ್ಲರು ಭಾವಿಸುತ್ತಿರ್ಪರು ನೋಡಾ! ಕಲ್ಯಾಣ

ಅನಂತ ಮೂರ್ತಿಗಳು ಅನಂತ ಸ್ಥೂಲಮೂರ್ತಿಗಳು ಅನಂತ ಸೂಕ್ಷ್ಮಮೂರ್ತಿಗಳು, ಅನಂತ ಮಂತ್ರ ಧ್ಯಾನಮೂರ್ತಿಗಳು ಮಾಡುವರು. ಪೂಜಕರು, ಯೋಗಿಗಳು, ಭೋಗಿಗಳು, ವ್ಯೋಮಾತೀತರು, ಕಾಮಿಗಳು, ನಿಃಕಾಮಿಗಳು, ಆಶ್ರಿತರು, ಅವೆಂತು ಕಲ್ಯಾಣವ ಹೊಗಬಹುದಯ್ಯ? ಆವೆಂತು ಕಲ್ಯಾಣವ ಕಾಣಬಹುದಯ್ಯ! ಕಲ್ಯಾಣವನು ಲಿಂಗವೈಷ್ಣವಂಗಳ್ಳದೆ, ಲಿಂಗವೈಷ್ಣವಂಗಳ್ಳದೆ ಲಿಂಗಗಂಭೀರಂಗಳ್ಳದೆ, ಪ್ರಸಾದಕುಳಾನ್ವಯಂಗಳ್ಳದೆ, ಆಸೆಗೆಡೆಗುಡದಿಪ್ಪುದೆ ಕಲ್ಯಾಣ? ಸರ್ವಾಂಗನನಕವು, ಕುಲವುಮ ತಲೆದೊರವೆ, ಭಕ್ತಿ ನಿತ್ಯವಾದುದೇ ಕಲ್ಯಾಣ. ಈ ಕಲ್ಯಾಣವೆಂಬ ಮಹಾಘನದೊಳಗೆ ಬಸವಣ್ಣನು ನಾನು ಹದುಳದೊಳಿರ್ದೆವು ಕಾಣಾ ಕಲಿದೇವರದೇವಾ. ॥೪೫॥

ಹೀಗೆಂದು ಮಡಿವಾಳ ತಂದೆಗಳು ಬಿನ್ನೈಸಲು, ಇದಕ್ಕೆ ಪ್ರಭುದೇವರು ಬಸವರಾಜದೇವರೊಡನೆ ಹೇಳಿ ಮಡಿವಾಳತಂದೆಗಳ ಸ್ತೋತ್ರಮಂ ಮಾಡುವ ಪ್ರಸ್ತಾವದ ವಚನ. ॥

ಒಂದ ಮಾಡಹೋದರೆ ಮತ್ತೊಂದಾಯಿತ್ತೆಂಬುದು ಎನಗಾಯಿತ್ತು ನೋಡಾ! ಮಡಿವಾಳನ ಪರಿಯನೊರೆದು ನೋಡಿದರೆ ನಿನ್ನ ಪೂರ್ವಾಪರವ ಎಸಗರಿಯ ಬಂದಿತ್ತು ನೋಡಾ! ನಿನ್ನ ಪೂರ್ವಾಪರ ಸಂಗನ ಮಾಡ ಬಂದರೆ ಎನ್ನ ಪೂರ್ವಾಪರವೆನಗರಿಯ ಬಂದಿತ್ತು ನೋಡಾ. ಮಹಾ ಪ್ರಸಿಗಳ ಸಂಗದಿಂದೆ ಉಭಯಸಂಗ ಸಿದ್ಧಿ ಎಂಬುದು ದಿಟವಾಯಿತ್ತು ನೋಡಾ ಬಸವಣ್ಣ. ಗುಹೇಶ್ವರನ ಶರಣ ಮಡಿವಾಳನ ಪಾದಕ್ಕೆ ನಮೋ ನಮೋ ಎನುತಿರ್ದೆನು. ॥೪೬॥

ಹೀಗೆಂದು ಪ್ರಭುದೇವರು ಬಸವರಾಜದೇವರೊಡನೆ ಮಡಿವಾಳತಂದೆಗಳ ಮಹಾತ್ಮೆಯನು ನಿನ್ನಿಂದ ಕಂಡೆನೆಂದು ಕೊಂಡಾಡಿ ಹೇಳುತ್ತಿರಲು, ಇದಕ್ಕೆ ಬಸವರಾಜದೇವರು ಮಡಿವಾಳ ತಂದೆಗಳ ಶ್ರೀಪಾದವ ಘನವನು ಬಸವಣ್ಣ ತೋರಿದನಾಗಿ ಆವು ಸುಖಿಯಾದೆನೆಂದು ಬಿನ್ನೈಸುವ ಪ್ರಸ್ತಾವದ ವಚನ. ॥

ಅಯ್ಯ ಎನ್ನ ಕಾಯದಲ್ಲಿ ಮಡಿವಾಳನ ತೋರಿದ. ಅಯ್ಯ ಎನ್ನ ಮನದಲ್ಲಿ ತನ್ನ ಸಿಲವ ತೋರಿದ. ಎನ್ನ ಅರಿವಿನಲ್ಲಿ ನಿಮ್ಮ ತೋರಿದ. ಇಂತೀ ಷಡ್ವಿಧ ಸ್ವಾಯತವನು ಎನ್ನ ಸರ್ವಾಂಗದಲ್ಲಿ ಪ್ರತಿಷ್ಠಿಸಿ ತೋರಿದ. ಕೂಡಲ

ಸಂಗಮದೇವಯ್ಯ ಚನ್ನಬಸವಣ್ಣನ ಕರುಣದಿಂದೆ ಮಡಿವಾಳನೆಂಬ ಪರುಷ ಸಾಧ್ಯವಾಯಿತ್ತಯ್ಯ ಎನಗೆ. ॥೪೭॥

ಹೀಗೆಂದು ಬಸವರಾಜದೇವರು ನಿರೂಪಿಸಲು, ಇದಕ್ಕೆ ಚಿಕ್ಕವಣ್ಣಾಯಕರು ಆ ಬಸವರಾಜದೇವರಿಗೆ ಕೊಟ್ಟ ಪ್ರತ್ಯುತ್ತರ. ॥

ನಾನೊಂದ ತೋರಲರಿಯೆನು. ನಾನೊಂದ ಹೇಳಲರಿಯೆನು. ನಾನೊಂದ ಸ್ಥಲವಿಡಲರಿಯೆನು. ನಾನೊಂದ ಕುಳವಿಡಲರಿಯೆನು. ಕೂಡಲ ಸಂಗಮದೇವರಲ್ಲಿ ಮಡಿವಾಳನ ನಿಲವ ನಾನೆತ್ತ ಬಲ್ಲೆನು ಹೇಳಾ ಸಂಗನ ಬಸವಣ್ಣಾ? ॥೪೮॥

ಹೀಗೆಂದು ಚಿಕ್ಕವಣ್ಣಾಯಕರು ಮಡಿವಾಳ ತಂದೆಗಳ ಮಹಾತ್ಮೆಯಂ ಕೊಂಡಾಡುತ್ತಿರಲು, ಇದಕ್ಕೆ ಮಡಿವಾಳ ತಂದೆಗಳು ಬಸವರಾಜದೇವರ ಸ್ತೋತ್ರಮಂ ಮಾಡುವ ಪ್ರಸ್ಥಾವದ ವಚನ.

ಅಹುದಹುದು. ಇಂತಿರಬೇಡವೆ ನಿರಹಂಕಾರ? ಮಹಾಜ್ಞಾನಕ್ಕೆ ನಿರಹಂಕಾರವೇ ಶೃಂಗಾರ. ನಿರಹಂಕಾರಕ್ಕೆ ಭಕ್ತಿಯೆ ಶೃಂಗಾರ. ಆ ಭಕ್ತಿಗೆ ಬಸವಣ್ಣನೆ ಶೃಂಗಾರ. ಆ ಬಸವಣ್ಣಂಗೆ ಚನ್ನಬಸವಣ್ಣನೆ ಶೃಂಗಾರ. ಕಲಿದೇವರದೇವ ಎನಗೆಯು ನಿನಗೆಯು ಚನ್ನಬಸವಣ್ಣನೆ ಶೃಂಗಾರ. ॥೪೯॥

ಹೀಗೆಂದು ಮಡಿವಾಳ ತಂದೆಗಳು ಚಿಕ್ಕದಣ್ಣಾಯಕರ ಮಹಾತ್ಮೆಯ ಪೊಗಳಲು, ಆ ಚಿಕ್ಕವಣ್ಣಾಯಕರು ಮಡಿವಾಳ ತಂದೆಗಳ ಸ್ತೋತ್ರಮಂ ಮಾಡುವ ಪ್ರಸ್ಥಾವದ ವಚನ. ॥

ಅಘಟಿತ ಘಟಿತವೆಂಬ ಮಹಾಘನವ ಸಾಧಿಸುವರೆ ಮಡಿವಾಳನ ಕೃಪೆಯಾಗದನಕ್ಕ ಎಂತರಿಯ ಬಹುದು ನಿಜಲಿಂಗೈಕ್ಯವನು? ಎನ್ನ ಆರೂಢಿಯ ಅರುಹಿಂಗೆ ನೀನೆ ಶೃಂಗಾರ. ಕೂಡಲ ಚನ್ನಸಂಗಮದೇವರಲ್ಲಿ ಮಡಿವಾಳನ ಕೆಯ್ಯ ಸ್ವಾಯತವಾದೆನು ಕಾಣಾ ಪ್ರಭುವೆ. ॥೫೦॥

ಹೀಗೆಂದು ಚಿಕ್ಕದಣ್ಣಾಯಕರು ನಿರೂಪಿಸಲು, ಇದಕ್ಕೆ ಮಡಿವಾಳ ತಂದೆಗಳು ಚಿಕ್ಕದಣ್ಣಾಯಕರ ಕೃಪೆಯ ಎನಗೆ ಸಾಧ್ಯವ ಮಾಡಿಕೊಡಿ ಎಂದು ಪ್ರಭುದೇವರನುಪಾವಸ್ಥೆಯಂ ಮಾಡುವ ಪ್ರಸ್ಥಾವದ ವಚನ. ॥

ಒಂದು ಕೈಯ್ಯ ಬಯಲನೆನಗೆ ಕೊಟ್ಟನು. ಒಂದು ಕೈಯ್ಯ ಬಯಲನೆನಗೆ ಚನ್ನಬಸವಣ್ಣಂಗೆ ಕೊಟ್ಟನು. ನೀವು ಬಂದಿಹರೆಂದು

ಮಡಿವಾಳನ ಪರುಷ ಒಗೆದೊಗೆದು ಬೀದು ಮಾಡುತ್ತಿದ್ದೆನು. ಒಂದು ದಿನ ಬಸವಣ್ಣ ನಿನ್ನ ಲಿಂಗಕ್ಕೆ ಕೊಡೆಂದು ಕೊಟ್ಟರ ಲಿಂಗಕ್ಕೆ ಕೊಡ ಬಿಲ್ಲದೆ ತಲೆಗೆ ಸುತ್ತಿಕೊಂಡನು. ಮಡಿಯ ಕೂಲಿಯ ಬೇಡಹೋದರೆ ಬಂದ ಪರಿಯ, ಎನ್ನ ಮೇಲೆ ಬಿಸಾಟನು. ನೀನಟ್ಟ ಬಿಡೊಡಿಸಿ ಚನ್ನಬಸವಣ್ಣನ ಕೈಯ್ಯಲ್ಲಿ ನಿರಾಳವನಿಸಿಗೆ ಕೊಡಿಸಾ ಪ್ರಭುವೇ ಕಲಿದೇವರದೇವಾ. ॥೫೧॥

ಹೀಗೆಂದು ಮಡಿವಾಳ ತಂದೆಗಳು ನಿರೂಪಿಸಲು, ಇದಕ್ಕೆ ಚಿಕ್ಕವಣ್ಣಾಯಕರು, ಮಡಿವಾಳ ತಂದೆಗಳೊಡನೆ ನುಡಿದ ಪ್ರತ್ಯುತ್ತರ. ॥

ನರಸುರಾದಿಗಳೆಲ್ಲರು ನಿಮ್ಮ ಪೊಳೆಯಲ್ಲಿದ್ದರು. ಮನುಮುನಿ ಯತಿ ಪ್ರತಿಗಳೆಲ್ಲರು ನಿಮ್ಮ ತೋಹಿನೊಳಗಿದ್ದರು. ಗಂಗೆ ವಾಳುಕರೆಲ್ಲರು ನಿಮ್ಮ ಮಡಿಯೊಳಡಗಿದರು. ಗಂಗೆ ಗೌರಿವಲ್ಲಭರೆಲ್ಲರು ಚತುರ್ಮುಖ ಪಂಚಮುಖ ಷಣ್ಮುಖ ದಶಮುಖರೆಲ್ಲರು ನಿಮ್ಮ ಮಡಿಯ ಗಳಿಗೆಯೊಳಡಗಿದರು. ಲೋಕಾಲೋಕವೆಲ್ಲವು ನಿಮ್ಮ ಕುಕ್ಷಿಯೊಳಗು. ಕೂಡಲ ಚನ್ನಸಂಗಮದೇವರು ಸಾಕ್ಷಿಯಾಗಿ ನಿಮ್ಮ ನಿರಾಳ ಪ್ರಸಾದದಿಂದ ನಿರವಯಲ ಹಾದಿಯ ಕಂಡೆನಲ್ಲದೆ, ನಿಮ್ಮಿಂದಲಾನು ಘನವೆ ಮಡಿವಾಳ ಮಾಚಯ್ಯ? ॥೫೨॥

ಹೀಗೆಂದು ಚನ್ನಬಸವರಾಜದೇವರು ನಿರೂಪಿಸಲು, ಇದಕ್ಕೆ ಮಡಿವಾಳ ತಂದೆಗಳು ಆ ಬಸವರಾಜದೇವರನು ಚನ್ನಬಸವರಾಜದೇವರನು ಪ್ರಭುದೇವರನು ಸ್ತೋತ್ರಮಂ ಮಾಡಿದ ಪ್ರಸ್ಥಾವದ ವಚನ. ॥

ಎನ್ನಂಗದಾಚಾರವಲ್ಲಿ ಸಂಗನಬಸವಣ್ಣನ ಕಂಡೆನು. ಎನ್ನ ಮನದ ಜಾಣಿನಲ್ಲಿ ಚನ್ನಬಸವಣ್ಣನ ಕಂಡೆನು. ಎನ್ನ ಭಾವನ ಕೊನೆಯ ಮೊನೆಯ ಮೇಲೆ ಅಲ್ಲಮಪ್ರಭುದೇವರ ಕಂಡೆನು. ಎಲೆ ಕಲಿದೇವರದೇವಯ್ಯ ನಿಮ್ಮ ಕರುಣದ ಘನವನು ಎನ್ನ ಸರ್ವಾಂಗದಲ್ಲಿ ಕಂಡು ನಮೋ ನಮೋ ಎನುತಿರ್ದೆನು. ॥೫೩॥

ಇಂತೀ ಶ್ರೀಮತ್ಸಕಲಗಣ ಪುರಾತನರೊಳ್ ಪ್ರಭುದೇವರು ಮಹಾ ಸುಭಾವಸದ್ಭೋಷ್ಠಿಯಂ ಮಾಡಿದ ಶೂನ್ಯಸಂಪಾದನೆಯೊಳ್ ಪ್ರಭುದೇವರ ಮಡಿವಾಳಯ್ಯಗಳ ಸಂವಾದನಗಂ ನವಮೋಪವೀತ ಸಮಾಪ್ತ.

ಮಂಗಳಮಹಾ ಶ್ರೀ ಶ್ರೀ ಶ್ರೀ ಶ್ರೀ ಶ್ರೀ

ಸಿದ್ಧರಾಮಯ್ಯನ ಗುರುಕರುಣ.

(ದಶಮೋಪದೇಶ.)

ಕಂದ॥ ಶಿವಯೋಗಿ ಸಿದ್ಧರಾಮಗೆ। ಅವಿರಳ ಶಿವಲಿಂಗದೀಕ್ಷೆಯಂ ಸಂತಸದಿಂ॥ ಬಿನಯರಿಯೆ ಚನ್ನಬಸವಂ। ತವೆ ಇತ್ತುದ ಪೇಳ್ದೆ ಶರಣ ಜನ ಮುನಿವೆಯಿದಲ್॥

ಅವೆಂತೆಂದೊಡೆ, ಪ್ರಭುದೇವರು ಬಸವರಾಜದೇವರು ಚನ್ನಬಸವ ರಾಜದೇವರು ಮಡಿವಾಳ ಮಾಚಿ ತಂದೆಗಳು ಮುಖ್ಯವಾದ ಅಸಂಖ್ಯಾತ ಮಹಾ ಪುರಾತನರು ಮಹಾನುಭಾವ ಸದ್ಗೋಷ್ಠಿಯಂ ಮಾಡುತ್ತಿರ್ಪ ಪ್ರಸ್ಥಾವದೊಳು ಪರಶಿವ ಯೋಗೀಶ್ವರನಪ್ಪ ಸಿದ್ಧರಾಮಯ್ಯದೇವರು ಪ್ರಭು ದೇವರ ಕೂಡೆ ನಿಮ್ಮ ಕರಸ್ಥಲದ ಲಿಂಗದ ನಿಜವ ಬಸವರಾಜದೇವರಿಂದೆ ಹೇಳಿಸಿಹೆನೆಂದು ಕರೆದುಕೊಂಡು ಬಂದಿರಿ. ಆ ಲಿಂಗದ ನಿಜಮುಂ ನಿರೂ ಪಿಸೆಂದು ಬಿನ್ನೈಸುವ ಪ್ರಸ್ಥಾವದ ವಚನ.॥

ಅಯ್ಯ ಕಾಯ ಲಿಂಗವೋ? ಕಾಯದಲ್ಲಿ ಸಾರಿಪ್ಪ ಲಿಂಗ ಲಿಂಗವೋ ಪ್ರಾಣ ಲಿಂಗವೊ? ಪ್ರಾಣದಲ್ಲಿ ಸಾರಿಪ್ಪ ಲಿಂಗ ಲಿಂಗವೋ? ಜ್ಞಾನ ಲಿಂಗವೋ? ಜ್ಞಾನದ ಮೊನೆಯಲ್ಲಿ ಬೆಳಗುವ ಲಿಂಗ ಲಿಂಗವೊ? ಲಿಂಗಪ್ರಾಣ ಪ್ರಾಣ ಲಿಂಗವೆಂತೆಂದರಿಯೆನು. ನಿಮ್ಮ ಕಾಯದ ಕರಸ್ಥಲದ ಸಾರಿದ ಲಿಂಗ ಪ್ರಾಣದೊಳಗೆ ವೇದ್ಯವಾಪ ಪರಿಯನುಪದೇಶಿಸಿ ಕೃಪೆಯ ಮಾಡಾ ಪ್ರಭುವೆ ಕಪಿಲಸಿದ್ಧ ಮಲ್ಲಿಕಾರ್ಜುನ. ॥೧॥

ಹೀಗೆಂದು ಸಿದ್ಧರಾಮಯ್ಯ ದೇವರು ಪ್ರಭುದೇವರ ಬೆಸಗೊಳಲು, ಆ ಪ್ರಭುದೇವರು ಸಿದ್ಧರಾಮಯ್ಯ ದೇವಂಗೆ ಹೇಳೆಂದು ಬಸವರಾಜದೇ ವಂಗೆ ಬೆಸಗೊಂಬ ಪ್ರಸ್ಥಾವದ ವಚನ.॥

ಒಂದೂ ಇಲ್ಲದ ಬಿಂದುವ ತಂದಿ. ಇಲ್ಲದ ಕಂದನ ಮಾತೆ ಇಲ್ಲದ ಜಾತನ. ಗಮನವಿಲ್ಲದ ಗಮ್ಯನ, ಮೂಪರರಿಯದ ಮುಗ್ಧನ ತಾಪ ತೋರಿಸಾ ಗುಹೇಶ್ವರಲಿಂಗದಲ್ಲಿ ಸಂಗನಬಸವಣ್ಣಾ. ॥೨॥

ಇಂತು ಪ್ರಭುದೇವರು ಮಹಾ ಘನವಪ್ಪ ಇಷ್ಟಲಿಂಗದ ನಿಲವ ಸಿದ್ಧರಾಮಯ್ಯದೇವರ ಕುರಿತು ಬಸವರಾಜದೇವರ ಬೆಸಗೊಳಲು, ಬ

ಸವರಾಜದೇವರು ಸಿದ್ಧರಾಮಯ್ಯದೇವರ ಅಂಗದ ಮೇಲೆ ಲಿಂಗವಿಲ್ಲ ವೆಂದನಿದು, ಪ್ರಭುದೇವರಿಗೆ ನಮಸ್ಕಾರಮಂ ಮಾಡುವ ಮುಖದಲ್ಲಿ ನಿರೂಪಿಸಿದ ಪ್ರಸ್ಥಾವದ ವಚನ.॥

ಎನ್ನ ಕಾಯದ ಕರಸ್ಥಲದಲ್ಲಿ ಅಲ್ಲಮಪ್ರಭುದೇವರ ಕಂಡೆನು. ಎನ್ನ ಮನದ ಕರಸ್ಥಲದಲ್ಲಿ ಚನ್ನಬಸವಣ್ಣನ ಕಂಡೆನು. ಎನ್ನ ಅರಿವಿನ ಕರ ಸ್ಥಲದಲ್ಲಿ ಮಡಿವಾಳಯ್ಯನ ಕಂಡೆನು ಒಳಗು ಹೊರಗು ಒಳಗೆಂಬ ಭೇದವನರಿಯದೆ ಇದ್ದೆನು. ಕೂಡಲಸಂಗಮದೇವಯ್ಯ ನಿಮ್ಮ ಶರಣರು ಸಾವಸವ ಮಾಡಿದ ಪರಿಣಾಮವ ಅಂತಿಂತೆನಲಮ್ಮದೆ ನಮೋ ನಮೋ ಎನುತಿದ್ದೆನು. ॥೩॥

ಹೀಗೆಂದು ಬಸವರಾಜದೇವರು ಸಿದ್ಧರಾಮಯ್ಯದೇವರಿಗೆ ಅಂಗ ಲಿಂಗ ಸಂಬಂಧವಿಲ್ಲದಿದ್ದರೆ ಎನ್ನ ಮನ ಒಪ್ಪದೆಂದು ಬಿನ್ನೈಸಿದ ಪ್ರಸ್ಥಾ ವದ ವಚನ.॥

ಸಮಯ ವಿರುದ್ಧ ಕಂಜಿ ವಿನಯವನುಡಿವೆ. ಕೊಂದರೆ ಕೊಲ್ಲು, ಕಾಯ್ದರೆ ಕಾಯಿ. ಎನ್ನವರೆಂದು ಮನ ಹಿಡಿಯದು ಕೂಡಲಸಂಗಮದೇವಾ. ॥೪॥

ಹೀಗೆಂದು ಬಸವರಾಜದೇವರು ಪ್ರಭುದೇವರೊಡನೆ ಬಿನ್ನೈಸಲು, ಸಿದ್ಧರಾಮಯ್ಯದೇವರು ಆ ಪ್ರಭುದೇವರ ಕೂಡೆ ಮಡಿವಾಳನೆಂಬ ಪರ ಬ್ರಹ್ಮವ ಎನ್ನಂತರಂಗದಲ್ಲಿ ಕಂಡು, ಮನ ಮುಗ್ನವಾಗಿಪ್ಪೆನೆಂದು ಬಿನ್ನೈಸಿ ದ ಪ್ರಸ್ಥಾವದ ವಚನ.॥

ಬೆಳಗು ಬೆಳಗು ಹಳಚುವಲ್ಲಿ ಕತ್ತಲೆ ಉಳಿಯಬಲ್ಲುದೆ ಅಯ್ಯ? ಶರಣರು ಶರಣರು ಮಹಾನುಭಾವ ಗೋಷ್ಠಿಯ ಮಾಡುವಲ್ಲಿ ಸಂಗನಬಸವಣ್ಣನ ಅಜ್ಞಾನವಳಿದು, ನಿಜವನ್ಹೈದುವರಯ್ಯ? ನಿಮ್ಮ ಮಹಾನುಭಾವದ ಸೋಂಕಿನ ಸೆರಗಿನೊಳಗಿರ್ದ ನಾನು ಪರಮ ಸುಖಿಯಾಗಿ ಮಡಿವಾಳನಾದದಲ್ಲಿ ಮನ ಮುಗ್ನನಾದೆನು ಕಾಣಾ ಪ್ರಭುವೇ ಕಪಿಲಸಿದ್ಧ ಮಲ್ಲಿಕಾ ರ್ಜುನ. ॥೫॥

ಇಂತೆಂದು ಸಿದ್ಧರಾಮಯ್ಯದೇವರು ನುಡಿಯಲು, ಚನ್ನಬಸವಣ್ಣ ನವರು ಅಂಗದ ಮೇಲೆ ಲಿಂಗಸಂಬಂಧವಿಲ್ಲದವಂಗೆ ಪ್ರಾಣಲಿಂಗಸಂಬಂ ಧವಿಲ್ಲವೆಂದು ನಿರೂಪಿಸಿದ ಪ್ರಸ್ಥಾವದ ವಚನ.॥

ಅಂಗದ ಮೇಲೆ ಲಿಂಗವಿಲ್ಲದನ್ನಕ್ಕರ ಪ್ರಾಣಲಿಂಗದಲ್ಲಿ ಪರಿಣಾಮವನೆಯ್ದುವ ಪರಿ ಎಂತಯ್ಯ? ಅಂಗತ್ರಯವುಳ್ಳವರು ಲಿಂಗತ್ರಯ ಸಂಪನ್ನರಾಗಬೇಕು. ಒಂದಂಗ ವಿರಹಿತರಾದವರುಂಟೆ? ಕಂಗಳ ಸೋಟಕ್ಕೆ ಇಂಬಾವುದು ಹೇಳಾ? ಒಂದಂಗವ ಬಿಟ್ಟು ಒಂದಂಗವ ತೋರಲಾಗದು ಎಂದು ಛೇದವಿಲ್ಲದಿಪ್ಪ ನಿಡಿವಾಳನ ನಿಲವು ಕೂಡಲ ಚನ್ನಸಂಗನಲ್ಲಿ ನಿನಗೆಂತು ಸಾಧ್ಯವಾಯಿತ್ತು ಹೇಳಾ ಸಿದ್ಧರಾಮಯ್ಯ? ॥೬॥

ಚನ್ನಬಸವ ಹೀಗೆಂದು ಚಿಕ್ಕವಣ್ಣಾಯಕರು ನಿರೂಪಿಸಲು, ಇದಕ್ಕೆ ಸಿದ್ಧರಾಮಯ್ಯದೇವರು ಕೊಟ್ಟ ಪ್ರತ್ಯುತ್ತರ. ॥

ತನು ಉಂಟೆಂಬ ಭಾವ ಮನವಲ್ಲಿಲ್ಲವಯ್ಯ! ಮನ ಉಂಟೆಂಬ ಭಾವ ಅರಿವಿನಲ್ಲಿಲ್ಲವಯ್ಯ. ಅರಿವು ಉಂಟೆಂಬ ಭಾವ ನುಡಿಯೊಳಗಿಲ್ಲವಯ್ಯ. ಇಂತೀ ತನು ಮನ ಜ್ಞಾನವೆಂಬ ತ್ರಿವಿಧವು ಏಕಾರ್ಥವಾದ ಬಳಿಕ ಆವ ತನುವಿನ ಮೇಲೆ ಸ್ವಾಯತವ ಮಾಡುವೆ? ಎನ್ನ ಕಾಯವೆ ಬಸವಣ್ಣನು. ಎನ್ನ ಪ್ರಾಣಲಿಂಗವೆ ಪ್ರಭುದೇವರು. ಕಪಿಲಸಿದ್ಧಮಲ್ಲಿಕಾರ್ಜುನನಲ್ಲಿ ಒಳಗು ಹೊರಗೆಂಬುದಿಲ್ಲ ಕಾಣಾ ಚನ್ನಬಸವಣ್ಣಾ. ॥೭॥

ಹೀಗೆಂದು ಸಿದ್ಧರಾಮಯ್ಯ ದೇವರು ವಿಸ್ತೃಸಲು, ಇದಕ್ಕೆ ಚಿಕ್ಕದಣ್ಣಾಯಕರು ಕೊಟ್ಟ ಪ್ರತ್ಯುತ್ತರ. ॥

ಅಂಗವಿಲ್ಲೆಂಬಲ್ಲಿಯೆ, ಅಂಗ ಶಂಕೆ ಬಿಡದು. ಲಿಂಗ ಉಂಟೆಂಬಲ್ಲಿಯೆ, ಲಿಂಗ ಶಂಕೆ ಬಿಡದು. ಇಲ್ಲೆಂಬುದಕ್ಕೆ ಉಂಟೆಂಬುದೆ ಮರಹು. ಉಂಟೆಂಬುದಕ್ಕೆ ಇಲ್ಲೆಂಬುದೆ ಮರಹು. ಉಂಟಿಲ್ಲವೆಂಬುದಳಿದುಳಿದಲ್ಲದೆ ಪ್ರಾಣಲಿಂಗ ಸಂಬಂಧ ಸ್ವಾಯತವಾಗದು. ಕೂಡಲ ಚನ್ನಸಂಗಯ್ಯನಲ್ಲಿ ಪ್ರಾಣಲಿಂಗ ಸಂಬಂಧ ನಿನಗೆಲ್ಲಿಯದು ಹೇಳಾ ಸಿದ್ಧರಾಮಯ್ಯ? ॥೮॥

ಹೀಗೆಂದು ಚಿಕ್ಕದಣ್ಣಾಯಕರು ನಿರೂಪಿಸಲು, ಇವಕ್ಕೆ ಸಿದ್ಧರಾಮಯ್ಯದೇವರು ವಿಸ್ತೃಸಿದ ಪ್ರಸ್ತಾವದ ವಚನ. ॥

ತನುವಿದ್ದು ತನುವಿಲ್ಲ. ಮನವಿದ್ದು ಮನವಿಲ್ಲ. ಭಾವವಿದ್ದು ಭಾವವಿಲ್ಲವೆಂಬುದಿಲ್ಲ. ನೀನೆಂಬುದುಂಟಾಗಿ ಭೃತ್ಯಾಚಾರವಿಲ್ಲ. ನಾನೆಂಬುದುಂಟಾಗಿ ಅಹಂಕಾರವಿಲ್ಲ. ಕಪಿಲಸಿದ್ಧಮಲ್ಲಿನಾಥಯ್ಯನಲ್ಲಿ ಲಿಂಗಸಂಗ ನಿರ್ದೇಶವೆಂಬುವ ನಿದಿರಿಂಗೆ ನುಡಿದು ಹೇಳಬಾರದು ಕಾಣಾ ಚನ್ನಬಸವಣ್ಣ. ॥೯॥

ಹೀಗೆಂದು ಸಿದ್ಧರಾಮಯ್ಯ ದೇವರಿಗೆ ಚನ್ನಬಸವರಾಜದೇವರು ತಮ್ಮ ಸಂಪರ್ಕಗೋಷ್ಠಿಯೊಳು ಒಡೆದೊಡೆದು ನೋಡುವ ಪ್ರಸ್ತಾವದೊಳು ಪ್ರಭುದೇವರು ನಿರೂಪಿಸಿದ ಪ್ರಸ್ತಾವದ ವಚನ. ॥

ನಿಮ್ಮನಂದ ಶರಣಂಗೆ ಶಿವಪೂಜೆಯು ಮಾಡುವ ದಂದುಗವೇಕೊ? ಮುಸುಕಿಯ ಕೂಟಕ್ಕೆ ಹಾಸಿಕೆಯು ಹಂಗೇಕೊ? ಬೇಟದ ಮರುಳಿಂಗೆ ಮಾತೆ ಇನ್ನೇಕೊ? ಮಿಸುನಿಯ ಚಿನ್ನಕ್ಕೆ ಒರೆಗಲ್ಲಿನ ಹಂಗೇಕೊ? ಗುಹೇಶ್ವರಲಿಂಗವು ಪ್ರಾಣವಾಗಿಪ್ಪ ಸಿದ್ಧರಾಮಯ್ಯಂಗೆ ಕುರುಹು ಮುನ್ನೇಕೊ ಚನ್ನಬಸವಣ್ಣಾ?

ಮತ್ತಂ, ಆಕಾಶವನಡರುವಂಗೆ ಆಟ್ಟುಗೋಲ ಹಂಗೇಕೊ? ಸಮುದ್ರವ ದಾಂಟುವಂಗೆ ಹರುಗೋಲ ಹಂಗೇಕೊ? ಸೀಮೆಯ ಮೀರಿದ ನಿಸ್ಸೀಮಂಗೆ ಸೀಮೆಯ ಹಂಗೇಕೊ? ಗುಹೇಶ್ವರ ಲಿಂಗದಲ್ಲಿ ನಿಸ್ಸೀಮ ಸಿದ್ಧರಾಮಯ್ಯಂಗೆ ಲಿಂಗಸಂಬಂಧ ಹೇಳಾ ಚನ್ನಬಸವಣ್ಣಾ? ॥೧॥

ಹೀಗೆಂದು ಪ್ರಭುದೇವರು ನಿರೂಪಿಸಲು, ಇದಕ್ಕೆ ಚನ್ನಬಸವರಾಜದೇವರು ಆ ಉತ್ತರಮಂ ಖಂಡಿಸಿ ನುಡಿದ ಪ್ರಸ್ತಾವದ ವಚನ. ॥

ಆಕಾಶದಲಾಡುವ ಪಟಕ್ಕಾವುದು ಮೂಲಸೂತ್ರನಿರಬೇಕು ಕಲಿಯಾದಡು ಕಜ್ಜವಿಲ್ಲದಾಗದು. ಭೂಮಿ ಇಲ್ಲದೆ ಬಂಡಿ ನಡೆವುದುಂಟೇ? ಅಂಗಕ್ಕೆ ಲಿಂಗಸಂಗವಿಲ್ಲದೆ ನಿಸ್ಸಂಗವಾಗಬಾರದು. ಕೂಡಲ ಚನ್ನಸಂಗ ಮಹೇಶ್ವರಲ್ಲಿ ಸಂಗವಿಲ್ಲದೆ ನಿಸ್ಸಂಗಿ ಎಂದು ನುಡಿಯಬಹುದೆ ಪ್ರಭುವೆ? ॥೨॥

ಪಟವಾಕಾಶವನಡರಿತ್ತೆಂದಡೆ ಪಟದ ಸೂತ್ರದ ಸಂಚ ಕೆಳಗಿಪ್ಪುದು ನೋಡಾ! ವ್ಯೋಮದಲ್ಲಿ ಚರಿಸುವ ಸೋಮಸೂರ್ಯರೆಂದಡೆ ಹೇಮಗಿರಿಯ ಸಂಚ ತಪ್ಪದು ನೋಡಾ. ಭೂಮಿಯನೊಲ್ಲದೆ ಗಗನಕ್ಕೆ ಹಾರಿದವಂಗೆ ಆ ವ್ಯೋಮದಲ್ಲಿ ನಿಲುವುದಕ್ಕೆ ಒಂದಡೆಯುಂಟೆ? ಮಣ್ಣು ಮರನನುಳಿದು ತೋರುವ ಹಣ್ಣು ರುಚಿಯುಂಟೆ? ಸಮ್ಮ ಕೂಡಲ ಚನ್ನಸಂಗನ ಶರಣರೊಳಗಿರ್ದು ಸೀಮೆಯ ಮೀರಿದ ನಿಸ್ಸೀಮನು ಸಿದ್ಧರಾಮಯ್ಯನೆಂಬ ಮಾತು ಅಂತಿರಲಯ್ಯ ಪ್ರಭುವೇ. ॥೩॥

ಇದಕ್ಕೆ ಪ್ರಭುದೇವರ ಪ್ರತ್ಯುತ್ತರ. ॥

ಕಾಯವೇ ಸಕಲ, ಪ್ರಾಣವೇ ಸಕಲ ನಿಃಕಲ, ಭಾವವೆ ನಿಃಕಲ ಲಿಂಗವಾಗಿರ್ದು, ಮತ್ತೆ ಬೇರೆ ಆಯುತ ಸ್ವಾಯುತ ಸನ್ನಿಹಿತವೆಂಬುದಿಲ್ಲ

ನೋಡಾ. ಶಿವಶಕ್ತಿಸಂಬಂಧವೆ ದೇಹದೇಹಿಗಳಾಗಿರ್ದ ಬಳಿಕ ಗುಹೇಶ್ವರ ಲಿಂಗವಲ್ಲಿ ಬೇರೊಂದು ಕುರುಹುವಿಡಿದು ಅರಿಯಲೇಕಯ್ಯ ಚನ್ನಬಸವಣ್ಣಾ? ॥೧೪॥

ಇದಕ್ಕೆ ಚನ್ನಬಸವರಾಜದೇವರ ಪ್ರತ್ಯುತ್ತರ. ॥

ಆಚಾರ ಅಂಗವ ಮೇಲೆ ಆಯತವಾಮುವೆ ಇಷ್ಟಲಿಂಗ. ಆ ಇಷ್ಟಲಿಂಗವಿತಿದಿಹುದೆ ಪ್ರಾಣಲಿಂಗ ಸ್ವಾಯತ. ಪ್ರಾಣಲಿಂಗ ಉಪಯಿಸಿದಲ್ಲದೆ ಇಷ್ಟಲಿಂಗವ ಕಾಣಬಾರದು. ಈ ಭೇದವ ಭೇದಿಸಬಲ್ಲರೆ ಕೂಡಲ ಚನ್ನಸಂಗಯ್ಯನಲ್ಲಿ ಲಿಂಗೈಕ್ಯ ಕಾಣಾ ಪ್ರಭುವೆ. ॥೧೫॥

ಮತ್ತಂ, ತಿಳಿದುಪ್ಪ ಗಟ್ಟಿದುಪ್ಪಕ್ಕೆ ಭೇದ ಉಂಟೆ? ದೀಪಕ್ಕೆ ದೀಪ್ತಿಗೆ ಭಿನ್ನ ಉಂಟೆ? ಆತ್ಮಕ್ಕೆಯೂ ದೇಹಕ್ಕೆಯೂ ಹಂಗುಂಟೆ? ಕ್ಷೀರಕ್ಕೆಯೂ ಸ್ನೇಹಕ್ಕೆಯೂ ಭಿನ್ನ ಉಂಟೆ? ಇದುಕಾರಣ ಸಾಕಾರವೆ ನಿರಾಕಾರವೆಂದರಿದು ಅಂಗಲಿಂಗಸಂಬಂಧವಿಲ್ಲದವರ ಸಂಗ ಭಂಗವೆಂದು ಕೂಡಲ ಚನ್ನಸಂಗಯ್ಯನ ಶರಣರು ಮುಚ್ಚರಯ್ಯ ಪ್ರಭುವೆ. ॥೧೬॥

ಮತ್ತಂ, ಚನ್ನಬಸವರಾಜದೇವರು ಸಿದ್ಧರಾಮಯ್ಯನಿಗೆ ಅಂಗಲಿಂಗ ಸಂಬಂಧವಿಲ್ಲದಿದ್ದರೆ ನಮ್ಮ ಶರಣರು ಒಪ್ಪರೆಂದು ಮೋಳಿಗಯ್ಯಗಳು ಮುಖ್ಯವಾದ ಶರಣರ ಮುಖವ ನೋಡಿ ನಿರೂಪಿಸಿದ ಪ್ರಸ್ತಾವದ ವಚನ. ॥

ಸತಿ ಸಂಗವತಿ ಸುಖವೆಂದರಿದಡೇನು, ಗಣಸಾಕ್ಷಿಯಾಗಿ, ವಿವಾಹವಾಗದನ್ನಕ್ಕರ? ಕಣ್ಣು ಕಾಂಬುದೆಂದಡೆ, ಕತ್ತಲೆಯಲ್ಲಿ ಕಾಂಬುದೆ ದೀಪವಿಲ್ಲದನ್ನಕ್ಕರ? ಸೂರ್ಯನ ಪ್ರಕಾಶದಿಂದ ಕಂಡು ತಾವೆ ಕಂಡೆನೆಂಬ ಜಗದ ನಾಣ್ಯುಡಿಯಂತಾಯಿತ್ತು. ಅಂಗವ ಬಿಟ್ಟು ಆತ್ಮನುಂಟೆ? ಶಕ್ತಿಯ ಬಿಟ್ಟು ಶಿವನುಂಟೆ? ಇದುಕಾರಣ ಸ್ಥೂಲ ಸೂಕ್ಷ್ಮ ಕಾರಣವೆಂಬ ತನುತ್ರಯವಿರಲು, ಇಷ್ಟಪ್ರಾಣಭಾವವೆಂಬ ತ್ರಿವಿಧಲಿಂಗ ಸಂಬಂಧ ಬೇಡವೆಂದಡೆ ಅಸಂಖ್ಯಾತ ಪ್ರಮಥಗಣಂಗಳೊಪ್ಪುವರೆ? ಇದುಕಾರಣ ಕೂಡಲ ಚನ್ನಸಂಗಯ್ಯನಲ್ಲಿ ಇಷ್ಟಲಿಂಗ ಸಂಬಂಧವಿಲ್ಲದವರ ಮುಖವ ನೋಡಲಾಗದಯ್ಯ ಪ್ರಭುವೆ. ॥೧೭॥

ಹೀಗೆಂದು ಚನ್ನಬಸವರಾಜದೇವರು ಅಸಂಖ್ಯಾತ ಮಹಾಗಣಂಗಳ ಮುಖಮಂ ನೋಡಲು, ಆ ಸಮಯದಲ್ಲಿ ಮೋಳಿಗೆಯ ಮಾರಿತಂದೆಗಳು

ಮುನ್ನವಾದ ವಿಳುಸೂರಿಪ್ಪತ್ತು ಅಮರಗಣಂಗಳು ಎಲ್ಲರು ಕೇಳಿ ಕನಲಿ ಬಿದ್ದ ಪ್ರಸ್ತಾವದ ವಚನಗಳು. ॥

ಆ ಸಮಯದಲ್ಲಿ ಮೋಳಿಗೆಯ್ಯಗಳ ವಚನ. ॥

ಗರಳವಿಲ್ಲದುರುಗಂಗೆ ಹಲಬರಂಜಿದವರುಂಟೆ? ಕೈದುವಿಲ್ಲದ ಬಂಟನಿದರೆ ಅಂಜಿದವರುಂಟೆ? ಇಷ್ಟ ಬಾಹ್ಯ ದೃಷ್ಟದ ಮಾತನಾಡಿದಡೆ ಅವಂಗೆ ಪ್ರಾಣಲಿಂಗಿಯಪ್ಪನೆ? ಇದು ನಿಶ್ಚಯವಲ್ಲ ನಿಃಕಳಂಕ ಮಲ್ಲಿಕಾರ್ಜುನ. ॥೧೯॥

ಮತ್ತಂ ಸರ್ವಸ್ಥಾವರ ಮೂಲಂಗಳೆಲ್ಲಕ್ಕು ಪೃಥ್ವಿಯಾದಿ ಅಪ್ಪುವಿನ ಸಾರದಿಂದೆ ಪಲ್ಲೈಸಿ ವೃಕ್ಷಂಗೆ ವೃಷ್ಟವಾದ ತೆರನಂತೆ, ಇಷ್ಟದ ಪೂಜೆಯೇ ವೃಷ್ಟವಾಗಿ ಆ ವೃಷ್ಟಿಯೇ ನಿಷ್ಪಲವಾದಲ್ಲಿ ಪ್ರಾಣಲಿಂಗ ಸಂಬಂಧ ನಿಃಕಳಂಕ ಮಲ್ಲಿಕಾರ್ಜುನ ॥೨೯॥

ಮತ್ತಂ, ತಿಲದ ಮರೆಯ ತೈಲವಸರದು ಕಾಂಬುವಂತೆ, ಫಲದ ಮರೆಯ ರಸವ ಹಿಳಿದು ಕಾಂಬ ಸವಿ ರುಚಿಯಂತೆ, ತೆರೆಯ ಮರೆಯ ರೂಪ ತೆರೆದು ಕಾಂಬಂತೆ, ಇಷ್ಟದ ಮರೆಯಲ್ಲಿರ್ದ ವೃಷ್ಟದ ಉಭಯವ ನಿಶ್ಚೈಸಿದಲ್ಲಿ ಪ್ರಾಣಲಿಂಗ ಸಂಬಂಧಿ ನಿಃಕಳಂಕ ಮಲ್ಲಿಕಾರ್ಜುನ. ॥೨೦॥

ಇದಕ್ಕೆ ದಾಸಿಮಯ್ಯಗಳ ವಚನ. ॥

ಕರಸ್ಥಲದ ಜ್ಯೋತಿಯದು. ಕರುವಿಟ್ಟಿರಕವದು. ಅದರ ನೆಲೆಯು ಅಳವಡೆ. ನಿಜದಾನಂದವು ಹೊಲಬುಮೋರದಿಹ ನಿಸ್ಸೀಮನ ಹೊಲಬನು ಕೂಡಿದಾತನೆ ವೃಷಭ. ಕಾಣಾ ರಾಮನಾಥಾ. ॥೨೧॥

ಇದಕ್ಕೆ ಮೆರೆವಿಂಡ ದೇವರ ವಚನ. ॥

ಮೊನೆ ಇರಿವರೆ ಕರವಲ್ಲಿ ಪಿಡಿದಲ್ಲದಾಗದು. ಮನವರಿವರೆ ಕುರುಹಿನ ನೆರುಗೆಯಲ್ಲಿ ಸಲೆ ಸಂದು ನಿಂದಲ್ಲದಾಗದು. ಕ್ರಿಯಾನುಭಾವ ಶುದ್ಧವಾದಲ್ಲದೆ, ಐಘಟವೂರ ರಾಮೇಶ್ವರ ಲಿಂಗವ ಕೂಡಬಾರದು. ॥೨೨॥

ಇವಕ್ಕೆ ಉರಿಲಿಂಗ ಪೆದ್ದಣ್ಣಗಳ ವಚನ. ॥

ಸಾಕಾರವಿಡಿದು, ಅರ್ಚನೆಯು ಪೂಜನೆಯು ಮಾಡಬೇಕಲ್ಲದೆ, ನಿರಾಕಾರವ ನಂಬಲಾಗದು. ಶ್ರೀಗುರು ಪ್ರಾಣಲಿಂಗವನು ಕರಸ್ಥಲಕ್ಕೆ ಬಿಜಯಂಗೈಸಿ ಕೊಟ್ಟ ಬಳಿಕ ವಜ್ರದಲ್ಲಿ ಬಯಲನರಸಲುಂಟೆ ಉರಿಲಿಂಗ ಪೆದ್ದಿ ಪ್ರಿಯ ವಿಶ್ವೇಶ್ವರಾ? ॥೨೩॥

ಇವಕ್ಕೆ ರಾಯಸದ ಮಂಚಣ್ಣಗಳ ವಚನ.

ಉಂಬರೆ ಬಂದು ಬಾಯ ಮರೆದೆನೆಂದು ಹೊರಿ ಇಹುತಿಪ್ಪ ಅರಿಕೆ ಪೀನನ ತೆರನಂತಾಯಿತ್ತು. ಅರಿಕೆಯನರಿ ಎಂದು ಕುರುಹ ಕೊಟ್ಟರಿ ಕುರುಹ ಮರೆದು ಅರಿಸಿನೆಂಬ ಕುರುಬನ ನೋಡಾ ಜಾಂಬೇಶ್ವರಾ. ॥೨೪॥

ಇದಕ್ಕೆ ಫಕ್ಕೆಯ ಜೊಮ್ಮಣ್ಣಗಳ ವಚನ. ॥

ಮಾತ ಅಲೇಖದ ಮೇಲೆ ಕುರುಹಿಟ್ಟಲ್ಲದೆ, ನೀತಿ ಲಕ್ಷಣವ ಕಾಣಬಾರದು. ಚಿತ್ತ ತಾ ಪೂಜಿಸುವ ವಸ್ತುವಿನಲ್ಲಿ ಲಕ್ಷಿಸಿದಲ್ಲದೆ, ಮೇಲಣ ಲಕ್ಷಣ ಕಾಣಬಾರದು. ಕಾಂಬನ್ನಕ್ಕರ ಉಭಯದ ಆಚರಣೆ ತಾನುಳ್ಳನ್ನಕ್ಕರ ಕಾಲಾಂತಕ ಭೀಮೇಶ್ವರ ಲಿಂಗವ ಪೂಜಿಸಬೇಕು. ॥೨೫॥

ಇವಕ್ಕೆ ಅಮುಗಿದೇವಯ್ಯಗಳ ವಚನ. ॥

ಜ್ಞಾನದಲ್ಲಿ ಅರಿವರೇನಯ್ಯ, ಸಕ್ರಿಯಾಚಾರಿಯಾಗದನ್ನಕ್ಕರ? ಸೆಸೆದ ಮಾತ್ರದಲ್ಲಿ ಕಾಂಬುವೆ ಕಾರ್ಯವಲ್ಲಲ್ಲದೆ? ಕುರುಡ ಕಾಣ ಪಥವ. ಹೇಳವ ನಡೆಯಲರಿಯ. ಒಂದಿಲ್ಲದಿದ್ದರೆ ಒಂದಾಗದು. ಜ್ಞಾನವಿಲ್ಲದ ಕ್ರಿ ಜಡನು ಕ್ರಿ ಇಲ್ಲದ ಜ್ಞಾನ ಭ್ರಾಂತು. ಇದುಕಾರಣ ಸಿದ್ಧಸೋಮನಾಥನಲ್ಲಿ ಎರಡೂ ಬೇಕು. ॥೨೬॥

ಇವಕ್ಕೆ ಶಿವನಾಗಮಯ್ಯಗಳ ವಚನ. ॥

ಅಂಗದ ಮೇಲೆ ಲಿಂಗವಿದ್ದ ಬಳಿಕ ಲಿಂಗಹೀನರ ಜರಿಸಲಾಗದು. ಅಂಗದ ಮೇಲೆ ಲಿಂಗವಿದ್ದ ಬಳಿಕ ಲಿಂಗ ಮುಂತಾಗಿ ಎಲ್ಲ ಕ್ರಿಗಳನು ಗಮಿಸಬೇಕಲ್ಲದೆ ಅಂಗ ಮುಂತಾಗಿ ಗಮಿಸಬಾರದು. ಲಿಂಗಸಂಬಂಧಿಯಾಗಿ, ಅಂಗ ಮುಂತಾಗಿ ಇಪ್ಪವರು ಲಿಂಗಕ್ಕೆ ದೂರವಯ್ಯ ನಾಗಯ್ಯ ಪ್ರಿಯ ಚನ್ನರಾಮೇಶ್ವರಾ. ॥೨೭॥

ಇವಕ್ಕೆ ತೆಲುಗು ಜೊಮ್ಮಯ್ಯಗಳ ವಚನ. ॥

ಗುರುಕಾರುಣ್ಯವ ಪಡೆದುದಕ್ಕೆ ಚಿನ್ಹವಾವುದೆಂದರೆ, ಅಂಗದ ಮೇಲೆ ಲಿಂಗ ಸ್ಥಾಯತವಾಗಿರಬೇಕು. ಅಂಗದ ಮೇಲೆ ಲಿಂಗ ಸ್ಥಾಯತವಿಲ್ಲದೆ, ಒರಿದೆ ಗುರುಕಾರುಣ್ಯವಾಯಿತ್ತೆಂದಡೆ ಅದೆಂತೊ? ಲಿಂಗಹೀನವಾಗಿ ಗುರುಕಾರುಣ್ಯ ಉಂಟೆ? ಇಲ್ಲ. ಆ ಮಾತ ಕೇಳಲಾಗದು. ಇದು

ಕಾರಣ ಲಿಂಗಧಾರಣವುಳ್ಳದೆ ಸದಾಚಾರ. ಇಲ್ಲದಿದ್ದರೆ, ಅನಾಚಾರ ವೆಂಬೆನಯ್ಯ ತೆಲುಗೇಶ್ವರಾ. ॥೨೮॥

ಹೀಗೆಂದು ಸಮಸ್ತ ಶರಣರೆಲ್ಲರು ವಿಡಂಬಿಸಿ ನುಡಿಯಲು, ಮರಳಿ ಬಸವಪ್ರಭುದೇವರು ಅಂಗದ ಮೇಲೆ ಲಿಂಗವಿಲ್ಲದ ಸಿದ್ಧರಾಮಯ್ಯನ ಮನೆಗೆ ಬರಬಹುದೆ ಎಂದು ಪ್ರಭುದೇವರ ಕನಲಿ ನುಡಿದ ಪ್ರಸ್ತಾವದ ವಚನ. ॥

ಸೊಸಲಲ್ಲೊಂದು ಕಣ್ಣುಳ್ಳವರಾದರು, ಅವಸಂಗದ ಮೇಲೆ ಲಿಂಗ ಸ್ಥಾಯತವಿಲ್ಲದಿದ್ದರೆ ಅವನ ಮನೆಯಲ್ಲಿ ಮಾಡಿದ ಪಾಕ ಶ್ವಾನನ ಮಾಂಸ ತಪ್ಪದಾಗಿ ಬಲ್ಲವರೊಲ್ಲರು. ಶಿವಭಕ್ತರಲ್ಲದವರ ಮನೆಯಲ್ಲಿ ಉಂಡರೆ ಜನ್ಮ ಜನ್ಮಾಂತರದಲ್ಲಿ ಶ್ವಾಸನ ಯೋನಿಯಲ್ಲಿ ಬಪ್ಪುದು ತಪ್ಪದು. ಎಲೆ ಶಿವನೇ ನೀವಿಲ್ಲದವರ ಮನೆಯಲ್ಲಿ ತಿಂಬವರ ಕಂಡರೆ, ಎನ್ನ ಮನ ಸೊಗಸದಯ್ಯ ಕೂಡಲ ಚನ್ನಸಂಗಮದೇವಾ. ॥೨೯॥

ಮತ್ತಂ. ಲಿಂಗವಿಲ್ಲದೆ ನಡೆವವನ, ಲಿಂಗವಿಲ್ಲದೆ ನುಡಿವವನ, ಲಿಂಗವಿಲ್ಲದೆ ಉಗುಳ ನುಂಗಿವರಿ, ಅಂವಂದಿಂಗೆ ಕಿಲ್ಬಿಷವಯ್ಯ. ಏನೆಂಬೆ ನೇನೆಂಬೆ? ಲಿಂಗವಿಲ್ಲದೆ ನಡೆವವನ ಲಿಂಗವಿಲ್ಲದೆ ನುಡಿವನನ, ಅಂಗ ಲೌಕಿಕ ಮುಟ್ಟಲಾಗದು. ಲಿಂಗವಿಲ್ಲದೆ ನುಡಿವ ಶಬ್ದಸೂತಕವ ಕೇಳಲಾಗದು. ಲಿಂಗವಿಲ್ಲದೆ ಗಮಿಸಿದರೆ ಆ ನಡೆನುಡಿಗೊಮ್ಮೆ ವ್ರತಗೇಡಿ ಕೂಡಲ ಚನ್ನಸಂಗನುದೇವ. ॥೩॥

ಇದಕ್ಕೆ ಬಸವರಾಜದೇವರ ವಿಡಂಬನ. ॥

ಗುರು ತೋರಿವ ಲಿಂಗವು ಮನ ಸಾಒತ್ಯವಾಗಿರುತ್ತಿರಲು, ಪವನ ಭೇದದಿಂದೆ ಅರಿದೆನೆಂದರೆ ಅದೇ ದ್ರೋಹ. ಈಡಾ ಪಿಂಗಳ ಸುಷುಮ್ನ ನಾಳದಿಂದೆ ಅರಿದಿಹೆನೆಂದರೆ ಕೂಡಲಸಂಗಮದೇವರು ನೂಂಗ ಕೊಯ್ವುದೆ ಬಿಡುವನೆ? ॥೩೧॥

ಇದಕ್ಕೆ ಚನ್ನಬಸವರಾಜದೇವರ ವಚನ. ॥

ಕಾಯಾನುಭಾವಿಗಳು ಕಾಯದಲ್ಲಿ ಮುಕ್ತರು. ಜೀವಾನುಭಾವಿಗಳು ಜೀವದಲ್ಲಿ ಮುಕ್ತರು. ಪ್ರಾಣಾನುಭಾವಿಗಳು ಪ್ರಾಣದಲ್ಲಿ ಮುಕ್ತರು. ಪವನಾನುಭಾವಿಗಳು ಪವನದಲ್ಲಿ ಮುಕ್ತರು. ಲಿಂಗಾನುಭಾವಿಗಳಿಗೆಂತು ಸರಿ

ಎಂಬೆ? ನಿರವಯ ಸ್ವಯಂಜ್ಯೋತಿ ಪ್ರಕಾಶನಾಗಿಪ್ಪರು ಲಿಂಗದಲ್ಲಿ ಕೂಡಲ ಚನ್ನಸಂಗಮದೇವ ನಿಮ್ಮ ಶರಣರು. ॥೩॥

ಇಂತು ವೇದಾಂತ, ಸಿದ್ಧಾಂತ, ದ್ವೈತ ಕ್ರಿ, ಶೈವಜ್ಞಾನದಿಂದೆ ಅರಿವು ನೋಡಿ ಲಕ್ಷವಿಟ್ಟು ಕೂಡಿಹೆನೆಂಬ ಆತ್ಮಜ್ಞಾನದಿಂದ ಶಿವತತ್ವವ ಕಾಂಬುದು ಹುಸಿ ಎಂದು ಬಸವರಾಜದೇವರು ಚನ್ನಬಸವರಾಜದೇವರು ಮೊದಲಾಗಿಯ ಮಾರಿತಂದೆಗಳು ಮೊದಲಾದ ಏಳನೂರೆಪ್ಪತ್ತು ಅಮರಗಣಂಗಳು ಸಿದ್ಧರಾಮಯ್ಯನ ಅಷ್ಟಾಂಗಯೋಗಂಗಳ ಜರಿದು, ಖಂಡಿಸಿ ನಿರಸನಮಂ ಮಾಡಿ ಪ್ರಭುದೇವರೊಡನೆ ಬಿನ್ನೈಸುತ್ತಿರಲು, ಆ ಪ್ರಭುದೇವರು ಚನ್ನ ಬಸವಣ್ಣ ಮುಖ್ಯವಾದ ಅಸಂಖ್ಯಾತ ಗಣಂಗಳು ಅಂಗದ ಮೇಲೆ ಲಿಂಗ ವಿಲ್ಲದೆ ಒಪ್ಪರೆಂದು ಸಿದ್ಧರಾಮಯ್ಯದೇವರಿಗೆ ನಿರೂಪಿಸಿದ ಪ್ರಸ್ತಾವದ ವಚನ. ॥

ಬೆಳಗಿನೊಳಗೊಂದು ಬೆಳಗು ದೊರೆಕೊಂಡರೆ ಮತ್ತೊಂದು ಬೆಳಗು ಮತ್ತೆಲ್ಲಿಯದೊ? ಘನದೊಳಗೊಂದು ಘನವು ದೊರೆಕೊಂಡರೆ ಮತ್ತೊಂದು ಘನವು ಮತ್ತೆಲ್ಲಿಯದೊ? ಸಮೂಪದ ಮೇಲೆ ಸಮೂಪ ದಾಳಿವರಿದನು ಗುಹೇಶ್ವರನ ಶರಣ ಚನ್ನಬಸವಣ್ಣನು. ॥೩॥

ಮತ್ತಂ, ಎಳ್ಳಿಂಗೆ ಪರಿಮಳವ ಕಟ್ಟಿದಲ್ಲದೆ ಎಣ್ಣೆಂಗೆ ಪರಿಮಳ ವೇಧಿಸದು. ದೇಹದಲ್ಲಿ ಇಷ್ಟಲಿಂಗವ ಸ್ಥಾಪಿಸಿದಲ್ಲದೆ ಪ್ರಾಣಲಿಂಗ ಸಂಬಂಧವಾಗದು. ಇದುಕಾರಣ ಗುಹೇಶ್ವರಲಿಂಗದಲ್ಲಿ ಇಷ್ಟಲಿಂಗ ಸಂಬಂಧಿಯಲ್ಲದೆ ಪ್ರಾಣಲಿಂಗ ಸಂಬಂಧಿಯಾಗಬಾರದು ಕಾಣಾ ಸಿದ್ಧರಾಮಯ್ಯ. ॥೪॥

ಹೀಗೆಂದು ಪ್ರಭುದೇವರು ನಿರೂಪಿಸಲು, ಇವಕ್ಕೆ ಸಿದ್ಧರಾಮಯ್ಯದೇವರು ಜಜ್ಜನೆ ಜರಿದು, ಬಿಬ್ಬನೆ ಬಿರಿದು, ಪ್ರಾಣ ಹಮ್ಮನೆ ಹಾರಿ, ಭಯವಟ್ಟು ನಡನಡುಗಿ ಪ್ರಭುದೇವರ ಪಾದಾಕ್ರಾಂತರಾಗಿ ನಿಮ್ಮ ಶರಣರ ಕರುಣವ ಕೈಪಿ ಮಾಡಾ ಪ್ರಭುವೇ ಎಂದು ಉಪಾವಸ್ಥೆಯಂ ಮಾಡುವ ಪ್ರಸ್ತಾವದ ವಚನ. ॥

ಪುಣ್ಯ ಪಾಪಂಗಳನರಿಯದ ಮುನ್ನ ಅನೇಕ ಭವಂಗಳಲ್ಲಿ ಬಂದು ನಿಮ್ಮ ನಿಲವನರಿಯದೆ ಕೆಟ್ಟಿನಯ್ಯ! ಇನ್ನು ನಿಮ್ಮ ಶರಣುವೊಕ್ಕೆನಾಗಿ ನಾ ನಿಮ್ಮನೆಂದು ಅಗಲದಂತೆ ಮಾಡಯ್ಯ ನಿಮ್ಮ ಧರ್ಮ, ನಿಮ್ಮ ಧರ್ಮ.

ನೆನ್ನಿಸಿ ಒಂದು ಜೀಡುವೆ. ಎನ್ನ ಕರ್ಮಬಂಧನ ಬಿಡುವಂತೆ ಮಾಡಾ ಕಪಿಲ ಸಿದ್ಧಮಲ್ಲಿಕಾರ್ಜುನ. ॥೩॥

ಮತ್ತಂ, ಎಂದಪ್ಪೆನಯ್ಯ ನಿಮ್ಮ ಶರಣ ಗಣಂಗಳ ಸಮೂಹದಲ್ಲಿ? ಎಂದಪ್ಪೆನಯ್ಯ ನಿಮ್ಮವರ ನಡುವೆ? ಎಂದಪ್ಪೆನಯ್ಯ ಕೀಳಲಿ ಕಾಯ್ದು? ಎಂದಪ್ಪೆನಯ್ಯ ಕಿಂಕರನಾಗಿ? ಎಂದಪ್ಪೆನಯ್ಯ ನಿಮ್ಮ ನಾಮ ಡಿಂಗರಿಗನಾಗಿ? ಎಂದಪ್ಪೆನಯ್ಯ ಶಿವನೆ ಕಪಿಲ ಸಿದ್ಧಮಲ್ಲಿಕಾರ್ಜುನ? ॥೩॥

ಎಂದಪ್ಪೆನಯ್ಯ ಶುದ್ಧ, ಸಿದ್ಧ, ಪ್ರಸಿದ್ಧ, ಪ್ರಸಾದ ಪ್ರಭುವೆನಿಸಿ? ಎಂದಪ್ಪೆನಯ್ಯ ಭಕ್ತಿ, ಜ್ಞಾನ, ವೈರಾಗ್ಯ ಸಂಪನ್ನನಾಗಿ? ಎಂದಪ್ಪೆನಯ್ಯ ತತ್ಪಿತಸ್ಯ ತೂರ್ಯಾತೂರ್ಯ ನೀನೆಯಾಗಿ? ಎಂದಪ್ಪೆನಯ್ಯ ದೀಕ್ಷಾತ್ರಯದಲ್ಲಿ ಸಂಪನ್ನನಾಗಿ? ಎಂದಪ್ಪೆನಯ್ಯ ಲಿಂಗತ್ರಯದಲ್ಲಿ ಪ್ರಸಾದ ಸಂಪನ್ನನಾಗಿ? ಎಂದಪ್ಪೆನಯ್ಯ ಕಪಿಲ ಸಿದ್ಧಮಲ್ಲಿಕಾರ್ಜುನಯ್ಯ ನಿಮ್ಮ ವಶ ಸಡುವೆ ಓರಂತೆ? ॥೩॥

ಒಡೆಯರುಳ್ಳ ತೊತ್ತಾನು, ತಾಯುಳ್ಳ ಶಿಶುವಾನು. ಸ್ವತಂತ್ರವೇ ಕಯ್ಯ? ನಿಮ್ಮವರ ನಡುವೆ ಎನಗೆ ನಿನ್ನವರು ಎನ್ನನೊಲ್ಲದಿದ್ದ ದುಃಖವನು ಮರೆವೆನೆ ನಾನು? ನಿನ್ನವರಾಜ್ಞೆಯ ಮೀರಿದೆನಾಯಿತ್ತಾದಡೆ, ನಿನ್ನಾಣೆಯಯ್ಯ ಕಪಿಲ ಸಿದ್ಧಮಲ್ಲಿಕಾರ್ಜುನಯ್ಯ. ॥೩॥

ಆವಾಗಳು ನಿನ್ನ ವಮುಗಳ ನೀನೆಂಬ ಮನವ ತಿಯುನ್ನ ತೋನ್ನ ತವ ಕೊಡು ಕಂಡ್ಯಾ ಎಲೆ ಅಯ್ಯ ನಿಮ್ಮ ಧರ್ಮ ನಿಮ್ಮ ಧರ್ಮವಯ್ಯ. ನಿನ್ನ ಲಾಂಛನವ ಕಂಡು ತಾತ್ಪರ್ಯವೆಂದು ನಂಬುವ ಮನಸ್ಸಿಂಗೆ ಮಂಗಳವನೀಯಯ್ಯ! ನಿನ್ನವರ ಸಹ ಲೋಕದಲ್ಲಿ ಅವರ ಕೀಳಲ ಕಾಯ್ವಿರ್ಪ ಸುಕೃತವನು ತಪ್ಪದೆ ಕುಡು ಕಪಿಲ ಸಿದ್ಧಮಲ್ಲಿಕಾರ್ಜುನಯ್ಯ ನಿಮ್ಮ ಧರ್ಮ. ॥೩॥

ಮತ್ತಂ, ಸಿದ್ಧರಾಮಯ್ಯದೇವರು ತಾ ಮಾಡುವ ಶೈವಯೋಗಾಭ್ಯಾಸ ಭಿನ್ನ ಕ್ರಿಗಳನು ತಾವೆ ಜರಿದುಕೊಂಡು ನುಡಿದು ಶರಣರ ಕರುಣ ಸಾಧ್ಯವ ಮಾಡಿಕೊಡು ಎಂದು ಪ್ರಭುದೇವರಿಗೆ ಬಿನ್ನೈಸುವ ಪ್ರಸ್ತಾವದ ವಚನ.

ಹಿಂದೆ ಬಯಸಿದೆ ಕಾಯಕತನವಲ್ಲಿ. ಎನ್ನ ಮುಂದಣತಿಯ ನೋಡಿ ರಯ್ಯ! ಕೆರೆ ಬಾವಿ ಹೂದೋಟ ಜಾಕ ಛತ್ರಂಗಳ ಮಾಡಿ, ಜೀವಂ

ಗಳ ಮೇಲೆ ಕೃಪೆಯುಂಟೆಂದು ಎನ್ನ ದಾನಿ ಎಂಬರು. ಅನು ದಾನಿಯಲ್ಲವಯ್ಯ. ನೀ ಹೇಳಿನಂತೆ ನಾ ಮಾಡಿದೆನು. ನೀ ಬರಹೇಳದಲ್ಲಿ ನಾ ಬಂದೆನು. ನೀನು ಇರಿಸಂತೆ, ನಾ ಇಪ್ಪೆನು. ನಿನ್ನ ಇಚ್ಛಾಮಾತ್ರವ ಮೀರಿದ ನಾಯಿತ್ತಾವಡೆ ಫಲಪದ ಜನನವ ಬಯಿಸಿದೆನಾದಡೆ ನಿಮ್ಮಾಣೆ. ಕಪಿಲ ಸಿದ್ಧಮಲ್ಲಿಕಾರ್ಜುನಯ್ಯ. ಭವಕ್ಕೆ ಬರಿಸದಿರಯ್ಯ. ॥೪೦॥

ಮತ್ತಂ, ಮಾಡಿಸಯ್ಯ ಎನಗೆ ನಿನ್ನವರ ಸಂಗವ. ಮಾಡಿಸಯ್ಯ ಎನಗೆ ನಿಮ್ಮವರಾನಂದವ. ಆಗಿಸಯ್ಯ ನಿನ್ನವರಾದಂತೆ. ನೋಡಿಸಯ್ಯ ನಿನ್ನವರ ಕೂಡೆ. ಸಂಗವನು ಮಾಡಿಸಯ್ಯ. ಎನಗೆ ಬಚ್ಚ ಬರಿಯ ಭಕ್ತಿಯನು ಕೊಡಿಸಯ್ಯ! ಎನಗೆ ಪಾದೋದಕ ಪ್ರಸಾದವ ಸೊಚ್ಚತವ ಸರಿಸಯ್ಯ. ನಿಮ್ಮವರ ಕೂಡೆ ಸಿಕ್ಕಿ ಇರಿಸಯ್ಯ! ನಿನ್ನವರ ಪಾದದ ಕೆಳಗೆ ನಿತ್ಯನಾಗಿ ಬರಿಸಯ್ಯ. ಎನ್ನ ಭವಭವದಲ್ಲಿ ಕಪಿಲ ಸಿದ್ಧಮಲ್ಲಿಕಾರ್ಜುನಯ್ಯ. ನೀನು ಇಂತು ಕೆಡಿಸಯ್ಯ ಎನ್ನ ಭವಭವದ ಹುಟ್ಟ. ॥೪೧॥

ನುಡಿಯಬಹುದು ಅದ್ಭುತವಸೊಂದು ಕೋಟಿ ವೇಳೆ. ಒಮ್ಮೆ ನಡೆಯಬಹುದೆ ನಿರ್ಧಾರವಾಗಿ, ಸದ್ಭಕ್ತಿ ಆಚಾರವಾಗಿ? ನುಡಿದಂತೆ ನಡೆಪ ನಡೆದಂತೆ ನುಡಿವ ಸದ್ಭಕ್ತಿ ಸದಾಚಾರ ಯುಕ್ತ ಮಹಾತ್ಮರ ಪಾದವ ಹಿಡಿದು ಬದುಕಿಸಯ್ಯ ಪ್ರಭುವೆ ಕಪಿಲ ಸಿದ್ಧಮಲ್ಲಿಕಾರ್ಜುನ. ॥೪೨॥

ಹೀಗೆಂದು ಸಿದ್ಧರಾಮಯ್ಯ ದೇವರು ಬಿನ್ನೈಸಲು, ಇದಕ್ಕೆ ಪ್ರಭುದೇವರು ನಿನಗೆ ಅಂತರ್ಲಕ್ಷನ, ಸಂಧಾನ ಧ್ಯಾನಯೋಗದಿಂದ ವಸ್ತುವ ಕಂಡಿಹೆನೆಂದರೆ ಸಾಧ್ಯವಾಗದು. ಎನ್ನ ಶ್ರೀಗುರುವಪ್ಪ ಅನುಮಿಷದೇವರಂತೆ, ಕರಸ್ಥಲದ ಲಿಂಗದಲ್ಲಿ ವಸ್ತು ನಿಷ್ಪತ್ತಿಯವ ಕಂಡು ಬದುಕೆಂದು ನಿರೂಪಿಸಿದ ಪ್ರಸ್ಥಾವದ ವಚನ. ॥

ಶ್ರುತಿಯ ನಂಬದಿರೊ. ಶ್ರುತಿಯ ನಂಬದಿರೊ. ಶ್ರುತಿತತಿಗಳು ಮುನ್ನವೆ ಶಿವನಡಿಯ ಕಾಣದೆ "ಶ್ರುತಿಚಕಿತಮಭಿಧತ್ತೆ" ಎನುತ್ತ ಮುನ್ನವೆ ಅರಸಿ ಹೊಳಲಿ ಬಳಲುತ್ತೈದಾವೆ. ಶ್ರುತಿಹೇಳಿದಂತೆ ಹರಿಹರಿದು ಬಳಲದಿರೊ. ಶೂನ್ಯಕ್ಕೆ ತಲೆವಾರನಿಕ್ಕದಿರೊ. ವಸ್ತು ಹೃದಯದಲುಂಟೆಂದು ನೆನೆಯದಿರೊ. ವಸ್ತು ಭ್ರೂಮಧ್ಯದಲುಂಟೆಂದು, ಭ್ರಮಿಸದಿರೊ. ವಸ್ತು ಬ್ರಹ್ಮರಂಧ್ರದಲ್ಲಿ ಉಂಟೆಂದು ಹೊಲಬುಗೆಡದಿರೊ. ವಸ್ತು ನಿಷ್ಪತ್ತಿಯವ ಕಾಂಬುವೆನ್ನ ಸದ್ಗುರು ಅನುಮಿಷದೇವರಂತೆ ನಿನ್ನ ಕರಸ್ಥಲದಲ್ಲಿ ನಿಷ್ಪತ್ತಿಸಿ ಕಂಡು ನಮ್ಮ ಗುಹೇಶ್ವರಲಿಂಗದಲ್ಲಿ ನಿಬ್ಬೆರಗಾಗೊ ಮರುಳೆ. ॥೪೩॥

ಮತ್ತಂ॥ ಪ್ರಭುದೇವರು ಅನುಮಿಷ ದೇವರೆಂಬ ಗುರುವಿನ ಕೃಪೆಯಿಂದ ಇಷ್ಟಲಿಂಗ ಸಂಬಂಧವ ಪಡೆದೆನಾಗಿ ಪ್ರಾಣಲಿಂಗ ಸಂಬಂಧವಾಯಿತ್ತು. ನಿನಗೆ ಇಷ್ಟಲಿಂಗ ಸಂಬಂಧವಿಲ್ಲದಿದ್ದರೆ, ಆಗದೆಂದು ನಿರೂಪಿಸಿದ ವಚನ॥

ಅಂಗಲಿಂಗ, ಪ್ರಾಣಲಿಂಗ, ಮನಲಿಂಗವಾಯಿತ್ತು ನೋಡಾ! ಅಂಗಲಿಂಗವಾಗಿ ನಡೆನುಡಿ ಗತಿಯನರಿಯದು. ಪ್ರಾಣ ಲಿಂಗವಾಗಿ ನವನಾಳ ಬಹಿರಂಗವನರಿಯದು. ಮನ ಲಿಂಗವಾಗಿ ನೆನಹುಗೆಟ್ಟಿತ್ತು. ಅನುಭಾವ ಲಿಂಗವಾಗಿ ವಿಚಾರವನಡಗಿತ್ತು. ಭಾವ ಲಿಂಗವಾಗಿ ಭಾವನೆಯಳಿದಿತ್ತು. ಸರ್ವಾಂಗಳೆಲ್ಲವು ಲಿಂಗವಾಗಿ, ಮಾರ್ಗಕ್ರಿ ಹೊಲಬನರಿಯದು. ಅರಿವು ಲಿಂಗವಾಗಿ ಮರಹುಗೆಟ್ಟಿತ್ತು. ಅಂತರಂಗ ಲಿಂಗವಾಗಿ ಬಹಿರಂಗವೆಂತೆಂದರಿಯದು. ಬಹಿರಂಗ ಲಿಂಗವಾಗಿ, ಅಂತರಂಗದ ಸುದ್ದಿಯನರಿಯದು. ಸರ್ವಾಂಗ ಲಿಂಗವಾಗಿ ಸರ್ವೇಂದ್ರಿಯ ಗಮನಗೆಟ್ಟಿತ್ತು. ಮಹಾಘನವಿಂಬುಗೊಂಡಿತ್ತಾಗಿ, ನಿಃಪತ್ತಿ ಕರಿಗೊಂಡಿತ್ತು. ಗುಹೇಶ್ವರಲಿಂಗದಲ್ಲಿ ಪ್ರಾಣಲಿಂಗ ಸಂಬಂಧ ಸ್ವಯವಾಯಿತ್ತು ನೋಡಾ ಸಿದ್ಧರಾಮಯ್ಯ ॥೪೪॥

ಹೀಗೆಂದು ಪ್ರಭುದೇವರು ಸಿದ್ಧರಾಮಯ್ಯ ದೇವರಿಗೆ ನಿರೂಪಿಸಲು ಆ ಸಮಯದಲ್ಲಿ ಅಮುಗಿದೇವಯ್ಯಗಳು ಬಿನ್ನೈಸುವ ಪ್ರಸ್ಥಾವದ ವಚನ॥

ಕ್ಷುತ್ತು ಪಿಪಾಂಸೆ ಯರತಡೇನು? ಭಕ್ತನಪ್ಪನೆ? ಸ್ವೇಚ್ಛಾಗಮನಿಯಾವಡೇನು? ಭಕ್ತನಪ್ಪನೆ? ತನು ಬಯಲಾಡಡೇನು? ಭಕ್ತನಪ್ಪನೆ? ಅಷ್ಟಮಹಾಸಿದ್ಧಿಯುಳ್ಳಡೇನು? ಭಕ್ತನಪ್ಪನೆ? ಚತುರ್ವಿಧಪದವ ಪಡೆದು ಕೈಲಾಸದಲ್ಲಿದ್ದಡೇನು? ಭಕ್ತನಪ್ಪನೆ? ಮಹತ್ವವ ಹಲವ ತೋರಿ ಮೆರೆದಡೇನು? ಭಕ್ತನಪ್ಪನೆ? ಅಲ್ಲಲ್ಲ. ಭಕ್ತಿಯ ಪರಿ ಎಂತೆಂದಡೆ, ಅಂಗತ್ರಯದಲ್ಲಿ ಲಿಂಗತ್ರಯ ಸಂಬಂಧವಾಗಿ ಗುರುಲಿಂಗಜಂಗಮವನಾರಾಧಿಸಿ ಲಿಂಗತ್ರಯದಲ್ಲಿ ಸಮುವೇಧಿಸಿ, ಆ ತ್ರಿವಿಧ ಲಿಂಗಜಂಗಮವನಾರಾಧಿಸಿ ಪ್ರಸಾದ ಗ್ರಾಹಿಯಾದಲ್ಲದೆ ಭಕ್ತನಲ್ಲವೆಂದು ಸಿದ್ಧಸೋಮನಾಥನ ಶರಣರು ನುಡಿವರಯ್ಯ ಪ್ರಭುವೇ ॥೪೫॥

ಮತ್ತಂ॥ ಗುರುಕಾರುಣ್ಯವ ಪಡೆದು ಲಿಂಗದೊಳವ ಗ್ರಾಹಕನಾದ, ಅಂಗಲಿಂಗ, ಪ್ರಾಣಲಿಂಗ, ಆತ್ಮಲಿಂಗ ಸಂಬಂಧದ ವಿಚಾರವಿಲ್ಲದೆ ಅಯ ಜ್ಞಾನಯೋಗವೆಂಬ ಶೂನ್ಯವನುಭಾವಿಗೆ ಗುರುಭಕ್ತಿ ಇಲ್ಲ. ಗುರುಭಕ್ತಿ ಇಲ್ಲವಾಗಿ ಲಿಂಗಭಕ್ತಿ ಇಲ್ಲ. ಲಿಂಗಭಕ್ತಿ ಇಲ್ಲವಾಗಿ ಜಂಗಮ

ಭಕ್ತಿ ಇಲ್ಲ. ಜಂಗಮಭಕ್ತಿ ಇಲ್ಲವಾಗಿ ಪ್ರಸಾದವಿಲ್ಲ. ಪ್ರಸಾದವಿಲ್ಲವಾಗಿ ಮೋಕ್ಷವಿಲ್ಲ. ಇದುಕಾರಣ ಸದ್ಗುರು ಸಿದ್ಧಸೋಮನಾಥನು ಗುರುಕರಜಾತನಾದ ಲಿಂಗಾಂಗ ಸಂಬಂಧಿಗಳಪೂರ್ವವಯ್ಯ ಪ್ರಭುದೇವ

ಹೀಗೆಂದು ಅಮುಗಿದೇವಯ್ಯಗಳು ಪ್ರಭುದೇವರೊಡನೆ ಬಿನ್ನೈಸಲು ಸಿದ್ಧರಾಮಯ್ಯದೇವರು ಬಸವಣ್ಣ ಮುಖ್ಯನಾದ ಅಸಂಖ್ಯಾತ ಮಹಾಗಣಂಗಳಿಂದ ಚನ್ನಬಸವೇಶ್ವರನ ಕೈಯ್ಯಿಂದ ಅನುಗ್ರಹವ ಕರುಣಿಸಿ ಕೊಡಿಸು ಎಂದು ಪ್ರಭುದೇವರಿಗೆ ಭಕ್ತಿಜ್ಞಾನಾತುರದಿಂದೆ ಬಿನ್ನೈಸುವ ಪ್ರಸ್ತಾವದ ವಚನ॥

ಇನ ಮಂಡಲದೊಳಗೆ ಕಿರಣವಡಗಿಪ್ಪಂತೆ ಫಲವಹ ಬೀಜದಲ್ಲಿ ವೃಕ್ಷವಡಗಿಪ್ಪಂತೆ ಇಂದುಕಾಂತರವಿಕಾಂತದಲ್ಲಿ ಜಲಬಿಂದು ಅಗ್ನಿ ಇಪ್ಪಂತೆ ಸಂದ ಕ್ಷೀರದಲ್ಲಿ ಹೊಂದಿಹ ದಧಿ ತಕ್ರ ನವನೀತ ಘೃತವಿಪ್ಪಂತೆ ಅಂಗದ ಮೇಲೆ ಲಿಂಗ ಸಾಹಿತ್ಯವಾಗಿ ತನ್ನೊಳಗೆ ಆ ಲಿಂಗವ ಕಂಡು ಲಿಂಗದೊಳಗೆ ತನ್ನ ಕಂಡು ತನ್ನೊಳಗೆ ಸಮಸ್ತ ವಿಸ್ತಾರವೆಲ್ಲವ ಕಂಡು ಜಂಗಮ ಮುಖ ಲಿಂಗವೆಂಬ ಭೇದವನು ಲಿಂಗಕ್ಕೆ ಜಂಗಮವೆ ಪ್ರಾಣವಾಗಿಪ್ಪ ಭೇದವನು ಅಂಗದೊಳಗೆ ಲಿಂಗವೆ ಆಚಾರವಾಗಿ ಅಳವಟ್ಟ ವಿವರವನು ಲಿಂಗಾಂಗ ಸಂಬಂಧ ಸ್ಥಲಕುಳಂಗಳವಿರಳವಾಗಿ ಇದ್ದಿತ್ತೆಂಬುದನು ಕಂಗಳ ನೋಟಕ್ಕೆ ಗುರಿಯಾದ ಲಿಂಗವೆ ಅಂಗವನೊಳಕೊಂಬ ಭೇದವನು ಸಂಗನಬಸವಣ್ಣನಿಂದ ಕೃಪೆಮಾಡಿಸಿ ಎನ್ನನುಳುಹಾ ಪ್ರಭುವೆ ಕಪಿಲಸಿದ್ಧಮಲ್ಲಿಕಾರ್ಜುನದೇವಯ್ಯ ॥೪೭॥

ಹೀಗೆಂದು ಸಿದ್ಧರಾಮಯ್ಯದೇವರು ಪ್ರಭುದೇವರೊಡನೆ ಬಸವಣ್ಣ ಚನ್ನಬಸವಣ್ಣನವರಿಂದ ಲಿಂಗಧಾರಣವ ಮಾಡಿಸಿ ಎಂದು ಬಿನ್ನೈಸಲು ಆ. ಪ್ರಭುದೇವರು ಚನ್ನಬಸವರಾಜದೇವರೊಡನೆ ಸಿದ್ಧರಾಮಯ್ಯ ದೇವರಿಗೆ ಲಿಂಗವ ಧರಿಸಬೇಕೆಂದು ನಿರೂಪಿಸಿದ ಪ್ರಸ್ತಾವದ ವಚನ. ರತ್ನ ದೀಪ್ತಿಯಾದಡೇನು? ಬಂಧಿಸಿದ ಕುಂದಣದಲ್ಲಿ ಸಂದಿರಬೇಕು. ಸ್ವಾದುರಸ ರುಚಿಯನೀವ ಫಲವೆಂದಡೇನು ವೃಕ್ಷವಿಲ್ಲದನ್ನಕ್ಕ? ಚಿತ್ರ ಸೌಂದರ್ಯ ನೋಟಕ್ಕೆ ಸುಖವೆಂದಡೇನು ಭಿತ್ತಿಯ ಪಟಮುಖ್ಯಸ್ಥಾನವಿಲ್ಲದನ್ನಕ್ಕ? ಅಂಜನಸಿದ್ಧಿಯಿಂ ನಿಧಾನವ ಕಂಡಡೇನು, ಸಾಧನ ಕ್ರಿಯಿಂದ ಸಾಧ್ಯ ಮಾಡಿಕೊಳ್ಳದನ್ನಕ್ಕ? ಇದು ಕಾರಣ ಕಾಯದ ಕರಸ್ಥಲಕ್ಕೆ ಇಷ್ಟಲಿಂಗ

ಭಕ್ತಿಯಿಲ್ಲದಿದ್ದರೆ ನಿರವಯವಾದ ಜ್ಞಾನಯೋಗದ ಕೂಟ ಸಾಧ್ಯವಾಗದು. ಇದುಕಾರಣ ಕ್ರಿಯಾಲಿಂಗ ಸಂಬಂಧವೆ ಭಕ್ತಂಗೆ ಮತವು. ಮಹಾಸೌಖ್ಯವು. ನಮ್ಮ ಗುಹೇಶ್ವರನ ಶರಣನ ಮನ ಒಪ್ಪುವಂತೆ ಸಿದ್ಧರಾಮಯ್ಯಂಗೆ ಲಿಂಗಸಾಹಿತ್ಯವ ಮಾಡಾ ಚನ್ನಬಸವಣ್ಣಾ॥೪೮॥

ಇಂತು ಪ್ರಭುದೇವರು ಸಿದ್ಧರಾಮಯ್ಯದೇವರಿಗೆ ಉಪದೇಶವ ಮಾಡೆಂದು ಚನ್ನಬಸವರಾಜದೇವರಿಗೆ ನಿರೂಪಿಸಲು, ಆ ಚನ್ನಬಸವರಾಜದೇವರು ಸಿದ್ಧರಾಮಯ್ಯದೇವರಿಗೆ ದೀಕ್ಷೆಯಂ ಮಾಡಿದ ಪ್ರಸ್ತಾವದ ವಚನ॥

ಅಣವಮಲ, ಮಾಯಾಮಲ, ಕಾರ್ಮಿಕಮಲವೆಂಬ ಮಲತ್ರಯಂಗಳ ಕಳೆದು, ಆಜ್ಞಾದೀಕ್ಷೆ, ಉಪಮಾದೀಕ್ಷೆ, ಸ್ವಸ್ತಿಕಾರೋಹಣ, ಕಲಾಭಿಷೇಕ, ವಿಭೂತಿಪಟ್ಟ, ಲಿಂಗಾಯತ, ಲಿಂಗಸ್ವಾಯತ, ಈ ಏಳು ಕಾರ್ಯಕ್ಕೆ ಉಪದೇಶವ ಮಾಡುವುದು. ಸಮಯ, ನಿಸ್ಸಂಸಾರ, ನಿರ್ವಾಣ, ತತ್ವದೀಕ್ಷೆ, ಆಧ್ಯಾತ್ಮಿಕ, ಅನುಗ್ರಹ, ಸತ್ಯ ಶುದ್ಧ ಈ ಏಳನು ಪ್ರಾಣಕ್ಕೆ ಉಪದೇಶವ ಮಾಡುವುದು. ಏಕಾಗ್ರಚಿತ್ತ ದೃಢವ್ರತ, ಪಂಚೇಂದ್ರಿಯಾರ್ಪಿತ, ಅಹಿಂಸೆ, ಮನೋರ್ಲಯ, ಲಿಂಗನಿಜ, ಸದ್ಯೋ ಮುಕ್ತಿ, ಈ ಏಳನು ಮನಕ್ಕೆ ಉಪದೇಶವ ಮಾಡುವುದು. ಈ ಕ್ರಮವನರಿದು ಮಾಡುವುದು ಕೂಡಲ ಚನ್ನಸಂಗಯ್ಯನಲ್ಲಿ ಸಹಜದೀಕ್ಷೆಯಯ್ಯ. ॥೪೯॥

ಇಂತು ಚನ್ನಬಸವರಾಜದೇವರು ಕಾಯ ಪ್ರಾಣ ಮನವೆಂಬ ತ್ರಿವಿಧದಲ್ಲಿ ಇಷ್ಟತ್ರೈಂದು ದೀಕ್ಷೆಯಂ ಮಾಡಿ ತ್ರಿವಿಧ ಲಿಂಗಧಾರಣಮಂ ಸಂಬಂಧಿಸಲು, ಇದಕ್ಕೆ ಸಿದ್ಧರಾಮಯ್ಯದೇವರು ಪರಮಾನಂದ ಹರುಷ ವಸ್ಮೈದಿ ಬಿನ್ನೈಸಿದ ವಚನ. ॥

ಅಧ್ಯಾತ್ಮ ಅಧ್ಯಾತ್ಮವೆಂದೆಂಬಿರಿ. ಅಧ್ಯಾತ್ಮವಾರಿಗೆ? ಶ್ರೀ ಗುರು ಸ್ವಾಮಿ ಬಹಳವಪ್ಪ ಶಿವಲಿಂಗವ ಸೂಕ್ಷ್ಮವ ಮಾಡಿ ಕರಸ್ಥಲಕ್ಕೆ ಕೊಟ್ಟ ಬಳಿಕ ಬೇರೆ ಯೋಗ ಉಂಟೆ? ತನ್ನ ಹಸ್ತವ ಮಸ್ತಕದಲ್ಲಿಟ್ಟು ವಾಯು ಪ್ರಾಣಿಯಾಗಿದ್ದುದ ಕೊಂದು ಲಿಂಗಪ್ರಾಣಿಯ ಮಾಡಿದ ಬಳಿಕ ಅಕ್ಷರ ನಿಃಕ್ಷಯ ಮುಕ್ತನ ಮಾಡಿದ ಬಳಿಕ ಮರಳಿ ಯೋಗ ಉಂಟೆ? ಶಿವಯೋಗ ಪ್ರಾಪ್ತಿ? ಲಿಂಗಾರ್ಚನೆಯ ಮಾಡಿ, ಜಂಗಮ ಪ್ರಸಾದವ ಕೊಂಡ ಬಳಿಕ ಮರಳಿ ಬರಿಯ ಯೋಗಕ್ಕೆ ಒಡಂಬಡುವುದು ಉಂಟು? ಇಂತಪ್ಪವನ

ಗ್ರಂಥಾಲಯ
ಬಿ. ಎಲ್. ಡಿ. ಇ. ಸಂಸ್ಥೆ
ಪುಸ್ತಕವು ಪಡೆದ

ತಿಗಳೆದು ಶುದ್ಧ ಶಿವಯೋಗಿಯ ಮಾಡಿದಾತ ಚನ್ನಬಸವಣ್ಣ. ಆ ಚನ್ನಬಸವಣ್ಣನ ಕರುಣದಿಂದೆ ಅಭ್ಯಾಸಯೋಗವನತಿಗಳೆದು ಶಿವಯೋಗದಲ್ಲಿ ನಿತ್ಯನಾಗಿ ಭಕ್ತ, ಮಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯವೆಂಬ ಷಡುಸ್ಥಲಕ್ಕಧಿಕಾರಿಯಾದೆ. ನಿನ್ನವರ ಸಲುಗೆಗೆ ಸಂದೆ. ಚನ್ನಬಸವಣ್ಣನ ಕೃಪೆ ಎನ್ನನಿಂತು ಮಾಡಿತ್ತು ಕಾಣಾ ಗುರುವೆ ಕಪಿಲ ಸಿದ್ಧ ಮಲ್ಲಿಕಾರ್ಜುನ. ॥೫೦॥

ಮತ್ತಂ॥ ಹೆಸರಿಡಬಾರದ ಲಿಂಗವ ಹೆಸರಿಟ್ಟು ಎನ್ನ ಕರಸ್ಥಲಕ್ಕೆ ತಂದು ಕರತಳಾಮಳಕದಂತೆ ಮಾಡಿ, ಎನ್ನ ಕರಸ್ಥಲಕ್ಕೆ ಕ್ರಿಯಾಲಿಂಗವ ಕೊಟ್ಟು ಶ್ರೀಗುರು ಚನ್ನಬಸವಣ್ಣ ಹೆಸರಿಟ್ಟ ಲಿಂಗದ ಹೆಸರ ಹೇಳುವೆನು ಕೇಳಯ್ಯ. ಕಂಜ ಕರ್ಣಿಕೆಯ ಹಣೆಯಲ್ಲಿ ಯಾವತ್ತು ವಶವೆಂಬ ಬರೆವೈದಕ್ಷರವೆ ಆತನ ಪ್ರಥಮನಾಮ. ಅವ್ವೆಯ ಕರದೊಳಿಪ್ಪ ಆರಕ್ಷರವೆ ಆತನ ದ್ವಿತೀಯನಾಮ. ಅಕೆಯ ಮಸ್ತಕದೊಳಿಪ್ಪ ಅಕ್ಷರವೆ ಆತನ ಆಚಾರ್ಯನಾಮ. ಇಂತೀ ನಾಮತ್ರಯಗಳನರಿದು, ಧ್ಯಾನಾರೂಢನಾಗಿ ಇರುವರು ಎಲ್ಲಿಗಾದರೂ ಒಬ್ಬರು. ಈ ಬಸವಣ್ಣ ಮೊದಲಾವ ಪುರಾತನರು ಅಯವ್ವೆಯ ಅನುಮತದಿಂದೆ ಲಿಂಗಾರ್ಚನೆಯಂ ಮಾಡಿ ನಿತ್ಯ ನಿಜವಾಸಿಗಳಾದರು. ಆ ಶರಣರ ಅನುಮತದ ಕುರುಹಿನ ಉಪದೇಶವ ಕೇಳಿ ಎನಗಿನ್ನಾವುದು ಹವನಯ್ಯ ಎಂಬ ಚಿಂತೆಯ ಬಿಟ್ಟು ಕಪಿಲ ಸಿದ್ಧಮಲ್ಲಿಕಾರ್ಜುನಯ್ಯನ ಕೈಯ್ಯಲ್ಲಿ ಪಿಡಿದೆನು. ॥೫೧॥

ಮತ್ತಂ॥ ಆದಿ ಆಧಾರವಿಲ್ಲದಂದಿನ ಸಾದಾಖ್ಯ ದೇಹವಿಲ್ಲದಂದಿನ, ಸೀಮೆಸಂಬಂಧಗಳಿಲ್ಲದಂದಿನ, ಅನಾದಿ ಸಂಸಿದ್ಧನ ಆಗು ಮಾಡಿ ಹೆಸರಿಟ್ಟು ಕರಸ್ಥಲಕ್ಕೆ ತಂದು ಕೊಟ್ಟ ಗುರು ಚನ್ನಬಸವಣ್ಣನಯ್ಯ ಕಪಿಲಸಿದ್ಧ ಮಲ್ಲಿಕಾರ್ಜುನಯ್ಯ ॥೫೨॥

ಮತ್ತಂ॥ ಇಹಲೋಕ ಪರಲೋಕವೆಂಬ ಸಂದಳಿಯಿತ್ತಯ್ಯ ಗುರು ಪಿನ ಹಸ್ತದಲ್ಲಿ ಸತ್ತು ಪಂಚಾಕ್ಷರಿಯಿಂದೆತ್ತಿದ ಕಾರಣದಲ್ಲಿ ನಿತ್ಯವು ಲಿಂಗಾರ್ಚನೆಯ ಮಾಡುವ ಕಾರಣದಲ್ಲಿ ನಿತ್ಯವು ವಿಭೂತಿ, ರುದ್ರಾಕ್ಷಿಯ ಧಾರಣವ ಮಾಡುವ ಕಾರಣದಲ್ಲಿ ಇಹ ಲೋಕವೆಂದೇನು ಪರಲೋಕವೆಂದೇನು? ಹಂಗು ಹರಿದು ಒಂದಾದ ಬಳಿಕ ಮಲಮುದಂಗಳ ಹಂದು, ನಾನು ನೀನಾದ ಬಳಿಕ ಎಲೆ ಅಯ್ಯ ಭಕ್ತರ ಸರ್ವಾಂಗ ಲಿಂಗ ತನು

ಎಂಬ ಲೇಕವೇ ರುದ್ರಲೋಕ ಗುರುವೆ ಕಪಿಲಸಿದ್ಧಮಲ್ಲಿಕಾರ್ಜುನಯ್ಯ ನಿನ್ನ ಹಸ್ತ ಮಸ್ತಕದಲ್ಲಿ ಇಟ್ಟುದಾಯಿತ್ತು ॥೫೩॥

ಮತ್ತಂ॥ ಶುದ್ಧವನರಿವೆ, ಚನ್ನಬಸವಣ್ಣ ನಿಮ್ಮಿಂದ. ಸಿದ್ಧನರಿದೆ ಚನ್ನಬಸವಣ್ಣ ನಿಮ್ಮಿಂದ. ಪ್ರಸಿದ್ಧವನಂದೆ ಚನ್ನಬಸವಣ್ಣ ನಿಮ್ಮಿಂದ. ಕಪಿಲಸಿದ್ಧ ಮಲ್ಲಿಕಾರ್ಜುನಯ್ಯ ಚನ್ನಬಸವಣ್ಣ ಗುರುವಾಗಿ ಬಂದು, ಎನ್ನ ಜನ್ಮಕರ್ಮವ ನಿವೃತ್ತಿಯ ಮಾಡಿದನಯ್ಯ ॥೫೪॥

ಮತ್ತಂ॥ ಹೃದಯಕಮಲದ ಅಷ್ಟದಳದ ದ್ವಾತ್ರಿಂಶ ಕುಸುಮ ಮಧ್ಯದಲ್ಲಿ ಇಪ್ಪ ಸೂರ್ಯ, ಆ ಸೂರ್ಯನ ಮಧ್ಯದಲ್ಲಿ ಇಪ್ಪ ಚಂದ್ರ, ಆ ಚಂದ್ರನ ಮಧ್ಯದಲ್ಲಿ ಇಪ್ಪ ಅಗ್ನಿ, ಆ ಅಗ್ನಿಯ ಮಧ್ಯದಲ್ಲಿ ಇಪ್ಪುದು ಕಾಂತಿ, ಆ ಕಾಂತಿಯ ಮಧ್ಯದಲ್ಲಿ ಇಪ್ಪುದು ಸುಜ್ಞಾನ, ಆ ಸುಜ್ಞಾನದ ಮಧ್ಯದಲ್ಲಿಪ್ಪುದು ಚಿದಾತ್ಮ, ಆ ಚಿದಾತ್ಮನ ಮಧ್ಯದಲ್ಲಿಪ್ಪನಾ ಚಿತ್ಕಾಶನಪ್ಪ ಶಿವನು. ಅಂತಪ್ಪ ಪರಶಿವನು ಎನ್ನ ಸುಜ್ಞಾನದ ಕಾಯದ ಮಸ್ತಕದಲ್ಲಿ ಹಸ್ತವನಿರಿಸಿ ಮನ ಭಾವ ಕರಣೇಂದ್ರಿಯಗಳ ಸ್ವರೂಪೀಕರಿಸಿ ಪೃಷ್ಟಿಗೆ ತೋರಿ ಕೈಯಲ್ಲಿ ಲಿಂಗವ ಕೊಟ್ಟ ಚನ್ನಬಸವಣ್ಣನ ಶ್ರೀಪಾದಕ್ಕೆ ನಮೋ ನಮೋ ಎಂದು ಬದುಕಿದೆನಯ್ಯ, ಪ್ರಭುವೆ ಕಪಿಲಸಿದ್ಧ ಮಲ್ಲಿಕಾರ್ಜುನ ॥೫೫॥

ಹೀಗೆಂದು ಸಿದ್ಧರಾಮಯ್ಯದೇವರು ಚನ್ನಬಸವರಾಜದೇವರಿಂದೆ ಲಿಂಗಾಂಗ ಸಂಬಂಧಿಯಾಗಿಬದುಕಿದೆನೆಂದು ಸ್ತುತಿಸುತ್ತಿರಲು, ಆ ಚನ್ನಬಸವರಾಜದೇವರು ಸಂತೋಷಿಸಿ ಕೊಂಡಾಡಿದ ಪ್ರಸ್ಥಾನದ ವಚನ॥

ಕಂಗಳ ನೋಟವೆ ಮನದ ಕೂಟವಲ್ಲಿಯೆ ಏಕತ್ವ. ಭಾವದ ಲಿಂಗೈಕ್ಯದ ನಿಲವು ತನ್ನಿಂದ ತಾನೆಯಾದ ಬಗೆಯ ನೋಡಾ! ಅರಿಯಲಿಲ್ಲದ ಅರಿವಿನ ತೆರನು ಸಯವಾಯಿತ್ತು ಕೂಡಲ ಚನ್ನಸಂಗಯ್ಯನಲ್ಲಿ ಸಿದ್ಧರಾಮಯ್ಯಂಗೆ ॥೫೬॥

ಹೀಗೆಂದು ಚನ್ನಬಸವರಾಜದೇವರು ಸಿದ್ಧರಾಮಯ್ಯದೇವರಕೊಂಡಾಡಲು, ಪ್ರಭುದೇವರು ಚನ್ನಬಸರಾಜದೇವರೊಡನೆ ಸಿದ್ಧರಾಮಯ್ಯದೇವರ ಕೊಂಡಾಡಿದ ಪ್ರಸ್ಥಾನದ ವಚನ॥

ಸ್ವಾನುಭಾವದ ಬೆಳಗಿನಲ್ಲಿ ಒಂದು ಬೆಕ್ಕು ಹುಟ್ಟಿತ್ತು. ಆ ಬೆಕ್ಕಿನ ತಲೆಯ ಮೇಲೆ ಒಂದು ಗಿರಿ ಹುಟ್ಟಿತ್ತು. ಆ ಗಿರಿಯ ಮೇಲೆ ಎರಡು ರತ್ನ

ಹುಟ್ಟಿದವು. ಆ ರತ್ನವನರಸಿಕೊಂಡು ಬರಲು, ಶಿವ ತನ್ನವಗ್ರಹಿಸಿದವು. ಒಂದು ರತ್ನ ಅಂಗವನವಗ್ರಹಿಸಿತ್ತು. ಮತ್ತೊಂದು ರತ್ನ ಪ್ರಾಣವನವಗ್ರಹಿಸಿತ್ತು. ಆ ರತ್ನಂಗಳ ಪ್ರಭೆ ತಾನಾದ ನಮ್ಮ ಗುಹೇಶ್ವರನ ಶರಣ ಸಿದ್ಧರಾಮಯ್ಯನ ನಿಲವಿಂಗೆ ನಮೋ ನಮೋ ಎನುತಿರ್ದೆನಯ್ಯ ಚನ್ನಬಸವಣ್ಣಾ ॥೫೭॥

ಇದಕ್ಕೆ ಚನ್ನಬಸವರಾಜದೇವರು ಪರಿಣಮಿಸಿ ತಾವು ಮತ್ತಾ ಸಿದ್ಧರಾಮಯ್ಯದೇವರಿಗೆ ನಿಜಲಿಂಗೈಕ್ಯದ ಭೇದಮುಂ ಕೊಂಡಾಡಿ ನಿರೂಪಿಸಿದ ಪ್ರಸ್ಥಾವನ ವಚನ॥

ಅಹುದಹುದು ಅಂಗಕ್ಕೆ ಲಿಂಗವನರಸಬೇಕಲ್ಲದೆ ಲಿಂಗಕ್ಕೆ ಲಿಂಗವ ನರಸಲುಂಟೆ? ಪ್ರಾಣಕ್ಕೆ ಜ್ಞಾನವನರಸಬೇಕಲ್ಲದೆ ಜ್ಞಾನಕ್ಕೆ ಜ್ಞಾನವ ನರಸಲುಂಟೆ? ಎರಡಾಗಿದ್ದುದನೊಂದು ಮಾಡುವೆನೆನಬಹುದಲ್ಲದೆ ಒಂದಾಗಿರ್ದುದನೆರಡು ಮಾಡಲಿಲ್ಲ. ಕೂಡಲಚನ್ನಸಂಗಮದೇವರಲ್ಲ ಸಿದ್ಧರಾಮಯ್ಯದೇವರ ಶ್ರೀಪಾದಕ್ಕೆ ನಮೋ ನಮೋ ಎಂದು ಬದುಕಿದೆನು ಕಾಣಾ ಪ್ರಭುವೆ ॥೫೮॥

ಹೀಗೆಂದು ಚನ್ನಬಸವ ರಾಜದೇವರು ನಿರೂಪಿಸಲು, ಅದಕ್ಕೆ ಪ್ರಭುದೇವರು ಸಿದ್ಧರಾಮಯ್ಯ ದೇವರ ನಿಲವ ಕೊಂಡಾಡಿದ ಪ್ರಸ್ಥಾವನ ವಚನ॥

ಪಂಚಭೂತ ತ್ರಿಗುಣವನು ಸಂಚರಿಸಿ ರವಿಶಶಿಯ ಅಂತು ಕೂಡಿದರಾಜ ಬೀಜ ಬದ್ಧವಾಯಿತ್ತು. ಸಂಗತಿ ಇಲ್ಲದವನಲ್ಲ. ಪವನಗತಿಯ ನಡೆವವನಲ್ಲ. ಭೇದಿಸುತ್ತಿದ್ದಿತ್ತು ಲೋಕವೆಲ್ಲ. ಆತನೆ ರಾಜಬೀಜವಲ್ಲದ ಬಯಲುಬದ್ಧವಾಯಿತ್ತು. ಇನ್ನೇನೆಂದುಪವಿಸುವೆ ಗುಹೇಶ್ವರ ಸಿದ್ಧರಾಮನ ನಾಮವನು? ॥೫೯॥

ಕಾಮನ ಕೊಲುವಲ್ಲಿ ಹೋನುವ ಸುಡುವಲ್ಲಿ ತ್ರಿಪುರ ಸಂಸಾರದ ಕೀಲನರಿವಲ್ಲಿ ಆತನ ಯೋಗಿ ಎನ್ನಬೇಡಾ! ಆತನ ಭೋಗಿ ಎನ್ನಬೇಡಾ. ಆತನು ಅಚ್ಚ ಲಿಂಸೈಕ್ಯನು. ಹಸಿವ ಮರೆತಲ್ಲಿ ವ್ಯಸನವರತಲ್ಲಿ ಗುಹೇಶ್ವರ ಲಿಂಗವು ಸಿದ್ಧರಾಮಯ್ಯ ದೇವರು ತಾನೆ ॥೬೦॥

ಹೀಗೆಂದು ಪ್ರಭುದೇವರು ಸ್ತುತಿಸುತ್ತಿರಲು, ಚನ್ನ ಬಸವರಾಜದೇವರು ಮರಳಿ ಸಿದ್ಧರಾಮಯ್ಯ ದೇವರ ಕೊಂಡಾಡಿದ ಪ್ರಸ್ಥಾವನವನ ವಚನ

ಕಾಯದ ಕಲ್ಪಿತದಿಂದ ಭೋಗಾವಿ ಭೋಗಂಗಳ ಭೋಗಿಸಬಲ್ಲಪೆ ಸಲೋಕನೆ ಪರ್ವತ. ಸಾಲೋಕ್ಯ, ಸಾಮೀಪ್ಯ, ಸಾರೂಪ್ಯ, ಸಾಯುಜ್ಯ ಕಾಶೀ ಚತುರ್ವಿಧವನೆ ಮೀರಿ ಶಿವನ ಪ್ರಸಾದದಲ್ಲಿ. ಇರಬಲ್ಲರೆ ಈ ಕೈಲಾಸ ಕಲ್ಯಾಣ ಲಿಂಗವೆತಾನು, ತಾನೆ ಲಿಂಗವಾಗಿರಬಲ್ಲ ಶಿವಯೋಗಿ ಸಿದ್ಧರಾಮಯ್ಯ ದೇವರ ಶ್ರೀ ಪಾದದಲ್ಲಿ ಎಂದಿಪ್ಪೆ ಹೇಳಾ ಪ್ರಭುವೇ ಕೂಡಲ ಚನ್ನಸಂಗಮದೇವಾ ॥೬೧॥

ಮತ್ತಂ॥ ಹಸು ಹಯನಾಯಿತ್ತು. ಹಸು ಮನೆಗೆ ಬಂದಿತು ಹಸುವ ಕಟ್ಟುವರೆಲ್ಲರ ಕಟ್ಟಬಂದವ ಒಕ್ಕಲಿಕ್ಕಿ ತುಳಿಯಿತ್ತು. ಕೂಡಲ ಚನ್ನಸಂಗಯ್ಯನಲ್ಲಿ ಹಸುವ ಕಟ್ಟಿದಾತ ನಮ್ಮ ಸಿದ್ಧರಾಮಯ್ಯ ದೇವ ಬೊಬ್ಬರೆ. ॥೬೨॥

ಮತ್ತಂ, ಹರ ತನ್ನ ರೂಪವ ತೋರಲಿಕ್ಕೆ ಶ್ರೀಗುರುವಾದ. ಆ ಗುರುವೆ ಕರಸ್ಥಲಕ್ಕೆ ಲಿಂಗವಾದ. ಮನಸ್ಥಲಕ್ಕೆ ಮಂತ್ರವಾದ. ತನುಸ್ಥಲಕ್ಕೆ ಪ್ರಸಾದವಾದ. ಪ್ರಾಣಸ್ಥಲಕ್ಕೆ ಜಂಗಮವಾದ. ಕೂಡಲ ಚನ್ನಸಂಗಯ್ಯನಲ್ಲಿ ಸಮಯೋಗಿ ಸಿದ್ಧರಾಮಯ್ಯ ದೇವರು ಒಬ್ಬರೆ ತಾವಾದರು. ॥೬೩॥

ಕಬ್ಬುನಗಿವ ಗಾಣ ಬಲ್ಲುದೆ ಹಾಲಸವಿಯ? ಗಗನದಲಾಡುವ ಪಕ್ಷಿ ಬಲ್ಲುದೆ ರವಿಯ ನೀಲವ? ಹಗರಣಕ್ಕೆ ಪೂಜಿಸುವರು ಬಲ್ಲರೆ ನಮ್ಮ ಶರಣರ ಸುಳುಹ? ನಡು ಮುರಿದು ಗುಡಗೂರಿದರೇನು, ಲಿಂಗದ ನಿಜವನರಿಯವನ್ನಕ್ಕ? ನಾವನ್ನಕ್ಕ ಜಪವ ಮಾಡಿದರೇನು ಲಿಂಗದ ಪ್ರಾಣ ತನ್ನ ಪ್ರಾಣ ಒಡಗೂಡದನ್ನಕ್ಕ? ಇಂತಿವರ್ಗದ ಅಧ್ಯಾಸ ಶಕ್ತಿಗಳಹಿಗರು. ನಮ್ಮ ಕೂಡಲ ಚನ್ನಸಂಗಯ್ಯನಲ್ಲಿ ಮಾಯಾ ಕೋಳಾಹಳ ಸಿದ್ಧರಾಮಯ್ಯ ದೇವರಿಗೆ ಅಹೋರಾತ್ರಯಲ್ಲಿ ನಮೋ ನಮೋ ಎಂದು ಬದುಕಿದೆನು ಕಾಣಾ ಪ್ರಭುವೇ. ॥೬೪॥

ಹೀಗೆಂದು ಚನ್ನಬಸವರಾಜ ದೇವರು ಕೊಂಡಾಡುತ್ತಿರಲು, ಆ ಸಿದ್ಧರಾಮಯ್ಯ ದೇವರು ಅತ್ಯಂತ ಭೀತಾತುರದಿಂದ ಬಿನ್ನೈಸುವ ಪ್ರಸ್ಥಾವನ ವಚನ. ॥

ಮಲತ್ರಯಂಗಳಲಿ ಕುದಿಯಲೀಯ್ದು, ಮನಸಿಜನ ಬಾಣಕ್ಕೆ ಗುರಿಯಾಗಲೀಯ್ದೆ, ಎನ್ನ ತನ್ನಂತೆ ಮಾಡಿದನಯ್ಯ ಶ್ರೀಗುರು ಪಮಿನಾಲ್ಕು

ಮೀರಿ ಭವಕ್ಕೆ ಹೇತುವಾಗಲೀಯ್ಯದ ಕಾರಣ ಸದ್ಯೋನ್ಮುಕ್ತನ ಮಾಡಿದನಯ್ಯ ಶ್ರೀಗುರುವೆ ಪರಮ ಗುರುವೇ ಪರಿಭವಕ್ಕೆ ಬರಲೀಯ್ಯದಂತೆ ಎನ್ನ ನಿನ್ನನೊಳಗೊಬ್ಬನೆಂದೆನಿಸಿದೆಯಲ್ಲ ಗುರುವೆ, ಪರಮ ಗುರುವೆ ಕಾಲ ಕರ್ಮಟಕ್ಕೆ ಗುರಿಯಹ ಎನ್ನನು ತೆಗೆದು, ಗುರುಲಿಂಗ ಜಂಗಮ ತ್ರೈಲಿಂಗಕ್ಕೆ ಕಾರಣಿಕನ ಮಾಡಿದೆ. ಇನ್ನು ಭವಕ್ಕೆ ಬಾರೆನು. ನಿನ್ನವರಾವಂತೆ ಆಪ್ಪೆ ಕಪಿಲಸಿದ್ಧ ಮಲ್ಲಿಕಾರ್ಜುನಯ್ಯ ಎನ್ನ ಮೊರಿದ ಪದವೊಂದು ಇಲ್ಲವಯ್ಯ ॥೬೫॥

ರೂಪಿಂಗೆ ರೂಪು, ಜ್ಞಾನಕ್ಕೆ ಜ್ಞಾನ. ಪ್ರಾಣಕ್ಕೆ ಪ್ರಸಾದ ಲಿಂಗತ್ರಯವ ಹೆದೆಯಿಂದವೆ ತಂದು, ಅವರವರ ಕರದಲ್ಲಿ ದೀಕ್ಷೆಯ ಮಾಡಿದನು ಚನ್ನಬಸವಣ್ಣ ಕಪಿಲಸಿದ್ಧಮಲ್ಲಿಕಾರ್ಜುನಯ್ಯ ॥೬೬॥

ಎಂದೊ ಎನಗೆ ಶಿವಪದ ಎಂದೊ ಎಂದು ಚಿಂತಿಸುವಂಗೆ ಮುಂದೆ ತೋರುತ್ತಿದೆ ಪರಮ ಪ್ರಸಾದದ ಬೀಡು. ಬೀಡಕಂಡು ಶಿವಗಣಂಗಳನೆವನ ಮಾಡಿಕೊಂಡು ಪರಮಗುರು ಚನ್ನಬಸವಣ್ಣನ ಶ್ರೀಪಾದಾರವಿಂದವನರಿದು, ಅವರ ಕೃಪಾವಲೋಕನದಿಂದೆ ನಿಮ್ಮ ಶ್ರೀಪಾದವನರಿದೆ ಕಾಣಾ ಕಪಿಲಸಿದ್ಧಮಲ್ಲಿನಾಥಯ್ಯ ॥೬೭॥

ಇನ್ನು ಜನನವಿಲ್ಲ. ಮುನ್ನವೆ ಸಂದಳಿದೆ. ಮನ್ನಣೆಯಿಂದ ನೀ ಕಳುಹಿದಂತೆ ಉತ್ಪತ್ತೋನ್ನತವಾದ ಚನ್ನಬಸವಣ್ಣನ ಕರುಣದಿಂದೆ ನಿನ್ನರೂಪಾದೆ. ಇನ್ನೆನಗೆ ಅರಿವುಂಟೆ ಕಪಿಲಸಿದ್ಧ ಮಲ್ಲಿಕಾರ್ಜುನ ? ॥೬೮॥

ಮತ್ತಂ॥ ಎನ್ನ ತನ್ನವನೆನಿಸಿ ಮನ್ನಿಸಿದ ಭಕ್ತಿಯೊಳು ಸನ್ನುತನು ಆದೆನಯ್ಯ. ಸಕಲದೊಳಗೆ ಬಿನ್ನಾಣ ದೇಹವನು ತನ್ನಂತೆ ಮಾಡಿದನು ಚನ್ನಬಸವಣ್ಣನಯ್ಯ ಕಪಿಲಸಿದ್ಧ ಮಲ್ಲಿಕಾರ್ಜುನ ॥೬೯॥

ಹೀಗೆಂದು ಚನ್ನಬಸವರಾಜದೇವರಂ ಸ್ತುತಿಸೆ ತನ್ಮ ಲಿಂಗಾಂಗ ಸಮರಸಮಂ ಪ್ರಭುದೇವರಿಗೆ ಬಿನ್ನೈಸುವ ಪ್ರಸ್ಥಾವದ ವಚನ ॥

ನೆರೆದೆನು ನೆರೆದೆನು ಎಂಬಡೆ ನಾನೇನು ಎರವೆ? ಶ್ರೀಗುರುಸ್ವಾಮಿ ನಿನ್ನ ಎನ್ನ ಕರಸ್ಥಲದಲ್ಲಿ ಸ್ಥಾಪ್ಯಗೊಳಿಸಿದ ಬಳಿಕ ಮಹಾ ಜ್ಯೋತಿರ್ಮಯದಲ್ಲಿ ತಮ ಉಂಟೆ? ಕಪಿಲಸಿದ್ಧ ಮಲ್ಲಿಕಾರ್ಜುನನೆಂಬ ಮಹಾ ಸಮುದ್ರವನೊದಗೂಡಿದ ಬಳಿಕ ಜೇರೆ ನಾನೊಂದು ನದಿ ಎನಲುಂಟೆ ಪ್ರಭುವೆ?॥೭೦॥

ಮತ್ತಂ॥ ಕರಣಂಗಳ ಕಳೆದು, ಇರವಿನ ಬ್ರಹ್ಮ ನಿಜವಲ್ಲಿ ನಿಂದಿರ್ಪ. ಆತ್ಮ ಸಂಗ ಸಂಯೋಗದ ಇರವು ನಿಮ್ಮಲ್ಲಿ ನಿಜವಾಯಿತ್ತಯ್ಯ. ಕಪಿಲಸಿದ್ಧಮಲ್ಲಿನಾಥಯ್ಯ ನಿಮ್ಮ ಚನ್ನಬಸವಣ್ಣನ ಕೃಪೆ ನಿಮ್ಮಿಂದವಾಯಿತ್ತಯ್ಯ ಪ್ರಭುವೇ ॥೭೧॥

ಹೀಗೆಂದು ಸಿದ್ಧರಾಮಯ್ಯದೇವರು ಬಿನ್ನೈಸಲು ಪ್ರಭುದೇವರು ಲಿಂಗಾಂಗ ಸಮರಸ ಪರಿಣಾಮವ ಸಿದ್ಧರಾಮಯ್ಯ ದೇವರಿಂದೆ ಪೇಳಿಸೆಂದು ನಿರೂಪಿಸಿದ ಪ್ರಸ್ಥಾವದ ವಚನ ॥

ಲಿಂಗವನರಿಯದೆ ಏನನರಿದಡೆಯು ಫಲವಿಲ್ಲ. ಲಿಂಗವನರಿದ ಮೇಲೆ ಮತ್ತೇನನರಿದಡೆಯು ಫಲವಿಲ್ಲ. ಸರ್ವಕಾರಣ ಲಿಂಗವಾಗಿ ಲಿಂಗವನೆ ಅರಿದರಿದು ಲಿಂಗ ಸಂಗವನೆ ಮಾಡುವೆ. ಸಂಗಸುಖದೊಳೋಡಾಡುವೆ ಗುಹೇಶ್ವರಾ ॥೭೨॥

ಹೀಗೆಂದು ಪ್ರಭುದೇವರು ನಿರೂಪಿಸಲು, ಆ ಸಿದ್ಧರಾಮಯ್ಯ ದೇವರು ಪ್ರಭುದೇವರ ಸ್ತೋತ್ರಮಂ ಮಾಡಿದ ಪ್ರಸ್ಥಾವದ ವಚನ ॥

ಭವದ ಬೇರ ಹರಿಯಲ್ಕೆ ಪ್ರಭುವಾಗಿ ಬಂದ. ಮಲತ್ರಯಂಗಳ ಕಡಿಸಲ್ಕೆ ಪ್ರಭುವಾಗಿ ಬಂದ. ಅಜ್ಞಾನರಿಗೆ ಸುಜ್ಞಾನ ತೋರಲ್ಕೆ ಪ್ರಭುವಾಗಿ ಬಂದ. ಕಪಿಲಸಿದ್ಧ ಮಲ್ಲಿಕಾರ್ಜುನಯ್ಯನಾಗಿ, ಎನಗೋಸ್ಕರ ಪ್ರಭುವಾಗಿ ಬಂದಾ ॥೭೩॥

ಹೀಗೆಂದು ಸಿದ್ಧರಾಮಯ್ಯ ದೇವರು ಪ್ರಭುದೇವರ ಸ್ತುತಿಸುತ್ತಿರಲು ಆ ಪ್ರಸ್ಥಾವದಲ್ಲಿ ಚನ್ನಬಸವರಾಜದೇವರು ಸಿದ್ಧರಾಮಯ್ಯ ದೇವರ ಸ್ತೋತ್ರಮಂ ಮಾಡಿದ ಪ್ರಸ್ಥಾವದ ವಚನ ॥

ಷಟ್ಪದಂಗಳು ರಾಗರಾಮಕ್ರೀ॥ ಬೀಜವಿಲ್ಲದ ಸಸಿಗೆ ಸೌಖ್ಯ ರಾಜಿಸುವ ಸುಗಂಧದೊಡಲು ತ್ರೈಜಗಂಗಳನಿಂಬುಗೊಂಡ ಲಿಂಗದೇಹಿ ಶರಣನು ॥ಪ॥

ಆದಿಯಿಂದಲತ್ತತ್ತಲಾದನಾದಿ ಸಂಸಿದ್ಧವನ್ನು ವೇದಂಗಳರಸಿ ಕಾಣಾಗಮಕ್ಕತ್ಯಧಿಕನಾ ॥ ಸಾಧಕಾಂಗಮೊಳಗೈದಿ ಭೇದಿಸಿ ಪರತತ್ವದಿರವಾದಡಮವೆ ಲಿಂಗದಂಗ ಅಂಗಲಿಂಗ ಶರಣನು ॥೧॥

ಪರುಷಸೋಂಕಿನಿಂದ ಲೋಹ ಪರುಷವಾದುದೆಂಬ ಶಬ್ದವರುರೂಪುರಸುಗಂಧವೆರಸಿದರ್ಪಿತಂಗಳ ॥ ಪರಶಿವನೊಳು ಬೆರಸಿ ಪರತತ್ವತೀರ್ಥವಾದ ಬಳಿಕ ಶರಣ ಭರಿತಲಿಂಗವೊ, ಲಿಂಗ ಭರಿತ ಶರಣನೊ ॥೨॥

ಅಂಗ ಲಿಂಗ ಸಂಗ ಸಂಚ ಹಿಂಗೆ ಕಂಗಳಂಗದಲ್ಲಿ ಹಿಂಗದಾನೊಳ ಪ್ರತವ ನೆಳಲೊಕ್ಕ ಬಿಂಬವು॥ ಲಿಂಗವೆ ಶರಣಭರಿತ ಶರಣನೆ ಲಿಂಗ ಭರಿತ ಭಂಗ ಕೂಡಲಚನ್ನಸಂಗ ನಿಮ್ಮ ಶರಣನು. ॥೩॥

ಇಂತು ಚನ್ನಬಸವರಾಜ ದೇವರು ಸಿದ್ಧರಾಮಯ್ಯ ದೇವರ ಸ್ತುತಿ ಸುತ್ತಿರಲು, ಆ ಸಿದ್ಧರಾಮಯ್ಯ ದೇವರು ಚನ್ನಬಸವರಾಜ ದೇವರಕೊಂಡಾಡುವ ಪ್ರಸ್ಥಾವದ ವಚನ॥

ಕರಂಗಳೇ ಮನೆಯಾಗಿ, ಕರಂಗಳೆ ಕರಂಗಳಾಗಿ ಅರ್ಪಿಸುವ ಭೇದವನಾರು ಬಲ್ಲರಯ್ಯ, ಚನ್ನಬಸಣ್ಣನಲ್ಲದೆ? ತನು ಪ್ರಾಣ ಇಷ್ಟಲಿಂಗ ಸಂಬಂಧಿಯಾಗಿ ಇಂದ್ರಿಯಂಗಳೈದು ಮುಖಂಗಳಾಗಿ ಅರ್ಪಿಸುವ ಭೇದವನಾರುಬಲ್ಲರಯ್ಯ ಚನ್ನಬಸವಣ್ಣನಲ್ಲದೆ? ಆನಂದಸ್ಥಾನ ಚನುಮಿಷಾಕ್ಷಿರವ ಸಂಯೋಗವ ಅರ್ಪಣದ ಪ್ರಸಾದವ ಭೇದವ ಕಪಿಲ ಸಿದ್ಧಮಲ್ಲಿಕಾರ್ಜುನಯ್ಯನಲ್ಲಿ ಚನ್ನಬಸವಣ್ಣ ಬಲ್ಲ. ವಿಶ್ವಿನವಂಗಸಾಧ್ಯವಂಟೆ ನೆಂಬೆ ॥೨೭॥

ಮತ್ತಂ॥ ಭಕ್ತಿವಿಡಿದು ಭಕ್ತನಾವ ಪ್ರಸಾದಿ. ಮೋಕ್ಷವಿಡಿದು ಧೈರ್ಯವಿಡಿಮು ಆ ಭಕ್ತಂಗೆ ಮಹೇಶ್ವರನಾವ ಪ್ರಸಾದಿ. ಕಾರಣವಿಡಿದು ಅವಧಾನ ತಪ್ಪದೆ ಆ ಭಕ್ತಂಗೆ ಪ್ರಸಾದಿಯಾದ ಪ್ರಸಾದಿ. ಕರ್ಮರಹಿತನಾಗಿ ಕಾಲ ಕಲ್ಪಿತವಿಲ್ಲದ ಆ ಭಕ್ತಂಗೆ ಪ್ರಾಣಲಿಂಗಿಯಾದ ಪ್ರಸಾದಿ. ಪತಿಭಕ್ತಿವಿಡಿದು ಧರ್ಮಾರ್ಥ ಕಾಮ ಮೋಕ್ಷಂಗಳಾಸೆ ನಿವೃತ್ತಿಯಂ ಮಾಡಿದ ಆ ಭಕ್ತಂಗೆ ಶರಣನಾದ ಪ್ರಸಾದಿ. ಈ ಉಭಯ ಸಮರಸ ಏಕವೆಂದು ತಿಳಿದು ಉಭಯ ಭಾವ ಉರಿ ಕರ್ಪೂರಸಂಯೋಗವಾದ ಆ ಭಕ್ತಂಗೆ ಐಕ್ಯನಾದ ಪ್ರಸಾದಿ. ಸಮ್ಮ ಕಪಿಲಸಿದ್ಧಮಲ್ಲಿನಾಥನಲ್ಲಿ ಸರ್ವಕ್ಕೆ ಚೈತನ್ಯನಾದ ನಮ್ಮ ಚನ್ನ ಬಸವಣ್ಣನೆಂಬ ಅಚ್ಚಪ್ರಸಾದಿ ॥೭೮॥

ಇಂತು ಸಿದ್ಧರಾಮಯ್ಯ ದೇವರು ಚನ್ನಬಸವರಾಜದೇವರ ಸ್ತೋತ್ರವಂ ಮಾಡುತ್ತಿರಲು, ಪ್ರಭುದೇವರು ಸಿದ್ಧರಾಮಯ್ಯ ದೇವರಿಂದ ಮುಡಿನಾಗನೆಂಬ ಪರಬ್ರಹ್ಮವ ಕಂಡು ಒಡವೆರಸಿ ಬೆರಸಿ ನಿರವಯಲಾದೆನೆಂದು ನಿರೂಪಿಸಿದ ವಚನ ॥

ಹಲವು ಮಕ್ಕಳ ತಾಯಂತೆ ಹೇಸದವರನಾರೈವ ತನು ಸಮರ್ಥವಿನಗಲ್ಲದೆ, ಇನ್ನಾರಿಗೆ ಅಳವಡವುದು? ಮುನ್ನಾರಿಗೆ ಅಳವಡದು. ಇನ್ನು

ನಿಮ್ಮವನು ತಿಳಿಯಲು ಮುನ್ನಿನ ಸುಕೃತ ಬಂಟಾಗಿ ನಿಮ್ಮ ಪಾದ ತೋರಿಕೊಂಡಿತ್ತು. ಇನ್ನು ನಮ್ಮ ನಿಲೆಯ ಬಿಡದೆ ಎನ್ನವನುನಿಸೆಂದು ವಿವರಿಸಿ ಎನ್ನ ನಿನ್ನತ್ತ ತೆಗೆ ಕರುಣಿಸಿ. ಎನ್ನ ಮಾತಾಪಿತ ಮಹೇಶ್ವರ ನಿಮ್ಮ ಶರಣ ಮಡಿವಾಳಮಾಚಯ್ಯನಿಂದ ಬಯಲಾದೆನು. ಮುಕ್ತನಾದೆನು ನಿಮ್ಮ ಕರುಣದಿಂದಾ ॥೭೯॥

ಇದಕ್ಕೆ ಮಡಿವಾಳಮಾಚಿ ತಂದೆಗಳು ಬಸವಣ್ಣ ಚನ್ನಬಸವಣ್ಣ ಪ್ರಭುದೇವರಿಂದ ಬದುಕಿದೆನೆಂದು ವಿನ್ನೈಸುವ ಪ್ರಸ್ಥಾವದ ವಚನ ॥

ಬಸವಣ್ಣ ಎಂದರೆ, ಚನ್ನಬಸವಣ್ಣ ಎಂದರೆ, ಪ್ರಭುದೇವ ಎಂದರೆ, ಮಹಾದೇವ ಎಂದರೆ, ಮಹಾಸ್ಥಾನದಲ್ಲರ್ಮ ಕಾಡಿಡೆ ಓ ಎನುತಿರ್ಪೆ ಣಾ ಕಲಿದೇವರದೇವಾ ॥೮೦॥

ಇದಕ್ಕೆ ಚನ್ನಬಸವರಾಜದೇವರು ನಿರೂಪಿಸಿದ ಪ್ರಸ್ಥಾನದ ವಚನ॥ ಳಕಾರವೆ ಶೂನ್ಯ., ಬಿಂದುವೆ ಲೀಲೆ, ಗಕಾರವೆ ಚಿತ್ತು. ಈ ತ್ರಿವಿಧವೊಂಗ ಲಿಂಗವೆಂಬ ಸಕೀಲು. ಇದರ ಸಂಚವನಾವಾತ ಬಲ್ಲ ಆತನೆ ಲಿಂಗ ಸಂಗ. ಲಿಂಗಾನುಭಾವಿಗ ಶ್ರೀ ಚರಣಕ್ಕೆ ನಮೋ ನಮೋ ಎಂಬೆ ಕೂಡಲ ಚನ್ನಸಂಗಮದೇವಾ ॥೮೧॥

ಇದಕ್ಕೆ ಸಿದ್ಧರಾಮಯ್ಯ ದೇವರ ವಚನ॥ ಮೂರುಲಿಂಗಕ್ಕೆ ಮೂಲ ಮಂತ್ರವಾದಾತ ಗುರು. ಮೂರು ವಿದ್ಯಕ್ಕೆ ವಿದ್ಯರೂಪವಾದಾತ ಗುರು. ಹೊದ್ದಿದ ಪ್ರಪಂಚವನತಿಗಳೆದು ರೂಪಿಂಗೆ ರೂಪಾದಾತ ಗುರು. ಲೋಕತ್ರಯಕ್ಕೆ ಕಪಿಲ ಸಿದ್ಧ ಮಲ್ಲಿಕಾರ್ಜುನಯ್ಯನೆ ಗುರು ॥೮೨॥

ಮತ್ತಂ॥ ಆಯಿದು ಬ್ರಹ್ಮದಲ್ಲಿ ಅಯ್ಯ ನೀನು ಅತಿಶಯ ಜ್ಯೋತಿರ್ಮಯನು. ಆನಂದ ಸ್ಥಾನದಲ್ಲಿ ಅಯ್ಯ ನೀನು ಅತಿಶಯ ನಿತ್ಯಮಯನು. ಬಾಹ್ಯಾಭ್ಯಂತರದಲ್ಲಿ ಪರಿಪೂರ್ಣನು ನಿನ್ನ ಆದಿ ಅಂತವನರಿಯಲ್ಕೆ ಸಿಗಮಲ್ಕೆ ಅಭೇದ್ಯ. ಗುರುವಿನ ಕರುಣದಿಂದೆ ಎನ್ನ ಕರಸ್ಥಲಕ್ಕೆ ಸಿಕ್ಕಿ ಒಳಗಾದೆ. ಶಿವನೆ ಮಹಾಲಿಂಗ ಕಪಿಲ ಸಿದ್ಧ ಮಲ್ಲಿಕಾರ್ಜುನ ॥೮೩॥

ಮತ್ತಂ॥ ಭೇದಿಸಬಾರದೆ ಇಪ್ಪ ಅಭೇದ್ಯ ಶಿವನೆ ನಿನ್ನ ಭೇದಿಸಿ ತಂದುಕೊಟ್ಟನೆನ್ನಯ ಗುರು; ಇನ್ನ ನಾ ನಿನ್ನ ಬಿಡುವೆನೆ? ಬಿಡೆ, ಬಿಡೆ.

ಮಚ್ಚಿದೆ. ಪಾದೋದಕವ ನಚ್ಚಿದೆ, ಪ್ರಸಾದವ ಗುರುವೆ ಕಪಿಲಸಿದ್ಧಮಲ್ಲಿ
ಕಾರ್ಜುನ ॥೪೪॥

ಇವಕ್ಕೆ ಬಸವರಾಜದೇವರು ಸಿದ್ಧರಾಮಯ್ಯ ದೇವರ ಮುದ್ರಾ
ತ್ಮೆಯಂ ಕೊಂಡಾಡಿಪ ಪ್ರಸ್ಥಾವನ ವಚನ॥

ಅಡಿಗಡಿಗೆ ಸ್ಥಾನನಿಧಿ. ಅಡಿಗಡಿಗೆ ದಿವ್ಯಕ್ಷೇತ್ರ. ಅಡಿಗಡಿಗೆ ನಿಧಿಯು
ನಿಧಾನವು ನೋಡಾ! ಆತನ ಇರವೆ ವಾರಣಾಸಿ, ಅವಿಮುಕ್ತಕ್ಷೇತ್ರ
ಕೂಡಲಸಂಗನ ಶರಣ ಸ್ವತಂತ್ರನಾಗಿ ॥೪೫॥

ಇವಕ್ಕೆ ಸಿದ್ಧರಾಮಯ್ಯದೇವರು ಬಸವರಾಜದೇವರ ಕೊಂಡಾ
ಡಿವ ಪ್ರಸ್ತಾವನ ವಚನ ॥

ಸೀಮೆ ಸಂಬಂಧಕ್ಕೆ ಮೀರಿಪ್ಪ ಮಂತ್ರಕ್ಕೆ ರಾಜಮಂತ್ರವು ತಾನು
ಪಂಚಾಕ್ಷರಿ. ಪಂಚಾಕ್ಷರಿ ಗುಣದ ಬಸವಕ್ಷರತ್ರಯದ ಧ್ಯಾನ ಮೌನದ
ಗುಣದ ಸತ್ವವಿಡಿದು, ಆನಂದ ತ್ರಿಲಿಂಗ ಮೂಲ ಮಂತ್ರಕ್ಕೀಗ ಬಸವಾ
ಕ್ಷರವು ಮಾತೆಯಯ್ಯ ಕಪಿಲಸಿದ್ಧಮಲ್ಲಿಕಾರ್ಜುನ ॥೪೬॥

ಮತ್ತಂ॥ ದೆಸೆದಿಗ್ವಳಯದಲ್ಲಿ ಪಸರಿಪ ಬಿತ್ತು ನಿನ್ನ ನಾಮ. ವಸುಧೆ
ಎಲ್ಲವು ಹೆಣ್ಣು ನೀನೆ ಗಂಡು. ನೀನೆ ಬಸವಾಕ್ಷರತ್ರಯದಿಂದುದ್ಭವಿಸಿ ಸಕಲ
ಬ್ರಹ್ಮಾಂಡಗಳಾದವಯ್ಯ ಕಪಿಲಸಿದ್ಧಮಲ್ಲಿಕಾರ್ಜುನ ॥೪೭॥

ಮತ್ತಂ॥ ಮುನ್ನ ಮುನ್ನ ಶಶಿ ರವಿಗಳಿಲ್ಲದ ಮುನ್ನ, ಬ್ರಹ್ಮ ವಿಷ್ಣು
ಗಳುದ್ಭವಿಸಿದ ಮುನ್ನ ಮುನ್ನ, ಮೂರ್ತಿಗಳೆಂಟು ಒಂದಾಗದ ಮುನ್ನ
ತನು ಮಧ್ಯವಳಯವಲ್ಲಿ ಸಕಲ ಬ್ರಹ್ಮಾಂಡ ಜಲಮಯವಾಗಿಪ್ಪಲ್ಲಿ ಭಕ್ತಿ
ಕಾರಣ ಬಸವನನವಗ್ರಹಿಸಿಪ್ಪಲ್ಲಿ ಅದೆತ್ತಲಿದ್ದೆ? ನೀನೆ ಬಲ್ಲೆಯಯ್ಯ ಕಪಿಲ
ಸಿದ್ಧಮಲ್ಲಿಕಾರ್ಜುನಯ್ಯ ಕುರುಹುಗೆಟ್ಟ ನಿಶ್ಚಿಂತನು ॥೪೮॥

ಮತ್ತಂ॥ ಇಂದ್ರಾದಿ ದೇವತಾ ಸಂಕುಳಕ್ಕೆ ಅಂತಪ್ಪ ಪದವನಿತ್ತಾತ
ಬಸವಣ್ಣನಯ್ಯ. ಬ್ರಹ್ಮ ವಿಷ್ಣು ಮೊದಲಾದ ದೇವತಾಮಾತ್ರಕ್ಕೆ ಅಂತಪ್ಪ
ಪದವನಿತ್ತಾತ ಬಸವಣ್ಣನಯ್ಯ. ಶಿವಲಿಂಗ ಭಕ್ತರಿಗೆ ಜಂಗಮಲಿಂಗದಾಚರ
ಣೆಯ ಪರಿಯಾಯದಿಂದ ಲೊರೆದಾತ ಗುರು. ಇಹಲೋಕ ಪರಲೋಕವನು
ಮಿಹದ ಸುದ್ದಿಯನರಿದಾತ ಗುರು ಬಸವಣ್ಣ ನೀನಯ್ಯ ಕಪಿಲಸಿದ್ಧಮಲ್ಲಿ
ಕಾರ್ಜುನಯ್ಯ ॥೪೯॥

ಮತ್ತಂ॥ ಪ್ರಸಾದವೈದರ ಪಾದೋದಕ ಎರಡೈದರ ಆದಿ ಅಕ್ಷರವಲ್ಲಿ
ದೀಕ್ಷಾತ್ರಯವು ನಾದದಿಂದವೆ ತೂಗಿ, ಬಿಂದು ಸಮರಸದಿಂದೀಗ ಆಧಾರ

ಸ್ಥಾನಕ್ಕೆ ಅತ್ಯತಿಷ್ಠ ಮೂಲ ಸ್ಥಾನದಲ್ಲಿರ್ದ ಮುನ್ನೂರು ಕಮಲಕ್ಕೆ
ಅಧಿಪ್ಪಮರನು ಬಸವ ಕಪಿಲಸಿದ್ಧಮಲ್ಲಿಕಾರ್ಜುನಯ್ಯ ॥೫೦॥

ಮತ್ತಂ॥ ಅಣ್ಣನ ನೋಡಿರೆ. ಲೋಕಕ್ಕೆ ಜಗದ ಕಣ್ಣನುದವ ಕಳಿ
ಪು ಮುಕ್ಕಣ್ಣ ನಿಪ್ಪೆದೆಯ ತೋರಿವ ಅಣ್ಣ ಬಸವಣ್ಣ. ವಾಙ್ಮನಕ್ಕ
ಗೋಚರ ಮುಕ್ಕಣ್ಣನವತಾರಂಗಳನು ನಾಟಕವೆಂದರಿದು ಮೆರೆದ ಸತ್ಯಶುದ್ಧ
ಮ್ಮಗಳ ಕೈವಲ್ಯ ವಾಙ್ಮನಕ್ಕಗೋಚರ ಸತ್ಯಶುದ್ಧ ಬಸವಣ್ಣ ಅಣ್ಣ
ಮ್ಮಂದ ಶುದ್ಧವಕಂಡೆ. ಸಿದ್ಧವಕಂಡೆ. ಪ್ರಸಿದ್ಧವಕಂಡೆ. ಆಧಾರದಲಿ
ಮುದೋಕವಾವೆ. ಆರು ವ್ರತವನ್ಲಿ ನಿಸ್ಸಾನಾವೆ. ನಿನೊಂದು ಮೂರಾವೆ.
ಮೂಕೊಂದಾಗಿ ತೋರಿವ ಗುಣವಿಂತುಟಯ್ಯ. ಬಸವಣ್ಣ ಇನ್ನೆನಗಾಧಿಕ್ಯ
ವಪ್ಪದೊಂದಿಲ್ಲ. ನಾ ನಿಮ್ಮ ಉರವಣಿಸಿ ಹರಿವೆ. ಹರಿದು ಭರದಿಂದ ಗೆಲಿವೆ
ತತ್ವ ಮೂವತ್ತಾರರಿಂ ಮೇಲೆ ಒಪ್ಪಿಪ್ಪ ತತ್ವ ಮಸಿಯನ್ಹೈದುವೆ. ಕಪಿಲ
ಸಿದ್ಧಮಲ್ಲಿಕಾರ್ಜುನಯ್ಯ ಎನಗರಿದಿಪ್ಪುದಿಲ್ಲ ಕಾಣಾ ಪ್ರಭುವೆ, ಬಸವ
ಪ್ರಸಾದದಿಂದ ॥೫೧॥

ಮತ್ತಂ॥ ಲೋಕಲೌಕಿಂಗಳೆಲ್ಲವು ನೀವು ಕೇಳಿರೆ. ಏಕೈಕ ರುದ್ರನವ
ತಾರವನರಿದೆವೆಂಬಿರಿ. ನೋಡಿ ನಚ್ಚಿರೆ ಶಿವನ. ಶಿವನು ಬಸವಣ್ಣನಾದ
ನೋಡಿರೆ. ಬಸವಣ್ಣ ಗುರುವಾದ. ಬಸವಣ್ಣ ಲಿಂಗವಾದ. ಬಸವಣ್ಣ ಚರ
ವಾದ. ಬಸವಣ್ಣ ಪರಿಣಾಮ ಪ್ರಸನ್ನಪರವಾದ. ಬಸವಣ್ಣ ಮೂಲಮಂತ್ರ
ವಾದ. ಬಸವಣ್ಣ ಭಕ್ತಿ ಎರಡು ತ್ರಯವಾದ ಬಸವಣ್ಣ ಅದರಿಂ ಮೇಲೆ
ತೋರಿದ. ಕಪಿಲಸಿದ್ಧಮಲ್ಲಿಕಾರ್ಜುನಯ್ಯ ಬಸವಣ್ಣನ ಪ್ರಸಾದವ ಕೊಂಡು
ಭವಂ ನಾಸ್ತಿಯಾದೆ ॥೫೨॥

ಸೀಮೆಯ ಮೀರಿದ ಸಂಬಂಧನೆ. ಸಂಬಂಧದಲ್ಲಿ ಸಮನಿಸದ ಸಂಯೋ
ಗನೆ, ಎನ್ನ ಸಲಹುವ ಗುರುಲಿಂಗಜಂಗವು ಪಾದೋದಕ ಪ್ರಸಾದಕ್ಕೆ
ಕರ್ಪನ ಮಾಡಿದೆ. ಗುರುವೆ ಕಪಿಲಸಿದ್ಧಮಲ್ಲಿಕಾರ್ಜುನಯ್ಯ ನೀ ಬಸವ
ನಾಗಿ ಬಂದು ನಿಮ್ಮವರಿಗೆ ಯೋಗ್ಯನ ಮಾಡಿದೆ, ಭವವ ತಪ್ಪಿಸಿದೆ ॥೫೩॥

ಮತ್ತಂ॥ ಗುರುವಾಗಿ ಬಂದೆನಗೆ ದೀಕ್ಷೆಯ ಮಾಡಿದಿರಿ. ಲಿಂಗ
ವಾಗಿ ಬಂದೆನ್ನ ಮನದ ಮಲಿನವ ತೊಳೆದಿರಿ. ಜಂಗಮನಾಗಿ ಬಂದು
ಪ್ರಸಂಚುಕತನುವ ಕಳೆದು ಪರಮ ಸೀಮೆಯ ಮಾಡಿದಿರಿ. ಇಂತೀ
ತ್ರಿವಿಧವು ಬಸವಣ್ಣನಾಗಿ ಎನಗೆ ಪ್ರಸಾದವ ನೀಡಿ ಸಲಹಿದ ಕಪಿಲಸಿ
ದ್ಧಮಲ್ಲಿಕಾರ್ಜುನ ಇನ್ನೆನಗತಿಶಯವೇನು ಇಲ್ಲ ॥೫೪॥

ಅರ್ಪಿತ ಅವಧಾನ ಮುಖಂಗಳು ಎಲ್ಲರಿಗೆ ಸುಲಭವೆ, ಅನಾದಿ ಸಂಸಿದ್ಧವಾಗಿ ಬಂದ ಬಸವಣ್ಣಂಗಲ್ಲವೆ? ತ್ರಿಲಿಂಗ ಮೂಲಕ್ಕೆ ಮಂತ್ರಾದಿ ರೂಪು ಬಸವಣ್ಣ. ಲಿಂಗ ಪ್ರಸಾದಕ್ಕರ್ಹ ಬಸವಣ್ಣ. ಮೂರು ಲಿಂಗ ಒಂದಾದ ಮೂರ್ತಿ ಬಸವಣ್ಣ. ಕಪಿಲಸಿದ್ಧಮಲ್ಲಿಕಾರ್ಜುನಯ್ಯ ನಿ ಸಾಕ್ಷಿಯಾಗಿ ಬಸವನ ನೆನೆವರು ನೀನಹರು ॥೯॥

ಮತ್ತಂ॥ ಪ್ರಥಮ ನಾಮಕ್ಕೀಗ ಬಸವಾಕ್ಷರವೆ ಬೀಜ. ಗುರು ನಾಮ ಮೂಲಕ್ಕೆ ಅಕ್ಷರಾಂಕ ಬಸವಣ್ಣ. ಬಸವಣ್ಣ, ಬಸವಣ್ಣ, ಬಸವಣ್ಣ ಎಂದೀಗ ದಸೆಗೆಟ್ಟಿನಯ್ಯ ಗುರುವೆ ಕಪಿಲಸಿದ್ಧಮಲ್ಲಿಕಾರ್ಜುನ ॥೯॥

ಮತ್ತಂ॥ ಆದಿ ಆಧಾರಕ್ಕೆ ಮೂಲ ತಾ ಬಸವಣ್ಣ. ಹೋದನಯ್ಯ ಭಕ್ತಿಯೊಳಗೆ ಕೊಲಬುದಪ್ಪಿ. ಊರನರಿಯದ ಗ್ರಾಮ ಹೊಲಬುದಪ್ಪಿವೆ ಸೀಮೆ ಆತನನುಮತದಿಂದೆ ನೀನಾದೆನಯ್ಯ ಬಸವಣ್ಣ. ಬಸವಣ್ಣ ಬಸವಣ್ಣ ಎಂಬ ನಾಮಾಕ್ಷರದೊಳಗೆ ದಸೆಗೆಟ್ಟಿನಯ್ಯ ಗುರುವೇ ಕಪಿಲಸಿದ್ಧಮಲ್ಲಿಕಾರ್ಜುನಾ. ॥೯॥

ಇಂತು ಸಿದ್ಧರಾಮಯ್ಯದೇವರು ಬಸವರಾಜದೇವರ ಕೊಂಡಾಡುತ್ತಿರಲು, ಇದಕ್ಕೆ ಚನ್ನಬಸವರಾಜದೇವರು ಸಿದ್ಧರಾಮಯ್ಯದೇವರು ಮುಖ್ಯವಾದ ಅಸಂಖ್ಯಾತ ಮಹಾ ಗಣಂಗಳ ಅನುಭಾವ ಸಂಸರ್ಕದಿಂದೆ ತ್ರಿವಿಧ ಸಾಧ್ಯವಾಯಿತ್ತೆಂದು ನಿರೂಪಿಸಿದ ಪ್ರಸ್ತಾವದ ವಚನ॥

ಅನಂತಕಾಲ ಹೋಗಿ ತರುಮರಾದಿಗಳಲ್ಲಿ, ತಪಸಿರುವದನು ಒಂದು ದಿನ ಗುರುಚರಣ ಸೇವೆ ಸಾಲದೆ ಅಯ್ಯ? ಅನಂತ ಕಾಲ ಗುರು ಚರಣ ಸೇವೆ ಮಾಡುವುದು ಒಂದು ದಿನ ಲಿಂಗಪೂಜೆ ಸಾಲದೆ ಅಯ್ಯ? ಅನಂತಕಾಲ ಲಿಂಗಪೂಜೆಯ ಮಾಡುವದನು ಒಂದುದಿನ ಜಂಗಮ ತೃಪ್ತಿ ಸಾಲದೆ ಅಯ್ಯ? ಅನಂತಕಾಲ ಜಂಗಮತೃಪ್ತಿ ಮಾಡುವುದನು ಒಂದು ನಿಮಿಷ ನಿಮ್ಮ ಶರಣರ ಅನುಭಾವ ಸಾಲದೆ ಕೂಡಲ ಚನ್ನ ಸಂಗಮದೇವಾ? ॥೯೮॥

ಇವಕ್ಕೆ ಸಿದ್ಧರಾಮಯ್ಯದೇವರು ಚನ್ನ ಬಸವಣ್ಣ ಮುಖ್ಯವಾದ ಅಸಂಖ್ಯಾತ ಮಹಾ ಗಣಂಗಳಿಂದ ಸರ್ವವೂ ಸಾಧ್ಯವಾಯಿತ್ತೆಂದು ಬಿನ್ನಪಿಸುವ ಪ್ರಸ್ತಾವದ ವಚನ॥

ಶುದ್ಧಸಿದ್ಧ ಪ್ರಸಿದ್ಧದ ನೆಲೆಯನರದಿಹೆನೆಂದು ತೊಳಲಿ ಬಂದೆ. ಗಿರಿ ಗಂಹರದೊಳಗೆ ಕಂಡೆ. ಕಾಣೆನೆಂಬ ಸಂಯವಾಯಿತ್ತು. ಅದೇನುಕಾರಣ?

ಸಿದ್ಧರ ಗಣಸಮೂಹಕ್ಕೆ ತಾತ್ಪರ್ಯದವರಲ್ಲವಾಗಿ. ನೀನು ಸಪ್ತಕ ಪ್ರಸಾದಿಕನಾಗಿ ಸಪ್ತಕ್ಕರಲ್ಲಿ ಒಚ್ಚತವೋಗಿ ಇಪ್ಪೆಯಾಗಿ. ಇಪ್ಪ ಗಿರಿಗಂಹರ ದಲ್ಲಿ ಗುರುವಿನ ಕರುಣದಿಂದೆ ಕಂಡೆ ನೀನಿಪ್ಪ ನೆಲೆಯಯ್ಯ. ಶುದ್ಧವು ಸಿದ್ಧವಿನಲ್ಲಿ ಸಿದ್ಧವು ಲಿಂಗದಲ್ಲಿ ಪ್ರಸಿದ್ಧವು ಜಂಗಮದಲ್ಲಿ ಕಂಡೆ. ಅರಿವೆ, ಮರೆವೆ, ಮಚ್ಚಿದೆ. ಎನ್ನ ಸರ್ವ ಸ್ವಾಯತವನೊಚ್ಚತಗೊಟ್ಟಿ. ನಿನ್ನ ಗಣಸಮೂಹಕ್ಕೆ ಪ್ರಾಪ್ತನಾದೆ. ನಿನ್ನ ಭಕ್ತರ ಸಲುಗೆಗೆ ಸಂದ ಕಪಿಲ ಸಿದ್ಧಮಲ್ಲಿಕಾರ್ಜುನತಂದೆ ॥೯೯॥

ಮತ್ತಂ॥ ಸೋಹಂ ನೀನೆ. ಎಲೆ ಅಯ್ಯ ಕೋಹಂ ತತ್ಪ ತೂರ್ಯ ಪ್ರವು ನೀನೆ ಅಯ್ಯ ನಾಹಂ ನಾಹಂ ನೀನೆ ಅಯ್ಯ. ಆನೆಂಬುದೊಂದು ಪ್ರಾಂತು ಉಂಟೆ? ಕಪಿಲಸಿದ್ಧಮಲ್ಲಿಕಾರ್ಜುನಯ್ಯ ಗುರುವಿನ ಕೈಯ್ಯಲು ನಾನು ಸತ್ತು ಹುಟ್ಟಿದ ಬಳಿಕ ಆನು ನೀನೆಂಬ ಸಂದಳಿದೆ ॥೧೦೦॥

ಇವಕ್ಕೆ ಪ್ರಭುದೇವರು ಪರಮ ಹರುಷವನೈದಿ ನಿರೂಪಿಸಿದ ಪ್ರಸ್ತಾವ ವಚನ॥

ಪರಿಣಾಮದೊಳಗೆ ಮನದ ಪರಿಣಾಮವೆ ಚಲುವು. ಸಂಗದೊಳಗೆ ಗುಣದ ಸಂಗವೆ ಚಲುವು. ಕಾಯಗೊಂಡು ಹುಟ್ಟಿದಮೂಢರೆಲ್ಲ ಸಾಯದ ಸಂಜವನರಿವುದೆ ಚಲುವು ಗುಹೇಶ್ವರಾ ॥೧೦೧॥

ಇದಕ್ಕೆ ಸಿದ್ಧರಾಮಯ್ಯದೇವರು ಹರುಷಂವಳೆದು ಚನ್ನಬಸವರಾಜದೇವರೊಡನೆ ಪ್ರಭುದೇವರ ಸ್ತೋತ್ರಮುಂ ಮಾಡುವ ಪ್ರಸ್ತಾವದ ವಚನ॥

ಅಂಗಯ್ಯ ನೋಟಮೊಳು ಕಂಗಳು ನಟ್ಟು ಕಂಗಳ ತೇಜ ಹಿಂಗದು. ಲಿಂಗಸ್ರಭೆಯೊಳಗೆ ಅಂಗವೆಲ್ಲ ಲೀಯ್ಯವಾಗಿ ಸಂಗ ನಿಸ್ಸಂಗವೆಂಬ ದಂದುಗವ ಹರಿದು, ಹಿಂದು ಮುಂದೆಂಬ ಭಾವವಳಿದು ನಿಂದ ನಿಜದಲ್ಲಿ ನಿರಾಳದಲ್ಲಿ ಪ್ರಾಣ ಸಮರತಿಯಾಗಿ ಕಪಿಲಸಿದ್ಧಮಲ್ಲಿಕಾರ್ಜುನನಲ್ಲಿ ಪ್ರಭುದೇವರ ಪಾದಕ್ಕೆ ನವೋ ನವೋ ಎಂದು ಬದುಕಿದೆನು ಕಾಣಾ ಚನ್ನಬಸವಣ್ಣಾ ॥೧೦೨॥

ಇದಕ್ಕೆ ಚನ್ನಬಸವರಾಜದೇವರು ಸಿದ್ಧರಾಮಯ್ಯದೇವರೊಡನೆ ಪ್ರಭುದೇವರ ಸ್ತೋತ್ರಮುಂ ಮಾಡಿದ ಪ್ರಸ್ತಾವದ ವಚನ॥

ಕಾಯವೆಂಬ ಕನ್ನಡವಿಲ್ಲ. ಪ್ರಾಣವಿಲ್ಲಾಗಿ. ಮನವೆಂಬ ನೆನಹಿಲ್ಲ ಅನುಭಾವವಿಲ್ಲವಾಗಿ. ಅರಿವೆಂಬ ಕುರುಹಿಲ್ಲ, ಪ್ರತಿಇಲ್ಲವಾಗಿ. ಕೂಡಲ

ಚನ್ನಸಂಗಮದೇವರಲ್ಲಿ ಪ್ರಭುದೇವರ ಪಾದಕ್ಕೆ ನಮೋ ನಮೋ ಎಂದು ಬದುಕಿದೆನು ಕಾಣಾ ಸಿದ್ಧರಾಮಯ್ಯ ॥೧೦೩॥

ಇವಕ್ಕೆ ಪ್ರಭುದೇವರು ಚಿಕ್ಕದಣ್ಣಾಯಕರ ಸ್ತೋತ್ರಮಂ ಮಾಡುವ ಪ್ರಸ್ತಾವದ ವಚನ ॥

ಗಗನ ಪವನದ ಮೇಲೆ ಉಭಯ ಮುಖವನುಭಾವ ಸದನ್ಯಾಗದಲ್ಲಿ ನಿಲಿಸುವ ಮಾವತಿಗ ಬಂದ. ಅಪ್ಪುದಳ ಕಮಲದೊಳು ಸೃಷ್ಟಿಯಂಕುರದ ಬೀಜನ ಮೆಟ್ಟಿ ನಿಂತಾತ ಪರಮಯೋಗಿಯಾಗದೆ ಮಾಣ. ಬಯಲ ಬಣ್ಣಕ್ಕೆ ತಂದು ನೆಳಲ ಶೃಂಗಾರವ ಮಾಡಿದ ಗುಹೇಶ್ವರನ ಶರಣ ಚನ್ನಬಸವಣ್ಣಂಗೆ ಶರಣೆನುತಿರ್ದೆನು ॥೧೦೪॥

ಹೀಗೆಂದು ಪ್ರಭುದೇವರು ಚಿಕ್ಕದಣ್ಣಾಯಕರ ಸ್ತೋತ್ರಮಂ ಮಾಡುತ್ತಿರಲು, ಸಿದ್ಧರಾಮಯ್ಯದೇವರು ತಾವು ಚಿಕ್ಕದಣ್ಣಾಯಕರ ಸ್ತೋತ್ರಮಂ ಮಾಡುವ ಪ್ರಸ್ತಾವದವಚನ ॥

ವಾಣಿ ನಾಲ್ಕರ ಮೇಲೆ ಮಾಣದೆ ನುಡಿವ ನಿರ್ವಾಣಿಯ ಸಂಭಾಷಣೆಯ ಮಾಡಬಲ್ಲರೆ ನಿರ್ವಾಣ. ವರ್ಣವೇಳರೊಳಗೆ ಪರಿಪೂರ್ಣವಾಗಿಪ್ಪ ಮಹಾವರ್ಣವ ತನ್ಮಯ ಮಾಡಬಲ್ಲರೆ ನಿರ್ವಾಣ. ಸ್ಥಾನ ಹತ್ತರಲ್ಲಿ ಆಸಂದ ಸಿಂಹಾಸನದ ನಾನಾ ಬೆಳಗಿನ ಬೀಜದ ತಿರುಳನನು ಭವಿಸಬಲ್ಲರೆ ಲಿಂಗಾನುಭಾವಿ. ಪ್ರಣಮ ಹತ್ತರಲ್ಲಿ ಧ್ಯಾನ ಚತುಷ್ಟಯ ಕೂಡಿದಲ್ಲಿಯ ಕೀಲ ಬಲ್ಲರೆ ಲಿಂಗೈಕ್ಯ. ಇದು ಕಾರಣ ಕಪಿಲಸಿದ್ಧಮಲ್ಲಿಕಾರ್ಜುನಯ್ಯ ನಿಮ್ಮ ಶರಣ ಚನ್ನಬಸವಣ್ಣನ ಶ್ರೀಪಾದಕ್ಕೆ ನಮೋ ನಮೋ ಎನುತಿರ್ದೆನು ॥೧೦೫॥

ಮತ್ತಂ॥ ಸಿದ್ಧರಾಮಯ್ಯದೇವರು ಬಸವಣ್ಣ ಚನ್ನಬಸವಣ್ಣ ಪ್ರಭುದೇವರು ಮೂವರನು ಕೂಡಿ ಸ್ತೋತ್ರಮಂ ಮಾಡುವ ಪ್ರಸ್ತಾವದವಚನ॥

ಭಕ್ತಿರೂಪು ಬಸವಣ್ಣ. ಕ್ಷಮಾರೂಪು ಬಸವಣ್ಣ. ಗುರುರೂಪು ಚನ್ನಬಸವಣ್ಣ. ಪ್ರಸಾದರೂಪು ಚನ್ನಬಸವಣ್ಣ. ಕಪಿಲಸಿದ್ಧಮಲ್ಲಿಕಾರ್ಜುನಯ್ಯ ಪ್ರಭುವಾಗಿ ಬಂದು ಬಸವಣ್ಣ ಚನ್ನಬಸವಣ್ಣನ ಒಕ್ಕುದ ಕೊಂಡು ಜಂಗಮವಾದನು ॥೧೦೬॥

ಮತ್ತಂ॥ ವರ್ಮವನರಿತು, ಅಯ್ಯ ನಿಮ್ಮ ಕಾಂಬುವರು ಸುಲಭವೆ? ಲೋಕದಲ್ಲಿ ಲಿಂಗಭಕ್ತಿ ಜಂಗಮಭಕ್ತಿ ಗುರುಭಕ್ತಿ ಸುಲಭವೆ? ಲಿಂಗ

ಪ್ರಭುದೇವರು ಜಂಗಮಭಕ್ತ ಬಸವಣ್ಣನು. ಗುರುವೊದಲಾದ ಸರ್ವಕ್ಕೆ ಅನುಭಾವಿ ಚನ್ನಬಸವಣ್ಣ ಕಪಿಲ ಸಿದ್ಧಮಲ್ಲಿಕಾರ್ಜುನಯ್ಯ, ಇಂತಿವರ ಪಾದಕ್ಕೆ ನಮೋ ನಮೋ ಎಂಬೆನು. ॥೧೦೭॥

ಮತ್ತಂ॥ ಸಿದ್ಧರಾಮಯ್ಯ ದೇವರು ಗುರುಸ್ತೋತ್ರಮಂ ಮಾಡುವ ಪ್ರಸ್ತಾವದ ವಚನ॥

ಗುರುವಿನ ಕೃಪೆಯಿಂದ ಸಾಧಾನ ತನುವ ಮರೆದೆ. ಗುರುವಿನ ಕೃಪೆಯಿಂದ ಮೂಲತ್ರಯದ ಪಂಕವ ತೊಳೆದೆ. ಗುರುವಿನ ಕೃಪೆಯಿಂದ ಅಷ್ಟತನುವಿನ ಕಾರಣಾದಿಂದ ಅನುಭಾವಿಯಾದೆ. ಗುರುವಿನ ಕೃಪೆಯಿಂದ ಶುದ್ಧ, ಪ್ರಸಿದ್ಧ, ಪ್ರಮಾಣವನರಿದೆ. ಎನಗಧಿಕವಪ್ಪ ವಸ್ತು ಬೇರೊಂದುಂಟೆ? ಅದೇನು ಕಾರಣ? ಅವ ನಾನಾದೆಯಾಗಿ. ಗುರುವೇ ಎನ್ನ ಭವಿಂಗೆ ಲಿಂಗದೀಕ್ಷೆಯ ಮಾಡಿ, ಎನ್ನ ಜ್ಞಾನಕ್ಕೆ ಸ್ವಾನುಭಾವ ದೀಕ್ಷೆಯ ಮಾಡಿ ಎನ್ನ ತನುಮನಧನವಲ್ಲಿ ಪಂಚನೆ ಇಲ್ಲದೆ ಮಾಡಲೆಂದು ಪ್ರಸಾದದೀಕ್ಷೆಯ ಮಾಡಿ, ಎನ್ನ ಸರ್ವಾಂಗವು ನಿನ್ನ ವಿಶ್ವಾಸ್ಥಾನ ಶುದ್ಧಮಂಟಪವಾದ ಕಾರಣ ಲೋಕ ವ್ಯಾಪ್ತಿಯನರಿಯದೆ ಲೋಕ ಎನ್ನೊಳಗಾಯಿತ್ತು. ಆ ಲೋಕಕ್ಕೆ ಹೊರಗಾದೆನಾಗಿ. ಅದೇನು ಕಾರಣ? ಜನನಮರಣಪ್ರಳಯಕ್ಕೆ ಹೊರಗಾದೆನಾಗಿ. ಗುರುವೆ ಸದುಗತಿ ಎನ್ನ ಭವದ ಬೇರ ಹರಿದ ಗುರುವೆ ಭವಪಾಶ ವಿಮೋಚನ ಜ್ಞಾನಯ ಮನದ ಸರ್ವಾಂಗ ಲೋಲುಪ್ತ ಭುಕ್ತಿ ಮುಕ್ತಿ ಪ್ರದಾಯಕ ಗುರುವೆ ಬಸವಣ್ಣ ಕಪಿಲಸಿದ್ಧಮಲ್ಲಿಕಾರ್ಜುನ ಚನ್ನಬಸವಣ್ಣನಾಗಿ ಮೊದಲಾಗಿ ಅಸಂಖ್ಯಾತರೆಲ್ಲರನು ತೋರಿದ ಗುರುವೆ ॥೧೦೮॥

ಇತಿ ಶ್ರೀಮತ್ಸಕಲ ಗಣ ಪುರಾತನರೊಳ್ ಪ್ರಭುದೇವರು ಮಹಾನುಭಾವ ಸಂಗ್ರಹಿಯಂ ಮಾಡಿದ ಶೂನ್ಯಸಂಪಾದನೆಯೊಳ್ ಸಿದ್ಧರಾಮಯ್ಯದೇವರ ಗುರುಕರುಣಂ ದಶಸೋಪದೇಶಸಮಾಪ್ತ.

The Vijay College
LIBRARY.
VIJAY COLLEGE.

ಪ್ರಭುದೇವರ ಪೂಜಾಸ್ತುತಿ
(ಏಕಾದಶೋಪದೇಶ)

॥ಕಂದ॥ ಪರಮ ಪ್ರಭುದೇವರನು ಬಸ । ವರಸರ ಅಂತರ್ನಿವಾಸಕ್ಕೆ ದಲ್ ಮುದದಿಂ॥ ಶರಣಸಮೂಹಂ ಭಜಿಸಿದ । ಪರಿಯಂ ವಿರಚಿಸುವೆ ಶರಣ ಜನರಹುದೆನಲೂ॥

ಆವೆಂತೆಂದೊಡಾ ಪ್ರಭುದೇವರು ಸಿದ್ಧರಾಮಯ್ಯದೇವರಿಗೆ ಜನ್ನ ಬಸವರಾಜದೇವರಿಂದ ಇಷ್ಟಲಿಂಗೋಪದೇಶಮುಂ ಮಾಡಿಸಿ, ಪರಮ ಹರುಷಿತರಾಗಿ, ಬಸವರಾಜದೇವರಪರಿವಿತದ ಗೃಹಕ್ಕೆ ಬಿಜಯಂಗೈವ ಪ್ರಸ್ತಾವದ ವಚನ॥

ಮನದೊಡೆಯ ಮನೆಗೆ ಬಂದರೆ ಕನಕದ ತೋರಣವ ಕಟ್ಟಿ ಪಡುಸವಮ್ಮಾರ್ಜನೆಯ ಮಾಡಿ ರಂಗವೋಲೆಯನಿಕ್ಕಿ ಉಳ್ಳೇ ಚಾಂಗುಭಲಾ ಎಂಬೆನು. ಕೂಡಲಸಂಗಮದೇವ ನಿಮ್ಮಶರಣ ಪ್ರಭುದೇವರು ಬಂದರೆ ಉಬ್ಬಿ ಕೊಬ್ಬಿ ನಲಿದಾಡುವೆ ॥೧॥

ಇಂತು ಪ್ರಭುದೇವರು ಬಸವರಾಜದೇವರ ಮಠಕ್ಕೆ ಬಿಜಯಂಗೈಯ್ಯಮುತ್ತಿನ ತೋರಣಂಗಳ ಕಟ್ಟಿ ದೇವಾಂಗಮುಂ ನಡೆಮಡಿಯು ಹಾಸಿ ನವರತ್ನಖಚಿತದಿಂದೆಸೆವ ಮೇಲುಕಟ್ಟುಂ ಕಟ್ಟಿ ಪಡುಸವಮ್ಮಾರ್ಜನೆಯುಂ ಮಾಡಿ ರಂಗವೋಲೆಯನಿಕ್ಕಿ ಪಂಚಮಹಾವಾದ್ಯಂಗಳೊಡನೆ ಕಳಸ ಕನ್ನಡಿಯಿಂದಿದಿರ್ಗೊಂಡು ಮುತ್ತು ಮಾಣಿಕ್ಯದಾರತಿಗಳಂ ಪಿಡಿದೆತ್ತಿ ಮಂಗಳಸ್ತಿರದಿಂ ಪಾಡಿ, ಪರಮ ಹರುಷದಿಂದೆ ಆ ಬಸವರಾಜ ದೇವರು ಕೈಗೂಡಿ ಮುಡಿವಾಳಯ್ಯಗಳು ಪಾಯವಧಾರೆಂದುಗ್ಘಡಿಸಿ ಸೊಡ್ಡಳ ಬಾಚರಸರ ತೆಗಲ ಮೇಲೆ ಹಸ್ತಮುಂ ಮಡುಗಿ, ಜನ್ನಬಸವರಾಜದೇವರೊಡನೆ ನಸುನಗೆಯಿಂ ಪ್ರಸಂಗಿಸುತ್ತ ಏಕಾಂತದ ಮಠಕ್ಕೆ ಬಿಜಯಂಗೈದು, ಮೂರ್ತಿಗೊಂಡಿರಲು ಬಸವರಾಜದೇವರು ಪ್ರಭುದೇವರ ಪಾದಾರ್ಚನೆಯಂ ಮಾಡಿದ ಪ್ರಸ್ತಾವದ ವಚನ ॥

ಪರಿಮಿತಕ್ಕೆ ನಡೆತಂದು ಪರುಷದ ಸಿಂಹಾಸನದ ಮೇಲೆ ಪರಮ ಗುರು ಮೂರ್ತಿಗೊಂಡಿರಲು, ಪರಮಾನಂದ ಜಲದಿಂದ ಪಾದಾರ್ಚನೆಯಂ

ಮಾಡಿ ದಿವ್ಯ ಸುಗಂಧಮುಂ ಲೇಪಿಸಿ, ಅಕ್ಷಯವೆಂಬ ಅಕ್ಷತೆಯನ್ನಿಟ್ಟು ಹೃದಯ ಕಮಲದ ಪುಷ್ಪದಿಂದ ಪೂಜೆಯುಂ ಮಾಡಿ, ಸುಜ್ಞಾನವಾಸನೆಯೆಂಬ ಧೂಪಮುಂ ಬೀಸಿ ಭಕ್ತಿಸಾರಾಯವೆಂಬ ನೈವೇದ್ಯಮುಂ ಸಮರ್ಪಿಸಿ ಪರಮ ಹರುಷನನೆ ಮುಜ್ಜನಕ್ಕೆರೆದು ತ್ರಿಕರಣ ಶುದ್ಧವೆಂಬ ತಾಂಬೂಲಮುಂ ಕೊಟ್ಟು ಸಮರಸಸಂಗದಿಂದ ಕೂಡಲಸಂಗನುದೇವರ ಶರಣ ಪ್ರಭುದೇವರ ಕರುಣನೆನಗಾಯಿತ್ತು ॥೨॥

ಆ ಪ್ರಸ್ತಾವದೊಳು ಬಸವರಾಜದೇವರು ನಿವಾಳಯಸಿತ್ತುತ್ತ ಹಾಡಿದ ಪದಂಗಳು ॥

ರಾಗ ಲಲಿತೆ ॥ಪದ॥ ಜಯಜಯ ಶ್ರೀ ಮಹಾದೇವ ಜಯಜಯ ಶ್ರೀಮಹಾದೇವಗೆ ಶರಣೆಂಬುದೆನ್ನ ಮನವು ॥ಪ॥

ಓಂ ಭೂ ಓಂ ಭೂ ಓಂಭಗ ಎನುತಿರ್ಪುದೆನ್ನನುನವು। ಭರ್ಗೋದೇವಸ್ಯ ಧೀಮಹಿ ಶರಣೆಂಬುದೆನ್ನ ಮನವ ॥೧॥

ಯತೋ ವಾಜೋ ನಿವರ್ತಂತೆ। ಅಪ್ರಾಪ್ಯ ಮನಸಾ ಸಹ॥ ತಸ್ಮೈ ಶ್ರೀ ಗುರುಲಿಂಗವೆ ಶರಣೆಂಬುದೆನ್ನ ಮನವು ॥೩॥

ಹರರೂಪಂ ಕಾಯಸಂಬಂಧಂ। ಗುರುರೂಪಂ ಪ್ರಾಣಸಂಯುತಂ ಭಕ್ತರೂಪಾತ್ಮಸಂಬಂಧಂ। ಗುರುಶಿಷ್ಯಸಮಾಗ್ರಪ ಎಂದುದಾಗಿ ॥೪॥

ದೀರ್ಘದಂಡ ನಮಸ್ಕಾರಂ। ನಿರ್ಲಜ್ಜಂ ಗುರುಸನ್ನಿಧೌ। ಶರೀರಮರ್ಥ ಪ್ರಾಣಂ ಚ। ಸದ್ಗುರುಭ್ಯೋ ನಿವೇದಯೆತ್॥ ಎಂದುದಾಗಿ ॥೫॥

ಭವರೋಗ ವೈದ್ಯನೆಂದು ನಂಬುವದೆನ್ನ ಮನವು। ಕೂಡಲ ಸಂಗಮದೇವಂಗೆ ಶರಣೆಂಬುದನ್ನ ಮನವು ॥೬॥

ಇಂತು ಬಸವರಾಜದೇವರು ಪ್ರಭುದೇವರಿಗೆ ಅಷ್ಟ ವಿಧಾರ್ಚನೆ ಷೋಡಶೋಪಚಾರಗಳಿಂ ಅಭಿವಂದಿಸಲು ಅಲ್ಲಿ ಚಿಕ್ಕದಣ್ಣಾಯಕರು ಪ್ರಭುದೇವರಿಗೆ ಶರಣೆಂದು ಪಾದಾರ್ಚನೆಯಂ ಮಾಡಿ, ಪಾದೋದಕಮುಂ ಕೊಂಬ ಪ್ರಸ್ತಾವದ ವಚನ॥

ನಿತ್ಯವೆಂಬ ಭಕ್ತನ ಮನೆಗೆ ಘನಚೈತನ್ಯವೆಂಬ ಜಂಗಮ ಬಂದರೆ ಜಲವಿಲ್ಲದ ಜಲದಲ್ಲಿ ಪಾದಾರ್ಚನೆಯಂ ಮಾಡಿ ಆ ಪಾದೋದಕವೆ ಮಹಾಪಾದೋದಕವಯ್ಯ. "ಸ್ವಚ್ಛಾನಂದ ಜಲಂ ಕೃತ್ವಾ ಪ್ರಕ್ಷಾಲ್ಯ ಚರ

ಣಾಂಬುಕಂ। ತತ್ಪಾದೋದಕಂ ಪೀತ್ವಾ ನಾಂ। ಸಮುಕ್ತೋ ನಾತ್ರಸಂಶಯಂ। ಇಂತೆಂಬುದಾಗಿ, ಆ ಪಾದೋದಕವ ಕೊಂಡು ಪರಿಣಾಮಿಸಿದೆನಯ್ಯ ಕೂಡಲಚನ್ನಸಂಗಮದೇವಾ ॥೮॥

ಮತ್ತಂ॥ ಚಿಕ್ಕದಣ್ಣಾಯಕರು ಅಷ್ಟವಿಧಾರ್ಚನೆಯಂ ಮಾಡುವ ಪ್ರಸ್ತಾವದ ವಚನ ॥

ಅಂಗದ ಮೇಲೆ ಲಿಂಗ ಉಳ್ಳುದೆಲ್ಲವು ಸಂಗನಸನಾಥನೆಂಬ ಭಾವ ಬಸವಣ್ಣಂಗಾಯಿತ್ತಲ್ಲದೆ ಎನಗೆ ಆ ಭಾವವಿಲ್ಲ ನೋಡಾ! ಲಿಂಗೈಕ್ಯರ ಣರ ಕಂಡರೆ ನಂಬಿ ನಚ್ಚಿ ಅವರ ಪಾದಕ್ಕೆರಗುವದೆನ್ನ ಮನವು. ಶಿವ ಕಂಡರೆ ಕರುಣಾವೃತವು ಸುರಿವುದೆನಗೆ. ಅವರ ಪಾದಕ್ಕೆ ಅಷ್ಟವಿಧಾರ್ಚನೆ, ಷೋಡಶೋಪಚಾರವ ಮಾಡುವುದೆನ್ನ ಮನವು. ಕೂಡಲಚನ್ನಸಂಗಮದೇವ ನಿಮ್ಮ ಪ್ರಭುವೆಂಬ ಜಂಗಮವ ಕಂಡು ಪೂಜಿಸಿ ಪೂಜಿಸಿದೆನೆಯದೆನ್ನ ಮನವು ॥೯॥

ಮತ್ತಂ, ಚಿಕ್ಕದಣ್ಣಾಯಕರು ಅಷ್ಟ ವಿಧಾರ್ಚನೆಯಂ ಮಾಡುತ್ತ ಪ್ರಭುದೇವರಿಗೆ ಮಂಗಳಾರುತಿಯನೆತ್ತುವ ಪ್ರಸ್ತಾವದ ವಚನ.

ಪದಂಗಳು ॥ರಾಗಲಲಿತೆ॥ ಮಂಗಳ ಪಾಡುವೆ ಚನ್ನಸಂಗಮದೇವಂಗೆ। ಕರಣಮುಖ ಲಿಂಗ ಸುಖದಿಂದ ನೋಡುತಾ. ॥ಪಲ್ಲ॥

ತನ್ನಹಂಕಾರಾದಿ ಗುಣಗಳೆಲ್ಲವ ಮರೆದು ಕಳೆದು ಲಿಂಗದಲ್ಲಿ ಸಂಗಿಯಾಗಿ। ಸಂಗನಾದ ಲಿಂಗವು ತನ್ನ ಸರ್ವಾಂಗ ತತ್ವವು ಮಹತ್ತಾದಿ ಗುಣಂಗಳೆಲ್ಲವ ಮರೆದು ಆ ಶರಣನಲ್ಲಿಗೆ ಸಂಗನಾದ ॥೧॥

ತನಗೇನುವ ಕಾಮಿಸುವನಲ್ಲ ಲಿಂಗಪ್ರೇರಣೆಯಲಿ ಬಂದಡೆ ಬಂದಿತ್ತು ಏನಾದಡೆಯು। ಸಕಲ ಸಂಬಂಧ ಸನ್ನಿಹಿತ ಲಿಂಗದಲ್ಲಿ ಅನುಗ್ರಹಿಸಿ ಸಂಗನಾದ. ॥೨॥

ಅವ ಪದಾರ್ಥ ತನ್ನ ಕಾಮಿಸಿಯೆ ಬಂದು ಲಿಂಗ ದೇವಗಿತ್ತುದ ಮುನ್ನವೆ। ಇತ್ತುದ ತಾನು ಲಿಂಗದಲ್ಲಿ ಮುನ್ನವೆ ಸಂದುದನೆಲ್ಲವ ನಾನಂದದಿಂದಲಲ್ಲಿಯೆ ಸಂಗಿಸುವಾ. ॥೩॥

ತನ್ನ ಮನವು ಲಿಂಗಸಂಗ ನಯನಾದಿಗಳಿಗೆ ಅಲ್ಲಿಯೆಸಂಗ ಪ್ರಾಣಕ್ಕೆ ಲಿಂಗ। ನಿಕ್ಷೇಪಸಂಗ ಅತನಲ್ಲಿಗೆ ಸಂಗವ ಮಾಡಿದಡಲ್ಲಿ ಸಂಗ ಲಿಂಗದಲ್ಲಿ ನಿರಂತರ ಸಂಗನಾದ. ॥೪॥

ನಿರುಪಾಧಿಕ ಲಿಂಗದಲ್ಲಿ ತಾನು ಸಾಧಿಸುವಧಿ ಎಂಬ ಸೋಪಾಧಿ ಭಯ। ಸಮನಿಸುವನಲ್ಲ ಮರ್ತ್ಯಲೋಕ ದೇವಲೋಕವೆಂಬ ಸೀಮೆಯ ನೀಂ ನಿಸ್ಸೀಮ ಶರಣ ಕೂಡಲಚನ್ನಸಂಗನಾದಾ. ॥೫॥

ಇಂತು ಚಿಕ್ಕ ದಣ್ಣಾಯಕರು ಪ್ರಭುದೇವರಿಗೆ ಅಷ್ಟವಿಧಾರ್ಚನೆ ಷೋಡಶೋಪಚಾರದಿಂದ ಪೂಜೆಯ ಮಾಡಿ ಪರಮ ಹರುಷತೆಯನೈದಿದ ತದನಂತರದಲ್ಲಿ ಮಡಿವಾಳ ಮಾಚಿತಂದೆಗಳು ಪ್ರಭುದೇವರ ಪಾದಾರ್ಚನೆಯಂ ಮಾಡುವ ಪ್ರಸ್ತಾವದ ವಚನ ॥

ಸತ್ತು ಚಿತ್ತಾನಂದ ನಿತ್ಯ ಪರಿಪೂರ್ಣನೆಂಬರು. ನಾನದ ಹಿಡಿದು ಪೂತಾಡುವವನಲ್ಲ. ಸತ್ತೇ ಗುರು, ಚಿತ್ತೇ ಲಿಂಗ, ಆನಂದವೆ ಜಂಗಮ, ನಿತ್ಯವೆ ಪ್ರಸಾದ, ಪರಿಪೂರ್ಣವೆ ಪಾದೋದಕವೆಂಬುದನನುಗ್ರಹಿಸಿ ನಿಮ್ಮ ಜಂಗಮಕ್ಕೆ ಭಕ್ತನಾದೆನಯ್ಯ. ನಿತ್ಯನಾಗಿ ನಿಮ್ಮ ಜಂಗಮಕ್ಕೆ ವಂದಿಸುವೆ. ಆನಂದದಿಂದ ನಿಮ್ಮ ಜಂಗಮವ ಪಾದೋದಕವ ಕೊಂಬೆ ಪರಿಪೂರ್ಣನಾಗಿ ನಿಮ್ಮನರ್ಚಿಸಿ ಪೂಜಿಸಿ ಪರಸರಸವ್ವೆ. ನಾನು ಭಕ್ತಿಪ್ರಸಾದ ಮುಕ್ತಿಪ್ರಸಾದ ನಿತ್ಯಪ್ರಸಾದವ ನಿಮ್ಮ ಜಂಗಮದಲ್ಲಿ ವರವ ಪಡೆದೆ. ಕಲಿದೇವರ ದೇವ ನಿಮ್ಮ ಶರಣ ಪ್ರಭುದೇವರ ಶ್ರೀಪಾದದಲ್ಲಿ ಮನಸು ನ್ನವಾಗಿಪ್ಪೆನಯ್ಯ ॥೬॥

ಇಂತು ಮಡಿವಾಳ ಮಾಚಿತಂದೆಗಳು ಅಷ್ಟವಿಧಾರ್ಚನೆ ಷೋಡಶೋಪಚಾರದಿಂದೆ ಪ್ರಭುದೇವರನರ್ಚಿಸಿ ತದನಂತರದಲ್ಲಿ ಸೊಡ್ಡಳಬಾಚರಸರು ಬಂದು ಪ್ರಭುದೇವರ ಪೂಜಿಸುವ ಪ್ರಸ್ತಾವದ ವಚನ ॥

ಏಕ ಏವ ನ ದ್ವಿತೀಯ ಬ್ರಹ್ಮವೆಂಬ ಘನ ಮಹಿಮನ ಕಂಡಾ ಕ್ಷಣದಲ್ಲಿಯೆ, ಮನ ಮನ, ಬೆರಸಿ ತನು ತನು ಕರಗಿ ಕರಣಂಗಳೆಲ್ಲ ತರಹರವಾದವಯ್ಯ! "ದೀರ್ಘದಂಡನಮಸ್ಕಾರಂ। ನಿರ್ಲಜ್ಜಂ ಗುರು ಸನ್ನಿಧೌ॥ ಶರೀರ ಮರ್ಪ ಪ್ರಾಣಂ ಚ। ಸದ್ಗುರುಭ್ಯೋ ನಿವೇದಯೆತ್ ॥" ಎಂದುದಾಗಿ, ಶರಣಾರ್ಥಕ್ಕೆ ನಾನು. ಎನ್ನ ಶರೀರ ನಿಮ್ಮ ಚರಣದಲ್ಲಿ ಬಿಸಟಾರವ ಸಂಗ ಮಹಾದಾನಿ ಸೊಡ್ಡಳನ ಶರಣ ಪ್ರಭುದೇವರ ಕಂಡು, ಎನ್ನ ಭವದ ಬಳ್ಳಿಯ ಬೇರ ಹರಿಯುತ್ತಯ್ಯ ॥೭॥

ಮತ್ತಂ॥ ನಿತ್ಯ ನಿಜತತ್ವ ಭಕ್ತಿ ಕಂಪಿತವಾಗಿ ಎನ್ನತ್ತ ತಿರುಗಿತ್ತು. "ಪತ್ಸಂ ಗೌರವ" ಎಂಬ ಶ್ರುತಿಯ ತೋರಲೆಂದು ಎನಗೆ ಕೃಪೆಯಾಗಿ ತನ

ಶ್ರೀಪಾವನನು ತೋರಿದನು. ಜಯ ಜಯ ಶ್ರೀಗುಹಾದೇವ, ಜಯ ಜಯ ಶ್ರೀಗುಹಾದೇವ, ಗುರುವೆ ನಮೊ ನಮೊ, ಎನ್ನ ಪರನು ಗುರುವೆ ನಮೋ ನಮೋ, ಎನ್ನ ಭವಬಂಧನಂಗಳ ಬಿಡಿಸಿದೆಯಾಗಿ, ಗುರುವೆ ನಮೊ ನಮೊ ಎಂದೆ. ಮುಪಾದಾನಿ ಸೊಡ್ಡಳ ನಿಮ್ಮ ಶರಣ ಪ್ರಭುದೇವರ ಶ್ರೀಪಾದಕ್ಕೆ ನಮೊ ನಮೊ ಎಂದು ಬದುಕಿದೆನು. ॥೧೭॥

ಇಂತು ಸೊಡ್ಡಳ ಬಾಚರಸರು ಪ್ರಭುದೇವರ ಶ್ರೀಪಾದವ ನಚ್ಚಿ ಹಾಡಿ ಹಾಡಿ ಮನದಣಿಯ ಭಕ್ತಿಯ ಮಾಡಿದ ತದನಂತರದಲ್ಲಿ ಹಡಪದಪ್ಪಣ್ಣಗಳು ಬಂದು ಪೂಜಿಸುವ ಪ್ರಸ್ಥಾವದ ವಚನ ॥

ಮನಕ್ಕೆ ಮನೋಹರ ಒಂದಾಗಿ, ಭಾವಕ್ಕೆ ಭಾವ ಒಂದಾಗಿ, ನಚ್ಚಿ ಮಚ್ಚಿದ ಶರಣರ ದರುಶನವಾದ ಬಳಿಕ ಕತ್ತಲೆ ಎಂದರಿಯೆನಯ್ಯ ಲೌಕಿಕವ. ಬಸವಪ್ರಿಯ ಕೂಡಲಚನ್ನಸಂಗ ನಿಮ್ಮ ಶರಣ ಪ್ರಭುದೇವರಿಗೆ ಶರಣು ಶರಣೆಂಬುದಲ್ಲದೆ ಅನ್ಯವನೇನೆಂದು ಅರಿಯೆನಯ್ಯ ॥೧೮॥

ಅಂತು ಅಸಂಖ್ಯಾತರೆಲ್ಲರು ಬಂದು ಪ್ರಭುದೇವರ ದರುಶನವಾಗಿ ಪಾದಾಕ್ರಾಂತರಾಗಿ, ಅರ್ಚಿಸಿ, ಪೂಜಿಸಿ ವರಂಬಡೆದು ಸುಖ ಸಂಕಥಾವಿನೋದದಿಂದೆ ಪ್ರಭುದೇವರಿಂಗೊಡ್ಡೋಲಗಂಗೊಟ್ಟು ಬಸವರಾಜದೇವರು ಪ್ರಭುದೇವರ ಕೊಂಡಾಡಿದ ಪ್ರಸ್ಥಾವದ ವಚನ॥

ಪದಂಗಳು॥ ರಾಗ ಭೂಪಾಳಿ॥ ನಾನಾವಿಧ ಬ್ರಹ್ಮಾಂಡದ ಲಯ ಸ್ಥಾನವೆನಿಪ ಮಾತಾಶ್ರಯ ರೂಪಾ ॥ಪಲ್ಲ॥

ಇನ ಮಂಡಲ ಕಿರಣಾವಳಿಯ ತನ್ನೊಳಗೆ ಗರ್ಭೀಕರಿಸಿಪ್ಪಂತೆ ನೆರೆದ ಜಗಂಗಳೆಲ್ಲವ ನಿಮ್ಮಯ ಉದರದೊಳಗಡಗಿಸಿದ ಪ್ರಭುವೆ ॥೧॥

ಅಣು ಮಾತ್ರ ಬೀಜದೊಳಗೆ ಘನವೃಕ್ಷವು ಅಡಗಿಪ್ಪಂತೆ ನಿಜತನುವಿನೊಳಗೆ ತೋರುವ ತೋರಿಕೆ ನಿಮ್ಮ ತನುವಿನೊಳಡಗಿತ ಸೀನಂಬ ॥೨॥

ಭಾಂಡದೊಳಗೆ ದ್ರವ್ಯಗಳಿಪ್ಪಂತೆ ಪಿಂಡಾಂಡದೊಳಗೆ ಶಿವತತ್ವದ ಖಂಡ ಖಂಡಿತವಾನುವಾಲಿಂಗಿಸಿ ನಿಂದ ನಿರ್ಲೇಪ ನಿರಂಜನನೆ ॥೩॥

ಸಕಲ ಪ್ರಪಂಚ ಗರ್ಭೀಕರಿಸಿ ಸಕಲ ಪ್ರಪಂಚೆಂದರಿಯದ ಉಪಮಾತೀತ ಮಹಂತ ನಿಮ್ಮಯ ನಿಜವನಾರು ಬಲ್ಲರು ಹೇಳಾ ॥೪॥

ಸರ್ವಾಚಾರ ಸಂಪತ್ತಿನ ಸರ್ವಾನುಭಾವ ಸತ್ಕ್ರಿಯೆಗಳ ಗರ್ಭೀಕರಿಸಿಕೊಂಡಿಪ್ಪ ಕೂಡಲ ಸಂಗನಲ್ಲಿ ಅಲ್ಲಮ ಪ್ರಭುವೆ ॥೫॥

ಇಂತು ಬಸವರಾಜದೇವರು ಪ್ರಭುದೇವರ ಸ್ತೋತ್ರಮುಂ ಮಾಡುತ್ತಿರಲು, ಆ ಪ್ರಸ್ಥಾವದೊಳು ಚನ್ನಬಸವರಾಜದೇವರು ಪ್ರಭುದೇವರ ಪಾಡಿ ಹೊಗಳಿದ ಪದಂಗಳು ॥

ರಾಗಧನ್ಯಾಸಿ॥ ಪರಕೆ ಪರವಾದ ಘನಕ್ಕೆ ಘನತರ ಮಹಾಘನವು ಪರಕೆ ವರ ನಿಜ ವಾಙ್ಮನಾತೀತಗತಿಶಯವು। ಸರಿ ಇಲ್ಲದಪ್ರತಿಮ ಲಿಂಗದ ಮಹಾತ್ಮೆಗಿಂದಿಲ್ಲ ಮತ್ತಾವ ಘನವು ॥ಪ॥

ವೇದಾದಿ ವೇದಗಳಿಗುಪಮೆಗುಪಮಾತೀತ। ಆವಿಮಧ್ಯಾಂತಗಳಿಗತ್ತತ್ತಲಿಹ ಘನವು। ಸಾಧಕರ ಸತ್ವ ರಜ ತಮ ದೇವತೆಗಳಿಗಗೋಚರವಾದ ಪರಶಿವ ತತ್ವವು। ಭೇದಾದಿ ಭೇದಬ್ರಹ್ಮಾಂಡ ಕೋಟಿಗಳ ರೋಮಾದಿಗಳೊಳಡಕವಾಗಿಹವು ಸಚರಾಚರವ। ನಾದಿ ಲೋಕಾಲೋಕವೆಲ್ಲ ಲೀಲಾಸೂತ್ರ ಮಾತ್ರದೊಳಗಿಹವು ಶಿವನ ॥೧॥

ದೆಸೆ ಶ್ರೋತ್ರದಲ್ಲಿ ನೇತ್ರವಲಿ ರವಿ ಮನಸಿನಲಿ। ಶಶಿ ಘ್ರಾಣದಲಿ ವಾಯು ವನಲಿ ಮುಖದಲಿ ಶಿರವ। ವಿಸರವಲಿ ತೆತ್ತೀಸ ಕೋಟಿ ದೇವತೆಗಳಭ್ಯಂತರವು ನಾಭಿಯಲ್ಲಿ ॥ ವಸುಧೆ ಪದತಳವಲ್ಲಿ ಪ್ರಸರದಲಿ ಶಕ್ರನಜ। ನೆಸೆವ ಜಂಘೆಯಲಿ ಭುಜದಲಿ ವಿಷ್ಣು ರುದ್ರಮುಖ। ಬಿಸರುಹದೊಳಖಿಳಜಗಜಠರದಲಿ ಜನಿತ ಶಿವ ಲಿಂಗಾಂಗ ಮಹಿಮೆಯಲ್ಲಿ ॥೨॥

ಉಪಮೆಗುಪಮಾನ ಮನ ದೇವತಾದಿಗಳಿಲ್ಲ। ಜಪ ತಪ ಮಹಾದಿವ್ಯ ಮಂತ್ರ ಧ್ಯಾನಂಗಳಿಂ। ದಪರಮಿತ ಸೇವನಾ ರತನಾಗಿ ನಿಮ್ಮ ಪದನುತಿಯಿಂ ಕೃತಾರ್ಥರಾಗಿ ॥ ತೃಪತಿವಟ್ಟಿಪ್ಪರಲ್ಲದೆ ನಿಶ್ಚಯದ ಮಹಿಮೆಯ ಪರಾಪರಂ ಪರಮಗಮ್ಯ ಭಾವಾತೀತ ವಿಪುಳ ಜ್ಯೋತಿರ್ಲಿಂಗ ವಿಶ್ವತೋಮುಖನ ಮುಖ ಘನ ಗಾಢ ಘನವಾವುದು ॥೩॥

ಮನು ಮುನೀಶ್ವರ ವೇದ ಶಾಸ್ತ್ರ ಶ್ರುತಿ ಸ್ಮೃತಿಯಲ್ಲಿ ತಮತಮಗೆ ಹೊಗಳುತಿರುತಿಹವು ಶಿವನ ಘನತೆಯಂ। ಘನತರಂತರ ಗಾಣದತ್ಯತಿಷ್ಠದ್ದಶಾಂಗುಲನೆಂದು ಒರಲುತಿಹವು ॥ ಎನಲಾ ಘನನದಾವ ದರುಶನಾಗಮ ತರ್ಕ್ಯದನುಮಿತಕಸಾಧ್ಯ ಲಿಂಗದ ಮಹಾತ್ಮೆಗೆ ಕಡೆಯ। ನೆಡೆಸಲಿಲ್ಲಾಗಿ ಪ್ರಣವಾದಿ ಪಂಚಾಕ್ಷರಿಯೊಳಡಕನಾಗಿಹವು ಶಿವನಾ ॥೪॥

ನಿತ್ಯನನಿತ್ಯ ದೇವತೆಗಳರಿಯಲಿ ಕಳವೆ ಸಚ್ಚಿದಾನಂದ ಶಿವಜ್ಞಾನಾನುಭಾವ ಭಾವೋತ್ತಮರ ಭಾವ ಕರಣದ ಕರದೊಳಮೃತ ಕರ ಕಿರಣ

ಸಮ್ಯಗ್ಜ್ಞಾನಿಯು ಇನ್ನಂತೆ ತೊಳ ತೊಳಗುವತ್ಯಂತ ನಿರವಯವ ಸಚ್ಚಿ
ದಾನಂದವ ನಿರಂಜನ ನಿರ್ಮಳದ ನಿತ್ಯ ಕೂಡಲ ಚನ್ನಸಂಗನಂಗವನು
ಪ್ರಭುಲಿಂಗದಲ್ಲಿಯೆ ಕಂಡೆನು. ॥೫॥

ಇಂತು ಚನ್ನಬಸವರಾಜ ದೇವರು ಪ್ರಭುದೇವರ ಸ್ತೋತ್ರಂಗ
ಳ್ಮುತ್ತಿರಲು, ಆ ಪ್ರಸ್ತಾವದೊಳು ಸಿದ್ಧರಾಮಯ್ಯ ತಂದೆಗಳು ಪ್ರಭುದೇ
ವರ ಸ್ತುತಿಸಿ ಕೊಂದಾಡಿದ ಪದಂಗಳು.

॥ರಾಗಲಹರಿ॥ ॥ಪದ॥ ಸ್ವಾನುಭಾವಸಿದ್ಧಿಯಿಂದ ತಾನು ತನ್ನನರಿದಂಗಿ
ದೇನು ತನಗನ್ಯ ಸುಜ್ಞಾನಿಯಾದ ಶರಣ. ॥ಪಲ್ಲ॥

ಬ್ರಹ್ಮದಿಂದಲೊಗೆದ ಶರಣನ ಪೆರ್ಮೆಯುದ ನಾನೇನೆಂಬೆ। ಕರ್ಮ
ಕ್ರಿಯೆಗಳನ್ನು ಸದ್ಧರ್ಮವಲ್ಲೆಂದರಿದನು। ನಿರ್ಮಳ ನಿಜಲಿಂಗವ ವರ್ಮವ
ರಿದು ಭಕ್ತಿಯ ಸದ್ಧರ್ಮದಲ್ಲಿ ನಡೆವ ನಿಃಕರ್ಮಿ ತಾನೆ ಶರಣಾ. ॥೧॥

ಅಳಿಯನುಳಿಯನು ಬ್ರಹ್ಮವೆಂಬ ಬೆಳೆಯ ಲೊದಗಿವ ಶರಣನು।
ತೀವುಳಿದು ನಿತ್ಯದ ನಿಳಯವೆ ತಾನಾಗಿ ಹೊಳೆಯೆ ಮುಕ್ತಿ ಎಂಬ
ಫಳೆಯದತ್ತ ನಿತ್ಯ ನಿಜದ ಕಳೆಯ ಬೆಳಗು ತಾನೆಯಾದ ಬೆಳಗುತಾನೆ
ಶರಣಾ. ॥೨॥

ಚಂದ್ರಕಾಂತದ ಶಿಲೆಯೊಳು ಜಲಬಿಂದುವ ತಂದರಿಸಿದವರಂತೆ
ಸಂದಳಿದು ಲಿಂಗದೊಳು ಒಂದಿ ನಿಜಸುಖದಿ। ನಿಂವ ನಿಜ ಪದದೊಳ
ಗೊಂದಿ ತಾನಾನಂದದಿಂದ ದ್ವಂದ್ವವಳಿದು ನಿಂದ ಸಂಬಂಧಿ ತಾನೆ ಶರಣ
॥೩॥

ಮೇಘ ಒಸರಿ ಜಲಬಿಂದುಗಳು ಭೂ ಗಗನಾಂಗಣದಿ ಸುರಿಯು।
ಲಾಗ ವಾಯು ಸಂಗ ತಾನಾಗಿ ನಾದ ಬಲಿದುದು। ಆಗ ವಾರಿ ಕಲ್ಲೆಂದೆನಿಸಿ
ಶೀಘ್ರದಿಂದ ತೋರಿಯಡಗಿ। ಮುನ್ನಿನ ಹಾಗೆ ತನ್ನ ನಿಜವು ತಾನಾಗಿ
ನಿಂದ ಶರಣಾ ॥೪॥

ಕೀಟ ಭೃಂಗನ ಪರಿಯಂತೊಡನಾಡಿಯಾಡಿ ಲಿಂಗವೇ ಗೂಡಾಗಿ
ಪರವ। ಸುಖದೊಳಗೋಲಾಡಿ ಹಾಡಿ ಹರಿಸಿ ಲಿಂಗ ಸಂಗದಿ ಮೂಡಿ ಮುಳುಗಿ
ಶರಣರೊಡನಾಡಿಯಾಡಿ ಪುಣ್ಯ ಪಾಪ ಗೂಡನಳಿದು ನಿಂದು ಆರೂಢನಾದ
ಶರಣ ॥೫॥

ಸರ್ವ ಮುಟ್ಟಲು ದೇಹಭಾವ ದರ್ಪವಳಿದು ಕರಣದುಪಟಳದ
ಒಪ್ಪವಳಿದು, ನಿಂದ ನಿಜವದಿಪ್ಪುದು ಕರ್ಮರ ಉರಿ ಕೊಂಡಂತಾತನು
ಸರ್ವ ಭೂಷಣನಾಜ್ಞೆವಿಡಿದು ಯಪ್ಪಿಯುಗಲದಂತೆ ನಿಷ್ಪತಿಯಾದ ಶರಣಾ ॥೬॥

ದೀಪ ಒಂದರಿಂದ ಶತದೀಪ ಉದಿಸಲವರ ಪ್ರಭೆಗಳೇಪರಿ ಲಿಂಗಾಂಗ
ಸಂಗವಾಪರಿ ಎಂದರಿವುದು ಭಾಪುರೆ ನಿಜಲಿಂಗ ಸಂಗವೀಪರಿ ಎಂದ
ದೆಂದು ನಿಜರೂಪು ಕಪಿಲಸಿದ್ಧ ಮಲ್ಲೇಶನಾದ ಶರಣಾ ॥೭॥

ಇಂತು ಸಿದ್ಧರಾಮಯ್ಯ ದೇವರು ಪ್ರಭುದೇವರ ಸ್ತೋತ್ರಮುಂ
ಮಾಡುತ್ತಿರಲು, ಆ ಪ್ರಭುದೇವರು ಚನ್ನಬಸವರಾಜ ದೇವರ ಸ್ತೋತ್ರ
ಮುಂ ಮಾಡುವ ಪ್ರಸ್ತಾವದ ವಚನ ॥

ಔದಂತ ಮದಕರಿಯೊಳಗಡಗಿತ್ತು. ಬೆಳಗುವ ಬೆಳಗು ನವ ಪಂಜ
ರದೊಳಗಡಗಿತ್ತು. ಈ ಉಭಯ ಭಾವವ ಭಾವಿಸಬಾರದು. ಮದವಳಿ
ದಿಹ ಸುಳುಹಿನ ಸೂಕ್ಷ್ಮಂಗಲ್ಲದೆ ಅಳಿ ಪರಿಮಳವ ನುಂಗಿದ ಪರಿ ಇನ್ನೆಂತು
ಸಾಧ್ಯವಾಯಿತ್ತು. ಸುಖ ಸಂಭಾಷಣೆ ಸುಹೇಶ್ವರಲಿಂಗವಲ್ಲಿ ಚನ್ನಬಸವ
ಣ್ಣಂಗ ॥೮॥

ಹೀಗೆಂದು ಪ್ರಭುದೇವರು ಚಿಕ್ಕದಣ್ಣಾಯಕರ ಸ್ತೋತ್ರಮುಂ ಮಾ
ಡಲು, ಆ ಪ್ರಸ್ತಾವದೊಳು ಬಸವರಾಜ ದೇವರು ಚಿಕ್ಕದಣ್ಣಾಯಕರ
ಸ್ತೋತ್ರಮುಂ ಮಾಡಿದ ಪ್ರಸ್ತಾವದ ವಚನ. ॥

ಇಂದ್ರನ ವ್ಯಸನ ಉಪೇಂದ್ರನ ಓಲಗ ಚಂದ್ರಮೌಳಿಯ ನರಿಯದೆ
ಹೋಯಿತ್ತು. ಬಂಧ ಮೋಕ್ಷದ ಭವಬಂಧನ ಬಿಡದನ್ನಕ್ಕರ ಮತ್ತೊಂದರ
ಮುಖ ಜನಸಿತಲ್ಲ. ಕೂಡಲಸಂಗಮದೇವ ಚನ್ನಬಸವಣ್ಣನ ಸನ್ನಿಧಿಯಿಂದ
ಲಾನು ಬದುಕಿದೆನು. ॥೯॥

ಮತ್ತಂ, ಪ್ರಸಾದಿಯ ಪ್ರಸಾದದಲೊದಗಿದ ಪ್ರಸಾದಿಯ ಪ್ರಸಾದವ
ನೇನೆಂದುವಮಿಸುವೆನು? ಏನೆಂದು ಸ್ತುತಿಸುವೆನಯ್ಯ! ಮಹಾಪ್ರಸಾದಿ
ಯಾದ ಪ್ರಸಾದವನು ಅಗಮ್ಯ ಪ್ರಸಾದದಲ್ಲಿ ಸ್ವಾಯತವಾದ ಕೂಡಲ
ಸಂಗಮದೇವರಲ್ಲಿ ಚನ್ನಬಸವಣ್ಣಂಗೆ ನಮೋ ನಮೋ ಎನುತಿರ್ದೆನು. ॥೧೦॥

ಹೀಗೆಂದು ಬಸವರಾಜ ದೇವರು ಚಿಕ್ಕದಣ್ಣಾಯಕರ ಸ್ತೋತ್ರಮುಂ
ಮಾಡುತ್ತಿರಲು, ಆ ಚಿಕ್ಕದಣ್ಣಾಯಕರು ಬಸವರಾಜ ದೇವರ ಸ್ತೋತ್ರಮುಂ
ಮಾಡುವ ಪ್ರಸ್ತಾವದ ವಚನ. ॥

ಅಯ್ಯ ಘನ ಗಂಭೀರವಪ್ಪ ಸಮುದ್ರದೊಳಗೊಂದು ರತ್ನ ಹುಟ್ಟಿದಲ್ಲಿ ಆ ಸಮುದ್ರದೊಳಗದಗಿಸ್ಕುದಲ್ಲದೆ ಘನವಾಗಿ ತೋರಬಲ್ಲುದೇ? ನಿಮ್ಮ ಕರುಣ ಕಟಾಕ್ಷದಿಂದಲುದಯಿಸಿ ಅನಂತ ಲಿಂಗ ಪುರಾಣವೆಲ್ಲ ನಿಮ್ಮ ಕೃಪೆಯಿಂದೆ ಸಾಧ್ಯವಾಯಿತ್ತೆನಗೆ. ಆದಿ ಅನಾದಿ ಇಲ್ಲದಂದು ನೀನೊಬ್ಬನೆ ಪ್ರಸಾದಿ. ಉಮೆಯ ಕಲ್ಯಾಣವಿಲ್ಲದಂದು ನೀನೊಬ್ಬನೆ ಪ್ರಸಾದಿ. ಕೂಡಲ ಚನ್ನಸಂಗವ. ದೇವರು ಸಾಕ್ಷಿಯಾಗಿ ಬಸವಣ್ಣ ನಿಮ್ಮ ತೊತ್ತಿನ ತೊತ್ತಿನ ಮಗನಾನಯ್ಯ. ॥೪೯॥

ಮತ್ತಂ॥ ತನುವ ಗುರುವಿನಲ್ಲಿ ಸವಿಸಿ, ಮನವ ಲಿಂಗದಲ್ಲಿ ಸವಿಸಿ, ಧನವ ಜಂಗಮದಲ್ಲಿ ಸವಿಸಿ, ತನುವೆ ಗುರುವಾಗಿ, ಮನವೆ ಲಿಂಗವಾಗಿ ಧನವೆ ಜಂಗಮವಾಗಿ, ಇಂತೀ ತ್ರಿವಿಧವು ನಿಮ್ಮಲ್ಲಿ ನಿಜಭರಿತವಾದ ಕಾಯವಿಡಿದು ಕರ್ಮ ರಹಿತನಾದ ಕೂಡಲ ಚನ್ನಸಂಗಮದೇವರಲ್ಲಿ ಸಂಗನಬಸವಣ್ಣಂಗೆ ನಮೋ ನಮೋ ಎನುತಿರ್ದೆನು ॥೪೦॥

ಇಂತು ಚಿಕ್ಕದಣ್ಣಾಯಕರು ಬಸವರಾಜದೇವರ ಸ್ತೋತ್ರವುಂ ಮಾಡುತ್ತಿರಲು, ಆ ಪ್ರಸ್ತಾವದೊಳು ಮಡಿವಾಳತಂದೆಗಳು ಬಸವರಾಜದೇವರ ಹೊಗಳಿದ ಪ್ರಸ್ತಾವದ ವಚನ ॥

ಅಂಗಾಲ ಕಣ್ಣವರಾಗಬಹುದಲ್ಲದೆ ಮೈಯಲ್ಲಿ ಕಣ್ಣವರಾಗಬಾರದು. ಮೈಯಲ್ಲಿ ಕಣ್ಣವರಾಗಬಹುದಲ್ಲದೆ ನೊಸಲಕಣ್ಣ ಚತುರ್ಭುಜದವರಾಗಬಾರದು. ನೊಸಲುಕಣ್ಣ ಚತುರ್ಭುಜದವರಾಗಬಹುದಲ್ಲದೆ, ಪಂಚಮುಖ ದಶಭುಜದವರಾಗಬಾರದು. ಪಂಚಮುಖ ದಶಭುಜದವರಾಗಬಹುದಲ್ಲದೆ, ಸರ್ವಾಂಗಲಿಂಗಿಗಳಾಗಬಾರದು. ಸರ್ವಾಂಗ ಲಿಂಗಿಗಳಾಗಬಹುದಲ್ಲದೆ ಕಲಿದೇವಯ್ಯ ನಿಮ್ಮ ಶರಣ ಬಸವಣ್ಣನಾಗಬಾರದೆಂದರಿದು ಆ ಬಸವಣ್ಣನ ಶ್ರೀಪಾದಕ್ಕೆ ನಮೋ ನಮೋ ಎನುತಿರ್ದೆನು ॥೪೧॥

ಮತ್ತಂ॥ ಬಸವಣ್ಣನ ಬಳಿಯಯ್ಯ ಗಂಗೆ ವಾಳುಕ ಸಮ ರುದ್ರರು ಬಸವಣ್ಣನ ಫಲವಯ್ಯ! ಓಂ ನಮಃ ಶಿವಾಯೆಂಬರೆಲ್ಲರು ಬಸವಣ್ಣನ ಅಜ್ಞೆಯಯ್ಯ. ಎಲ್ಲ ಶಿವಾರ್ಚಕರು ಬಸವಣ್ಣನ ಘನವಯ್ಯ. ಸೋಹಿದಾ ಸೋಹಿಗಳು ಬಸವಣ್ಣನ ಧನವಯ್ಯ ಪಾದೋದಕ ಪ್ರಸಾದಿಗಳು ಬಸವಣ್ಣನ ಮನವಯ್ಯ! ತನುಮನಧನವ ಗುರುಲಿಂಗಜಂಗಮಕ್ಕೆ ಇಕ್ಕುವರು ಬಸವಣ್ಣನ ತನುವಯ್ಯ. ತನು ಪದಾರ್ಥವ ಮಾಡಿ, ಗುರುಲಿಂಗಜಂಗ

ಮಕ್ಕೆ ಅರ್ಪಿಸುವರು ಬಸವಣ್ಣಾ ಮಾಡಿದ ಅನುಗಳಯ್ಯ. ಕನಸಿನಲ್ಲಿ ಮನಸಿನಲ್ಲಿ ಶಿವ ಶಿವ ಎಂಬವರೆಲ್ಲರು ಬಸವಣ್ಣನ ಬಂದು ಬಳಗವಯ್ಯ. ಎಲ್ಲ ಶಿವಲಾಂಛನಿಗಳು ಬಸವಣ್ಣನ ಪ್ರಸಾದಿಗಳಯ್ಯ. ಬಸವಣ್ಣನ ನಾಮಾವಶೇಷ ನೆನೆವರೆಲ್ಲರು ಎಲೆ ಕಲಿದೇವರದೇವ ಬಸವಣ್ಣನ ಆಜ್ಞೆಯಲ್ಲಿ ನಿಜೈಕ್ಯವಾಗಿ, ಎಲ್ಲ ಶಿವಭಕ್ತರ ತನು ಮನ ಧನ ಸಹಿತ ನಾನಾದೆಯಯ್ಯ ॥೪೨॥

ಕರಸ್ಥಲವು, ಕರ್ಣಸ್ಥಲವು, ಕಂಠಸ್ಥಲವು, ಲಲಾಟಸ್ಥಲವು, ಮಧ್ಯಸ್ಥಲವು ಇಂತೆಲ್ಲ ಸ್ಥಲಂಗಳು ಮಹಾಸ್ಥಲಕ್ಕೆ ತಂದು ಬಸವಣ್ಣನು ಸಂಪೂರ್ಣವಾದ ಪರಿಯ ನೋಡಾ, ಕಲಿದೇವರ ದೇವಾ ॥೪೩॥

ಮತ್ತಂ॥ ಪ್ರಾಣಾಪಾನ ಮೊದಲಾದ ದಶವಾಯುಗಳಿಚ್ಛೆಯಲ್ಲಿ ಸುಳಿದಾಡದು. ಜ್ಞಾನದಲ್ಲಿ ಬೆಳೆವುದು. ನಿರಾಲಂಬದಲ್ಲಿ ಆಡುವುದು. ಹೃದಯ ಕಮಲ ಪದ್ಮಪತ್ರದುಸಿರನಾಲಸಿ ಸಂಪುಟ ಜಂಗಮದಾಟವನಾಡುವದು. ಲಿಂಗದ ನೋಟವ ನೋಡುವುದು. ಮಹಾ ಪ್ರಸಾದವಲ್ಲೆ ಬೆಳೆವುದು. ಕಲಿದೇವ ನಿಮ್ಮ ಶರಣ ಬಸವಣ್ಣನ ನಿಲವಿದು. ॥೪೪॥

ಮತ್ತಂ॥ ಅಯ್ಯ ನಿಮ್ಮ ಧ್ಯಾನದಲ್ಲಿರಿಸಲೊಲ್ಲದೆ, ಬಸವಣ್ಣನ ಧ್ಯಾನ ಮೊಳಿರಿಸೆನ್ನ. ಲಿಂಗವೇದ್ಯ ಜಂಗಮವೇದ್ಯ ಪ್ರಸಾದವೇದ್ಯ ನಿಜಪದವೇದ್ಯ ಮಹಾವೇದ್ಯ ಬಸವಣ್ಣನ ಸಂಗಮೊಳಿರಿಸು ಕಲಿದೇವರದೇವಾ ॥೪೫॥

ಹೀಗೆಂದು ಮಡಿವಾಳ ತಂದೆಗಳು ಬಸವರಾಜದೇವರ ಸ್ತೋತ್ರವುಂ ಮಾಡಲು, ಆ ಬಸವರಾಜ ದೇವರು ಮಡಿವಾಳ ತಂದೆಗಳ ಸ್ತೋತ್ರವುಂ ಮಾಡುವ ಪ್ರಸ್ತಾವದ ವಚನ. ॥

ಭಕ್ತಿ ಯುಕ್ತಿಯನರಿಯೆ, ಷೋಡಶೋಪಚಾರವನರಿಯೆ, ಭಾವನಿರ್ಭಾವವನರಿಯೆ, ಜ್ಞಾನ ಮಹಾಜ್ಞಾನವನರಿಯೆ, ಕೂಡಲ ಸಂಗಮದೇವಯ್ಯ ಮಡಿವಾಳ ತಂದೆಗಳ ಪಾದಕ್ಕೆ ನಮೋ ನಮೋ ಎನುತಿರ್ದೆನು. ॥೪೬॥

ಇಂತು ಬಸವರಾಜ ದೇವರು ಮಡಿವಾಳ ತಂದೆಗಳ ಸ್ತೋತ್ರವುಂ ಮಾಡಲು, ಆ ಮಡಿವಾಳ ತಂದೆಗಳು ಆ ಬಸವರಾಜ ದೇವರನ್ನು ಚನ್ನ ಬಸವರಾಜ ದೇವರನ್ನು ಕೂಡಿ ಸ್ತೋತ್ರವುಂ ಮಾಡುವ ಪ್ರಸ್ತಾವದ ವಚನ. ॥

ಎನ್ನ ಮನ ಬಸವಣ್ಣನು, ಎನ್ನ ವಾಕ್ಕು ಬಸವಣ್ಣನು, ಎನ್ನ ಕಾಯ ಪ್ರಭುದೇವನು. ಇಂತೀ ಮೂವ್ವರ ಸಾವವನು ತ್ರಿಕರಣ ಶುದ್ಧದಿಂದ ನಂಬಿ ನಮೋ ನಮೋ ಎನುತಿರ್ದೆನು ಕಾಣಾ ಕಲಿದೇವರ ದೇವಾ. ॥೪೭॥

ಹೀಗೆಂದು ಮಡಿವಾಳ ತಂದೆಗಳು ಬಸವಣ್ಣ ಚನ್ನಬಸವಣ್ಣ ಪ್ರಭು ದೇವರನು ಒಂದೆ ವಚನದಲ್ಲಿ ಸ್ತೋತ್ರಮಂ ಮಾಡಿವ ಪ್ರಸ್ಥಾವದ ವಚನ.

ಎನ್ನ ಅಂತರಂಗ ಬಸವಣ್ಣ, ಎನ್ನ ಬಹಿರಂಗ ಮಡಿವಾಳನು. ಈ ಉಭಯದ ಸಂಗವೆ ಪ್ರಭುದೇವರು. ಇಂತೀ ಮೂವ್ವರ ಕರುಣದ ಕಂದನಾಗಿ ಬದುಕಿದೆನು ಕಾಣಾ ಕೂಡಲ ಚನ್ನ ಸಂಗಮದೇವಾ. ॥೪೮॥

ಹೀಗೆಂದು ಚಿಕ್ಕದಣ್ಣಾಯಕರು ಬಸವಣ್ಣ ಮಡಿವಾಳತಂದೆಗಳು ಪ್ರಭುದೇವರನು ಒಂದೆ ವಚನದಲ್ಲಿ ಸ್ತೋತ್ರಮಂ ಮಾಡಲು, ಆ ಪ್ರಸ್ಥಾವದೊಳು ಪ್ರಭುದೇವರು ಬಸವಣ್ಣ ಚನ್ನಬಸವಣ್ಣ ಮಡಿವಾಳ ತಂದೆಗಳನು ಕೂಡಿ ಹೊಗಳುವ ಪ್ರಸ್ಥಾವದ ವಚನ॥

ಎನ್ನ ಕಾಯವ ಬಸವಣ್ಣನಳವಡಿಸಿಕೊಂಡ. ಎನ್ನ ಮನವ ಚನ್ನ ಬಸವಣ್ಣನಳವಡಿಸಿಕೊಂಡ. ಎನ್ನ ಭಾವವ ಮಡಿವಾಳಯ್ಯನಳವಡಿಸಿಕೊಂಡ. ಇಂತೀ ಮೂವ್ವರು ಒಂದೊಂದನಳವಡಿಸಿಕೊಂಡ ಕಾರಣ ಗುಹೇಶ್ವರ ನಿಮ್ಮ ಶರಣರೆಂಬ ತ್ರಿಮೂರ್ತಿಗಳಿಗೆ ನಮೋ ನಮೋ ಎನುತಿರ್ದೆನು ॥೪೯॥

ಮತ್ತಂ॥ ಎನ್ನ ತನುವೆ ಚನ್ನಬಸವಣ್ಣನಯ್ಯ. ಎನ್ನ ಮನವೆ ಮಡಿವಾಳನಯ್ಯ. ಎನ್ನ ಪ್ರಾಣವೆ ಸಂಗನಬಸವಣ್ಣನಯ್ಯ. ಗುಹೇಶ್ವರ ನಿಮ್ಮ ಶರಣರ ಘನವನು ಎನ್ನ ಸರ್ವಾಂಗದಲ್ಲಿ ಕಂಡು ಪರಮ ಸುಖಿಯಾಗಿರ್ದೆನು ॥೫೦॥

ಇಂತೆಲ್ಲ ಶಿವಗಣಂಗಳು ಓರೋರ್ವರ ಸ್ತೋತ್ರಮಂ ಮಾಡುತ್ತಿರಲು, ಆ ಪ್ರಸ್ಥಾವದೊಳು ಸಿದ್ಧರಾಮಯ್ಯದೇವರು ಬಸವರಾಜದೇವರಿಗೆ ಶರಣರ ಸಂಗದಿಂದೆ ಸರ್ವವು ಅಳವಟ್ಟ ಮಹಾಘನ ಲಿಂಗ ಸಂಗವಾಯಿತ್ತೆಂದು ಸ್ತುತಿಸಿದ ಪ್ರಸ್ಥಾವದ ವಚನ ॥

ಆಯಿತ್ತಾಯಿತ್ತು ಫಲವಿಲ್ಲದ ವೃಕ್ಷ. ಆಯಿತ್ತಾಯಿತ್ತು ಪದವಿಲ್ಲದ ಫಲ. ಆಯಿತ್ತಾಯಿತ್ತು ಸೀಮೆಯ ಮೀರಿದ ಸಂಬಂಧ. ಆಯಿತ್ತಾಯಿತ್ತು ಅನ್ವಯದಲ್ಲಿ ಅಂದೋಳ. ಆಯಿತ್ತಾಯಿತ್ತು ನಿತ್ಯದಲ್ಲಿ ಭಕ್ತಿ. ಆಯಿತ್ತಾ

ಯಿತ್ತು ಭಕ್ತಿಯಲ್ಲಿ ವೈರಾಗ್ಯ. ಆಯಿತ್ತಾಯಿತ್ತು ವೈರಾಗ್ಯದಲ್ಲಿ ಅನುಗುಣ. ಆಯಿತ್ತಾಯಿತ್ತು ಸ್ವಾನುಭಾವ. ಸ್ವಾನುಭಾವದಲ್ಲಿ ಸಕಲ ಭಕ್ತಿ. ಸಕಲ ಭಕ್ತಿಯಿಂದ ಕಪಿಲಸಿದ್ಧಮಲ್ಲಿಕಾರ್ಜುನಯ್ಯನ ಸಂಯೋಗ ಬಸವಣ್ಣಂಗೆ ॥೫೧॥

ಹೀಗೆಂದು ಸಿದ್ಧರಾಮಯ್ಯದೇವರು ಮರಳಿ ಆ ಬಸವರಾಜದೇವರ ಸ್ತೋತ್ರಮಂ ಮಾಡಿದ ಪ್ರಸ್ಥಾವದ ವಚನ ॥

ಅಯ್ಯ ನಿಮ್ಮ ಶರಣ ಬಸವಣ್ಣನಿಂದ ಲಿಂಗವ ಕಂಡು ಒಳಗೆ ಬಚ್ಚಿಟ್ಟುಕೊಂಡೆನಯ್ಯ. ನಿಮ್ಮ ಶರಣ ಬಸವಣ್ಣನಿಂದ ಲಿಂಗವ ಹಾಸಿ ಹೊದೆದುಕೊಂಡನು. ಅಯ್ಯ ನಿಮ್ಮ ಶರಣ ಬಸವಣ್ಣನಿಂದ ನಿರವಯವಾದೆನು. ಎಲೆ ಕಪಿಲಸಿದ್ಧ ಮಲ್ಲಿನಾಥಯ್ಯ ನಿಮ್ಮ ಶರಣ ಬಸವಣ್ಣಂಗೆ ನಮೋ ನಮೋ ಎನುತಿರ್ದೆನು ॥೫೨॥

ಮತ್ತಂ॥ ಸಿದ್ಧರಾಮಯ್ಯದೇವರು ಪ್ರಭುದೇವರ ಸ್ತೋತ್ರಮಂ ಮಾಡುವ ಪ್ರಸ್ಥಾವದ ವಚನ ॥

ಎಲೆ ಅಯ್ಯ ನಿಮ್ಮ ನಚ್ಚಿನ ಮಚ್ಚಿನ ಶರಣರ ಸಂಗವಲ್ಲಿರಿಸಿ ಎನ್ನನಾಗು ಮಾಡಿದಿರಿ. ಆಹಾ ನಿಮ್ಮ ಕರುಣವನೇನೆಂದುಪಮಿಸುವೆನು? ಎರಡು ಪುರವ ಮೆಟ್ಟಿ ಮೇಲುಪುರವ ನೋಡುತಿಪ್ಪೆನು. ಮೇಲು ಪುರವ ಭೇದಿಸಲೊಡನೆ ನೀನು ನಾನಾದೆನಯ್ಯ. ಕಪಿಲಸಿದ್ಧಮಲ್ಲಿನಾಥಯ್ಯ ನಿಮ್ಮ ಶರಣ ಪ್ರಭುದೇವರ ಕರುಣದಿಂದಲಾನು ಬದುಕಿದೆನು ॥೫೩॥

ಸಿದ್ಧರಾಮಯ್ಯ ದೇವರು ಚನ್ನಬಸವರಾಜದೇವರ ಸ್ತೋತ್ರಮಂ ಮಾಡುವ ಪ್ರಸ್ಥಾವದ ವಚನ ॥

ಅಯ್ಯ ಮೂರು ಪುರದ ಮೇಲುಪ್ಪರಿಗೆಯ ಕೆಲಸವನೇನೆಂಬೆನಯ್ಯ? ಮುತ್ತಿನ ಕಳಸದ ಮೇಲೊಂದು ಅರಳಿದ ಪುಷ್ಪದ ಪರಿಯೊಳಗೆ ಅಗ್ನಿಯ ಕಂಡೆನಾಗಿ ಕಪಿಲಸಿದ್ಧಮಲ್ಲಿನಾಥ ನಿಮ್ಮ ಶರಣ ಚನ್ನಬಸವಣ್ಣ ತೋರಿದ ಪಾದ ಸುಪಥವಾಯಿತ್ತಾಗಿ, ಆನು ಚನ್ನಬಸವಣ್ಣಂಗೆ ನಮೋ ನಮೋ ಎನುತಿರ್ದೆನು ॥೫೪॥

ಮತ್ತಂ॥ ಅಗ್ನಿ ಸಿದ್ಧನನರ್ಚಿಸುವಲ್ಲಿ ಅರಯ್ಯ ಬಲ್ಲವರು ಚನ್ನಬಸವಣ್ಣನಲ್ಲದೆ ಮೂರ್ತಿ ಎಂಟು ಆಗದ ಮುನ್ನ ಮುಖಲಿಂಗವಾಗಿರ್ದ ಸದ್ವಿಯನಾರಯ್ಯ ಬಲ್ಲವರು ಚನ್ನಬಸವಣ್ಣನಲ್ಲದೆ, ಸದಮಳಜ್ಞಾನದಲ್ಲಿ

ಒಪ್ಪಿಪ್ಪ ಅಕ್ಷರ ದ್ವಯದ ಭೇದಾದಿ ಭೇದವುಂ ಭೇದಿಸಿ ಲೋಕಕ್ಕೆ ಭಕ್ತಿಯ ಸಾಧಿಸಿಕೊಟ್ಟ ಲೋಕಕ್ಕೆ ಉರುತರವಾದ ಕಾರಣ ಚನ್ನಬಸವಣ್ಣ ನಯ್ಯಕಸಿಲಸಿದ್ಧ ಮಲ್ಲಿಕಾರ್ಜುನಯ್ಯ ॥೫೫॥

ಮತ್ತಂ॥ ಸಿದ್ಧರಾಮಯ್ಯದೇವರು ಮಡಿವಾಳತಂದೆಗಳ ಸ್ತೋತ್ರಮಂ ಮಾಡಿದ ಪ್ರಸ್ಥಾವದ ವಚನ॥

ಎಲೆ ಅಯ್ಯ ಗಾರುಡವ ಬಲ್ಲನಯ್ಯ. ಮತ್ತೆ. ಗಾರುಡಿಗನಲ್ಲ ನೋಡಯ್ಯ. ಎನ್ನ ಮನದ ಮೇಲಿಪ್ಪ ಶಂಕೆ ಎಂಬ ವಿಷವ ಗಾರುಡಿಸಿ ಮಾಣಿಸಿ ನಿಃಶಂಕನ ಮಾಡಿದ ಕಪಿಲ ಸಿದ್ಧಮಲ್ಲಿನಾಥನಲ್ಲಿ ಮಡಿವಾಳ ಮಾಚಿತಂದೆಯ ಪಾದಕ್ಕೆ ನಮೋ ನಮೋ ಎನುತಿರ್ದೆನು ॥೫೬॥

ಹೀಗೆಂದು ಸಿದ್ಧರಾಮಯ್ಯ ಮಡಿವಾಳತಂದೆಗಳ ಸ್ತೋತ್ರಮಂ ಮಾಡಲು, ಆ ಮಡಿವಾಳಯ್ಯಗಳು ಸಿದ್ಧರಾಮಯ್ಯದೇವರ ಸ್ತೋತ್ರಮಂ ಮಾಡಿದ ಪ್ರಸ್ಥಾವದ ವಚನ॥

ಅಕ್ಕತಂಗಿಯರೈವರು ಒಬ್ಬನ ಅರಸಿಯರು, ಕಿರಿಯಕ್ಕನ ಕೂಡುವರೆ ಹಿರಿಯರಸಿ ಕುಂಟೆಣ್ಣೆ, ಹಿರಿಯರಸಿಯ ಕೂಡುವರೆ ಕಿರಿಯರಸಿ ಕುಂಟೆಣ್ಣೆ ಈ ಇಬ್ಬರನು ಕೂಡುವರೆ ಬೇರು ಮಾಡಿ ಬೆರಿಸಬಾರದೆಂದರಿದು ಒಂದಾಗಿ ಕೂಡಲು ಒಬ್ಬಾಕೆ ಕಣ್ಣ ಕೆಂಚನೆ ಮಾಡುವಳು. ಒಬ್ಬಾಕೆ ಬುದ್ಧಿಯನೆ ಹೇಳುವಳು. ಒಬ್ಬಾಕೆ ಹಾಸಿಕೊಡುವಳು. ಇವರಿಬ್ಬರನು ಅಪ್ಪಿಕೊಂಡು, ಒಂದೆ ಬಾರಿ ಬೆರಿಸಲು, ನೀರು ನೀರು ಬೆರಿಸಿದಂತಾಯಿತ್ತು. ಕಲಿದೇವಯ್ಯ ನಿಮ್ಮ ಶರಣ ಸಿದ್ಧರಾಮಯ್ಯ ದೇವರು ಈ ಪಥವ ಕಲಿಸಿ ನಿಜವಾಗಿ ವಾಸದಲ್ಲಿರಿಸಿದ ಕಾರಣ, ಅನು ನಮೋ ನಮೋ ಎನುತಿರ್ದೆನು ॥೫೮॥

ಇಂತೀ ಶ್ರೀ ಮತ್ಸಕಲ ಪುರಾತನರೋಳ್ ಪ್ರಭುದೇವರು ಮಹಾನುಭಾವ ಸಂಗೋಷ್ಠಿಯಂ ಮಾಡಿದ ಶೂನ್ಯ ಸಂಪಾದನೆಯೋಳ್ ಪ್ರಭುದೇವರ ಪೂಜಾಸ್ತುತಿಗಂ ಏಕಾದಶೋಪದೇಶ ಸಮಾಪ್ತ. ॥

ಆಯುದಕ್ಕಿ ಮಾರಯ್ಯಗಳ ಸಂಪಾದನೆ.

ದ್ವಾದಶೋಪದೇಶ.

॥ಕಂದ॥ ಅಕ್ಕಿಯೊಪ್ಪಿಡಿಯನಾಯ್ತಂ। ದಕ್ಕರಿನಿಂ ಬಸವ ಮುಖ್ಯ ಪ್ರಣಗರ್ಪಿಸಿ। ಗಕ್ಕನೆ ನಿಜದೊಳು ನಿಂದಾಯ್ದಕ್ಕಿಯ ಮಾರಯ್ಯಗಳ ಚರಿತ್ರವನುಸುರ್ವೆಂ ॥

ಅದೆಂತೆಂದೊಡಾ ಪ್ರಭುದೇವರು ಬಸವರಾಜದೇವರು ಮಡಿವಾಳ ಮಾಚಿ ತಂದೆಗಳು ಸಿದ್ಧರಾಮಯ್ಯದೇವರು ಸೊಡ್ಡಳ ಬಾಚರಸರು ಹಡಪದಪ್ಪಣ್ಣಗಳು ಮುಖ್ಯವಾದ ಅಸಂಖ್ಯಾತ ಮಹಾಗಣಂಗಳು ಸುಖಾನುಭಾವ ಸೋಷ್ಠಿಯೊಳಿರುತ್ತಿರಲು, ಆ ಪ್ರಸ್ಥಾವದೊಳು ಆಯಿದಕ್ಕಿಯ ಮಾರಿತಂದೆಗಳೆಂಬ ಶಿವಶರಣನು ಬಸವರಾಜದೇವರು ಮೊದಲಾದ ಶರಣ ಸಮೂಹದಲ್ಲಿಗೆ ಬಂದು ಪ್ರಭುದೇವರೊಡನೆ ತಮ್ಮ ಕಾಯಕದ ನಿರ್ವಂಚಕತ್ವವೆ ಗುರು ಲಿಂಗ ಜಂಗಮ, ಕಾಯಕವೆ ಕೈಲಾಸವೆಂದು ವಿನ್ನಹಂ ಮಾಡುವ ಪ್ರಸ್ಥಾವದ ವಚನ॥

ಕಾಯಕದಲ್ಲಿ ನಿರುತನಾದಡೆ, ಗುರು ದರುಶನವಾದಡೂ ಮರೆಯಬೇಕು. ಲಿಂಗ ಪೂಜೆಯಾದಡೂ ಮರೆಯಬೇಕು. ಜಂಗಮ ಮುಂದಿದ್ದಡೆಯೂ ಹಂಗುಹರಿಯಬೇಕು. ಕಾಯಕವೇ ಕೈಲಾಸವಾದ ಕಾರಣ. ಅಮರೇಶ್ವರ ಲಿಂಗವಾಯಿತ್ತಾದರೂ ಕಾಯಕದೊಳಗು ॥೧॥

ಮತ್ತಂ॥ ಹಾಗವ ಕಾಯಕವ ಮಾಡಿಕೊಂಡು ಹಣ ಅಡ್ಡವ ತಾ ಎಂಬಲ್ಲಿ ಸತ್ಯಕಾಯಕ ಉಂಟೆ? ಭಕ್ತರಲ್ಲಿ ಕಾಯಕಕ್ಕೆ ಕಡಿಮೆಯಾಗಿ ತಾ ಎಂಬುದು ಅಮರೇಶ್ವರ ಲಿಂಗಕ್ಕೆ ಚಿತ್ತ ಶುದ್ಧ ಕಾಯಕ ॥೨॥

ಮತ್ತಂ॥ ನೇಮವ ಮಾಡಿಕೊಂಡು, ಭಕ್ತರ ಭವನಂಗಳ ಹೊಕ್ಕು ಕಾಯಕಕ್ಕೆ ಸತ್ತು ಹಣ ಹೊನ್ನ ಬೇಡಿಹೆನೆಂಬುದು ಕಷ್ಟವಲ್ಲವೆ ಸದ್ಭಕ್ತಂಗೆ? ಆ ಗುಣ ಅಮರೇಶ್ವರ ಲಿಂಗಕ್ಕೆ ದೂರ ॥೩॥

ಮತ್ತಂ॥ ಗುರು ಲಿಂಗ ಜಂಗಮದಲ್ಲಿ ಬೆರಿಸಿ ದಾಸೋಹವ ಮಾಡುವಲ್ಲಿ ಹೊನ್ನು ಹಣ್ಣು ಮಣ್ಣು ಇವೇ ಮೂಲ ವೊದಲು. ಮಾಟ ಸ್ವಸ್ಥವಾದಲ್ಲಿ ಮೂರ ಮರೆಯಬೇಕು ಅಮರೇಶ್ವರ ಲಿಂಗವನರಿವುದಕೈ ॥೪॥

ಓಗೆಂದು ಆಯವಕ್ಕಿ ಮಾರಿತಂದೆಗಳು ತಮ್ಮ ಕಾಯಕದ ನಿಷ್ಠೆಯನೈದಿ ತಮ್ಮ ತಮಂ ಪ್ರಭುದೇವರೊಡನೆ ಬಿನ್ನೈಸಲು, ಇದಕ್ಕೆ ಪ್ರಭುದೇವರು ನಿಷ್ಠೆ ಪಿಸಿದ ಪ್ರಸ್ಥಾವದ ವಚನ॥

ಕಂಗಳ ಮುಂದಣ ಗೊತ್ತು ಹರಿಯದು. ಕಾವ್ಯದ ಮುಂದಣ ಚಿತ್ತ ಹರಿಯದು. ಮಾಡಿಹೆನೆಂಬ ಮಾಟ ಕೂಟದ ಚಿತ್ತ ನಿಂದಲ್ಲವೆ ಸ್ಪಷ್ಟವಿಲ್ಲ. ಹಾಗಲ್ಲದೆ ಲಿಂಗವ ಕಾಣಬಾರದು ಅಯದಕ್ಕಿಯ ಮಾರಯ್ಯ ॥೫॥

ಇದಕ್ಕೆ ಆಯಿದಕ್ಕಿಯ ಮಾರಯ್ಯಗಳು ಬಿನ್ನೈಸುವ ಪ್ರಸ್ಥಾವದ ವಚನ॥

ಒಂದ ಬಿಟ್ಟು ಒಂದ ಕೊಂಡಿಹೆನೆಂದರೆ ಅದು ಬಾರದ ಬಯಲು. ಒಂದರಲ್ಲಿ ಸಲೆ ಸಂದು ಹಿಂಗದ ಭಾವ ನೆಲೆಗೊಂಡಲ್ಲಿ ಅಮರೇಶ್ವರ ಲಿಂಗವು ತಾನೆ ॥೬॥

ಇದಕ್ಕೆ ಪ್ರಭುದೇವರ ಪ್ರತ್ಯುತ್ತರ ॥

ಮಾಡಿಹೆನೆಂಬನ್ನಬರ ತನ್ನ ಅವಧಿಗೆ ಬಂದುದನರಿವ ಪರಿ ಇನ್ನೆಂತೊ? ಅಸಗ ನೀರಡಿಸಿ ನಿಂದಂತೆ ಆಗಬೇಡಾ. ಗುಹೇಶ್ವರಲಿಂಗವನರಿವುದಕ್ಕೆ ಮಾರಯ್ಯ ॥೭॥

ಇದಕ್ಕೆ ಆಯಿದಕ್ಕಿಯ ಮಾರಿತಂದೆಗಳು ಬಿನ್ನೈಸುವ ಪ್ರಸ್ಥಾವದ ವಚನ ॥

ತೊಟ್ಟ ಬಿಡದನ್ನಕ್ಕರ ಮತ್ತಾ ಬುಡದಾಸೆ ಬೇಕು. ಮರ್ತ್ಯದ ಹಂಗು ಳನ್ನಕ್ಕರ ಸತ್ಯ ಶರಣರ ಸಂಗ ನಿತ್ಯ ಜಂಗಮ ಸೇವೆ ಕೃತ್ಯವಿರಬೇಕು. ಅಮಳೇಶ್ವರ ಲಿಂಗವನರಿಯಬೇಕು ॥೮॥

ಇದಕ್ಕೆ ಪುಭುದೇವರು ನಿರೂಪಿಸಿದ ಪ್ರಸ್ಥಾವದ ವಚನ ॥

ಮಾಡುವ ಮಾಟದಿಂದವೇ ಬೇರೊಂದನರಿಯಬೇಕು. ಅರಿವಿಂಗೆ ನೆಮ್ಮುಗೆ ಒಡಗೂಡಬೇಕು. ಅರುವಿಂಗೆ ನೆಮ್ಮುಗೆ ವಡಗೂಡಿದ ಬಳಿಕ ಬಯಲ ಭ್ರಮೆಯ ಕಳೆದು, ನಮ್ಮ ಗುಹೇಶ್ವರ ಲಿಂಗದಲ್ಲಿ ನಿಜಪದವನೈದುವುದು ಮಾರಯ್ಯ ॥೯॥

ಹೀಗೆಂದು ಪ್ರಭುದೇವರು ಮಹಾಘನಲಿಂಗದ ನಿಜಪದದಲ್ಲಿ ಬೆರೆದು ಎರಡಳಿದಿರಬೇಕೆಂದು ನಿರೂಪಿಲು, ಇದಕ್ಕೆ ಆಯಿದಕ್ಕಿ ಮಾರಿತಂದೆಗಳು

ನಿಷ್ಠೆಯನೈದಿ ತಮ್ಮ ಕಾಯಕದ ತಾವೆ ಜರಿದು ಘನಲಿಂಗದ ನಿಜ ಸಮಾಧಿಯೊಳಗೆ ಬೆರಸಿ ನಿಂದು ಪ್ರಭುದೇವರ ಶ್ರೀಪಾದಕ್ಕೆ ನಮಿಸಿರುವ ಪ್ರಸ್ಥಾವದ ವಚನ ॥

ಅಹುದಹುದು. ಗೆದಲಿ ಮನೆಯ ಮಾಡಿ ಸರ್ಪಂಗೆ ಇಂಬಾದಂತೆ ಮಾನತ್ತಣ ದ್ರವ್ಯವ ತಂದು, ಇತ್ತ ನೂಡಿದರೆ ನನಗಿನ್ನೆತ್ತಣ ಮುಕ್ತಿ? ನಿಮ್ಮ ಮಹಿಮ ಶರಣರ ಸಂಗದಿಂದ ಘನಕ್ಕೆ ಘನ ವೇದ್ಯವಾದ ಬಳಿಕ ಲಿಂಗವರತು ಮರಹು ನಷ್ಟವಾಗಿ, ಅಮರೇಶ್ವರ ಲಿಂಗದಲ್ಲಿ ನಿಜಪದವನೆರಸಿ ಪ್ರಭುದೇವರ ಶ್ರೀಪಾದಕ್ಕೆ ನಮೋ ನಮೋ ಎನುತಿರ್ದೆನು ॥೧೦॥

ಹೀಗೆಂದು ಆಯಿದಕ್ಕಿ ಮಾರಿ ತಂದೆಗಳು ನಿಮ್ಮ ಸಂಗದಿಂದ ಘನಲಿಂಗದಲ್ಲಿ ಮನಸಮ್ಮನಯೋಗವಾಯಿತ್ತೆಂದು ಪ್ರಭುದೇವರೊಡನೆ ಬಿನ್ನೈಪತ್ತಿರಲು ಆ ಪ್ರಸ್ಥಾವದೊಳು ಆಯಿದಕ್ಕಿ ಮಾರಯ್ಯಗಳ ಪುಣ್ಯಾಂಗ ಸೆಯಪ್ಪ ಲಕ್ಷಣಂಗಳು ಬಂದು ಪ್ರಭುದೇವರು ಮುಖ್ಯವಾದ ಅಸಂಖ್ಯಾತ ಮಹಾಗಣಂಗಳಿಗೆ ನಮಸ್ಕರಿಸಿ ತಮ್ಮ ಪತಿಗೆ ಕಾಯಕ ನಿಂದಿತ್ತು ಹೋಗಯ್ಯ ಎನ್ನಾಳ್ದನೆಂದು ಬಿನ್ನೈಸಿ ಕಳುಹುವ ಪ್ರಸ್ಥಾವದ ವಚನ॥

ಕಾಯಕ ನಿಂದಿತ್ತು ಹೋಗಯ್ಯ ಎನ್ನಾಳ್ದನೆ. ಭಾವ ಶುದ್ಧವಾಗಿ ಮಹಾಶರಣರ ತಿಪ್ಪಿಯ ತಪ್ಪಲ ಅಕ್ಕಿಯ ತಂದು ನಿಶ್ಚಯಿಸಿ ಮಾಡಬೇಕು ಮಾರಯ್ಯ ಪ್ರಿಯ ಅಮರೇಶ್ವರ ಲಿಂಗಕ್ಕೆ ಬೇಗ ಹೋಗು ಮಾರಯ್ಯ ॥೧೧॥

ಮತ್ತಂ ॥ ಅಂಗವರತ ಅರುವೆಯ ಅಂಗದಲ್ಲಿ ಬಯಕೆಯರತ ಕೈಯಲ್ಲಿ ತಂಡುಲವನಾಯ್ದುಕೊಂಡು ಸಂಗನ ಪ್ರಮಥರ ಅಂಗಳಕ್ಕೆ ಬೇಗ ಹೋಗಿ, ಕೊಂಡು ಬಾ ಮಾರಯ್ಯ ಪ್ರಿಯ ಅಮರೇಶ್ವರ ಲಿಂಗಕ್ಕೆ ಮಾರಯ್ಯ ॥೧೨॥

ಹೀಗೆಂದು ಲಕ್ಕಮ್ಮಗಳು ಆಯಿದಕ್ಕಿಯ ಮಾರಯ್ಯಗಳ ಕಾಯಕಕ್ಕೆ ಕಳುಹಲು, ಆ ಆಯಿದಕ್ಕಿಯ ಮಾರಯ್ಯಗಳು ಸಂತೋಷಚಿತ್ತರಾಗಿ, ದಳದಳನೆ ಬಸವೇಶ್ವರನ ಅಂಗಳಕ್ಕೆ ಬಂದು ಅಲ್ಲಿ ಜಲ್ಲಿದ ತಂಡುಲವಂ ಪಿರಿದಾಗಿ ಆಯಿದು ತರಲು. ಅದು ಆಸೆ ಎಂದು ಲಕ್ಕಮ್ಮಗಳು ನಿಡಂಬಿಸುವ ಪ್ರಸ್ಥಾವದ ವಚನ ।

ಸಂದಣಿಗೊಂಡು ಮನ ಪರುಷದಿಂದೆ ಬಸವಣ್ಣನ ಅಂಗಳಕ್ಕೆ ಹೋಗಿ ತಿಪ್ಪಿಯ ತಪ್ಪಲಲ್ಲಿ ಬಿದ್ದಿದ್ದ ತಂಡುಲವ ಕಟ್ಟಿಕೊಂಡು ಯಜಮಾನಿ

ತರಲು, ಯಯ್ಯಾಗಿ ಬಂದಿತಲ್ಲ. ಎಂದಿನಂದವೆ ಸಾಕು. ಮತ್ತೆ ಕೊಂಡು ಹೋಗಿ ಅಲ್ಲಿಯೆ ಸುರಿ. ಮಾರಯ್ಯ ಪ್ರಿಯ ಅಮಲೇಶ್ವರಲಿಂಗ ಕೊಟ್ಟ ಕಾಯಕವೆ ಸಾಕು ಮಾರಯ್ಯಾ ॥೧೩॥

ಆಸೆ ಎಂಬುದು ಅರಸಿಂಗಲ್ಲದೆ ಶಿವಭಕ್ತರಿಗುಂಟೆ ಎಲೆ ಅಯ್ಯ? ರೋಷವೆಂಬುದು ಯಮದೂತರಿಂಗಲ್ಲದೆ ಅಜಾತರಿಗುಂಟೆ ಎಲೆ ಅಯ್ಯ? ಈಸಕ್ಕಿಯ ಆಸೆ ನಿಮಗೇಕೆ? ಈಶ್ವರನೊಪ್ಪ. ಮಾರಯ್ಯ ಪ್ರಿಯ ಅಮಲೇಶ್ವರ ಲಿಂಗಕ್ಕೆ ದೂರ ಮಾರಯ್ಯ ॥೧೪॥

ಮತ್ತಂ॥ ಅಂಗಕ್ಕೆ ಬಡತನವಲ್ಲದೆ ಮನಕ್ಕೆ ಬಡತನ ಉಂಟೆ? ಬಟ್ಟೆ ಬಲ್ಲಿತ್ತೆಂದರೆ ಉಳಿಯ ಮೊನೆಯಲ್ಲಿ ಬಡತನ ಉಳ್ಳರೆ ಒಡೆಯಬೆ? ಘನ ಶಿವಭಕ್ತರಿಗೆ ಬಡತನವಿಲ್ಲ. ಸತ್ಯರಿಗೆ ದುಃಕರ್ಮವಿಲ್ಲ. ಎನಗೆ ಮಾರಯ್ಯ ಪ್ರಿಯ ಅಮಲೇಶ್ವರ ಲಿಂಗವುಳ್ಳನ್ನಕ್ಕರ ನನಗಾರ ಹಂಗಿಲ್ಲ ಮಾರಯ್ಯ ॥೧೫॥

ಮತ್ತಂ॥ ಭಕ್ತರು ಕಾಯಕವೆಂದು ದಾಯಗಾರಿಕೆಯಲ್ಲಿದ್ದು ದಾಸೋಹವ ಮಾಡಬಹುದೆ? ಒಮ್ಮನವ ತಂದು ಒಮ್ಮನದಲ್ಲಿಯೆ ಮಾಡಿ, ಇಮ್ಮನವಾಗದ ಮುನ್ನವೆ ಮಾರಯ್ಯ ಪ್ರಿಯ ಅಮಲೇಶ್ವರಲಿಂಗಕ್ಕೆ ಸಲ್ಲ ದೇಕು ಮಾರಯ್ಯ ॥೧೬॥

ಭಕ್ತಂಗೆ ಬಡತನ ಉಂಟೆ? ನಿತ್ಯರಿಗೆ ಮರಣ ಉಂಟೆ? ಭಕ್ತರು ಬಡವನೆಂದು ಮತ್ತೊಂದ ಕೊಟ್ಟಹೆನೆಂದರೆ ಮಾರಯ್ಯ ಪ್ರಿಯ ಅಮಲೇಶ್ವರ ಲಿಂಗವು ಸತ್ತಂದಿಗಲ್ಲದೆ ಬಡತನವಿಲ್ಲ ॥೧೭॥

ಮತ್ತಂ॥ ಆಯಿದು ಇಲ್ಲವಾದಂದಿಗಲ್ಲದೆ ಜಗದೊಳಗೆ ಆರಿಗು ಬಡ ತನವಲ್ಲದಿಲ್ಲ. ಆಯಿದುವುಳ್ಳನ್ನಕ್ಕ ಸಕಲ ಜೀವನಕ್ಕೆ ಜೀತನ ಮಾರಯ್ಯ ಪ್ರಿಯ ಅಮಲೇಶ್ವರಲಿಂಗವುಳ್ಳನ್ನಕ್ಕ ಘನ ಮನ ಸಂಪನ್ನರು ॥೧೮॥

ಮತಂ॥ ಬಾಹಾಗ ಕೊಂಡುಬಂದಪ್ರಾಪ್ತಿಯಲ್ಲಿದೆ ಜೇರೊಂದು ಗಳಿಸ ಲಿಲ್ಲ. ಜೇರೊಂದು ಕೆಡಿಸಲಿಲ್ಲ.ಬಂದುದು ನಿಂದುದು. ಮಾರಯ್ಯಪ್ರಿಯ ಅಮಲೇಶ್ವರ ಲಿಂಗ ಕೊಟ್ಟಲ್ಲದಿಲ್ಲ. ॥೧೯॥

ಮತ್ತಂ॥ ಕಾಯಕವಳಿದ ಠಾವಿನಲ್ಲಿ ಜೀವದ ಎಡೆಯಾಟ ಉಂಟೆ? ಭಾವಶುದ್ಧವಿಲ್ಲದ ಭಕ್ತಿ ಹೋಯಿತ್ತು ಮಾರಯ್ಯ ಪ್ರಿಯಅಮಲೇಶ್ವರಲಿಂಗಮುಟ್ಟದೆ. ॥೨೦॥

ಮೆತ್ತಂ॥ಗರ್ವದಿಂದ ಮಾಡುವ ಭಕ್ತಿ ದ್ರವ್ಯದ ಕೇಡು. ನಡೆಯಿಲ್ಲದ ಪುಡಿ ಅರುವಿಂಗೆ ಹಾನಿ. ಕೊಡದೆ ತ್ಯಾಗಿ ಎನಿಸಿಕೊಂಬುದು ಮುಡಿ ಇಲ್ಲದ ಶೃಂಗಾರ. ದೃಢವಿಲ್ಲದ ಭಕ್ತಿ ಅಡಿ ಒಡೆದ ಕುಂಭದಲ್ಲಿ ಸುಖಜಲನ ತುಂಬಿದಂತೆ ಮಾರಯ್ಯಪ್ರಿಯ ಅಮಲೇಶ್ವರ ಲಿಂಗ ಮುಟ್ಟದ ಭಕ್ತಿ. ॥೨೧॥

ಮತ್ತಂ॥ ಒಮ್ಮನವ ವಿಚಾರಿಸಿ ಇಮ್ಮನದಲ್ಲಿ ತಂದಿರಿ. ಇದು ನಿಮ್ಮ ಮನವೊ? ಬಸವಣ್ಣನ ಅನುಮಾನದ ಚಿತ್ತ.ಈ ಮಾತು ಮಾರಯ್ಯ ಪ್ರಿಯ ಅಮಲೇಶ್ವರ ಲಿಂಗಕ್ಕೆ ಸಲ್ಲದ ಜೋನವ ಅಲ್ಲಿಯೆ ಸುರಿದು ಬನ್ನಿ ಮಾರಯ್ಯ ॥೨೨॥

ಹೀಗೆಂದು ಅಯಿದಕ್ಕಿಯ ಮಾರಯ್ಯಗಳ ಪುಣ್ಯಾಂಗನೆ ಆಸೆಯ ವಿಡಂಬಿಸಿ ಲಿಂಗೈಕ್ಯದ ಮನವ ಭೇದವ ಎಚ್ಚರಿಸಿ ಬಿನ್ನೈಸುತ್ತಿರಲು,ಆ ಮಾಡಯ್ಯತಂದೆಗಳು ಬೆಜ್ಜರಂಬೋಗಿ, ಮಹಾಘನಲಿಂಗದೊಳಗೆ ವಾರಿ ವಾರಿ ಜೆರೆವ ಹಾಗೆ, ಶಿಖಿಕರ್ಪೂರ ಸಂಯೋಗದಂತೆ ಎಂದಪ್ಪುದೆಂದು ಬೆಸಗೊಂಬ ಪ್ರಸ್ಥಾವದ ವಚನ॥

ಗಂಗೆ ವಾಳುಕ ಸಮರುದ್ರೆರೆಲ್ಲರು ತಾವು ಬಂದಲ್ಲಿಯೆ ಬಟ್ಟೆಯ ಮೆಟ್ಟಿದಂತಾದರು. ಪ್ರಮಥ ಗಣಂಗಳೆಲ್ಲರು ಪ್ರಮಾಣಿದ್ದಲ್ಲಿಗೆ ಹರಿದರು. ಎನಗೆ ಅರಿವು ಕರಿಗೊಂಬ ಅರಿವೆಲ್ಲ ಅಮಲೇಶ್ವರ ಲಿಂಗದಲ್ಲಿ ಹೇಳಾ ॥೨೩॥

ಹೀಗೆಂದು ಮಾರಯ್ಯಗಳು ತಮ್ಮ ಪುಣ್ಯಾಂಗನೆಯ ಬೆಸಗೊಳಲು ಆ ಲಕ್ಕಮ್ಮಗಳು ಶಿವಲೋಕದ ಭ್ರಮೆಯ ವಿಡಂಬಿಸುವ ಪ್ರಸ್ಥಾವದ ವಚನ. ॥

ಮಾಡುವ ಮಾಟವುಳ್ಳನ್ನಕ್ಕ ಜೇರೊಂದು ಪದವನರಸಲೇತಕ್ಕೆ? ದಾಸೋಹವೆಂಬ ಸೇವೆಯ ಬಿಟ್ಟು ನಿರಿಸಲಾರದೆ ಕೈಲಾಸವೆಂಬ ಆಸೆ ಬೇಡ ಮಾರಯ್ಯ ಪ್ರಿಯ ಅಮಲೇಶ್ವರಲಿಂಗವಿದ್ದ ಠಾವೆ ಕೈಲಾಸವು. ॥೨೪॥

ಮತ್ತಂ॥ ಮಾಡಿ ನೀಡಿ ಹೋದಿಹೆನೆಂಬಾಗಲೆ ಕೈಲಾಸವೇನು ಕೈಕೂಲಿಯೆ? ಮುಂದೊಂದ ಕಲ್ಪಿಸದೆ ಹಿಂದೊಂದು ಭಾವಿಸದೆ, ಸಲೆ ಸಂದಿದ್ದಾಗಲೆ ಮಾರಯ್ಯಪ್ರಿಯ ಅಮಲೇಶ್ವರ ಲಿಂಗವಿದ್ದ ಠಾವೆ ಕೈಲಾಸ ॥೨೫॥

ಮತ್ತಂ॥ ಇದ್ದಿಹೆನೆಂಬ ಕಾಯದ ಆರಿಕೆ ಹಿಂಗಿತ್ತೆ? ನಾ ಮಾಡಿ ಕೆಸೆಂಬ ತವಕ ಹಿಂಗಿತ್ತೆ? ಉಭಯದ ಕೈಕೂಲಿ ಹಿಂಗ ಮಾರಯ್ಯ ಪ್ರಿಯ ಅಮಲೇಶ್ವರಲಿಂಗಕ್ಕೆ ಅಲಸಿಕೆಯಾಯಿತ್ತು ॥೨೬॥

ಹೀಗೆಂದು ಆಯಿದಕ್ಕಿಯ ಮಾರಯ್ಯಗಳ ಪುಣ್ಯಾಂಗನೆ ತನ್ನ ಪತಿಗೆ ವಿನ್ನೈಸಲು, ಇವಕ್ಕೆ ಮಾರಯ್ಯಗಳು ತಮ್ಮ ಸತಿಯ ಲಿಂಗಾಂಗಸಾಮರಸ್ಯ ಯೋಗಮುಂ ಬೆಸಗೊಂಬ ಪ್ರಸ್ಥಾವದ ವಚನ. ॥

ಅಂಧಕಂಗೆ ಜೀವನಿದ್ದರೆ ಕಣ್ಣಿನಿಂದಲೆ ಕಂಡು , ನಡೆಯಬಲ್ಲನೆ? ನೀ ಸತಿಯಾಗಿ ನಾ ಪತಿಯಾಗಿ ಉಭಯ ಪ್ರಾಣ ಏಕ ರೂಪಾಗಿ ಯೋಗವ ಅಂಗನೆಯ ಅಮುಲೇಶ್ವರಲಿಂಗವ ತೋರಾ. ॥೨೭॥

ಹೀಗೆಂದು ಆಯಿಪಕ್ಕಿಯ ಮಾರಿತಂದೆಗಳು ಲಿಂಗದೊಳು ಒಡಪೆರಸಿ ಬೆರಿಸುವ ಭೇದ ಹೇಗೆಂದು ತಮ್ಮ ಸತಿಯ ಬೆಸಗೊಳಲು, ಇದಕ್ಕೆ ಅಹಂಕಾರ ಗುಣವಳಿದು, ತ್ರಿವಿಧ ದಾಸೋಹವೆ ಮಹಾ ಘನಲಿಂಗೈಕ್ಯವೆಂದು ವಿನ್ನೈಸುವ ಪ್ರಸ್ಥಾವದ ವಚನ. ॥

ಕೈದುವ ಕುಡುವರಲ್ಲದೆ, ಕಲಿತನವ ಕೊಟ್ಟವರುಂಟೇ ಮಾರಯ್ಯ? ಹೆಣ್ಣ ಕುಡುವರಲ್ಲದೆ ಕೂಟಗಾದವರುಂಟೆ ಮಾರಯ್ಯ? ಕಳವ ಜೋರಂಗೆ ಬಡವರೆಂಬ ದಯ ಉಂಟೆ ಮಾರಯ್ಯ? ಮನವ ನೋಡಿ ಭಕ್ತಿಯ ನೋಡಿಹೆನೆಂಬವಂಗೆ ಎಮ್ಮಲ್ಲಿ ಗುಣವ ಸಂಪಾದಿಸಲಿಲ್ಲ. ಮಾರಯ್ಯ ಕೂಲವ ಹಾಯಬಂದಲ್ಲಿ ಮತ್ತಿನ್ನು ಸಾವಿಂಗೆ ಹಂಗುವಡಲೇಕೆ? ಮಾರಯ್ಯ ಪ್ರಿಯ ಅಮುಲೇಶ್ವರ ಲಿಂಗ ನೀನೆ ಬಲ್ಲೆ. ॥೨೮॥

ಮತ್ತಂ॥ ಸಸಿಗೆ ನೀರೆರೆದರೆ ಅಳುಕುದಲ್ಲದೆ ನಷ್ಟ ಮೂಲಕ್ಕೆ ಹೊತ್ತು ನೀರೆರೆದರೆ ಅಳುಕುವುದೆ? ಮಾರಯ್ಯ ನಿನ್ನ ವಿರಕ್ತಿ ನಷ್ಟವಾಗದ ಮುನ್ನವೆ ಮಾರಯ್ಯ ಪ್ರಿಯ ಅಮುಲೇಶ್ವರ ಲಿಂಗವನರಿಯೆಂ ರಯ್ಯ. ॥೨೯॥

ಮತ್ತಂ॥ ಪೂಜೆಯುಳ್ಳನ್ನಕ್ಕ ಪುಣ್ಯದ ಗೊತ್ತು ಕಾಣಬಂದಿತ್ತು. ಪಾಟವುಳ್ಳನ್ನಕ್ಕ ಮಹಾ ಪ್ರಮಥರ ಭಾಷೆ ಭಾಗ್ಯ ದೊರಕೊಂಡಿತ್ತು. ಪಾಟವಿಲ್ಲದವನ ಭಕ್ತಿ ಹಾಳೂರ ಮುಂದಿಟ್ಟಿಹ ಕೋಳಿದಲ್ಲಿ ಕಾಲನಿಟ್ಟು ಕೀಲ ಜಡಿಕೊಂಡಂತಾಯಿತ್ತು. ಮಾಡುವಲ್ಲಿ ಉಭಯವಳಿದು ಮಾಡಬಲ್ಲರೆ ಮಾರಯ್ಯಪ್ರಿಯ ಅಮುಲೇಶ್ವರ ಲಿಂಗವ ಕೂಡುವ ಕೂಟ ॥೩೦॥

ಮತ್ತಂ॥ ಪ್ರತಿಷ್ಠೆಗೆ ಮಾಟವಲ್ಲದೆ ಸ್ವಯುಂಭುವಿಂಗುಂಟೆ? ಉಳುವೆನೆಸಗು ನಿನಗು ಮಾರಯ್ಯ ಪ್ರಿಯ ಅಮುಲೇಶ್ವರ ಲಿಂಗವನರಿವುದಕ್ಕೆ ಬೇರೊಂದು ತಾಪುಂಟೆ ಮಾರಯ್ಯ? ॥೩೧॥

ಮತ್ತಂ॥ ಆವ ಬೀಜವ ಬಿತ್ತಿದರೂ ಸೊಳೆಯ ಮುಖ ಹಿಂಜುವುಂಟೇ? ನೀನು ಮರೆದಲ್ಲಿ ನಾನರಿದಲ್ಲಿ ಬೇರೊಂದೊಡಲುಂಟೇ? ಮೂಲ ನಷ್ಟನಾದಲ್ಲಿ ಅಂಕುರ ನಿಂದಿತ್ತು. ಕೂಟಕ್ಕೆ ಸತಿಪತಿ ಎಂಬ ನಾಮವಲ್ಲದೆ ಅರಿವಿಂಗೆ ಬೇರೊಂದೊಡಲುಂಟೇ? ಬೇರೊಂದಡಿಯಿಡದಿರು ಮಾರಯ್ಯ ಪ್ರಿಯ ಅಮುಲೇಶ್ವರಲಿಂಗವನರಿಯಬಲ್ಲಡೆ. ॥೩೨॥

ಇಂತೀತ್ರಿವಿಧ ದಾಸೋಹವೆ ಲಿಂಗೈಕ್ಯವೆಂದು ಆಯಿದಕ್ಕಿ ಮಾರಯ್ಯಗಳ ಸತಿ ತಮ್ಮ ಪತಿಗರುಹಲು ಆ ಮಾರಯ್ಯಗಳು ತ್ರಿವಿಧ ದಾಸೋಹವೆ ಸಚ್ಚಿದಾನಂದ ಬ್ರಹ್ಮವೆಂದು ನಿಶ್ಚೈಸಿದ ಪ್ರಸ್ಥಾವದ ವಚನ॥

ಗುರುಪೂಜೆಯ ಮಾಡುವಲ್ಲಿ ಗುರುಪೂಜೆಯಲ್ಲಿಯೆ ಮುಕ್ತರು. ಲಿಂಗ ಪೂಜೆಯ ಮಾಡುವಲ್ಲಿ ಲಿಂಗಪೂಜೆಯಲ್ಲಿಯೆಮುಕ್ತರು. ಜಂಗಮಪೂಜೆಯನಾಡುವಲ್ಲಿ ಜಂಗಮ ಪೂಜೆಯಲ್ಲಿಯೆ ಮುಕ್ತರು. ಈ ಮೂರೊಂದಾವಲ್ಲಿ ಬೇರೊಂದಂಗವಿಲ್ಲ. ಆಗು ಜೇಗೆ ಮೂರರಲ್ಲಿಯೆ ಅಡಗಿದ ಮತ್ತೆ ಅಮುಲೇಶ್ವರ ಲಿಂಗವ ಪೂಜಿಸಲಿಲ್ಲ. ॥೩೩॥

ಇಂತು ಆಯದಕ್ಕಿ ಮಾರಯ್ಯಗಳು ಆ ಮಾರಯ್ಯಗಳ ಸತಿಯು ಮಹಾನುಭಾವದಿಂದೋಲಾಡುತ್ತ ಮತ್ತಂ ತಮ್ಮ ಪತಿಯೊಡನೆ ಬಸವಣ್ಣ ಚನ್ನಬಸವಣ್ಣ ಪ್ರಭುದೇವರು ಮುಖ್ಯವಾದ ಅಸಂಖ್ಯಾತ ಮಹಾಗಣಂಗಳಿಗೆ ಲಕ್ಷದ ಮೇಲೆ ತೊಂಬತ್ತಾರು ಸಾವಿರ ಜಂಗಮ ದೇವರುಗಳಿಗೆ ಅಮುಲೇಶ್ವರ ಲಿಂಗದ ಮನೆಯಲ್ಲಿ ಪದಾರ್ಥವಾಯಿತ್ತೆಂದು ವಿಭೂತಿಯ ಕಳುಹುವ ಪ್ರಸ್ಥಾವದ ವಚನ॥

ಬಸವಣ್ಣ ಚನ್ನಬಸವಣ್ಣ ಪ್ರಭುದೇವರು ಮೊದಲಾದ ನೇಮ ನಿತ್ಯ ಕೃತ್ಯ ಸಕಲ ಸಮೂಹ ನಿತ್ಯ ನಿಯಮದ ಜಂಗಮ ಭಕ್ತರುಗಳು ಗಣಂಗಳು ಮುಂತಾದ ಸಮೂಹ ಸಂಪದಕ್ಕೆ ನೈವೇದ್ಯಕ್ಕೆ ವೇಳೆ ಎಂದು ಹೇಳಿ ಬಾ ಮಾರಯ್ಯಪ್ರಿಯ ಅಮುಲೇಶ್ವರ ಅಂಗದ ಮಹಾಮನೆಯಲ್ಲಿ ಪದಾರ್ಥವಾಯಿತ್ತೆಂದು ॥೩೪॥

ಹೀಗೆಂದು ಆಯಿದಕ್ಕಿಯ ಮಾರಯ್ಯಗಳ ಸತಿ ತಮ್ಮ ಪತಿಗೆ ಅಸಂಖ್ಯಾತ ಮಹಾಗಣಂಗಳಿಗೆ ವಿಭೂತಿಯ ಸಂಬಂಧಿಸಿ ಬನ್ನಿ ಎಂದು ವಿನ್ನೈಸಲು, ಆ ಮಾರಯ್ಯಗಳು ಶಿವ ಶಿವಾ ನಾನೆತ್ತ ನಿತ್ಯ ನಿಯಮ ಪ್ರತಶೀಲ ಸಂಪನ್ನರುಗಳಿಗೆ ಅವರವರ ನೇಮಂಗಳಂ ಸಲಿಸುವದು ನಮಗಳವೆ?

ನಾವು ನಿರ್ಧನಿಕರು. ಅಸಂಖ್ಯಾತ ಮಹಾಗಣಂಗಳಿಗೆ ತೃಪ್ತಿಬಡಿಸುವುದಕ್ಕೆ ನಾವು ಅಶಕ್ತರೆಂದು ನಿರೂಪಿಸುವ ಪ್ರಸ್ಥಾವದ ವಚನ ॥

ಗಣಸಹನೆಂದು ಕೂಡಿ ಮಾಡುವಲ್ಲಿ ಸಮಯದ ನೋವು. ಭೂರಿ ಡಾಗಿ ಮಾಟದ ಸಂದೇಹವ ಹೊತ್ತು ಮಾತಿಗೊಳಗಾದಲ್ಲಿ ಭಕ್ತಿ ನಿಃ ಸಿಕ್ಕಿತು. ಅಮಲೇಶ್ವರಲಿಂಗಕ್ಕೆ ದೂರವಾಯಿತ್ತು. ॥೩೫॥

ಹೀಗೆಂದು ಮಾರಯ್ಯಗಳು ತನ್ನ ಸತಿಯೊಡನೆ ಭಕ್ತಿ ನಿಜವಾಗ ದೆಂದು ಎಡೆಯಲ್ಲಿ ಕೆಡುವುದೆಂದು ನಿರೂಪಿಸಲು, ಇದಕ್ಕೆ ಮಾರಯ್ಯಗಳ ಸತಿ ಶಿವನ ಕರುಣವ ಪಡೆದ ಶಿವಭಕ್ತರುಗಳು ಅಹುದಾಗದೆಂಬ ಸಂದೇ ಹವ ಮಾಡಲಾಗದೆಂದು, ಬಿನ್ನೈಸುವ ಪ್ರಸ್ಥಾವದ ವಚನ ॥

ಮನಶುದ್ಧವಿಲ್ಲದವರಿಗೆ ಧನ್ಯದ ಬಡತನವಲ್ಲದೆ ಚಿತ್ತಶುದ್ಧದಲ್ಲಿ ಕಾಯಕವ ಮಾಡುವಲ್ಲಿ ಸದ್ಭಕ್ತಂಗೆ ಎತ್ತ ನೋಡಿದಡತ್ತ ಲಕ್ಷ್ಮಿ ತಾನಾ ಗಿಪ್ಪಳು, ಮಾರಯ್ಯ ಪ್ರಿಯ್ಯ ಅಮಲೇಶ್ವರ ಲಿಂಗದ ಸೇವೆಯುಳ್ಳನ್ನಕ್ಕ ॥೩೬॥

ಮತ್ತಂ॥ ಅವಾರಿ ಎಂದು ಮಾಡುವಲ್ಲಿ ಅವರಿವರೆಂದು ಪ್ರಮಾಣ ಸಲುಂಟೆ? ಸಮಯಕ್ಕೆ ಹೋಗಿ ಸಮಯವನರಿಯತೆಂದು ಭವಗೆಡಲುಂಟೆ? ಭಾವಜ್ಞನಾದಡೆ ಭಾವವನರಿದಲ್ಲಿ ಶುಚಿಯಾಗಿರಬಲ್ಲರೆ ಮಾರಯ್ಯ ಪ್ರಿಯ ಅಮಲೇಶ್ವರ ಲಿಂಗವ ಹೊಂದುವ ಭಾವ ॥೩೭॥

ಹೀಗೆಂದು ಮಾರಯ್ಯಗಳ ಸತಿ ತನ್ನ ಪತಿಗೆ ಬಿನ್ನೈಸಲು, ಆ ಮಾರಯ್ಯ ಗಳು ಹರುಷಂದಳೆದು ದರಹಸಿತ ವದನದಿಂದ ಸಕಲ ಪ್ರಮಥರ್ಗೆ ವಿಭೂ ತಿಯ ಸಂಬಂಧಿಸುವೆನೆನುತ ನೀನು ಕಳುವುದೆಲ್ಲಿ ಪ್ರಮಥರ್ಗೆ ಸಲುವ ಸಲುವ ಸೇವಾಂಗಳಲ್ಲಿ ಪದಾರ್ಥವನನುಗೆಯ್ಯಿಸಲು ಅನಿತರೊಳಗೆ ಮಾರಯ್ಯಗಳ ಸತಿ ಬಸವಾದಿ ಅಸಂಖ್ಯಾತರಶೃತ್ಯಮುಲ ಮಧ್ಯದಲ್ಲಿ ಮಹಾಜ್ಞಾನದಿಂದ ನಿರೀಕ್ಷಿಸಿ ಅವರವರಾಯತದ ಪದಾರ್ಥವ ನಿಮಿಷದೊಳಗನುಗೈದು ವಿಭೂ ತಿಯ ಸಂಬಂಧಿಸಿ ಬಿಜಯಂಗೈಸಿ ತಹುದೆಂದು ಬಿನ್ನೈಸಲು, ಆಗ ಮಾರಯ್ಯಗಳು ಅಸಂಖ್ಯಾತ ಪ್ರಥಮರೆಲ್ಲರು ಸಹವಾಗಿ ಅಮಲೇಶ್ವರ ಲಿಂಗದ ಮನೆಯಲ್ಲಿ ಪ್ರಸಾದವ ಸಲಿಸುವ ಬಾರಾ ಸಂಗನಬಸವಣ್ಣಾ ಎಂದು ವಿಭೂತಿಯ ಸಂಬಂಧಿಸುವ ಪ್ರಸ್ಥಾವದ ವಚನ ॥

ಸತ್ಯವೆಂಬ ತಟ್ಟೆಯಲ್ಲಿ ಚಿತ್ತಶುದ್ಧವೆಂಬ ವಿಭೂತಿಯ ಬೈಚಿಟ್ಟು ಸಂಪದ ಪ್ರಮಥರು ಮುಂತಾಗಿ ಅಮಲೇಶ್ವರಲಿಂಗವ ಆಶ್ರಯ ಪ್ರಸಾದವ ಕೊಂಬುದಕ್ಕೆ ಬಾರಾ ಸಂಗನಬಸವಣ್ಣಾ ॥೩೮॥

ಇದಕ್ಕೆ ಬಸವರಾಜದೇವರ ಪ್ರತ್ಯುತ್ತರ ॥

ಅಲ್ಲೆನಬಾರದು ಅಹುದೆನಬಾರದು. ಕೂಡಲಸಂಗನ ಶರಣರ ಸಂಗ ವಸವ ಬಾಯಿಧಾರೆಯಂತೆ ಅರಿಬಿಂಪೈಯ್ಯ ॥೩೯॥

ಇದಕ್ಕೆ ಮಾರಯ್ಯಗಳ ಪ್ರತ್ಯುತ್ತರ ॥

ಸಮಯಕ್ಕೆ ಬಂದಿಹೆನೆಂದು, ಕಂದದೆ ಬಾರೆನೆಂದು, ಕುಂದದೆ ಉಭ ಯದ ಸಂದಳಿದು ನಿಂದಲ್ಲ ಅಮಲೇಶ್ವರ ಲಿಂಗವು ತಾನೆ ॥೪೦॥

ಹೀಗೆಂದು ಮಾರಯ್ಯಗಳು ಬಿನ್ನೈಸಲು ಇದಕ್ಕೆ ಬಸವರಾಜದೇವರು ಅಸಂಖ್ಯಾತರು ಸಹಿತ ಮಾರಯ್ಯಗಳ ಮಠಕ್ಕೆ ಪೋಪೆನೆಂದು ಹಾರೈಸಿ ವ ಪ್ರಸ್ಥಾವದ ವಚನ ॥

ಆಕಾಶವ ಮೀರುವ ತರುಗಿರಿಗಳುಂಟೆ? ಸತಿ ದೃಷ್ಟಿಯಾಗಿ ಮಾಡ ಲ್ಲಿರೆ ಅದೇ ಮಾಟ. ಕೂಡಲಸಂಗನುದೇವರ ಕೂಡುವ ಕೂಟ ॥೪೧॥

ಹೀಗೆಂದು ಅಸಂಖ್ಯಾತರು ಮುಖ್ಯವಾಗಿ ಬಸವರಾಜದೇವರು ಳಲು ಮಾರಯ್ಯಗಳು ಬಿಜಯಂಗೈಸಿ ತಂದು ತಮ್ಮ ಮನೆಯೊಳಗಿಸಿದ ಪ್ರಸ್ಥಾವದ ವಚನ॥

ವಿಶ್ವಮಯ ನಿಶ್ಚಯರೂಪಾಗಿಬಂದೆಯಯ್ಯ! ಭಕ್ತಿಗೆ ಎನ್ನ ಮನಕ್ಕೆ ಭಿನ್ನವಿಲ್ಲದೆ ಸಲೆಸಂದ ನಿಲವು ಅಮಲೇಶ್ವರಲಿಂಗಕ್ಕೆ ಕೂಟವಾಯಿತ್ತು ॥೪೨॥

ಇಂತು ಅಸಂಖ್ಯಾತ ಮಹಾಗಣಂಗಳು ಸಹಿತ ಬಸವರಾಜ ದೇವರು ಪ್ರಭುದೇವರು ಸಹಿತ ಬಿಜಯಂಗೈಸಿ ತಂದು ಪಾದಾರ್ಚನೆಯಂ ಮಾಡಿಸಿ ಸಿಂಹಾಸನವನಿಕ್ಕಿ ಶರಣರ ಮನವಣಿವನ್ಯೆಗಂ ಎಡೆ ಮಾಡಿ ಓರ್ವರ್ಗೆ ಮನದ ಆಯತದ ಪದಾರ್ಥಂಗಳಂ ಮತ್ತಂ ಮಹೇಶ್ವರರ ಇಚ್ಛಾಪದಾ ರ್ಥಮಂ ಸಲಿಸಲು ಎಲ್ಲ ಗಣಂಗಳು ಪದುರುಚಿಯ ಲಿಂಗಕ್ಕರ್ಪಿಸಿ ತೃಪ್ತಿ ಪಡೆಯಲು ಅದಂ ಕಂಡು ಪ್ರಭುದೇವರು ಆಶ್ಚರ್ಯಮಂ ಒಟ್ಟು ಬಸವ ರಾಜದೇವರೊಡನೆ ನಿರೂಪಿಸುವ ಪ್ರಸ್ಥಾವದ ವಚನ॥

ಆರಾರ ನೇಮಕ್ಕೆ ಸಂದಿತ್ತು. ಇಷ್ಟಾ ಭೋಜನಕ್ಕೆ ಕೃತ್ಯವಾಯಿತ್ತು. ಮನಘನವುಕಂಡಯ್ಯ ಸಂಗನಬಸವಣ್ಣಾ ಗುಹೇಶ್ವರಲಿಂಗಕ್ಕೆ ಆಪ್ತಯ್ಯವಾಯಿತ್ತು. ॥೪೩॥

ಹೀಗೆಂದು ಪ್ರಭುದೇವರು ನಿರೂಪಿಸಲು, ಅದಕ್ಕೆ ಬಸವರಾಜದೇವರು ನಿಮ್ಮ ಶರಣರು ಬಡವರಲ್ಲ, ಘನ ಮಹಿಮರೆಂದು ಬಿನ್ನೈಸುವ ಪ್ರಸ್ಥಾವದ ವಚನ. ॥

ಮನೆ ನೋಡಾ ಬಡವರು. ಮನ ನೋಡಾ ಸಂಪನ್ನರು. ಧನ ನೋಡಾ ಬಡವರು. ಘನ ಮನ ಸಂಪನ್ನರು. ಕೂಡಲಸಂಗನ ಶರಣರು ಕರುಳಿಲ್ಲದ ಕಲಿಗಳು. ಅರಿಗುಪಮಿಸಬಾರದು. ॥೪೪॥

ಹೀಗೆಂದು ಬಸವರಾಜದೇವರು ಬಿನ್ನೈಸಲು, ಅದಕ್ಕೆ ಪ್ರಭುದೇವರು ತೃಪ್ತಿವಡೆದೆವೆಂದು ನಿರೂಪಿಸುವ ಪ್ರಸ್ಥಾವದ ವಚನ. ॥

ಉಭಯದೃಷ್ಟಿಯಲ್ಲಿ ಪೃಷ್ಟವ ಕಾಂಬಂತೆ, ದಂಪತಿ ಏಕಭಾವವಾಗಿ ನಿಂದಲ್ಲಿ ಗುಹೇಶ್ವರ ಲಿಂಗಕ್ಕೆ ಅರ್ಪಿತವಾಯಿತ್ತು ಸಂಗನಬಸವಣ್ಣಾ. ॥೪೫॥

ಹೀಗೆಂದು ಪ್ರಭುದೇವರು ನಿರೂಪಿಸಲು, ಆ ಮಾರಯ್ಯಗಳು ನಿರಹಂಭಾವದಲ್ಲಿ ನುಡಿವ ಪ್ರಸ್ಥಾವದ ವಚನ. ॥

ತನುಪೀವಡೆ ತನುವೆನಗಿಲ್ಲ. ಮನವೀವಡೆ ಮನವೆನಗಿಲ್ಲ. ಧನವೀವಡೆ ಧನವೆನಗಿಲ್ಲ. ಇಂತೀ ತನು ಮನ ಧನ ಸಕಲ ಸಂಪತ್ತುಗಳು ನಿಮ್ಮ ಶರಣರ ತಪ್ಪಲಕ್ಕಿಯನಾಯ್ದು ತಂದು ಎನ್ನೊಡಲ ಹೊರಪಿನಲ್ಲಿದೆ ಅಮಲೇಶ್ವರ ಲಿಂಗಕ್ಕೆ ನೀಡುವ ಬಯಕೆ ಎನಗಿಲ್ಲ ಸಂಗನಬಸವಣ್ಣಾ. ॥೪೬॥

ಮತ್ತಂ॥ ಎನಗೆ ಮನೆ ಇಲ್ಲ. ಎನಗೆ ಧನವಿಲ್ಲ; ಮಾಡುವದೇನು? ನೀಡುವದೇನು? ಮನೆ ಧನ ಸಕಲಸಂಪದ ಸೌಖ್ಯವುಳ್ಳ ನಿಮ್ಮ ಶರಣರ ತಪ್ಪಲಕ್ಕಿಯನಾಯ್ದು ಎನ್ನೊಡಲ ಹೊರವೆನಾಗಿ ಅಮಲೇಶ್ವರಲಿಂಗಕ್ಕೆ ನೀಡುವ ಬಯಕೆ ಎನಗಿಲ್ಲ ಸಂಗನಬಸವಣ್ಣಾ ॥೪೭॥

ಹೀಗೆಂದು ಆಯಿದಕ್ಕಿಯ ಮಾರಯ್ಯಗಳು ನಿರಹಂಭಾವದಿಂದ ನುಡಿದ ಮತ್ತಿರೆ ಆ ಬಸವರಾಜದೇವರು ಆ ಮಾರಯ್ಯಗಳ ವೈಭವವ ಸಂಭಾವಿಸುವಲ್ಲಿ ಸಂಕಲ್ಪಿಸಿದೆನಲಾ ಎಂದು ಅನುತಾಪಂಬಟ್ಟ ಪ್ರಸ್ಥಾವದ ವಚನ.

ನಾನಾಡುವುದೆಲ್ಲವು ಅನಾಚಾರ. ನಾನುಡಿವುದೆಲ್ಲವು ಅವಿಚಾರ. ನಡೆ ಶುದ್ಧವಿಲ್ಲದಪವಿತ್ರನ ತಂದು ನಿಮ್ಮೊಕ್ಕುಡಿಕ್ಕೆ ಸಲಹಿದಿರಾಗಿ, ಬರಿಗಿನ್ನಾವ ಭಯವಿಲ್ಲ. ಕೂಡಲ ಸಂಗಮದೇವರು ಸಾಕ್ಷಿಯಾಗಿ ಆಯಿತ್ತೆ ಮಾರಯ್ಯನ ಮನೆಯ ಮಗ ನಾನು ॥೪೪॥

ಹೀಗೆಂದು ಬಸವರಾಜದೇವರು ನುಡಿಯಲು, ಆ ಮಾರಯ್ಯಗಳು ಬಸವರಾಜದೇವರ ಸ್ತುತಿಸಿದ ವಚನ ॥

ಹಮ್ಮು ಬಿಮ್ಮುಗಳಿದ ಅನುವರಿತ ಶಿವ ನೀನು. ಎನ್ನ ಕರಸ್ಥಲದ ಕಳಿ ನೀನು. ಎನ್ನ ಮನೋ ಮಧ್ಯದ ಸ್ವಯಂಜ್ಯೋತಿ ನೀನು. ಅಮಲೇಶ್ವರ ಲಿಂಗದ ಅನುವಿನ ಕಳಿ ನೀನು, ಸಂಗನಬಸವಣ್ಣಾ ॥೪೯॥

ಮತ್ತಂ॥ ಆ ಮಾರಯ್ಯಗಳು ತಮ್ಮ ಕಟ್ಟಿನ ನೇಮದ ನಿಷ್ಠೆ ಬಸವಣ್ಣಾ ನೀನೆ ಎಂಬುದ ಮಡಿವಾಳ ಮಾಚಿತಂದೆಗಳು ಬಲ್ಲರೆಂದು ಬಿನ್ನೈಸುವ ಪ್ರಸ್ಥಾವದ ವಚನ ॥

ಭಕ್ತರ ಭಾವದಲ್ಲಿ ಸುಳಿವ ಸಾಧುಶಿವಿರಕ್ತರ ಜ್ಞಾನದಲ್ಲಿ ಹೊಳೆವ ಕಳೆಯು ನೀನಯ್ಯ. ಸೂರ್ಯನ ಜೆಗಿನೊಳಗೆ ಸಚರಾಚರ ಪ್ರಾಣಿಗಳು ಸುಳಿವಂತೆ ನಮ್ಮ ಕಟ್ಟಿದ ನೇಮದ ನಿಷ್ಠೆ ನೀನೆ ಅಯ್ಯ. ಅಮಲೇಶ್ವರ ಲಿಂಗದ ಒಡಲು ಸಂಗನಬಸವಣ್ಣನೆಂಬುದನು ಮಡಿವಾಳ ಮಾಚಿತಂದೆಗಳಿ ಬಲ್ಲರು ಕಾಣಾ ಸಂಗನಬಸವಣ್ಣ ॥೫೦॥

ಮತ್ತಂ॥ ಆ ಮಾರಯ್ಯಗಳು ಬಸವರಾಜದೇವರ ಸ್ತೋತ್ರಮಂ ಮಾಡುವ ಪ್ರಸ್ಥಾವದ ವಚನ ॥

ಮನದಲ್ಲಿ ಹುಟ್ಟಿದ ಅರಿವು ಮಾಡುವ ಮಾಟದಲ್ಲಿ ಕಾಣಬಹುದು. ಶರಣರ ಸಂಗಕ್ಕೆಳಸಿದ ಚಿತ್ತನ ಅನುಭಾವದಲ್ಲಿ ಕಾಣಬಹುದು. ಒಳ ಹೊರಗೆ ತೆರಹಿಲ್ಲದ ಕೂಟ ನಿನ್ನದು. ಅಮಲೇಶ್ವರ ಲಿಂಗದಲ್ಲಿ ಸಂಗನ ಬಸವಣ್ಣಾ ನಿಮ್ಮ ಪಾದಕ್ಕೆ ನಮೋ ನಮೋ ಎಂದೆನು ॥೫೧॥

ಮತ್ತಂ॥ ಅವ್ಯಕ್ತ ಸವಿ ಸ್ವಾದಿಸುವರಂಗಲ್ಲದೆ, ಅವ್ಯಕ್ತ ತನ್ನ ತಾ ಸ್ವಾದಿಸಿದ ಪರಿಯಂತೆ ನಿತ್ಯ ತೃಪ್ತಂಗೆ ಅಪ್ಯಾಯನ ಉಂಟೆ? ಎಳನೂರೆಪ್ಪತ್ತು ಅಮರಗಣಂಗಳು ಕಟ್ಟಲಿಯದ ನೇಮದ ಕಟ್ಟು ನಿನ್ನದು. ನಿನಗೆ ಭಾವ ನಿರ್ಭಾವವೆಂಬುದುಂಟೆ? ಅಮಲೇಶ್ವರ ಲಿಂಗದಲ್ಲಿ ಸಂಗನಬಸವಣ್ಣಾ ನಿಮ್ಮ ಪಾದಕ್ಕೆ ನಮೋ ನಮೋ ಎಂದೆನು ॥೫೨॥

ಹೀಗೆಂದು ಸ್ತೋತ್ರವಂ ಮಾಡಿದ ತದನಂತರದಲ್ಲಿ ಆ ಮಾರ
ಗಳು ತಮ್ಮ ಭಕ್ತಿ ಪ್ರಕಟವಾಯಿತ್ತೆಂದು ತಮ್ಮ ಲಿಂಗದಲ್ಲಿ ಐಕ್ಯವಾ
ಪ್ರಸ್ತಾವದ ವಚನ ॥

ಚಂದ್ರಕಾಂತದ ಶಿಲೆಯಲ್ಲಿ ಬಿಂದು ಅಡಗಿದಂತೆ ಗೊವುಗಳ
ಗೊರೋಜನ ರಂಜಿಸುವಂತೆ, ಶಿಲೆ ಕಾಷ್ಠಂಗಳಲ್ಲಿ ಅನಲ ಅಡಗಿಸ್ಪಂ
ಸತ್ಯರ ಹೃದಯದಲ್ಲಿ ಮೌಕ್ತಿಕದ ಉದುಕದಂತೆ ಭಾವವಿಲ್ಲದೆ ಅಡಗಿ
ಅಮಲೇಶ್ವರ ಲಿಂಗದಲ್ಲಿ ॥೫೩॥

ಇಂತು ಆಯಿದಕ್ಕಿಯ ಮಾರಯ್ಯಗಳು ತಮ್ಮ ಲಿಂಗವಲ್ಲಿ ನಿರ
ಯವನ್ಯೈದಲು, ಆ ಮಾರಯ್ಯಗಳ ಸತಿ ತಮ್ಮ ಪತಿಯೊಡನೆ ಲಿಂಗೈಕ್ಯ
ವಾದ ಪ್ರಸ್ತಾವದ ವಚನ ॥

ಪ್ರಭುದೇವರು ಬಸವಣ್ಣ ಚನ್ನಬಸವಣ್ಣ ಮೊದಲಾದ ಸಕಲ ಪ್ರಮ
ಥಗಣಂಗಳು ನೇಮನಿತ್ಯದ ಜಂಗಮಲಿಂಗ ಮುಂತಾದ ಸರ್ವ ಸಮೂ
ಹಕ್ಕೆ ತ್ರಿಕರಣ ಶುದ್ಧವಾಗಿ ಭಾವದ ಭ್ರಮೆಯಡಗಿ ಜೀವ ವಿಕಾರ ನಿಂದು
ಮಾಡುವ ಮಾಟ ಸಮಯದಿಂದ ಮಾರಯ್ಯಪ್ರಿಯ ಅಮಲೇಶ್ವರ ಲಿಂಗ
ದಲ್ಲಿ ಐಕ್ಯ. ॥೫೪॥

ಇಂತೀ ಶ್ರೀಮತ್ಸಕಲ ಗಣ ಪುರಾತನರೊಳ್ ಪ್ರಭುದೇವರು ಮಹಾ
ನುಭಾವ ಸದ್ಗೋಷ್ಠಿಯಂ ಮಾಡಿದ ಶೂನ್ಯಸಂಪಾದನೆಯೊಳ್ ಆಯಿದ
ಕ್ಕಿಯ ಮಾರಯ್ಯಗಳ ಸಂಪಾದನೆಗಂ ದ್ವಾದಶೋಪದೇಶ ಸಮಾಪ್ತ.

The Vijay College
LIBRARY
VIJAY COLLEGE,
T[illegible] JR.

ಮೋಳಿಗೆ ಮಾರಯ್ಯಗಳ ಸಂಪಾದನೆ.

ತ್ರಯೋದಶೋಪದೇಶ.

॥ಕಂದ॥ ಹೊನ್ನ ಜಾಳಿಗೆಗಳಂ ಬಸ। ವಣ್ಣ ನಿರ್ಧಕರೆಂದು ಇರಿ
ಲಿಪ್ಪ ಮಾರ। ಯ್ಯಂ ನಗುತಜರಿದು ತರಕಂ। ಸ್ಪರ್ಧದ ದಂಡಗಳ
ಪ್ಪಡಿಂತೆನೆ ಪೇಳ್ದಿಂ ॥

ಅದೆಂತೆಂತೊಡಾ ಆಯಿದಕ್ಕಿಯ ಮಾರಯ್ಯಗಳು ಅವರ ಸತಿಯು
ಲಿಂಗೈಕ್ಯವಾಗಲು, ಅವರ ಲಿಂಗೈಕ್ಯದ ಪರಮ ಸೌಖ್ಯವನು ಕಂಡು ಎಲ್ಲ
ಗಣಂಗಳು ಸಂತೋಷಂಬಟ್ಟು ಬಸವರಾಜ ದೇವರ ಮಹಾಮನೆಗೆಯ್ದಿ
ಬಸವಣ್ಣ ಚನ್ನಬಸವಣ್ಣ ಪ್ರಭುದೇವರು ಸಿದ್ಧರಾಮಯ್ಯದೇವರು ಅಪ್ಪ
ಣ್ಣಗಳು, ಸೊಡ್ಡಳಬಾಚರಸರು ಮೊದಲಾದ ಅಸಂಖ್ಯಾತ ಪ್ರಮಥಗಣಂ
ಗಳೆಲ್ಲರು ಪಡುಸ್ಥಲಸ್ವರೂಪು ನಿರ್ಣಯ ಪ್ರಸಂಗ ಪರಿಣಾಮದ ಪರಮಾ
ನಂದ ಪರಮಾಮೃತ ಶರಧಿಯೊಳಗೆ ಓಲಾಡುತ್ತಂ ಇರಲು, ಇತ್ತ ಮತ್ತೊ
ರ್ವ ಮೋಳಿಗೆಯ ಮಾರಯ್ಯನೆಂಬ ಶರಣನು ಕಾಶ್ಮೀರ ದೇಶಾಧಿಪತಿತ್ವದಿಂ
ದಿರ್ದು, ಅದಂ ತ್ಯಜಿಸಿ, ಸತಿಸತಿಗೀರ್ವರು ಕಲ್ಯಾಣಕ್ಕೆ ಬಂದು ಮೋಳಿ
ಗೆಯ ಕಾಯಕಮಂ ಮಾಡಿಕೊಂಡು ಜಂಗಮಾರ್ಚನೆಯ ಮಾಡುತ್ತಿರೆ
ಬಸವರಾಜದೇವರ ಗೃಹದಲ್ಲಿ ಇಚ್ಛಾಪದಾರ್ಥಮುಂ ಪಡುರುಚಿಯುಂ ಸ್ವೀಕ
ರಿಸಿವ ಜಂಗಮಮೂರ್ತಿಗಳು ಆ ಮೋಳಿಗೆಯ್ಯನ ಗೃಹಕ್ಕೆ ಬಂದು,
ಉಬಕಳಮುಂ ಸ್ವೀಕರಿಸಿ, ಆ ಬಸವರಾಜದೇವರ ಗೃಹಕ್ಕೆ ಹೋಗಿ ಅತಿ
ಶಯದಿಂ ಕೊಂಡಾಡಿ ಪೇಳುತ್ತಿರೆ ಬಸವರಾಜದೇವರು ಮೋಳಿಗೆಯ್ಯಗಳ
ಸ್ತುತಿಸಿದ ವಚನ. ॥

ನಿಷ್ಠೆಯಿಂದಲಿ ಲಿಂಗವ ಪೂಜಿಸಿ, ಮತ್ತೊಂದು ಪಥವನರಿಯದ
ಶರಣರು ಸರ್ವಾಂಗ ಪೆಡೆಯು ಮಾಣಿಕ್ಯದಂತಿಪ್ಪರು ಭೂಷಣರಾಗಿ. ದರ್ಪಣ
ದೊಳಗಣ ಪ್ರತಿಬಿಂಬದಂತೆ ಹಿಂಗದಿಪ್ಪರು ಕೂಡಲ ಸಂಗಮದೇವ ನಿಮ್ಮ
ಶರಣರು. ॥೧॥

ಮತ್ತಂ॥ ವೆಬಸವರಾಜದೇವರು ಮೋಳಿಗೆಯ್ಯಗಳ ಗೃಹಕ್ಕಂ ಪೋಗ
ಲೇಕೆಂದು ಎರಡು ಜಾಳಿಗೆಯ ಹೊನ್ನಂ ಕೊಂಡು ಬಂದು ಅವರಂಗ

ಳವಲ್ಲಿ ನಿಂದು ಇಂಥಾ ಭಕ್ತರ ಮನೆಯಲ್ಲಿ ಅನ್ನೋದಕಂಗಳ ಬೇಡಿ ಕೊಂಡು ಸ್ವೀಕರಿಸಿದರೆ ಸಮಸ್ತ ಪಾಪ ಕ್ಷಯವೆಂದು ಕೊಂಡಾಡಿದ ಪ್ರಸ್ಥಾವದ ವಚನ. ॥

ಉಪಪಾತಕ ಮಹಾಪಾತಕಮುಂ ಮಾಡಿದವನು ಸದ್ಭಕ್ತರ ಮನೆಗೆ ಹೋಗಿ ಅವರೊಕ್ಕ ಪ್ರಸಾದವನಾಯ್ದುಕೊಡುಂಡಂಡೆ ಸಕಲ ಬ್ರಹ್ಮಹತ್ಯಾದಿ ಪಾತಕ ಪರಿಹಾರ. ಒನ್ಮೆ ಬೇಡಿಕೊಂಡುಂಡಡೆ ಪಾತಕೆಪು ಮನಃಪ್ರಸ್ತಿ. 'ಶಿವಭಕ್ತ ಗೃಹಂ ವ್ರಜೇತ್। ಯಾಚಕತ್ವಂ ನವಮೃತಂ। ತದ್ಗೃಹೇ ಜಲಂ ಪಿಬೇತ್।" ಇದು ಕಾರಣ ಕೂಡಲಸಂಗಮದೇವ ನಿಮ್ಮ ಸದ್ಭಕ್ತರಿಗೆ ನಮೋ ನಮೋ ಎಂಬೆನು. ॥೨॥

ಹೀಗೆಂದು ಬಸವರಾಜದೇವರು ಅವರವರ ಗೃಹಕ್ಕಂ ಪೋಗಲು, ಆ ಮೋಳಿಗೆಯ್ಯಗಳ ಸತಿಯು ಪಾದಾರ್ಚನೆಗೆ ಅಗ್ಗಣಿಯಂ ಕೊಟ್ಟು ಲಿಂಗಾರ್ಚನೆಯಂ ಮಾಡಿಸಿ ತಮ್ಮ ಗೃಹದಲ್ಲಿರ್ದ ಪದಾರ್ಥಮಂ ನೀಡಲು, ಲಿಂಗಾರ್ಪಿತಮಂ ಮಾಡಿ ಬರುವಲ್ಲಿ ಎರಡು ಜಾಳಿಗೆಯ ಹೊನ್ನನು ಮಜ್ಜನಸಾಲೆಯ ಮರೆಯಲ್ಲಿರಿಸಲು, ಇತ್ತಾ ಮೋಳಿಗೆಯ ಮಾರಿತಂದೆಗಳು ಕಟ್ಟಿಗೆಗಳಂ ಕೊಂಡು ಬಂದು ಪಾದಾರ್ಚನೆಯಂ ಮಾಡಿಕೊಂಡು ಶಿವಾರ್ಚನೆಯಂ ಮಾಡುವಲ್ಲಿ ಆ ಜಾಳಿಗೆಯ ಹೊನ್ನಂ ಕಂಡು, ಇಲ್ಲಿ ಬಂದಿದ್ದವರಾರೆಂದು ತಮ್ಮ ಸತಿಯ ಕೇಳಲು, ಒಬ್ಬ ಭಕ್ತರು ಬಂದು ಲಿಂಗಾರ್ಚನೆಯಂ ಮಾಡಿ ಹೋದರು ಎನಲು, ನಾವು ಬಡವರೆಂದು ಬಸವಣ್ಣನು ಗರ್ವದಿಂದೆ ಜಾಳಿಗೆಯ ಹೊನ್ನ ಮಡಿಗಿ ಹೋದನೆಂದು ಕನಲಿ ಜರಿವ ಪ್ರಸ್ಥಾವದ ವಚನ. ॥

ಗುರುಲಿಂಗಜಂಗಮಕ್ಕೆ ತನುಮನಧನವೆಶವವು ದೃಢವಿಲ್ಲದೆ ಪೊಡವಿಯ, ಜನಂಗಳು ಮೆಚ್ಚಬೇಕೆಂದು ವೃಡನ ಭಕ್ತರಿಗೆ ನೆರೆ ನಿಚ್ಚಟಿಯಾಂಟೆ? ಅಹುದೆನಿಸಿಕೊಂಡಿಹೆನೆಂಬ ಧಾರುಣಿಯ ಜೋರರಿಗೆ ಎಲ್ಲಿಹದೊ ನಿಜಭಕ್ತಿ ನಿಃಕಳಂಕಮಲ್ಲಿಕಾರ್ಜುನ? ॥೩॥

ಮತ್ತಂ॥ ಆತ್ಮತೇಜವ ಬಿಟ್ಟಾಗಲೆ ಗುರುವನರಿವ. ಮನ ವಿಕಾರವ ಬಿಟ್ಟಾಗಲೆ ಲಿಂಗವನರಿವ. ಧನವಿಕಾರವ ಬಿಟ್ಟಾಗಲೆ ಜಂಗಮವನರಿವ. ಇಂತೀ ತ್ರಿವಿಧವನಾಸ್ತಿಯಾವಂಗಲ್ಲದೆ, ನಿಃಕಳಂಕಮಲ್ಲಿಕಾರ್ಜುನನಲ್ಲಿ ಸದ್ಭಕ್ತನಲ್ಲಾ. ॥೪॥

ಮತ್ತಂ॥ ಅರ್ಚನೆಯಲರ್ಚಿಸಿದಲ್ಲಿ ಪುಣ್ಯಫಲ. ಭಕ್ತಿಯಿ, ದ್ರವ್ಯವ ಕೊಡುವುದು ಮುಕ್ತಿ. ಲೋಕದೊಳಗು ಈ ಉಭಯದ ಬಿತ್ತಿಯನರಿದು ನೇಮವ ತಿಳಿದವಂಗೆ ಏನು ಎನಲಿಲ್ಲ ನಿಃಕಳಂಕಮಲ್ಲಿಕಾರ್ಜುನ. ॥೫

ಇಂತು ತಾನೆ ಧನಿಕನೆಂದು ಆತ್ಮತೇಜದಿಂ ಭಕ್ತಿಯಂ ಮಾಡಿದಡೆ ಫಲಪದಕ್ಕೆ ಕಾರಣವಲ್ಲದೆ ಸಹಜವಲ್ಲೆಂದು ಜರಿದು ಆ ಎರಡು ಜಾಳಿಗೆಯ ಹೊನ್ನನು ಈರ್ವರು ಚರಮೂರ್ತಿಗಳಿಗೆ ಸಮರ್ಪಿಸಿ, ಬಸವಣ್ಣನ ಗೃಹಕ್ಕಂ ಪೋಗಿ. ಲಕ್ಷದ ಮೇಲೆ ತೊಂಭತ್ತಾರು ಸಾವಿರ ಜಂಗಮದೇವರುಗಳಂ ಬಿಜಯಂಗೈಸಿ ತಂದು, ಅವರಿಗೆ ಇಚ್ಛಾಪದಾರ್ಥಮಂ ನೀಡಿ ತೃಪ್ತಿಬಡಿಸಿ ತಾವು ತಂದಕಟ್ಟಿಗೆಯ ಸರಬಗಳ ಮೇಲೆ ಪಾದಾರ್ಚನೆಯುವಕಮುಂ ತಳೆದು, ಸುವರ್ಣದಂಡಂಗಳಂ ಮಾಡಿ, ಎಲ್ಲ ಜಂಗಮದೇವರುಗಳಿಗೆ ಒಂದೊಂದು ಕುಡಲು, ಅವರು ಬಸರಾಜದೇವರ ಗೃಹಕ್ಕಂ ಬರಲು, ಆ ಬಸವರಾಜದೇವರು ಈ ಸುವರ್ಣದ ದಂಡಂಗಳಂ ಇವೆಲ್ಲಿಯುಪೆಂದು ಕೇಳಲು, ಮೋಳಿಗೆಯ ಮಾರಯ್ಯಗಳು ಕೊಟ್ಟರೆಂದು ಹೇಳಿ ಆ ಬಸವರಾಜದೇವರು ಇಂತಹ ನಿರಾಶಾ ಮಹಾತ್ಮರೆಂದರಿಯದೆ ಇದ್ದೆನಲಾ ಎಂದು ಭೀತಿಯಿಂ ನುಡಿವ ಪ್ರಸ್ಥಾವದ ವಚನ॥

ಧನದಲ್ಲಿ ಶುಚಿ ಪ್ರಾಣದಲ್ಲಿ ನಿರ್ಭಯ ಇದಾರಿಂಗಳವಡವುದೈಯ್ಯ? ನಿಧಾನ ತಪ್ಪಿ ಬಂದರೆ ಒಲ್ಲೆನೆಂಬವರಿಲ್ಲ. ಪ್ರಮಾದವಶದಿಂ ಬಂದರೆ ಹುಸಿಯೆನೆಂಬವರಿಲ್ಲ. ನಿದಾಶೆ ನಿರ್ಭಯ ಕೂಡಲಸಂಗಮದೇವ ನೀನೊಲಿದ ಶರಣಂಗಲ್ಲದಿಲ್ಲ. ॥೬॥

ಹೀಗೆಂದು ಬಸವರಾಜದೇವರು ಅನುತಾಪಂಬಟ್ಟು ಚನ್ನಬಸವರಾಜದೇವರು ಪಡಸಲದಪ್ಪಣ್ಣಗಳು ಸಿದ್ಧರಾಮಯ್ಯತಂದೆಗಳು ಮುಖ್ಯವಾದ ಶರಣರುಗಳು ಸಹವಾಗಿ ಬಂದು ಅಷ್ಟಾಂಗ ದಂಡ ಪ್ರಣತರಾಗಿ ದೈನ್ಯದಿಂ ವಿಜ್ಞಪಿಸುವ ಪ್ರಸ್ಥಾವದ ವಚನ.

ಭಕ್ತಿ ವಿಶೇಷವ ಮಾಡುವರೆ ಹಸ್ತ ಬೆರಳುಂಟು. ಹಾಸಿದು ನಿವರೆ ತನಗುಂಟು. ತನ್ನ ಪ್ರಸಾಧರಿಗುಂಟು. ಮೋಳಿಗೆಯ ಮಾರಿತಂದೆಗಳಂತೆ ನನಗೇಕಹುದಯ್ಯ? ಕಷ್ಟದ ಸಂಕೊಲೆಯನಿಕ್ಕಿ ಕಾಡಿಸಯ್ಯ ಕೂಡಲ ಸಂಗಮದೇವ ಶಿವಧೋ ಶಿವಧೋ ॥೭॥

ಮತ್ತಂ॥ ನುನೆಯ ನೋಡಾ ಬತವರು, ಮನವ ನೋಡಾ ಧೀರರುಸೋಂಕಿನಲ್ಲಿ ರುಚಿಗಳು. ಸರ್ವಾಂಗ ರರು.ಧಿ ಪಸಾರವ ನೋಡಿದಡೇನು ಇಲ್ಲ. ಸಮಯೋಚಿಸತಕ್ಕೆ ಸಕಲ ಪದಾರ್ಥ ಬಂದಿಹುದು ಕಂಡಲಸಂಗಮದೇವ ನಿಮ್ಮ ಶರಣ ಸರ್ವಾಂಗಧೀರ ವೋಳಿಗೆಯ ಮಾರಿತಂದೆ ॥೮॥

ಹೀಗೆಂದು ಬಸವರಾಜ ದೇವರು ಧೈನ್ಯದಿಂ ವಿಜ್ಞಾಪಿಸುತ್ತಿರೆ, ಆ ವೋಳಿಗೆಯ ಮಾರಿತಂದೆಗಳು ಭಕ್ತಿಯಿಂದ ಫಲಪದವ ಪಡೆದವರಿಗೆ ಭವವುಂಟು. ಫಲಪದ ವಿರಹಿತ ಚನ್ನಬಸವಣ್ಣನೆಂದು ನುಡಿದ ಪ್ರಸ್ಥಾವದ ವಚನ॥

ಬಸವಣ್ಣ ಮೊದಲಾದ ಮಹಾ ಭಕ್ತರೆಲ್ಲರು ಕಂಡರಯ್ಯ. ಮಹಾ ಕೈಲಾಸವೆಂಬ ಬೆಳ್ಳಿಯ ಬೆಟ್ಟವನೇರಿ ಒಳ್ಳಿಹ ಪದದಲ್ಲಿ ತಲ್ಲೀಯರಾದಿಹೆವೆಂದು ಬಲ್ಲ ತನವ ಮುಚ್ಚಿ ಇರಲಾಗಿ, ಬೆಳ್ಳಿಯ ಬೆಟ್ಟ ಕಲ್ಲೋಲವಾಗಲಾಗಿ ಅಲ್ಲಿವ್ವವರನೆಲ್ಲಿಯೂ ಕಾಣೆ, ಇವರಿಗಿನ್ನೆಲ್ಲಿಯ ಮುಕ್ತಿ? ಜಲ್ಲೆಯ ನಡುವಣ ಮೇಲಿಹ ಪಶುವಿನಂತೆ ಇವರೆಲ್ಲರು ಬಲ್ಲಹರೆ ಬಲ್ಲಹ ನಮ್ಮ ಚನ್ನಬಸವಣ್ಣನಲ್ಲದೆ? ಇವರೆಲ್ಲರನೊಲ್ಲೆನೆಂದೆ. ಬಲ್ಲಹರ ಬಲ್ಲಹನೆ ನಿಃಕಳಂಕಮಲ್ಲಿಕಾರ್ಜುನ ॥೯॥

ಹೀಗೆಂದು ವೋಳಿಗೆಯ ಮಾರಿತಂದೆಗಳು ನಿರೂಪಿಸಲು ಚನ್ನಬಸವರಾಜದೇವರು ಸಮಸ್ತದೇಹಿಗಳಿಗೆ ಭೋಗ ಲಕ್ಷ್ಮಿಯಾಗಿರ್ದ ದ್ರವ್ಯವ ಶಿವಶರಣರ ಗೃಹದಲ್ಲಿ ಇರಿಸಬಹುದೇ ಎಂದು ಬಸವರಾಜದೇವರ ನುಡಿದು ಆ ವೋಳಿಗೆಯ ಮಾರಿತಂದೆಗಳಿಗೆ ನಮಸ್ಕರಿಸಿದ ಪ್ರಸ್ಥಾವದ ವಚನ॥

ಹಸಿವು ತೃಷೆವಿಷಯವೆಂಬ ಕರ್ಮಂಗಳನೇ ಕಂಡು ಪರಿಣಾಮವೆಂಬ ಕೊಡಲೆಯಲ್ಲಿ ತತ್ತರದರಿದು ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಂಗಳ ತರಿದೊಟ್ಟಿದ ನೊಂದೆಡೆಯಲ್ಲಿ. ಪಂಚೇಂದ್ರಿಯ ಷಡುವರ್ಗ ಸಪ್ತಧಾತು ಅಷ್ಟಮದವೆಂಬ ಬಳ್ಳಿಯ ಸೀಳಿ ಏಳುಕಟ್ಟಿನ ವೋಳಿಗೆಯನೆ ಹೊತ್ತು ನಡದನಯ್ಯ. ಆಸೆ ಆಮಿಷ ತಾಮಸವೆಂಬ ತುರುವ ನೇರಿ ಆ ತುರದ ತುರವ ಕಳೆದನಯ್ಯ. ಈ ಮಹಾ ಮಹಿಮರಿಗೆ ಜಗದ ಜತ್ತಿಗೆಯ ಹಾದರಗಿತ್ತಿಯ ಹದಿನೆಂಟು ಜಾತಿಯ ಮನೆಯಲ್ಲಿ ಹೊತ್ತಾಗಿ ಹುಟ್ಟಿದ ಶಿವದ್ರೋಹಿಯ ಲಿಂಗವಂತರ ಮನೆಯ ಹೊಗಿಸುವರೇ ಎಲೆ ಲಿಂಗ ತಂದೆ ಜಂಜಡವಿಡಿದು ಕೆಟ್ಟಿಸೆಂದು ಭಕ್ತಿಯ ಕುಲವನರಿಯದೆ? ಎಲೆ ಲಿಂಗಾದ್ಯಾಜ್ಞಾ ಧಾರಕ ಎಲೆ ಲಿಂಗ ಸನುಮತ ಎಲೆ

ಲಿಂಗ ಏಕೋ ಪ್ರತಿಗ್ರಾಹಕ ಕೂಡಲ ಚನ್ನಸಂಗನಲ್ಲಿ ವೋಳಿಗೆಯ ಮಾರಿತಂದೆಗಳ ಶ್ರೀ ಪಾದಕ್ಕೆ ನಮೋ ನಮೋ ಜಯಜಯತು ॥೧೦॥

ಹೀಗೆಂದು ಚನ್ನ ಬಸವರಾಜದೇವರು ಬಸವರಾಜದೇವರ ನುಡಿದು ಆ ವೋಳಿಗೆಯ ಮಾರಿತಂದೆಗಳ ಸ್ತುತಿಸಲು, ಆ ವೋಳಿಗೆಯ ಮಾರಿತಂದೆಗಳು ಅರಿವು ಮರವೆಯಿಂ ಮಾಡುವ ಭಕ್ತಿ ಸ್ಥಿರವಲ್ಲವೆಂದು ಚನ್ನಬಸವರಾಜದೇವರಿಗೆ ನಮಸ್ಕಾರವಂ ಮಾಡುವ ಪ್ರಸ್ಥಾವದ ವಚನ॥

ಅರಿದು ಮಾಡುವ ಮಾಟ ಮರವಿಂಗೆ ಬೀಜವೆಂಬೆ. ಅದಕ್ಕೆ ಮರಿದರಿವುದೆ ತಪ್ಪದು. ಆ ಅರಿವಿನ ಭೇದವೆತ್ತಿದ ದೀಪದ ಬೆಳಗಿನಂತೆ ಅರಿದು ಮರೆಯದೆ ಇಂತೀ ಅರಿಕೆಯಲ್ಲಿ ಮಾಡುವವನ ಅರಿವು ಹೊತ್ತದ ದೀಪದ ನಿಶ್ಚಯದಂತೆ ನಿಃಕಳಂಕ ಮಲ್ಲಿಕಾರ್ಜುನನಲ್ಲಿ ಚನ್ನಬಸವಣ್ಣಂಗೆ ನಮೋ ನಮೋ ಎನುತಿರ್ದೇನು. ॥೧೧॥

ಇಂತೀ ವೋಳಿಗೆಯ ಮಾರಿತಂದೆಗಳು ಚನ್ನಬಸವಣ್ಣಂಗೆ ನಮಸ್ಕರಿಸಿ ಇನ್ನು ಕಂಡು ಕೇಳಿ ಅರಿದು ಭಕ್ತಿಯ ಮಾಡಿಹೆನೆಂಬಾಗ ಮುಂದಕ್ಕೆ ನಿಶ್ಚಯವಲ್ಲವೆಂದು ನಿರೂಪಿಸಿದ ಪ್ರಸ್ಥಾವದ ವಚನ॥

ಇನ್ನು ಕೇಳಿ ಅರಿದಿಹೆನೆಂಬಾಗ ಮುಂದಕೆ ಮರವೆಯೆ? ಮುಂದನರಿದು ಹಿಂದೆ ಮರೆವಾಗ ಭೂತಕಾಯವೇ? ಹಿಂದಕ್ಕು ಮುಂದಕ್ಕು ಈ ದ್ವಂದ್ವದ ಭೇದವ ಇದರಂದವ ಹೇಳಾ ನಿಃಕಳಂಕ ಮಲ್ಲಿಕಾರ್ಜುನ॥೧೨॥

ಮತ್ತಂ॥ ಅರಿದಿಹೆ ಅರಿದಿಹೆನೆಂದು ಹೊರಹೊಮ್ಮುವಾಗ ಕಾಯ ಮರುಜೀವಣೆಯೆ? ಮಹಾ ಪ್ರಳಯಕ್ಕೆ ಹೊರಗಾದ ಶ್ರವಣವೆ ಅವತಾರಕ್ಕೆ ಹೊರಗಾದ ನಿರಂಗವೆ ಅಸಗ ನೀರಡಿಸಿ ಸತ್ತಂತಾಯಿತ್ತು. ಇವನಿರವು ನಿಃಕಳಂಕ ಮಲ್ಲಿಕಾರ್ಜುನ ॥೧೩॥

ಮತ್ತಂ॥ ಬಯಲು ಬತ್ತಲೆಯಾದಡೆ ಹೊದಿಸುವರಿನ್ನಾರು? ಏರಿ ನೀರು ಕುಡಿದರೆ ಬಿಡಿಸುವರಿನ್ನಾರು? ಮಹಾಮೇರುವು ನಡೆದರೆ ಪಥವ ಕೆಂಬುಗೊಡುವವರಾರು? ಅರಿದವ ಮರೆದವನಾದಡೆ ಅರಿಕೆಯ ಹೇಳುವರಾರು? ನಿಮ್ಮ ನಿಜವ ನೀವೆ ಬಲ್ಲಿರಿ ನಾನಂಜುವೆ ನಿಃಕಳಂಕ ಮಲ್ಲಿಕಾರ್ಜುನ ॥೧೪॥

ಹೀಗೆಂದು ವೋಳಿಗೆಯ ಮಾರಿತಂದೆಗಳು ನುಡಿಯಲು, ಆ ಬಸವರಾಜದೇವರು ಸಮಸ್ತ ಪದಾರ್ಥವನೊಪ್ಪಿಸಿದಲ್ಲಿ ಭಕ್ತನಲ್ಲ. ನಿಮ್ಮ ಮನವ

ನಿಮಗೊಪ್ಪಿಸಿ ಶ.ವ್ಹನೆಂದು ನಿರಹಂಭಾವದಿಂದೆ ನುಡಿದ ಪ್ರಸ್ಥಾವದ ವಚನ॥

ಅರ್ಥ ಪ್ರಾಣಾಭಿಮಾನವನೊಪ್ಪಿಸಿದಲ್ಲಿ ಭಕ್ತನೆ? ಅಲ್ಲ. ಆದಿ ರ.ದ್ರನ ಮಗಳು ಆದಿಶಕ್ತಿ, ಆದಿಶಕ್ತಿಯ ಮಗ ವಿಷ್ಣು, ವಿಷ್ಣುವಿನ ಅರ್ಧಾಂಗಿ ಲಕ್ಷ್ಮಿ. ಈ ತೊತ್ತಿನ ತೊತ್ತಿನ ಪಡಿದೊತ್ತನೊಪ್ಪಿಸಿದಲ್ಲಿ ಭಕ್ತನಪ್ಪನೆ? ಅಲ್ಲ. ಎನ್ನ ಮನಮೊಡೆಯ ಮಹಾದೇವ ನಿಮ್ಮ ಮನವ ನಿಮಗೊಪ್ಪಿಸಿ ನಾನು ಶುದ್ಧ ಕಾಣಾ ಕೂಡಲಸಂಗಮದೇವಾ ॥೧೫॥

ಹೀಗೆಂದು ಬಸವರಾಜದೇವರು ಬಿನ್ನೈಸಲು, ಆ ಮೋಳಿಗೆಯಮಾರಿತಂದೆಗಳು ಪ್ರಸನ್ನಮುಖರಾಗಿ ಸ್ತೋತ್ರಮುಂ ಮಾಡಿದ ಪ್ರಸ್ಥಾವದ ವಚನ॥

ಎನ್ನ ಚಿತ್ತಕ್ಕೆ ನಕಾರವಾಗಿ ಬಂದೆಯಯ್ಯ ಬಸವಣ್ಣ. ಎನ್ನ ಬುದ್ಧಿಗೆ ಮಕಾರವಾಗಿ ಬಂದೆಯಯ್ಯ ಬಸವಣ್ಣ. ಎನ್ನ ಅಹಂಕಾರಕ್ಕೆ ಶಿಕಾರವಾಗಿ ಬಂದೆಯಯ್ಯ ಬಸವಣ್ಣ. ಎನ್ನ ಮನಕ್ಕೆ ಯಕಾರವಾಗಿ ಬಂದೆಯಯ್ಯ ಬಸವಣ್ಣ. ಎನ್ನ ಜ್ಞಾನಕ್ಕೆ ಯಕಾರವಾಗಿ ಬಂದೆಯಯ್ಯ ಬಸವಣ್ಣ. ಎನ್ನ ಮತಿಗೆ ಓಂಕಾರವಾಗಿ ಬಂದೆಯಯ್ಯ ಬಸವಣ್ಣ. ಎನ್ನ ನಾದಕ್ಕೆ ಅಕಾರವಾಗಿ ಬಂದೆಯಯ್ಯ ಬಸವಣ್ಣ. ಎನ್ನ ಬಿಂದುವಿಗೆ ಉಕಾರವಾಗಿ ಬಂದೆಯಯ್ಯ ಬಸವಣ್ಣ. ಎನ್ನ ಕಳೆಗೆ ಮಕಾರವಾಗಿ ಬಂದೆಯಯ್ಯ ಬಸವಣ್ಣ. ಎನ್ನ ಭವವ ಕೊಂದಿಹೆನೆಂದು ಬಂದೆಯಯ್ಯ ಬಸವಣ್ಣ. ಎನ್ನ ಶಕ್ತಿಗೆ ಸಕಾರವಾಗಿ ಬಂದೆಯಯ್ಯ ಬಸವಣ್ಣ. ಎನ್ನ ವಚಸ್ಸಿಗೆ ವಕಾರವಾಗಿ ಬಂದೆಯಯ್ಯ ಬಸವಣ್ಣ. ಇಂತಪ್ಪ ಮಹಾ ಪ್ರಣವಾಂಗಳೆ ಬಸವಣ್ಣನಾಗಿ ಆ ಬಸವಣ್ಣನೆ ಮಹಾ ಪ್ರಣಮಾಂಗನಾಗಿ ತನ್ನ ಮುಕ್ತಿಗೆ ತಾನೆ ಬಂದು ಭಕ್ತಿ ಪಸ್ತುವಸಿತ್ತಡೆ ಇವ ನಾನೂ ನಿಃಕಳಂಕ ಮಲ್ಲಿಕಾರ್ಜುನನ ಭಕ್ತರಿಗಿತ್ತು ಬದುಕಿದೆನಯ್ಯ ॥೧೬॥

ಇಂತು ಮೋಳಿಗೆಯ ಮಾರಿತಂದೆಗಳು ಬಸವರಾಜದೇವರ ಸ್ತೋತ್ರಮುಂ ಮಾಡುತ್ತಿರಲು, ಆ ಪ್ರಸ್ಥಾವದೆನಳು ಸಿದ್ಧರಾಮಯ್ಯದೇವರು ಆ ಮೋಳಿಗೆಯ ಮಾರಿತಂದೆಗಳ ಸ್ತೋತ್ರಮುಂ ಮಾಡಿದ ಪ್ರಸ್ಥಾವದ ವಚನ॥

ಮೊರು ಕಟ್ಟಿಗೆಯನು ಮೂಯೂರಲಿರಿಸಿದನು. ನಿಃಪತಿಯಾದ ಲಿಂಗದಲ್ಲಿ ಆರೂಢ. ಆಂಗುಲದೊಳಗೆ ಆರುವೆರಳನಿರಿಸಿದನು. ಧೀರ ಮೋಳಿಗೆಯ ಮಾರ ಶರಣು ಶರಣು. ಆರೂಢ ದಶಗಳ ಭೇದವನರಿಂವಂತೆ ಅರಿದ. ಶರಣೆಂದೆನಯ್ಯ ಕಪಿಲಸಿದ್ಧಮಲ್ಲಿಕಾರ್ಜುನ.॥೧೭॥

ಇಂತು ಬಸವರಾಜದೇವರು ಚನ್ನಬಸವರಾಜದೇವರು ಸಿದ್ಧರಾಮಯ್ಯದೇವರು ಮೋಳಿಗೆಯ ಮಾರಿತಂದೆಗಳೊಡನೆ ಮಹಾನುಭಾವ ಸಮ್ಮೋಷ್ಠಿಯಂ ಮಾಡಿ ತನು ಗೃಹಕ್ಕೆ ಬಿಜಯಂಗೈಯ್ಯಲು, ಇತ್ತ ಮೋಳಿಗೆಯ ಮಾರಿತಂದೆಗಳು ಲಿಂಗೈಕ್ಯವಾದಿಹೆನೆಂಬ ಆತುರದಿಂ ನುಡಿದ ಪ್ರಸ್ಥಾವದ ವಚನ॥

ಓಂ ಎಂದಲ್ಲಿ ನಿರಾಕಾರವಾದೆಯಲ್ಲ. ಓಂ ಎಂದೆಲ್ಲಿ ಸಾಕಾರವಸ್ತುವಾದೆಯಲ್ಲ. ತತ್ಪುರುಷ ಎಂದಲ್ಲಿ ತತ್ವರೂಪಾಗಿ ಜಗವ ರಕ್ಷಿಸಿಹೆನೆಂದು ಕರ್ತೃರೂಪಾದೆಯಲ್ಲ. ನಿಮಗೆ ಮರ್ತ್ಯದ ಮಣಿಯದಲ್ಲಿಹ ಪರಿಯಂತರ ಎನಗೆ ಕಟ್ಟು ಗುತ್ತಿಗೆಯನಾ ಕಟ್ಟಿಗೆಯ ಹೊತ್ತು ಶಿವಭಕ್ತರ ಮನೆಗೆ ನೀವು ಕೊಟ್ಟ ಕಾಯಕದ ಕೃತ್ಯ ಇನ್ನೆಷ್ಟು ದಿನ ಹೇಳಾ ನಿಃಕಳಂಕಮಲ್ಲಿಕಾರ್ಜುನ ॥೧೮॥

ಮತ್ತಂ ಊರ ಕೆಟ್ಟು ಸೂರೆಯಾಡುವಲ್ಲಿ ಅರಿಗಾರು ಇಲ್ಲ. ಬಸವಣ್ಣ ಸಂಗಮಕ್ಕೆ ಚನ್ನಬಸವಣ್ಣ ಉಳವಿಗೆ. ಪ್ರಭು ಕದಳಿಗೆ ಮಿಕ್ಕಾದ ಪ್ರಮಥರೆಲ್ಲರು ತಮ್ಮ ತಮ್ಮ ಲಕ್ಷ ಭಾವಕ್ಕೆ ಮುಕ್ತಿಯನೈದಿಹರು. ಎನಗೊಂದು ಬಟ್ಟೆಯ ಹೇಳಾ ನಿಃಕಳಂಕ ಮಲ್ಲಿಕಾರ್ಜುನ ॥೧೯॥

ಮತ್ತಂ॥ ಕಾಯ ಸಮಾಧಿಯನೊಲ್ಲೆ. ಜೀವನೆನಹು ಸಮಾಧಿಯನೊಲ್ಲೆ. ಕೈಲಾಸವೆಂಬ ಭವಸಾಗರವನೊಲ್ಲೆ. ನೀ ಎನ್ನ ಅಲ್ಲಿಗೆ ಇಲ್ಲಿಗೆ ಎಳೆಯದೆ ನಿನ್ನಲ್ಲಿ ಕೂಟಸ್ಥನ ಮಾಡಾ ನಿಃಕಳಂಕ ಮಲ್ಲಿಕಾರ್ಜುನಾ ॥೨೦॥

ಮತ್ತಂ॥ ಎನಗೆ ನೀನಿಂಬುಗೊಡುವಲ್ಲಿ ಸಕಲವ ಪ್ರಣಾಣಿಸುವದ ಬಿಟ್ಟು ನಿಃಕಲ ವಸ್ತುವಾಗು. ಶಕ್ತಿ ಸಮೇತವ ಬಿಟ್ಟು ನಿಃಶಕ್ತಿಯು ನಿರ್ಲೇಪನಾಗು. ಚಿತ್ತವ ನೋಡಿಹೆನೆಂಬ ಹೆಚ್ಚು ಕುಂದವ ಬಿಟ್ಟು ನಿಶ್ಚಿಂತನಾಗು ಎಂದು ಮಿಕ್ಕಾದ ಭಕ್ತರ ಗುಣವ ನೋಡಿಹೆನೆಂದು ತೊಟ್ಟ ಠಕ್ಕು ಠಮಳವ ಬಿಟ್ಟು ಸರ್ವರಾಗ ವಿರಾಗನಾಗಿ ಸರ್ವಗುಣ ಸಂಪನ್ನನಾಗಿ ಜ್ಞಾನಸಿಂಧು ಸಂಪೂರ್ಣವಾಗಿ ನಿನ್ನರಿವಿನ ಗುಡಿಯ ಬಾಗಿಲವ ತೆರದೊಮ್ಮೆ ತೋರಾ.

ಎನ್ನಡಿಗೆ ನಿನ್ನಗುಡಿಯ ಸಂಬಂಧವ ನೋಡಿಹೆ. ಇವಕ್ಕೆ ನನ್ನ [illegible]
ಚನ್ನ ಜೋ ನೀಕಳಂಕ ಮಲ್ಲಿಕಾರ್ಜುನ ॥೨೧॥

ನಿನ್ನಿನರಿದವುಕ್ಕೆ ಹೆಣ್ಣು ಹೊನ್ನು ಮಣ್ಣೆಂಬ ತೊತೆಯ ತಾ
ಬೇಕು. ಆ ಮೂರನರಿವಲ್ಲಿ ಮರೆದು ಹಿಡಿವಲ್ಲಿ ಅರಿದು ಬಿಡುವಲ್ಲಿ ಆ
ಭಯದ ಒಡಲ ಹರಿದು ತೋರಿಕೆ ನಷ್ಟವಾಗಿ ನಿಂದವಂಗಲ್ಲದೆ ನಿನ್ನ [illegible]
ಣವ ಬಾಗಿಲ ಬಾದಳವನೇರಬಾರದು. ಅವಕ್ಕೆ ಸನ್ನೆಗಟ್ಟಗೆಯೆ [illegible]
ನೀಕಳಂಕ ಮಲ್ಲಿಕಾರ್ಜುನ ॥೨೧॥

ಈಗೆಂದು ಪೋಳಿಗೆಯ ಪಾರಿತಂದೆಗಳು ಲಿಂಗೈಕ್ಯವಾದಿಹೆವೆಂ
ಅನಪೆಯಂ ನುಡಿಯಲು ಆ ಪ್ರಸ್ಥಾವದೊಳು ಅವರ ಪುಣ್ಯಾಂಗನೆ ಮಾ
ದೇವಿಯಮ್ಮನು ಇನ್ನು ಭಿನ್ನವಾಗಿ ಲಿಂಗೈಕ್ಯವಾದಿಹೆಸೆಂಬಾಗ ಮು
ಲಿಂಗವಲ್ಲಿ ಏಕಾರ್ಥವಿಲ್ಲವೇ ಎಂದು ನುಡಿದ ಪ್ರಸ್ಥಾವದ ವಚನ॥

ಅವೇತಕ್ಕೆಯ್ಯ ಶಿವನೊಳಗೆ ಕೂಟಸ್ಥವಾದಿಹೆಸೆಂಬ ಬಲು ಬೇ
ಇಹು ಭಕ್ತಿ ಸತ್ಯದ ಅಟವಲ್ಲ. ಇನ್ನಾರ ಕೇಳಿ ಮತ್ತಿನ್ನಾರಿಗೆ ಹೇಳಿ
ಮಾಡುವ ಮಾಟ ಮುನ್ನ ನೀನಾರೆಂದಿದ್ದೆ ಹೇಳಾ? ಆ ಭಾವವನರಿ
ನಿನ್ನ ನೀನೆ ತಿಳಿ. ಎನ್ನಯ್ಯ ಪ್ರಿಯ ಇಮ್ಮಡಿ ನೀಕಳಂಕ ಮಲ್ಲಿಕಾರ್ಜುನ ॥೨೨॥

ಮತ್ತಂ॥ ಕಾಷ್ಠವ ಸುವರ್ಣವ ಮಾಡಿಹೆನೆಂಬ ಘಾತಕತನವ
ನಿಮ್ಮ ಭಕ್ತಿ? ಸಕಲ ದೇಶಕೋಶ ವಾಸ ಭಂಡಾರ ಸವಾ ಲಕ್ಷ ಮುಂತಾ
ಸಂಬಂಧ ಸ್ತ್ರೀಯರ ಬಿಟ್ಟು ಬಂದೆನೆಂಬ ಕೈಕೂಲಿಯೆ ನಿಮ್ಮ ಭಕ್ತಿ? ಬ
ವಣ್ಣ ಚನ್ನಬಸವಣ್ಣ ಪ್ರಭುದೇವರು ಮುಂತಾದ ಏಳನೂರೆಪ್ಪತ್ತು ಅ
ರಗಣಂಗಳು ಭಾವವಿಪ್ಪಂತೆ ನಿಮ್ಮ ಅಗಡವೇಕಯ್ಯ? ನಿಮ್ಮ ಅರಿವಿ
ಇದಿರಿನಲ್ಲಿ ಕೂಡಿಹನೆಂಬ ಭಿನ್ನ ಭಾವ ಉಂಟೆ ಅಯ್ಯಾ? ಕರ್ಮ
ಅರಣ್ಯವ ಕಿಚ್ಚು ಹತ್ತಿ ಬೆಂದಲ್ಲಿ ಭಸ್ಮ ಇದ್ದಲಿಂದು ಭಕ್ಷಿಸಲುಂಟೆ? ನಿ
ಭಾವವ ನಿಮ್ಮಲ್ಲೆ ತಿಳಿದುಕೊಳ್ಳಿ. ನಿಮ್ಮ ಕೂಟಕ್ಕೆ ಎನ್ನ ನಾಚಿಕೆ
ಬಿಡಿಸಿದ ತೆರನ ತಿಳಿದುಕೊಳ್ಳಿ. ಕಕ್ತಿಯ ಮಾತೆಂದು ಧಿಕ್ಕರಿಸಬೇಡ. ಹೊ
ಕೂಡಿಹೆನೆಂಬುದು ನಿಮ್ಮ ಅರುವಿಂಗೆ ಹಾಸಿ. ಎನ್ನಯ್ಯ ಪ್ರಿಯ ಇ
ಡಿ ನೀಕಳಂಕ ಮಲ್ಲಿಕಾರ್ಜುನ ನಿಮ್ಮ ಶರಣರ ನೆಲೆಯ ನೀವೆ ನೋ
ಕೊಳ್ಳಿ ॥೨೪॥

ಮತ್ತಂ॥ ಸ್ವಯವಿವ್ವಂತೆ ಲಯವು ಕೂಡುವರೆ ಅಯ್ಯ? ಪರುಷವಿ
ತೆ ಹೇಮವನರಸುವರೆ ಅಯ್ಯ? ಸ್ವಯಂಜ್ಯೋತಿ ಇದ್ದಂತೆ ದೀಪವನರ
ವರೆ ಅಯ್ಯ? ನೀ ಅಲ್ಲಿ ಇಲ್ಲಿ ಕೂಡಿಹೆನೆಂಬ ಕೂಟವ ಭಿನ್ನವ ಹೇಳಯ್ಯ.
ಅಲ್ಲಿ ನೋಡಿ ಕಣ್ಣ ನುರಿಪಿನೆಂದು ಅಭಿನ್ನ ಭಾವನಂತೆ ಆದಿರಲ್ಲ.
ನಿಮ್ಮ ಗುಣವಲ್ಲ, ಎನ್ನಗುಣ. ಎನ್ನಯ್ಯ ಪ್ರಿಯ ಇಮ್ಮಡಿ ನೀಕ
ಳಂಕ ಮಲ್ಲಿಕಾರ್ಜುನ ॥೨೫॥

ಮತ್ತಂ ಕೈಯ್ಯಲ್ಲಿ ಜ್ಯೋತಿಯ ಹಿಡಿದು ಕತ್ತಲೆ ಎನಲೇತಕ್ಕೆ?
ಪರಿಪೂರ್ಣ ರಸ ಕೈಯ್ಯಲ್ಲಿದ್ದು ಕೂಲಿಯ ಮಾಡಲೇತಕ್ಕೆ? ಕ್ಷುತ್ತು ನಿವೃತ್ತಿ
ಯಾದವಂಗೆ ಕಟ್ಟೋಗರದ ಹೊರೆಯ ಹೊರಲೇತಕ್ಕೆ? ನಿತ್ಯ ಅನಿತ್ಯವ
ತಿಳಿದು ಮತ್ಯ್ರ ಕೈಲಾಸ ಎಂಬುದು ಭಕ್ತರಿಗೆ ಯುಕ್ತಿಯಲ್ಲ. ನಿಶ್ಚ
ಯವ ತಾನರಿದು ಅತ್ತಣ ಗೊತ್ತ ನಿಶ್ಚಯವಾಗಿ ನಿಂದಲ್ಲಿ ಆ ಬಚ್ಚಬಯ
ಲ ಬೆಳಗ ನಿನ್ನ ನೀನೆ ನೋಡಿಕೊ. ಎನ್ನಯ್ಯ ಪ್ರಿಯ ಇಮ್ಮಡಿ ನೀಕ
ಳಂಕ ಮಲ್ಲಿ ಕಾರ್ಜುನನಲ್ಲಿ ॥೨೬॥

ಮತ್ತಂ॥ ಕಣ್ಣಿಗೆ ಹೋರಿ ಕಡವರ ನೀಗಲೇತಕ್ಕೆ? ಅಳಿಗಾಡಿ
ಯುಂಬಿದ ಕೊಡನ ಹೊಡಗೆಡಹ ಲೇತಕ್ಕೆ? ನಿನ್ನಂಗದಲ್ಲಿ ಗುರು
ಕೊಟ್ಟ ಲಿಂಗವೆಂಬುದೊಂದು ಕುರುಹಿರುತ್ತಿರಲಕ್ಕೆ ಆ ನಿಜಲಿಂಗ ಸಂಗ
ವನರಿಯದೆ ಸಂದಿಗೊಂದಿಯಲ್ಲಿ ಹೊಕ್ಕೆನೆಂಬ ಗೊಂದಣ ಲೇತಕ್ಕೆ? ತಾ
ನಂದಲ್ಲಿ ಕೆಡಹಿದ ಒಡವೆಯ ಆಡೆಯಲ್ಲಿ ನೆನೆದು ಅರಸಿವಡಿಲ್ಲ.. ಅದು
ಹತ್ತಿ ತನಗೆ ಸಂದಿಹುದೆ? ಘನಲಿಂಗ ನಿನ್ನಂಗದಲ್ಲಿ ಇದ್ದಂತೆ ಕಂಡೆ
ನಾನೆಸೆಂಬ ನಿಂದ ವಿಜ ನಿಂದಲ್ಲಿಯೇ ಸಂದೇಹವ ತಿಳಿದುಕೊ ಎನ್ನಯ್ಯ
ಪ್ರಿಯ ಇಮ್ಮಡಿ ನೀಕಳಂಕ ಮಲ್ಲಿಕಾರ್ಜುನನಲ್ಲಿ ॥೨೭॥

ಮತ್ತಂ॥ತನ್ನ ಕಣ್ಣಿಂದ ಕನ್ನಡಿಯ ನೋಡಿ ಆ ದೃಷ್ಟಿ ಕಾಣಲಿಕ್ಕೆ
ನನ್ನೋ ಕನ್ನಡಿಯೋ? ಆ ಉಭಯ ದೃಷ್ಟಿಯಿಂದ ಇಷ್ಟದ ದೃಷ್ಟವ ಕಂಡು
ಉಭಯ ನಿಶ್ಚಯವಾದಲ್ಲಿ ಕೈವಲ್ಯವೆಂಬ ಕರ್ಕಶ ಬೇಡಾ. ಕೈಮುದ್ದೆಯ ಕೆಡ
ದಲ್ಲಿ ಬಾಯ್ಗೆ ಬಯಲು. ಅದು ನಿಮ್ಮ ನೀನೆ ತಿಳಿದುಕೊಳ್ಳಿ ಎನ್ನಯ್ಯ
ಪ್ರಿಯ ಇಮ್ಮಡಿನೀಕಳಂಕಮಲ್ಲಿಕಾರ್ಜುನ. ॥೨೮॥

ಮತ್ತಂ॥ಸಕಲದಲ್ಲಿ ತಿಳಿದು ನಿಃಕಲದಲ್ಲಿ ಬೆಳೆದ ಮತ್ತೆ ಸಕಲನನು
ಕೂಡಿಹೆನೆಂಬ ನಿಃಕಲ ಉಂಟೆ ಅಯ್ಯ? ನಿಃಕಲದೊಳಗೆ ಸಕಲ ಅತಿಗೆ ಆ

ಗುಣ ಉಪದೃಷ್ಟವಿಡಿದಲ್ಲಿ ಅಖಿಲ ಜಗವೆಂಬುದು ಹೊರಗು. ಆ ಗು
ನಿನ್ನ ಸದ್ಭಾವ ನಿಜವಾದಲ್ಲಿ ನಿನ್ನಂಗವೆ ಕೈಲಾಸವು. ಆ ಲಿಂಗದ ಕೂಟ
ನಿರ್ವಾಣವು. ಇದು ನಿಃಸಂಗವ ಸಂಗ. ನಿಮ್ಮನೀವೆ ತಿಳಿದುಕೊಳ್ಳಿ ಎನ್ನಯ್ಯ
ಪ್ರಿಯ ಇಮ್ಮಡಿನಿಃಕಳಂಕಮಲ್ಲಿಕಾರ್ಜುನಾ. ॥೨೯॥

ಮತ್ತಂ॥ಅಂಗಕ್ರಿಯರಿವಲ್ಲಿ ಸ್ಥಾಣುವಿನ ಬಾಯ ತಿಲದಂತೆ. ಆತ್ಮ
ಕಲೆಯ ತಿಳಿವಲ್ಲಿ ಶಿಲೆ ಇದ್ದ ಬಿಂದು ವಲವರದಿಂದೆ ಜಾರುವಂತೆ. ಆರಿ
ಮಹವಲ್ಲಿ ಬೆರಿಸುವಾಗ ವಾರಿ ಶಿಲೆ ನೋಡನೋಡಲ್ಕೆ ನೀರಾದಂತೆ ಇ
ಬೇಕು. ಕಾಯವಶದಿಂದ ಕರ್ಮವ ಮಾರಿ ಕರ್ಮವಶದಿಂದ ವರ್ಮ ವಶ
ತವಾದಲ್ಲಿ ಅವೆ ಕಾಯ ಬೆರಿಸಿ ಇದ್ದುದು ಕೈಲಾಸ. ಆ ಭಾವವ ನಿಮ್ಮನೀ
ವೆ ತಿಳಿದುಕೊಳ್ಳಿ ಎನ್ನಯ್ಯಪ್ರಿಯಇಮ್ಮಡಿ ನಿಃಕಳಂಕಮಲ್ಲಿಕಾರ್ಜುನ. ॥೩೦

ಮತ್ತಂ॥ ಮನೆಯಲ್ಲಿ ವೀರ ಧೀರ. ರಣದಲ್ಲಿ ಓಸರಿಸಿದ ಮತ್ತೆ ಭಾಷೆ
ಬಂಟನಲ್ಲ. ನೀ ಬಂದಡೆ ನೀ ಮಾಡುವ ಮಾಟ. ನಿಮ್ಮ ಪ್ರಮಥರೆಲ್ಲ ಹಂಗಿ
ಸುವರು. ನಿರಂಗ ವಚನವ ಕೂಡಿಹೆನೆಂಬ ಸಂದಿಯಲ್ಲಿಯೆ ನಿಂದಿತ್ತು
ನಿಜಲಿಂಗದ ಕೂಟ. ಆ ಗುಣ ನಿನ್ನ ನೀನೆ ನೋಡಿಕೊ ಎನ್ನಯ್ಯ ಪ್ರಿಯ
ಇಮ್ಮಡಿನಿಃಕಳಂಕಮಲ್ಲಿಕಾರ್ಜುನ. ॥೩೧॥

ಹೀಗೆಂದು ಮಹಾದೇವಿಯಮ್ಮನು ನುಡಿಯಲು, ಆ ಮೋಳಿಗೆಯ
ವಾರಿತಂವೆಗಳು ಲಿಂಗೈಕ್ಯದ ನಿಶ್ಚಯವ ಕೇಳಿದ ಪ್ರಸ್ಥಾವದ ವಚನ.

ಭಕ್ತಿಯುಳ್ಳನ್ನಕ್ಕ ಇಷ್ಟಲಿಂಗದ ಹಂಗು ಬೇಕು. ಆತ್ಮವುಳ್ಳನ್ನಕ್ಕ ಆ
ವೆಂಬುದ ವಿಚಾರಿಸಬೇಕು ಮರ್ತ್ಯವೆಂಬುವ ನಾ ಬಲ್ಲನ್ನಕ್ಕ ಕರ್ಕಶದ ಜಗ
ಇದು ಕಾರಣದಲ್ಲಿ ಕೈಲಾಸವೆಂಬ ಬಟ್ಟೆಯನರಸಬೇಕು. ಎನ್ನ ಸತ್ಯಕ್ಕೆ
ಎನ್ನ ಭಕ್ತಿಗೆ ಎನ್ನ ಮನಕ್ಕೆ ಎನ್ನ ಮುಕ್ತಾಂಗನೆ ಎನ್ನ ನಿಶ್ಚಯಕ್ಕೆ ಒಂದು
ಸೊತ್ತ ತೋರಾ ನಿಃಕಳಂಕಮಲ್ಲಿಕಾರ್ಜುನನು ಎಲ್ಲಿದ್ದಹನು ಹೇಳಾ. ॥೩೨

ಹೀಗೆಂದು ಮೋಳಿಗೆಯ ಮಾರಿತಂವೆಗಳು ಕೇಳಲು ಅವರ ಸತಿಯು
ಮಹಾ ಘನಲಿಂಗ ಸ್ವರೂಪರು ನೀವಾದ ಕಾರಣ ಎನಗೆ ಸ್ವತಂತ್ರವಿ
ಲ್ಲೆಂದು ವಿನ್ನೈಸಿದ ಪ್ರಸ್ಥಾವದ ವಚನ॥

ಕಾಯವಿದ್ದಂತೆ ತಲೆ ನಡೆವುದುಂಟಿ ಅಯ್ಯ? ಕಣ್ಣಿದ್ದಂತೆ ಕರ್ಣ ನೋ
ಡಿವುದುಂಟಿ ಅಯ್ಯ? ಬಾಯಿ ಇದ್ದಂತೆ ನಾಸಿಕ ಉಂಡುದುಂಟಿ ಅಯ್ಯ? ಭ
ಇಲ್ಲದೆ ಮುಕ್ತಿಯು ಬಂದ ತೆರನ ಹೇಳಯ್ಯ. ನಿಮ್ಮ ಸೇವೆಯ ತೊತ್ತಿನನುಳ

ವ ಕೇಳಲೇತಕ್ಕೆ? ಪಟದೊಳಗಣ ಬಾಲ ಸರಕ್ಕೆ ಪ್ರತಿಸೂತ್ರ ನೇಣುಂಟಿ?
ಮ್ಮಲ್ಲಿ ಎನ್ನ ಭಾವ ಲೇಪ. ಎನ್ನಯ್ಯ ಪ್ರಿಯ ಇಮ್ಮಡಿ ನಿಃಕಳಂಕಮಲ್ಲಿಕಾ
ರ್ಜುನನಲ್ಲಿಯೆ. ॥೩೩॥

ಮತ್ತಂ॥ ಚಿತ್ರ ಜೊಂಬೆಯ ಹಾಹೆ ಎಲ್ಲಕ್ಕು ಆತ್ಮನಿಂದ ಜೀವ
ನಿ ನಡೆವುತ್ತಿಹವೆ? ಅವು ಸೂತ್ರಾದಿಕನ ಭೇದ. ಎನ್ನ ಶಕ್ತಿ ಜಾತಿ ಲಕ್ಷಣ
ನಿಮ್ಮ ಭಕ್ತಿ ಸೂತ್ರದಿಂದ ಎನ್ನ ಸ್ತ್ರೀಜಾತಿ ನಿಮ್ಮ ಶ್ರೀಪಾದದಲ್ಲಿ ಅಡ
ಗಿತ್ತು. ಎನಗೆ ಭಿನ್ನದ ಮಾತಿಲ್ಲ. ಎನ್ನಯ್ಯ ಪ್ರಿಯ ಇಮ್ಮಡಿ ನಿಃಕಳಂಕ
ಮಲ್ಲಿಕಾರ್ಜುನನೆಂಬವರು ನೀವೆ. ॥೩೪॥

ಹೀಗೆಂದು ಮಹದೇವಿಯಮ್ಮ ನುಡಿಯಲು, ಆ ಮೋಳಿಗೆಯ ಮಾರಿ
ತಂದೆಗಳು ಎನ್ನ ಸದಾಚಾರ ಸದ್ಭಕ್ತಿಗೆ ನೀನೊಳಗಾದ ಕಾರಣ ಎನಗು
ನಿನಗು ಭಿನ್ನಭಾವವಿಲ್ಲೆಂದು ಕೇಳಿದ ಪ್ರಸ್ಥಾವದ ವಚನ॥

ತಲೆ ಇಲ್ಲದೆ ಕಾಲು ನಡೆಯಬಲ್ಲುದೆ? ಕುಕ್ಷಿ ಇಲ್ಲದ ಬಾಯಿ
ಉಣಬಲ್ಲುದೆ? ಆತ್ಮನಿಲ್ಲದಿರೆ ಕರಚರಣಾದಿಗಳಿಗೆ ಏತರ ಹೊಲಬು?
ನಿನ್ನ ಭಕ್ತಿಯ ಬೆಳೆಯೆ ಎನಗೆ ಸತ್ಯವ ಹಾದಿ. ಇದು ನಿಶ್ಚಯ ನಿಃಕ
ಳಂಕಮಲ್ಲಿಕಾರ್ಜುನ. ॥೩೫॥

ಮತ್ತಂ॥ ಸತ್ಪಥೆಟ್ಟಲ್ಲಿ ಕಾಪ್ಪನನೂರಿ ನಡೆಯಬೇಕು. ಮತತ್ವವಿ
ಪ್ಪಲ್ಲಿ ನಿಶ್ಚಯವ ಹೇಳಲಾಗಿ ಮಹಾ ಪ್ರಸಾದವೆಂದು ಕೈಕೊಳ್ಳಬೇಕು.
ಎನ್ನ ಭಕ್ತಿಗೆ ನೀ ಶಕ್ತಿಯಾವ ಕಾರಣ ಎನ್ನ ಸತ್ಯಕ್ಕೆ ನೀ ಸತಿಯಾದ
ಕಾರಣ ಎನ್ನ ಸುಖದುಃಖ ನಿನ್ನ ಸುಖದುಃಖ ಅನ್ಯವಿಲ್ಲ. ಇವಕ್ಕೆ ಭಿನ್ನ
ಭೇದವೇನು ಹೇಳಾ ನಿಃಕಳಂಕ ಮಲ್ಲಿಕಾರ್ಜುನ? ॥೩೬॥

ಹೀಗೆಂದು ಮೋಳಿಗೆಯ ಮಾರಿತಂದೆಗಳು ಕೇಳಲು, ಅವರ ಸತಿಯು
ಮಹಘನಲಿಂಗಕ್ಕು ನಿನಗು ಅನ್ಯಭಿನ್ನವಿಲ್ಲೆಂದು ನಿಶ್ಚಯವ ತೋರಿ ನುಡಿದ
ಪ್ರಸ್ಥಾವದ ವಚನ॥

ಕೂಟಕ್ಕೆ ಕುರುಹಾದುದನರಿಯದೆ, ಆತ್ಮಕ್ಕೆ ಅರುಹಾದುದನರಿಯದೆ
ಕೈಲಾಸವೆಂಬ ಸೂತ್ರವ ಒಳಗಿಗೆ ಮನ ಸೋತಿರಲ್ಲ. ಅಂಧಕನ ಕೈಯ್ಯ
ತ್ನದಂತೆ ಆದಿರಲ್ಲ. ಪಂಗುಳನ ಕಯ್ಯ ಶಸ್ತ್ರದಂತೆ ಆದಿರಲ್ಲ. ಇದ
ಸಂಕಲ್ಪ ತಿಳಿದು ನಿಂದಲ್ಲಿ ಬೇರೆ ಅಂಗವಡಗುವದಕ್ಕೆ ಉಭಯಪ್ರಪಂಚಿಂ
ದಂಸಿವ

ದಂಮಗ ಬೇಡಾ. ತಾ ನಿಂದಲ್ಲಿಯೆ ನಿಜಕೂಟ. ತಿಳಿದಲ್ಲಿಯೆ ನಿರಂಗವೆಂ
ಬುದು ಉಭಯವಿಷ್ಟ ಎನ್ನಯ್ಯ ಪ್ರಿಯ ಇಮ್ಮಡಿ ನಿಃಕಳಂಕಮಲ್ಲಿಕಾರ್ಜು
ನನಲ್ಲಿ ॥೩೭॥

ಮತ್ತಂ॥ ಇಷ್ಟವಲ್ಲಿ ನೋಟ, ಜ್ಞಾನದಲ್ಲಿ ಕೂಟ, ಏಕಾರ್ಥವಾದಲ್ಲಿ
ಕಾಯವೆಂಬ ಕದಳಿಯ ಬಿಟ್ಟಿದು. ಭಾವವೆಂಬ ಕುರುಹ ಮರೆದು ನ
ಂತೀ ಉಭಯ ನಿರ್ಭಾವವಾದಲ್ಲಿ ಇಹಪರವೆಂಬ ಹೊಲಬುಗೆಟ್ಟಿತ್ತು.
ಎನ್ನಯ್ಯ ಪ್ರಿಯ ಇಮ್ಮಡಿ ನಿಃಕಳಂಕ ಮಲ್ಲಿಕಾರ್ಜುನನು ಒಂದೆಂ
ದಲ್ಲಿ. ॥೩೮॥

ಮತ್ತಂ॥ ಹೇಮದ ಬೆಂಬಳಿಯ ಸ್ವರೂಪದಂತೆ ಗ್ರಾಮದ ಬೆಂಬ
ಳಿಯ ಬಟ್ಟೆಯಂತೆ ಹೇಮ ರೂಪಳಿದು ಸ್ವರೂಪಡಗಿದಲ್ಲಿ ಕುಶಲ ಚಿತ್ರ
ಎಲ್ಲಿ ಇದ್ದಿತ್ತು. ಬಟ್ಟೆಯ ಮೆಟ್ಟಿ ಹೋಗಿ ಪುನರಪಿಯಾಗಿ ತಿರಿಗಿದಲ್ಲಿ ಊ
ರಾಗಿಲ ಬಟ್ಟೆಯ ಒಂದರಲ್ಲಿ ಹೋಗಬೇಕು. ಇವ ದೃಷ್ಟಕ್ಕೆ ಕೊಟ್ಟ
ಇಷ್ಟ. ಆ ಇಷ್ಟ ಚಿತ್ತದಲ್ಲಿ ಅಚ್ಚೊತ್ತಿದ ಮತ್ತೆ ಆ ನಿಶ್ಚಯದ ಉಭ
ಯದ ತಿಳಿದಲ್ಲಿ ಕಾಯಕ್ಕೆ ಕೈಲಾಸವೆಂಬುದಿಲ್ಲ. ಭಾವಕ್ಕೆ ಬಯಲೆಂಬು
ದಿಲ್ಲ. ಅನಲನಲ್ಲಿ ಅರತ ದ್ರವ್ಯದಂತೆ ಅದು ಅಮೂರ್ತಿಭಾವ ಎನ್ನಯ್ಯ
ಪ್ರಿಯ ಇಮ್ಮಡಿ ನಿಃಕಳಂಕ ಮಲ್ಲಿಕಾರ್ಜುನನಲ್ಲಿ ಸದ್ಭಾವವಂತನ ಲಕ್ಷ ॥೩೯॥

ಮತ್ತಂ॥ ಗುರುವನರಿದು, ಲಿಂಗವನರಿವರುಂಟು. ಲಿಂಗವನರಿದು
ಪಂಚಾಚಾರವನರಿವರುಂಟು. ಪಂಚಾಚಾರವನರಿದು, ಜಂಗಮವನರಿವ
ರುಂಟು. ಆ ಜಂಗಮವನರಿವಲ್ಲಿ ಷಟುಸ್ಥಲ ಸಂಬಂಧವಾಯಿತ್ತು. ಆ
ಸಂಬಂಧ ಸಮಯ ನಿಂದು ಉಭಯವಳಿದು ಏಕವಾದಲ್ಲಿ ಹಲವು ಸೆಲೆ
ತನ್ನ ವಿಶ್ವಾಸದ ಹೊಲಬಿನಲ್ಲಿ ಅಡಗಿತ್ತು. ಆ ಹೊಲಬದ ಹೊಲಬಿನಲ್ಲಿ
ನಿಂದವಂಗೆ ಇಹಪರವೆಂಬ ಕಲೆ ಇಲ್ಲ, ಎನ್ನಯ್ಯ ಪ್ರಿಯ ಇಮ್ಮಡಿ ನಿಃಕಳಂ
ಕಮಲ್ಲಿಕಾರ್ಜುನ ಒಂದೆ ಎಂದಲ್ಲಿ ॥೪೦॥

ಮತ್ತಂ॥ ಪೂಜೆಯಲ್ಲಿ ಲಕ್ಷಿತವಪ್ಪರು ಪುಣ್ಯದ ಆಗಿಂಗೆ ಒಡಲು.
ದಾಸೋಹವೆಂಬ ಸೋಹವನರಿದಲ್ಲಿ ಚತುರ್ವಿಧ ಫಲಪದದಾಸೆಗೆ ಒಡಲು.
ಇಂತೀ ಉಭಯದ ಪ್ರೀತಿಯನರಿದು ತೋರಿದಕೆ ಬಂದಂತೆ ಅಪನಾರ್ಪಿದು
ಗುರುವಿಂಗೆ ತನು ಹೋಯಿತ್ತು. ಲಿಂಗಕ್ಕೆ ಮನ ಹೋಯಿತ್ತು. ಜಂಗ
ಮಕ್ಕೆ ಧನ ಹೋಯಿತ್ತು. ಇಂತೀ ಎಲ್ಲ ಲಕ್ಷದಲ್ಲಿ ಲಕ್ಷಿಸಿ ನೀವು ಕೈಲಾ

ಸಕ್ಕೆ ಹೋದಿಹೆನೆಂಬ ಕಲ್ಪಿತಕೆ ನಾನಂಜಿನೆನು ಎನ್ನಯ್ಯ ಪ್ರಿಯ ಇಮ್ಮಡಿ
ನಿಃಕಳಂಕಮಲ್ಲಿಕಾರ್ಜುನ ॥೪೧॥

ಮತ್ತಂ॥ ಕಾಯವುಳ್ಳನ್ನಕ್ಕ ಲಿಂಗಪೂಜೆ. ಆತ್ಮವುಳ್ಳನ್ನಕ್ಕ ಗುರುವಿನ
ಭೇದ ಪುರುಷ ನೀ ಸತಿ ನಾನೆಂಬಲ್ಲಿ ಉಭಯದ ಬೀಜ. ನಾನೀ
ನೆಂಬನ್ನಕ್ಕ ಅಂಗವು ಲಿಂಗದಲ್ಲಿಯೇ ನಿರಂಗವಾಗಬೇಕು. ಎನ್ನಯ್ಯ
ಪ್ರಿಯ ಇಮ್ಮಡಿ ನಿಃಕಳಂಕ ಮಲ್ಲಿಕಾರ್ಜುನ ॥೪೨॥

ಮತ್ತಂ॥ ಕಾಯವೆರಸಿ ಕೈಲಾಸಕ್ಕೆ ಹೋದಿಹೆನೆಂಬುದು ಮತವಲ್ಲ.
ಘನಲಿಂಗ ಕರಸ್ಥಲದಲ್ಲಿಪ್ಪ ಅನುವನರಿಯದೆ ಇಲ್ಲಿಗೆ ಕರ್ಮ ಅಲ್ಲಿಗೆ ನಿಃಕ
ರ್ಮವೆ? ಹೇಮದ ಮಾಟದ ಒಳಹೊರಗಿನಂತೆ. ಮರ್ತ್ಯ ಕೈಲಾಸ ಕಟ್ಟಳೆ
ಇಲ್ಲ. ಆತ್ಮನಿಷ್ಠೆಯವಾದಲ್ಲಿಯೆ ಕೈಲಾಸ. ಮತತ್ವವಾದಲ್ಲಿಯೆ ಮರ್ತ್ಯ
ದೊಳಗು. ಈ ಗುಣ ಸಮಮಲ ಭಕ್ತನ ಯುಕ್ತಿ ಎನ್ನಯ್ಯ ಪ್ರಿಯ ಇಮ್ಮಡಿ
ನಿಃಕಳಂಕಮಲ್ಲಿಕಾರ್ಜುನನು ಇಕ್ಕಿದ ಗೊತ್ತು ॥೪೩॥

ಮತ್ತಂ॥ ಮಾಡಿದ ಭಕ್ತಿಗೆ ಕೈಲಾಸಕ್ಕೆ ಹೋದಿಹೆನೆಂಬುದು ಕೈ
ಕೂಲಿ. ಭಾಷೆಗೆ ತಪ್ಪಿ ಒಸರಿಸದೆ ಮತ್ತೆ ನಾನೀಹಿತವ ಹೇಳಿದಲ್ಲಿ ಮತ್ತೆ
ಘಾತಕತನದಿಂದ ಎಯ್ದಿಹೆನೆಂಬುದು ಭಕ್ತರಿಗೆ ವಿಹಿತವಲ್ಲ. ದೃಷ್ಟದಲ್ಲಿ
ಕೊಟ್ಟುದ ಲಕ್ಷಿಸಲರಿಯದೆ, ಆ ಲಕ್ಷವ ಲಕ್ಷಿಸಿ ಕಾಂಬುದಕ್ಕೆ ಲಕ್ಷನೇನು?
ಅವ, ನಿರೀಕ್ಷೆಯು ಲಕ್ಷವಿಂದಲ್ಲದೆ ಆತ್ಮಂಗೆ ಲಕ್ಷವಿಲ್ಲ. ಇಂತೀ ಉಭಯ
ದಲ್ಲಿ ಲಕ್ಷಿತನಾವಂಗೆ ಮರ್ತ್ಯಕೈಲಾಸವೆಂಬುದು ತನ್ನರಿವು ನಿಶ್ಚಯವಾ
ದಲ್ಲಿ ಅವೆ ಲಕ್ಷ ಎನ್ನಯ್ಯ ಪ್ರಿಯ ಇಮ್ಮಡಿ ನಿಃಕಳಂಕ ಮಲ್ಲಿಕಾರ್ಜುನ
ಅಲ್ಲಿಯು ಇಲ್ಲಿಯು ತಾನೆ ॥೪೪॥

ಕಾಯದ ಭ್ರಮೆಯಿಂದ ಕೈಲಾಸ ಜೀವದ ಭ್ರಮೆಯಿಂದ ಮಹದ
ಕೂಟವೆಂಬುದು ಕಾಯವಜೀವದ ಭೇದವನರಿತಲ್ಲಿ ಅತ್ತಲಿತ್ತಲೆಂದು
ಮತ್ತೆ ಹಲುಬಲಿಲ್ಲ. ಇದು ನಿಷ್ಠೆಯ ಕೂಟ ಎನ್ನಯ್ಯ ಪ್ರಿಯ ಇಮ್ಮಡಿ
ನಿಃಕಳಂಕ ಮಲ್ಲಿಕಾರ್ಜುನನಲ್ಲಿ ॥೪೫॥

ಮತ್ತಂ॥ ಸುಮನಸ ಸುಬುದ್ಧಿ ಭಕ್ತಿಸ್ಥಲ, ಮಲಿಮಮಲ ಮಹೇ
ಶ್ವರಸ್ಥಲ, ಅಜ್ಞಾನ ಸುಜ್ಞಾನ ಪ್ರಸಾದಿಸ್ಥಲ, ಉಭಯ ಕೂಟಸ್ಥವೆಂಬುದ
ರಿಹರಿಸಿದಲ್ಲ ಪ್ರಾಣಲಿಂಗಿಸ್ಥಲ, ಸ್ತುತಿ ನಿಂದ್ಯಾದಿಗಳಲ್ಲಿ ಒಡಲಳಿದು
ನಿಂದುದು ಶರಣ ಸ್ಥಲ, ಇಂತೀ ಪಂಚಭೇದಂಗಳ ಸಂಚವನರಿತು ವಿಸಂಚ

ವಿಲ್ಲದೆ ಕರುಷ ಪಾಷಾಣವುಕಿ ಭಿನ್ನಭಾವವಿಲ್ಲದೆ ಅರಿದರುಹಿಸಿಕೊಂಬ ಕುರುಹು ಏಕವಾದಲ್ಲಿ ಐಕ್ಯಸ್ಥಲ ಎನ್ನಯ್ಯ ಎನ್ನ ನಿಮ್ಮ ಪಡುಸ್ಥಲ ಇದಕ್ಕೆ ಭಿನ್ನಭಾವವಿಲ್ಲ. ಅದು ಎನ್ನ ನಿನ್ನ ಕೂಟದ ಸುಖದಂತೆ ಇದ ಚನ್ನಾಗಿ ತಿಳಿದು ನೋಡಿಕೊಳ್ಳಿ. ಅಲ್ಲಿ ಇಲ್ಲಿ ಎಂಬ ಗೆಲ್ಲಗುಳಿತನ ಬೇಡಾ ಹಾಂಗೆಂಬಲ್ಲಿಯೆ ಬಯಲಾಗಬೇಕು. ಎನ್ನಯ್ಯ ಪ್ರಿಯ ಇಮ್ಮಡಿ ನಿಃಕಳಂಕ ಮಲ್ಲಿಕಾರ್ಜುನನಲ್ಲಿ ॥೪೬॥

ಮತ್ತಂ॥ ಬಿಡುವುದಕ್ಕೆ ಮುನ್ನವೆ ಮೊನೆ ಮುಂಚಿದಂತಿರಬೇಕು. ಅದಿ ಎರುವುದಕ್ಕೆ ಮುನ್ನ ಆ ಮೊನೆಯ ಜಾರಿ ಮತ್ತೆ ತಾನದಿ ಏರಿ ಮಾರಿ ಮುಂಚಿದಂತಿರಬೇಕು. ನೀನೆಂಬನ್ನಕ್ಕ ಲಕ್ಷದಲ್ಲಿ ಅಲಕ್ಷವಾಗಬೇಕು. ಎನ್ನಯ್ಯ ಪ್ರಿಯ ಇಮ್ಮಡಿ ನಿಃಕಳಂಕ ಮಲ್ಲಿಕಾರ್ಜುನನೆಂಬುದಕ್ಕೆ ಮುನ್ನವೆ. ॥೪೭॥

ಇಂತು ಮಹದೇವಿಯಮ್ಮನು ಲಿಂಗೈಕ್ಯದ ನಿರ್ಣಯವ ಬಿನ್ನೈಸಲು, ಆ ಮೋಳಿಗೆಯ ಮಾರಿತಂದೆಗಳು ಘನಲಿಂಗದಲ್ಲಿ ತಮಗೆ ಸಮರಸಭಾವವ ತಿಳಿದು ನಿಶ್ಚೈಸಿದ ಪ್ರಸ್ಥಾವದ ವಚನ॥

ಹಲವು ಬಹುರೂಪ ಬರೆವ ಕರದ ಕಡ್ಡಿಯ ಭೇದದಂತೆ, ಮನ ವರಿದು, ಕಣ್ಣು ನೋಡಿ ಕೈಯ್ಯ ಕಡ್ಡಿಯ ಹಿಡಿದು ಲಕ್ಷಿಸುವಂತೆ, ಸ್ಥಲ ದಲ್ಲಿ ನಿಂದು ಅರುಹಿನಲ್ಲಿ ಆಶ್ರಯಿಸಿ, ಇಷ್ಟ ವಿಶ್ವಾಸಭಕ್ತಿಯೊಳಡಗಿ ಭಕ್ತಿ ವಸ್ತುವಿನಲ್ಲಿ ಲೀಪವಾದಲ್ಲಿ ನಿಃಕಳಂಕ ಮಲ್ಲಿಕಾರ್ಜುನ ಲಿಂಗವು ನಿರ್ಲೇಪವಾಯಿತ್ತು. ॥೪೮॥

ವಿಶ್ವಾಸದ ಹರವರಿಯಲ್ಲಿ ವಿಶ್ವಮಯ ಸ್ಥಲಕುಳಂಗಳಾವವು. ಅದು ನಾನಾ ತಟಾಕಂಗಳಲ್ಲಿ ತೋರುವ ದಿನಕರನಂತೆ ಹಲವುಮಯ ತೋರು ವದಲ್ಲಿಗಲ್ಲಿಗೆ ಒಲವರವಿಲ್ಲದೆ ಆ ಅರುಣನ ನೆಲೆ ಒಂದೆ ಹಲವು ಜಗಕ್ಕೆ ಹೊಲಬಾದಂತೆ ಸ್ಥಲ ಜ್ಞಾನಾದಿಯಲ್ಲ ಸ್ಥಲನೆಲೆ ಒಂದೆಂದರಿವಲ್ಲಿಯೇ ಕರಸ್ಥಲ ಮೂರ್ತಿ ನೀನೆ ಏಕಸಾಕೆಂದಲ್ಲಿ ನಿರಾಕಾರನಾದೆಯಲ್ಲ ನಿಃಕಳಂಕ ಮಲ್ಲಿಕಾರ್ಜುನ ॥೪೯॥

ಇತಿ ಶ್ರೀಮತ್ಸಕಲ ಗಣ ಪುರಾತನರೊಳ್ ಪ್ರಭುದೇವರು ಮಹಾ ನುಭಾವ ಸದ್ಗೋಷ್ಠಿಯಂ ಮಾಡಿದ ಶೂನ್ಯಸಂಪಾದನೆಯೊಳ್ ಮೋಳಿಗೆಮು ಮಾರಯ್ಯಗಳ ಸಂಪಾದನೆಗಂ ತ್ರಯೋದಶೋಪದೇಶ ಸಮಾಪ್ತ

ನುಲಿಯುಚಂದಯ್ಯಗಳ ಸಂಪಾದನೆ.

(ಚತುರ್ದಶೋಪದೇಶ.)

॥ಕಂ॥ ನುಲಿಯುಚಂದಯ್ಯನೆಂಪಿಂ ಒಲಪುತರ ಶರಣ ತನ್ನ ಲಿಂಗ ಪೈಯುಲಿ ॥ ಸಲೆಕಾಯಕವಮಾಪ್ಪ । ಗ್ಗಳ ಚರಿತವ ಪೇಳ್ವೆನಿಳೆಯೊಳಾ ನಂದದೊಳಂ ॥

ಅದೆಂತೆಂದೊಡಾ ಮೋಳಿಗೆಯ ಮಾರಿತಂದೆಗಳು ಘನಲಿಂಗದಲ್ಲಿ ಸಮರಸಭಾವವನೈದಿ ನಿಶ್ಚಯಿಸುತ್ತಂ ಬಸವಣ್ಣ, ಚನ್ನಬಸವಣ್ಣ, ಪ್ರಭು ದೇವರು, ಸಿದ್ಧರಾಮಯ್ಯದೇವರು, ಅಪ್ಪಣ್ಣಗಳು, ಸೊಡ್ಡಳಬಾಚರಸರು ಮೊದಲಾದ ಅಸಂಖ್ಯಾತ ಪ್ರಮಥಗಣಂಗಳೆಲ್ಲರು ಮಹಾನುಭಾವದ ನಿಜಾ ನಂದ ಶರಧಿಯೊಳ್ಮೋಲಾಡುತ್ತಮಿರಲು ಮತ್ತೋರ್ವ ಶರಣ ನುಲಿಯ ಚಂದೈಯ್ಯನ ಮಹಾತ್ಮೆ ಎಂತೆಂದೊಡೆ ಮೊದಲಾ ಶಿವ ನಿರೂಪದಿಂ ಈ ಗಣಂಗಳೆಲ್ಲರು ಜಗದ್ವಿತಾರ್ಥವಾಗಿ ವೀರಶೈವ ನಿಜವರ್ತನಾಸಂಬಂಧಮುಂ ಮರ್ತ್ಯದಲ್ಲಿ ಪಸರಿಸಲೆಂದು ಭೂಮಿಗೆ ಬಿಜಯಂಗೈವಾಗ ತಾನೊಬ್ಬ ಶರ ಣನಾಗಿ, ಜನಿಸಿ ನುಲಿಯ ಚಂದಯ್ಯನೆಂಬ ನಾಮದಿಂ ಜಂಗಮದಾ ಸೋಹಕ್ಕೆ ಸತ್ಯಶುದ್ಧ ನಿಜಕಾಯಕದಿಂ ನುಲಿಯ ಮಾಡಿ, ಹಾಗಕ್ಕೆ ಮಾರಿ ತಂದ ದ್ರವ್ಯದಿಂ ಪದಾರ್ಥಮುಂ ತಂದು, ಜಂಗಮಕ್ಕೆ ನೀಡಿ, ತತ್ಪ್ರಸಾದವಂ ಲಿಂಗಭೋಗೋಪ ಭೋಗಿಯಾಗಿರುತ್ತಂ ಬಸವಣ್ಣನ ಭಕ್ತಿ ಮಡಿವಾಳ ಯ್ಯನ ನಿಷ್ಠೆ ಚನ್ನಬಸವಣ್ಣನ ಸಾವಧಾನಜ್ಞಾನ, ಪ್ರಭುವಿನ ಸ್ವಾನು ಭಾವಪ್ರಭೆ, ಪ್ರಭುದೇವರ ಪದಾನಂದಪರಮಕಾಷ್ಠೆ ಅಜಗಣ್ಣನ ಸಮರ ಸೈಕ್ಯತ್ವ ಇಂತಿವರು ಮೊದಲಾದ ಗಣಂಗಳ ನಿಜನೇ ರೂಪಾದಂತೆ ಜಂಗಮ ಭಕ್ತಿಯೇ ಅಧಿಕ ಜಂಗಮ ಪೂಜೆಯೇ ಲಿಂಗಪೂಜೆ, ಜಂಗಮ ಭಕ್ತಿಯೇ ಲಿಂಗಭಕ್ತಿ ಜಂಗಮತೃಪ್ತಿಯೇ ಲಿಂಗತೃಪ್ತಿ, ಜಂಗಮ ದಾಸೋಹವೆ ಪರಮ ಪದವೆಂದು ಎಲ್ಲ ಕ್ರಿಯೆಗಳನು ಜಂಗಮ ದಾಸೋಹದ ಲ್ಲಿಯೆ ತಿಳಿದು, ಅಲ್ಲಿಯೆ ಮನಮಗ್ನನಾಗಿ ಅವಿತನ್ನ ನಿಜಪದವಾಗಿರು ತ್ತಿಂ ಒಂದು ದಿನ ತನ್ನ ನಿಜಕಾಯಕಕ್ಕೆಂತೆಂದು ಹುಲ್ಲಿಂ ಕೊಯ್ದು ಹೊರೆ ಯಂ ಕಟ್ಟುವ ಕಾಲದಲ್ಲಿ ತನ್ನ ಇಷ್ಟಲಿಂಗವು ಕುತನು ಜಂಗಮದಾಸೋ

ಹವೆ ಪರವೆಂಬುದು ನಿಜವೊ ಅಲ್ಲವೊ ಎಂದು ನೋಡುವ ನಿಮಿತ್ತ
ಮತ್ತೆ ಈತನ ಅಸಂಖ್ಯಾತರ ಮುಂದೆ, ಪ್ರಜ್ವಲಿಸಿ ಅರಿಕೆಯ ಮಾಡು
ನಿಮಿತ್ತಂ ಈತನಲ್ಲಿ ತಾವು ಸೇವೆಯ ಮಾಡಬೇಕೆಂಬ ನಿಮಿತ್ತಂ ಈ
ಮೂರು ಭಾವದಿಂ ಸರಿದು ಜಲದಲ್ಲಿ ಬೀಳಲು ನುಲಿಯ ಚಂದಯ್ಯಗಳ
ಈ ಲಿಂಗದ ಮನೋಭಾವದಿಚ್ಛೆಯನರಿದು ಚರಸೇವೆಯು ಬೇಕಾದಡೆ ಲಿಂಗ
ತಾನೆ ಬಂದಿತ್ತೆಂಬುದರಿಂ ಪರಿಪೂರ್ಣವಹ ವಸ್ತು ಎಲ್ಲಿದ್ದರೇನು ಎಂಬ
ಭಾವದಿಂ ಜಂಗಮ ದಾಸೋಹದಲ್ಲಿಯೆ ಲಿಂಗ ಉಂಟೆಂದಂದು, ಆ
ಚಂದಯ್ಯ ಬಿಟ್ಟು ಪೋಗುತಿರೆ ಆ ಲಿಂಗವು ಆತನ ಮನದ ಜಂಗಮದ
ಸೇವಾ ನಿಷ್ಠೆಯಂ ಕಂಡು ಎಲೆ ಚಂದಯ್ಯ ನಾವು ಬಂದೆವೆಂದು
ಮೇಲಕ್ಕೆ ಬಂದು ಧ್ವನಿಯ ಮಾಡಲಾತಂ ನಿಮ್ಮ ಭಾವ ಹೇಗೆ ಇದ್ದಿತ್ತು
ಹಾಗೆ ಇರಿ ನನಗೆ ನಮ್ಮ ಒಡೆಯರ ಸೇವೆ ಉಳಿದೀತು ಎಂದು ಹೋಗು
ತ್ತಿರೆ ಆ ಲಿಂಗವು ತಾನೆ ವೃತ್ತ ಗೋಳಕ ಗೋಮುಖಾಕಾರವನುಳಿದು
ಪುರುಷಾಕಾರಮಂ ತಳೆದು ನಾನು ಬಂದೆನು ಬಿಟ್ಟು ಹೋಗದಿರಯ್ಯ ಎನಲಾ
ಚಂದಯ್ಯ ಕೇಳ್ದು ಮೊದಲು ಹೋಗಿ ಈಗ ಬಂದಿಹೆನೆಂದರೆ ನಾನೊಪ್ಪೆ
ನೆನಲು ಆ ಲಿಂಗವು ನೀನೊಲ್ಲೆನೆಂದರೆ ನಾ ಬಿಡೆನೆಂದು ಸೆರಗಂ ಪುತ್ತಿ
ಕೊಂಡು ಬಿಡದಿರಲು ಆ ಚಂದಯ್ಯ ನೀವು ಸುಮ್ಮನೆ ಬಂದಿಹೆನೆಂದರೆ
ನಾನೊಪ್ಪೆನು. ಮುಂದೆ ನಾವು ಹೋಹ ದಾರಿಯಲ್ಲಿ ಮಡಿವಾಳಯ್ಯಗಳು
ಸೀರೆಯ ಪ್ರಕ್ಷಾಲಿಸುತ್ತ ಇದ್ದಾರೆ, ಅವರ ಬಳಿಗೆ ಬನ್ನಿ ಎಂದು
ನವಸ್ಸರಿಸಲು ಆ ಮಡಿವಾಳಯ್ಯಗಳ ಬಳಿಗೆ ಬಂದು ನಿಂದಿರೆ ಆ
ಮಡಿವಾಳಯ್ಯಗಳು ನಮಸ್ಕರಿಸಿ ಏನು ಬಂದಿರಿ ಎಂದು ಕೇಳಲಾಗಿ ಆ
ಲಿಂಗವು ಮಡಿವಾಳಯ್ಯಂಗೆ ತಮ್ಮ ಸ್ಥಿತಿಯನು ಹೇಳಲಾಗಿ ಆ ಮಡಿವಾ
ಳಯ್ಯಗಳು ಚಂದಯ್ಯಂಗೆ ನಿರೂಪಿಸಿದ ಪ್ರಸ್ಥಾವದ ವಚನ॥

ಬಂದಿಹೆನೆಂಬ ಸುಖವ ಹಿಂಗಿದವರುಂಟಿ? ಕಂಡ ನಿಧಾನವ ನೆಡೆ
ಹಿಕೊಂಡು ನಡೆ ಎಂದವರುಂಟಿ? ಸುಖಕ್ಕೆ ಸುಖ ಒದಗಿದರೆ ಒಲ್ಲೆನೆಂ
ಬವರುಂಟಿ? ಕಲಿದೇವಯ್ಯ ಬಂದಿಹೆನೆಂದರೆ ಬೇಡವೆನಬೇಕೆ ಚಂದಯ್ಯ ॥೧॥

ಇದಕ್ಕೆ ಚಂದಯ್ಯಗಳ ಪ್ರತ್ಯುತ್ತರ ॥

ಅಂದು ಹೋಗಿ ಇಂದು ಬಂದಿಹೆನೆಂಬಾಗ ಈ ದಂದುಗದೊಡಲು
ತನ ಉಂಟಿ? ಘನಲಿಂಗವೆಲ್ಲಿರ್ದಡಲ್ಲಿಯೆ ಪರಿಪೂರ್ಣ ಲಿಂಗ ಹೋಯಿ

ಬ ಸಂದೇಹವೆನಗುಂಟಾವರಿ ಆ ಲಿಂಗ ಉಳಿಯಬಲ್ಲುದೆ? ಆತ್ಮ
ದಲ್ಲಿ ಘಟವೆಷ್ಟು ದಿನ ಉಳಿವುದು? ಜಂಗಮವುಳ್ಳನ್ನಕ್ಕರ ಚಂದೇ
ಲಿಂಗಕ್ಕೆ ಸಂದಿಲ್ಲ ಕಾಣಾ ಮಡಿವಾಳಯ್ಯ ॥೨॥

ಇದಕ್ಕೆ ಮಡಿವಾಳಯ್ಯಗಳ ನಿರೂಪ॥

ದಾಸೋಹವೆಂಬನ್ನಕ್ಕ ಈಶ್ವರಪೂಜೆಯ ಆಚಾರದಲ್ಲಿ ಇರಬೇಕು.
ಜೆಸೆಂಬ ನೇಮ ಬೇಡಾ, ಮಾಡಿಹೆನೆಂಬ ಕೃತ್ಯ ಬೇಡಾ. ಈ ಉಭಯಸ
ತಳವಟ್ಟಲ್ಲಿ ಕಲಿದೇವಂಗೆ ಭಾವಶುದ್ಧವಾಯಿತ್ತು ಕಾಣಾ ಚಂದಯ್ಯ॥೨॥

ಇದಕ್ಕೆ ಚಂದಯ್ಯಗಳ ಬಿನ್ನಹ॥

ಆವಾವ ಕಾಯಕದಲ್ಲಿ ಬಂದರೂ ಭಾವಶುದ್ಧವಾಗಿ ಗುರುಲಿಂಗ
ಜಂಗಮಕ್ಕೆ ಮಾಡುವುದೆ ಶಿವಪೂಜೆ. ಅದು ಚಂದೇಶ್ವರ ಲಿಂಗಕ್ಕೆ ಒಪ್ಪ
ವೆ ಮಡಿವಾಳಯ್ಯ? ॥೪॥

ಮತ್ತಂ॥ ಲಿಂಗವೆಂಬುದು ಗುರುವಿನ ಹಂಗು. ಗುರುವೆಂಬುದು
ಜಂಗಮ ಹಂಗು. ಈ ಉಭಯಕ್ಕತೀತ ಜಂಗಮಲಿಂಗ ದಾಸೋಹ. ಆದಿ
ಚಂದೇಶ್ವರಲಿಂಗಕ್ಕೆ ಕಟ್ಟಗೊತ್ತು ಕಾಣಾ ಮಡಿವಾಳಯ್ಯ ॥೫॥

ಇದಕ್ಕೆ ಮಡಿವಾಳಯ್ಯಗಳ ವಚನ॥

ಗುರುವಾದರೂ ಲಿಂಗವ ಪೂಜಿಸಬೇಕು. ಲಿಂಗವಾದರೂ ಲಿಂಗವ
ಜಿಸಬೇಕು. ಜಂಗಮವಾದರೂ ಲಿಂಗವ ಪೂಜಿಸಬೇಕು. ಜಂಗ
ಮವಿಲ್ಲದೆ ಲಿಂಗವಿಲ್ಲ. ಲಿಂಗವಿಲ್ಲದೆ ಪ್ರಾಣವಿಲ್ಲ. ಆದಿ ಆಧಾರವಿಲ್ಲದೆ ಜಗವೇನು ಇಲ್ಲ.
ಹೆನೆಂದರೆ ಅಂಗದಲ್ಲಿ ಲಿಂಗವಿರಬೇಕು. ಕಲಿದೇವಯ್ಯನ ನಂಬು
ವಿದೆ ಮಾರ್ಗ ಚಂದಯ್ಯ ॥೬॥

ಇದಕ್ಕೆ ಚಂದಯ್ಯಗಳ ಬಿನ್ನಹ,

ಭಾವಶುದ್ಧವಾಗಿಪ್ಪುದೆ ಗುರುಪೂಜೆ. ಜ್ಞಾನ ಶುದ್ಧವಾಗಿಪ್ಪುದೆ ಲಿಂಗ
ತ್ರಿಕರಣ ಶುದ್ಧವಾಗಿಪ್ಪುದೆ ಜಂಗಮ ಪೂಜೆ. ಆ ತ್ರಿವಿಧ ಭೇದ
ತ್ರಿವಿಧಾರ್ಪಣವ ಸಮರ್ಪಿಸಿ ನಿಂದುದೆ ಚಂದೇಶ್ವರಲಿಂಗಕ್ಕೆ ಅರ್ಪಿ
ತ್ಯ ಮಡಿವಾಳಯ್ಯ ॥೭॥

ಇದಕ್ಕೆ ಮಡಿವಾಳಯ್ಯಗಳ ನಿರೂಪ

ಅರಿವನರಿದಿಹೆನೆಂದು ಕ್ರಿಯೆಯ ಬಿಡಬಹುದೆ? ಮಧುರಕ್ಕೆ ಮಧುರ

ಒದಗಲಾಗಿ ಆ ಸನಿಗೆ ಸನಿ ಕೊರತೆಯುಂಟೆ? ದ್ರವ್ಯಕ್ಕೆ ದ್ರವ್ಯ ಒದಗಲಾಗಿ, ಒಡತನನವಧಿಯುಂಟೆ? ಮಾಡುವ ಮಾಟ ಶಿವಪೂಜೆಯ ನೋಟ ಭಾವವಿರಬೇಕು. ಅದು ಕಲಿದೇವಯ್ಯನ ಮಾಟವಲ್ಲವೆ ಚಂದಯ್ಯ? ॥೪॥

ಇದಕ್ಕೆ ಚಂದಯ್ಯಗಳ ಬಿನ್ನಹ॥

ಕಸಿತ್ತ ಕಾಯವಿಡಿದು, ಜಲವನೀಸಬಹುದೆ? ಲಿಂಗಪೂಜೆಗೆ ಹೋದ ದೋಷಪಚಾರ ಬೇಕು. ಅದು ಮಾಡುವನಕ್ಕರ ಕಾಯಕ ನಿಂದಿತ್ತು. ಕಾಯಕ ಒದಗೆ ಮೂರರ ಕೂಟ ಚಂದೇಶ್ವರಲಿಂಗಕ್ಕೆ ಮಡಿವಾಳಯ್ಯ. ॥೯॥

ಇವಕ್ಕೆ ಮಡಿವಾಳಯ್ಯಗಳ ಬಿನ್ನಹ॥ ಕಿಂಚಿತ್ತಾದರೂ ನೇಮವ ಮಾಡುವಲ್ಲಿ ಶೂನ್ಯವಿಲ್ಲದಿರಬೇಕು. ತತ್ವಕ್ಕೆ ತಕ್ಕ ಸಮರ್ಥತ್ವ ಬಚ್ಚಿ ಹೊತ್ತಾದರೆಯು ಶಿವಪೂಜೆಯು ನಿಶ್ಚಯವಾಗಿ ಮಾಡಬೇಕು. ಅದು ತನಗೆ ಸುಚಿತ್ತದ ಹಾದಿ ಕಲಿದೇವರ ದೇವನ ಒದಗು ಕಾಣಾ ಚಂದಯ್ಯ॥೧೦॥

ಇದಕ್ಕೆ ನುಲಿಯ ಚಂದಯ್ಯಗಳ ಬಿನ್ನಹ

ಗೋಡೆಯ ತೊಳೆದು ಕೆಸರ ಕೆಡಿಸಿಹೆನೆಂದರೆ ಅದಾರ ವಶ? ನಿಯಮಕ್ಕೆ ಕಡೆ ನಡು ಸೊದಲಿಲ್ಲ. ಒಂದ ಬಿಟ್ಟು ಒಂದ ಹಿಡಿದಿಹೆನೆಂದರೆ ಸಂದಿಲ್ಲ. ಸಂಶಯವದು ಚಂದೇಶ್ವರ ಲಿಂಗಕ್ಕೆ ಮಾಟ ಕಾಣಾ ಮಡಿವಾಳಯ್ಯ ॥೧೧॥

ಇದಕ್ಕೆ ಮಡಿವಾಳಯ್ಯಗಳ ವಚನ ॥

ಜಂಗಮಸೇವೆ ಲಿಂಗವಿರಹಿತವಾಗಿರಬೇಕು. ಲಿಂಗವೆಂಬುದು ಜಂಗಮದಂಗ ಆ ಅಂಗವಿಲ್ಲದೆ ಪ್ರಾಣವುಂಟೆ? ಹಣ್ಣಿಲ್ಲದೆ ರುಚಿಯರಸುವಂತೆ ನಿನ್ನ ಕಾಯಕದ ಕ್ರಿಯೆಲ್ಲವು ಲಿಂಗವಾದ ಬಳಿಕ ಮತ್ತೇನು ಭಾವಭೇದ? ನೀನೆಂದಂತೆ ಇರಲಿ ಆರೇನೆಂದರೆ ನಿನ್ನ ಮನವ ತಿಳುಹಿಕೊಳಲಿ. ಇದಕ್ಕೆ ಕಲಿದೇವಯ್ಯ ಹೊಣೆಗಾರ ಕೊಳಾ ಎನ್ನೊಡೆಯ ಚಂದಯ್ಯ. ॥೧೨॥

ಹೀಗೆಂದು ಮಡಿವಾಳತಂದೆಗಳು ನಿರೂಪಿಸಲು ಇದಕ್ಕೆ ತಮ್ಮ ಲಿಂಗಕ್ಕೆ ಕಣ್ಣಿಯಮಾಡಿ ಕೊಂಡಿರಬಲ್ಲರೆ ಬಾರೆಂದು ಚಂದಯ್ಯಗಳು ಕರೆವ ಪ್ರಸ್ಥಾವದ ವಚನ. ॥

ಇಷ್ಟವೆಂಬುದು ಗುರುವಿನ ಹಂಗು. ಆ ಗುರುವಿಗೆಯು ಇಷ್ಟಕ್ಕೆಯು ಜಂಗಮವೆ ಪ್ರಾಣವೆಂದು ಅರಿದ ಬಳಿಕ ಆ ಗುರುವು ಇಷ್ಟವು ಜಂಗಮದಲ್ಲಿ ಅಡಕ ನೋಡಾ. ಆ ಗುರುಲಿಂಗ ಜಂಗಮದ ಹಂಗಿಗಳು. ಇದು ಕಾರಣ ಚಂದೇಶ್ವರಲಿಂಗಕ್ಕೆ ಕಣ್ಣಿಯ ಮಾಡಬಲ್ಲರೆ ಬಾರಾ ಎನ್ನ ತಂದೆ॥೧೩॥

ಇದಕ್ಕೆ ಮಡಿವಾಳಯ್ಯಗಳಿಗೆ ನಮಸ್ಕರಿಸಿ ಹೊಣೆಯ ಕೊಂಡು ತನ್ನ ಲಿಂಗ ಸಹಿತ ಬೀಳ್ಕೊಂಡು ನಿಜಗೃಹಕ್ಕೆ ಬಂದು ಆ ಲಿಂಗದ ಕೈಯ್ಯಲ್ಲಿ ಕಾಯಕವ ಮಾಡಿಸಿ, ಆ ಕಣ್ಣಿಯಂ ಮಾರಿ ಹಾಗವ ಕೊಂಡು ಬಾರೆಂದು ಕಳುಹಲು, ಆ ಲಿಂಗವು ಸಂಗನಬಸವಣ್ಣನ ಮಠಕ್ಕೈದಿ ಕಣ್ಣಿಯಂ ಕೊಡಲು, ಇತ್ತ ಬಸವರಾಜದೇವರು ಶಿವಪೂಜೆಯಂ ಮಾ ಮತ್ತ ಈ ವೃತ್ತಾಂತಮಂ ತಮ್ಮ ಲಿಂಗದಲ್ಲಿ ಕಂಡು ಇದಿರೆದ್ದು ಕಣ್ಣಿಯಂ ಚಂದಯ್ಯಂಗೆ ಶರಣೆಂದು, ಸಾವಿರಹೊನ್ನಂ ಕೊಟ್ಟು ಆ ನುಲಿಯ ತೆಗೆದುಕೊಂಡು ಬೀಳ್ಕೊಡಲಾ ಲಿಂಗವು ಮರಳಿ ಬಂದಾ ಚಂದಯ್ಯಂಗೆ ಹೊನ್ನಂ ಕುಡೆ ಕೊಂಡಾತ ಇದೆಲ್ಲಿಂದ ತಂದೆಯಯ್ಯ ಕಳವಿಂದ ತಂದಿಯೊ ಎಂದು ನುಡಿವ ಪ್ರಸ್ಥಾವದ ವಚನ. ॥

ಸತ್ಯ ಶುದ್ಧಕಾಯಕದಲ್ಲಿ ಬಂದ ದ್ರವ್ಯದಲ್ಲಿ ಚಿತ್ತ ವಿಚ್ಛಂದವಾಗದಿರಬೇಕು. ನೇಮದ ಕೂಲಿಯಂದಿನ ನಿತ್ಯ ನೇಮದಲ್ಲಿ ಸಂದಿರಬೇಕು. ನೇಮದ ಕೂಲಿಯ ಬಿಟ್ಟು ಹೇಮದಾಸೆಗೆ ಕಾಮಿಸಿ ದ್ರವ್ಯವ ಹಿಡಿದರೆ ತಾ ಮಾಡಿದ ಸೇವೆ ನಷ್ಟವಯ್ಯ! ನಿನ್ನಾಸೆ ವೇಷದ ಪಾಶಕ್ಕೆ ನೀನೆ ಸೋಗು. ನನಗೆ ನನ್ನ ಜಂಗಮದ ಪ್ರಸಾದದಾಗೆ ಚಂದೇಶ್ವರಲಿಂಗಕ್ಕೆ ಪ್ರಾಣವಯ್ಯ. ॥೧೪॥

ಮತ್ತಂ॥ ಕಂದಿಸಿ, ಕುಂದಿಸಿ, ಬಂಧಿಸಿ, ನೋಯಿಸಿ, ಕಂಡ ಕಂಡವರ ಬೇಡಿ ತಂದು ಜಂಗಮಲಿಂಗಕ್ಕೆ ಮಾಡಿಹೆನೆಂಬ ದಂಡುಗದ ಮಾಟಕ್ಕೆ ಲಿಂಗ ನೈವೇದ್ಯ ಸಲ್ಲದು. ತನು ಕರಗಿ ಮನ ಬಳಲಿ ಬಂದ ತೆರದನುವನರಿದು ಸಂದಿಲ್ಲದೆ ಸಂಶಯವಿಲ್ಲದೆ ಜಂಗಮಲಿಂಗಕ್ಕೆ ದಾಸೋಹವೆ ನಾಟ. ಕಾರೆಯ ಸೊಪ್ಪಾದರೂ. ಕಾಯಕದಿಂದ ಬಂದುದ ಲಿಂಗಕ್ಕರ್ಪಿತವಲ್ಲದೆ ದುರಾಸೆಯಿಂದ ಬಂದುದು ಅನರ್ಪಿತ. ಇದು ಕಾರಣ ಸತ್ಯ ಶುದ್ಧ ಕಾಯಕದ ನಿತ್ಯದ್ರವ್ಯವಾದರೆ ಚಂದೇಶ್ವರಲಿಂಗಕ್ಕೆ ನೈವೇದ್ಯ ಸಂದಿತ್ತು ಕೇಳಯ್ಯ ॥೧೫॥

ಹೀಗೆಂದು ಚಂದಯ್ಯಗಳು ತಮ್ಮ ಲಿಂಗದೇವರ ನೋಡಿ ನೀ ತಂದ ಅನ್ಯದ್ರವ್ಯ ಸಹಿತ ನೀನೆಲ್ಲಿಯಾದರೂ ಹೋಗು. ಮೊದಲು ಗುರುವಾಜ್ಞೆ ಪಡೆದು ಒಡೆಯರ ಸೇವೆಯ ಮಾಡಿ ಪಟ್ಟದೊಂದು ಮತ್ತೆ ಹೋದ ಅಪರಾಧಕ್ಕೆ ಒಡೆಯರ ಸೇವೆಯ ಮಾಡಿಹೆನೆಂದು ಅವಗಡಿಯ ಶರಣ ಮಡಿವಾಳಯ್ಯನ ಹೊಕೆಯ ಕೊಟ್ಟು

ದೊಂದು ಈ ಎಡಕ್ಕೆ ನೀನೆ ಗುರಿಯಾಗು ಹೋಗೆಂದು ಝಂಕಿಸಿ ನುಡಿದು ಹೊಡಿಸಲು, ಆ ಲಿಂಗವು ಚಂದಯ್ಯ ಸಹಿತವಾಗಿ ಮಡಿವಾಳಯ್ಯನ ಮತಕ್ಕೈದಿ ಈ ವೃತ್ತಾಂತವನೆಲ್ಲವ ಹೇಳಲು ಆ ಮಾಚಯ್ಯನು ಚಂದಯ್ಯಂಗೆ ನಿರೂಪಿಸಿದ ಪ್ರಸ್ಥಾವದ ವಚನ ॥

ಕಾಯಕದಲ್ಲಿ ನಿಂದ ಶರಣಂಗೆ ಸೇವೆಯವರ ತಪ್ಪ ಹಿಡಿದಿಹೆನೆಂದರೆ ಕಾಯಕವೆಂತು ನಡೆವುದೈಯ್ಯ? ಅವಗುಣಕ್ಕೆ ಮುನಿಯಬೇಕಲ್ಲದೆ ಲಾಂಛನಕ್ಕೆ ಮುನಿಯಬಹುದೆ? ಮುಗ್ಗಿದ ತುರುಗವ ಕಾಲಕತ್ತರಿಸಿದವರುಂಟಿ? ಕಚ್ಚುವ ತ್ರಿಗುಣೆಗಾಗಿ ಮನೆಯ ಸುಟ್ಟವರುಂಟಿ? ಕಲಿದೇವರ ದೇವನಲ್ಲಿ ತಪ್ಪ ಹಿಡಿಯಲಿಲ್ಲ ಕೇಳಾ ಚಂದಯ್ಯ ॥೧೬॥

ಇಂತು ಶಿವಲಿಂಗವಲ್ಲಿ ತಪ್ಪ ಹಿಡಿಯಬಹುದೆ ಎಂದು ಮಡಿವಾಳಯ್ಯಗಳು ನುಡಿಯೆ ಅದಕ್ಕೆ ಚಂದಯ್ಯನ ಪ್ರತ್ಯುತ್ತರ ॥

ನುಡಿದ ಮಾತಿಂಗೆ ತಡಬಡ ಬಂದಲ್ಲಿ, ನುಡಿದ ಭಾಷೆಗೆ ಭಂಗ ನೋಡಯ್ಯ. ಹಿಡಿದ ಕುಳಕ್ಕೆ ಹಾನಿ ಬಂದಲ್ಲಿ, ಒಡಲನಿರಿಸುವುದೇ ಭಂಗ ನೋಡಯ್ಯ. ಇದು ಕಾರಣ ನಡೆನುಡಿ ಶುದ್ಧವಿಲ್ಲದಿದ್ದರೆ ಚಂದೇಶ್ವರ ಲಿಂಗವಾದರೂ ತಪ್ಪನೊಳಕೊಳ್ಳ ಕಾಣಾ ಮಡಿವಾಳಯ್ಯ ॥೧೭॥

ಹೀಗೆಂದು ಚಂದಯ್ಯಗಳು ಬಿನ್ನೈಸಲು, ಆತನ ತಿಳುಹುವದಕ್ಕೆ ಅನುಭಾವ ಮಂಟಪದಲ್ಲಿ ಬಸವರಾಜದೇವರು ಪ್ರಭುದೇವರು ಮುಂತಾದ ಗಣಂಗಳ ಕೈಯ್ಯಲಲ್ಲದೆ ಅಗದೆಂದು ಶರಣರ ಸಂಗವೆ ಮುಖ್ಯವೆಂದು ಅಲ್ಲಿಗೆ ಕರೆವ ಪ್ರಸ್ಥಾವದ ವಚನ॥

ಗುರುಪೂಜೆಯನರಿದೆನೆಂದು ಲಿಂಗ ಪೂಜೆಯ ಬಿಡಲಾಗದು. ಲಿಂಗ ಪೂಜೆಯ ನರಿದೆನೆಂದು ಜಂಗಮದ ಪೂಜೆಯ ಬಿಡಲಾಗದು. ಜಂಗಮ ಪೂಜೆಯನರಿದೆನೆಂದು, ಶರಣರ ಸಂಗವ ಬಿಡಲಾಗದು. ಇದು ಕಾರಣ ಶರಣರ ಸಂಗದ ಸವ್ಯಜ್ಞಾನದಲಲ್ಲದೆ ಕಲಿದೇವಯ್ಯನ ಕೂಡುವ ಕೂಟ ಕಾಣಬಾರದು. ಹೋಹ ಬಾರಾ ಚಂದಯ್ಯ ॥೧೮॥

ಹೀಗೆಂದು ಮಡಿವಾಳ ತಂದೆಗಳು ಚಂದಯ್ಯಗಳನು ಅತನ ಅಂಗದ ಮೇಲಣ ಲಿಂಗವೆ ಚರಸೇವೆಯ ಮಾಡಬೇಕೆಂದು ಮೋಹದಿಂ ಲಿಂಗ ಮೂರ್ತಿಯನು ಅನುಭಾವ ಮಂಟಪಕ್ಕೆ ಬಿಜಯಂಗೈಸಿಕೊಂಡು ಬರಲು

ಆ ಲಿಂಗ ಭಕ್ತ ಮೂರ್ತಿಯು ಮೊದಲು ಕಣ್ಣಿಯ ಬಸವಣ್ಣಂಗೆ ಕುಡಲು, ಅದಕ್ಕೆ ಕೂಲಿಯಾಗಿ ಕೊಟ್ಟ ಸಾವಿರ ಹೊನ್ನಂ ಮರಳಿ ಬಸವಣ್ಣಂಗೆ ಇತ್ತು ಈ ವೃತ್ತಾಂತಮುಂ ಹೇಳಲು, ಆ ಪ್ರಸ್ಥಾವದೊಳು ಶರಣಂಗಳಿಗೆ ಚಂದಯ್ಯ ನಮಸ್ಕರಿಸಿ ತನ್ನ ಕಾಯಕದ ಕ್ರಮವನು ದಾಸೋಹದ ನೆಲೆಯನು ನಿಷ್ಠೆಯ ಬಗೆಯನು ಎಲ್ಲ ಪ್ರಮಥರು ಕೇಳುವ ಹಾಗೆ ಬಿನ್ನೈಸುವ ಪ್ರಸ್ಥಾವದ ವಚನ ॥

ಕೈದುವಿಡಿದಾಡುವರೆಲ್ಲ ಇರಿನರೇ? ಸಾಧನೆಯ ಮಾಡಬಲ್ಲವರೆಲ್ಲರು ಕಾದಬಲ್ಲರೆ? ಅರ್ಥಿಗೆ ಮಾಡಬಲ್ಲ ಕೃತ್ಯವಂತರೆಲ್ಲರು ಭಕ್ತರಪ್ಪರೇ? ಅದು ಚಂದೇಶ್ವರ ಲಿಂಗಕ್ಕೆ ಮುಟ್ಟದ ಮಾಟಾ ॥೧೯॥

ಮತ್ತಂ॥ ಕಣವ ನಿಶ್ಚಿಸಿದ ಸುಭಟಂಗೆ ಮನೆಯ ಮೇಲಣ ಪಂಗುಂಟೆ? ಅರ್ಥ ಪ್ರಾಣಾಭಿಮಾನವ ಈ ಮೂರನು ಕರ್ತಂಗೆ ಇತ್ತು ಮತ್ತೆ ಹೊತ್ತು ಹೊರೆವಂಗೆ ಸದ್ಭಕ್ತಿಯುಂಟಿ? ಅದು ಚಂದೇಶ್ವರಲಿಂಗಕ್ಕೆ ಮುಟ್ಟದ ಮಾಟ ॥೨೦॥

ಮತ್ತಂ॥ ಗುರುವಿಂಗೆ ತನುವೆಂದಲ್ಲಿ, ಲಿಂಗಕ್ಕೆ ಮನವೆಂದಲ್ಲಿ, ಜಂಗಮಕ್ಕೆ ಧನವೆಂದಲ್ಲಿ, ಮತ್ತೊಂದರಾಸೆಗೆ ಕೊಂಡಾಡಲೇಕೆ? ಅದು ಚಂದೇಶ್ವರ ಲಿಂಗಕ್ಕೆ ದೂರ ॥೨೧॥

ಇಡಿದ ಭೂತಹಿತಕ್ಕೆ ಗುರುಪೂಜೆಯ ಮಾಡಲಿಲ್ಲ. ಅರ್ಥಿಗಾರಿಕೆಯಲ್ಲಿ ಲಿಂಗವ ಬಿಟ್ಟು ಪೂಜಿಸಲಿಲ್ಲ. ರಾಜ ಚೋರರ ಭಯಕ್ಕಂಜಿ ಜಂಗಮ ದಾಸೋಹವ ಮಾಡಲಿಲ್ಲ. ಅವ ಕೃತ್ಯವಾದರು ಮನ ಶುದ್ಧವಾಗಿರಬೇಕು ಚಂದೇಶ್ವರಲಿಂಗವನರಿಯಬಲ್ಲರೆ ॥೨೨॥

ಮತ್ತಂ॥ ಗುರು ಇಷ್ಟವ ಕೊಟ್ಟ. ಕೂಲಿಗೆ ಮುಟ್ಟಿ ಪೂಜಿಸಲಿಲ್ಲ. ಅನಕ್ಕೆ ದೃಷ್ಟವ ನೋಡಿ ತನ್ನ ಬೆಳ್ಳಿಯ ಬೆಟ್ಟದ ಮೇಲಿರಿಸಿದ. ಇಂತು ಗುರುವಿಂಗೆ ಲಿಂಗಕ್ಕೆ ಮಾಡಿ, ಹಿಂದಣ ಮುಂದಣ ಸಂದೇಹಕ್ಕೆ ಈಡಾಗದೆ ಪ್ರಸಿದ್ಧವಪ್ಪ ಜಂಗಮಲಿಂಗಕ್ಕೆ ಮನ ಸಂದು ಧನವ ಕೊಟ್ಟು ಸರ್ವ ಪದಾರ್ಥವ ಅರ್ಪಿತ ಮಾಡಲಾಗಿ ಚಂದೇಶ್ವರಲಿಂಗಕ್ಕೆ ಹಿಂದು ಮುಂದೆಂಬುದಿಲ್ಲ. ॥೨೩॥

ಮತ್ತಂ॥ ಸಂಸಾರ ಸಾಗರ ಮಧ್ಯದೊಳಗೆ ಬೆಳೆವ ಹೊಡೆತೆನೆಯ ಮುಳ್ಳಿ ಕೊಯಿತಂದು, ಮತ್ತಂ ಮುಂಕಣ ತೆಗೆದು ಕಣ್ಣಿಯ ಮಾಡಿ

ಇಹಪರವೆಂಬ ಉಭಯದ ಗಂಟನಿಕ್ಕಿ ತಂದಿಯಲ್ಲಿ ಮಾಟಕೂಟನೆಂಬ ಮನದ ಕುಣಿಕೆಯೊಳಗೆ ಕಾಯಕವಾಯಿತ್ತು. ಇದು ಕಾರಣ ಚಂದೇಶ್ವರ ಲಿಂಗವೆಂಬ ಭಾವವೆನಗಿಲ್ಲ. ॥೨೪॥

ಹೀಗೆಂದು ಚಂದಯ್ಯಗಳು ತಮ್ಮ ಕಾಯಕದ ವಿವರವನು ದಾಸೋಹದ ನಿಷ್ಠೆಯನು ಗಣಂಗಳ ಮುಂದೆ ಬಿನ್ನೈಸಲು, ಆ ಪ್ರಸ್ಥಾವದೊಳು ಪ್ರಭುದೇವರು ಲಿಂಗವ ಬಿಡಲಾಗದೆಂದು ನಿರೂಪಿಸಿದ ಪ್ರಸ್ಥಾವದ ವಚನ.

ಪರುಷವಾದರು ಒಂದರಲ್ಲಿ ಇರಿಸಿರಬೇಕು. ರತ್ನವಿಶೇಷವಾದರು ಕುಂದಣವಲ್ಲಿ ಬಂಧಿಸಿ ಸಂದಿಸಿರಬೇಕು. ಲಿಂಗವ ಹಿಡಿವಲ್ಲಿ ಪೂಜಿಸುವ ಅಂಗವಿರಬೇಕು. ಇದು ಕಾರಣ ಗುಹೇಶ್ವರ ಲಿಂಗವನರಿದು, ಮರೆಯಲಿಲ್ಲ ಕಾಣಾ ಚಂದಯ್ಯ. ॥೨೫॥

ಹೀಗೆಂದು ಪ್ರಭುದೇವರು ಜಂಗಮ ದಾಸೋಹವಾದರು ಲಿಂಗವ ಬಿಡಲಾಗದೆಂದು ನಿರೂಪಿಸಲು, ಇದಕ್ಕೆ ಚಂದಯ್ಯಗಳು ಬಿನ್ನೈಸುವ ಪ್ರಸ್ಥಾವದ ವಚನ. ॥

ಗುರುಸೇವೆಯ ಮಾಡಿದರೆ ಇಹವಲ್ಲಿ ಸುಖ. ಲಿಂಗಸೇವೆಯ ಮಾಡಿದರೆ ಪರವಲ್ಲಿ ಸುಖ. ಜಂಗಮಸೇವೆಯ ಮಾಡಿದರೆ ಇಹಪರವೆಂಬ ಭಯ ನಾಸ್ತಿ. ಇದು ಚಂದೇಶ್ವರ ಲಿಂಗಕ್ಕೆ ಭಾವ ಕಾಣಾ ಪ್ರಭುವೆ. ॥೨೬॥

ಇದಕ್ಕೆ ಪ್ರಭುದೇವರ ನಿರೂಪ॥ ಅಂಗವುಳ್ಳನ್ನಬರ ಲಿಂಗಪೂಜೆಯಿಬೇಕು. ಲಿಂಗವೆಂಬ ಮೂರ್ತಿಯುಳ್ಳನ್ನಬರ ಸಂದಿಲ್ಲದೆ ಅರ್ಪಿಸಬೇಕು. ಅಂಗವಳಿದು ಮತ್ತೆ ಲಿಂಗವೆಂಬ ಭಾವ ಹಿಂಗದಿರಬೇಕು. ಅದು ಗುಹೇಶ್ವರ ಲಿಂಗದ ಇರವು ಚಂದಯ್ಯ ॥೨೭॥

ಇದಕ್ಕೆ ಚಂದಯ್ಯಗಳ ಬಿನ್ನಪ.

ಗುರುಪೂಜಕರು ಲಿಂಗವ ನೆತ್ತಬಲ್ಲರು? ಲಿಂಗಪೂಜಕರು ಜಂಗಮವನೆತ್ತಬಲ್ಲರು? ಜಂಗಮ ದಾಸೋಹ ಉಭಯ ಸಂಗನಾಸ್ತಿ. ಅದು ಚಂದೇಶ್ವರ ಲಿಂಗದ ಅರಿವು ಕಾಣಾ ಪ್ರಭುವೆ ॥೨೮॥

ಇದಕ್ಕೆ ಪ್ರಭುದೇವರ ನಿರೂಪ॥ ಐದಿಂದ್ರಿಯವನರಿದಲ್ಲದೆ ಒಂದಿಂದ್ರಿಯಕ್ಕೆ ಸಂಪ ಗುಣವನರಿಯಬಾರದು. ಆಗುಣ ಏಕ ಮೂರ್ತಿ ತ್ರಿವಿಧ ರೂಪವಾದ ಕಾರಣ. ಪೂಜೆ ಎಂಬುದು ಪುಣ್ಯವೆಂಬ ಭಾವ ವಿಲ್ಲದೆ

ಇದಿರಿಲ್ಲದೆ ನಮ್ಮ ಗುಹೇಶ್ವರ ಲಿಂಗಕ್ಕೆ ಅನ್ಯವಿಲ್ಲ ಕಾಣಾ ಚಂದಯ್ಯ ॥೨೯॥

ಹೀಗೆಂದು ಪ್ರಭುದೇವರು ನಿರೂಪಿಸಲು, ಇದಕ್ಕೆ ಚಂದಯ್ಯಗಳು ಲಿಂಗವಾದರು ಲಿಂಗವಾದರು ಜಂಗಮವಾದರು ಜಂಗಮ ದಾಸೋಹವಾಬೇಕು. ನನಗೆ ಹೇಳುವಾಗ ನಿನಗೆ ಬೇಡವೆ ಎಂದು ಬಿನ್ನೈಸುವ ಪ್ರಸ್ಥಾವದ ವಚನ॥

ಗುರುವಾದರು ಕಾಯಕದಿಂದವೆ ಜೀವನ್ಮುಕ್ತಿ, ಲಿಂಗವಾದರು ಕಾಯಕದಿಂದವೆ ಸಿರಿಯಾಳ ಕಾರುಹ ಹರಿವುದು. ಜಂಗಮವಾದರು ಕಾಯಕದಿಂದವೆ ತನ್ನವೇಷದ ಪಾಶ ಹರಿವುದು. ಗುರುವಾದರು ಚರಸೇವೆಯ ಮಾಡಬೇಕು. ಲಿಂಗವಾದರು ಚರಸೇವೆಯ ಮಾಡಬೇಕು. ಜಂಗಮವಾದರು ಚರಸೇವೆಯ ಮಾಡಬೇಕು. ಇದು ಚಂದೇಶ್ವರ ಲಿಂಗದ ಅರಿವು ಕೇಳಾ ಪ್ರಭುವೆ ॥೩೦॥

ಮತ್ತಂ॥ ಗುರುವನರಿದು ವರಗುರು ತಾನಾಗಬೇಕು. ಲಿಂಗವಾದರು ಪ್ರಸಾದಿಯಾಗಿ ಪೂಜೆಗೊಳಬೇಕು. ಜಂಗಮವಾದರು ತ್ರಿವಿಧವ ಮರೆದು ಪಂಚೆ ನಾಸ್ತಿಯಾದಿ ಜಂಗಮವಾಗಬೇಕು. ಜಂಗಮವಾದರು ಜಂಗಮಕ್ಕೆ ನೀಡಿ ಮಾಡಿ ಸಂದಳಿದು ಚಂದೇಶ್ವರ ಲಿಂಗವನರಿಯಬೇಕು ಕೇಳಾ ಪ್ರಭುವೆ ॥೩೧॥

ಇದಕ್ಕೆ ಪ್ರಭುದೇವರ ನಿರೂಪ॥

ಆಕಾರ ಭಾವ ತೋರಿದಂತೆ ಆ ಕುಳಕ್ಕೆ ಸುಖಿಯಾಗಿಪ್ಪನು. ಹಿಡಿವ ವ್ರತನೇಮಂಗಳಲ್ಲಿ ಬಿಡುಗಡೆ ಇಲ್ಲದಿರಬೇಕು. ತಾ ಮಾಡುವ ಎಂದಿನ ನಿತ್ಯ ನೇಮಂಗಳಲ್ಲಿ ಭಾವ ಶುದ್ಧವಾಗಿಪ್ಪಡೆ ಗುಹೇಶ್ವರ ಲಿಂಗಕ್ಕೆ ಅನ್ಯ ಬಿನ್ನವಿಲ್ಲ ಮಡಿವಾಳಯ್ಯ ॥೩೨॥

ಇದಕ್ಕೆ ಮಡಿವಾಳಯ್ಯಗಳ ವಚನ॥

ಅಂಗದ ಕ್ರಿಯೆ ಲಿಂಗವ ನಿಜ. ಲಿಂಗನಿಜವೆ ಜಂಗಮ. ನಿಜಂಗಮದ ಕ್ರಿಯಲ್ಲಿ ಲಿಂಗಮಯ. ಜಂಗಮದ ಸೇವೆಯೆ ಲಿಂಗದ ಕಳೆ. ಆ ಲಿಂಗದ ಕಳೆಯೆ ಜಂಗಮ. ಜಂಗಮದಿಂದೊಗೆದುದೆ ಪ್ರಸಾದ. ಪ್ರಸಾದದೊದವೆ ಲಿಂಗೈಕ್ಯವು. ಇವ ಗುರುವು ನಾನು ನಿಜದ ಸಾಧಿಸಿದೆನು ನಮ್ಮ ಕಲಿದೇವರ ದೇವನ ಬಸವಣ್ಣನಿಂದ ಕೇಳಯ್ಯ ಚಂದಯ್ಯ ॥೩೩॥

ಇದಕ್ಕೆ ಚಂದಯ್ಯಗಳ ವಚನ॥

ಒಂದ ಬಿಟ್ಟು ಒಂದ ಹಿಡಿವಲ್ಲಿ ಆ ಮೂರಂಗ ಒಂದು ಇ
ಹಿಡಿವ ಭಾವ ಒಂದುಂಟಾಯಿತ್ತಾದಡೆ ಉಭಯದ ಸಂಗ ಸಲೆ ಸಂದಿಕ್ಕು
ಅದು ಸಂಗನಬಸವಣ್ಣ ಪ್ರಿಯ ಚಂದೇಶ್ವರ ಲಿಂಗಕ್ಕೆ ಸುದಿತ್ತು ಮ
ವಾಳ ಮಾಚಯ್ಯ ॥೩೪॥

ವುತ್ತಂ॥ ಶಿಷ್ಯಂಗೆ ಗುರು ಬೋಧಿಸುವಲ್ಲಿ ತನ್ನನಳಿದು, ಲಿಂಗ
ತೋರಿಸಬೇಕು. ಲಿಂಗ ಸಂಗ ನೆನಹಾದಲ್ಲಿ ಆ ಲಿಂಗಕ್ಕೆ ಉಂಬ ಬಾಯಿ
ಜಂಗಮವಾವ ಕಾರಣ ಆ ಜಂಗಮ ಲಿಂಗದ ದಾಸೋಹದಿಂದ ಬೇರೊಂ
ದಂಗವಿಲ್ಲ. ಸಂಗನ ಬಸವಣ್ಣ ಪ್ರಿಯ್ಯ ಚಂದೇಶ್ವರಲಿಂಗವ ಹಿಂಗ
ಭಾವ ಕಾಣಾ ಮಡಿವಾಳಯ್ಯ ॥೩೫॥

ತನುಭಾವವನರಿದಿಪ್ಪುದು ಗುರುಭಕ್ತಿ. ಮನಭಾವವನರಿದಿಪ್ಪುದು
ಲಿಂಗಭಕ್ತಿ. ಎರಡುಭಾವವನೆ ಮರೆದು ತ್ರಿವಿಧಮಲತ್ರಯಂಗಳ ಮರೆದಿ
ಪ್ಪುದು ಜಂಗಮಭಕ್ತಿ. ಈ ಗುಣ ನಿಶ್ಚಯವಾಗಿ ನಿಂದು ಸಂಗನಬಸವಣ್ಣ
ಪ್ರಿಯ ಚಂದೇಶ್ವರ ಲಿಂಗವನರಿದುದು ॥೩೬॥

ಹೀಗೆಂದು ಚಂದಯ್ಯಗಳು ತಮ್ಮ ಭಕ್ತಿ ಜ್ಞಾನದಾಚಾರದ ದಾಸೋ
ಹವು ಸಂಗನಬಸವಣ್ಣಂಗೆ ಪ್ರಿಯವೆಂದು ಬಿನ್ನೈಸಲು, ಆ ಪ್ರಸ್ತಾವ
ಮೊಳು ಪ್ರಭುದೇವರು ಮತ್ತಂ ಬಸವಣ್ಣನ ಸ್ವರೂಪವುಂ ಹೇಳಿ ಆತನ
ಕೇಳಿ ಬದುಕೆಂದು ನಿರೂಪಿಸುವ ಪ್ರಸ್ತಾವದ ವಚನ ॥

ಅಂಗದಲ್ಲಿ ಅಳವಟ್ಟಿಪ್ಪ ಆಚಾರವೆ ಲಿಂಗವೆಂದರಿದನು. ಮನದಲ್ಲಿ
ಬೆಳಗುತ್ತಿಪ್ಪ ಅರಿವೆ ಜಂಗಮವೆಂದರಿದನು. ಈ ಎರಡರ ಸಂಗವೆ ತಾನೆಂ
ದರಿದನು. ಮಾಡುವ ದಾಸೋಹವೆ ಲಿಂಗಜಂಗಮವೆಂದರಿದನು. ನಮ್ಮ
ಗುಹೇಶ್ವರಲಿಂಗದಲ್ಲಿ ಸಂಗನಬಸವಣ್ಣನ ನಿಲವನರಿಯಬೇಕು ಕೇಳಾ
ಚಂದಯ್ಯ ॥೩೭॥

ಹೀಗೆಂದು ಪ್ರಭುದೇವರು ಬಸವರಾಜದೇವರ ನೋಡಿ ತಿಳಿದು
ಬದುಕೆಂದು ನಿರೂಪಿಸಲು, ಇವಕ್ಕೆ ಬಸವರಾಜದೇವರು ಆ ಚಂದಯ್ಯ
ಗಳ ಜಂಗಮದ ದಾಸೋಹದ ನಿಷ್ಠೆಗೆ ಶರಣೆಂಬ ಪ್ರಸ್ತಾವದ ವಚನ

ಜಂಗಮಸೇವೆಯೆ ಗುರುಪೂಜೆ ಎಂದರಿವ. ಜಂಗಮಸೇವೆಯೆ
ಲಿಂಗಪೂಜೆ ಎಂದರಿವ. ಜಂಗಮಸೇವೆಯೆ ತನ್ನಿರವೆಂದರಿವ. ಜಂಗಮಸೇ

ವೆಯೆ ತನ್ನ ನಿಜವೆಂದರಿವ. ಜಂಗಮಸೇವೆಯೆ ತನ್ನ ಸ್ವಯವೆಂದರಿದ.
ಜಂಗಮ ಸೇವೆಯೆ ನಿತ್ಯವದುವೆಂದರಿದ. ಇದು ಕಾರಣ ನಮ್ಮ ಕೂಡಲಸಂ
ಗಮದೇವರಲ್ಲಿ ಜಂಗಮ ಪ್ರಾಣಿಯಾದ ಚಂದಯ್ಯನ ಹಳೆಯ ಮಗನಾಗಿ
ಬಂದ ಶ್ರೀ ಚರಣಕ್ಕೆ ಶರಣೆಂದು ಕುವ್ವವಾದೆನು. ಆ ಮಹಿಮನ ಘನವ
ನೆತ್ತ ಬಲ್ಲೆನಯ್ಯ ಪ್ರಭುವೆ ?॥೩೮॥

ಇದಕ್ಕೆ ಪ್ರಭುದೇವರು ಬಸವಣ್ಣ ನೀನು ಅರಿಯೆನೆನಬಹುದೆ ?
ಪುರಿತು ಬಂದ ಠಾವಿನಲ್ಲಿ ಮರೆಯುಮಾಡಿ ನುಡಿವುದುಚಿತವೆ ? ಚಂದ
ಯ್ಯಂಗೆ ನೀನೇನ ಮಾಡಿಯೂ ನಿಜವ ಹೇಳೆಂದು ನಿರೂಪಿಸಿದ ಪ್ರಸ್ತಾ
ವದ ವಚನ॥

ಆದಿಯಲ್ಲಿ ನೀನೆ ಗುರುವಾದ ಕಾರಣ ನಿನ್ನಿಂದ ಹುಟ್ಟಿತ್ತು ಲಿಂಗ. ಆದಿ
ಯಲ್ಲಿ ನೀನು ಲಿಂಗವಾದ ಕಾರಣ ನಿನ್ನಿಂದ ಹುಟ್ಟಿತ್ತು ಜಂಗಮ. ಆದಿ
ಯಲ್ಲಿ ನೀನು ಜಂಗಮವಾದ ಕಾರಣ ನಿನ್ನಿಂದ ಹುಟ್ಟಿತ್ತು ಪ್ರಸಾದ. ಆದಿಯಲ್ಲಿ ನೀನೆ ಪ್ರಸಾದಿಯಾದ ಕಾರಣ ನಿನ್ನಿಂದ ಹುಟ್ಟಿತ್ತು ಪಾದೋ
ದಕ. ಇಂತೀಗುರುಲಿಂಗ ಜಂಗಮಪ್ರಸಾದ ಪಾದೋದಕ ಸ್ವರೂಪ ನೀನೆ
ಯಾದ ಕಾರಣ ಜಂಗಮ ಪ್ರಾಣಿಯಾಗಿ ಸದಾಚಾರಿಯಾದೆ ಅದು ಕಾರಣ
ನೀನೆ ಸರ್ವಾಚಾರ ಸಂಪನ್ನನಾಗಿ ಪೂರ್ವಾಚಾರಿ ನೀನೆಯಾದ ಕಾರಣ
ಗುಹೇಶ್ವರ ಲಿಂಗದಲ್ಲಿ ಚಂದಯ್ಯಂಗೆ ಲಿಂಗದ ನಿಜವ ತಿಳಿಸಾ ಸಂಗನ
ಬಸವಣ್ಣಾ ॥೩೯॥

ಹೀಗೆಂದು ಪ್ರಭುದೇವರು ಆ ಬಸವರಾಜದೇವರ ಆದಿ ಅನಾದಿಯ
ನೆತ್ತಿ ಗುರುಲಿಂಗ ಜಂಗಮ ಪ್ರಸಾದ ಪಾದೋದಕ ಸ್ವರೂಪ ಬ್ರಹ್ಮವೆ
ನೀನೇ ಎಂದು ಪೂರ್ವಾಚಾರಿ ನೀನೇ ಎಂದು ಕೊಂಡಾಡಿ ಚಂದಯ್ಯನ
ತಿಳುಹೆನಲು, ಆ ಬಸವರಾಜದೇವರು ನಾನೇನ ಬಲ್ಲೆನು. ಎನಗೆ ನಿಜವ
ತಿಳುಹಿದಾತ ಚನ್ನಬಸವಣ್ಣಾ. ಆತನ ಕೇಳುವದೆಂದು ಬಿನ್ನೈಸುವ ಪ್ರಸ್ತಾ
ವದ ವಚನ॥

ಮೆಲ್ಲನೆಮೆಲ್ಲನೆ ಭಕ್ತಾದ್ವೈಕ್ಯಾಂತವಾದೆನೆಂದು ತಾಮಸ ಜ್ಞಾನದಿಂದಿ
ರಲು, ಅವಕ್ಕೆ ನೀನು ನಿತ್ಯವ ಪಡೆದು ಬಂದೆಯಾ ಎಂದು ನಿಂದ
ಸ್ಥಲದಲ್ಲಿಯೆ ನಿಜ ಪದುಸ್ಥಲವಪಡಗಿರ್ದಪೆ ಜಂಗಮವಾದೋಹವೇಕೆಂದು
ಹೇಳಿ ನಿಜವ ಕರುಣಿಸಿದನಾಗಿ ಲಿಂಗ ಜಂಗಮದ ಭೇದವುಂ ಚನ್ನ

ಬಸವಣ್ಣ ಬಲ್ಲ, ನಾನು ಆತ ಇರಿಸಿದಂತೆ ಇಪ್ಪೆನಯ್ಯ. ಇದು ಕಾರಣ ಕೂಡಲಸಂಗಮದೇವರಲ್ಲಿ ಚಂದಯ್ಯಂಗೆ ಶರಣೆಂದು ಶುದ್ಧನಪ್ಪ ಪ್ರಭುವೆ ॥೪೦॥

ಹೀಗೆಂದು ಬಸವರಾಜದೇವರು ನಾನರಿಯೆ ಚನ್ನಬಸವಣ್ಣನ ಕೇಳೆಂದು ವಿಸ್ತೃಸಲು, ಅದಕ್ಕೆ ಚಂದಯ್ಯಗಳು ತಮ್ಮ ಸುಜ್ಞಾನಾಚಾರ ಜಂಗಮ ದಾಸೋಹ ನಿರ್ಣಯವೆಲ್ಲವು ಚನ್ನಬಸವಣ್ಣಂಗೆ ಪ್ರಿಯವೆಂದು ವಿಸ್ತರಿಸುವ ಪ್ರಸ್ತಾವದ ವಚನ. ॥

ಜಂಗಮಸೇವೆಯ ಚಿತ್ತಶುದ್ಧವಾಗಿ ಮಾಡುವಲ್ಲಿ ಗುರುಪೂಜೆ ಸಂದಿತ್ತು. ಜಂಗಮ ಸೇವೆಯ ಚಿತ್ತಶುದ್ಧವಾಗಿ ಮಾಡುವಲ್ಲಿ ಲಿಂಗ ಪೂಜೆ ಸಂದಿತ್ತು. ಜಂಗಮದಾಸೋಹದಿಂದ ಸರ್ವ ಸಂಪದವಾಯಿತ್ತು. ಆ ಗುಣವನರಿತು ಮಾಡಲಾಗಿ ಬಟ್ಟಬಯಲು ಕಾಣಬಂದಿತ್ತು. ಹುಟ್ಟುನ ಹೊಂದುವ ನೆಲೆ ಇತ್ತಲೆ ಉಳಿಯಿತ್ತು ಚನ್ನ ಬಸವಣ್ಣ ಪ್ರಿಯ ಚಂದೇಶ್ವರಲಿಂಗವನರಿಯಲಾಗಿ. ॥೪೧॥

ಮತ್ತಂ॥ ಜಂಗಮ ನಮಸ್ಕಾರವೆ ಗುರುಪೂಜೆ. ಜಂಗಮಪೂಜೆಯೆ ಲಿಂಗಪೂಜೆ. ಜಂಗಮತೃಪ್ತಿಯೆ ತನಗೆ ಪ್ರಸನ್ನ. ತನಗೆ ಪ್ರಸಾದವಾಪುದೆ ನಿತ್ಯ. ಪ್ರಸಾದದಾಗು ಚನ್ನಬಸವಣ್ಣ ಪ್ರಿಯ ಚಂದೇಶ್ವರಲಿಂಗಕ್ಕೆ ಕೊಟ್ಟ ಸೊತ್ತು ಕಾಣಾ ಸಂಗನಬಸವಣ್ಣ ಪ್ರಭುವೆ. ॥೪೨

ಇದಕ್ಕೆ ಪ್ರಭುದೇವರು ನಿರೂಪಿಸಿದ ಪ್ರಸ್ತಾವದ ವಚನ. ॥

ಕಣ್ಣು ಕಂಡಲ್ಲದೆ ಮನ ನೆನೆಯದು. ಮನ ನೆನೆದಲ್ಲಿಗೆ ಕಾಲು ನಡೆವುದು. ಕಾಲನಡೆದಲ್ಲದೆ ಕೈಯ್ಯ ಪೋಗುವುದು. ಕಾಲೆಂದರೆ ನೀ ಚರಿಸುವ ವರ್ತನೆ. ಆ ವರ್ತನಾಚಾರವೆ ಲಿಂಗ ಇದು ಕಾರಣ ಲಿಂಗವ ಲಿಂಗದ ಮಾಟ ಮಿಸಲಿಲ್ಲದ ಮನೆದೇವರ ಹಬ್ಬದಂತೆ ನಮ್ಮ ಗುಹೇಶ್ವರ ಲಿಂಗಕ್ಕೆ ಇದೆ ಬೇಹ ಶೌಚ ಕೇಳಾ ಚಂದಯ್ಯ. ॥೪೩॥

ಹೀಗೆಂದು ಪ್ರಭುದೇವರು ನಿರೂಪಿಸಲು ಆ ಚಂದಯ್ಯಗಳು ಲಿಂಗ ಜಂಗಮದ ನಿಜವನು ಚನ್ನಬಸವಣ್ಣನಿಂದ ತಿಳುಹಿಕೊಡೆಂದು ಪ್ರಭು ದೇವರ ಬಿಸಗೊಂಬ ಪ್ರಸ್ತಾವದ ವಚನ. ॥

ಎನ್ನ ಸತ್ಕ್ರಿಯೆ ಬಸವಣ್ಣನು, ಎನ್ನ ಸುಜ್ಞಾನವೆ ಚನ್ನಬಸವಣ್ಣನು, ಈ ಎರಡರ ಏಕ ಭಾವದ ಪ್ರಭೆಯೆ ನೀವು. ನಿಮ್ಮೆಲ್ಲರ ನಿಜೈಕ್ಯ

ನಿಜವೆ ನಮಿವಾಳಯ್ಯನು. ಇಂತೀ ಚತುರ್ವಿಧ ಎನಗೆ ಬೇಕಾದ ಕಾರಣ ಸಂಗನಬಸವಣ್ಣಪ್ರಿಯ ಚಂದೇಶ್ವರ ಲಿಂಗದಲ್ಲಿ ಇಷ್ಟಲಿಂಗದ ನಿಜವೆ ದಾಸೋಹವೆಂಬುದ ಚನ್ನಬಸವಣ್ಣನಿಂದ ತಿಳಿಹಿಕೊಡಾ ಪ್ರಭುವೆ. ॥೪೪॥

ಹೀಗೆಂದು ಚಂದಯ್ಯಗಳು ನಿಶ್ಚೈಸಲು, ಆ ಪ್ರಭುದೇವರು ಚನ್ನಬಸವಣ್ಣ ನೀನೆ ಹೇಳೆಂದು ನಿರೂಪಿಸಿದ ಪ್ರಸ್ತಾವದ ವಚನ. ॥

ಅಂಗದ ಲಿಂಗವೆ ಮನದ ಲಿಂಗ, ಮನದ ಲಿಂಗವೆ ಭಾವದ ಲಿಂಗ, ಭಾವದ ಲಿಂಗವೆ ಜಂಗಮ ದಾಸೋಹ, ದಾಸೋಹವೆಂಬುದು ಸಂದಿಲ್ಲದ ನಿಜ ನೋಡಾ! ಆದರಂದನನೆ ತಿಳಿದು, ನಿಂದ ನಿಲುಕಡೆಯ ಭೇದವನೆ ಕೇಳಬೇಕೆಂದು ಬಂದಲ್ಲಿಯೆ ತಿಳಿಹಬೇಕಯ್ಯ. ಇಂತೀ ಪ್ರಕಾರವಲ್ಲಿ ಸಂದ ಸೌಖ್ಯದ ಭೇದವನು ಸಂದಿಲ್ಲದ ಲಿಂಗದ ನಿಜವನು ಇಂದು ನಮ್ಮ ಗುಹೇಶ್ವರ ಲಿಂಗದಲ್ಲಿ ಚಂದಯ್ಯಂಗೆ ತಿಳುಹಿಕೊಡಾ ಚನ್ನಬಸವಣ್ಣಾ. ॥೪೫

ಹೀಗೆಂದು ಪ್ರಭುದೇವರು ನಿರೂಪಿಸಲು ಇದಕ್ಕೆ ಚನ್ನಬಸವರಾಜದೇವರು ನಿರ್ಣಯಲಾಗಿ ನಿರೂಪಿಸಿದ ಪ್ರಸ್ತಾವದ ವಚನ॥

ಶ್ರೀ ಗುರುಕರುಣವೆ ಲಿಂಗ, ಲಿಂಗದ ನಿಜವೆ ಜಂಗಮ, ಇಂತು ಈ ಬಹಿರಂಗದ ವರ್ತನೆ ಇನ್ನು ಅಂತರಂಗದ ಸುಜ್ಞಾನವೆ ಜಂಗಮ, ಆ ಜಂಗಮದ ನಡೆವ ಸತ್ಕ್ರಿಯೆ ಲಿಂಗ, ಆ ಉಭಯದ ಏಕತ್ವ ಸಿದ್ಧಿಯೆ ಗುರು. ಇದು ಕಾರಣ ಅಂಗತ್ರಯದಲ್ಲಿ ಲಿಂಗತ್ರಯ ಸಂಬಂಧವಾದಲ್ಲಿ ಜಂಗಮ ದಾಸೋಹವಿಲ್ಲದಡೆ ಲಿಂಗತ್ಯಸ್ತಿ ಇಲ್ಲ. ಅಂಗದ ಮೇಲೆ ಲಿಂಗವಿಲ್ಲದಿದ್ದಡೆ ಜಂಗಮ ಸೇವೆಯ ಕೈಕೊಳ್ಳ. ಅದು ಕಾರಣ ಒಂದ ಬಿಟ್ಟು ಒಂದರಲ್ಲಿ ನಿಂದರೆ ಅಂಗನಿಲ್ಲದ ಆತ್ಮನಂತೆ ಶಕ್ತಿ ಇಲ್ಲದ ಶಿವನಂತೆ ದೀಪವಿಲ್ಲದ ಪ್ರಕಾಶದಂತೆ. ಒಂದಂಗ ಶೂನ್ಯವಾಗಿ ಭಕ್ತಿಯುಂಟೆ? ಅವಯವ ಹೀನನು ರಾಯ ಪಟ್ಟಕ್ಕೆ ಸಲುವನೆ? ಲಿಂಗಹೀನನು ಭಕ್ತ್ಯಾಚಾರಕ್ಕೆ ಸಲುವನೆ? ಅದು ದೇವತ್ವಕ್ಕೆ ಸಲ್ಲದು. ನಮ್ಮ ಕೂಡಲ ಚನ್ನಸಂಗಯ್ಯನಲ್ಲಿ ತ್ರಿವಿಧ ಸನ್ಮತವೆ ಚರಸೇವಯಯ್ಯ ಚಂದಯ್ಯ ಪ್ರಭುವೆ ॥೪೬॥

ಮತ್ತಂ॥ ಜಂಗಮವೆ ಪರವೆಂದರಿದೆನು? ಆ ಜಂಗಮದಂಗನ ಲಿಂಗವೆ ಲಿಂಗ? ಆ ಲಿಂಗದ ಚೈತನ್ಯದಂತೆಲ್ಲವು ಜಂಗಮವಲ್ಲವೆ? ಅಂಗವಿಲ್ಲದ ಜೀವ ಆತ್ಮವಿಲ್ಲದಂಗಕ್ಕೆ ಸರ್ವಯೋಗದ ಸಮಯುಂಟೆ? ಮರ

ವಿಲ್ಲದ ಹಣ್ಣುಂಟಿ? ಹಣ್ಣಿಲ್ಲದ ಸ್ಥಾವವುಂಟಿ? ಹೀಗರಿವುದಕ್ಕೆ ಕ್ರಮ. ಅಂಗವೇ ಮಣ್ಣು ಲಿಂಗವೆ ಮರನು ಫಲವೆ ಜಂಗವು ರುಚಿಯೆ ಪ್ರಸಾದ. ಇದು ಕಾರಣ ಕೂಡಲ ಚನ್ನಸಂಗಯ್ಯನಲ್ಲಿ ಸಾಕಾರಲಿಂಗವೆ ಜಂಗವು ವಂಗವಯ್ಯ ಪ್ರಭುವೆ ॥೪೭॥

ಹೀಗೆಂದು ಚನ್ನಬಸವೇಶ್ವರ ದೇವರು ನಿರೂಪಿಸಲು, ಅದಕ್ಕೆ ಪ್ರಭು ದೇವರು ಸಾಮ್ಯವಾಗಿಯೆ ನುಡಿದು ಚನ್ನಬಸವಣ್ಣನ ಪ್ರಸಾದ ವಾಕ್ಯವ ಕೇಳೆಂದು ಚಂದಯ್ಯಂಗೆ ನಿರೂಪಿಸಿದ ಪ್ರಸ್ತಾವದ ವಚನ ॥

ಆಚಾರವೆ ಲಿಂಗ, ಆಚಾರದರಿವೆ ಜಂಗವು, ಅಂಗವೆ ಲಿಂಗವೈ ತನ್ಯ. ಚೈತನ್ಯವೇ ಜಂಗವು ಜಂಗವು, ಸೇವೆಯೆ ಲಿಂಗ ಕೊಂಬುದು. ಜಂಗವು ನಮ್ಮ ಗುಹೇಶ್ವರನ ಶರಣರು ಮಚ್ಚುವಂತೆ ಮಡಿವಾಳನ ಕಾಯಕವಂತೆ ನಿರೂಪಿಸಿದ ಚನ್ನಬಸವಣ್ಣನ ಕರುಣದಲ್ಲಿ ಬದುಕಾ ಚಂದಯ್ಯ ॥೪೮॥

ಹೀಗೆಂದು ಪ್ರಭುದೇವರು ಚನ್ನಬಸವಣ್ಣನ ನಿರೂಪವ ಕೇಳಿ, ಬದು ಕೆಂದು ಹೇಳಲಾ ಚಂದಯ್ಯಗಳು ನಿರೂಪಕ್ಕೆ ಒಪ್ಪಿ ಒಡಂಬಟ್ಟು ತಮ್ಮ ಇಷ್ಟಲಿಂಗವುಂ ಧರಿಸಿಕೊಂಡು ಚಿತ್ತ ನಿಸ್ತರಂಗವನೈದಿ ಬಸವಣ್ಣ ನೊದ ಲಾದ ಶರಣರ ಸಮ್ಯಜ್ಞಾನ ಎನಗಾಯಿತ್ತೆಂದು ಬಿನ್ನೈಸಿದ ಪ್ರಸ್ತಾವದ ವಚನ॥

ಎನ್ನಂಗ ಸತ್ಕ್ರಿಯೆ ಬಸವಣ್ಣನು. ಎನ್ನ ಲಿಂಗ ಸತ್ಕ್ರಿಯೆ ಚನ್ನ ಬಸವಣ್ಣನು. ಎನ್ನ ಅರಿವಿನ ಸತ್ಕ್ರಿಯೆ ಪ್ರಭುದೇವರು. ಎನ್ನ ದಾಸೋಹ ಸಿಷ್ಠೆಯೆ ಮಡಿವಾಳಯ್ಯನು. ಇದು ಕಾರಣ ಎನ್ನಂಗ ಲಿಂಗ ಜ್ಞಾನ ದಾಸೋಹ, ಇವು ಮುಂತಾದ ಸಮಸ್ತವು ನಿಮ್ಮ ಪುರಾತನರಾದ ಕಾರಣ ಚನ್ನಬಸವಣ್ಣನ ಕರುಣ ಇಂತು ಮಾಡಲಾಗಿ, ನಾನು ನಿಮ್ಮ ಪಾದವ ಬಿರಿದು ಬೇರಿಲ್ಲದೆ ಸಿಜವನೈದಿದೆ ಚನ್ನಬಸವಣ್ಣ ಚಂದೇಶ್ವರಲಿಂಗವಲ್ಲಿ ಶರಣರ ಸಮ್ಯಜ್ಞಾನ ಎನಗಾಯಿತ್ತು ಪ್ರಭುವೆ ॥೪೯॥

ಇತಿ ಶ್ರೀಮತ್ಸಕಲ ಗಣ ಪುರಾತನರೊಳ್ ಪ್ರಭುದೇವರು ಮಹಾ ನುಭಾವ ಸಮ್ಮೋಷ್ಠಿಯಂ ಮಾಡಿದ, ಶೂನ್ಯ ಸಂಪಾದನೆಯೊಳ್ ನುಲಿಯ ಚಂದಯ್ಯಗಳ ಸಂಪಾದನೆಗಂ ಚತುರ್ದಶೋಪದೇಶ ಸಮಾಪ್ತ.

ಘಟ್ಟಿವಾಳಯ್ಯಗಳ ಸಂಪಾದನೆ.

(ಪಂಚದಶೋಪದೇಶ)

ಕಂದ॥ಘಟ್ಟಿವಾಳಯ್ಯನೆಂಬ ಘ ರಟ್ಟಂ ತನ್ನಿಷ್ಟಲಿಂಗದೊಳ್ ಮಿಗೆ ಗಂಡಂ ನಿಷ್ಠೆಯಿಂದಡಗಿಸಿದುದಂ ಸೃಷ್ಟಿಯೊಳರಿವಂತೆ ಶರಣಜನರಿಂಗು ಸುರ್ವೆಂ. ॥೦॥

ಅದೆಂತೆಂದೊಡಾ ಪ್ರಭುದೇವರು, ಬಸವರಾಜದೇವರು, ಚನ್ನಬಸವ ರಾಜದೇವರು, ಮಡಿವಾಳ ಮಾಚಿತಂದೆಗಳು, ಆ ನುಲಿಯ ಚಂದಯ್ಯ ಗಳೊಡನೆ ಮಹಾನುಭಾವ ಸಮ್ಮೋಷ್ಠಿಯಂ ಮಾಡಿ, ಓಲಾಡುತ್ತಿರಲು, ಆ ನುಲಿಯ ಚಂದಯ್ಯಗಳು ತಮ್ಮ ನಿಜಕಾಯ ಕಕ್ಕೈವಲು, ಇತ್ತ ಮತ್ತೋರ್ವ ಗಣಾಧೀಶ್ವರನು ಕೈಲಾಸದಿಂದೆ ಸ್ವೇಚ್ಛಾ ಲೀಲಾ ವಿಲಾಸ ದಿಂದೆ ಮರ್ತ್ಯಕ್ಷವತರಸಿ, ಘಟ್ಟಿವಾಳ ಮುದ್ದಣ್ಣಗಳೆಂಬ ನಿಜನಾಮದಿಂ ಪರಮ ವೈರಾಗ್ಯದ ಹೆಚ್ಚುಗೆಯಿಂದ ಇಂದ್ರಿಯಾದಿ ವಿಷಯಂಗಳಂ ತೃಣ ಸಮಾನಂ ಗೈದು ನಿರಾಶಾಭರಿತನಾಗಿ, ಚರಿಸಾಡುತ್ತಲೊಂದು ದಿನಂ ಬಸ ವರಾಜದೇವರ ಗೃಹದ ಬಾಗಿಲಲ್ಲಿ ಹೋಗುವ ಹೊರಹೊರಡುವ ಜಂಗವು ಸಮೂಹಮುಂ ಕಂಡು, ಇವರು ಉಪಾಧಿಯುಂ ಶರೀರ ಪೋಷಣರಲ್ಲದೆ ಜ್ಞಾನ ಜಂಗವುಸ್ಥಲಕ್ಕೆ ಸಲ್ಲರೆಂದು ವಿಡಂಬಿಸುವ ಪ್ರಸ್ತಾವದ ವಚನ॥

ಕಾಳು ದೇಹದೊಳಗೊಂದು ಕೀಳು ಜೀವ ಹುಟ್ಟುತ್ತಾಗಿ, ಅಪ್ಪಾ ಯನವಡಗದು. ಸಂದೇಹ ಹಿಂಗದು. ಇದೇನೊ? ಇದೇನೊ? ಹಂದೆ ಗಳು ಮುಂದೆ ಮುಂದೆ ಬಂದು ಕಾಡುತಲಿದ್ದುದು. ಇದೇನೊ? ಇದೇನೊ? ಕಾಲಾಳು ಮೇಲಾಳುಗಳು ಬೇಳುವೆಗೊಳಗಾದರು. ಚಿಕ್ಕಯ್ಯ ಪ್ರಿಯಸಿದ್ಧ ಲಿಂಗ ಇಲ್ಲ ಇಲ್ಲ ಎಂಬರು ॥೧॥

ಮತ್ತಂ॥ ಜಂಗವುವಾಗಿ ಹುಟ್ಟಿದವರು ಮತ್ತಂ ಹಿಂದಣ ಹೆಜ್ಜೆಯ ನೆಟ್ಟಲುಂಟೆ? ಜಂಗವುವೆಂಬ ಮಾತಿಗೊಳಗಾವಲ್ಲಿ ಮೂರು ಮಲತ್ರ ಯಂಗಳು ಹಿಂಗಿರಬೇಕು. ಅನಂಗನ ಬಲೆಗೆ ಎಂದಿಗೂ ಸಿಲುಕದಿರಬೇಕು. ಅದು ಸಿಜದ ಸಂಗ ಚಿಕ್ಕಯ್ಯ ಪ್ರಿಯ ಸಿದ್ಧಲಿಂಗ. ಈ ಗುಣ ಆಂಗು ಇಲ್ಲ ಇಲ್ಲ ಎಂದೆ ॥೨॥

ಮತ್ತಂ॥ ಹೊನ್ನು ಹೆಣ್ಣು ಮಣ್ಣು ಕುರಿತು ಚರಿಸುವನ್ನಬರ ಉಭ
ಯದ ಕೇಡು. ವರ್ಮವನರಿಯದೆ ಮಾಡುವನ್ನಬರ ದ್ರವ್ಯದ ಕೇಡು. ಇಂತೀ
ಉಭಯದ ಭೇದವನರಿತು ಚರಿಸಿ ಮಾಡಿ ಅರಿಯಬೇಕು. ಚಿಕ್ಕಯ್ಯ
ಪ್ರಿಯ ಸಿದ್ಧಲಿಂಗವನರಿಯಬಲ್ಲಡೆ ॥೩॥

ಮತ್ತಂ॥ ಹೊರಗಣ ಮಲತ್ರಯಕ್ಕೆ ಒಳಗಣ ಅರಿವನೀಗಾಡಲೀಕೆ?
ಅಲ್ಪ ಸುಖಕ್ಕೆ ಮಜ್ಜಿ ಕುಕ್ಕುರನಂತೆ ಸಿಕ್ಕಿ ಸಾಯಲೇತಕ್ಕೆ? ನಿಶ್ಚಯವಾಗಿ
ಚಿಕ್ಕಯ್ಯ ಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಎಂದೆ॥೪॥

ಮತ್ತಂ॥ ಹೊನ್ನು ಹೆಣ್ಣು ಮಣ್ಣೆಂಗೆ ಹೊಡೆದಾಡುವನ್ನಬರ ಅವರು
ಹಿರಿಯರೆಂತಪ್ಪರೋ? ತ್ರಿವಿಧ ಮಲಕ್ಕೆ ತ್ರಿವಿಧ ಅಮಲದಿಂದಂ ಮಲ
ಹರಿವಲ್ಲದೆ ಚಿಕ್ಕಯ್ಯ ಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಎಂದೆ ॥೫॥

ಮತ್ತಂ॥ ಜಂಗಮಕ್ಕೆ ಅರಿವ ಮರೆದಾಗಲೆ ಅಪಮಾನ ಹೋಯಿತ್ತು.
ಭಕ್ತರಿಗೆ ಸತ್ಯಸದಾಚಾರವ ಬಿಟ್ಟಾಗಲೆ ಅಪಮಾನ ಹೋಯಿತ್ತು. ಈ ಅಪ
ಮಾನವಲ್ಲದೆ ದ್ವಾರ ಮಲಭಾಂಡಕ್ಕೆ ಹೋರಿ ಮಾಡುವವರಿಗೇಕೆ ಚಿತ್ತ
ಶುದ್ಧ ? ಚಿಕ್ಕಯ್ಯ ಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಎಂದೆ ॥೬॥

ಮತ್ತಂ॥ ತನುವ ಮರೆಯಬೇಕೆಂದು ಗುರುವ ತೋರಿ ಮನವ ಮರೆಯ
ಬೇಕೆಂದು ಲಿಂಗವ ತೋರಿ ಧನವ ಮರೆಯಬೇಕೆಂದ. ಜಂಗಮವ ತೋರಿ
ಲೇಸವ ಮರೆದು ಕಷ್ಟಕ್ಕೆ ಕಡಿದಾಡುವ ಭಾಷೆಹೀನರ ಕಂಡು ನಾಚಿಕೆ
ಯಾಯಿತ್ತು. ಚಿಕ್ಕಯ್ಯ ಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಎಂದೆ ॥೭॥

ಮತ್ತಂ॥ ತಮ್ಮ ಮಲವ ತಾವು ಮುಟ್ಟವು. ಆವಾವ ಜಾತಿಯು
ತ್ರಿವಿಧ ಮಲತ್ರಯಕ್ಕೆ ಬೀಳುವ ಮಲಭಾಂಡ ದೇಹಿಗಳಿಗೆ ಚಿಕ್ಕಯ್ಯ
ಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಎಂದೆ ॥೮॥

ಮತ್ತಂ॥ ಕಾಯಜೀವವನರಿದೆನೆಂಬವರೆಲ್ಲರು ಹೋದರಲ್ಲ ಹೊಲ
ಬುವಪ್ಪಿ. ಹೊನ್ನು ಹೆಣ್ಣು ಮಣ್ಣೆಂಗೆ ಹೋರಿಯಾಡದವರೆಲ್ಲರು ಬಸವ
ಣ್ಣನ ಬಾಗಿಲಲ್ಲಿ ಬಂಧಿತರಾಗಿ ನೊಂದವರಿಗೇಕೆ ಚಿಕ್ಕಯ್ಯಪ್ರಿಯ ಸಿದ್ಧ
ಲಿಂಗ ಇಲ್ಲ ಇಲ್ಲ ಎಂದೆ ॥೯॥

ಮತ್ತಂ॥ ಒಸವ ಮಾಡಿಹನೆಂದು ಬಾಯಲ್ಲಿ ಬಸಿವ ಲೋಳೆಯ ನರಿ
ಯದೆ ಎಸಕದಿಂದೆ ಮಾಡುವ ಹುಸಿ ಭಕ್ತಿಯನರಿಯದ ಈ ಕಿಸುವಾಯ
ರಿಗೇಕೆ ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಎಂದೆ ॥೧೦॥

ಹೀಗೆಂದು ಘಟ್ಟಿವಾಳಯ್ಯಗಳು ಜಂಗಮ ಸಮೂಹಮಂ ವಿಡಂಬಿ
ಸಲ್ಕರಲು ಆ ಜಂಗಮ ದೇವರುಗಳು ಘಟ್ಟಿವಾಳಯ್ಯಗಳ ನೋಯಿಸಿ
ಲಿಂಗಮಂ ತೆಗೆದುಕೊಳ್ಳಲು ಆ ಪ್ರಸ್ಥಾವವಲ್ಲಿ ನುಡಿದ ವಚನ ॥

ಗೋಕುಲರೆಲ್ಲರು ಕೂಡಿ, ಗೋಪತಿಯು ಬಸವಣ್ಣನ ಮನೆಗೆ ಉಣ
ಬಂದರೆಲ್ಲರು ನಾವೀಸಕ್ಕೆ ಕೂಳ ಕೇಳಿದರೆ ವೇಷಧಾರಿಗಳು ಘಾಸಿ ಮಾಡಿ
ದರಿಸ್ನವೆ. ಜಗದೀಶ ನೀನೆ ಬಲ್ಲೆ ಚಿಕ್ಕಯ್ಯ ಪ್ರಿಯ ಸಿದ್ಧಲಿಂಗ ಇಲ್ಲ
ಇಲ್ಲ ಎಂದೆ. ॥೧೧॥

ಮತ್ತಂ॥ ಹಸಿದು ತಾರಕ್ಕೂಟನ ಕೇಳಹೋದರೆ ಕೂಟವೆದ್ದು ಬಡಿ
ದರು. ಸಾಕಾರ ಮೊದಲು ಧಾತುಗೆಟ್ಟಿಯಲ್ಲ. ಪರಶಿವಾತ್ಮನಾಗಿ ಅದೇತಕ್ಕೆ
ಬಂದೆ? ತನುವಿನಾಸೆಗಾಗಿ ಇದರಾಸೆಯ ಹೋಗದಿರು ಚಿಕ್ಕಯ್ಯ ಪ್ರಿಯ
ಸಿದ್ಧಲಿಂಗ ಇಲ್ಲ ಇಲ್ಲ ಎಂದೆ ॥೧೨॥

ಹಾದಿಯ ಬೆಳ್ಳನ ಕಳ್ಳರು ತಾಗಿದರೆ ಇನ್ನಾರಿಗೆ ಮೊರೆ ಇಡುವ ? ತಾ
ಪತ್ತು ಮತ್ತೆ ತನ್ನನರಿದವಂಗೆ ಇನ್ನಾರಿಗು ಮಿಥ್ಯವೇಕೆ? ಚಿಕ್ಕಯ್ಯ ಪ್ರಿಯ
ಸಿದ್ಧಲಿಂಗ ಇಲ್ಲ ಇಲ್ಲ ಎಂದೆ ॥೧೩॥

ಬಾಯಿಕ್ಕಿ ಬೇಡುವರೆಲ್ಲರು ಬಡಪಾಯುವಂತರ ನೋವು ಬಲ್ಲರೆ?
ಹಸಿವ ವಿಹಂಗ ಪಶುವಿನ ನೋವು ಬಲ್ಲುದೆ? ಇಂತೀದೆಸೆಯಂ ಕಂಡು
ನಾನಂಜಿದೆ ಚಿಕ್ಕಯ್ಯ ಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಎಂದೆ ॥೧೪॥

ಮತ್ತಂ॥ ಹುಟ್ಟಿದ ಮರ ನೆಟ್ಟ ಕಲ್ಲು ಮತ್ತೇತರ ಇಷ್ಟದಲ್ಲಿ ಒತ್ತಿದ
ಲಿಂಗಮುದ್ರೆ ಇರಲಿಕೆ ಕಿತ್ತು ಕೊಂಡವ ದ್ರೋಹಿ ಎಂಬರು. ದೃಷ್ಟದಲ್ಲಿ
ಜಂಗಮ ಭಕ್ತರ ಕೊಲುತ್ತ ಇಂತೀ ಉರುಳುಗಳ್ಳರ ಭಕ್ತರು ಜಂಗಮ
ವೆಂದರೆ ಒಪ್ಪನಯ್ಯ ಚಿಕ್ಕಯ್ಯ ಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಎಂದೆ ॥೧೫॥

ಮತ್ತಂ॥ ಜಂಗಮವಾಗಿ ಜಂಗಮವ ಕೊಂದಾಗಲೆ ತನ್ನ ಧೈವ
ತನಗಿಲ್ಲ. ಭಕ್ತನಾಗಿ ಭಕ್ತರ ಸ್ತುತಿ ನಿಂದೆಯ ಮಾಡಲಾಗಿ ಸತ್ಯ ಸದಾ
ಚಾರ ತನಗಿಲ್ಲದಿಹ ವಿಹಂಗ ಮೃಗಗಳಂತೆ, ಕುಲಿಶದ ಕಾವು ಕುಲಕ್ಕೆ
ಮಿತ್ತಾದಂತೆ ಚಿಕ್ಕಯ್ಯ ಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಎಂದೆ ॥೧೬॥

ಮತ್ತಂ॥ ಇರಿವುದು ಕಡಿವುದು ಕೊಲುವುದು ದೇಹಿಗಳಿಗಲ್ಲದೆ
ಸರ್ವಲ ದೇಹಿಗಳಿಗುಂಟೆ? ಸಮಯ ಸಮುದ್ರದಂತಿರಬೇಕು. ತಪ್ಪನರಸಿ

ತೀಕ್ಷಿಸುವನ್ನಬರ ನರಮೂತ ಕುಲಕ್ಕೆ ಪರಶಿವ ರೂಪುಂಟಿ? ಆ ಹರವರಿಯ ನುಡಿದಡೆನಗೇನು ಚಿಕ್ಕಯ್ಯ ಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಎಂದೆ ॥೧೭॥

ಇಂತು ಘಟ್ಟಿವಾಳಯ್ಯಗಳು ತಮ್ಮ ನೋಯಿಸಿ ಲಿಂಗವ ತೆಗೆದುಕೊಂಡ ಜಂಗಮ ದೇವರುಗಳ ವಿಡಂಬಿಸುತ್ತಿರಲು, ಆ ಪ್ರಸ್ಥಾವದೊಳು ಪ್ರಭುದೇವರು ಮಹಾಜ್ಞಾನಿಗಳಿಗೆ ಸಮಯವನ್ಯವಲ್ಲ. ಬಿರುನುಡಿಸಲ್ಲದೆಂದು ನಿರೂಪಿಸಿದ ಪ್ರಸ್ಥಾವದ ವಚನ॥

ಅರಿವ ಬಲ್ಲೆನೆಂದು ಬಿರುನುಡಿಯ ನುಡಿವರೆ? ಸತ್ಯವನರಿದಂಗೆ ಮಿಥ್ಯಾಭಾವ ಉಂಟೆ? ತಥ್ಯ ಮಿಥ್ಯ ಉಭಯ ಭಾವವಳಿದಿರಬೇಕು. ಸಮಯವೆಂಬುದು ಸಂಪದ. ಅದು ನಿನಗನ್ಯವೆ? ಸರ್ವಮಯ ಸಂಪದನಾವಲ್ಲಿ ಗುಹೇಶ್ವರ ಲಿಂಗಕ್ಕೆ ತಥ್ಯಮಿಥ್ಯವಿಲ್ಲ ಮಡಿವಾಳಯ್ಯ ॥೧೮॥

ಹೀಗೆಂದು ಪ್ರಭುದೇವರು ನಿರೂಪಿಸಲು, ಇದಕ್ಕೆ ಘಟ್ಟಿವಾಳಯ್ಯನ ಪ್ರತ್ಯುತ್ತರ ॥

ಸರ್ಪಂಗೆ ಪಿಕಂಗೆ ಒಪ್ಪದ ಮನೆಯುಂಟಿ? ಎನಗೆ ಹೆಚ್ಚುಕುಂದೆಂಬ ಮಿಥ್ಯವ ಭಾವವಿಲ್ಲ. ಚಿಕ್ಕಯ್ಯ ಪ್ರಿಯಸಿದ್ಧಲಿಂಗ ಇಲ್ಲ ಇಲ್ಲ ಎಂದೆ ೧೯॥

ಮತ್ತಂ॥ ಚಿನ್ನವ ಕೊಂಬಲ್ಲಿ ಅದರ ಬಣ್ಣವ ಕಂಡು ಬಣ್ಣದ ವಾಸೆಯ ಕುರುಹಿಟ್ಟು ಅದು ತನಗೆ ಚನ್ನಾದಡೆ ಕೊಂಬ. ಅಲ್ಲದೊಡೊಲ್ಲ. ಇದಕ್ಕೆ ಗೆಲ್ಲ ಸೋಲ ವೇಕೆ? ಚಿಕ್ಕಯ್ಯ ಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಎನುತಿರ್ದೆನು ॥೨೦॥

ಇದಕ್ಕೆ ಪ್ರಭುದೇವರ ನಿರೂಪ ॥

ಸಮಯವ ಬಿಡಬಹುದೆ ಅಯ್ಯ? ಅಟ್ಟ ಅಶನವಾದಡೂ ಕಲಸುವದಕ್ಕೆ ಕೈ ಉಂಬುವದಕ್ಕೆ ಬಾಯಿ ಬೇಕು. ಉಂಬುದಿಲ್ಲವೆಂದು ಸಂದೇಹವ ಹರಿದಲ್ಲಿ ಸಮಯ ಒಂದು ಇಲ್ಲ ಎನಬೇಕು. ಗುಹೇಶ್ವರನೆಂಬನ್ನಕ್ಕ ಬಂಧ ಮೋಕ್ಷವನರಿಯು ಬೇಕು ಘಟ್ಟಿವಾಳಯ್ಯ ॥೨೧॥

ಹೀಗೆಂದು ಪ್ರಭುದೇವರು ನಿರೂಪಿಸಲು, ಅದಕ್ಕೆ ಘಟ್ಟಿವಾಳಯ್ಯನ ಪ್ರತ್ಯುತ್ತರ॥

ದಗ್ಧ ವಾದ ಮರ ಇವ್ವಲಲ್ಲದೆ ಕಾಷ್ಠಕ್ಕೆ ಹೊದ್ದಿಗೆಯುಂಟಿ? ಕಿಗ್ಗಯ್ಯರು ತಟಾಕಕ್ಕೆ ಹೊದ್ದಿದುಮುಂಟಿ? ಅರಿದು ಮರೆದವಂಗೆ ಸಮಯದ ಹೊದ್ದಿಗೆ ಏನು ? ಚಿಕ್ಕಯ್ಯ ಪ್ರೀಯ ಸಿದ್ಧಲಿಂಗ ಇಲ್ಲ ಇಲ್ಲ ಎಂದೆ ॥೨೨॥

ಮತ್ತಂ॥ ಸತ್ತ ಶ್ರವ ಕಿಚ್ಚು ಬಲ್ಲುದೆ? ನಿಷ್ಠೆ ನಿಷ್ಪರಗಾದ ಕರ್ತುರ್ಮರ್ಯರ ಹಂಗ ಬಲ್ಲನೆ? ತೊಟ್ಟು ಬಿಟ್ಟ ಹಣ್ಣು ಮತ್ತೆ ಹತ್ತುವದೆ? ಚಿಕ್ಕಯ್ಯ ಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಎಂದೆ ॥೨೩॥

ಮತ್ತಂ॥ ಒಡೆದ ಮಡಿಕೆಗೆ ಸರಿಯಿಂದ ಸಂದು ಕೂಡುವದೆ? ದಗ್ಧವಾದ ಸಟ ಅಸಗರ ಕಲ್ಲಿಗೆ ಹೊದ್ದುವದೇ? ಬದ್ಧ ಭವಿಗಳೆಂದು ಬಿಟ್ಟು ಮತ್ತೆ ಸಮಯದ ಹೊದ್ದಿಗೆ ಏಕೆ? ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಎಂದೆ ॥೨೪॥

ಮತ್ತಂ॥ ಕೂಟವ ಮಾಡಿಹೆನೆಂದರೆ ಸಮಯದವನಲ್ಲ. ಮಾಟವ ಮಾಡಿಹೆನೆಂದರೆ ಹಿಂದು ಮುಂದಣ ದಂದುಗದವನಲ್ಲ. ಸಮಯಕ್ಕೆ ಮುನ್ನವೆ ಅಲ್ಲ. ಆರಾದಡೂ ಎನಲಿ. ಚಿಕ್ಕಯ್ಯ ಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಎಂದೆ. ॥೨೫॥

ಹೀಗೆಂದು ಘಟ್ಟಿವಾಳಯ್ಯಗಳು ನುಡಿಯಲು, ಅದಕ್ಕೆ ಪ್ರಭುದೇವರ ನಿರೂಪ. ಕುರುಹುಳ್ಳನ್ನಕ್ಕರ ಸಮಯದ ಹಂಗು, ಅರಿದಿಹೆನೆಂಬನ್ನಕ್ಕರ ಆತ್ಮನ ಹಂಗು, ಅಲ್ಲಹುದೆಂಬನ್ನಕ್ಕರ ಎಲ್ಲರ ಹಂಗು. ಗುಹೇಶ್ವರನೆಂಬನ್ನಕ್ಕರ ಲಿಂಗದ ಹಂಗು ಬೇಕು. ಘಟ್ಟಿವಾಳಣ್ಣಾ. ॥೨೬॥

ಇದಕ್ಕೆ ಘಟ್ಟಿವಾಳಯ್ಯಗಳ ಪ್ರತ್ಯುತ್ತರ॥ ಇಷ್ಟ ಬಾಹ್ಯವಾಯಿತ್ತೆಂದು ಸಮಯ ಒಸ್ಪದಿದೆ ನೋಡಾ. ಅರಿವು ಬಾಹ್ಯವಾಗಿ, ತ್ರಿವಿಧಕ್ಕೆ ಕಚ್ಚಾಡಲೇತಕ್ಕೆ ? ಚಿಕ್ಕಯ್ಯ ಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಎಂದೆ. ॥೨೭॥

ಮತ್ತಂ॥ಸ್ಥಾವರವಾಗಿ ಭೂಮಿಯಲ್ಲಿ ಪೂಜಿಸಿಕೊಂಬುದು ಶೈವಲಿಂಗ. ಜಂಗಮವಾಗಿ ಭೂಮಿಯಲ್ಲಿ ಪೂಜಿಸಿಕೊಂಬುದು ಇಷ್ಟಲಿಂಗ. ಅರಿವಿನ ಮನೆದ ಕೂಸೆಯಲ್ಲಿ ನಿತ್ಯವಾಸವಾಗಿ ಪೂಜಿಸಿಕೊಂಬುದು ವೀರಶೈವಲಿಂಗ. ಇಂತೀ ಲಿಂಗತ್ರಯದ ಆದಿ ಆಧಾರವನರಿಯದೆ, ಹೋದರಲ್ಲ ಹೊಲಬುದಪ್ಪಿ. ಇನ್ನಾರಿಗೆ ಹೇಳುವೆ ? ಚಿಕ್ಕಯ್ಯ ಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಎಂದೆ. ॥೨೮॥

ಮತ್ತಂ॥ ಘಟ್ಟಿವಾಳಯ್ಯಗಳು ಪ್ರಭುದೇವರೊಡನೆ ನಿಜಜಂಗಮಸ್ಥಲ ಸರ್ವವೆಂದು ನುಡಿವ ಪ್ರಸ್ಥಾವದ ವಚನ॥

ವೇಷವೆಂಬ ರುದ್ರನ ಪಾಶವ ಹೊತ್ತು ಈಷಣತ್ರಯಕ್ಕೆ ತಿರುಗಾಡುವ ವೇಷಧಾರಿಗಳಿಗುಂಟೆ ಮಹಾಜ್ಞಾನದ ಸಂಪತ್ತಿನ ಸಂಬಂಧ? ಸ್ವಾದುದಕವಿದ್ದಲ್ಲಿ ಉಂಟೆ ಕ್ಷಾರದ ವಾರಿ? ಸಮಯದಲುಂಟೆ ನಿಜ ರತ್ನದ ನೆಲೆ? ಎನಗಾ ಭ್ರಮೆ ಇಲ್ಲ. ಚಿಕ್ಕಯ್ಯ ಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಎಂದೆ ॥೪೯॥

ಮತ್ತಂ॥ ಆಸೆಗಾಗಿ ವೇಷವ ಹೊತ್ತು ತಿರುಗುವ ವೇಷದ ಗಂಡ. ಈಷಣತ್ರಯಕ್ಕಾಗಿ ಈಶನ ಪೂಜಿಸುವ ದಾಸರಗಂಡ. ಇಷ್ಟನರಿತು ತನುವಿಗೆ ಆಸೆಯ ಮಾಡುವ ಭಾಷೆವಂತರ ಗಂಡ. ನಾನಂಜುವೆ. ತ್ರಿವಿಧದ ಹಂಗಳಿದವರಿಗೆ ನಾನವರಿಗಿಳಿವ ಬಂಟ. ಚಿಕ್ಕಯ್ಯ ಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಎಂದೆ ॥೫೦॥

ಮತ್ತಂ॥ ಸಬಳವ ತುದಿಯಲ್ಲಿ ಬರಿದ ಕಟ್ಟುವ ಮತ್ತೆ ಅದರ ತಲೆ ವಿಡಿಯತೊಡಗಿದರೆ ನಾನಲ್ಲ ಸಬಳಕ್ಕೆ ಬಿರಿದದೆಂಬವನಂತೆ ಹಾಗೆಂದು ತೊಡಗುವನೆಗ್ಗ. ಚಿಕ್ಕಯ್ಯ ಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಎಂದೆನು ॥೫೧॥

ಮತ್ತಂ ॥ ವರ ಬಿಟ್ಟವಂಗಲ್ಲದೆ ಸತ್ಯ ಸಾಗಿಸಬಾರದು. ಆರ ಬಿಟ್ಟವಂಗಲ್ಲದೆ ಅಧರಿಸಬಾರದು. ಎಂಟ ಬಿಟ್ಟವಂಗಲ್ಲದೆ ಸಾಕಾರದ ಕಂಟಕವನರಿಯಬಾರದು. ರಣದಲ್ಲಿ ಓಡಿ ಮನೆಯಲ್ಲಿ ಬಂಟನಾಡುವಂತೆ ಚಿಕ್ಕಯ್ಯ ಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಎಂದೆ ॥೫೨॥

ಹೀಗೆಂದು ಘಟ್ಟಿವಾಳಯ್ಯಗಳು ಅಲ್ಲಿಂದ ಪೋಗಿ ಒಂದು ಪಿರಿದಪ್ಪ ಗುಂಡಂ ತಂದು ಬಸವರಾಜದೇವರ ಮಠದ ಬಾಗಿಲ್ಲಲ್ಲಿ ನಿಲಿಸಿ ಹೊಡೆಯ ಕಣ್ಣಿಯಿಂದೆ ತಮ್ಮ ಕೊರಳಿಗೆ ಧರಿಸಿಕೊಂಡು ಆ ಜಂಗವದೇವರುಗಳ ಮರಳಿ ವಿಡಂಬಿಸುವ ಪ್ರಸ್ಥಾವದ ವಚನ ॥

ಅಂಡಜ ಮುಕ್ತಿಯ ಮಕ್ಕಳಿರಿ ಕೆಂಡದ ಮಳೆಯ ಕರೆವಲ್ಲಿ ನಿಮ್ಮ ಹೆಂಡಿರು ಹಳ್ಳ ಹೊಕ್ಕು ಹೋದಿರಲ್ಲ. ಜಂಗವವೆಂಬುದಕ್ಕೆ ನಾಚಿರಿ. ನಿಮ್ಮ ಕಂಗಳ ಹೆಂಡಿರು ತಿಂಬಳೆಂಬುದನರಿಯಿರೆ? ಅವಳು ಒಮ್ಮೆ ತಿಂಬಳು. ಒಮ್ಮೆ ಕರುಣಿಸಿ ಬಿಡುವಳು. ಅವಳು ತಿಂದು ತಿಂದು ಉಗುಳುವ ಬಾಯೊಳಗಣದೆಲ್ಲ ಜಂಗವವೆ? ಲೋಕವೆಲ್ಲ ಅವಳು ಅವಳು ವಿರಹಿತವಾದ ಜಂಗವ ವಾರಯ್ಯ ಬಸವಣ್ಣ? ಅವಳು ವಿರಹಿತವಾದ ಭಕ್ತರಾರಯ್ಯ ಬಸವಣ್ಣ? ಅವಳ ಮಕ್ಕಳು ನಿನ್ನ ಕೈಯ್ಯಲ್ಲಿ ಆರಾಧಿಸಿಕೊಂಬ ಜಂಗವ ಕಾಣಯ್ಯ ಬಸವಣ್ಣ. ಅವಳ ವಿರಹಿತನಾದ ಚಿಕ್ಕಯ್ಯ ಪ್ರಿಯ ಸಿದ್ಧಲಿಂಗನಲ್ಲದಿಲ್ಲ ಮಾಣು ॥೫೩॥

ಹೀಗೆಂದು ಘಟ್ಟಿವಾಳಯ್ಯಗಳು ನಿರೂಪಿಸಲು, ಅದಕ್ಕೆ ಸಮಯದ ವಾಕ್ಯ. ಘನವ ಸಲಿಸುವನ್ನಬರ ಬಿತ್ತು ಸಹ ಉಭಯ ವಿರಬೇಕು. ಸಾರವ ಸವಿವಲ್ಲಿ ಸಮಯ ಉಳಿಯಿತ್ತು. ಹಾಗರಿಯಬೇಕು ಘಟ್ಟಿವಾಳ್ಯಾ ॥೫೪॥

ಇದಕ್ಕೆ ಘಟ್ಟಿವಾಳಯ್ಯಗಳು ನೀವೆಲ್ಲರು ಘನಲಿಂಗದ ನಿಜವನರಿಯಿರಿ ಎಂದು ನಿರೂಪಿಸಿದ ಪ್ರಸ್ಥಾವದ ವಚನ ॥

ಇಷ್ಟಲಿಂಗವ ತಕ್ಕೊಂಡಲ್ಲಿ ಪೃಷ್ಟವಾಯಿತ್ತೆ ನಿಮಗೆ? ಬಂಧಿಕಾನ ಬಂಧನವ ಮಾಡುವುದು, ಲಿಂಗದೇಹಿಗಳಿಗುಂಟೆ ಅಯ್ಯ? ಜಗದಲ್ಲಿ ಉಂಡು ಉಂಡು ಕೊಂಡಾಡುವವರಿಗೆ ಘನಲಿಂಗದ ಸುದ್ದಿ ಏಕೆ? ಚಿಕ್ಕಯ್ಯ ಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಎಂದೆ ॥೫೫॥

ಮತ್ತಂ॥ ಕೈಯ್ಯಲಿಂಗ ಕೈಯಲ್ಲಿ ಮೆಯ್ಯಲಿಂಗ ಮೆಯ್ಯಲ್ಲಿ ತಲೆಯಲಿಂಗ ತಲೆಯಲ್ಲಿ ಮತ್ತೆ ಹೊಲಬನರಸಲೇತಕ್ಕೆ? ಹೊಲಬುದಪ್ಪಿ ಬಿದ್ದಿರಿ. ಮೂರರ ಬಲೆಯಲ್ಲಿ ಬಲುಹೇತಕೆ? ಸಾಕು ಚಿಕ್ಕಯ್ಯ ಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಎಂದೆ ॥೫೬॥

ಮತ್ತಂ॥ ಅರ್ಥಿಗೆ ಕಟ್ಟಿದ ಲಿಂಗ ಕೈಯ್ಯೊಳಗಾಯಿತ್ತು. ನಿಷ್ಠೆಯವ ಲಿಂಗ ಆರ ಸೊತ್ತಿಗೆ ಸಿಕ್ಕದು. ಆ ಘನಲಿಂಗ ಉಳ್ಳನ್ನಕ್ಕ ನಾ ಜಂಗಮ ನೀವು ಜಂಗುಳಿಗಳು. ಎನಗಾ ಭೀತಿ ಇಲ್ಲ ಚಿಕ್ಕಯ್ಯ ಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಎಂದೆ ॥೫೭॥

ಮತ್ತಂ॥ ಅಂಗವ ಬಂಧಿಸಿದಲ್ಲಿ ನಾ ಸೊಂದುದಿಲ್ಲ. ಅದು ಮಲದೇಹ. ಮಾಯೆಯ ಸೊನ್ಮು. ಲಿಂಗವ ತೆಗದೆನೆಂದಡೆ. ಅದು ಜಗದ ಕರುಹು. ನನ್ನದಲ್ಲ. ಆ ಗುಣ ನಿಮ್ಮ ಸಂದೇಹಕ್ಕೊಳಗಾಯಿತ್ತು. ಎನಗೆ ಉಭಯದ ಹಂಗಿಲ್ಲ. ಚಿಕ್ಕಯ್ಯ ಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಎಂದೆ ॥೫೮॥

ಮತ್ತಂ॥ ಎನಗೆ ಹಳ್ಳದ ಹೊದಕೆ ಶಿವದಾರವಾಗಿ, ಬೆಟ್ಟದ ಗುಂಡೇ ಲಿಂಗವಾಗಿ, ಕಾಡ ಸೊಪ್ಪ ಹಾಕಿದ ಮಡಕೆಯ ಉದಕವೆ ಮಜ್ಜನವಾಗಿ ಪೂಜಿಸುತ್ತಿರ್ದೆ. ಬಸವನ ಮನೆಗೆ ಪೋಹ ವ್ರತಗೇಡಿಗಳ ನೋಡಿ ಚಿಕ್ಕಯ್ಯ ಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಎಂದೆ ॥೫೯॥

ಹೀಗೆಂದು ಘಟ್ಟಿವಾಳಯ್ಯಗಳು ನಿರೂಪಿಸಲು, ಅದಕ್ಕೆ ಸಮಯದ ವಾಕ್ಯ.

ಬಲ್ಲ ವಿರಕ್ತಂಗೆ ಗೆಲ್ಲ ಸೋಲದ ಹೋರಾಟ ಉಂಟೆ? ಒಳಿತು ಹೊಲ್ಲಹವೆಂಬುದು ಭ್ರಾಂತರ ಮಾತು. ಸಮಯಕ್ಕೆ ನೀ ಹಂಗು ॥೪೦

ಇದಕ್ಕೆ ಘಟ್ಟಿವಾಳಯ್ಯಗಳ ಪ್ರತ್ಯುತ್ತರ ॥

ಮುನ್ನವೆ ಆಚಾರಕ್ಕೆ ಹೊರಗು. ನಾನನಾಚಾರಿಯಾದಕಾರಣ ನಿಮ್ಮ ಹಂತವನಲ್ಲ. ಸಮಯಕ್ಕೆ ಹೊರಗು. ಜಗದೊಳು ಎನ್ನಂಕೆ ಎನಗೆ ನಿಮ್ಮ ಸಮಯ. ನಿಮಗೆ ಓಗರವನಿಕ್ಕುವಾತನ ಮನೆಯ ಬಾಗಿಲ ಮುಚ್ಚಿತ್ತು. ಹೋಗಿರಣ್ಣಾ! ಅನಾಚಾರಿಗಳ ಮುಖವ ಸದಾಚಾರಿಗಳು ನೋಡಿ ಕೆಡಬೇಡಾ. ಕೀಳ ಕೆಣಕಲಿಲ್ಲ ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಎಂದೆ. ॥೪೧॥

ಇದಕ್ಕೆ ಸಮಯದ ಮಾತು॥ ಕೇಳಿದಡೆ ದೋಷ ಉಂಟೆ? ಮಾತನಾಡಿದಡೆ ಶಾಪ ಉಂಟೆ? ನಿನ್ನಯ ಅರಿವು ಮಹತ್ತ ಪದಕ್ಕೆ ಇದಿರು ನಿನ್ನ ಅರಿವಿನ ಭೇದ ದುರಾಳಿತನವಾವುದು ಹೇಳಣ್ಣಾ. ॥೪೨॥

ಇದಕ್ಕೆ ಘಟ್ಟಿವಾಳಯ್ಯಗಳ ಪ್ರತ್ಯುತ್ತರ. ॥

ಇರಿವ ಕೈದುವಿಂಗೆ ದಯ ಧರ್ಮದ ಪೊನೆಯುಂಟೆ? ಕಾಳೋರಗನ ದಾಡೆಯಲ್ಲಿ ಅಮೃತದ ಸುಧೆಯುಂಟೆ? ಕೂಟವ ಕೂಡಿ ಸಮಯವೊಂದಲ್ಲಿ ಅಜಾತನ ಬಲ್ಲರೆ ಎನಗೆ ನಿಮ್ಮೊಳಗೇತರವಾತು? ವೇಷಧಾರಿಗಳಲ್ಲಿ ನಿಮ್ಮ ಕೂಟಕ್ಕೆ ಹೊರಗು. ಚಿಕ್ಕಯ್ಯ ಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಎಂದೆ. ॥೪೩॥

ಇದಕ್ಕೆ ಸಮಯದ ವಾಕ್ಯ. ॥

ಅಂಬು ತಾಗಿಹೆನೆಂದಡೆ ಧನುವಿನ ಸಂಗದಿಂದಲ್ಲದೆ ತಾಗದು. ಹಣ್ಣು ಸವಿ ಎಂದಡೆ ವೃಕ್ಷದ ಶಾಖೆಯ ಸಂಗದಿಂದಲ್ಲದೆ ಬೆಳೆಯದು. ಲಿಂಗವ ಸಂತೈಸೆಂದು ಶರಣರ ಸಂಗವ ಬಿಟ್ಟರೆ ಅದು ಎದೆಯಲ್ಲಿ ಸಿಂದ ನಂಜು ಕಾಣಾ ಭಂಗಿತನಾದವನೆ. ॥೪೪॥

ಇದಕ್ಕೆ ಘಟ್ಟಿವಾಳಯ್ಯಗಳ ನಿರೂಪ,

ರೋಗಿಗೆ ಹಾಲು ಸಿಹಿಯಪ್ಪುದೆ? ಗೂಗೆಗೆ ರವಿ ಲೇಸಪ್ಪುದೆ? ಡೋರಂಗೆ ಬೆಳಗು ಗುಣವಪ್ಪುದೆ? ಭವಸಾಗರದ ಸಮಯವಲ್ಲಿದ್ದವರು

ಭಾವನ ಭಾವನನೆತ್ತಬಲ್ಲರು? ಚಿಕ್ಕಯ್ಯ ಪ್ರಿಯ ಸಿದ್ಧಲಿಂಗ ಇಲ್ಲ ಎಂದೆ. ॥೪೫॥

ಇದಕ್ಕೆ ಸಮಯವಾಕ್ಯ॥

ಎಲೆ ಇಲ್ಲದ ವೃಕ್ಷ ಉಲಿಯಬಲ್ಲುದೆ? ಜಲವಿಲ್ಲದ ತಟಾಕ ತಿರಿಗೊಡಂಟೆ? ಶಬ್ದ ಮುಗ್ಧವಾದವಂಗೆ ಸಮಯವ ಸಂಪಾದಿಸುವನ್ನಬರ ಭ್ರಾಂತ ಪರ್ಕಟ ವೃಷ್ಟಿಕವು ಹೊಯಿದಂತೆ ಮರೆದಾಡಬೇಡಾ ಭ್ರಾಂತನಾಗಿ. ॥೪೬॥

ಇದಕ್ಕೆ ಘಟ್ಟಿವಾಳಯ್ಯಗಳ ಪ್ರತ್ಯುತ್ತರ॥

ಉತ್ತರಕ್ಕೆ ನುಡಿವನ್ನಬರ ನಾನು ಚಿತ್ತದ ಕಲೆಯವನಲ್ಲ. ನುಚ್ಚು ಕಕ್ಕೆ ಹೋರುವನ್ನಬರ ಕರಣೇಂದ್ರಿಯದ ಹೊತ್ತದ ಹೊತ್ತದವನಲ್ಲ. ಮತ್ತೆ ಸಮಯದಲ್ಲಿ ಹೊತ್ತು ಹೋರಿಹೆನೆಂದಡೆ ಸಂಸಾರದ ಕತ್ತಲೆಯವನಲ್ಲ. ಎನ್ನ ನಿಶ್ಚಯದ ಗುಂಡು ಎನ್ನ ಬಚ್ಚ ಬಯಲ ಬೆಳಗು ಚಿಕ್ಕಯ್ಯ ಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಎಂದೆ. ॥೪೭॥

ಇಂತು ಆ ಘಟ್ಟಿವಾಳಯ್ಯಗಳು ಆ ಗುಂಡನೆ ತನಗೆ ಬಚ್ಚ ಬಯಲ ಪರಬ್ರಹ್ಮನೆನಲು, ಆದಡೆ ಆ ಲಿಂಗವು ನಿನ್ನ ಕೈಯೊಳಗೇಕೆ ಅಡಗದು ಎಂದ ಸಮಯದ ವಾಕ್ಯ.

ಲಿಂಗವು ನಿನ್ನದಾದಡೆ ಅಂಗೈಯ್ಯೊಳಗೇಕೆ ಅಡಗದು? ನೀ ಮುಂಗ ಸಮಯನಾದಡೆ ಸಂಸಾರದ ಅಂಗದ ಉಲುಹು ಏತಕ್ಕೆ? ಅದು ಲಿಂಗದ ಮುಚ್ಚಲ್ಲ- ಭ್ರಾಂತಯೋಗಿ. ॥೪೮॥

ಹೀಗೆಂದು ಸಮಯ ನುಡಿದು, ಆ ಲಿಂಗವ ಕೊಡಲು, ಅದಕ್ಕೆ ಘಟ್ಟಿವಾಯ್ಯಗಳು ಆ ಗುಂಡನು ತಮ್ಮ ಕರಸ್ಥಲದ ಲಿಂಗದಲ್ಲಿ ಅಡಗಿಸಿಕೊಂಬ ಪ್ರಸ್ಥಾವದ ವಚನ॥

ಲೀಲೆ ಹೊರಗಾದ ಲಿಂಗವೆ ಚಾರಯ್ಯ. ಎನ್ನಂಗಮೊಳಗಾಗು. ಶೃತ ದೃಷ್ಟ ಅನುಮಾನದಲ್ಲಿ ನೋಡುವಂಗೆಲ್ಲಕ್ಕು ಅತೀತವಾಗು. ಆಗೆಂಬುದಕ್ಕೆ ಮುನ್ನವೆ ಆ ಗುಂಡು ಕಾಯದ ಕರಸ್ಥಲದಲ್ಲಿ ನಿರ್ಭಾವವಾಗಿ ಕಾಯವಡಗಿ ಭಾವವೆಂಬ ಭಾವ ಬಯಲಾಯಿತ್ತು, ಚಿಕ್ಕಯ್ಯ ಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಎಂಬುದಕ್ಕೆ ಮುನ್ನವೆ. ॥೪೯॥

ಇಂತು ಆ ಘಟ್ಟಿವಾಳಯ್ಯಗಳು ಆ ಗುಂಡನು ಪರಬ್ರಹ್ಮವೆಂದು ತಮ್ಮ ಕಾಯದ ಕರಸ್ಥಲದಲ್ಲಿ ಅಡಗಿಸಿಕೊಳ್ಳಲು, ಅದ ಕಂಡು, ಪ್ರಭು ದೇವರು, ಕೊಂಡಾಡಿದ ಪ್ರಸ್ಥಾವದ ವಚನ॥

ಅಂಗವ ಮೇಲಣ ಲಿಂಗ ಹಿಂಗಿದಾತನ ಭವಿ ಎಂಬರು. ಅಂಗದ ಮೇಲಣ ಲಿಂಗ ಇಪ್ಪಾತನ ಭಕ್ತನೆಂಬರು. ಅಂಗದೊಳಗೆ ಬೆರಸಿಪ್ಪ ಲಿಂಗವ ಹೊಲಬನರಿಯದೆ ಲಿಂಗವಿಲ್ಲದೆ ಒಂದು ಕ್ಷಣ ಒಂದಂಗ ಸುಳಿ ಮದುಂಟೆ ಜಗದೊಳಗೆ? ಅಂಗದೊಳಗಣ ಲಿಂಗವನು ಹಿಂಗದವರಿಗೆ ಭವಮಾಲೆಯುಂಟು. ಹಿಂಗಿದವರಿಗೆ ಭಾವವಾಲೆ ಇಲ್ಲ ಗುಹೇಶ್ವರಾ ॥೫೦॥

ಇದಕ್ಕೆ ಚನ್ನಬಸವರಾಜದೇವರು ಕೊಂಡಾಡಿದ ಪ್ರಸ್ಥಾವದ ವಚನ॥

ಅಂಗವ ಮೇಲಣ ಲಿಂಗ ಹಿಂಗಿತ್ತೆಂದು ಆತ್ಮಘಾತವ ಮಾಡಬೇಕೆಂಬ ಅಜ್ಞಾನಿಗಳು ಅಂಗವಾವುದು ಲಿಂಗವಾವುದೆಂದವರಿತ್ತಬಲ್ಲರು? ಅಂಗವೆ ಆತ್ಮ ಲಿಂಗವೆ ಸಂವಿತ್ತು. ಈ ಎರಡರ ಸಂಬಂಧ ಸಂಚವ ತಿಳಿಯದೆ ಅಂಗ ಲಿಂಗ ಹಿಂಗಿತ್ತೆಂಬವರಿಗೆ ಪ್ರಾಣಲಿಂಗ ನಾಸ್ತಿ. ಪ್ರಸಾದ ವೆಲ್ಲಯದೊ ಕೂಡಲಸಂಗಮದೇವಯ್ಯ?. ॥೫೧॥

ಮತ್ತಂ॥ಸ್ತೋತ್ರ॥ ಅರಿವರತು ಮರಹು ನಷ್ಟವಾದ ಬಳಿಕ ಕುರುಹಿನ ಬಣ್ಣ ಅಂಗದ ಮೇಲೇಕೊ? ಘಟ್ಟಿವಾಳಂಗೆ ಅರಿವನಾರು ಅರುಹಿಸಿಕೊಂಬವನಾರು? ಬರಿಯ ಬಯಲು ಕಾಣಾ ಕೂಡಲಚನ್ನಸಂಗಮ ನಿಮ್ಮ ಶರಣ ಘಟ್ಟಿವಾಳನಲ್ಲದೆ ನೆರೆ ಅರಿವರಾರೊ? ॥೫೨॥

ಆ ಪ್ರಸ್ಥಾವದೊಳು ಸಿದ್ಧರಾಮಯ್ಯತಂದೆಗಳು ಸೋತ್ರಮಂ ಮಾಡಿದ ವಚನ॥

ಆದಿ ಮಧ್ಯಾಂತರವ ಭೇದಿಸಿದ ಮಹಿಮನು ನಾದಕ್ಕತೀತನು. ಪರಬ್ರಹ್ಮದ ಭೇದಾದಿ ಭೇದದ ಪರತತ್ವ ಮೂಲವೆಯಾದ ಆದಿಗುರು ಘಟ್ಟಿವಾಳಯ್ಯ ಕಪಿಲಸಿದ್ಧಮಲ್ಲಿನಾಥ ॥೫೩॥

ಇಂತು ಪ್ರಭುದೇವರು ಚನ್ನಬಸವರಾಜದೇವರು ಸಿದ್ಧರಾಮಯ್ಯದೇವರು ಘಟ್ಟಿವಾಳಯ್ಯಗಳ ಸ್ತುತಿಸುತ್ತಿರಲು, ಆ ಘಟ್ಟಿವಾಳಯ್ಯಗಳು ಪ್ರಭುದೇವರ ಸ್ತೋತ್ರಮಂ ಮಾಡಿದ ಪ್ರಸ್ಥಾವದ ವಚನ॥

ನೀರೊಳಗೆ ಕಿಚ್ಚಿದ್ದು ನೆಳಲ ಸುಟ್ಟಿತ್ತು. ನೆಳಲ ಸುಟ್ಟು ವಿಭೂತಿಯ ಮಾಡಿಕೊಂಡರೆ ಭೂಮಿ ಸುತ್ತಿತ್ತು. ಆಕಾಶ ಹೊತ್ತಿತ್ತು. ದೇವನ ದೇವತ್ವ ಕೆಟ್ಟಿತ್ತು. ದೇವಿಯರ ಒಗತನ ಮುರಿಯಿತ್ತು. ಹೇಳಬಾರದ ಠಾವಿನಲ್ಲಿ ಕಾಣಬಾರದ ಲಿಂಗ ಮೂರ್ತಿಗೊಂಡರೆ ನೋಡಬಾರದ ಪೂಜೆಯಾಯಿತ್ತು. ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ. ಪ್ರಭುದೇವರ ನಿಲವ ಕಂಡು ಇಲ್ಲ ಇಲ್ಲ ಎನುತಿರ್ದೆನು ॥೫೪॥

ಮತ್ತಂ॥ ಯೋಗದ ಹೊಲಬು ಸಾಧಿಸಬಾರದು. ಯೋಗ ಎಂಟ ರಹೊಲಬಲ್ಲ, ಯೋಗ ಒಂಬತ್ತರ ನಿಲವಲ್ಲ, ಯೋಗವಾರರ ಪರಿಯಲ್ಲ. ಘರಿಯ ಮೇಲಣ ಅಗ್ನಿ ಮುಗಿಲ ಮುಟ್ಟಿದೆ ಇಪ್ಪರೆ ಯೋಗ. ಜ್ಞಾನವ ಕಂಗಳ ಬೆಳಗು ಶಶಿಯ ಮುಟ್ಟಿದವೆಂದರೆ ಘನ ಮನವ ನೊಳಕೊಂಡದು ಯೋಗ ವನುತೆಯರರುವರನು ಪತಿಯೊಮ್ಮೆ ಕೂಡಿ ತಳುವಳಿದಿರಬಲ್ಲಡೆ ಅದು ಯೋಗ. ಘನ ಮಹಿಮ ಪ್ರಭುವಿನ ಸಮರಸವ ಕಂಡು, ಚಿಕ್ಕಯ್ಯ ಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಎನುತಿರ್ದೆನು ॥೫೫॥

ಇಂತು ಘಟ್ಟಿವಾಳಯ್ಯಗಳು ಪ್ರಭುದೇವರ ಸ್ತುತಿಯಿಸಿ ಆ ಪ್ರಭುದೇವರು ತಾವು ಬಸವರಾಜದೇವರು ಚನ್ನಬಸವರಾಜದೇವರು ಸಿದ್ಧರಾಮಯ್ಯದೇವರು ಮಹಾನುಭಾವಗೋಷ್ಠಿಯೊಳಿರುತಿರ್ದು ಮತ್ತೊಂದಾನೊಂದು ದಿನದಲ್ಲಿ ಘಟ್ಟಿವಾಳಯ್ಯಗಳಿಗೆ ಲಿಂಗೈಕ್ಯ ಸಮನಿಸಿ ಆ ಕಲ್ಯಾಣಪಟ್ಟಣದ ಬೀದಿಯಲ್ಲಿ ಲಿಂಗೈಕ್ಯವಾಗಿರಲು, ಅಲ್ಲಿಗೆ ಬಸವರಾಜದೇವರು ಮುಖ್ಯವಾದ ಗಣಂಗಳು ಬಂದು ಅವರ ಭಾಷೆ ಬೀಸರವಾದುದಲಾ ಎಂದು ನೊಂದು ಸಮಾಧಿಕ್ರಿಯೆಯ ಮಾಡಬೇಕೆಂದು ಎಲ್ಲ ಗಣಂಗಳು ಸರ್ವಾಂಗವ ಮುಟ್ಟಿ ಎತ್ತಿಕೊಳಲು, ಅವರು ಸರ್ವಾಂಗವ ಮುಟ್ಟಿದ ಮುನ್ನವೆ ಎಲ್ಲ ಶರಣರ ಹಸ್ತದಲ್ಲಿ ನಿರ್ವಯಲಸ್ಥೈದಲು, ಎಲ್ಲರು ಜೋಡ್ಯಂಬಡುತ್ತಿರೆ ಆ ಪ್ರಸ್ಥಾವದಲ್ಲಿ ಬಸವರಾಜದೇವರು ಆ ಘಟ್ಟಿವಾಳಯ್ಯಗಳ ಸ್ತುತಿಸಿದ ವಚನ. ॥

ಸತ್ತು ಹುಟ್ಟುವನಲ್ಲ. ಸಂದೇಹ ಸೂತಕಿಯಲ್ಲ. ಆಕಾರ ನಿರಾಕಾರನಲ್ಲ ನೋಡಯ್ಯ. ಕಾಯವಂಚಕನಲ್ಲ. ಜೀವವಂಚಕನಲ್ಲ. ನಿರಂತರ ಸಹಜ ನೋಡಯ್ಯ. ಶಂಕೆ ಇಲ್ಲದ ಮಹಿಮನು ಕೂಡಲಸಂಗಮದೇವನ ಶರಣನುಪಮಾತೀತ ನೋಡಯ್ಯ. ॥೫೬॥

ಮತ್ತಂ॥ ಪ್ರಭುದೇವರು ಘಟ್ಟಿವಾಳಯ್ಯಗಳ ಸ್ತುತಿಸಿವ ಪ್ರಸ್ತಾವ
ವಚನ. ॥

ಅರನಕ್ಕುಂಜಿ ವೇಷವ ಹೊತ್ತು ದೇಶವ ತೊಳಲುವ ಹಿರಿಯರ ಗಂ
ಕಾಲವ ಗಂಡ, ಕರ್ಮದ ಗಂಡ, ಲಿಂಗವ ಹಿಡಿದು ಸಾವ ಹಿರಿಯ
ಗಂಡ, ಗುಹೇಶ್ವರ ನಿಮ್ಮ ಶರಣ ಘಟ್ಟಿವಾಳ ಅಲ್ಲಮನ ಅಂತಿಂತೆಂ
ಗಂಡ. ॥೫॥

ಮತ್ತಂ॥ ಆ ಪ್ರಸ್ತಾವದೊಳು ಹಾಡಿ ಹೊಗಳಿವ ಪದಂಗಳು
ರಾಗ ಪೌಳಿ ॥ಪಲ್ಲ॥ ದೇಹ ಗುಣಗಳಳಿದು ಲಿಂಗದೇಹಿಯಾದ ಶರಣನ
ಬಾಹಿರಂಗನ ಬಳಕೆಯ ಮಾಯಾಮೋಹವನ್ನು ಜರಿದನು. ॥ಪ॥

ಭಾವ ಬ್ರಹ್ಮವಾದ ಯತಿಗಿನ್ನಾವ ವೇಷವೇತಕೊ, ದೇಹಲಿಂಗವಾ
ಬಳಿಕಿನ್ನಾವ ಪದಗಳೇತಕೊ. ॥೧॥

ಮಲವ ತೊಳೆಯಲರಿಯದ ಮಲಜಲವ ತೊಳೆವೆನೆಂಬೆಯೋ
ಒಳಗೆ ಹೊರಗೆ ಲಿಂಗವಾಗಿ ತೊಳಲಿ ಬಳಲಲೇತಕೊ. ॥೨॥

ಮುತ್ತು ರತ್ನ ಸಿತಕೆ ಘೃತಕೆ ಮತ್ತೆ ಪೂರ್ವ ಕ್ರಿಯೆಗಳುಂಟೆ
ನಿತ್ಯ ಮುಕ್ತ ಶರಣಗುಂಟೆ ಮತ್ತೆ ಪೂರ್ವಚರಿತವು. ॥೩॥

ಬ್ರಹ್ಮ ವಿಷ್ಣು ರುದ್ರ ಪದದ ಪೇರ್ಮೆಯನ್ನು ಎಣಿಸದ, ನಿರ್ಮಳಾ
ಲಿಂಗದಿ ಸಂಬಂಧಿಸಿದ ಶರಣನು. ॥೪॥

ಅಪ್ರತಿಮನಗಮ್ಯದಲ್ಲಿ ನಿಷ್ಪತಿಯನ್ಯೈದಿದ, ಅಪ್ರಮಾಣ ಗುಹೇಶ್ವರ
ನೊಳಪ್ಪಗಮ್ಯ ಶರಣನು. ॥೫॥

ಆ ಪ್ರಸ್ತಾವದೊಳು ಚನ್ನಬಸವರಾಜದೇವರು ಆ ಘಟ್ಟಿವಾಳಯ್ಯ
ಗಳ ಸ್ತೋತ್ರವಂ ಮಾಡಿದ ಪದಂಗಳು. ॥

ರಾಗದೇಶಿ ॥ಪಲ್ಲ॥ ಭಾವಿಸಿ ನಡೆದಿಹೆನೆಂದರೆ ತಾನಾ ಭಾವದೊಳಗೆ
ತನ್ನೊಳು ಸದ್ಭಾವವು ಭಾವ ಭೇದವಿಲ್ಲದ ಶರಣನ ಸತುಪಥವ ನಾನೆ
ನೆಂಬೆನು. ॥

ಮಾಡುವ ಕ್ರಿಗಳೊಳಗೆ ನಿಃಪಲಿಯಾಗಿ ದೇವ ಕ್ರಿವಿಡಿದ ಕಾರಣ
ಹೆನ್ನ ಭಾವಪಲಿ ಶಿವಾಚಾರವೆ ಜೀವನಾಗಿ ಲಿಂಗದೊಳಗೆ ಬೆರೆಸ
ಲ್ಲಿಡೆ ಯೋಗಿ ॥೧॥

ತದುಗತವಾಗಿ ನಿರಂತರ ನಿಜ ಲಿಂಗದಿ ಪರಮಾನಂದವನೈದಿ
ಮಲ ನಿರುಪಾಧಿಕನಾಗಿಪ್ಪ ಚರಿತದಾಚಾರವ ನಾನೇನೆಂಬೆನು ॥೨॥

ಧ್ಯಾನವೇ ನಿಷ್ಠೆಯವಾಗಿಪ್ಪ ಶರಣನ ಕಾಮಿತ ಭಾವಿತ ಕ್ರಿಗಳು
ಮುಸ್ನವೆ ಲಿಂಗದೊಳವಿರಳವಾಗಿ ಸೀಮೆಯ ನೀಕರಿಸಿರ್ಪನು. ॥೩॥

ಪ್ರಾಣನ ಹಸ್ತದೊಳಗಣ ಲಿಂಗ ಲಿಂಗ ಭಾವ ಹಸ್ತದೊಳಗಣ
ಣಭಾವವೆನ್ನದಿಪ್ಪ ಶರಣನ ಆಚಾರ ವಿಚಾರವೇನೆಂಬೆನು ॥೪॥

ಒಡಲಳಿದು ಒಡಲವಿಡಿದ ಕ್ರಿಯಗಳ ಗಡಣ ವಡಗಿ ನಿರ್ದೇಹ
ಳೆಂಬ ಭಾವವಡೆಗೊಂಡ ನಿಷ್ಕಯಾಚರಣೆ ಕೂಡಲ ಚನ್ನ ಸಂಗ
ಮು ಸತ್ಪಥವು ॥೫॥

ಇತಿ ಶ್ರೀಮತ್ಸಕಲ ಪುರಾತನರೊಳ್ ಪ್ರಭುದೇವರು ಮಹಾನು
ನ ಸದ್ಗೋಷ್ಠಿಯಂ ಮಾಡಿದ ಶೂನ್ಯಸಂಪಾದನೆಯೊಳ್ ಘಟ್ಟಿವಾ
ಳಯ್ಯಗಳ ಸಂಪಾದನೆಗಂ ಪಂಚವಶೋಪದೇಶ ಸಮಾಪ್ತ.

The Vijay College
LIBRARY,
VIJAY COLLEGE,
BIJAPUR.

ಉಡುತಡಿ ಮಹಾದೇವಿಯಕ್ಕಗಳ ಸಂಪಾದನೆ.

(ಷೋಡಶೋಪದೇಶ)

ಕಂದ॥ಪರಮ ನಿರ್ವಾಣದಿಂದಂ। ತರುಣಿಮಹಾದೇವಿಯುಬಂದು ಪ್ರಭುವಿನ ಕರುಣವ। ನಿರುತದಿಂ ಪಡೆದುಶಿವನೊಳು । ಬೆರಸಿದುದಂ ಪೇಳ್ವೆ ಶರಣ ಜನರಿಂಗೊಲವಿಂ॥

ಅದೆಂತೆಂದೊಡಾ ಪ್ರಭುದೇವರು ಬಸವರಾಜದೇವರು ಚಿಕ್ಕದಣ್ಣಯಕರು ಸಿದ್ಧರಾಮಯ್ಯದೇವರು ಘಟ್ಟಿವಾಳಯ್ಯಗಳು ನಿರ್ವಯಲ ಸಮಾಧಿಯನ್ಯೈದುವದಂ ಕಂಡು ಹರುಷಾನಂದ ಶರಧಿಯೊಳು ತೇಂಕಾಡುತ್ತಂ ಮಹಾನುಭಾವಗೋಷ್ಠಿಯಂ ಮಾಡುತ್ತಿರಲು, ಕೆಲ ಬಲದಲ್ಲಿ ಸೊಡ್ಡಳ ಬಾಚರಸರು ಹಡಪದಪ್ಪಣ್ಣಗಳು ಪಡಿಹಾರಿ ಉತ್ತಣ್ಣ ಅಕ್ಕನಾಗಾಯಿಗಳು ಸೋಳಿಗೆಯ ಮಾರಯ್ಯ ಡೋಹರ ಕಕ್ಕಯ್ಯ ಕಿನ್ನರ ಬೊಮ್ಮಣ್ಣ ಕನ್ನಡ ಮಾರಯ್ಯ ಮಿಂಡಮಲ್ಲಿನಾಥ ಕೋಲಶಾಂತಯ್ಯ ಮೊಗವಾಡದ ಕೇಶಿರಾಜದೇವರು ಖಿಂಡೆಯದ ಕೇಶಿರಾಜದೇವರು, ಮುಖ್ಯವಾದ ಅಸಂಖ್ಯಾತ ಮಹಾಗಣಂಗಳೆಲ್ಲರು ಮಹಾನುಭಾವ ಪ್ರಸಂಗಮಂ ಕೇಳಿ ನಿಜತತ್ವದಲ್ಲಿ ಸಮರಸವಾಗಿ, ಪರಮಾನಂದದಲ್ಲಿ ಓಲಾಡುತ್ತಿರಲು, ಇತ್ತಲು ಪರಮೇಶ್ವರನ ನಿರೂಪದಿಂದ ಒಬ್ಬ ರುದ್ರ ಕನ್ನಿಕೆ ಮರ್ತ್ಯದಲ್ಲಿ ಒಗೆದು ಉಡುತಡೆಯ ಮಹದೇವಿಯಕ್ಕನೆಂಬ ನಾಮಮಂ ಧರಿಸಿ, ಲಿಂಗಧಾರಣವಾಗಲೊಲ್ಲೆವೆಂದ ಭವಿಯ ಸೋಂಕದೆ ಅಂಗ ಸಂಗಮಂ ತೊರೆದು. ಲಿಂಗಸಂಗದೊಳು ಅವಿರಳ ಸಂಗಿಯಾಗಿ, ತನ್ನ ದಿವ್ಯ ರೂಪ ಲಾವಣ್ಯವನೆಡೆಗೊಂಡು, ಷೋಡಶ ಪ್ರಾಯದ ಯೌವ್ವನದ ಸುಖದ ಸುಗ್ಗಿ ಶಿವನೊಳ್ಪರವಶವನ್ಯೈದಿ ಸರ್ವ ಕರಣಂಗಳ ಅರುವಿಂಗಾಹುತಿಯನಿಕ್ಕಿ ದಿಗಂಬರದುಡಿಗೆಯನುಟ್ಟು ತನ್ನ ಕೇಶವೆಂಬಂಬರವ ಮುಸುಕಿಟ್ಟು ಕರಸ್ಥಲದೊಳಗಿಪ್ಪ ಇಷ್ಟಲಿಂಗದೊಳು ದೃಷ್ಟಿ ನಟ್ಟು ಮನಮುಟ್ಟಿ ಭಾವ ಕರಂಗೊಂಡು ಲೌಕಿಕ ಲಜ್ಜಾಭಾವಮಂ ತೊರೆದು ಭವಸಾಗರಮಂ ದಾಂಟಿ ಚನ್ನಮಲ್ಲಿಕಾರ್ಜುನನ ವಿಕಳಾವಸ್ಥೆಯೊಳ್ ತನ್ನ ಮರೆದು ಮಹಾವೈರಾಗ್ಯಮಂ ಬೀರುತ್ತ ಕರುಣರಸಮಂ ಹೀರುತ್ತ ನಿಶ್ಚಲಬುದ್ಧಿಯನೆಡೆಗೊಂಡು ಭಕ್ತಿಯ ಭಾಗ್ಯವನೆಸಪ ಮುಕ್ತಿಯ ತವರ್ಮನೆ ಎನಿಪ ಶಿವಭಾವ ಸಂಪನ್ನೆ ಪ್ರಸಾದದ

ಮೂರುವೆ ತತ್ವಶಿಖಾಮಣಿ, ಪುಣ್ಯದ ಪುಂಜ ನೈಷ್ಠೆಯ ಕಣಿ, ಸತ್ಯದ ಬನ, ಶಾಂತಿಯ ನಿಧಿ, ಚಿದಂಬರ ಸಂಯುತೆ, ಸ್ವಾನುಭಾವದ ಸಾಗರ, ಪದ ನಿವಾಸೆ, ಎನಿಪ ಮಹದೇವಿಯಕ್ಕಗಳು ಶಿವ ಸುಖಾಳಾಪಂಗೈವುತ್ತ ಶ್ವೇತ ಮುಕ್ತಾಂಗನೆಯ ಸುಳುಹು ದಿಟ ದಿಟವೆನಿಸಿ ಸಕಲ ಲೋಕಂ ಪಾವನವ ಮಾಡುತ್ತ, ಮುಟ್ಟಿದುದು ಪರುಷ, ಮೆಟ್ಟಿದ ಧರೆ ಪಾವನ, ನೋಡಿತ್ತಿಲ್ಲ ಪವಿತ್ರ. ನುಡಿದುದೆಲ್ಲ ಶಿವತತ್ವ. ನಡದುದೆಲ್ಲ ಶಿವಮಾರ್ಗ ನಿಮುದೆಲ್ಲ ದೇವಸಭೆಯಾಗಿ, ಸಕಲ ಕ್ಷೇತ್ರಂಗಳಂ ಪಾವನವ ಮಾಡುತ್ತ ನ್ನ ಕೇಳ್ದು ಕಂಡು ಕೈಮುಗಿದ ಸಕಲ ಜನಂಗಳೆಲ್ಲರಂ ಕೃತಾರ್ಥರಂ ಮಾಡುತ್ತ ಬಪ್ಪಾಗಳು, ಇತ್ತ ಬಸವಣ್ಣ, ಚನ್ನಬಸವಣ್ಣ ಪ್ರಭುದೇವರು ಮುಖ್ಯವಾದ ಅಸಂಖ್ಯಾತರ ಮಧ್ಯದಲ್ಲಿ ಆ ಬಸವರಾಜದೇವರು ಪ್ರಭುದೇವರೊಡನೆ ಎನ್ನ ಹೆತ್ತ ತಾಯಿ ಅಕ್ಕಮಹಾದೇವಿಯರು ವಿರಕ್ತಿಯಿಂದ ನಗಂಬರಿಯಾಗಿ ಕಾಮಾವಿಯಾಗಿ ಬರುತ್ತಿರ್ದಪಳೆಂದು ವಿನ್ನೈಸಿ, ಪ್ರಭುದೇವರು ಸಕಲ ಪ್ರಮಥರ್ಗೆ ಕಾಮಸಂಹಾರಿ ಎಂಬುದನ್ನು ಪ್ರತ್ಯಕ್ಷನ ತೋರಬೇಕೆಂದು ಭಕ್ತಿವಿಸ್ತಾರದಿಂದ ಕಿನ್ನರಯ್ಯಗಳಂ ಒಪ್ಪಿ ಕಳುಹಲು ಆ ಪರಮಜ್ಞಾನಿಯಪ್ಪ ಕಿನ್ನರಯ್ಯಗಳು ದಳ ದಳನೆ ಇದಿರಿನಲ್ಲಿ ಬಂದು ಕಂಡು ಆ ಮಹಾದೇವಿಯಕ್ಕಗಳ ಒರೆದು ನೋಡುವ ಪ್ರಸ್ಥಾವದ ವಚನ॥

ಕಾಯದಲ್ಲಿ ಕಳವಳವಿರಲು, ಪ್ರಾಣದಲ್ಲಿ ಮಾಯೆ ಇರಲು, ಇದೇ ನ ಮನ, ಇದೇತರ ನಿರ್ವಾಣ, ಮಹಾಲಿಂಗ ತ್ರಿಪುರಾಂತಕ ನಿನ್ನ ಸಂಸಾರಿ ಎಂಬನಲ್ಲದೆ ಸಜ್ಜನೆ ಎಂದು ಕೈವಿಡಿದನಲ್ಲ ಕೇಳಾ ಮರುಳೆ. ॥೧॥

ಮತ್ತಂ॥ ಆ ಕಿನ್ನರಯ್ಯಗಳು ಭಕ್ತಿಭಾವದಿಂದೆ ಸರ್ವಾಂಗಮಂ ಪರೀಕ್ಷಿಸಿ ನೋಡಲು ಆ ಮಹಾದೇವಿಯಕ್ಕಗಳು ತಮ್ಮಂತರಂಗವ ಜ್ಞಾನಾಗ್ನಿಯೊಳ್ ಕಾಮನಂ ಸುಟ್ಟು, ಭಸ್ಮಮಂ ಮಾಡಿ ತೋರಿದ ಪ್ರಸ್ಥಾವದ ವಚನ. ॥

ಅಂಗವ ಭಂಗವ ಲಿಂಗಸುಖದಿಂದೆ ಗೆಲಿದೆ. ಮನದ ಭಂಗವ ಪರಿವಿನ ಮುಖದಿಂದೆ ಗೆಲಿದೆ. ಜೀವದ ಭಂಗವ ಶಿವಾನುಭಾವದಿಂ ಗೆಲಿದೆ. ಕರಣದ ಕತ್ತಲೆಯ ಬೆಳಗನುಟ್ಟು ಗೆಲಿದೆ. ಜವ್ವನದ ಹೊರಮಿಂಚಿನಲ್ಲಿ ನಮ್ಮ ಕಣ್ಣಿಂಗೆ ತೋರುವ ಕಾಮನ ಸುಟ್ಟುರುಹಿದ ಭಸ್ಮವ ನೋಡಯ್ಯ. ಚನ್ನಮಲ್ಲಿಕಾರ್ಜುನ ಕಾಮನ ಕೊಂದು ಮನಸಿಜನಾಗುಹಿದರೆ ಮನದ ತಲೆಯ ಬರಹವ ತೊಡೆದನು. ॥೨॥

ಇಂತು ಕಾಮನ ಸುಟ್ಟು ಭಸ್ಮಮಂ ಮಾಡಿ ಎನಗೆ ಲಿಂಗವಿ
ಪರುಷ ನೀನೆ ಎನಗೆ ಒಡಹುಟ್ಟಿದನೆಂದು ನುಡಿವ ಪ್ರಸ್ಥಾವದ ವಚನ.॥

ಎನ್ನಂತೆ ಪುಣ್ಯಂಗೈದವರುಂಟಿ? ಎನ್ನಂತೆ ಭಾಗ್ಯಂಗೆಯ್ದವರುಂಟಿ?
ಕಿನ್ನರನಂತಪ್ಪ ಸೋದರ ಎನಗೆ. ಏಳೇಳು ಜನ್ಮದಲಿ ಶಿವಭಕ್ತರಿ ಬಂಧು
ನಳೆನಗೆ. ಚನ್ನಮಲ್ಲಿಕಾರ್ಜುನನಂತಪ್ಪ ಗಂಡ ನೋಡಾ ಎನಗೆ. ॥೩॥

ಹೀಗೆಂದು ಆ ಮಹಾದೇವಿಯಕ್ಕಗಳು ಆ ಕಿನ್ನರಯ್ಯಗಳಂ ಬೀಳ್ಕೊಂಡು
ಕಲ್ಯಾಣದತ್ತಲಭಿಮುಖವಾಗಿ ನಡೆತಂದು ತತ್ಪುರಮಂ ಕಂಡ ಪ್ರಸ್ಥಾವದ
ವಚನ.॥

ಕಲ್ಯಾಣವೆಂಬುದಿನ್ನಾರಿಗು ಹೊಗಬಾರದು. ಅಸಾಧ್ಯವಯ್ಯ! ಅಸೆ
ಆವಿಷಯನಳಿದವಂಗಲ್ಲದೆ ಕಲ್ಯಾಣದತ್ತಲಡಿ ಇಡಬಾರದು. ಒಳಹೊ
ರಗು ಶುದ್ಧವಾದಪರಿಗಲ್ಲದೆ ಕಲ್ಯಾಣವ ಹೊಗಬಾರದು. ನಾನೆಂಬುದ
ಹರಿದವಂಗಲ್ಲದೆ ಕಲ್ಯಾಣವ ಹೊಗಬಾರದು. ಒಳಗೆ ತಿಳಿದು ಚನ್ನಮ
ಲ್ಲಿಕಾರ್ಜುನಂಗೊಲಿದು ಉಭಯ ಲಜ್ಜೆಯಳಿದೆನಾಗಿ ಕಲ್ಯಾಣವ ಕಂಡು
ನಮೋ ನಮೋ ಎನುತಿರ್ದೆನು. ॥೪॥

ಇಂತು ಕಲ್ಯಾಣಮಂ ಕಂಡು ಒಳಪೊಕ್ಕ ಬರುತಿಪ್ಪಾಗಳು ಬಸ
ವರಾಜದೇವರ ಮಹಾತ್ಮೆಯಂ ಕೊಂಡಾಡುತ್ತಿರ್ದ ಪ್ರಸ್ಥಾವದ ವಚನ.॥

ಅಯ್ಯ ನಿಮ್ಮ ಶರಣರು ಮೆಟ್ಟಿದ ಧರೆ ಪಾವನವಯ್ಯ. ಅಯ್ಯ
ನಿಮ್ಮ ಶರಣರು ಇಪ್ಪ ಪುರವೆ ಕೈಲಾಸವಯ್ಯ! ಅಯ್ಯ ನಿಮ್ಮ ಶರಣರು
ನಿಂದುದೆ ನಿಜವಾಸವಯ್ಯ! ಚನ್ನಮಲ್ಲಿಕಾರ್ಜುನಯ್ಯ ನಿಮ್ಮ ಶರಣ ಬಸ
ವಣ್ಣನಿದ್ದ ಕ್ಷೇತ್ರ ಅವಿಮುಕ್ತ ಕ್ಷೇತ್ರವಾಗಿ ಆನು ಬಸವಣ್ಣನ ಶ್ರೀಪಾ
ದಕ್ಕೆ ನಮೋ ನಮೋ ಎನುತಿರ್ದೆನು. ॥೫॥

ಇಂತು ಬಸವರಾಜದೇವರ ಮಹಾತ್ಮೆಯಂ ಕೊಂಡಾಡುತ್ತ ಬಂದು
ಆ ಬಸವರಾಜದೇವರ ನಿಜವಾಸಮಂ ಪೊಕ್ಕು ಪ್ರಭುದೇವರು ಮುಖ್ಯ
ವಾದ ಅಸಂಖ್ಯಾತ ಮಹಾಗಣಂಗಳೊಳು ಪರಮಾನಂದ ಸಂಗಿಯಾಗಿಪ್ಪ
ಆ ಸಂಗನಬಸವಣ್ಣನ ಶ್ರೀಮೂರ್ತಿಯನು ಆ ಮಹಾದೇವಿಯಕ್ಕಗಳು
ಕಂಡ ಪ್ರಸ್ಥಾವದ ವಚನ.॥

ಅರಸಿ ತೊಳಲಿದರಿಲ್ಲ. ಬಯಸಿ ಹೊಕ್ಕರಿಲ್ಲ. ತಪಸ್ಸು ಮಾಡಿದರಿಲ್ಲ,
ಜಪ ತನ್ನ ಮಹಾ ಕಾಲಕ್ಕಲ್ಲದೆ ಸಾಧ್ಯವಾಗದು. ಶಿವನೊಲಿವಲ್ಲದೆ

ಕೈಗೂಡದು. ಚನ್ನಮಲ್ಲಿಕಾರ್ಜುನನೆನಗೊಲಿದನಾಗಿ ನಾನು ಸಂಗನಬಸವ
ಣ್ಣನ ಶ್ರೀಪಾದವ ಕಂಡು ಬದುಕಿದೆನು. ॥೬॥

ಮತ್ತಂ॥ ಅಯ್ಯ ನಿಮ್ಮ ಸಜ್ಜನ ಸದಾಚಾರವ ಕಂಡೆನಾಗಿ ಎನ್ನ
ಕಂಗಳ ಪಟಲ ಹರಿಯಿತ್ತಿಂದು. ಅಯ್ಯ ನಿಮ್ಮ ಸಜ್ಜನ ಸದ್ಭಾವರ ಶ್ರೀಪಾದ
ಕ್ಕೆರಗಿದೆನಾಗಿ ಎನ್ನ ಹಣೆಯ ಲಿಖಿತ ತೊಡೆಯಿತ್ತಿಂದು. ಚನ್ನಮಲ್ಲಿಕಾ
ರ್ಜುನ ನಿಮ್ಮ ಶರಣ ಸಂಗನಬಸವಣ್ಣನ ಪಾದವ ಕಂಡು ಮಿಗೆ ಮಿಗೆ
ನಮೋ ನಮೋ ಎನುತಿರ್ದೆನು. ॥೭॥

ಇಂತೀ ಮಹಾದೇವಿಯಕ್ಕಗಳು ಬಸವರಾಜದೇವರ ಶ್ರೀಪಾದಮಂ
ದರ್ಶನವಾಗಿ, ನಮಸ್ಕರಿಸಿ ಕೈಮುಗಿದು, ನಿಂದಿರಲು, ಆ ಪ್ರಸ್ಥಾವದೊಳು
ಬಸವರಾಜದೇವರು ಮಹದೇವಿಯಕ್ಕನಂ ಕಂಡು, ಪ್ರಭುದೇವರಿಗೆ ತೋರಿ
ನುಡಿದ ಪ್ರಸ್ಥಾವದ ವಚನ.॥

ಕಾಯದ ಲಜ್ಜೆಯ ಕಲ್ಪಿತವ ಕಳೆದು ಜೀವದ ಲಜ್ಜೆಯ ನೋಹ
ವನಳಿದು, ಮನದ ಲಜ್ಜೆಯ ನೆನಹು ಸುಟ್ಟು ಭಾವದ ಕೂಟ ಬತ್ತಲೆ
ಎಂದರಿದು, ತನಕದ ಸ್ನೇಹ ವ್ಯವಹಾರಕ್ಕೆ ಹೊಗದು. ಕೂಡಲಸಂಗಮ
ದೇವಯ್ಯ ಎನ್ನ ಹೆತ್ತತಾಯಿ ಮಹಾದೇವಿಯಕ್ಕನ ನಿಲವ ನೋಡಯ್ಯ
ಪ್ರಭುವೆ. ॥೮॥

ಪುತ್ತಂ॥ ರೂಹಿಲ್ಲದಂಗೆ ಒಲಿದವರಿಗೆ ತನುವಿನ ಹಂಗುಂಟೆ? ಮನ
ವಿಲ್ಲದವರಿಗೆ ಮಚ್ಚಿದವರಿಗೆ ಅಭಿಮಾನದ ಹಂಗುಂಟೆ? ದಿಗಂಬರಗೆ ಒಲಿ
ದವರಿಗೆ ಕೌಪೀನದ ಹಂಗುಂಟೆ? ಕೂಡಲಸಂಗಮದೇವಯ್ಯ ಮಹದೇ
ವಿಯಕ್ಕನೆಂಬ ಭಕ್ತಿಗೆ ಆವ ಹೊರೆಯು ಇಲ್ಲ ನೋಡಾ ಪ್ರಭುವೆ. ॥೯॥

ಹೀಗೆಂದು ಬಸವರಾಜದೇವರು ಪ್ರಭುದೇವರಿಗೆ ಮಹದೇವಿಯಕ್ಕನ
ನಿಲವನೊರೆದೊರೆದು, ಹೇಳಿ ಹಿಗ್ಗಿ ತೋರಲು, ಆ ಪ್ರಭುದೇವರು ಮಹ
ದೇವಿಯಕ್ಕನ ಅನುಭವ ಸುಖ ಮುಖದಿಂ ನುಡಿವ ಪ್ರಸ್ಥಾವದ ವಚನ॥

ಆವ ಮಾವನ ಯೌವ್ವನವ ನೋಳ್ಕೊಂಡು, ಸತಿ ನೀನು ಇತ್ತಲೇತಕ್ಕೆ
ಬಂದೆಯಮ್ಮ? ಸತಿ ಎಂದರೆ ಮುನಿವರು ಎಮ್ಮ ಶರಣರು. ನಿನ್ನ ಪತಿಯ
ಕಾರುಣ ಹೇಳಿವರೆ ಬಂದುಕ್ಕಿಸು ಇಲ್ಲದಿರೆ ತೊಲಗು ತಾಯಿ ನಮ್ಮ
ಗುಹೇಶ್ವರನ ಶರಣರಲ್ಲಿ ಸಂಗಸುಖ ಸನ್ನಿಹಿತವ ಬಯಸುವರೆ ನಿನ್ನ
ಪತಿಯಾರೆಂಬುದು ಹೇಳಾ ಎಲೆ ಅಮ್ಮಾ. ॥೧೦॥

ಮತ್ತಂ॥ಕಾಯ ಸತಿ ಎಂದು ಹೇಳಿ ಕಳಿದೆ. ವಾಯದ ಮನ ಮಾಯಿ ಎಂದು ಹೇಸಿ ಬಿಟ್ಟೆ. ವಾಯುದ ಸತಿ ಎಂಬ ಸಂದೇಹವೆನುಗೇಕೆ? ಸತಿಯರ ಗೋಷ್ಠಿ ವಿಷ ಕಾಣವ್ವ ಗುಹೇಶ್ವರ ಲಿಂಗದಲ್ಲಿ ನಿನ್ನ ಪತಿಯ ಕುರುಹ ಹೇಳಾ ಎಲೆ ಅವ್ವಾ. ॥೧೧॥

ಹೀಗೆಂದು ಪ್ರಭುದೇವರು ಮಹದೇವಿಯಕ್ಕಗಳ ಬೆಸಗೊಳ್ಳಲು,

ಆ ಮಹಾದೇವಿಯಕ್ಕಗಳು ತನ್ನ ಪತಿಯ ಕುರುಹ ಬಿನ್ನಹಮಂ ಮಾಡುವ ಪ್ರಸ್ಥಾವದ ವಚನ. ॥

ಹರನೆ ನೀನೆನಗೆ ಗಂಡನಾಗಬೇಕೆಂದು ಅನಂತ ಕಾಲ ತಪಸಿದಿ ನೋಡಾ! ಹಸೆಯ ಮೇಲಣ ಮಾತ ಬೆಸಗೊಳಲಟ್ಟಿದರೆ, ಶಶಿಧರನೆ ಹತ್ತಿರ ಕಳುಹಿದರಮ್ಮವರು. ಭಸ್ಮವನೆ ಹೂಸಿ ಕಂಕಣವನೆ ಕಟ್ಟಿ ಚನ್ನಮಲ್ಲಿಕಾರ್ಜುನ ತನಗೆ ನಾನಾಗಬೇಕೆಂದು. ॥೧೨॥

ಮತ್ತಂ॥ ಪಚ್ಚೆಯದ ನೆಲಗಟ್ಟು, ಕನಕದ ತೋರಣ, ವಜ್ರದ ಕಂಭ, ಪವಳದ ಚಪ್ಪರವಿಕ್ಕಿ, ಮದುವೆಯ ಮಾಡಿದರಿಮ್ಮವರನ್ನ ಮದುವೆಯಮಾಡಿದರು. ಕಂಕಣ ಕೈದಾರಿ ಸ್ಥಿಕಸೇಸೆಯನಿಕ್ಕಿ ಚನ್ನಮಲ್ಲಿಕಾರ್ಜುನನೆಂಬ ಗಂಡಗೆನ್ನ ಮದುವೆಯ ಮಾಡಿದರು. ॥೧೩॥

ಮತ್ತಂ॥ ಗುರುವೇ ತೆತ್ತಿಗನಾದ, ಲಿಂಗವೆ ಮದನಳಿಗನಾದ, ನಾನೆ ಮದವಳಿಗೆಯಾಪೆನು. ಈ ಭುವನವೆಲ್ಲರಿಯಲು ಅಸಂಖ್ಯಾತರೆನಗೆ ತಾಯಿ ತಂದೆಗಳು. ಕೂಟ್ಟರು ಪ್ರಭುವಿನ ಮನೆಗೆ ನಿರ್ದೈವವಪ್ಪ ವರನ ನೋಡಿ. ಇದು ಕಾರಣ ಚನ್ನಮಲ್ಲಿಕಾರ್ಜುನ ಗಂಡನೆನಗೆ ಮಿಕ್ಕಿನ ಲೋಕವ ಗಂಡರೆನಗೆ ಸಂಬಂಧವಿಲ್ಲವಯ್ಯ ಪ್ರಭುವೆ. ॥೧೪॥

ಹೀಗೆಂದು ಮಹದೇವಿಯಕ್ಕಗಳು ತಮ್ಮ ಪತಿಯ ಕುರುಹ ಹೇಳಲು, ಆದರೆ ನೀನು ಕೌಶಿಕನೆಂಬ ಭವಿಯ ಮೇಲೆ ಲಿಂಗಧಾರಣವಾಗದ ತಪ್ಪ ಹೊರಿಸಿ ನಿರ್ವಾಣವಾಗಿ ಬಾಹಲ್ಲಿ ಕೇಶ ಮರೆಯಾದರೆ ಅಭಿಮಾನ ಪರಿಯದೆಂದು, ನಿರೂಪಿಸಿದ ಪ್ರಸ್ಥಾವದ ವಚನ॥

ತಪ್ಪ ಹೊರಿಸಿ ಹೊರಟಿನೆಂಬುದು ಸತ್ಯವೆ? ತನು ಸಿರಿಯನಳಿದು ನಿರ್ವಾಣವಾದಲ್ಲಿ ಮನದ ಭ್ರಾಂತು ನಿಶ್ಚಯವಾಗದು. ಕೇಶವೆಂಬ ಸೀರೆಯ

ಲಿಂಗಕ್ಕೆ ಮರೆಯಾಯಿತ್ತು. ಜಸಪೂನನೆಂತು ಹರಿಯಿತ್ತು. ಅದು ಗುಹೇಶ್ವರಲಿಂಗಕ್ಕೆ ಸಲ್ಲದವೇಷ. ॥೧೫॥

ಇದಕ್ಕೆ ಮಹದೇವಿಯಕ್ಕಗಳ ಬಿನ್ನಹ.

ಕಾಯ ಕರ್ತನೆ ಕಂದಿದರೇನಯ್ಯ? ಕಾಯ ವಿಕ್ರಿಸೆ ಮುಂಚಿದರೇನಯ್ಯ? ಅಂತರಂಗ ಶುದ್ಧವಾದ ಬಳಿಕ ಚನ್ನಮಲ್ಲಿಕಾರ್ಜುನ ಲಿಂಗವು ಒಲಿದ ಕಾಯವು ಹೇಗಿದ್ದಡೇನಯ್ಯ. ॥೧೬॥

ಇದಕ್ಕೆ ಪ್ರಭುದೇವರು ಕೊಟ್ಟ ಪ್ರತ್ಯುತ್ತರ॥

ದೇವನೊಲಿಯದೆ ನೀನೊಲಿಸಿದೆನೆಂಬುದು ಅದಾವುದಕ್ಕೆ? ಭಾವ ಶುದ್ಧವಾದಲ್ಲಿ ಸೀರೆಯನಳಿದು ಕೂದಿಲ ಮರೆಮಾಡಲೀತಕ್ಕೆ? ಅದು ಅಂತರಂಗದ ಸಾಚಿಕೆ. ಬಾಹ್ಯದಲ್ಲಿ ತೋರಿತ್ತು. ಅದು ಗುಹೇಶ್ವರಲಿಂಗಕ್ಕೆ ಒಲಿವ ರಸವಲ್ಲ. ॥೧೭॥

ಇದಕ್ಕೆ ಮಹದೇವಿಯಕ್ಕಗಳ ಬಿನ್ನಹ॥

ಫಲ ಪಕ್ವವಾದಲ್ಲದೆ ಹೊರಗಣ ಸಿಪ್ಪೆ ಒಪ್ಪಗೆಡದು. ಕಾಮನ ಮುದ್ರೆಯ ಕಂಡು ನಿಮಗೆ ನೋವಾದಿತ್ತೆಂದು ಆ ಭಾವದಿಂದೆ ಮುಚ್ಚಿದೆ. ಇದಕ್ಕೆ ನೋಪೇಕೆ? ಕಾಡದಿರಣ್ಣಾ ಚನ್ನಮಲ್ಲಿಕಾರ್ಜುನ ದೇವರ ದೇವನ ಒಳಗಾವವಳಾ. ॥೧೮॥

ಇದಕ್ಕೆ ಪ್ರಭುದೇವರು ನಿರೂಪಿಸಿದ ವಚನ. ॥

ನೀ ದೇವರೊಳಗೋ ದೇವರು ನಿನ್ನೊಳಗೋ, ಎಂಬ ತಾವನರಿಯೆ. ಸಿಪ್ಪೆ ಒಪ್ಪಗೆಟ್ಟಾಗ, ಹಣ್ಣಿನ ರಸ ಕೊಳಕಾಯಿತ್ತು. ಅದು ಗುಹೇಶ್ವರಲಿಂಗ ಒಪ್ಪವವಾತು. ॥೧೯॥

ಇದಕ್ಕೆ ಮಹದೇವಿಯಕ್ಕಗಳ ಬಿನ್ನಹ. ॥

ಗುಣದೋಷನ ಸಂಸಾದನೆಯ ಮಾಡುವನಕ್ಕರ ಕಾಮುದ ಒಡಲು, ಕ್ರೋಧದ ಗೊತ್ತು. ಲೋಭದ ಇಕ್ಕೆ, ಮೋಹದ ಮುಂದಿರ. ಆ ಭಾವವರತ ನಿಮ್ಮ ಚನ್ನಮಲ್ಲಿಕಾರ್ಜುನನ ಕೇಳುವದಕ್ಕೆ ಇಂಬಿಲ್ಲ ಎಲೆ ಅಣ್ಣಗಳಿರಾ. ॥೨೦॥

ಇದಕ್ಕೆ ಪ್ರಭುದೇವರು ಕೊಟ್ಟ ಪ್ರತ್ಯುತ್ತರ॥

ಕಾಮವಿಂದ ಖಂಡ, ಕ್ರೋಧದಿಂದ ಅಸ್ತಿ, ಲೋಭದಿಂದ ಸಕಲ ವಿಷಯಂಗಳು, ಮೋಹದಿಂದೆ ನೋಡಿಹೆನೆಂಬುದೆಲ್ಲವು ಕಾಮನ ಬಲಿಯೊಳಗು, ಕಾಮನ ಗೆವ್ವ ತಾವಾವುದು ಹೇಳಾಗುಹೇಶ್ವರಲಿಂಗಕ್ಕೆ? ॥೨೧॥

ಇದಕ್ಕೆ ಮಹಾದೇವಿಯಕ್ಕಗಳ ಬಿನ್ನಹ ॥

ಕೆಂಡದ ಶ್ರವದಂತೆ, ಸೂತ್ರ ತಪ್ಪಿದ ಜೊಂಬೆಯಂತೆ ಜಲವರತ ತಪ್ಪಿದ ಕದಂತೆ ಬೆಂದ ನುಲಿಯಂತೆ, ಮತ್ತೆ ಹಿಂದಣಹಂಗುಂಟೆ? ಅಣ್ಣಾ ಚನ್ನಮಲ್ಲಿಕಾರ್ಜುನನಂಗವೆ ಆಶ್ರಯವಾದವಳಿಗೆ? ॥೨೨॥

ಇಂತು ಮಹಾದೇವಿಯಕ್ಕಗಳು ನಾನು ನಿಃಕಾಮಿಯಾಗಿ ನಿರಾಕಾರ ಬ್ರಹ್ಮವನೆ ಕೈವಿಡಿದೆನೆಂದು, ನಿರೂಪಿಸುವ ಪ್ರಸ್ಥಾವದ ವಚನ॥

ಸಾವಿಲ್ಲದ ಕೇಡಿಲ್ಲದ, ರೂಹಿಲ್ಲದ ಚಲುವಂಗೆ, ಭವವಿಲ್ಲದ ಭಯವಿಲ್ಲದ ನಿರ್ಭಯದ ಚಲುವಂಗೆ ನಾನೊಲಿದೆನಯ್ಯ. ಚನ್ನಮಲ್ಲಿಕಾರ್ಜುನ ಗಂಡ ನೆನಗೆ ಮಿಕ್ಕಿನ ಲೋಕದ ಗಂಡರೆನಗೆ ಸಂಬಂಧವಿಲ್ಲವಯ್ಯ. ॥೨೩॥

ಹೀಗೆಂದು ಮಹಾದೇವಿಯಕ್ಕಗಳು ಬಿನ್ನೈಸಲು, ಇದಕ್ಕೆ ಪ್ರಭುದೇವರು ಆ ಉತ್ತರಮುಂ ಖಂಡಿಸಿ, ನುಡಿದ ಪ್ರಸ್ಥಾವದ ವಚನ॥

ರೂಹಿಂಗೆ ಕೇಡುಂಟು. ನಿರೂಪಿಂಗೆ ಕೇಡಿಲ್ಲ. ರೂಪು ನಿರೂಪನ ನೊಡಗೂಡುವ ಪರಿ ಎಂತು ಹೇಳಾ? ಆ ಸಂಬಂಧ ಸಂಬಂಧವಾಗಿದೆ ದೇಹ. ಇಂದ್ರಿಯವೆಂಬ ಜಾತಿಸೂತಕವಿರಲು, ಗುಹೇಶ್ವರಲಿಂಗವ ಮುಟ್ಟಬಾರದು ಕೇಳವ್ವಾ. ॥೨೪॥

ಹೀಗೆಂದು ಪ್ರಭುದೇವರು ನಿರೂಪಿಸಲು, ಆ ಮಹಾದೇವಿಯಕ್ಕಗಳು ಬಿನ್ನೈಸುವ ಪ್ರಸ್ಥಾವದ ವಚನ. ॥

ಹಾವಿನ ಹಲ್ಲ ಕಳೆದು, ಹಾವನಾಡಿಸಬಲ್ಲಡೆ ಹಾವಿನ ಸಂಗವೇ ಲೇಸು ಕಂಡಯ್ಯ. ಕಾಯದ ಸಂಗವ ವಿವರಿಸಬಲ್ಲಡೆ ಕಾಯದ ಸಂಗವೆ ಲೇಸು ಕಂಡಯ್ಯ. ತಾಯಿ ರಕ್ಕಸಿಯಾದಂತೆ ಕಾಯ ವಿಕಾರವು ಚನ್ನಮಲ್ಲಿಕಾರ್ಜುನಯ್ಯ ನೀನೊಲಿದವರು ಕಾಯಗೊಂಡಿದ್ದರೆನಬೇಡಾ. ॥೨೫॥

ಈ ಉತ್ತರಕ್ಕೆ ಪ್ರಭುದೇವರ ವಚನ. ॥

ತನು ಗುಣ ವಿವರಿಸಿಹೆನೆಂದರೆ ಮನ ಶುದ್ಧವಾಗಬೇಕು. ಮನ ಗುಣ ವಿವರಿಸಿಹೆನೆಂದರೆ ಇಂದ್ರಿಯ ಶುದ್ಧವಾಗಬೇಕು. ತನು ಮನ ಇಂದ್ರಿಯಂಗಳು ಶುದ್ಧ ಸುಯಿಧಾನವಾಗಿ ಲಿಂಗಮುಖಕ್ಕೆ ಪೇಳ್ವವನಲ್ಲದೆ ಗುಹೇಶ್ವರಲಿಂಗವ ಬಿಸಗೊಳಬಾರದು ಕೇಳಾ ತಾಯಿ. ॥೨೬॥

ಈ ಉತ್ತರಕ್ಕೆ ಮಹದೇವಿಯಕ್ಕಗಳು ಕೊಟ್ಟ ಪ್ರತ್ಯುತ್ತರ॥

ತನು ಶುದ್ಧವಾಯಿತ್ತು ಶಿವಭಕ್ತರೊಕ್ಕುದ ಕೊಂಡೆನ್ನ ಮನ ಶುದ್ಧವಾಯಿತ್ತು ಅಸಂಖ್ಯಾತರ ನೆನೆದೆನ್ನ ಕಂಗಳು ಶುದ್ಧವಾಯಿತ್ತು. ಸಕಲ ಪುರಾತರನೋಡಿ ಎನ್ನ ಶ್ರೋತ್ರ ಶುದ್ಧವಾಯಿತ್ತು. ಅವರ ಕೀರ್ತಿಯ ಕೇಳಿ ಎನ್ನ ಜಿಹ್ವೆನೆಯನಗಿದು, ಜೀವನವು ಕೇಳಾ ಲಿಂಗತಂದೆ. ನಿಟ್ಟನೆ ನಿಮ್ಮುವ ಪ್ರಾಜಿಸಿ ಭವಗೆಟ್ಟೆ ಕಾಣಾ ಚನ್ನಮಲ್ಲಿಕಾರ್ಜುನ. ॥೨೭॥

ಮತ್ತಂ॥ ಬಸವಣ್ಣನ ಪಾದವ ಕಂಡೆನಾಗಿ ಎನ್ನಂಗ ನಾಸ್ತಿಯಾಯಿತ್ತು. ಚನ್ನಬಸವಣ್ಣನ ಪಾದವ ಕಂಡೆನಾಗಿ ಎನ್ನ ಪ್ರಾಣ ಬಯಲಾಯಿತ್ತು. ಪ್ರಭುದೇವ ನಿಮ್ಮ ಶ್ರೀಪಾದಕ್ಕೆ ಶರಣೆಂದೆನಾಗಿ ಎನ್ನರಿವು ಸ್ವಯವಾಯಿತ್ತು. ಚನ್ನಮಲ್ಲಿಕಾರ್ಜುನದೇವಯ್ಯ ನಿಮ್ಮ ಶರಣರ ಕರುಣವ ಪಡೆದೆನಾಗಿ ಎನಗೆ ಮತ್ತಾವುದಿಲ್ಲವಾಗಿ, ಪ್ರಭುವೇ. ॥೨೮॥

ಹೀಗೆಂದು ಮಹದೇವಿಯಕ್ಕಗಳು ಬಿನ್ನೈಸಲು, ಪ್ರಭುದೇವರು ಕೊಟ್ಟ ಪ್ರತ್ಯುತ್ತರ.

ಕಾಯ ಶುದ್ಧವಾಯಿತ್ತೆಂದರೆ ಲಿಂಗ ನೆಲೆಗೊಳ್ಳದು. ಜೀವ ಶುದ್ಧವಾಯಿತ್ತೆಂದರೆ ಲಿಂಗ ನೆಲೆಗೊಳ್ಳದು. ಭಾವ ಶುದ್ಧವಾಯಿತ್ತೆಂದರೆ ಲಿಂಗ ನೆಲೆಗೊಳ್ಳದು. ಗುಹೇಶ್ವರ ಲಿಂಗವಲ್ಲಿ ಶುದ್ಧ ಸುಯಿಧಾನಿಯಾದನೆಂದರೆ ಸಜವು ಸಾಧ್ಯವಾಗದು ಕೇಳಾ ಅವ್ವಾ ॥೨೯॥

ಇದಕ್ಕೆ ಅಕ್ಕಗಳ ಪ್ರತ್ಯುತ್ತರ

ಕಾಯದೊಳಗೆ ಅಕಾಯವಾಯಿತ್ತು. ಜೀವದೊಳಗೆ ನಿರ್ಜೀವವಾಯಿತ್ತು. ಭಾವದೊಳಗೆ ನಿರ್ಭಾವವಾಯಿತ್ತು. ಎನ್ನ ಮನದೊಳಗೆ ಘನ ಸನಹಾಯಿತ್ತು. ಎನ್ನ ತಲೆ ಮೊಲೆಗಳ ನೋಡಿ ಸಲಹಿದಿರಾಗಿ ಚನ್ನಮಲ್ಲಿಕಾರ್ಜುನ ಧರ್ಮವಳಿಯನು. ॥೩೦॥

ಇದಕ್ಕೆ ಪ್ರಭುದೇವರ ಪ್ರತ್ಯುತ್ತರ ॥

ಕೂಡಲಿಲ್ಲದ ಘನವ ಕೂಡುವ ಪರಿ ಎಂತವ್ವಾ? ಹೇಳಿದರೆ ಅವಘಡವಿದೆ ಕೂರತೆ. ಗುಹೇಶ್ವರ ಲಿಂಗವ ಬೇಡ ಮಾಡಿ, ಬೆರಸುವ ಪರಿ ಎಂತು ಕೇಳಾ ॥೩೧॥

ಇದಕ್ಕೆ ಅಕ್ಕಗಳ ಪ್ರತ್ಯುತ್ತರ॥

ಗಟ್ಟಿವುಪ್ಪಕ್ಕೆ ತಿಳಿವುಪ್ಪಕ್ಕೆ ಹಂಗುಂಟೆ? ಅಯ್ಯ ದೀಪಕ್ಕೆ ದೀಪ್ತಿಗೆ ಸೆಮ ಉಂಟೆ ಅಯ್ಯಾ? ಆತ್ಮಕ್ಕೆ ಲಿಂಗಕ್ಕೆ ಬೇಡ ಉಂಟೆ ಅಯ್ಯಾ? ಎನ್ನಂಗ

ವನು ಶ್ರೀಗುರು ಮಂತ್ರವ ಮಾಡಿ, ತೋರಿದನಾಗಿ ನಾವಯಕ್ಕೆ ನಿರ
ವಯಕ್ಕೆ ಭಿನ್ನವಿಲ್ಲವಯ್ಯ. ಚನ್ನಮಲ್ಲಿಕಾರ್ಜುನ ದೇವರ ಬೆರಿಸಿ ಮಾ
ಗೆಟ್ಟವಳನೇತಕ್ಕೆ ನುಡಿಸುವಿರಯ್ಯ ಪ್ರಭುವೇ॥

ಅಂಗವ ಲಿಂಗಮುಖದಿಂದರ್ಪಿಸಿ ಅಂಗ ಅನಂಗವಾಯಿತ್ತು. ಮನವ
ಅರಿವಿಂಗರ್ಪಿಸಿ ಮನ ಲಯವಾಯಿತ್ತ. ಭಾವವ ತೃಪ್ತಿಗರ್ಪಿಸಿ, ಭಾವ
ಬಯಲಾಯಿತ್ತು. ಅಂಗ ಮನ ಭಾವವಳಿದ ಕಾರಣ ಕಾಯ ಅಕಾಯ
ವಾಯಿತ್ತು. ಎನ್ನ ಕಾಯವ ಸುಖವ ಭೋಗವ ಲಿಂಗವೆ ಭೋಗಿಸುವ
ದಾಗಿ, ಶರಣ ಸತಿ ಲಿಂಗ ಪತಿಯಾದೆನು. ಇದು ಕಾರಣ ಚನ್ನಮಲ್ಲಿಕಾ
ರ್ಜುನನೆಂಬ ಗಂಡನ ಒಳ ಹೊಕ್ಕು ಬೆರಿಸಿದೆನು. ॥೩೩॥

ಹೀಗೆಂದು ಮಹದೇವಿಯಕ್ಕಗಳು ಚಿದಹಂತೆಯ ಪ್ರಭುದೇವರು
ಖಂಡಿಸಿ ನುಡಿವ ಪ್ರಸ್ಥಾವದ ವಚನ. ॥

ನಾ ಸತ್ತೆನೆಂದು, ಹೆಣ ಕೂಗಿದುದುಂಟೇ? ಬಯಚಿಟ್ಟು ಬಯಕೆ
ಕರೆದುದುಂಟೇ? ಹೆಪ್ಪಿಟ್ಟು ಹಾಲು ಸಿಹಿಯಪ್ಪುದೇ? ಈ ಮಾತು ಒಪ್ಪ
ವಪ್ಪುದೆ ಗುಹೇಶ್ವರಲಿಂಗಕ್ಕೆ? ॥೩೪॥

ಇದಕ್ಕೆ ಅಕ್ಕಗಳ ಪ್ರತ್ಯುತ್ತರ. ॥

ಸತ್ತ ಹೆಣ ಕೂಗಿದುದುಂಟು, ಬಯಚಿಟ್ಟ ಬಯಕೆ ಕರೆದುದುಂಟು.
ಹೆಪ್ಪಿಟ್ಟ ಹಾಲು ಗಟ್ಟಿಗೊಂಡು ಸಿಹಿಯಾದುದುಂಟು. ಇವ ನಿಶ್ಚೈಸಿ
ನೋಡಿ ಚನ್ನಮಲ್ಲಿಕಾರ್ಜುನ ದೇವರಲ್ಲಿ. ॥೩೫॥

ಇದಕ್ಕೆ ಪ್ರಭುದೇವರ ವಚನ. ॥

ಇದು ಎನಗೆ ಆಶ್ಚರ್ಯ ಹೇಳವ್ವಾ. ಕಾಯವಿಲ್ಲದ ಸುಖವ ಜೀವ
ವಿಲ್ಲದ ಭಾವವ ಆ ತಾವ ಹೇಳಾ ಗುಹೇಶ್ವರಲಿಂಗಕ್ಕೆ. ॥೩೬॥

ಇದಕ್ಕೆ ಅಕ್ಕಗಳ ಪ್ರತ್ಯುತ್ತರ. ॥

ಮರೆದೊರಗಿ ಕನಸ ಕಂಡು ಹೇಳುವಲ್ಲಿ ಸತ್ತ ಹೆಣ ಎದ್ದಿತ್ತು. ತನ್ನ
ಋಣ ನಿಧಾನ ಎದ್ದು ಕರೆಯಿತ್ತು. ಹೆಪ್ಪಿಟ್ಟ ಹಾಲು ಗಟ್ಟಿದುಪ್ಪವಾಗಿ
ಸಿಹಿಯಾಯಿತ್ತು. ಇದಕ್ಕೆ ತಪ್ಪ ಸಾಧಿಸಲೇಕೆ ಚನ್ನಮಲ್ಲಿಕಾರ್ಜುನ
ದೇವರ ದೇವಸಣ್ಣಗಳಿರಾ. ॥೩೭॥

ಇದಕ್ಕೆ ಪ್ರಭುದೇವರು ಒಡಂಬಟ್ಟ ಪ್ರಸ್ಥಾವದ ವಚನ.

ಇದು ಲೇಸಾಯಿತ್ತು. ತುಂಬಿದ ಲೆಕ್ಕಕ್ಕೆ ಮತ್ತೊಂದೆಂದು ಕಡಿ
ಗಾಣಿಸುವಂತೆ, ಸ್ಥಾಣುವಿನ ಮರೆಯಂತೆ, ಅಂಬುಧಿಯ ಕೊಂಬಿನಲ್ಲಿರ್ದ
ವಿಹಂಗನಂತೆ ಎಲ್ಲಿ ಬಂದಡು ಗುಹೇಶ್ವರನೆಂಬ ಭಾವ ಒಂದಾಯಿತ್ತು. ॥೩೮॥

ಇದಕ್ಕೆ ಮಹದೇವಿಯಕ್ಕಗಳ ನಿರಹಂಭಾವದ ವಚನ. ॥

ಎನಗೇಕಯ್ಯ? ನಾ ಪ್ರಪಂಚಿನ ಪುತ್ಥಳಿ, ಮಾಯಕದ ಮೂಲ ಭಾಂಡ,
ಪ್ರತಾರದ ಭವನಿಳಯ ಜಲಕುಂಭದ ಪಡಿಯಲ್ಲಿ ಒಸರುವ ನೆಲೆಮಾಸಿ
ಗೇಕಯ್ಯ? ಜೆರಳು ತಾಳಹಣ್ಣು ಹಿಸುಕಿದಡೆ ಮೆಲಲುಂಟೆ? ಬಿತ್ತಲ್ಲಿ
ಜೀವ ಅದರೊಪ್ಪದ ತೆರ ಎನಗೆ ಎನ್ನ ತಪ್ಪ ಒಪ್ಪುಗೊಳ್ಳಾ ಚನ್ನಮಲ್ಲಿ
ಕಾರ್ಜುನದೇವರ ದೇವ ನೀವೆ ಅಣ್ಣಗಳಿರಾ. ॥೩೯॥

ಮತ್ತ॥ ಚಂಪನವ ಕಡಿದು, ಕೊರೆದು, ತೇದಡೆ ಸೊಂದೆಸೆಂದು
ಕಂಪ ಬಿಟ್ಟೆತ್ತೆ? ತಂದು ಸುವರ್ಣವ ಕಡಿದೊರೆದಡೆ ಬೆಂದು ಕಳಂಕ
ಹಿಡಿದಿತ್ತೆ? ಸಂದು ಸಂದು ಕಡಿದು ಕಬ್ಬನು ತಂದು ಗಾಣದಲಿಕ್ಕಿ ಬೆಂದ
ಪಾಕಗಳು ಸಕ್ಕರೆಯಾಗ ಸೊಂದೆನೆಂದು ಸವಿಯ ಬಿಟ್ಟಪ್ಪೆ? ನಾ ಹಿಂದೆ
ಮಾಡಿದ ಹೀನಂಗಳೆಲ್ಲವ ತಂದು ಮುಂದಿಳುಹಲು ನಿಮಗೆ ಹಾನಿಯೆ?
ಎನ್ನ ತಂದೆ ಚನ್ನಮಲ್ಲಿಕಾರ್ಜುನದೇವಯ್ಯ ಕೊಂದಡೆ ಶರಣೆಂಬುದ
ಮಾಣೆ. ॥೪೦॥

ಇದಕ್ಕೆ ಪ್ರಭುದೇವರು ಸಂತೋಷಿಸಿ, ಕೊಂಡಾಡಿದ ಪ್ರಸ್ಥಾವದ
ವಚನ. ॥

ಅಂಗನೆ ಅಂಗನೆಯ ರೂಪಲ್ಲದೆ ಮನ ವಸ್ತು ಭಾವದಲ್ಲಿ ಬೆಚ್ಚಂತಿ
ಇಪ್ಪುದು. ಬಂದ ಕಥನದಲ್ಲಿ ಬಂದು ಹಿಂಗಿದೆಯಲ್ಲ. ಅಕ್ಕ ಗುಹೇಶ್ವರ
ಲಿಂಗದಲ್ಲಿ ಉಭಯ ನಾಸ್ತಿ ಮನವಳಿದೆ ಎನ್ನಕ್ಕಾ. ॥೪೧॥

ಇಂತು ಪ್ರಭುದೇವರು ಉಭಯ ನಾಮವಳಿದೆಯೆಂದು ಕೊಂಡಾಡಲು,
ಆ ಮಹದೇವಿಯಕ್ಕಗಳ ಎರಡಿಲ್ಲದೆ ಬೆರಸಿದುವಂ ಬಿನ್ನೈಸುವ ಪ್ರಸ್ಥಾವದ
ವಚನ ॥

ಅಂಗಸಂಗದಲ್ಲಿ ಲಿಂಗಸಂಗಿಯಾದೆ. ಲಿಂಗಸಂಗದಲ್ಲಿ ಅಂಗಸಂಗಿ
ಯಾದೆ. ಉಭಯ ಸಂಗವನು ಜರಿಯದೆ ಪರಿಣಾಮಿಯಾದೆನು. ನುಡಿಯ
ಗಡಣವ ಮರೆದು, ತೆರಪಿಲ್ಲದಿಪ್ಪೆನು? ಎನ್ನ ದೇವ ಚನ್ನಮಲ್ಲಿಕಾರ್ಜು

ನದೇವರ ಪೆರಸಿವ ಬಳಿಕ ಎನ್ನ ನಾನು ಏನೆಂದು ಅರಿಯೆನೆಂದು ಅರಿಯೆನಯ್ಯ ॥೪೫॥

ಹೀಗೆಂದು ಪ್ರಭುದೇವರೊಡನೆ ಅಕ್ಕಗಳು ಪ್ರಸಂಗಿಸುತ್ತಿರಲು, ಬಸವರಾಜದೇವರು ಮಹದೇವಿಯಕ್ಕಗಳನುಡಿಸಿ ನೋಡುವ ಪ್ರಸ್ತಾವದ ವಚನ.

ಅಂಗದಲ್ಲಿ ಲಿಂಗ ಸಂಗ. ಲಿಂಗದಲ್ಲಿ ಅಂಗಸಂಗವ ಮಾಡಿದೆನೆಂದರೆ ಸಂದು ಭೇದವಳಿವ ಪರಿ ಎಂತು ಹೇಳಾ! ಅಂಗದಲ್ಲಿ ಸಂಗವ ಮಾಡಿಹೆನೆಂದರೆ ಮುಂದುಗೆಡಿಸಿ ಕಾಡುವನು ಶಿವನು. ಕಾಮನೆಂಬ ಬಯಕೆಯಲ್ಲಿ ಅಳಲಿಸುವ ಬಳಲಿಸುವ ಶಿವನು. ಲಿಂಗವಲ್ಲಿ ಅಂಗವ ತಂದು ನಿಕ್ಷೇಪಿಸಿಹೆನೆಂದರೆ ಅಂಗದಿಂದಲತ್ತತ್ತ ಓಸರಿಸಿ ಓಡವನಯ್ಯ ಶಿವನು. ಹೆಣ್ಣು ಗಂಡಾದರೆ ಸಂಗಕ್ಕೆ ಒಲಿವನು ಕೇಳಾ ಶಿವನು. ಕೂಡಲ ಸಂಗಮದೇವರ ಪೆರಸುವರೆ ಭಿನ್ನವಿಲ್ಲದೆ ಕಲಿಯಾಗಬೇಕು ಕೇಳಾ ಅವ್ವಾ ॥೪೬॥

ಇದಕ್ಕೆ ಅಕ್ಕಗಳ ಬಿನ್ನಹ.

ಕಾಮನ ಗೆಲಿದೆನಯ್ಯ ಬಸವಣ್ಣ ನಿಮ್ಮ ದಯದಿಂದ. ಸೋಮಧರನ ಹಿಡಿತಪ್ಪೆನಯ್ಯ ಬಸವಣ್ಣ ನಿಮ್ಮ ದಯದಿಂದ. ನಾಮದಲ್ಲಿ ಹೆಣ್ಣು ರೂಪಲ್ಲದೆ ಭಾವಿಸಲು ಗಂಡು ರೂಪು ನೋಡಾ ಬಸವಣ್ಣ. ನಿಮ್ಮ ದಯದಿಂದ ಅತಿಕಾಮಿ ಚನ್ನಮಲ್ಲಿಕಾರ್ಜುನಂಗೆ ತೊಡರನಿಕ್ಕಿ ಕೂಡಿ ಎರಡರಿಯದೆ ಮರೆದೆನಯ್ಯ ಬಸವಣ್ಣ ನಿಮ್ಮ ದಯದಿಂದೆ. ॥೪೪॥

ಇಂತು ಅಂಗವಿಕಾರವ ಗೆಲಿದು ಲಿಂಗವನು ಎನ್ನೊಳಗೆ ವೈಭವಿಡಿದು ಸರ್ವಾಂಗದೊಳು ಐಕ್ಯವ ಮಾಡಿಕೊಂಡು ನಿಜಗಲಿಯಾಗಿ ಗೆಲಿದೆನೆಂದು ಬಿನ್ನೈಸುವ ಪ್ರಸ್ತಾವದ ವಚನ. ॥

ಭಾವಿಸಿ ನೋಡಿದರೆ ಅಂಗವಾಯಿತ್ತು. ಅಂಗಗುಣವಳಿದುಳಿದ ಬಳಿಕ ನಾ ನಿನಗಂಗವಾದೆ. ಭಿನ್ನರುಚಿಯ ಬಿಟ್ಟು ಲಿಂಗರುಚಿಯಾದ ಬಳಿಕ ಚನ್ನಮಲ್ಲಿಕಾರ್ಜುನನ ಕೊಂದು ಸಾವ ಭಾಷೆ. ॥೪೫॥

ಇದಕ್ಕೆ ಬಸವರಾಜದೇವರು ನಿರೂಪಿಸಿದ ಪ್ರಸ್ತಾವದ ವಚನ.॥

ಅಳಿವನಲ್ಲ. ಉಳಿವನಲ್ಲ. ಪ್ರಳಯವೆಂಬುದ ಮುನ್ನರಿಯನು. ಕಳಾಕುಳ ರಹಿತನು. ಉಭಯ ಕುಳ ರಹಿತನು. ಅರಿವ ಬೈಚಿಟ್ಟು ಮೆರೆವ ಗಮನಿಯಲ್ಲ, ನಿರ್ಗಮನ ಕೂಡಲಸಂಗಯ್ಯನೆಂಬ ಶಬ್ದ ಮುಗ್ಧನ ಭಾವದ ಬಳಕೆಯಲ್ಲಿ ಗೆಲಬಹುದೆ ಹೇಳಾ? ॥೪೬॥

ಇದಕ್ಕೆ ಮಹದೇವಿಯಕ್ಕಗಳು ಬಿನ್ನೈಸಿದ ಪ್ರಸ್ತಾವದ ವಚನ. ॥

ಅಂಗದೊಳಗೆ ಅಂಗವಾಗಿ, ಲಿಂಗೈಕ್ಯವ ಮಾಡಿದೆ. ಮನದೊಳಗೆ ಮನವಾಗಿ ಮನ ಲಿಂಗೈಕ್ಯವ ಮಾಡಿದೆ. ಭಾವದೊಳಗೆ ಭಾವವಾಗಿ ಭಾವ ಲಿಂಗೈಕ್ಯವ ಮಾಡಿದೆ. ಅರಿವಿನೊಳಗೆ ಅರಿವಾಗಿ ಅರಿವ ಲಿಂಗೈಕ್ಯವ ಮಾಡಿದೆ. ಕ್ರಿಯಗಳೆಲ್ಲವ ನಿಲಸಿ ಕ್ರಿಯಾತೀತವಾಗಿ, ನಿಷ್ಪತ್ತಿ ಲಿಂಗೈಕ್ಯವಾದೆ. ನಾನೆಂಬುದ ನಿಲಸಿ ನೀನೆಂಬುದ ಕೆಡಿಸಿ ಉಭಯ ಲಿಂಗೈಕ್ಯವ ಮಾಡಿದೆ. ಚನ್ನಮಲ್ಲಿಕಾರ್ಜುನನೊಳಗೆ ನಾನಳಿದೆನಾಗಿ ಲಿಂಗ ನಂಬ ಘನವು ಎನ್ನಲ್ಲಿ ಅಳಿಯಿತ್ತು ಕಾಣಾ ಸಂಗನಬಸವಣ್ಣಾ. ॥೪೭॥

ಹೀಗೆಂದು ಅಕ್ಕಗಳು ಬಿನ್ನೈಸಲು, ಬಸವರಾಜದೇವರು ಮೆಚ್ಚಿ ನಿರೂಪಿಸಿದ ಪ್ರಸ್ತಾವದ ವಚನ. ॥

ಹೆಂಗುಸಿನಂಗವ ನೋಡಿರೆ ಪುರಾತನರು. ಬಾಲತನದಂಗವ ನೋಡಿರೆ. ಪುರಾತನರು ಬ್ರಹ್ಮವನಾಚರಿಸಿ, ತನ್ನ ಮರೆದಿಪ್ಪುದ ನೋಡಿರೆ. ಲಿಂಗ ನಂತರು ತನ್ನಲ್ಲಿ ತಾನು ನಿಶ್ಚಯವಾಗಿ ಭಾಷೆ ಬೀಸರಪೋಗದೆ ಇಪ್ಪ ಇರವು ಕೂಡಲಸಂಗಮದೇವರಲ್ಲಿ ನಮ್ಮ ಮಹದೇವಿಯಕ್ಕಂಗಾಯಿತ್ತು. ॥೪೮॥

ಹೀಗೆಂದು ಬಸವರಾಜದೇವರು ನಿರೂಪಿಸಲು, ಇದಕ್ಕೆ ಅಕ್ಕಗಳ ಬಿನ್ನಹ,

ನಿನ್ನ ಅಂಗದ ಆಚಾರವ ಕಂಡು, ಎನಗೆ ಲಿಂಗ ಸಂಗವಾಯಿತ್ತು. ಅಯ್ಯ ಬಸವಣ್ಣ ನಿಮ್ಮ ಮನವ ಸುಜ್ಞಾನವ ಕಂಡು ಎನಗೆ ಜಂಗಮ ಸಂಬಂಧವಾಯಿತ್ತಯ್ಯ ಬಸವಣ್ಣಾ. ನಿನ್ನ ಸದ್ಭಕ್ತಿಯ ತಿಳಿದು ಎನ್ನ ನಿಜ ಸಾಧ್ಯವಾಯಿತ್ತಯ್ಯ ಬಸವಣ್ಣ. ಚನ್ನಮಲ್ಲಿಕಾರ್ಜುನನ ಹೆಸರಿಟ್ಟ ಗುರು ನೀನಾದ ಕಾರಣ ನಾನೆಂಬುದಿಲ್ಲವಯ್ಯ ಬಸವಣ್ಣಾ. ॥೪೯॥

ಮತ್ತಂ॥ ಅಂಗದಲ್ಲಿ ಆಚಾರವ ತೋರಿದ. ಆಚಾರವೆ ಲಿಂಗವೆಂದರುಹಿದ. ಪ್ರಾಣದಲ್ಲಿ ಅರಿವನೆಲೆಗೊಳಿಸಿದ. ಆ ಅರಿವೆ ಜಂಗಮವೆಂದು ತೋರಿದ. ಚನ್ನಮಲ್ಲಿಕಾರ್ಜುನನ ಹೆತ್ತ ತಂದೆ ಸಂಗನಬಸವಣ್ಣನು ಎನಗೀ ಕ್ರಮವನರುಹಿದನಯ್ಯ. ॥೫೦॥

ಮತ್ತಂ॥ ಅಕ್ಕಗಳು ಅನಾದಿ ಪರಶಿವನು ತಾನೆ ಜಗದ್ಧಿತಾರ್ಥವಾಗಿ ಮರ್ತ್ಯಾಕ್ಕವತರಿಸಿ, ಬಸವನೆಂಬ ನಾಮಕರಣವ ಧರಿಸಿ, ವೀರಶೈವ ಮಾರ್ಗ

ವನರುಪುವದಕ್ಕೆ ಬಾವನ್ನ ವಿವರವನೊಳಕೊಂಡು, ಚರಿಸಿದನೆಂದು ಬಸ
ವೇಶ್ವರ ದೇವರ ಮಹಾತ್ಮೆಯಂ ಕೊಂಡಾಡುವ ಪ್ರಸ್ಥಾವದ ವಚನ.

ಶಿವಶಿವ ಆದಿಅನಾದಿಗಳೆಂಬವೆರಡಿಲ್ಲದ ನಿರವಯವಾಗಿಪ್ಪ ಶಿವ
ನಿಮ್ಮ ನಿಜವನಾರಯ್ಯ ಬಲ್ಲವರು? ವೇದಂಗಳಿಗಭೇದ್ಯನು, ಶಾಸ್ತ್ರಕ್ಕಸಾ
ಧ್ಯನು, ಪುರಾಣಕ್ಕೆ ಪುಣ್ಯನು. ಆಗಮಕ್ಕಗೋಚರನು, ತರ್ಕಕ್ಕೆ ಅತ
ರ್ಕ್ಯನು, ವಾಙ್ಮನಾತೀತನೆಂಬ ಪರಶಿವ ಲಿಂಗವನು ಕೆಲಬರು ಸಕಲ
ನೆಂಬರು, ಕೆಲಬರು ನಿಃಕಲನೆಂಬರು, ಕೆಲಬರು ಸೂಕ್ಷ್ಮನೆಂಬರು, ಕೆಲ
ಬರು ಸ್ಥೂಲನೆಂಬರು, ಈ ಬಗೆಯ ಭಾವದಿಂದೆ ಹರಿ ಬ್ರಹ್ಮರು ಇಂದ್ರ
ಚಂದ್ರ ರವಿ ಕಾಲ ಕಾಮ ದಕ್ಷ ದೇವ ದಾನವ ಮಾನವರೊಳಗಾವ
ವರೆಲ್ಲರು ಕಾಣಲರಿಯದೆ ಅಜ್ಞಾನದಿಂದೆ ಭವಭಾರಿಗಳಾಗಿ ಹೋದರು.
ಈ ಪರಿಯಲ್ಲಿ ಬರಿದೆ ಬಂದು ಹೋಗಬಾರದೆಂದು, ನಮ್ಮ ಬಸವಣ್ಣನು
ಜಗ ಹಿತಾರ್ಥವಾಗಿ, ಮರ್ತ್ಯಕ್ಕವತರಿಸಿ ವೀರಶೈವ ಮಾರ್ಗವನರುಪು
ವದಕ್ಕೆ ಬಾವನ್ನ ವಿವರವನೊಳಕೊಂಡು ಚರಿಸಿದನೆಂತೆಂದೊಡೆ, ಗುರು
ಕಾರುಣ್ಯ ವೇದ್ಯನು. ವಿಭೂತಿ ರುದ್ರಾಕ್ಷ ಧಾರಕನು. ಪಂಚಾಕ್ಷರೀ ಭಾವಾ
ಸಮೇತನು. ಲಿಂಗಾಂಗಸಂಬಂಧಿ. ನಿತ್ಯಲಿಂಗಾರ್ಚಕನು. ಅರ್ಪಿತವಲ್ಲಿ
ಅವಧಾನಿ. ಪಾದೋದಕ ಪ್ರಸಾದ ಗ್ರಾಹಕನು. ಗುರುಭಕ್ತಿ ಸಂಪನ್ನನು.
ಏಕಲಿಂಗನಿಷ್ಠಾಪರನು. ಜಂಗಮಲಿಂಗ ಲೋಲುಪ್ತನು. ಶರಣ ಸಂಗಮೇ
ಶ್ವರನು. ತ್ರಿವಿಧಕ್ಷಾಯತನು. ತ್ರಿಕರಣಶುದ್ಧನು. ತ್ರಿವಿಧ ಲಿಂಗಾಂಗ
ಸಂಬಂಧಿ. ಅನ್ಯ ದೈವ ಸ್ಮರಣೆಯ ಹೊದ್ದ. ಭವಿಯ ಸಂಗವಮಾಡ.
ಭವಿಪಾಕವ ಮುಟ್ಟ. ಪರಸ್ತ್ರೀಯರ ಬೇಸ. ಪರಧನವನೊಲ್ಲ. ಪರನಿಂದೆ
ಯನಾಡ. ಅನೃತವ ನುಡಿಯ. ತಾಮಸ ಭಕ್ತರ ಸಂಗವಮಾಡ. ಗುರು
ಲಿಂಗಜಂಗಮಕ್ಕೆ ಅರ್ಥಪ್ರಾಣಾಭಿಮಾನ ಮುಂತಾದವೆಲ್ಲವ ಸಮರ್ಪಿಸಿ
ಪ್ರಸಾದ ಮುಂತಾಗಿ ಭೋಗಿಸುವ. ಜಂಗಮನಿಂದೆಯ ಸೈರಿಸ. ಪ್ರಸಾದ
ನಿಂದೆಯ ಕೇಳ. ಅನ್ಯರನಾಸೆಗೆಯ್ಯ. ಪಾತ್ರ ಸತ್ಪಾತ್ರವನರಿವ. ಚತುರ್ವಿಧ
ಪದವಿಯ ಹಾರ. ಅರಿ ಷಡ್ವರ್ಗಕ್ಕೆ ಅಳುಕ. ಕುಲಾದಿ ಮದಂಗಳ ಬಗ
ಗೊಳ್ಳ. ದ್ವೈತಾದ್ವೈತವ ನುಡಿವನಲ್ಲ. ಸಂಕಲ್ಪ ವಿಕಲ್ಪವ ಮಾಡುವ
ನಲ್ಲ. ಕಾಲೋಚಿತವ ಬಲ್ಲ. ಕ್ರಮ ಯುಕ್ತನಾಗಿ ಷಟ್‌ಸ್ಥಲ ಭರಿತ.
ಸರ್ವಾಂಗಲಿಂಗಿ. ದಾಸೋಹ ಸಂಪನ್ನ, ಇಂತೀ ಐವತ್ತೆರಡು ವಿಧದಲ್ಲಿ
ಸಿಪುಣನಾಗಿ ಮೆರೆವ ನಮ್ಮ ಬಸವಣ್ಣನು. ಆ ಬಸವಣ್ಣನ ಶ್ರೀಪಾದಕ್ಕೆ

ಹೋರಾತ್ರಿಯಲ್ಲಿ ನಮೋ ನಮೋ ಎಂದು ಬದುಕಿದೆನು ಕಾಣಾ ಚನ್ನ
ಮಲ್ಲಿಕಾರ್ಜುನ ॥೫॥

ಮತ್ತಂ॥ ಎನ್ನ ಭಕ್ತಿ ನಿಮ್ಮ ಧರ್ಮ. ಎನ್ನ ಜ್ಞಾನ ಪ್ರಭುದೇವರ ಧರ್ಮ.
ಎನ್ನ ಪರಿಣಾಮ ಚನ್ನಬಸವಣ್ಣನ ಧರ್ಮ. ಈ ಮೂವರು ಒಂದೊಂದ
ಕೂಟ್ಟರಿನೆಗೆ ಮೂರು ಭಾವವಾಯಿತ್ತು. ಆ ಮೂರನು ನಿಮ್ಮಲ್ಲಿ ಸಮ
ರ್ಪಿಸಿದ ಬಳಿಕ ಎನಗಾವ ಜಂಜಡವಿಲ್ಲ. ಚನ್ನಮಲ್ಲಿಕಾರ್ಜುನದೇವರ
ಸಹಿನಲ್ಲಿ ನಿನ್ನ ಕರುಣದ ಶಿಸು ನಾನು ಕಾಣಾ ಚನ್ನಬಸವಣ್ಣಾ ॥೬॥

ಹೀಗೆಂದು ಮಹಾದೇವಿಯಕ್ಕಗಳು ಬಿನ್ನೈಸಲು, ಆ ಸಮಯದಲ್ಲಿ
ಪ್ರಭುದೇವರು ಆ ಮಹಾದೇವಿಯಕ್ಕಗಳಿಗೆ ನಮಸ್ಕರಿಸಿದ ಪ್ರಸ್ಥಾವದ
ವಚನ ॥

ಆದಿ ಅನಾದಿ ಶಕ್ತಿ ಎಂಬರು. ಅದನಾರು ಬಲ್ಲರಯ್ಯ? ಆದಿ ಎಂದರೆ
ಕುರುಹಿಂಗೆ ಬಂದಿತ್ತು. ಅನಾದಿ ಎಂದರೆ ನಾಮಕ್ಕೆ ಬಂದಿತ್ತು. ಆದಿ
ಯಲ್ಲ, ಅನಾದಿಯಲ್ಲ. ನಾಮವಿಲ್ಲ ಸೀಮೆ ಇಲ್ಲ. ನಿಜಶಕ್ತಿ ಚಿಚ್ಛಕ್ತಿಯಾ
ಯಿತ್ತು ನೋಡಾ! ಅಂತರಂಗದ ಪ್ರಭೆ ಬಹಿರಂಗವೆಲ್ಲ ತಾನೆಯಾಗಿ
ಗುಹೇಶ್ವರಲಿಂಗದಲ್ಲಿ ಸಂದಿಲ್ಲದಿಪ್ಪ ಮಹಾದೇವಿಯಕ್ಕನ ಶ್ರೀಪಾದಕ್ಕೆ
ನಮೋ ನಮೋ ಎಂಬೆನು ಕಾಣಾ ಚನ್ನಬಸವಣ್ಣಾ ॥೫॥

ಮತ್ತಂ॥ ಅಂಗೈಯ್ಯ ಲಿಂಗದಲ್ಲಿ ಕಂಗಳ ನೋಟ ಸ್ವಯವಾದ
ಇರವ ನೋಡಾ. ತನ್ನ ಸ್ವಾನುಭಾವದ ಉದಯದಿಂದೆ ತನ್ನ ನರಿದ ನಿಜ
ಶಕ್ತಿಯ ನೋಡಾ. ಹಿನ್ನವಿಲ್ಲದಿಪ್ಪ ಮುನ್ನಣೆಯ ಮಮಕಾರವ ಹಿಂಗಿದ
ಭಾವ ತನ್ನಿಂದ ತಾನಾದಳು. ನಮ್ಮ ಗುಹೇಶ್ವರ ಲಿಂಗದಲ್ಲಿ ಸಂದಿಲ್ಲದಿಪ್ಪ
ಮಹಾದೇವಿಯಕ್ಕನ ನಿಲವಿಂಗೆ ನಮೋ ನಮೋ ಎನುತಿರ್ದೆ ಕಾಣಾ
ಚನ್ನಬಸವಣ್ಣಾ ॥೬॥

ಹೀಗೆಂದು ಪ್ರಭುದೇವರು ನಿರೂಪಿಸಲು, ಚಿಕ್ಕದಣ್ಣಾಯಕರು ಮಹ
ದೇವಿಯಕ್ಕಂಗೆ ಪ್ರಸನ್ನರಾಗಿ, ಸ್ತುತಿಸಿದ ವಚನ ॥

ಅಜ ಕೋಟಿ ವರುಷದವಳೆಲ್ಲರು ಹಿರಿಯರೆ? ಹುತ್ತೀರಿ ಬೆಳೆದ
ತಪಸ್ವಿಗಳೆಲ್ಲರು ಹಿರಿಯರೆ? ನಡು ಮುರಿದು ಗುಡಗೂರಿ ತಲೆ ನಡುಗಿ
ನರೆ ತೆರೆ ಹೆಪ್ಪಟ್ಟ ವೃತಿಗಟ್ಟಿ ಒಂದ ನಾಡ ಹೋಗಿ ಒಂಬತ್ತ ನಾಡುವ

ಅಜ್ಞಾನಿಗಳಿಲ್ಲರು ಹಿರಿಯರೆ? ಅನುವರಿದು ಘನವ ತಿರಿಸಿ ಹಿರಿದು ಕಿ
ದೆಂಬ ಭೇದವ ಮರೆದು ಕೂಡಲಚನ್ನಸಂಗಯ್ಯನಲ್ಲಿ ಬೆರಿಸಿ ಬೇರಿಲ್ಲದಿ
ಹಿರಿಯತನ ನಮ್ಮ ಮಹದೇವಿಯಕ್ಕಂಗಾಯಿತ್ತು ॥೫೫॥

ಆ ಸಮಯದಲ್ಲಿ ಸಿದ್ಧರಾಮಯ್ಯ ತಂದೆಗಳು ಮಹದೇವಿಯಕ್ಕಗಳ
ಸ್ತುತಿಸಿದ ವಚನ ॥

ಅಹುದಹುದು. ಮತ್ತೇನು? ಮರಹಿಂಗೆ ಹಿರಿದು ಕಿರಿದುಂಟಲ್ಲದೆ
ಅರುಹಿಂಗೆ ಹಿರಿದು ಕಿರಿದುಂಟೆ ಹೇಳಯ್ಯಾ? ಸಾವಿಂಗೆ ಭಯ ಉಂಟಲ್ಲದೆ ಅಜಾತಂಗೆ ಭಯ ಉಂಟೆ ಹೇಳಯ್ಯ? ಕಪಿಲಸಿದ್ಧ ಮಲ್ಲಿನಾಥಯ್ಯನಲ್ಲಿ ಮಹದೇವಿಯಕ್ಕನ ನಿಲವಿಂಗೆ ಶರಣೆಂದು ಶುದ್ಧನಾಪೆನು ಕಾಣಾ ಚನ್ನಬಸವಣ್ಣಾ ॥೫೬॥

ಇದಕ್ಕೆ ಅಕ್ಕಗಳ ಬಿನ್ನಹ. ಮರ್ತ್ಯಲೋಕದ ಭಕ್ತರ ಮನವ ಬೆಳಗಲೆಂದು ಇಳೆಸೈತಂದ ಶಿವನು ಕತ್ತಲೆಯ ಪಾಳೆಯವ ರವಿ ಹೊಕ್ಕಂತಾಯಿತ್ತಯ್ಯ. ಚಿತ್ತದ ಪ್ರಕೃತಿಯ ಹಿಂಗಿಸಿ ಮುಕ್ತಿಪಥವ ತೋರಿದನಲ್ಲಯ್ಯ. ಅಸಂಖ್ಯಾತ ಗಣಂಗಳಿಗೆ ತನುವೆಲ್ಲ ಸ್ವಯ ಲಿಂಗ ಮನವೆಲ್ಲ ಜಂಗಮ ಭಾವವೆಲ್ಲ ಮಹಾಘನ ಬೆಳಗು. ಚನ್ನಮಲ್ಲಿಕಾರ್ಜುನಯ್ಯ ನಿಮ್ಮ ಶರಣ ಸಮ್ಯಜ್ಞಾನಿ ಚನ್ನಬಸವಣ್ಣನ ಶ್ರೀಪಾದಕ್ಕೆ ಶರಣೆಂದು ಎನ್ನ ಭವ ನಾಸ್ತಿಯಾಯಿತ್ತಯ್ಯ ಪ್ರಭುವೆ ॥೫೭॥

ಇದಕ್ಕೆ ಪ್ರಭುದೇವರ ನಿರೂಪ॥

ತನು ಗುಣ ನಾಸ್ತಿಯಾಗಿ, ಲಿಂಗಸಂಗಿಯಾದಳು. ಮನಗುಣ ನಾಸ್ತಿಯಾಗಿ ಅರಿವು ಸಂಗಿಯಾದಳು. ಭಾವಗುಣ ನಾಸ್ತಿಯಾಗಿ ಮಹಾಪ್ರಭೆತಾನಾದಳು. ತಾನಿದಿರೆಂಬೆರಡಳಿದು ನಮ್ಮ ಗ.ಹೇಶ್ವರ ಲಿಂಗದಲ್ಲಿ ಸ್ವಯಲಿಂಗವಾದ ಮಹಾದೇವಿಯಕ್ಕಗಳ ನಿಲವಿಂಗೆ ಶರಣೆನುತ್ತಿರ್ದೆನು ॥೫೮॥

ಇದಕ್ಕೆ ಅಕ್ಕಗಳ ಬಿನ್ನಹ,

ನೀರು ಕ್ಷೀರದಂತೆ ನೀನಿಪ್ಪೆಯಾಗಿ, ಆವುದು ಮುಂದು ಆವುದು ಹಿಂದು ಎಂದರಿಯೆನು. ಆವುದು ಕರ್ತೃ ಆವುದು ಭೃತ್ಯನೆಂದರಿಯೆನು. ಆವುದು ಘನ, ಆವುದು ಕಿರಿದೆಂದರಿಯೆನು. ಚನ್ನಮಲ್ಲಿಕಾರ್ಜುನಯ್ಯ ನೀನೊಲಿದು ಕೊಂಡಾಡಿದರೆ ಇರುಹೆ ರುದ್ರನಾಗದೆ ಹೇಳಯ್ಯ. ॥೫೯॥

ಇದಕ್ಕೆ ಚನ್ನಬಸವರಾಜದೇವರ ನಿರೂಪ. ॥

ಆಪ್ಯರ ಅರುವತ್ತು ವಚನಕ್ಕೆ ದಣ್ಣಾಯಕರ ಇಪ್ಪತ್ತು ವಚನ. ದಣ್ಣಾಯಕರ ಇಪ್ಪತ್ತು ವಚನಕ್ಕೆ ಪ್ರಭುದೇವರ ಹತ್ತುವಚನ. ಪ್ರಭುದೇವರ ಹತ್ತು ವಚನಕ್ಕೆ ಅಜಗಣ್ಣನ ಐದು ವಚನ. ಅಜಗಣ್ಣನ ಐದು ವಚನಕ್ಕೆ ಕೂಡಲ ಚನ್ನಸಂಗಯ್ಯನಲ್ಲಿ ಮಹದೇವಿಯಕ್ಕಗಳ ಒಂದು ವಚನ ನಿರ್ವಚನ ಕಾಣಾ ಸಿದ್ಧರಾಮಯ್ಯ. ॥೬೦॥

ಆ ಸಮಯದಲ್ಲಿ ಬಸವರಾಜದೇವರ ವಚನ. ॥

ಎನ್ನ ಭಕ್ತಿಯ ಶಕ್ತಿಯು ನೀನೆ. ಎನ್ನ ಯುಕ್ತಿಯ ಶಕ್ತಿಯು ನೀನೆ. ಎನ್ನ ಮುಕ್ತಿಯ ಶಕ್ತಿಯು ನೀನೆ. ಎನ್ನ ಮಹಾ ಘನವ ನಿಲವಿನ ಪ್ರಭೆಯನುಟ್ಟು ತಳನೆಳಗಾದ ಸ್ವಯಜ್ಞಾನಿ ಕೂಡಲಸಂಗಯ್ಯನಲ್ಲಿ ಮಹದೇವಿಯಕ್ಕಗಳ ನಿಲವ ಮಡಿವಾಳನಿಂದರಿದು ಬದುಕಿದೆನಯ್ಯ ಪ್ರಭುವೆ. ॥೬೧॥

ಆ ಸಮಯದಲ್ಲಿ ಮಡಿವಾಳತಂದೆಗಳು ಮಹಾದೇವಿಯಕ್ಕಗಳ ಸ್ತುತಿಸುವ ಪ್ರಸ್ತಾವದ ವಚನ. ॥

ಕಾಮಿಯಾಗಿ ನಿಃಕಾಮಿಯಾದಳು. ಸೀಮೆಯಲ್ಲಿರ್ದು ನಿಸ್ಸೀಮೆಯಾದಳು. ಭವಿಯ ಸಂಗವ ತೊರೆದು, ಭವಬಾಧೆಯ ಹರಿದಳು. ಬಸವಣ್ಣ ಗತಿ ಎಂದು ಬರಲು, ನಾನು ಮುಡಿಯ ಹಾಸಿ ನಡಿಸಿದೆ. ನಡೆವುದಕ್ಕೆ ಹಾಸಿದ ಮುಡಿಯ ಸರ್ವಾಂಗಕ್ಕೆ ಹೊದ್ದಳು. ಆ ಮುಡಿಯ ಬೆಳಗಿನೊಳಗೆ ನಿರ್ಮಯಳಾದಳು. ಕಲಿದೇವರದೇವಯ್ಯ ಮಹದೇವಿಯಕ್ಕಗಳ ನಿಲವ ಬಸವಣ್ಣನ ಕೃಪೆಯಿಂದಲರಿದೆನಯ್ಯ ಪ್ರಭುವೆ. ॥೬೨॥

ಆ ಸಮಯದಲ್ಲಿ ಪ್ರಭುದೇವರ ವಚನ. ॥

ನುಡಿಗೆಡೆಗುಡದ ಘನವ ಹಿಡಿದು, ಪಡಬಂದಿಯಾದಳು. ಎಡೆಯಿಲ್ಲದ ಪರಿಪೂರ್ಣದೊಳಗೆ ನುಡಿಗೆಟ್ಟಳು. ತನ್ನ ನಿಲುಕಡೆಯ ನಿಜವ ಶಾನರಿಯದಂತೆ ತನ್ನಿಂದ ಕೀಳಿ ಸ್ವಯವಾದಳು. ಗುಹೇಶ್ವರ ಸಾಕ್ಷಿಯಾಗಿ ಮಹದೇವಿಯಕ್ಕನ ನಿಲವ ಕೊಂಡಾಡುವದಕ್ಕೆ ತೆರಹಿಲ್ಲ ಕಾಣಾ ಮಡಿವಾಳಯ್ಯ. ॥೬೩॥

ಇದಕ್ಕೆ ಅಕ್ಕಗಳ ಬಿನ್ನಹ.

ಎಲ್ಲ ಎಲ್ಲವನರಿದು, ಘನವೇನಯ್ಯ ತನ್ನ ತಾನರಿಯಬೇಕಲ್ಲದೆ? ತನ್ನಲ್ಲಿ ಅರಿವು ಸ್ವಯವಾಗಿರಲು, ಅನ್ಯರ ಕೇಳಲುಂಟೆ? ಚನ್ನಮಲ್ಲಿಕಾ ರ್ಜುನ ನೀ ಅರಿವಾಗಿ ಮುಂದುದೋರಿದ ಕಾರಣ ನಿಮ್ಮಿಂದಲರಿದೆನಯ್ಯ ಪ್ರಭುವೆ. ॥೬೪॥

ಮತ್ತಂ॥ ಅಕ್ಕಗಳು ಶರಣರ ಸಂಗದಿಂದೆ ನಿಮ್ಮ ನಿಜದವಿರಳ ಸುಖವಾಯಿತ್ತೆಂದು ಬಿನ್ನೈಸುವ ಪ್ರಸ್ಥಾವದ ವಚನ. ॥

ಸಂಗದಿಂದಲ್ಲದೆ ಅಗ್ನಿ ಹುಟ್ಟದು. ಸಂಗದಿಂದಲ್ಲದೆ ಬೀಜ ಮೊಳೆದೋರದು. ಸಂಗದಿಂದಲ್ಲದೆ ದೇಹವಾಗದು. ಸಂಗದಿಂದಲ್ಲದೆ ಸರ್ವ ಸುಖದೋರದು. ಚನ್ನಮಲ್ಲಿಕಾರ್ಜುನದೇವಯ್ಯ ನಿಮ್ಮ ಶರಣರ ಅನುಭಾವ ಸಂಗದಿಂದೆ ಅನುಪರಮ ಸುಖಿಯಾಗಿ ಬದುಕಿದೆನಯ್ಯ ಪ್ರಭುವೆ॥೬೫॥

ಮತ್ತಂ॥ ಆಯ್ಯ ನಿಮ್ಮ ಅನುಭಾವಿಗಳ ಸಂಗದಿಂದ ಎನ್ನ ತನು ಶುದ್ಧವಾಯಿತ್ತು. ಅಯ್ಯ ನಿಮ್ಮ ಅನುಭಾವಿಗಳು ಎನ್ನ ಒರದೊರದು ಕಡಿಕಡಿದು ಅರದರದು ಅನು ಮಾಡಿದ ಕಾರಣ ಎನ್ನ ಮನ ಶುದ್ಧವಾಯಿತ್ತು. ಎನ್ನ ಸರ್ವ ಭೋಗಾದಿ ಭೋಗಂಗಳೆಲ್ಲ ನಿಮ್ಮ ಶರಣರಿಗ ರ್ಪಿತವಾಗಿ ಎನ್ನ ಪ್ರಾಣ ಶುದ್ಧವಾಯಿತ್ತು. ಎನ್ನ ಸರ್ವೇಂದ್ರಿಯಂಗ ಳ್ಗೆವು ನಿಮ್ಮ ಶರಣರ ಪ್ರಸಾದವ ಕೊಂಡ ಕಾರಣ ಎನ್ನ ಸರ್ವಾಂಗ ಶುದ್ಧವಾಯಿತ್ತು ಅಯ್ಯಾ. ನಿಮ್ಮ ಶರಣರಿಂತು ಎನ್ನನಾಗು ಮಾಡಿದ ಕಾರಣ ಚನ್ನಮಲ್ಲಿಕಾರ್ಜುನಯ್ಯ ನಿಮ್ಮ ಶರಣರಿಗೆ ತೊಡಿಗೆಯಾದೆನಯ್ಯ ಪ್ರಭುವೆ ॥೬೬॥

ಮತ್ತಂ॥ ಮಹದೇವಿಯಕ್ಕಗಳು ಬಸವಣ್ಣ ಚನ್ನಬಸವಣ್ಣ ಮಡಿವಾಳಯ್ಯ ಸಿದ್ಧರಾಮಯ್ಯದೇವರು ಪ್ರಭುದೇವರು ಮುಖ್ಯವಾದ ಏಳು ನೂರೆಪ್ಪತ್ತು ಅಮರಗಣಂಗಳಿಂದೆ ಕೃತಾರ್ಥಳಾಗಿಹೆನೆಂದು ಬಿನ್ನೈಸುವ ಪ್ರಸ್ಥಾವದ ವಚನ ॥

ಬಸವಣ್ಣನ ಮನೆಯ ಮಗಳಾಗಿ ಬದುಕಿದೆನಾಗಿ ತನ್ನ ಕರುಣ ಭಕ್ತಿಪ್ರಸಾದವ ಕೊಟ್ಟನು. ಚನ್ನಬಸವಣ್ಣನ ತೊತ್ತಿನ ಮಗಳಾದ ಕಾರಣ ಒಕ್ಕು ಪ್ರಸಾದವ ಕೊಟ್ಟನು. ಪ್ರಭುದೇವರ ತೊತ್ತಿನ ಮಗಳಾದ ಕಾರಣ ಜ್ಞಾನ ಪ್ರಸಾದವ ಕೊಟ್ಟನು. ಸಿದ್ಧರಾಮಯ್ಯನ ಶಿಶುವಿನ ಮಗಳಾದ

ಕಾರಣ ಪ್ರಾಣಪ್ರಸಾದವ ಕರುಣಿಸಿ ಕೊಟ್ಟನು. ಮಡಿವಾಳನಾಚಿತಂ ಬೆಯ ಮನೆಯ ಮಗಳಾದ ಕಾರಣ ನಿರ್ಮಳ ಪ್ರಸಾದವ ನಿಶ್ಚಿಸಿ ಕೊಟ್ಟನು. ಇಂತೀ ಅಸಂಖ್ಯಾತರೆಲ್ಲರು ತಮ್ಮ ಕರುಣದ ಕಂದಸೆಂದು ತಲೆದಡವಿ ಸಲ್ಲಿಸಿದ ಕಾರಣ ಚನ್ನಮಲ್ಲಿಕಾರ್ಜುನನ ಪಾದಕ್ಕೆ ಯೋಗ್ಯಳಾದೆನು. ॥೬೭॥

ಮತ್ತಂ॥ ಮಹದೇವಿಯಕ್ಕಗಳು ತಮ್ಮ ಐಕ್ಯಸ್ಥಲವಾವುದೆಂದು ಪ್ರಭು ದೇವರ ಕೇಳುವ ಪ್ರಸ್ಥಾವದ ವಚನ ॥

ಕರ್ಮವೆಂಬ ಕದಳಿ ಎನಗೆ, ಕಾಯವೆಂಬ ಕದಳಿ ನಿಮಗೆ, ಮಾಟವೆಂಬ ಕದಳಿ ಬಸವಣ್ಣಂಗೆ, ಭಾವವೆಂಬ ಕದಳಿ ಚನ್ನಬಸವಣ್ಣಂಗೆ, ಬಂದ ಬಂದ ಭಾವ ಸಲೆ ಸಂದಿತ್ತು. ಎನ್ನಂಗದವಸಾನವ ಹೇಳಾ ಚನ್ನಮಲ್ಲಿಕಾರ್ಜುನ ॥೬೮॥

ಇದಕ್ಕೆ ಪ್ರಭುದೇವರ ನಿರೂಪ. ಕಾಯವುಳ್ಳನ್ನಕ್ಕ ಶರಣರ ಸಂಗವಿಂದೆ ಅರಿಯಬೇಕು. ಜೀವವುಳ್ಳನ್ನಕ್ಕ ಅರಿವಿನ ಮುಖದಿಂದ ಅರಿಯಬೇಕು. ಅರಿವನ್ನಬರ ಗುಹೇಶ್ವರನೆಂಬ ಕುರುಹಾಯಿತ್ತು. ॥೬೯॥

ಇದಕ್ಕೆ ಅಕ್ಕಗಳ ಬಿನ್ನಹ ॥

ಲಿಂಗ ಸುಖಸಂಗವಲ್ಲಿ ಮನವೇದ್ಯವಾಯಿತ್ತು. ಇನ್ನೆಲ್ಲಿಯಯ್ಯ ಎನಗೆ ನಿಮ್ಮಲ್ಲಿ ನಿರವಯವು? ಇನ್ನೆಲ್ಲಿಯಯ್ಯ ನಿಮ್ಮಲ್ಲಿ ಕೂಡುವದು? ಪರಮ ಸುಖ ಪರಿಣಾಮ ಮನಮೇರೆದಪ್ಪಿ ನಾನು ನಿಜವನೈದುವ ತಾವ ಹೇಳಾ ಚನ್ನಮಲ್ಲಿಕಾರ್ಜುನಯ್ಯ ॥೭೦॥

ಇಂತು ಮಹಾದೇವಿಯಕ್ಕಗಳು ತಮ್ಮ ಲಿಂಗೈಕ್ಯದ ಸ್ಥಾನದ ಕಾಲ ಸ್ಥಿತಿಗತಿ ಯಾವುದೆಂದು ಬೆಸಗೊಳಲು, ಇದಕ್ಕೆ ಪ್ರಭುದೇವರು ತತ್ಕಾಲ ಸ್ಥಾನ ಸಮರಸಮಂ ನಿರೂಪಿಸಿದ ವಚನ. ॥

ನೀ ನಾನೆಂಬುಭಯ ಸಂಗನಳಿದು, ತಾನು ತಾನಾದ ತ್ರಿಕೂಟವೆಂಬ ಮಹಾಗಿರಿಯ ತುಟ್ಟತುದಿಯ ಮೆಟ್ಟಿ ನೋಡಲು, ಬಟ್ಟ ಬಯಲು ಕಾಣಬಹುದು ನೋಡಾ! ಆ ಬಯಲ ಬೆರಸುವರೆ ತ್ರಿಕೂಟ ಗಿರಿಯೊಳಗೊಂದು ಕಾಣಬಾರದ ಕದಳಿಯುಂಟು ನೋಡಾ! ಆ ಕದಳಿಯ ಕದವಲ್ಲಿ ಒಳಹೊಕ್ಕು ನೋಡಲು, ತೊಳಗಿ ಬೆಳಗುವ ಜ್ಯೋತಿಯುಂಟು ನೋಡಾ! ನಡೆಯಲ್ಲಿಗೆ ತಾಯ್ತು. ಗುಹೇಶ್ವರ ಲಿಂಗದಲ್ಲಿ ಪರಮ ಪದವಿ ನನಗೆ ಸ್ವಯವಹುದು ನೋಡಾ. ॥೭೧॥

ಹೀಗೆಂದು ಪ್ರಭುದೇವರು ನಿರೂಪಿಸಲು, ಮಹದೇವಿಯಕ್ಕಗಳು ಬಸವಣ್ಣ ಮೊದಲಾದ ಗಣಂಗಳಿಗೆ ಲಿಂಗೈಕ್ಯವ ಹವಣಿಸಿ ತನ್ನ ನಿಜೈಕ್ಯವ ನಿಶ್ಚೈಸಿದ ಪ್ರಸ್ಥಾವದ ವಚನ. ॥

ಮಾಟ ಕೂಟವಾಯಿತ್ತಯ್ಯಾ ಬಸವಣ್ಣಂಗೆ, ನೋಟ ಕೂಟವಾಯಿತ್ತಯ್ಯ ಅಲ್ಲಮಪ್ರಭುದೇವಂಗೆ, ಭಾವ ಕೂಟವಾಯಿತ್ತಯ್ಯ ಅಜಗಣ್ಣಂಗೆ, ಸ್ನೇಹ ಕೂಟವಾಯಿತ್ತಯ್ಯ ಸೊಡ್ಡಳಬಾಚರಸರಿಗೆ, ಇವರೆಲ್ಲಂ ಕೂಟವಾಯಿತ್ತಯ್ಯ ಚನ್ನಬಸವಣ್ಣಂಗೆ, ಎನಗೆ ನಿಮ್ಮಲ್ಲಿ ಅವಿರಳದ ಕೂಟ ಚನ್ನಮಲ್ಲಿಕಾರ್ಜುನ. ॥೭೩॥

ಮತ್ತಂ ಅಕ್ಕಗಳು ಆ ಶರಣರಿಗು ತನಗು ಐಕ್ಯ ನಿಃಪತಿಯಿಂ ಬಿನ್ನೈಸುವ ವಚನ ॥

ಮಾಟಕೂಟನೆಂಬುದಿಲ್ಲ ಬಸವಣ್ಣಂಗೆ, ನೋಟಕೂಟವೆಂಬುದಿಲ್ಲ ಪ್ರಭುದೇವರಿಗೆ, ಭಾವ ಕೂಟವೆಂಬುದಿಲ್ಲ ಅಜಗಣ್ಣಂಗೆ, ಸ್ನೇಹಕೂಟವೆಂಬುದಿಲ್ಲ ಬಾಚರಸನೆ, ಇವರೆಲ್ಲರ ಕೂಟವೆಂಬುದಿಲ್ಲ ಚನ್ನಬಸವಣ್ಣಂಗೆ, ಎನಗೆ ನಿಮ್ಮ ಕೂಟವೆಂಬುದಿಲ್ಲ ಚನ್ನಮಲ್ಲಿಕಾರ್ಜುನಾ ॥೭೩॥

ಮತ್ತಂ॥ ಅಕ್ಕಗಳು ತಮ್ಮ ಲಿಂಗೈಕ್ಯವ ನಿಶ್ಚೈಸಿ ತಮ್ಮ ಷಟ್‌ಸ್ಥಲ ನಿಷ್ಪತ್ತಿಯ ನಿರೂಪಿಸುವ ವಚನ ॥

ಭಕ್ತಿಯಾನಪ್ಪೆನಯ್ಯ ಕರ್ತೃಭೃತ್ಯತ್ವವನರಿಯೆ. ಮಹೇಶ್ವರಿಯಾನಪ್ಪೆನಯ್ಯ ವ್ರತ ನಿಯಮ ಫಲವನರಿಯೆ. ಪ್ರಸಾದಿಯಾನಪ್ಪೆನಯ್ಯ ಅರ್ಪಿತ ಅನರ್ಪಿತವ ಮುನ್ನರಿಯೆ. ಪ್ರಾಣಲಿಂಗಿಯಾನಪ್ಪೆನಯ್ಯ ಅನುಭಾವದ ಸಮನವ ನಾನರಿಯೆ. ಶರಣೆಯಾನೆಪ್ಪೆನಯ್ಯ ಸತಿಪತಿಯೆಂಬ ಭಿನ್ನಭಾವವನರಿಯೆ. ಐಕ್ಯಳಾನಪ್ಪೆನಯ್ಯ ಬೆರಸಿ ಭೇದವನರಿಯೆ. ಚನ್ನಮಲ್ಲಿಕಾರ್ಜುನಯ್ಯ ಷಟ್‌ಸ್ಥಲದಲ್ಲಿ ನಿಃಸ್ಥಲದ ವರ್ತನೆ ಪರಿಜ್ಞಾನಿಯಾಗಿಪ್ಪೆನಯ್ಯ ॥೭೪॥

ಹೀಗೆಂದು ಮಹಾದೇವಿಯಕ್ಕಗಳು ಆ ಪ್ರಭುದೇವರು ಮುಖ್ಯವಾದ ಎಲ್ಲ ಪುರಾತನರ ಬೀಳ್ಕೊಂಡ ಪ್ರಸ್ಥಾವದ ವಚನ ॥

ಒಡಲಿಲ್ಲದ, ನುಡಿ ಇಲ್ಲದ, ಕಡೆ ಇಲ್ಲದ, ನಲ್ಲನ ಒಡಗೂಡಿ ಸುಖಿಯಾದೆ ಕೇಳಿರಯ್ಯ. ಭಾಷೆ ಪೈಸರವಿಲ್ಲ. ಓಸರಿಸೆನನ್ಯಕ್ಕೆ. ಆಶೆ ಮಾಡೆನು ಮತ್ತೆ

ಇನ್ನಸುಖಕ್ಕೆ. ಆರಳಿದು ಮೂರಾಗಿ, ಮೂರಳಿದು ಎರಡಾಗಿ, ಎರಡಳಿದು ಒಂದಾಗಿ ನಿಂದೆನಯ್ಯ. ಬಸವಣ್ಣ ಮೊದಲಾದ ಶರಣರಿಗೆ ಶರಣಾರ್ಥಿ. ಪ್ರಭುವಿಂದ ಕೃತಕೃತ್ಯಳಾದೆ. ನಾನು ಮರಿಯಲಾಗದೆಂದು ನಾನು ನಿಮ್ಮವಳೆಂದು ಎನ್ನನು ಚನ್ನಮಲ್ಲಿಕಾರ್ಜುನನ ಬೆರಸೆಂದು ಹರಸುತ್ತಿಹುದು. ॥೭೫॥

ಮತ್ತಂ॥ ಹುಟ್ಟಿದೆ ಶ್ರೀ ಗುರುವಿನ ಹಸ್ತದಲ್ಲಿ. ಬೆಳೆದೆ ನಾನು ಅಸಂಖ್ಯಾತರ ಕರುಣದಿಂದೆ. ಭಾವವೆಂಬ ಹಾಲು, ಸುಜ್ಞಾನವೆಂಬ ತುಪ್ಪ, ಪರಮಾರ್ಥವೆಂಬ ಸಕ್ಕರಿಯನಿಕ್ಕಿದರುನೋಡಾ! ಇಂತಪ್ಪ ತ್ರಿವಿಧಾಮೃತವನು ದಣಿಯಲೆರೆದು ಸಲಹಿದರೆನ್ನ; ವಿವಾಹವ ಮಾಡಿದೀ; ಸಯವಪ್ಪ ಗಂಡಂಗೆ ಕೊಟ್ಟರಿ; ಕೊಟ್ಟ ಮನೆಗೆ ಕಳುಹಲೆಂದು ಅಸಂಖ್ಯಾತರೆಲ್ಲರು ನೆರೆದು ಬಂದಿರಿ; ಬಸವಣ್ಣ ಮೆಚ್ಚಲೊಗೆತನವ ಮಾಡುಸೆ. ಚನ್ನಮಲ್ಲಿಕಾರ್ಜುನನ ಕೈವಿಡಿದು ನಿಮ್ಮ ತಲೆಗೆ ಹುವ್ವ ತಾಹೆನಲ್ಲದೆ, ಹುಲ್ಲ ಕಾರೆನವಧರಿಸಿ ನಿಮ್ಮಡಿಗಳಿಲ್ಲರು ಮರಳಿ ಬಿಜಯಂಗೈವುದು ಶರಣು ಶರಣಾರ್ಥಿ. ॥೭೬॥

ಇಂತು ಮಹದೇವಿಯಕ್ಕಗಳು ಬಸವರಾಜದೇವರು ಚನ್ನಬಸವರಾಜದೇವರು ಪ್ರಭುದೇವರು ಮುಖ್ಯವಾದ ಅಸಂಖ್ಯಾತರ ಬೀಳ್ಕೊಂಡು ಕಲ್ಯಾಣಪುರಮಂ ಪೊರಮಟ್ಟು ಬರುತ ಅಸಂಖ್ಯಾತರ ವಿಯೋಗದಿಂದೆ ಅವಸ್ಥೆಯಲ್ಲಿ ನುಡಿದ ಪ್ರಸ್ಥಾವದ ವಚನ. ॥

ಅಯ್ಯ ನಿಮ್ಮ ಮಹಂತರ ಕೂಡಿದ ಸುಖವನುಪಮೆಗೆ ತರಬಾರದಯ್ಯ. ಅಯ್ಯ ನಿಮ್ಮ ಮಹಂತರ ಕೂಡಿ ಅಗಲುವ ಧಾವತಿಯಿಂದ ನಾವುದೆ ಕರಲೇಸಯ್ಯ. ಚನ್ನಮಲ್ಲಿಕಾರ್ಜುನಯ್ಯ ನಿಮ್ಮ ನಿಜವನರಿದ ಮಹಾಮಹಿಮರನಗಲಿ ನಿಲಲಾರೆನಯ್ಯ. ॥೭೭॥

ಹೀಗೆಂದು ಮಹದೇವಿಯಕ್ಕಗಳು ಶರಣರನಗಲ್ದ ದುಃಖಮುಂ ತಮ್ಮ ತಾಪ ಸಂತೈಸಿಕೊಂಡು, ಶ್ರೀಗಿರಿಮುತ್ತಲಭಿಮುಖವಾಗಿ ಬರುತ್ತ ಮಹಾರಣ್ಯಮಂ ಪೊಕ್ಕು ಚನ್ನಮಲ್ಲಿಕಾರ್ಜುನನ ವಿಕಳಾವಸ್ಥೆಯಿಂ ಸುಳಿದಾಡುತ್ತಿರ್ದ ಪ್ರಸ್ಥಾವನ ವಚನ. ॥

ಇಂದ್ರನೀಲದ ಗಿರಿಯನೇರಿಕೊಂಡು ಚಂದ್ರಕಾಂತವ ಸಿಲೆಯನಪ್ಪಿಕೊಂಡು ಕೊಂಬ ಬಾರಿಸುತ್ತೆ ಶಿವನೆ ನಿಮ್ಮ ನೆನವುತ್ತ ಎಂದಿಪ್ಪೆನೊ?

ಅಂಗ ಭಂಗ ವಸನ ಭಂಗನಳಿದು ನಿಮ್ಮನೆಂದಿಂಗೆ ನೆರಿಪೆನಯ್ಯ ಚನ್ನಮ ಲ್ಲಿಕಾರ್ಜುನ ॥೭೪॥

ಮತ್ತಂ ಒಡಲ ಕಳವಳಕ್ಕಾಗಿ ಅಡವಿಯ ಸೊಕ್ಕೆ. ಗಿಡು ಗಿಡುವ ಪ್ಪವೆ ಬೇಡಿದೆನೆನ್ನಂಗಕ್ಕೆಂದು. ಅವು ನೀಡಿದವು ತಮ್ಮ ಲಿಂಗಕ್ಕೆಂದು. ಆನು ಬೇಡಿ ಭವಿಯಾದೆನು. ಅವು ನೀಡಿ ಭಕ್ತರಾದವು. ಇನ್ನು ಬೇಡಿದೆನಾದರೆ, ಚನ್ನಮಲ್ಲಿಕಾರ್ಜುನಯ್ಯ ನಿಮ್ಮಾಣೆ ॥೭೯॥

ಇಂತು ಮಹದೇವಿಯಕ್ಕಗಳು ಶ್ರೀ ಗಿರಿಯತ್ತ ಬರುತ್ತ ವನಾಂತ ರದೊಳು ಖಗಮೃಗಂಗಳ ಕಂಡು, ನುಡಿಸುತ್ತಿರ್ದ ಪ್ರಸ್ಥಾವದ ವಚನ॥

ಅಳಿಸಂಕುಳವೆ, ಮಾವುರವೆ, ಬೆಳುದಿಂಗಳೆ, ಕೊಗಿಲೆಯೆ, ನಿಮ್ಮನೆ ಲ್ಲರನು ಬಂದು ಬೇಡುವೆನು. ಎನ್ನೊಡೆಯ ಚನ್ನಮಲ್ಲಿಕಾರ್ಜುನ ದೇವರ ಕಂಡರೆ ಕರೆದು ತೋರಿರೆ ॥೮೦॥

ಮತ್ತಂ, ಚಿಲಿಮಿಲಿ ಎಂದೋದುವ ಗಿಳಿಗಳಿರಾ, ನೀವು ಕಾಣಿರೆ, ಸ್ವರವೆತ್ತಿ ಪಾಡುವ ಕೋಗಿಲೆಗಳಿರಾ, ನೀವು ಕಾಣಿರೆ? ಎರಗಿ ಬಂದಾಡುವ ತುಂಬಿಗಳಿರಾ, ನೀವು ಕಾಣಿರೆ? ಸರವರದೊಳಗಾಡುವ ಹಂಸಗಳಿರಾ, ನೀವು ಕಾಣಿರೆ? ಗಿರಿಗಂಹರದೊಳಗಾಡುವ ಪುಳಿಂದರೆ, ನೀವು ಕಾಣಿರೆ? ಚನ್ನಮ ಲ್ಲಿಕಾರ್ಜುನನೆಲ್ಲಿದ್ದಾನೆಂದು ಹೇಳಿರೆ? ॥ ೮೧॥

ಮತ್ತಂ, ವನವೆಲ್ಲ ನೀವೆ. ವನದೊಳಗಣ ದೇವತರುವೆಲ್ಲ ನೀವೆ. ತರುವಿನೊಳಗಾಡುವ ಖಗಮೃಗವೆಲ್ಲ ನೀವೆ. ಚನ್ನಮಲ್ಲಿಕಾರ್ಜುನ ಸರ್ವ ಭರಿತನಾಗಿ, ಎನಗೆ ಮುಖದೋರೆ ॥೮೨॥

ಇಂತು ಮಹದೇವಿಯಕ್ಕಗಳು ವನಾಂತರದೊಳ್ಪೆತರುತ್ತ ಪರ್ವತವ ನೇರುತ್ತಿರ್ದ ಪ್ರಸ್ಥಾವದ ವಚನ.

ಮೂಲದ್ವಾರದ ಬೇರಮೆಟ್ಟಿ ಭೂಮಂಡಲವನೇರಿದೆ; ಆಚಾರದ ಬೇರ ಹಿಡಿದು ಐಕ್ಯದ ತುದಿಯನೇರಿದೆ; ವೈರಾಗ್ಯದ ಸೋಪಾನದಿಂದೆ ಶ್ರೀಗಿರಿಯನೇರಿದೆ; ಕೈವಿಡಿದು ತೆಗೆದುಕೊಳ್ಳಾ ಚನ್ನಮಲ್ಲಿಕಾರ್ಜುನ ॥೮೩॥

ಇಂತು ಶ್ರೀಗಿರಿಯನೇರಿ ಶಿವನೊಳಗೆ ಐಕ್ಯವಾಗಬೇಕೆಂದು ನೊಂದು ಬಿನ್ನೈಸುವ ಪ್ರಸ್ಥಾವದ ವಚನ.

ಕ್ರೀಯುಳ್ಳೊಡಂತೊಂವಾಸಿಸಲ್ಭಕ್ತರನುಡಿಗಡಣವುಳ್ಳೊಡಂತೊಂವಾ ಸ ಶ್ರೀಗಿರಿಯನೇರಿ ನಿಮ್ಮ ಬೆರಸಿದರೆ ಎನ್ನಾಸೆಗೆ ಕಡೆಯೆ ಆಯ್ಯ? ಆವಾ ಪೆಯು ಇಲ್ಲದೆ ನಿಮ್ಮ ನಂಬಿ ಕೆಟ್ಟಿನಯ್ಯ ಚನ್ನಮಲ್ಲಿಕಾರ್ಜುನ ॥೮೪॥

ಮತ್ತಂ ಬಯಲು ಲಿಂಗವೆಂಬೆನೆ? ಬಗೆದು ನಡೆವಲ್ಲಿ ಕೋಯಿತ್ತು. ಬಿಟ್ಟ ಲಿಂಗವೆಂಬೆನೆ? ಮೆಟ್ಟಿ ನಿಂದಲ್ಲಿ ಹೋಯಿತ್ತು. ತರುಮರಾದಿಗಳು ಲಿಂಗವೆಂಬೆನೆ? ತರದಲ್ಲಿ ಹೋಯ್ತಿತ್ತು. ಲಿಂಗಜಂಗಮವ ಪಾದವೆ ಗತಿ ಎಂದು ನಂಬಿ ಸಂಗನಬಸವಣ್ಣನ ಮಾತ ಕೇಳದೆ ಕೆಟ್ಟಿನಯ್ಯ ಚನ್ನ ಮಲ್ಲಿಕಾರ್ಜುನ ॥೮೫॥

ಮತ್ತಂ ಬೆರಸುವರೆ ಬೇಗ ತೋರಾ. ಹೊರ ಹಾಕದಿರಯ್ಯ. ನಿಮ್ಮ ಲ್ಲಿಗೆ ಸಲೆ ಸಂದ ತೊತ್ತಾನು. ಎನ್ನ ಹೊರಹಾಕದಿರಯ್ಯಾ. ಚನ್ನಮಲ್ಲಿ ಕಾರ್ಜುನಯ್ಯ ನಿಮ್ಮ ನಂಬಿ ಬೆಂಬಳಿ ಬಂದೆನು. ಇಂಬುಗೊಳ್ಳಯ್ಯ ॥೮೬॥

ಇಂತು ಮಹದೇವಿಯಕ್ಕಗಳು ಚನ್ನಮಲ್ಲಿಕಾರ್ಜುನನೊಳಗೆ ಸಮರಸೈ ಕ್ಯಮುಂ ತೀಕ್ಷ್ಣದಿಂ ಬಯಸಿ ಉಪಾವಸ್ಥೆಗೈದು ಬಂದು ಕದಳಿಯಂ ಕಂಡ ಪ್ರಸ್ಥಾವದ ವಚನ.

ವನವೆಲ್ಲ ಕಲ್ಪತರು, ಗಿಡವೆಲ್ಲ ಮರುಜೀವಣಿ, ಶಿಲೆಗಳೆಲ್ಲ ಪರುಷ, ನೆಲನೆಲ್ಲ ಅವಿಮುಕ್ತಿ ಕ್ಷೇತ್ರ, ಜಲವೆಲ್ಲ ನಿರ್ಜರಾಮೃತ, ಮೃಗವೆಲ್ಲ ಪರುಷ, ಮೃಗ, ಎಡಹುವ ಹರಳೆಲ್ಲ ಚಿಂತಾಮಣಿ, ಚನ್ನಮಲ್ಲಿಕಾರ್ಜುನಯ್ಯನ ನುಚ್ಚಿನ ಗಿರಿಯ ಸುತ್ತಿ ನೋಡುತ್ತ ಬಂದು ಕದಳಿಯ ಬನವ ಕಂಡೆನಾನು ॥೮೭॥

ಇಂತು ಮಹದೇವಿಯಕ್ಕಗಳು ಕದಳಿಯ ಬಾಗಿಲಲ್ಲಿ ನಿಂದು ಕರ ಕಮಲದಿಷ್ಟಲಿಂಗನುಂ ತೂರ್ಯದಿಂ ಜ್ಞಾನ ಪ್ರಭಾವದೊಳು ಸ್ತುತಿಸು ತ್ತಿರಲು, ಅಂತರಂಗದ ಜಿತ್ಪ್ರಕಾಶವೆ ಒಹಿಷ್ಕರಿಸಿ ಜಂಗಮ ಸ್ವರೂಪವ ಪಡೆದು ಹೊಳೆವ ಕೆಂಜೆಡೆಗಳಿಂ ಸುಲಿಪಲ್ಲಳಿಂ ಕಂಗಳ ಕಾಂತಿಯಿಂ ದರ ಹಸಿತ ವದನದಿಂ ಮಾಣಿಕ್ಯ ಮಕುಟದಿಂ ತೊಳಗಿ ಬೆಳಗುತ್ತೆ ಮುಂದೆ ಪ್ರತ್ಯಕ್ಷವಾಗಲು, ಮಹದೇವಿಯಕ್ಕಗಳು ಆ ಶ್ರೀಮೂರ್ತಿಯಂ ಕಂಡ ಪ್ರಸ್ಥಾವದ ವಚನ॥

ಹೊಳೆವ ಕೆಂಜೆಡೆಗಳ, ಮಣಿನುಣುಕುಟದ ಒಪ್ಪುವ ಸುಲಿಪಲ್ಲ, ನಗೆ, ನೊಗದ ಕಂಗಳ ಕಾಂತಿಯಿಂ ಈರೇಳು ಭುವನನುಂ ಬೆಳಗುವ ದಿವ್ಯ

ಸ್ವರೂಪನ ಕಂಡೆ ನಾನು! ಕಂಡೆನ್ನ ಕಂಗಳ ಬರಹಿಂಗಿತ್ತಿಂದು! ಗಂಡ ಗಂಡರೆಲ್ಲರ ಹೆಂಡರಾಗಿ ಆಳುವ ಗರುವನ ಕಂಡೆ! ನಾನು ಜಗದಾದಿ ಶಕ್ತಿಯೊಳು ಬೆರಸಿ ಪಾತನಾಡುವ ಪರಮ ಗುರು ಚನ್ನಮಲ್ಲಿಕಾರ್ಜುನನ ನಿಲವ ಕಂಡು ಬದುಕಿದೆನು ॥೮೮॥

ಇಂತು ಮಹದೇವಿಯಕ್ಕಗಳು ಆ ಚರಮೂರ್ತಿಯಂ ಕಂಡು ಸ್ತುತಿಸಿ ನಮಸ್ಕಾರಮಂ ಮಾಡಿ ಎಲೆ ದೇವ, ಸಕಲ ಗಣಂಗಳುಪಟಳಕ್ಕಂಜಿ ನಿಮ್ಮ ಶರಣರ ಮರಹೊಕ್ಕೆ. ಅವರ ಕಾರುಣ್ಯಮಂ ಪಡೆದು ಬಂದ್ಯ ನಿಮ್ಮ ಶ್ರೀಮೂರ್ತಿಯಂ ಕಂಡೆ. ಇನ್ನು ಎನ್ನ ನಿಮ್ಮೊಳಗೆ ಐಕ್ಯವ ಮಾಡಿ ಕೊಳ್ಳಾ ಚನ್ನಮಲ್ಲಿಕಾರ್ಜುನಾ ಎಂದು ಬಿನ್ನೈಸಲು, ಆ ಚಿತ್ಸ್ವರೂಪನಪ್ಪ ಜಂಗಮವು ಭವಗೆಟ್ಟು ಬಂದೆಯಾ ಮಗಳೆ ಬಾರೆಂದು ತೆಗೆದು ಬಿಗಿದಪ್ಪಲು, ಆ ಮಹಾದೇವಿಯಕ್ಕಗಳು ಲಿಂಗೈಕ್ಯವಾದ ವಚನ॥

ಕದಳಿ ಎಂಬುದು ತನು, ಕದಳಿ ಎಂಬುದು ಮನ, ಕದಳಿ ಎಂಬುದು ವಿಷಯಂಗಳು, ಕದಳಿ ಎಂಬುದು ಭವ ಘೋರಾರಣ್ಯ, ಕದಳಿ ಎಂಬುದ ಕೆದ್ದು, ತವೆ ಬದುಕಿ ಬಂದು ಕದಳಿಯ ಬನದಲ್ಲಿ ಭವಹರನ ಕಂಡೆನು. ಭವ ಕೆಟ್ಟು ಬಂದೆಯಾ ಮಗಳೇ ಎಂದು ಕರುಣದಿಂ ತೆಗೆದು ಬಿಗಿದಪ್ಪಿದರೆ ಚನ್ನಮಲ್ಲಿಕಾರ್ಜುನನ ಹೃದಯ ಕಮಲದಲ್ಲಿ ಅಡಗಿದೆನು ॥೮೯॥

ಮತ್ತಂ॥ ಅಕ್ಕಗಳು ನಿಜೈಕ್ಯವನೈದಿ ಶಬ್ದಮುಗ್ಧವಾದೆನೆಂದು ಬಿನ್ನೈಸುವ ವಚನ ॥

ಲಿಂಗವೆನ್ನೆ ಲಿಂಗೈಕ್ಯವೆನ್ನೆ ಸಂಗವೆನ್ನೆ ನಿಸ್ಸಂಗವೆನ್ನೆ ಆಯಿತ್ತೆನ್ನೆ ಅಗದೆನ್ನೆ ನೀನೆನ್ನೆ ನಾನೆನ್ನೆ. ಚನ್ನಮಲ್ಲಿಕಾರ್ಜುನಲಿಂಗದಲ್ಲಿ ಘನಲಿಂಗೈಕ್ಯವಾದ ಬಳಿಕ ಮತ್ತೀನು ಎನಲೊಲ್ಲದೆ ಇದ್ದೆನು ॥೯೦॥

ಇಂತೀ ಮಹದೇವಿಯಕ್ಕಗಳು ಚನ್ನಮಲ್ಲಿಕಾರ್ಜುನನು ತನ್ನ ಹೃತ್ಕಮಲ ಮಧ್ಯದಲ್ಲಿ ವಾರಿಕಲ್ಲು ವಾರಿಯ ಬೆರೆದಂತೆ ಉಪ್ಪಿನ ಪೊಟ್ಟಣವು ಉದಕದಲ್ಲಿ ಜೈಚಿಟ್ಟಂತೆ ಕ್ಷೀರ ಕ್ಷೀರ ಬೆರೆದಂತೆ ಅಡಗಿಸಿಕೊಂಡು ನಿರವಯವಾಗಲು, ಇತ್ತ ಕಲ್ಯಾಣದೊಳಗೆ ಚನ್ನಬಸವರಾಜದೇವರು ಬಸವಾದಿ ಪ್ರಮಥರ ಮಧ್ಯದಲ್ಲಿ ಅಕ್ಕಗಳು ಪ್ರಭುದೇವರೊಳಗೆ ನಿರವಯರಾದಳೆಂದು ಆ ಅಕ್ಕಗಳ ಸ್ತೋತ್ರಮಂ ಮಾಡಿದ ಪ್ರಸ್ಥವದ ವಚನ॥

ತನುವಿನೊಳಗಿದ್ದು ತನುವ ಗೆದ್ದಳು. ಮನದೊಳಗಿದ್ದು ಮನವ ಗೆದ್ದಳು. ವಿಷಯದೊಳಗಿದ್ದು ವಿಷಯಂಗಳ ಗೆದ್ದಳು. ಅಂಗ ಸಂಗವ ತೊರೆದು, ಭವವ ಗೆದ್ದಳು. ಕೂಡಲಚನ್ನಸಂಗಯ್ಯನ ಹೃದಯ ಕಮಲವ ಬಗೆದು ಹೊಕ್ಕು ನಿಜಪದವನೈದಿದ ಮಹದೇವಿಯಕ್ಕನ ಶ್ರೀ ಪಾದಕ್ಕೆ ನಮೋ ನಮೋ ಎಂಬೆನು. ॥೯೧॥

ಆ ಸಮಯದಲ್ಲಿ ಮಡಿವಾಳ ತಂದೆಗಳು ಮಹದೇವಿಯಕ್ಕಗಳಿಗೆ ಊರಿ ಕರ್ಪೂರ ಸಂಯೋಗವಾಯಿತೆಂದು ಸ್ತುತಿಸಿದ ವಚನ. ॥

ಕಂಗಳ ನೋಟ ಕರಸ್ಥಲಿದ ಪ್ರಾಣ. ಅಂಗ ವಿಕಾರ ನಿರ್ವಿಕಾರವಾಯಿತ್ತು. ಸಂಗ ಸುಖ ನಿಸ್ಸಂಗವಾಯಿತ್ತು. ಹೆಂಗುಸೆಂಬ ಭಾವ ಬಯಲು ಬೆರಸಿತ್ತು. ಕಲಿದೇವರ ದೇವ ನಿಮ್ಮನೊಲಿಸಿ ಒಚ್ಚತವಾದ ಮಹದೇವಿಯಕ್ಕನ ಪಾದವ ನೆನೆದು ಆನು ಬದುಕಿದೆನು. ॥೯೨॥

ಇತಿ ಶ್ರೀಮತ್ಸಕಲ ಗಣ ಪುರಾತನರೊಳ್ ಪ್ರಭುದೇವರು ಮಹಾನುಭಾವ ಸದ್ಗೋಷ್ಠಿಯಂ ಮಾಡಿದ ಶೂನ್ಯ ಸಂಪಾದನೆಯೊಳ್ ಮಹದೇವಿಯಕ್ಕಗಳ ಸಂಪಾದನೆಗಂ ಷೋಡಶೋಪದೇಶ ಸಮಾಪ್ತ.

The Vijay College
LIBRARY,
VIJAY COLLEGE,
BIJAPUR.

ಪ್ರಭುಪರ್ಯಟಣ ಸಂಪಾದನೆ

(ಸಪ್ತಾದಶೋಪದೇಶ)

ಕಂದ॥ ಎಲ್ಲ ಗಣಂಗಳ ಬೀಳ್ಕೊಂ। ಡಲ್ಲಮ ಪ್ರಭು ದೇಶ ಪಾವ
ನಾರ್ಥಂ ಚರಿಸಿ ತಾ। ಸಲ್ಲೀಲೆಯಿಂದ ಮುದದಿಂ। ಕಲ್ಯಾಣಕ್ಕೆ ಬಂದ
ಪರಿಯದೆಂತೆನಲುಸುರ್ವೆಂ॥

ಅದೆಂತೆಂದೊಡಾ ಚನ್ನಬಸವರಾಜದೇವರು ಮಡಿವಾಳಮಾಚಿತಂದೆ
ಗಳು ಮಹದೇವಿಯಕ್ಕನ ಐಕ್ಯಸ್ಥಲಮುಂ ಕೊಂಡಾಡುತ್ತಿರಲು ಆ ಸಮ
ಯದಲ್ಲಿ ಪ್ರಭುದೇವರು ಎಲ್ಲರ ಸ್ತುತಿಗಳಂ ಸಂತಯಿಸಿ ಮತ್ತೊವ್ವ
ಬಂದೆಪೆನೆಂದು ಎಲ್ಲರ ಕೈಯಲ್ಲಿ ಕಳುಹಿಸಿಕೊಂಬ ಪ್ರಸ್ತಾವದ ವಚನ॥

ನಚ್ಚು ಮಚ್ಚಿನಸುಖ ಪರಿಣಾಮ ಸನ್ನಿಹಿತವಾದ ಬಳಿಕ ಇನ್ನುಅನು
ಭಾವ ನೆಂಬುದಿಲ್ಲ. ಅದಂತಿರಲಿ. ನುತಿಯ ಗಡಣದ ಶಶಿಧರ ನಟ್ಟಿದ
ಬೆಸನ ಮಾಡ ಬಂದ ಬಳಿಕ ಹೇಳಿದ ಮಾಣಿಹವ ಮಾಡುತ್ತಿಹುದಲ್ಲದೆ
ಅದು ತನ್ನ ಲೀಲೆ ತಾನು ಬೆರಿಸುವಂದಿಂಗೆ ಬೆರಸಲಿ. ಆ ದಿನಕ್ಕೆ ಬಂದು
ಹೇಳುವ ನಿರ್ಣಯವ ಗುಹೇಶ್ವರ ಲಿಂಗದ ಆಣತಿ ಬಸ್ಸನ್ನಬರ ಶರಣ
ರೆಲ್ಲರು ಸಂಗನ ಬಸವಣ್ಣ ಸನ್ನಿಹಿತ ನಿತ್ಯರಾಗಿರಯ್ಯ ॥೧॥

ಆ ಸಮಯದಲ್ಲಿ ಸಿದ್ಧರಾಮಯ್ಯ ದೇವರು ಅನುಜ್ಞೆಯಂ ಪಡೆದು
ಬೀಳ್ಕೊಂಬ ಪ್ರಸ್ತಾವದ ವಚನ॥

ಎಲೆ ಎಲೆ ಅಯ್ಯ, ನೀ ಹೇಳಯ್ಯ ಎನಗೆ ಗತಿಯನು ಮತಿಯನು.
ನಿಮ್ಮಲ್ಲಿ ಸಮರಸವೆಂತು ಹೇಳಾ? ಮೂರನೆಯ ಕರುವಾಡದ ಮೇಲುವಾ
ಗಿಲ ಮನೆಯೊಳಗಿಪ್ಪೆನೋ ನಾನು? ಜೌಕ ಮಧ್ಯದ ಎಂಟೆಸಳ ಮನೆಯ
ಮೋಹರದ ನಡುವಣ ಕೋಣೆಯೊಳಗಿಪ್ಪೆನೋ ನಾನು? ಕಾಮನ ಸುಟ್ಟ
ಪಂಜರವ ಬಿಟ್ಟು ನಿಲುವೆನೊ? ಹೇಳು, ಹೇಳಾ ನಿರ್ಣಯವ, ಎಲೆ ಎಲೆ
ಕಪಿಲಸಿದ್ಧಮಲ್ಲಿನಾಥಯ್ಯ ॥೨॥

ಇದಕ್ಕೆ ಪ್ರಭುದೇವರ ಪ್ರತ್ಯುತ್ತರ॥

ಗುರುತತ್ವದಲ್ಲಿ ಹುಟ್ಟಿ, ಶಿವತತ್ವದಲ್ಲಿ ಬೆಳೆದು, ಪರತತ್ವದಲ್ಲಿ ಮನ
ವಾದ ಶರಣಂಗೆ ಕಾಯವಳಿದು ನಿರ್ವಯಲಾದಡೇನು? ಕಾಯಸಮಾಧಿ,

6274

ಕರಣಸಮಾಧಿ, ಭಾವ ಸಮಾಧಿಯಾದ ಬಳಿಕ ಗುಹೇಶ್ವರ ಲಿಂಗದಲ್ಲಿ
ಬಯಲ ಭ್ರಮೆಯ ಕಳೆದು ಸುಜ್ಞಾನ ಸಮಾಧಿಯನ್ಹೈದಬಲ್ಲರೆ, ಅದು
ಸಹಜ ಸಮಾಧಿ ಕೇಳಾ ಸಿದ್ಧರಾಮಯ್ಯ ॥೩॥

ಇಂತು ಸಿದ್ಧರಾಮಯ್ಯ ದೇವರಿಗೆ ನಿಜಯೋಗದ ನಿಲುಕಡೆಯ
ನೊಪಿಸಿ ಬಿಜಯಂಗೈಯ್ಯಲು ಬಸವರಾಜದೇವರು ಪ್ರಭುದೇವರನಗಲಿ
ಪ್ರಳಾಪಿಸುತ್ತಿದ ಪ್ರಸ್ತಾವದ ವಚನ॥

ನಿಮ್ಮ ನೋಡ ನೋಡಲಿಕೆ ಎನ್ನ ಹರಣವಿದ್ದುದ ಕಂಡೆ. ನಿಮ್ಮ
ನಗಲಲೆನ್ನ ಹರಣವಿಲ್ಲಯ್ಯ. ಇರುಳೊಂದು ಜುಗ ಮೇಲೆ ಕೆಡೆದಂತೆ
ಆದೆ. ಎಂತು ಆಳ್ವಾಡಿ ಕಳೆವೆನಯ್ಯ? ಹಲವನೆಲ್ಲವ ಹಂಬಲಿಸಿ ಹಲು
ಬುವೆನಯ್ಯ. ಕೂಡಲ ಸಂಗನ ಶರಣರನಗಲುವ ಭಾವತಿಯಿಂದ ಮರ
ಣವೇ ಲೇಸಯ್ಯಾ ॥೪॥

ಪುತ್ತಂ॥ ಅಯ್ಯ ನಿಮ್ಮ ಮಹಾನುಭಾವರನಗಲಿ ಬದುಕಲಾರೆ.
ಶಿವಧೋ. ಕಂಗಳಶ್ರುಗಳಿಂದ ಮುಂದುಗಾಣೆ. ಲಿಂಗಸಂಗಿಗಳನಗಲಿ ನಾನೆಂ
ತು ಬದುಕುವೆ ಕೂಡಲ ಸಂಗಮದೇವಾ? ॥೫॥

ಮತ್ತಂ॥ ಜಜ್ಜನೆ ಜರಿದೆನು ಜಜ್ಜನೆ ಜರಿದೆನು ನೋಡಯ್ಯ!
ಬಿಬ್ಬನೆ ಬಿರಿದೆನು ಬಿಬ್ಬನೆ ಬಿರಿದೆನು ಬಿಬ್ಬನೆ ಬಿರಿದೆನು ನೋಡಯ್ಯ!
ನಾನೊಬ್ಬನೆ ಉಳಿದೆನು ನಾನೊಬ್ಬನೆ ಉಳಿದೆನು ನಾನೊಬ್ಬನೆ ಉಳಿದೆನು
ನೋಡಯ್ಯ ಕೂಡಲ ಸಂಗಮದೇವ ನಿಮ್ಮ ಶರಣರನಗಲಿದ ಕಾರಣ!

ಮತ್ತಂ॥ ಕಂಡಡೆ ಮನೋಹರವು. ಕಾಣದಿರ್ದಡೆ ಅವಸ್ಥೆ ನೋಡಯ್ಯ.
ಹಗಲು ಇರುಳಹುದು ಇರುಳು ಹಗಲಹುದು. ಇರುಳು ಹಗಲೆಂದು
ಜುಗ ಮೇಲೆ ಕೆಡೆದಂತೆ ಇಹುದು. ಕೂಡಲ ಸಂಗನ ಶರಣರನಗಲುವ
ಭಾವತಿಯಿಂದ ಮರಣವೆ ಲೇಸು ಕಂದಯ್ಯ ॥೭॥

ಚಿಕ್ಕ ದಣ್ಣಾಯಕರ ವಿಯೋಗಾವಸ್ಥೆಯ ವಚನ॥

ಮನಕ್ಕೆ ಮನವೇಕಾರ್ಥವಾಗಿ ಪ್ರಾಣಕ್ಕೆ ಪ್ರಾಣವೇಕಾರ್ಥವಾಗಿ
ಭಾವಕ್ಕೆ ಭಾವವೇಕಾರ್ಥವಾಗಿ, ಸಂಗಕ್ಕೆ ಸಂಗ ಸಮರತಿಯಾಗಿ ಕೂಡಿದ
ಕೂಟವನಗಲಬಾರದಯ್ಯ! ಅಗಲಿ ಒಂದು ನಿಮಿಷ ಸೈರಿಸಬಾರದಯ್ಯ!
ಕೂಡಲಚನ್ನಸಂಗ ನಿಮ್ಮನಚ್ಚು ಮಚ್ಚಿನ ಶರಣರ ನಗಲುವ ಅಗಲಿಕೆ
ಎನ್ನ ಪ್ರಾಣದ ಹೋಕಯ್ಯ ॥೮॥

ಇಂತು ಚನ್ನಬಸವರಾಜದೇವರು ವಿಯೋಗಾವಸ್ಥೆಯೊಳಿರಲು, ಮ
ವಾಳ ತಂದೆಗಳು ಸಂತೈಸುವ ವಚನ॥

ಹೊರಗಿದ್ದಾನೆಂಬೆನೆ? ಒಳಗು ತಾನೆ ನೋಡಾ; ಒಳಗಿದ್ದಾನೆಂಬೆನೆ? ಹೊರಗು ತಾನೆ ನೋಡಾ; ಒಳಗು ಹೊರಗು ಸರ್ವ ಸನ್ನಿಹಿತವಾಗಿರ್ಪ ಸಮನಸವ ಮಹಿಮನ ತಿಳಿದು ನೋಡಾ; ಅಗಲಲಿಲ್ಲದೆ ಘನವ ಅಗಲಿದೆನೆಂಬ ಮಾತು ಶಿವ ಶರಣರ ಮನಕ್ಕೆ ಬಹುದೆ? ಮರಣವಿಲ್ಲದ ಮರಿಮನ ನಿಲವ ತನ್ನಲ್ಲಿ ನೋಡಿ ಶರಣೆಂಬುದಲ್ಲದೆ ಮರೆಯಲಹುದೆ? ತೆರಪಿಲ್ಲದ ನಿಲವು ಕಲಿ ದೇವರ ದೇವನು ಕರಸ್ಥಲದೊಳೈದಾನೆ ಕಾಣಾ ಚನ್ನಬಸವಣ್ಣ ॥೯॥

ಮತ್ತಂ ॥ ಮಡಿವಾಳಯ್ಯಗಳು ಪ್ರಭುದೇವರ ದೇಶಾಂತರಮಂ ಕೊಂಡಾಡಿದ ವಚನ ॥

ದೇಶ ವಿನೋದಿಗಳಲ್ಲ, ದೇಶ ಭಾಷಿತರಲ್ಲ, ದೇಶಾಶ್ರಯವ ತವ್ಮ ದೆಂದೆನ್ನರು. ದಾಸ ಭಾವದಲ್ಲಿಪ್ಪ ಸದ್ಭಕ್ತರಲ್ಲಿ ದೇಶಾಂತರವ ಮಾಡುವವರು ಭಕ್ತವತ್ಸಲರು ಭಕ್ತಿವತ್ಸಲರು ಕಲಿದೇವಾ ನಿಮ್ಮ ಶರಣರು ॥೧೦॥

ಮತ್ತಂ॥ ಭಕ್ತವತ್ಸಲರು ಕಲಿದೇವನ ಶರಣರು; ಮಹ ಪುರುಷರು; ಕಾಮ ಕ್ರೋಧಾದಿಗಳ ನಂದಿಸುವರು! ಮದ ಮತ್ಸರವ ಸಿಂಹಾಸನವ ಮಾಡಿಕೊಂಬರು; ಆಸೆಯ ಹಾರಕ್ಕೆ ಕೈಯ್ಯಾನರು; ದೇಶವೆನ್ನರು! ದೇಶಾಂತರವ ಮಾಡುವರು ಕಲಿದೇವ ನಿಮ್ಮ ಶರಣರು. ॥೧೧॥

ಇಂತು ಪ್ರಭುದೇವರು ಬಸವಣ್ಣ ಚನ್ನಬಸವಣ್ಣ ಮಡಿವಾಳ ಮಾಚಿ ತಂದೆಗಳಿಗೆ ಮಹಾಜ್ಞಾನಮಂ ಬೋಧಿಸಿ, ಸಕಲ ಪುರಾತನರ ಕೃತಾರ್ಥರಂ ಮಾಡಿ, ಮಹದೇವಿಯಕ್ಕಗಳ ಶಿವತತ್ವಮಂ ನಿರ್ವಹಿಸಿ ತೋರಿ ಕೊಟ್ಟು, ಪರ್ವತಕ್ಕೆ ಕಳುಹಿ, ಸಿದ್ಧರಾಮಯ್ಯ ದೇವರಿಗೆ ನಿಜ ಸಮಾಧಿ ನಿರ್ಣಯಮಂ ತಿಳುಹಿ ಸೊನ್ನಲಿಗೆಯ ಪುರಕ್ಕೆ ಕಳುಹಿ, ತಾನು ನಿರ್ಗಮನ ನಡೆವಿಡಿದು ನಾನಾ ದೇಶ, ನಾನಾ ಗಿರಿ, ಗುಹಾಂತರಂಗಳೊಳು ಸುಳಿದಾಡುತಿರ್ದನದೆಂತೆಂದೊಡೆ,

ವಚನ॥ ನಡೆದಡೆ ನಿರ್ಗಮನಿ, ಸುಳಿದಡೆ ಗತಿರಹಿತನನೇನೆಂಬೆನೆಂತೆಂಬೆ? ಅಘಟಿತ ಘಟಿತನ ನೇನೆಂಬೆನೆಂತೆಂಬೆ? ಅಖಂಡಿತ ಮಹಿಮನನೇನೆಂಬೆ? ಆದಿಯಿಂದತ್ತತ್ತ ಗುಹೇಶ್ವರನ ಶರಣ ಅಲ್ಲಯ್ಯನ ಸುಳುಪು ಜಗಕ್ಕೆ ಪಾವನ. ॥೧೨॥

ಮತ್ತಂ॥ ನಡೆದಡೆ ನಡೆಗೆಟ್ಟ ನಡೆಯ ನಡೆವುದಯ್ಯ! ನುಡಿದಡೆ ನುಡಿಗೆಟ್ಟ ನುಡಿಯ ನುಡಿವುದಯ್ಯ! ಒಡಲ ಹಿಡಿದಡೆ ಹಿಡಿಯದೆ ಹಿಡಿವುದಯ್ಯ! ಕೂಡುವರೆ ಕೇಡಿಲ್ಲದ ಕೂಟವ ಮಾಡುವವಯ್ಯ ಗುಹೇಶ್ವರ ನಿಮ್ಮಲ್ಲಿ ನಿಲವುದಯ್ಯ. ॥೧೩॥

ಗಿರಿಗಳ ಗುಹೆಗಳ ಕಂದರದಲ್ಲಿ ನೆಲಹೊಲನ ಮುಟ್ಟದೆ ಇಪ್ಪೆ ದೇವ. ಎಲ್ಲಿ ನೋಡಿದಡಲ್ಲಿ ಇಪ್ಪೆ ದೇವಾ. ಮನಕ್ಕಗಮ್ಯ ಅಗೋಚರನಾಗಿ ಎಲ್ಲಿ ಎಲ್ಲಿಯು ನೀನೆ ಇಪ್ಪೆಯಯ್ಯ! ಗುಹೇಶ್ವರ ನಿಮ್ಮ ನಿಲವಿನ ಪರಿಮ ಕಂಡೆ ನಾನು ॥೧೪॥

ಇಂತು ಸುಳಿದು ಬರುತ್ತಿಪ್ಪ ಪ್ರಭುದೇವರು ಪೊನ್ನಾಂಬಲನಾಥನ ಪರೀಕ್ಷಿಸಿ ಅಲ್ಲಿಯುಳ್ಳ ಸದ್ಭಕ್ತಿಯುಕ್ತರಂ, ಸದಾಚಾರಿ ಸನ್ಮಾರ್ಗಿಗಳಂ, ಶಿವಲಿಂಗಾರ್ಚನ ಪರಾಯಣರಂ ಶಿವಧ್ಯಾನೈಕನಿಷ್ಠರಂ ಶಿವಪ್ರಸಾದ ಪಾದೋದಕಸೇವ್ಯರಂ, ಶಿವಲಿಂಗಾಂಗ ಸಂಬಂಧಿಗಳಂ, ಶಿವಾನುಭವ ಸಂಪನ್ನರಂ, ಶಿವಾದ್ವೈತವೇದ್ಯರಂ ಶಿವಜ್ಞಾನೋದಯ ಸಂಪನ್ನರೊಳು ಸದ್ಗೋಷ್ಠಿ ಸಮ್ಮಾನಮಂ ಸಮಾವೇಧಿಸಿ ಸರ್ವರಂ ಜೀವನ್ಮುಕ್ತರಂ ಮಾಡಿ, ಪೂರ್ವಾಶ್ರಯ ತೀರಂಗೊಂಡು ರಾಮೇಶ್ವರಕ್ಕೆ ಬಂದು ಆ ರಾಮನಾಥನೊಳು ಸುಖ ಸಂಕಥಾ ಪ್ರಸಂಗಮಂ ಮಾಡಿ, ಆ ರಾಮನಾಥನಂ ಪೂಜೆಯುಂ ಕೈಕೊಂಡು ಅಲ್ಲಿಂದ ದಕ್ಷಿಣಸಮುದ್ರಮಂ ನಿರೀಕ್ಷಿಸಿ ಪಶ್ಚಿಮಾಂಬುಧಿಯಲ್ಲಿ ನಿಂದು ಮಹಾಬಲೇಶ್ವರನಾಸ್ಥಾನಮಂ ಪೊಕ್ಕು ಸಲ್ಲೀಲೆಯಿಂ ತಿರುಗಿ ಉತ್ತರಾಭಿಮುಖವಾಗಿ ಸೌರಾಷ್ಟ್ರ ಸೋಮನಾಥನಂ ನೋಡುತ್ತ ತನ್ನ ಕಂಡು ಕೇಳ್ದು ಪೆಸಗೊಂಡು ನುಡಿದು ವಂದಿಸಿದ ಸರ್ವ ಜನಂಗಳ ಭವಪಾಶ ಬಂಧನಂಗಳಂ ಪರಿವುತ್ತ ಅಲ್ಲಿಂದ ಪೊರಮಟ್ಟು ನಾನಾ ಪುಣ್ಯಕ್ಷೇತ್ರಂಗಳಂ ನಿರೀಕ್ಷಿಸಿ ಆ ಕ್ಷೇತ್ರಂಗಳಿಗೆ ಅಗಮ್ಯ ಪುಣ್ಯ ವರಂಗಳಂ ಕೊಡುತ್ತ ಅಷ್ಟಾಷ್ಟಿ ತೀರ್ಥಂಗಳಂ ಸಮಸ್ತ ನಿಕರಂ ಮೆಟ್ಟಿ ನೋಡಿ, ಮಹಾ ತೀರ್ಥಂಗಳಿಂ ಪೂಜೆಗೊಂಡು, ತನ್ನ ಪರಮಾನಂದ ರಸವೆಂಬ ನಿರ್ಮಲ ಗಂಗಾಜಲ ಕಣಮಂ ಆ ಸಕಲ ತೀರ್ಥಂಗಳಿಗೆ ಕಾರುಣ್ಯದಿಂದಿತ್ತು ನಿತ್ಯ ನಿರ್ಮಲ ಪದಮಂ ಕೊಟ್ಟು ಅಲ್ಲಿ ನಾನಾ ದೇಶಂಗಳೊಳು ಸುಳಿದು ಬರುತ್ತ ತತ್ಪ್ರದೇಶಂಗಳಂ ಪಾವನವ ಮಾಡುತ್ತ ಶ್ರೀ ಕೇದಾರಮುಂ ಪೊಕ್ಕು ಅತ್ಯುತ್ಕಟ ಹಿಮವನಂ ಗೆಲಿದು ಸವ್ಯಾಲಕ್ಷ ಪರ್ವತಂಗಳಂ ತಿರುಗಿ ತದ್ಗಿರಿ ಗುಹಾಂತರದೊಳು ಅಲ್ಲಲ್ಲಿ ವಿಶ್ರಮಿಂಗೆಯ್ಯುತ್ತ ಬಂದು ಸಿರಿಪರ್ವತ ಗುಹೆಯಂ

ಕಂಡು, ಆ ನಿವಾಸದೊಳು ಸಲ್ಲೀಲೆಯಿಂ ಪದ್ಮಾಸನದೊಳ್ವಿಳಿರ್ದು ಏಕಾಗ್ರಚಿತ್ತ ಮನ ಪವನ ಜ್ಞಾನ ಧ್ಯಾನ ಸಮ್ಮತ ಸಮರಸಭಾವದಿಂ ನಿರ್ಭಾವ ಪದದೊಳು ನಿಂದು ನಿಃಶೂನ್ಯಮಂ ನಿರೀಕ್ಷಿಸಿ ನಿಜಸಮಾಧಿಯೊಳು ಮೂರ್ತಿಗೊಂಡು ಇದ್ದರವೆಂತೆಂದೊಡೆ ತತ್ಸಮಾಧಿಯ ಪ್ರಸ್ತಾವದ ವಚನ॥

ಅಚಲ ಸಿಂಹಾಸನದಲ್ಲಿ ನಿಶ್ಚಲವೆಂಬ ಮಂಟಪವು ಸಂಚಲದೋ ವರಿಯೊಳಗೆ ರುಚಿಗಳಿಲ್ಲವ ನಿಲಿಸಿ ಪಂಚರತ್ನ ಶಿಖರ ಮಿಂಚುವ ಕೋಟಿ ಕಳಸ ವಚನದ ವಿಚಿತ್ರ ಪುಷ್ಪದ ರಚನೆ ನವರಂಗದಲ್ಲಿ ಖೇಚರಾದಿ ಗಮನವನು ವಿಚಾರಪರ ನುಂಗಿ ಗುಹೇಶ್ವರ ನಿಂದ ನಿಲವು ಸಚರಾಚರವ ವಿಸಾರಿತ್ತು ॥೧೫॥

ಮತ್ತಂ ಸ್ವಸ್ಥಾನ ಸ್ವಸ್ಥಿರದ ಸುಮನ ಮಂಟಪ ದೊಳಗೆ ನಿತ್ಯ ನಿರಂಜನ ಪ್ರಭೆಯ ಬೆಳಗು ಶಿವಯೋಗದನುಭಾವ ಏಕಾರ್ಥವಾಗಿ ಗುಹೇಶ್ವರ ನಿಮ್ಮ ಶರಣನು ಉಪಮಾತೀತನು ॥೧೬॥

ಮತ್ತಂ ಸ್ಥೂಲ ಸೂಕ್ಷ್ಮದೊಳಗೆ ಬೆಳಗುವ ಮಹ ಬೆಳಗಾಗಿ ಹೊಳೆವ ಜ್ಞಾನ ಜ್ಯೋತಿದಳಗಳೆಲ್ಲವ ವಿಸಾರಿ, ನೆಳಲನೆಲ್ಲವ ನುಂಗಿದ ಬಿಸಿಲಿನೊಳಗೆ ಚಂದ್ರಮನುದಯ ಜಲಧಿ ವಳಯದ ಬೆಳಸ ಹೇಳಲಾರಳವಯ್ಯ?ಆಳು ಆಳ್ದನ ನುಂಗಿ ಈರೇಳು ಭುವನವ ದಾಂಟಿ ಗುಹೇಶ್ವರ ನಿಂದ ನಿಲವು ಹೊರಗು ಒಳಗು ನುಂಗಿತ್ತು ॥೧೭॥

ಮತ್ತಂ॥ ಜಲದೊಳಗೆ ಹುಟ್ಟಿದ ಹಲವು ಬಣ್ಣದ ವೃಕ್ಷ ಕೊಂಬಿಲ್ಲದೆ ಹುವ್ವಾಯಿತ್ತು. ಇಂಬಿನಲ್ಲಿ ಫಲದೋರಿ ಜಂಬುದ್ವೀಪದ ಮುಗ್ಧೆ ಅಗಮ್ಯ ಅರಳುದಲೆ ಇಂದ್ರವಾಹನವ ನುಂಗಿ ಬ್ರಹ್ಮರಂಧ್ರದೊಳಗೆ ಆಸನ ಪವನವ ಸೂಸಿ ಬೀಸರವೋಗದ ಶಿವಯೋಗ ಸಾಕ್ಷಿ ಭೂತಾತ್ಮದ ಮಾತು ಮಥನವ ನುಂಗಿ ಜ್ಯೋತಿಯೊಳಗಣ ಕರ್ಪುರದ ಬೆಳಗಿನಂತಿದ್ದಿತ್ತು ಗುಹೇಶ್ವರಲಿಂಗದಲ್ಲಿ ಯೋಗವು ॥೧೮॥

ಮತ್ತಂ, ಸಹಸ್ರ ವೆಂಟನೆಯ ದಳದಲ್ಲಿ ಖೇಚರ ಚಲ್ಲಣಗಟ್ಟಿ ವಾಸುಗಿ ಫಣಿ ಪ್ರಜ್ವಲಿಸುವುದ ಕಂಡೆ. ಆ ಸುರರೆಲ್ಲ ತಮತಮಗಂಜಿ ಓಸರಿಸಿ ಮುಂದೆ ನಡೆವಲ್ಲಿ ನಾಸಿಕ ಮನ ಮುಸುಕುವುದ ಕಂಡೆ. ತಾನು ಸುಖಿಯಾದ ಸುಖಮುಖ ಪ್ರವೇಶದಿಂದ ಗೋಸಾಸಿರ ನಡೆಗೆಟ್ಟವು ಗುಹೇಶ್ವರ ನಿಮ್ಮ ನೆರೆಪಿನಾಗಿ ॥೧೯॥

ಮತ್ತಂ॥ ಜಗವಗಲದ ಮಂಟಪಕ್ಕೆ ಮುಗಿಲಗಲದ ಸೋಲುಚಿತ್ರ ವಿಚಿತ್ರವ ನೋಡುತ್ತೆ, ನೋಡುತ್ತೆ, ಧ್ಯಾನ ವಿಶ್ರಾಂತಿಯಲ್ಲಿ ದಿಟವೆಂಬುದೊಂದು ದರುಶನವ ನೋಡುತ್ತ ಗಗನ ಗಂಭೀರದಲ್ಲಿ ಉವಮೆಯಾಯಿತ್ತ. ಕಂಡೆ ಗುಹೇಶ್ವರಲಿಂಗವು ತಾನಾಗಿ ॥೨೦॥

ಮತ್ತಂ॥ ಏಳು ತಾಳವ ಮೇಲೆ ಕೇಳುವ ಸುನಾದ ಸ್ಥೂಲ ಸೂಕ್ಷ್ಮ ಪ್ರಾಸದ ರಭಸಗಂಗೆ ವಾಳುಕ ಸಮುರುದ್ರರ ತಿಂಥಿಣಿ ಗಗನ ಗಂಭೀರ ಶಿವಸ್ತುತಿಯ ನೋಡ ನೋಡಲು, ಪಿಂಡ ಬ್ರಹ್ಮಾಂಡವಾಯಿತ್ತು. ಅಖಂಡಿತ ನಿರಾಳ ಗುಹೇಶ್ವರ ॥೨೧॥

ಮತ್ತಂ॥ ಪಂಚ ಬ್ರಹ್ಮಮೂರ್ತಿ ಪ್ರಣವ ಮಂತ್ರರೂಪ ಪಂಚಮುಖ ದಶಭುಜ ಫಣಿಮಣಿಯ ಮೇಲೆ ನೋಡುತ್ತ್ಯೈದಾನೆ. ಈರೇಳು ಭುವನವೆಲ್ಲ ತಾನಾಗಿ ಸಮತೆ ಸಮಾಧಿ ಎಂಬ ಸಮರಸದೊಳಗೆ ಚಂಪ್ರಕಾಂತದ ಕೊಡದೊಳಗೆ ಅವ್ಯತವ ತುಂಬಿ ಕೊಡಸೊಡೆಯದೆ ಬೆಳಗುವೆನು ಗುಹೇಶ್ವರಾ ॥೨೨॥

ಮತ್ತಂ॥ ಬಂದು ಬಾರದು. ಹೊಂದಿಯು ಹೊಂದದು. ನಿಂದು ನಿಲ್ಲದ ಪರಿಯ ನೋಡಾ. ಅಖಂಡಿತ ಚರಿತನನೇನೆಂದು ಪಮಿಸುವೆ? ಸಖಂಡ ಪೃಥ್ವಿಯನೊಳಕೊಂಡ ಬಯಲು ಅಗಮ್ಯ ಸಂಯೋಗದ ಸಮಾಧಿಯಲ್ಲಿ ಗುಹೇಶ್ವರಲಿಂಗವನೇನೆಂದುಪಮಿಸುವೆ? ॥೨೩॥

ಮತ್ತಂ॥ ಖೇಚರ ಪವನದಂತೆ, ಜಾತಿಯೋಗಿಯ ನಿಲವು ಪಾತಿಳಿಯು ಧಾತು ನುಂಗಿ ಉಗುಳದಿನ್ನೆಂತೊ? ಭೂಚಕ್ರವಳಯವನು ಆಚಾರ್ಯ ರಚಿಸಿದ ಗ್ರಾಮವೆಲ್ಲವ ಸುಟ್ಟು ನೇಮ ನಿಲಗತವಾಯಿತ್ತು. ನಾಮ ನೇಮವ ನುಂಗಿ ಗ್ರಾಸು ಪ್ರಭುವನೆ ನುಂಗಿ ಗುಹೇಶ್ವರ ಗುಹೇಶ್ವರ ಎನುತ್ತ ನಿರ್ಣಯವಾಯಿತ್ತು ॥೨೪॥

ಮತ್ತಂ॥ ಇಹಲೋಕ ಪರಲೋಕ ತಾನಿದ್ದಲ್ಲಿ, ಗಗನ ಮೇರು ಮಂದಿರ ತಾನಿದ್ದಲ್ಲಿ, ಸಕಲ ಭುವನ ಸತ್ಯಲೋಕ ತಾನಿದ್ದಲ್ಲಿ, ನಿತ್ಯ ನಿರಂಜನ ತತ್ವ ತಾನಿದ್ದಲ್ಲಿ, ಉತ್ತರೋತ್ತರ ಪದವು ತಾನಿದ್ದಲ್ಲಿ, ಚಂಪ್ರ ಸೂರ್ಯ ತಾರಾಮಂಡಲ ತಾನಿದ್ದಲ್ಲಿ, ತಿಂತರ ಮಹದಂತರ ತಾನಿದ್ದಲ್ಲಿ ಸ್ವತಂತ್ರ ಗುಹೇಶ್ವರ ತಾನಿದ್ದಲ್ಲಿ ॥೨೫॥

ಇಂತು ಪರಶಿವಯೋಗದಲ್ಲಿ ನಿಂದು ನಿರವಯನಾಗಿ ಅನಂತ ಕೋಟಿ ಬ್ರಹ್ಮಾಂಡಗಳೆಲ್ಲವನು ತನ್ನ ಮಹಾಜ್ಞಾನ ಪ್ರಕಾಶದಲ್ಲಿ ಆಲಿಂಗಿಸಿ ತೊಳಗಿ ಬೆಳಗಿ ಒಪ್ಪುತ್ತಿಪ್ಪ ಪ್ರಭುದೇವರು ತಮ್ಮ ಲೀಲೆಯವಸಾನಕಾಲಮಂ ನಿವೇಕದಿಂ ತಿಳಿದೆದ್ದು ಕಲ್ಯಾಣದತ್ತಲಭಿಮುಖನಾಗಿ ಬರುತಿರ್ಪಾಗಳು ಇತ್ತಲು ಬಸವರಾಜದೇವರು ಪ್ರಭುದೇವರು ಬರಬೇಕೆಂದು ಶೂನ್ಯಸಿಂಹಾಸನಮಂ ರಚಿಸಿ, ಬರವ ಹಾರೈಸುತ್ತಿರ್ದರದೆಂತೆಂದೊಡೆ॥

ಆ ಪ್ರಸ್ತಾವದೊಳು ಹಡಪದಪ್ಪಣ್ಣಗಳ ವಚನ. ॥

ಅಷ್ಟದಳ ಕಮಲದ ಹೂಗಲ್ಲ ವಿಡಿದು ಶೂನ್ಯ ಸಿಂಹಾಸನ ಘಪಳಾಲಯನೆತ್ತಿತ್ತು. ಚಂದ್ರಕಾಂತದ ಶಿಲೆಯಲ್ಲಿ ಪಶ್ಚಿಮದ್ವಾರಮಂ ತೆಗೆದು ನೋಡುವರೆ ವಿಪರೀತ ಏಕೋಭಾವವೆಂಬುದೊಂದು ಕಂಭ ಅದಕ್ಕೆ ಅನೇಕ ಚಿತ್ರಂಗಳಡಗಿದ ಆ ಪ್ರಭೆಯೊಳಗೆ ಬ್ರಹ್ಮರಂಧ್ರವೆಂಬ ಮಸ್ತಕದ ಮೇಲೆ ಪಂಚವರ್ಣಿಕದ ಮಾಲೆಯನಿಳಿವಿಟ್ಟು ಮೂಲೆ ಮೂಲೆಗಳ ನಡುವೆ ಕಟ್ಟಿದವು ನವರತ್ನದ ಗೊಂಡೆಯಂಗಳು. ಕಾಳಿಕೆಯ ಕಪ್ಪಡವದಕೆ ಮೇಲುಹೊದಕೆ. ಉಲುಹಿನ ಅರಳಿಲೆಯ ಬಳಸುದೋರಣವ ಕಟ್ಟಿ ದಶವಾಯುವನೆಲ್ಲವನೊಂದು ಮಾಡಿ, ಲಿಂಗಸುಖ ವಾಯುವ ಸಂತೈಸಿ ಅಲವಟ್ಟವಂ ಮಾಡಿ ಲಂಬಿಸಿದ ಮಂದಾನಿಲನಂ ಮಲಗಂ ಮಾಡಿ ಹರುಷವನೆ ವಸಂತನ ಚೌಕದ ಆಸನವಟ್ಟಿಗೆಯ ಮಾಡಿ ನವನಾಳದೊಳು ಪೊರೆವ ಶಬ್ದಮಂ ಶುಕಪಿಕ ಭ್ರಮರಂಗಳ ಆಮೋದಮಂ ಮಾಡಿ, ಪರಮಶಾಂತಿ ಎಂಬ ಪೈತ್ಯಾಕಾರದ ಸೋಂಕಿನ ಚೂತ ಪಲ್ಲವಂಗಳಂ ಹಾಸಿ, ಉತ್ತರ ದ್ವಾರವೆಂಬ ನುಸುಳುಗಂಡಿಯ ರಚಿಸಿ, ಪೂರ್ವಯೋಗವೆಂಬ ಸೋಪಾನಮಂ ಮಾಡಿ, ಪಶ್ಚಿಮದ್ವಾರವೆಂಬ ನಿಜದ್ವಾರವಟ್ಟವಂ ಮಾಡಿ, ಸಪ್ತ ವ್ಯಸನ ಪಂಚೇಂದ್ರಿಯಂಗಳೆಂಬ ಪೌಳಿಗವಾಪ್ತೆಯನಿಕ್ಕಿ, ಆಸೆಯಾವಿಷಮಂ ಕೆಡಿಸಿ, ಊರ್ಧ್ವಚಕ್ರವೆಂಬ ಮೆಲುಪ್ಪರಿಗೆಯಂ ಮಾಡಿ, ಚಂದ್ರಸೂರ್ಯರೆಂಬ ದೀಪಮಂ ಬೆಳಗಿ ಸೋಹಂ ಎಂಬ ಶಿಖರಿಯ ಮೇಲೆ ಮಹಾಜ್ಞಾನ ಪ್ರಕಾಶವೆಂಬ ಹೊನ್ನ ಕಲಶಮಂ ಮಾಡಿ ನಿಃಶೂನ್ಯ ನಿರಾಳವೆಂಬ ಶೂನ್ಯಸಿಂಹಾಸನಮಂ ಮಾಡಿದ ಬಸವ ಪ್ರಿಯ ಕೂಡಲ ಚನ್ನಸಂಗಯ್ಯನಲ್ಲಿ ಎನ್ನ ಪರಮ ಗುರು ಸಂಗನ ಬಸವಣ್ಣನು ॥೩೬॥

ಮತ್ತಂ, ಅಂಗದ ಪ್ರಕೃತಿಯು ಲಿಂಗದಲ್ಲಿ ಅಳಿಸು, ಮನದ ವಿಕೃತಿಯು ಕರಿವಿನಲ್ಲಿ ಅಳಿದು, ಜೀವಭ್ರಾಂತಿಯ ನಿಶ್ಚಿಂತ ಪದದಲ್ಲಿ ಅಳಿದು, ನಿಃಶೂನ್ಯ ನಿರಾಮಯವಾದ ನಿವಾಸಕ್ಕೆ ಸದಾಚಾರವೆಂಬ ಕೆಸರುಗಲ್ಲನಿಕ್ಕಿ, ಸರ್ವಾಚಾರ ಸಂಪತ್ತೆಂಬ ಹೂಗಲ್ಲ ಮುಚ್ಚಿ, ಅಂತಃಕರಣ ಚತುಷ್ಟಯವೆಂಬ ನಾಲ್ಕು ಕಂಭಗಳನು ನಿಲಿಸಿ ಜ್ಞಾತೃವೆಂಬ ಭಿತ್ತಿಯ ಮೇಲೆ ಜ್ಞಾನವೆಂಬ ಶಿಖರಿಯನನುಗೊಳಿಸಿ, ಜ್ಞೇಯವೆಂಬ ಹೊನ್ನ ಕಲಶಮಂ ಶೃಂಗಾರಮಂ ಮಾಡಿ, ಬ್ರಹ್ಮರಂಧ್ರವ ಊರ್ಧ್ವದ್ವಾರವೆಂಬ ನಿಜದ್ವಾರಮಂ ಮಾಡಿ ನಿರ್ವಯಲಲ್ಲಿ ನೆಲೆಗೊಳಿಸಿ ಬಸವ ಪ್ರಿಯ ಕೂಡಲಚನ್ನಸಂಗಯ್ಯನ ಶರಣ ಪ್ರಭುದೇವರ ಬರವಿಂಗೆ ಶೂನ್ಯಸಿಂಹಾಸನಮಂ ರಚಿಸಿ ಬರವ ಹಾರೈಸುತ್ತಿರ್ದರೆನ್ನ ಪರಮ ಗುರು ಬಸವಣ್ಣನು ॥೩೭॥

ಆ ಪ್ರಸ್ತಾವದೊಳು ಪ್ರಭುದೇವರ ಬರವಿಂಗೆ ಗುಡಿ ತೋರಣಮಂ ಕಟ್ಟಿ ಸಂಭ್ರಮಿಸುತ್ತಿರ್ದ ವಚನ॥

ಉಪ್ಪರಗುಡಿ ತೋರಣಗಟ್ಟಿತ್ತು. ಕಲ್ಯಾಣದಲ್ಲಿ ಅಷ್ಟದ್ವಾರದಂಗಡಿ ರಾಜಬೀದಿಯೊಳೆಲ್ಲ ವ್ಯಾಸನ ಬಾಹುಗಳುಪ್ಪರಿಸಿದವು. ಎಂಟು ಬಾಗಿಲಲ್ಲಿ ನಡೆ ಮುಡಿಯ ಹಾಸಿ, ಸಂಕಲ್ಪ ಸಂತೋಷವ ಮಾಡಿದನು ವೃಷಭೇಶ್ವರನು ಬಸವಪ್ರಿಯ ಕೂಡಲಚನ್ನಸಂಗಯ್ಯ ಬಂದಹನೆಂದು ॥೩೮॥

ಇಂತು ಶೂನ್ಯಸಿಂಹಾಸನವ ರಚಿಸಿ ಬಸವರಾಜದೇವರು ಪ್ರಭುದೇವರ ಬರವ ಹಾರೈಸುತ್ತಿರ್ದ ಪ್ರಸ್ತಾವದ ವಚನ॥

ಹವ್ಮಿ ಹನ್ನೆರಡು ಸಂವತ್ಸರ ಹಿಂದಾಯಿತ್ತು. ಏನ ಮಾಡಿದಡೇನಯ್ಯ ಎನ್ನಲ್ಲಿ ದಿಟವಿಲ್ಲದನ್ನಕ್ಕರ? ಏನ ಹವ್ಮಿದರೇನಯ್ಯ ಎನ್ನಲ್ಲಿ ದಿಟವಿಲ್ಲದನ್ನಕ್ಕರ? ಎನ್ನ ಪುಣ್ಯದ ಫಲ ಕೂಡಲಸಂಗಮದೇವ ಬಾ ಎನ್ನ ಮುಂಡಿಗೆ ತೋಯ್ದಟ್ಟಂತಾಯಿತ್ತು ॥೩೯॥

ಸಮುದ್ರಕ್ಕೆ ಚಂದ್ರಮನ ಬರವೆ ಜೀವಾಳವಯ್ಯ! ಬತ್ತಿದ ಕೆರೆಯ ಕಮಲಕ್ಕೆ ಉದಕವೆ ಜೀವಾಳವಯ್ಯ! ಚಕೋರಂಗೆ ಚಂದ್ರಮನ ಬರವೆ ಜೀವಾಳವಯ್ಯ! ಕೂಡಲಸಂಗಮದೇವ ಎನಗೆ ನಿಮ್ಮ ಶರಣರ ಬರವೆ ಜೀವಾಳವಯ್ಯ ॥೪೦॥

ಕಾಣಬಹುದೆ ಆ ಪರುಷದ ಗಿರಿ ಅಂಧಕಂಗೆ? ಪೊಗೆಯಬಹುದೆ ರಸದ ಬಾವಿಯ ನಿರ್ಭಾಗ್ಯಂಗೆ? ತೆಗೆಯಬಹುದೆ ಕಡವರದ ದರಿದ್ರಂಗೆ?

ಇದಕ್ಕೆ ಬಸವರಾಜದೇವರ ಪ್ರತ್ಯುತ್ತರ. ॥

ಹಸಿದಳುವಂಗೆ ತಾಯು ನೊಲೆಯ ಕೊಟ್ಟರಿ ಆ ಶಿಸು ಜೀವಿಸದಿ ಪ್ಪುದೆ ಹೇಳಯ್ಯ? ಪ್ರಾಣ ವಲ್ಲಭನ ಅಗಲಿಕೆಯಿಂದೆ ಪ್ರಾಣವಿಯೋಗವಾಗಹ ಹೆಂಗುಸಿಂಗೆ ಆ ಪ್ರಾಣವಲ್ಲಭ ಬಂದರೆ ವಿರಹ ಸಂತಾಪಿಸಲಿಪ್ಪುದೆ ಹೇಳಯ್ಯ? ಕೂಡಲಸಂಗಮದೇವರು ಸಾಕ್ಷಿಯಾಗಿ, ಪ್ರಭುವೆನ್ನ ಮನೆಗೆ ಬಂದರೆ ಎನ್ನ ಬಯಕೆ ಕೈಸಾರಿ ಚನ್ನಬಸವಣ್ಣನ ಕರುಣದ ಕಂದನಾಗಿ ಉಳಿದೆನು, ಕಾಣಾ ಮಡಿವಾಳಯ್ಯ. ೩೭॥

ಹೀಗೆಂದು ನುಡಿವುತ್ತಿಪ್ಪ ಪ್ರಸ್ಥಾವದೊಳು ಪ್ರಭುದೇವರ ಬರವಿನ ಸೂಚನೆ ಬಸವರಾಜದೇವರಿಗೆ ತೋರ ತ್ತಿದ್ದಿತ್ತು. ಅದೆಂತೆಂದೊಡೆ ವಚನ॥

ಅಂಗಯ್ಯ ತಿಂಡಿಯಾಗಿಹುದಯ್ಯ. ಎನ್ನ ಕಂಗಳು ಕೆತ್ತುತ್ತಿಹವಯ್ಯ ಬಂದಹರೇಕೆ ಎನ್ನ ಮನೆಗೆ ಪ್ರಮಥರು ಬಂದಹರೇಕಯ್ಯ? ಎನ್ನ ಮನೆಗೆ ಪುರಾತನರು ಕಂಡ ಕನಸು ಕರೆಯವಾಗಿ. ಜಂಗಮ ಮನೆಗೆ ಬಂದರೆ ಶಿವಾರ್ಚನೆಯ ಮಾಡುವೆನು ಕೂಡಲಸಂಗಮದೇವ ನಿಮ್ಮ ಮುಂದೆ ॥೩೮॥

ಇದಕ್ಕೆ ಮೋಳಿಗೆಯ ಮಾರಿತಂದೆಗಳ ಪ್ರತ್ಯುತ್ತರ॥

ನಿಮಿತ್ತ ಶುಭಸೂಚನೆಯ ಬಿನ್ನಪವನವಧರಿಸು. ಅತಿಥಿಯ ಮುಸ್ತಕತಾಗಿ ಶೂನ್ಯಸಿಂಹಾಸನದ ಫಳಹರಂಗಳಿಲ್ಲವು ಅಲ್ಲಾಡುವದ ಕಂಡೆನಯ್ಯ. ಮುತ್ತಿನಾರತಿಯ ಮುಂದೆ ಹಿಡಿದ.ಕೊಂಡು ಮುಕ್ತಿವನಿತೆಯರು ನಿತ್ಯ ನಿರಂಜನಂಗೆ ನಿವಾಳಿಸುವದ ಕಂಡೆನಾಗಿ. ಅದರಿಂದೆ ನಿಃಕಳಂಕ ಮಲ್ಲಿಕಾರ್ಜುನದೇವರು ಬಾರದಿದ್ದಡೆ ನಾ ನೀನಾದಂತೆ ಆಹೆನು. ಕಟ್ಟು ಗುಡಿಯ ಸಂಗನಬಸವಣ್ಣಾ ॥೩೯॥

ಇದಕ್ಕೆ ಸೊಡ್ಡಳಬಾಚರಸರ ಪ್ರತ್ಯುತ್ತರ॥

ಮನದೊಡೆಯ ಮನೆಗೆ ಬಾಹರೆ ಮನ ಮನ ಅಚ್ಚೊತ್ತಿದಂತಿಪ್ಪುವಯ್ಯ ನೋಡಯ್ಯ! ಮನಕ್ಕೆ ಮನೋಹರ ಚಿತ್ತಕ್ಕೆ ಮನೋಹರವಾಗಿಪ್ಪುದಯ್ಯ. ಮಹಾದಾನಿ ಸೊಡ್ಡಳನ ಬರವಿಂಗೆ ಶುಭಸೂಚನೆ ಪೈದೋರುತಿದೆ. ಪ್ರಭುದೇವರ ಬರವನೀಗಳೆ ತೋರುವೆನಯ್ಯ ಸಂಗನಬಸವಣ್ಣ ॥೪೦॥

ಇದಕ್ಕೆ ಬಸವರಾಜದೇವರು ಕೃತನಿಶ್ಚಯವನೈದಿದ ವಚನ॥

ಕರವುದೆ ಕಾಮಧೇನು ಅಶುದ್ಧಂಗೆ? ಕೂಡಲಸಂಗನ ಶರಣರ ಪುಣ್ಯವಿಲ್ಲದ ಕಾಲಕ್ಕೆ ಎನಗೆ ಕಾಣಬಹುದೆ? ॥೩೧॥

ಮತ್ತಂ ಸೂರ್ಯನ ಬರವು ತಾವರೆಗೆ ಜೀವಾಳವಯ್ಯ! ಚಂದ್ರಮನ ಬರವು ನೈದಿಲೆಗೆ ಜೀವಾಳವಯ್ಯ! ಕೂಪರ ತಾವಿನಲ್ಲಿ ನೋಟವೆ ಜೀವಾಳವಯ್ಯ! ಕೂಡಲಸಂಗನ ಶರಣರ ಬರವು ಎನಗೆ ಜೀವಾಳವಯ್ಯ ॥೩೨॥

ಹೊಲಬು ಗೆಟ್ಟ ಶಿಸು ತನ್ನ ತಾಯ ಬಯಸುವಂತೆ, ಬಳಿದಪ್ಪಿದ ಕರು ತನ್ನ ಹಿಂಡ ಬಯಸುವಂತೆ ಬಯಸುತ್ತಿರ್ದೆನಯ್ಯ ನಿಮ್ಮ ಶರಣರ ಬರವನು! ದಿನಕರನುದಯಕ್ಕೆ ಕಮಲ ವಿಕಸಿತವಪ್ಪಂತೆ ಎನಗೆ ನಿಮ್ಮ ಶರಣರ ಬರವು ಕೂಡಲ ಸಂಗಮದೇವಾ ॥೩೩॥

ಮತ್ತಂ ಎಡದ ಕೈಯ್ಯಲ್ಲಿ ಹಾಲುಬಟ್ಟಲು, ಬಲದ ಕೈಯ್ಯಲ್ಲಿ ಪಿಜು ಗಟ್ಟಿಗೆ, ಆವಾಗ ಬಂದಾನೆಮ್ಮಯ್ಯ ಬಡಿದು ಹಾಲು ಕುಡಿಸುವ ತಂದೆ? "ದಂಡ ಕ್ಷೀರ ದ್ವಯಾಹಸ್ತಂ, ಜಂಗಮಂ ಭಕ್ತಿಮಂದಿರಂ॥ ಅತಿ ಭಕ್ತಿ ಲಿಂಗಸುಂತುಷ್ಟಂ। ಅಪಹಾಸ್ಯಂ ಯಮ ದಂಡನಂ॥ ಇಂತೆಂದುದಾಗಿ, ಕೂಡಲಸಂಗಮದೇವ ಭಕ್ತಿಪಥವ ತೋರುವ ತಂದೆ, ಆವಾಗ ಬಂದಹನೊ? ॥೩೪॥

ಇದಕ್ಕೆ ಚಿಕ್ಕದಣ್ಣಾಯಕರ ಉತ್ತರ. ॥

ಮನದಂತೆ ಮಂಗಳವೆಂಬುದು ತಪ್ಪದು ನೋಡಾ ಬಸವಣ್ಣ! ಅರಸುವಂಗೆ ಅರಿಕೆ ಸಾಧ್ಯವಪ್ಪುದು ನೋಡಾ ಬಸವಣ್ಣ! ನಿಮ್ಮ ಮನದರ್ಥವನಡಗಿಸುವರೆ ಕೂಡಲ ಚನ್ನಸಂಗಮದೇವರ ಶರಣರ ಪ್ರಭುದೇವರು ಬಾಹುದು ತಪ್ಪಲರಿಯದು, ಕೇಳಾ ಸಂಗನಬಸವಣ್ಣ. ॥೩೫॥

ಇದಕ್ಕೆ ಮಡಿವಾಳತಂದೆಗಳ ಉತ್ತರ. ॥

ಮಾಡುವ ಭಕ್ತಂಗೆ, ಒಲಿವ ದೇವಂಗೆ, ಭಿನ್ನ ಉಂಟೆ ಆಯ್ಯ? ಕಾಯದೊಳಗೆ ಕಾಯವಾಗಿಪ್ಪ, ಪ್ರಾಣದೊಳಗೆ ಪ್ರಾಣವಾಗಿಪ್ಪ ಅರುಹಿಸಹೆನೆಂದರೆ ಅರಸಿ ಬಯಸಿದರೆ ಕರುಣದಿಂದೆ ನಡೆದು ಬಾಹನು ಕಲಿದೇವರ ದೇವನ ಬರವನೀಗಳೆ ತೋರಿ ಕೊಟ್ಟಪೆನು ಕೇಳಾ ಸಂಗನಬಸವಣ್ಣಾ. ॥೩೬॥

ಶರಣೆಂದು ಕರ ಸಂತೋಷವ ಮಾಡಿ ಮುರಿದು ಮುಂಜೆರಗ ಗಂಟಕ್ಕಿ ನೆಲವ ಹೊಯಿದ ಕೈ ತಪ್ಪಬಲ್ಲುದೆ ಹೇಳಾ? ಆದಿ ಶರಣರ ನುಡಿ ತಪ್ಪದೆ ಕೂಡಲಸಂಗಮ ದೇವರು ಸಾಕ್ಷಿಯಾಗಿ ಕಟ್ಟುವೆನು ಗುಡಿ ಯನೆತ್ತುವೆನು ಧ್ವಜವಾ ॥೪೧॥

ಮತ್ತಂ॥ ಆಡವಿಯೊಳಗೆ ನೀರಡಿಸಿ ಎಡೆಯಲ್ಲಿ ನೀರ ಕಂಡಂತಾಯಿತ್ತಯ್ಯ. ಕುರುಡಂಗೆ ಕಣ್ಣ ಬಂದಂತಾಯಿತ್ತಯ್ಯ. ನಮ್ಮ ಕೂಡಲಸಂಗನ ಶರಣರು ಬಂದಹರೆಂದರೆ ಹೋದ ಪ್ರಾಣ ಬಂದಂತಾದೆನಯ್ಯ. ॥೪೨॥

ಮತ್ತಂ॥ ಹಡಪದಪ್ಪಣ್ಣಗಳ ವಚನ

ಬಯಸುವ ಬಯಕೆ, ಕೈಸಾರುವಂತೆ ನಿಧಿ ನಿಧಾನ ಮನೆಗೆ ಬಪ್ಪಂತ್ತೆ, ಪರಿಮಳವನರಸಿ ಬಪ್ಪ ಭ್ರಮರನಂತೆ, ಚಿಂತಾಮಣಿಯ ಮುತ್ತಳಿ ನಡೆಗ ಲಿವಂತೆ ಬಸವಪ್ರಿಯ ಕೂಡಲ ಚನ್ನ ಸಂಗನಲ್ಲಿ ಪ್ರಭುದೇವರ ಬರವು ಕಾಣುತ್ತಿದೆ ನೋಡಾ ಸಂಗನಬಸವಣ್ಣಾ ॥೪೩॥

ಇದಕ್ಕೆ ಬಸವರಾಜದೇವರ ವಚನ॥

ನಚ್ಚು ಮುಚ್ಚಿನ ಶರಣರೆನ್ನ ಕಣ್ಣ ವಂಚೆ ಬಂದು ನಿಂದಿರಲು ಎನ್ನ ತನುವ ಬಗೆದು ಎನ್ನ ತನುವಿನೊಳಗೆ ಇಟ್ಟುಕೊಂಬೆನು. ಎನ್ನ ಮನವ ಬಗೆದು ಮನದೊಳಗಿಟ್ಟುಕೊಂಬೆನು. ಎನ್ನ ಕಂಗಳ ಒಗೆದು ಮನದೊಳಗೆ ಇಟ್ಟುಕೊಂಬೆನು. ಎನ್ನ ಕಂಗಳ ಒಗೆದು ಕಂಗಳೊಳಗೆ ಇಟ್ಟುಕೊಂಡೆನು ಕೂಡಲ ಸಂಗನ ಶರಣರನ್ನ ಒಡೆಯರಾಗಿ ಎನ್ನ ಮನೆಗೆ ಬಂದರೆ ಭಕ್ತಿಯ ಮಾಡುವೆನು ಕಾಣಾ ಅಪ್ಪಣ್ಣ.

ಇದಕ್ಕೆ ಚಿಕ್ಕದಣ್ಣಾಯಕರ ವಚನ. ॥

ಕಂಗಳ ನೋಟ ಕರಸ್ಥಲವ ಪ್ರಾಣ ಮನದೊಳಗೆ ಪರಿಣಾಮವ ತೋರುತ್ತಿದೆ ನೋಡಾ! ನಡೆವರೆ ಗತಿ ಇಲ್ಲ. ನಿಂದರೆ ಹೆಜ್ಜೆ ಇಲ್ಲ. ಸುಳುಹಿನೊಳಗೊಂದು ಅತಿಶಯದ ಸುಳುಹ ನೋಡಾ! ತೆರೆಯ ಮರೆಯ ಪರಿಪಿವನು ನಡೆಗಲಿತು ಬಪ್ಪ ಕರುಣವ ನೋಡಾ ಸಂಗನಬಸವಣ್ಣಾ ಕೂಡಲ ಚನ್ನಸಂಗಮದೇವರು ಸಾಕ್ಷಿಯಾಗಿ ಪ್ರಭುದೇವರ ಬರವು ತಪ್ಪದು. ॥೪೪॥

ಇದಕ್ಕೆ ಬಸವರಾಜದೇವರ ವಚನ. ॥

ಸಂಗ ಸನ್ನಿಹಿತ ಶರಣರು ಮನೆಗೆ ಬಂದರೆ ನಂಬುವುದೆನ್ನ ಮನ. ನಚ್ಚುವುದೆನ್ನ ಮನ. ಹಾವು ನೇಣೆಂಬ ಭ್ರಾಂತುಳ್ಳನ್ನಕ್ಕರ ನಾನೆಂತು ಭಕ್ತ ನಪ್ಪೆನಯ್ಯ? ಅಂಗ ಲಿಂಗ ಸನ್ನಿಹಿತವಪ್ಪ ಪ್ರಭುದೇವರ ಬರವ ಕಂಡು ಮನದಲ್ಲಿ ಮತ್ತೆ ಸಂದೇಹ ಹೊಳೆವರೆ ಬೆಂದೆನಲ್ಲಾ ನಾನು ಕೂಡಲ ಸಂಗಮದೇವಾ. ॥೪೬॥

ಅಲ್ಲಿ ಬಸವರಾಜದೇವರು ಪ್ರಭುದೇವರ ಬರವ ಕಂಡ ಪ್ರಸ್ಥಾವದ ವಚನ. ॥

ಕಂಗಳೆ ಕರುವಾಗಿ ಉರವಣಿಸಿ ಬಪ್ಪವನ ಬರವ ನೋಡಾ, ಇರವ ನೋಡಾ, ಪರವನೋಡಾ ಇಹಪರವ ನೋಡಾ. ಇಹಪರ ಒಂದಾದ ಘನವ ನೋಡಾ. ಇಂತೀ ಘನಕ್ಕೆ ಘನವ ನೋಡಾ! ಕರುವಿಟ್ಟ ರೂಪಿನಂತೆ ಕಂಗಳೆರಡು ಹಳಚದಂತೆ ಭುಗಿಲನೆ ನಡೆತಹ ಇಂತಪ್ಪ ಗರುವ ಪ್ರಭುದೇವರ ಕಂಡೆನಯ್ಯ ಕೂಡಲಸಂಗಮದೇವಾ. ॥೪೭॥

ಮತ್ತಂ॥ ಬಸವರಾಜದೇವರು ಪ್ರಭುದೇವರ ಮೂರ್ತಿಯ ನಿಲವನ್ನು ಚನ್ನಬಸವಣ್ಣಂಗೆ ತೋರಿ ನುಡಿವ ಪ್ರಸ್ಥಾವದ ವಚನ. ॥

ಕೆವರಿದ ತಲೆಯು ನಡೆವು ತೊನೆವ ಹಣೆಯ ಬುಗುಟಿನ ಕರಘ ಲದ ಅನುವಿಷದಿಂ ಬಹಿರಂಗದ ವದನ ತಪ್ಪಿ ಇದಿರುಗೊಯಿಲು ತಾಗಿ ಪೂರ್ಬೊಡೆದು ಕಣ್ದೆರೆದು ಕಿವಿ ಹರಿದು ಜೋಲುವ ರಕ್ತಧಾರೆ ಗಾಳಿಯ ಧೂಳಿಯ ಮಳೆಯ ಜಾರಿನ ಬೆನ್ನ ಬಾಸುಳದ ಎಡದ ಬದಿಯ ತಪ್ಪಿನ ಮುಳ್ಳುವರಹಿನ ಕಂಕುಳ ಸೀಳಂ ಕಂಡು ನೋಡುವ ಜನರು ಬೆರಗಾಗೆ ಪೊರವಾರಿನ ಮಸಿಯ ದಿಗಂಬರದ ಬಣಗು ಸುರಿವುತ್ತ ಆಪ್ಯಾಯನವರತು ಬಿದ್ದು ಮಣಿಕಾಲೊಡೆದು ಹೊಸಹುಣ್ಣಿನ ರಕ್ತದ ಜೋಲುವ ಮುಂಗಾಲ ಕಣ್ಣ ಹೊಳೆದು ಕಣಕಾಲ ಸಂದು ತಪ್ಪಿ ಬಿರುಬೇನೆಯ ಎಡಹಿ ಬಟ್ಟೊ ಡೆದು ಗಾಯದ ಉರುಗು ಟೊಂಕದ ಬರುಗುಂಟನ ನೋಡಾ ಚನ್ನಬ ಸವಣ್ಣ. ಅತ್ಯಂತ ಮಲಿನ ಕೂಡಲಸಂಗಮದೇವರ ಕುರುಹು ವಿಪರೀತ ನೋಡುವರೆ ಭಯಂಕರವಾಗಿದೆ ನೋಡಯ್ಯ ॥೪೮॥

ಇದಕ್ಕೆ ಚಿಕ್ಕದಣ್ಣಾಯಕರ ಪ್ರತ್ಯುತ್ತರ॥

ಆದಿಯಿಂದತ್ತತ್ತ ನೀನೆಅಯ್ಯ. ಆನಾದಿಯಿಂದತ್ತತ್ತ ನೀನೆ ಅಯ್ಯ. ಈ ಎರಡನು ಮೀರಿದ ಅತ್ಯತಿಷ್ಠದ್ದ ಶಾಂಗುಲನಾವನಯ್ಯ ಚತು

ಯುಗ ಸಪಸ್ಸಾನಿ ಎಂಬ ಶಂಕೆ ಯುಗಂಗಳ ಪವಣಿಸದಂದು ಕೆಸ
ಗಲ್ಲನಿಕ್ಕಿದರೆ ಮೀರುವ ನೆಲೆಗೊಳಿಸಿ ಅಂಡಜ ಉತ್ಪತ್ಯವಾಗದಂದು ಆ
ನಂತುವ ನೀನೆ ಬಲ್ಲೆ. ನಿನ್ನಂತುವನ್ನಾತನೆ ಬಲ್ಲ. ನಿಮ್ಮಿಬ್ಬರ ಮಹಿಮೆಯ.
ನಾನೆತ್ತ ಬಲ್ಲೆನಯ್ಯ ಕೂಡಲ ಚನ್ನಸಂಗಮದೇವಾ? ॥೪೯॥

ಇದಕ್ಕೆ ಬಸವರಾಜದೇವರ ಪ್ರತ್ಯುತ್ತರ॥

ಹುಟ್ಟಿತ್ತ ವ್ಯವ್ಯವ ನರಿಯದ ಒಬ್ಬ ಬಡವಂಗೆ ಲಕ್ಷದ ಸಂಖ್ಯೆಯ ಧನ
ಸಂಪತ್ತಾಗಲು, ಆ ಸಿರಿಯ ನೋಡಿ ಪರಿಣಾಮಿಸುವಂತೆ, ಕಾಳಗದ ಮುಖ
ವನೆಂದು ಕಂಡರಿಯದ ಅರಸಿಂಗೆ ಒಬ್ಬ ಖಡ್ಗವುಳ್ಳ ಕುಮಾರ ಹುಟ್ಟಿ ಕಿಗ್ಗ
ಡಲ ರಕ್ತದ ಹೊನಲಲ್ಲಿ ಮುಳುಗಾಡುವ ಕೊಳುಗುಳ ಕಂಡು ಪರಿಣಾ
ಮಿಸುವಂತೆ, ನಾನು ಪರಿಣಾಮಿಸುತ್ತಿರ್ದೆನಯ್ಯ ಚನ್ನಬಸವಣ್ಣ. ನೀನು
ಕೂಡಲಸಂಗನ ಶರಣ ಪ್ರಭುದೇವರ ನಿಜವನರುಹಿದರೆ ॥೫೦॥

ಇಂತು ಬಸವರಾಜದೇವರು ಪ್ರಭುದೇವರ ನಿಲವು ಅತ್ಯಂತ ನಿರಾ
ಮಯವಾಗಿದೆ ಎಂದು ನಿರೂಪಿಸಲು, ಆ ಪ್ರಭುದೇವರ ನಿಲವನಾರು ಅರಿ
ಯರೆಂದು ಚಿಕ್ಕದಣ್ಣಾಯಕರು ಸ್ತುತಿಸೈದ ಪ್ರಸ್ಥಾವದ ವಚನ॥

ಕಾಲಿಲ್ಲವೆಂಬರಯ್ಯ ಪ್ರಭುದೇವರು ಸಂಸಾರ ಸೂತಕದ ಮೆಟ್ಟ
ರಾಗಿ. ಕೈಯಿಲ್ಲವೆಂಬರಯ್ಯ ಪ್ರಭುದೇವರು ಪರಧನವ ಕೊಳ್ಳರಾಗಿ. ಕಿವಿ
ಯಿಲ್ಲವೆಂಬರಯ್ಯ ಪ್ರಭುದೇವರು ಅನ್ಯವ ಕೇಳರಾಗಿ. ಮೂಗಿಲ್ಲವೆಂಬರಯ್ಯ
ಪ್ರಭುದೇವರು ದುರ್ಗಂಧಕ್ಕೆಳಸರಾಗಿ. ಎಪೆ ಇಲ್ಲವೆಂಬರಯ್ಯ ಪ್ರಭುದೇ
ವರು ಪರಸ್ತ್ರೀಯರನಪ್ಪರಾಗಿ. ಇದು ಕಾರಣ ಕೂಡಲಚನ್ನಸಂಗಯ್ಯ
ನಲ್ಲಿ ಪ್ರಭುದೇವರು ಒಕ್ಕುಮಿಕ್ಕ ಪ್ರಸಾದವ ಕೊಂಡು ನಾನು ಧನ್ಯನಾ
ದೆನು ಕಾಣಾ ಸಂಗನಬಸವಣ್ಣಾ ॥೫೧॥

ಮತ್ತಂ॥ ಚಿಕ್ಕದಣ್ಣಾಯಕರು ಪ್ರಭುದೇವರ ಬಸವರಾಜದೇವರ
ಪೂರ್ವಾಪರ ಸಂಬಂಧಮಂ ತಿಳಿಯ ಹೇಳಿದ ಪ್ರಸ್ಥಾವದ ವಚನ॥

ಕೃತಯುಗದಲ್ಲಿ ದೇವಾಂಗನೆಂಬ ಗಣೇಶ್ವರನಾಗಿ ನೀವು ಬಂದು
ಆರಾಧಿಸುವಲ್ಲಿ ಸ್ಥೂಲಕಾಯನೆಂಬ ಜಂಗಮವಾಗಿ ಬಂದು ಲಿಂಗಾರ್ಚ
ನೆಯ ಮಾಡಿ ಹೋದನು. ಅವರ ಕ್ರಿಯಾಂಗವನು ಮರೆದೆಯಲ್ಲ ಬಸ
ವಣ್ಣ! ತ್ರೇತಾಯುಗದಲ್ಲಿ ಘಂಟಾಕರ್ಣನೆಂಬ ಗಣೇಶ್ವರನಾಗಿ ಬಂದು
ಆರಾಧಿಸುವಲ್ಲಿ ಶೂನ್ಯಕಾಯನೆಂಬ ಜಂಗಮವಾಗಿ ಬಂದು ಲಿಂಗಾರ್ಚ
ನೆಯ ಮಾಡಿ ಹೋದನು. ಅವರ ಕ್ರಿಯಾಂಗವನು ಮರೆದೆಯಲ್ಲ ಬಸ

ವಣ್ಣಾ! ದ್ವಾಪರದಲ್ಲಿ ನೀನು ವೃಷಭನೆಂಬ ಗಣೇಶ್ವರನಾಗಿ ಬಂದು ಆರಾ
ಧಿಸುವಲ್ಲಿ ಅನುಮಿಷನೆಂಬ ಜಂಗಮವಾಗಿ ಬಂದು ಲಿಂಗಾರ್ಚನೆಯ
ಮಾಡಿ ಹೋದನು. ಅವರ ಕ್ರಿಯಾಂಗವನು ಮರೆದೆಯಲ್ಲ ಬಸವಣ್ಣ.
ಕಲಿಯುಗದಲ್ಲಿ ನೀನು ಬಸವಣ್ಣನೆಂಬ ಗಣೇಶ್ವರನಾಗಿ ಬಂದು ಆರಾ
ಧಿಸುವಲ್ಲಿ ಪ್ರಭುದೇವರೆಂಬ ಜಂಗಮವಾಗಿ ಬಂದು ಲಿಂಗಾರ್ಚನೆಯ
ಮಾಡ ಬಂದ ಕಾರಣ ಇಂತೀ ದೇವ ಭಕ್ತನೆಂಬ ನಾಮ ನಾಟಕ ಬಿನ್ನಾ
ಣವಲ್ಲದೆ ಬೇರೆಂದು ಕಂಡವರಿಗೆ ನರಕ ತಪ್ಪದು ಕೂಡಲ ಚನ್ನಸಂಗ
ಮದೇವಾ ॥೫೨॥

ಇದಕ್ಕೆ ಬಸವರಾಜದೇವರ ಪ್ರತ್ಯುತ್ತರ॥

ಇದ್ದ ಪರಿ ಎಂತುಟದೆ ನೋಡಯ್ಯ. ನಿಂದಡೆ ನೆಳಲಿಲ್ಲ. ನಡೆದರೆ
ಹೆಜ್ಜೆ ಇಲ್ಲ. ಭೂತಳದೊಳಗೆ ಕಂಡುದಿಲ್ಲ. ಇಂತಪ್ಪ ಅನಿಯಮದ ಸುಳುಹು
ಅಹುದಹುದು. ಅರಿದರಿದು ಜಂಗಮಸ್ಥಲ ಇಂತುಟಲ್ಲದೆ ಎಂತುಟು ಹೇಳಾ?
ಆಪ್ಯಾಯನದ ಅರಿಕೆಯ ಹೊಲಬ ಕಾಣಬಾರದು. ಉಣಿಸಿದರೆ ಉಣ್ಣನೋ
ಉಂಬನೋ? ಉಂಬಂಥವರಾದಡೆ ನೀಡುವೆ ಕೂಡಲ ಸಂಗಮದೇವರಿಗೆ
ಚನ್ನಬಸವಣ್ಣ ನೀನಹುದಹುದೆನಲಿಕ್ಕೆ ॥೫೩॥

ಇದಕ್ಕೆ ಚನ್ನಬಸವರಾಜದೇವರ ಪ್ರತ್ಯುತ್ತರ॥

ಅರಸುವಂಗೆ ಅರಕೆ ತಾನಹುದು ದೇವಾ. ಬಯಸುವಂಗೆ ಬಯಕೆ
ತಾನಹುದು ದೇವಾ. ನೀವು ಭಾವಿಸಿದಂತೆ ಅಲ್ಲದೆ ಬೇರೊಂದಾಗಬಲ್ಲುದೆ?
ಈರೇಳು ಭುವನದ ಸ್ಥಾವರ ಪ್ರೇರಣೆಗಳೆಲ್ಲ ನಿಮ್ಮಿಂದಲಾದವಾಗಿ ನಿಮ್ಮಿಂದ
ಲಹುದಾಗದೆಂಬ ಸಂದೇಹವುಂಟೆ ಬಸವಣ್ಣ? ನಿಮ್ಮಡಿಗಳೆಂದಂತೆ ನೆನ
ದಂತೆ ನೋಡಿದಂತೆ ತಪ್ಪದು ಕೂಡಲ ಚನ್ನಸಂಗಮದೇವರು ಸಾಕ್ಷಿಯಾಗಿ
ಪ್ರಭುವಿನಾಣೆ. ಕಟ್ಟು ಗುಡಿಯನು ॥

ಇದಕ್ಕೆ ಬಸವರಾಜ ದೇವರ ಉತ್ತರ॥

ಬಡವಾಗಿಲ ಪೌಳಿಯ ಭರವಸದಿಂ ಪೊಕ್ಕು ಪಶ್ಚಿಮದ್ವಾರದ ಧವ
ಳಾರವಂ ಪಶ್ಚಿಮದಿ ಪೊಕ್ಕು ತ್ರಿವಿಧ ಗತಿಯ ಶೂನ್ಯ ಸಿಂಹಾಸನದ
ಮೇಲೆ ತಡಹರವಾದಡೆ ನಂಬುಪುರೆನ್ನ ಮನವು. ಕೂಡಲ ಸಂಗಮ
ದೇವರು ಸಾಕ್ಷಿಯಾಗಿ ನೀನು ನನ್ನ ಕೋಪಿಸಿದರೆ ಕೋಪಿಸು ಚನ್ನ
ಬಸವಣ್ಣಾ ॥೫೪॥

ಇದಕ್ಕೆ ಚಿಕ್ಕ ವಣ್ಣಾಯಕರ ಉತ್ತರ.

ದೇವ ದೇವ ಮಹಾಪ್ರಸಾದ ನಿಮ್ಮಡಿಗಳಿಗೆ ಉತ್ತರವ ಕೂಡಲಪ್ಪಿ
ನಯ್ಯ. ಇದ ಬಲ್ಲೆನೆಂಬ ಬಲುಮೆಯ ದೇಹ ನಾನಲ್ಲವಾಗಿ ಆನು ಭಕ್ತ
ನೆಂಬ ಭಕ್ತಿ ಶೂನ್ಯನಲ್ಲವಾಗಿ ಆನು ಬಲ್ಲೆನೆಂಬ ನುಡಿಯುಂ ನಿರಿದು
ಸುಡದೆ? ತಪ್ಪೆನ್ನದು ಕ್ಷಮೆ ನಿಮ್ಮದು. ಕೂಡಲ ಚನ್ನಸಂಗಮ ದೇವರು
ಸಾಕ್ಷಿಯಾಗಿ ಕೊಲ್ಲು ಕಾಯಿ ನಿಮ್ಮ ಧರ್ಮ॥೫೬॥

ಇದಕ್ಕೆ ಬಸವರಾಜ ದೇವರ ಪ್ರತ್ಯುತ್ತರ.

ಪುಣ್ಯಗಳಹ ಕಾಲಕ್ಕೆ ಹಗೆಗಳು ತನ್ನವರಹರು. ಪುಣ್ಯಗಳಹ
ಕಾಲಕ್ಕೆ ಮಣ್ಣು ಹೊನ್ನಹುದು. ಪುಣ್ಯಗಳಹ ಕಾಲಕ್ಕೆ ಹಾವು ಲ್ಯಾಪ
ಳವಹುದು. ಪುಣ್ಯಗಳಹ ಕಾಲಕ್ಕೆ ಅನ್ಯರು ತನ್ನವರಹರು. ಇಂತಪ್ಪ
ಪುಣ್ಯಗಳೆಲ್ಲವು ಭಕ್ತಿಯಿಂದಲಹುದು. ಭಕ್ತಿ ಕೆಟ್ಟರೆ ಪುಣ್ಯವು ಕೆಡುವದು.
ಇಂತಪ್ಪ ಭಕ್ತಿಯ ಪುಣ್ಯವು ಚನ್ನಬಸವಣ್ಣನಿಗುಂಟಾಗಿ ನಾನು ಬದುಕಿದೆ
ನಯ್ಯ ಕೂಡಲಸಂಗಮದೇವಾ. ॥೫೭॥

ಇಂತು ಬಸವರಾಜದೇವರು ಚಿಕ್ಕದಣ್ಣಾಯಕರು ಪ್ರಸಂಗಮಂ
ಮಾಡುತ್ತ ಪ್ರಭುದೇವರ ತೋರಿ ನುಡಿವುತ್ತಿರಲು, ಆ ಪ್ರಸ್ಥಾವದೊಳು
ಸೊಡ್ಡಳ ಬಾಚರಸರು ಹೇಳಿದ ವಚನ॥

ಅಪ್ಪಿ ಹಾವುತಲೊಮ್ಮೆ ಹೋಗಿ ನಿಲುವುತಲೊಮ್ಮೆ ಬೀಗಿ ನಗುತ
ಲೊಮ್ಮೆ ಮರುಳನಂತೆ ಮಂಕಿನಂತೆ ದಿಸೆದಿಸೆಯ ನೋಡುತ್ತ, ಅಂಗಡಿ
ರಾಜಬೀದಿಗಳ ಶೃಂಗಾರಂಗಳ ನಲಿನಲಿದು ನೋಡುತ್ತ, ಇತ್ತರದ ಭದ್ರವ
ಮೇಲೆ ನಾಂಟ್ಯವನಾಡುವವರ ನೋಡಿ ನಗುತ್ತ ನೋಡುವ ಗಾವಳಿಯ
ಜನರನಟ್ಟಿ ಹೊಯಿವಂತೆ ಹರಿವುತ್ತ ಗುಡಿ ಇಕ್ಕಿದಂತಿರೆ ನಿಂದರೆ ಬೀಳುತ್ತ
ನಾಂಟ್ಯವನಾಡುವವರಿಗೆ ಇದಿರಾಗಿ ಮರಳಿಯಾಡುತ್ತ ಹಾಡುತ್ತ ಬೈವುತ್ತ
ಕರಳಿ ನುಡಿವುತ್ತ ವಾದ್ಯ ಮೇಳಾಪಮಂ ಕಂಡು ಆಳಿಗೊಂಡು ನಗುತ್ತ
ಹಸ್ತವನಾಡಿಸಿ ಗತಿಯನುಚ್ಚರಿಸಿ ಕೈಯ್ಯೊಡನೆ ಮರುಳಾಟವನಾಡುತ್ತ
ಮೆಲ್ಲ ಮೆಲ್ಲನೆ ನೋಡಿ ನಿಂದು ನಗುತ್ತ ಎಂದಿನ ಸುಳುಹಿನೊಳಗಲ್ಲದ ಸುಳು
ಹು ಬಸವಣ್ಣ ಸೊಡ್ಡಳನಲ್ಲದೆ ಮಾಣನೂ. ॥೫೮॥

ಇದಕ್ಕೆ ಮಡಿವಾಳತಂದೆಗಳ ವಚನ॥

ಬಾಲನಹನೊಮ್ಮೆ ಲೋಲನಹನೊಮ್ಮೆ, ವೃದ್ಧನಹನೊಮ್ಮೆ, ಮತ್ತ
ನಹನೊಮ್ಮೆ ಹೊಳೆದು ತೋರುವನೊಮ್ಮೆ, ವೃದ್ಧನಹನೊಮ್ಮೆ, ಮತ್ತ
ವಿಶ್ವವೆಲ್ಲವ ನೋಡಿ ಜೆರಗಾಗುತ್ತಿರೆ ಇದ್ದಠಾವಿನಲ್ಲಿರ್ದು ಮುಂದೆ ತೋರು
ತ್ತಿರಲು, ಸಾಂಪ್ರದಾಯದವರು ಒಡನೊಡನೆ ಹರಿದು ಬಂದು ಹೇಳುತ್ತಿ
ರಲು, ಹರಿದು ಬಂದು ಹತ್ತಿ ಸೇರಿದ ಬಸವನ ಮಹಾಮನೆಯ ತಲೆ ಎತ್ತಿ
ನೋಡಿದ ಮುಗಿಲ ಮೂಲೆದಪ್ಪದೆ ಕುಸುರಿಯ ಗೆಲಸದ ನಂದಿಯ ಮುಂಟಿ
ಪಂಗಳ ಮೇಲುಪ್ಪರಿಗೆಯ ಭದ್ರಂಗಳ ನೋಡಿ ತಲೆದೂಗುತ್ತ ಕಲಿದೇವರ
ದೇವ ಬಸವನ ಮಹಾಮನೆಯ ಪ್ರದಕ್ಷಿಣವ ಬಂದು ದ್ವಾರವಟ್ಟದ ಮುಂದೆ
ನಿಂದಿರ್ದನು. ॥೫೯॥

ಇತಿ ಶ್ರೀಮತ್ಸಕಲ ಗಣ ಪುರಾತನರೊಳ್ ಪ್ರಭುದೇವರು ಮಹಾನು
ಭಾವ ಸದ್ಗೋಷ್ಠಿಯಂ ಮಾಡಿದ ಶೂನ್ಯಸಂಪಾದನೆಯೊಳ್ ಪ್ರಭುದೇ
ವರು ಸಪ್ತಾಲಕ್ಷಪರ್ವತದಿಂದೆ ಕಲ್ಯಾಣಕ್ಕೆ ಬಂದುದು ಸಪ್ತಾದಶೋಪದೇಶ
ಸಮಾಪ್ತ.

The Vijay College
LIBRARY,
VIJAY COLLEGE,
BIJAPUR.

ಪ್ರಭುದೇವರು ಶೂನ್ಯಪೀಠ ಮೂರ್ತ ಸಂಪಾದನೆ.

(ಅಷ್ಟಾದಶೋಪದೇಶ.)

ಕಂದ॥ ಪ್ರಭು ಶೂನ್ಯ ವಿಷ್ಟರದೊಳು। ವಿಭವದಿ ಮಂಡಿಸಿ ಸಮಸ್ತ ಕರಣರ ಕರದಿಂ। ಶುಭದಿಂದರ್ಚಿಸಿಕೊಂಡುದ। ತ್ರಿಭುವನಮರಿಯಲ್ಕೆ ಪೇಳ್ವೆನತಿಕೌತುಕದಿಂ॥

ಅದೆಂತೆಂದೊಡಾ ಪ್ರಭುದೇವರು ಬಸವರಾಜದೇವರ ಆರಮನೆಯ ಸೊಕ್ಕು ಆ ಬಸವೇಶ್ವರನ ಮಹಾಮನೆಯ ಚಿತ್ರಮಯದ ಭಾಸುರ ತೇಜಂಗಳನೊಳಕೊಂಡು ಹೊಂಭಿತ್ತಿಗಳ ರತ್ನದೆನೆಗಳಂ ನೆಲೆ ನೆಲೆಯ ಮಂಟಪಂಗಳಂ ನೀಲದುಪ್ಪರಿಗೆಗಳ್ಳಿಲೆ ಮಾಣಿಕ್ಯದ ಕಲಶಂಗಳಿಂದೊಪ್ಪುವ ಗೋಪುರಂಗಳಂ ವಜ್ರದಾರಿಯ ಭಿತ್ತಿಗಳೋಳ್ಮೆರೆದ ಬಹುವಿಧದ ಚಿತ್ರಂಗಳಿಂ ಕಣ್ಗೊಪ್ಪುವ ಪೊಂಜಗಲಿಗಳ್ ವಿರಾಜಿಸುವತಿ ನವರತ್ನಂಗಳೋಳ್ಕೂಡಿದ ರಂಗಮಂಟಪದಿಂ ಪಚ್ಚೆಯ ಕಂಬಂಗಳಿಂ ಪುಷ್ಯರಾಗದ ತೊಲೆಗಳಿಂದೆಸೆವ ಶಶಿಗಲ್ಲಸ್ಫಟಿಕರುಜಂತೆಗಳಿಂದೆ ಬಣ್ಣದ ಲೋವೆಗಳಿಂ ತೋರ್ಪ ಬಳ್ಳಿವಿಂಚುಗಳಿಂದ ಹೊಳೆಯುತಿರ್ಪ ಸೂರ್ಯಕಾಂತದಂಗಜ ಹಸ್ತಂಗಳಿಂ ನೀಲದ ನೆಲೆಗಟ್ಟುಗಳಿಂದಚ್ಚುಗಲ್ಸಂದ ಕೊನ್ನವಾಡಂಗಳ ಸಾಲ್ಗಳಿಂದವರೋಳ್ನಿಂದ ಅಮೃತದ ಕೊಂಡಂಗಳಿಂ ಮತ್ತಂ ಕಿರುವಾಡದೋಳ್ಗಂಧವಟ್ಟಲಗಳಿಂ ಮತ್ತಂ ಪೆರ್ಗೋಡಂಗಳೊಳು ಪೂವೆಟ್ಟಿಗೆಗಳಂ ಭಸಿತದ ಭರಣಿಗಳಿಂ ರುದ್ರಾಕ್ಷಿಯ ಮಾಲೆಗಳಿಂದೆ ಹರದುಪಕರಣಂಗಳ ಎಡೆಯಾಡುವ ಶಿವಶರಣರ ಪ್ರತಿಬಿಂಬಗಳು ಮಣಿಸ್ತಂಭಂಗಳೊಳು ಭಿತ್ತಿಗಳೊಳು ಮೇಲೆ ಕವಾಟಂಗಳೊಳು ಸಹಸ್ರಮದಾಗಿ ತೋರಲು ಕಂಡತಿಹರುಷಂಗೊಳುತ್ತಿಹ ಶಿವಸುಖಿಗಳ ಪಚ್ಚೆಯ ನೇಲಸಮದೊಳ್ ಪಾದಮಂ ತೊಳೆಪುರ ಪರಿವಾರಿಯು ಮುರಸಿರೆ ಬೀಳುವ ಮುಗ್ಧರಂ ಕಂಡುರೆ ಗಹಗಹಿಸುವ ಶರಣರ ಯುವರೆ ಮುರಳ್ದಿದ್ದಾ ಪಚ್ಚೆಯ ನೆಲನಂ ಕಾಣುತ ಮೊದಲಾ ಜಲಮೆಂದೆ ಸಿರಿವಿಡಿದು, ಲಿವಿಸುತ್ತೈತಪ್ಪವಂ ಕಾಣುತ್ತ ಕೈಮೊಯ್ದಿಂಚರದಿಂ ನಗುವತಿ ಮುಕ್ತಾಂಗನೆಯರುಂ ಮತ್ತಂ ಭವನದ ದ್ವಾರವಟ್ಟದೊಳು ರುದ್ರಾಕ್ಷಿಯ ಸೂಸಕಗಳ ಮುತ್ತಿನ ತೋರಣಗಳ ರತ್ನದ ಗೊಂಡೆಯ ಥಳಥಳಿಸುವ ಪೊನ್ನ ಕವಾಟಂಗಳ

ಕನ್ನಡಿಕಲಶಂಗಳ ಪಿಡಿದಾರತಿಯನೆತ್ತುವ ಕನ್ನಿಕೆಯರ ಮತ್ತಂ ಭವನದ ಇಕ್ಕೆಲದೊಳ್ ಮಧ್ಯಮಂಟಪಾಗ್ರದೊಳ್ ಶಿವಲಿಂಗಾರ್ಚನೆಯ ಮಾಡುವ ಬಸವ ಸ್ತುತಿಸುವ ವಚನವ ನೋಡುವ, ಗದ್ಯಮಂ ಕೇಳುವ, ಅರ್ಥಮಂ ಪೇಳುವ, ಹಾಡುವ ಅದ್ಯರ ಅನುಭಾವಮಂ ಲಾಲಿಸುವ, ರಹಸ್ಯವನುಚ್ಚರಿಪರ, ಹಾಡುವ ಗಾನರ, ಆಡುವ ಪಾತ್ರದ ಕೊಂಡಾಡುವ ಭಟ್ಟಾಳಿಗಳಂ ಮೆರೆವತಿ ಬಸವೇಶ್ವರನ ಹೆಮ್ಮನೆಯಂ ಪ್ರಭುದೇವರು ಕಂಡು, ಹರುಷಂದಳೆದು ಆನಂದದ ಶರಧಿಯ ಕೂಡುತ ನಲಿನಲಿದಾಡುತ ಇಕ್ಕೆಲದೊಳ್ಮೆರೆವತಿಭದ್ರ ಮಂಟಪಗಳ ಆ ಭಿತ್ತಿಯ ಆ ತೆನೆಗಳ ಆ ಗೋಪುರಗಳ ಆ ಕಲಶಮನಾ ತೋರಣಂಗಳ ನೀಕ್ಷಿಸುತ್ತಿರೆ ಸ್ತುತಿಸುತ್ತುಪ್ಪೆಯೆನುತ್ತಿಹ ಪುಷ್ಪಾಂಜಲಿಯಂ ಮಾಡುವ ಆರತಿಯನೆತ್ತುವ ಶಿವಭಕ್ತ ರುದ್ರಕನ್ನೆಯರ ಅತ್ಯಂತ ಸ್ತೋತ್ರಮಂ ಮಾಡುವ ನಿಜಘೋಷದೊಳ್ ಶೂನ್ಯ ಸಿಂಹಾಸನಮನಡರ್ದ ಮೇಲೆ ಮೂರ್ತಗೊಳುವ ಪ್ರಸ್ಥಾನದ ವಚನ॥

ಮಲೆವುತ್ತ ಮೆಟ್ಟುತ್ತ ತನುವನೊಲೆವುತ್ತ ತಲೆಮೂಗಿ ಮನವನಲ್ಲಾಡಿವ ಭುವನ ಭುವನೇಶ್ವರನ ಹಿಂದು ಮುಂದು ನೋಡುತ್ತೆ ನಗುತ್ತೆ ಮುತ್ತಿನ ತೋರಣಕ್ಕೆ ಹಾರೈಸಿ ಬಸವನರಮನೆಯ ಹೊಕ್ಕನು ಕಲಿದೇವರ ದೇವನು ॥೧॥

ಮತ್ತಂ॥ ಶೂನ್ಯಸಿಂಹಾಸನದ ಮೇಲೆ ಮೂರ್ತಿಗೊಂಡ ಪ್ರಸ್ಥಾವದ ವಚನ॥

ಬಲಕ್ಕೆ ಮುರಿದನು. ಪಾಳೆಯ ಉತ್ತರ ಬಾಗಿಲಲ್ಲಿ ತಲೆವಾಗಿ ಹೊಕ್ಕ ಗತಿಯ ಪವನನ ಧವಳಾರಮಪ್ಪ ಪಶ್ಚಿಮ ದ್ವಾರದಿಂ ತ್ರಿವಿಧ ಗತಿಯ ಶೂನ್ಯ ಸಿಂಹಾಸನದ ಮೇಲೆ ಮುಕ್ತಕೇಶವ ಪರಮ ಗುರುರಾಜ ಸೇರಿದ ಕಲಿದೇವರ ದೇವನೂ ॥೨॥

ಶೂನ್ಯಸಿಂಹಾಸನದ ಮೇಲೆ ಪ್ರಭುದೇವರು ಮೂರ್ತಿಗೊಳ್ಳಲು ಬಸವರಾಜದೇವರು ನಮಸ್ಕರಿಸಿದ ವಚನ. ॥

ಬಟ್ಟ ಬಯಲಲಿ ಒಂದು ತಲೆಯಿಲ್ಲದಾನೆ ಇದ್ದಿತ್ತು. ಆನೆ ಬಂದು ಆನೆ ನುಂಗಿ ತಾನೆ ಆಳಿಯಿತ್ತು. ಇಂತು ಅಂತರಂಗವಿಲ್ಲದ ಒಳಗು ಅವಲಂಬವಿಲ್ಲದ ಹೊರಗು ನೋಡಲಳವಲ್ಲದ ಕುಸುಮದ ಗದ್ದುಗೆಯಲ್ಲಿ ಒಡಲಿಲ್ಲದ ಘನವು ಮೂರ್ತಿಗೊಂಡರೆ ವಿಚಿತ್ರವಾಯಿತ್ತು ಜಗವೆಲ್ಲ. ಕೂಡಲ

ಸಂಗವದೇವರ ಶರಣ ಪ್ರಭುದೇವರ ಶ್ರೀಪಾದಕ್ಕೆ ನಮೋ ನಮೋ ಎಂಬೆನು. ॥೩॥

ಅಲ್ಲಿ ಹಡಪದಪ್ಪಣ್ಣಗಳ ವಚನ. ॥

ನೆಲನ ಹೊದ್ದದು. ಆಕಾಶ ಮುಟ್ಟದು. ಎಡೆಯಲೊಂದು ರೂಪಿಲ್ಲ. ಭಾವವೆಂಬೆ. ಜ್ಞಾನವೆ ನಿವಾಸ. ನಿಲವೆ ಭಿತ್ತಿ. ನಿರಹಂಕಾರವೆ ಶಿಖಿ ಮಹದಂಕಾರವೆ ಶೃಂಗಾರ. ಕಳಸ ಪತ್ರದ ನವ ಕಮಲ ಸಿಂಹಾಸನದ ನಿತ್ಯವೆ ಮಲಗು. ನಿಜವೆಂಬ ವಿಸ್ತಾರದಲ್ಲಿ ನಿತ್ಯ ನಿರಾಳವೆಂಬ ಮಹ ಘನವು ಬಂದು ಮೂರ್ತಿಗೊಳ್ಳಲು ಕಾಯದ ಕಂಗೆ ಕಾಣಬಾರದು. ಮನದ ಮುಂದೆ ಅಳವಡದು. ಭಾವದ ಬಗೆಗೆ ವೈದೋರದು. ಬಸವ ಪ್ರಿಯ ಕೂಡಲ ಚನ್ನಸಂಗಯ್ಯನಲ್ಲಿ ಪ್ರಭುದೇವರ ಶ್ರೀಪಾದಕ್ಕೆ ನಮೋ ನಮೋ ಎಂಬೆನು. ॥೪॥

ಅಲ್ಲಿ ಸೊಡ್ಡಳ ಬಾಚರಸರ ವಚನ. ॥

ಆಕಾರವಿಲ್ಲದ ನಿರಾಕಾರ ಮಠಕ್ಕೆ ನಿರಾಳವೆಂಬ ಗಂಡ ಕುಳ್ಳಿರಲು. ಮೂವರು ಹೆಣ್ಮಕ್ಕಳು ಸೇವೆಯ ಮಾಡುವರು. ಇಬ್ಬರು ಸಂಗಮ ಮಾಡುತ್ತಿಪ್ಪರು. ಒಬ್ಬಾಕೆ ಪುರುಷನ ನುಂಗಿಕೊಂಡಿಪ್ಪಳು. ಇವರರುವರ ಕೂಡಿ ಹೊಯಿಕ್ಕೆಯಾಗಿ ಇಪ್ಪನ ಕಂಡು ಆನು ಪ್ರಭುವ ದೇವರೆಂದರಿದು ಆತನ ನಿಜಪಾದಕ್ಕೆರಗಿ ಎನ್ನ ಭವವ ಹರಿದೆನು ಮಹದಾನಿ ಸೊಡ್ಡಳನ ಕಂಡು. ಕಡುಸುಖವ ಉಪಮಿಸಬಾರದು. ॥೫॥

ಇದಕ್ಕೆ ಬಸವ ರಾಜ ದೇವರ ವಚನ. ಎನ್ನ ಗಂಡ ಬರಬೇಕೆಂದು ಆನು ಎನ್ನಂತರಂಗವೆಂಬ ಮನೆಯ ತೆರಹು ಮಾಡಿ, ಅಷ್ಟದಳವೆಂಬ ಓವರಿಯೊಳಗೆ ನಿಜ ನಿವಾಸವೆಂಬ ಹಾಸುಗೆಯ ಹಾಸಿ, ಧ್ಯಾನವೆಂಬ ಮೇಲುಕಟ್ಟ ಕಟ್ಟಿ, ಜ್ಞಾನವೆಂಬ ದೀಪಮಂ ಬೆಳಗಿಸಿ, ಕ್ರಿಯವೆಂಬ ಉಪಚಾರಂಗಳ ಹರಹಿಕೊಂಡು, ಪಶ್ಚಿಮ ದ್ವಾರವೆಂಬ ಬಾಗಿಲು ತೆರೆದು, ಕಂಗಳೇ ಪ್ರಾಣವಾಗಿ ಬರವ ಹಾರೈಸುತ್ತಿರ್ದೆನಯ್ಯ! ನಾನು ಬಾರೆನೆಂದುಮ್ಮಳಿಸಿಹಳೆಂದು ತಾನೆ ಬಂದು ಎನ್ನ ಹೃದಯ ಸಿಂಹಾಸನದ ಮೇಲೆ ಮೂರ್ತಿಗೊಂಡರೆನ್ನ ಮನದ ಬಯಕೆ ಸ್ವಯವಾಯಿತ್ತು. ಹಿಂದೆ ಹನ್ನೆರಡು ವರುಷದಲ್ಲಿರ್ದ ಚಿಂತೆ ಇಂದು ನಿಶ್ಚಿಂತವಾಯಿತ್ತು. ಕೂಡಲ ಸಂಗಮ ದೇವರು ಕೃಪಾಮೂರ್ತಿಯಾದ ಕಾರಣ ನಾನು ಬದುಕಿದೆನು. ॥೬॥

ಮತ್ತಂ॥ ಬಸವರಾಜದೇವರು ಪಾದಾರ್ಚನೆಯ ಮಾಡುವ ಪ್ರಸ್ತಾವದ ವಚನ।

ಎನ್ನ ಮನವು ನಿಮ್ಮ ಚರಣವ ಕಂಡ ಬಳಿಕ ಬೇರಸಿಯಲ್ಲದೆ ಅಗಲಿ ಸೈರಿಸಲಾರೆನಯ್ಯಾ! ತ್ರಾಹಿ! ತ್ರಾಹಿ! ತ್ರಾಹಿ! ಘನಮಹಿಮ, ನಿಮ್ಮ ಪಾದಾರ್ಚನೆಯೆ ಎನ್ನ ಪರಮಾನಂದ ಜಲವ ತುಂಬುವದಯ್ಯ. ಪೂಜೆಯ ಮಾಡುವೆ ಎನ್ನಹೃದಯ ಕಮಲವನಲರಿಸುವೆ. ಆರತಿಯಿಂದ ಆರತಿಯನೆತ್ತುವೆ. ಎನ್ನ ಮಹಪ್ರಕಾಶದ ಧೂಪವಬೀಸುವೆ. ಎನ್ನ ಸ್ವಾನುಭಾವದ ವನೀವೆ. ಈ ತೆರನಲ್ಲದೆ ಅಷ್ಟವಿಧಾರ್ಚನೆ ಷೊಡಕೋಪ ಚಾರವೆಂಬುದಕ್ಕೆ ಬೇರೆ ತೆರನ ಕಾಣೆನಯ್ಯ. ಕೂಡಲ ಸಂಗಮ ದೇವಯ್ಯ ಪ್ರಭುವೆನ್ನ ಪ್ರಾಣಲಿಂಗವೆಂಬುದು ಎನಗಿಂದು ಕಾಣಬಂದಿತು ನೋಡಯ್ಯ ॥೭॥

ಮತ್ತಂ ದರ್ಶನದ ಸುಖಾನಂದದ ವಚನ॥

ನಿಮ್ಮ ನೋಟವನಂತಸುಖವು ನಿಮ್ಮ ಕೂಟ ಪರಮ ಸುಖವು. ಅಷ ಕೋಟಿ ರೋಮಂಗಳೆಲ್ಲ ಕಂಗಳಾಗಿ ನೋಡುತ್ತಿದ್ದೆನು ಕೂಡಲ ಸಂಗಮದೇವಯ್ಯ! ನಿಮ್ಮ ನೋಡಿ ನೋಡಿ ಎನ್ನ ಮನದಲ್ಲಿ ರತಿ ಹುಟ್ಟಿ ನಿಮಿರ್ದವೆನ್ನ ಕಂಗಳು ॥೮॥

ಮತ್ತಂ ಎನ್ನ ವಚನದಲ್ಲಿ ನಾಮಾವೃತವ ತುಂಬಿ ಎನ್ನ ನಯನದಲ್ಲಿ ಮೂರುತಿಯ ತುಂಬಿ, ಎನ್ನ ಮನದಲ್ಲಿ ನಿಮ್ಮ ನೆನಹು ತುಂಬಿ, ಎನ್ನ ಕಿವಿಯಲ್ಲಿ ನಿಮ್ಮ ಕೀರ್ತಿಯ ತುಂಬಿ ಕೂಡಲಸಂಗಮದೇವ ನಿಮ್ಮ ಚರಣ ಕಮಲದೊಳಗಾನು ತುಂಬಿ ॥೯॥

ಮತ್ತಂ ಕಂಡ ಕನಸು ನಿಧಾನವ ಕಂಡೆನಯ್ಯ. ಬಿಡಲಾರದ ನಿಧಾನವ ಕಂಡೆನಯ್ಯ. ಕೂಡಲ ಸಂಗಯ್ಯನೆಂಬ ನಿಧಾನವ ಕಂಡು ಬಿಡಲಾರೆನಯ್ಯ ॥೧೦॥

ಮತ್ತಂ, ಕಾಣಬಾರದ ವಸ್ತು ಕೈ ಸೇರಿತಯ್ಯ. ಆನಂದದಿಂದ ಆಡುವೆ. ಹಾಡುವೆ. ಎನ್ನ ಕಣ್ಣ ತುಂಬ ನೋಡುವೆ. ಎನ್ನ ಮನ ಒಲಿದು ಭಕ್ತಿಯ ಮಾಡುವೆ ಕೂಡಲ ಸಂಗಯ್ಯ ನಿನಗೆ. ॥೧೧॥

ಮತ್ತಂ, ಆಡಿ ಕಾಲು ದಣಿಯಲು. ನೋಡಿ ಕಣ್ಣು ದಣಿಯವು, ಹಾಡಿ ಮನ ದಣಿಯದಿನ್ನೇನೆನಿನ್ನೇನೆನಯ್ಯ? ನಿಮ್ಮವನ ಕೈವಿಟ್ಟು ಪೂಜಿಸಿ ಮನ

ಪಣಿಯಲ್ಲೊಲ್ಲದಿನ್ನೇಪೆ ನಿನ್ನೇವೆನಯ್ಯ? ಕೂಡಲ ಸಂಗವದೇವ ನಿಮ್ಮ ಉದರವ ಬಗಿದು ಹೋಗುವ ಭರವೆನಗೆ ॥೧೨॥

ಇಂತು ಪ್ರಭುದೇವರು ಶೂನ್ಯ ಸಿಂಹಾಸನದ ಮೇಲೆ ಮೂರ್ತಿಗೊಂಡಿರಲು ಬಸವರಾಜದೇವರು ಪರಮಾನಂದಯುಕ್ತವಾದ ಸದ್ಭಕ್ತಿಯಿಂದ ಪ್ರಭುದೇವರ ಪೂಜಿಸಿ ಆಡಿ ಹಾಡಿ ಓಲಾಡುತ್ತಿರಲು ಇತ್ತಲು ಆರೋಗಣೆಗೆ ಬಂದು ಕುಳ್ಳಿರ್ದ ಲಕ್ಷದ ಮೇಲೆ ತೊಂಬತ್ತಾರು ಸಾವಿರ ಜಂಗಮರೆಲ್ಲರು ಕ್ರೋಧದಿಂದ ಬಸವರಾಜದೇವರ ಮೇಲು ಪ್ರಭುದೇವರ ಮೇಲೆಯು ಡಂಗುರವನಿಕ್ಕಿ ಎದ್ದು ಹೋದ ಪ್ರಸ್ಥಾವದ ವಚನ॥

ಅರಳು ಗಂಗಳವರಿಗೆ ಹರಳು ಗಂಗಳವರು ಸೈರಿಸದಂತೆ, ತುರುಬುಳ್ಳವರಿಗೆ ಬರಿಮುಂಡೆಯವರು ಸೈರಿಸದಂತೆ, ಅರಸನ ಕಂಡು ಪುರುಷನ ಮರೆದಂತೆ, ಮಾಡಿದನೀ ವ್ರತಗೇಡಿ ಬಸವನು. ಮಹೇಂದ್ರ ಜಾಲಿಗ ನೊಬ್ಬನ ಪ್ರಭುವೆಂದು ಕುಳ್ಳಿರಿಸಿಕೊಂಡು ತನ್ನ ಪ್ರಾಣಲಿಂಗವೆಂದು ನವ್ಮತ್ತ ತಿರುಗಿ ನೋಡಲೊಲ್ಲ. ಆತನಲ್ಲಿ ಎನು ಲೇಸ ಕಂಡನು? ನಮ್ಮಲ್ಲಿ ಎನು ಹೊಲ್ಲೆಯವ ಕಂಡನು? ಕಂಚನೊಲ್ಲದೆ ಬಿಟ್ಟು ಹಂಚ ಹಿಡಿದನು. ಅನಾಚಾರಿಯವನೊಬ್ಬ, ವ್ರತಗೇಡಿ ಬಸವನೊಬ್ಬನು. ಇವರಿಬ್ಬರು ದೇವಲೋಕ ಮರ್ತ್ಯಲೋಕಕ್ಕೆ ಹೊರಗು. ಇವರಿದಿರ ಮುಖವ ನೋಡಲಾಗದ. ಎನುತ್ತ ಹೋದರು ಕಲಿದೇವರದೇವನ ಶರಣರು ॥೧೩॥

ಇದಕ್ಕೆ ಪ್ರಭುದೇವರ ಪ್ರತ್ಯುತ್ತರ. ಅಯ್ಯ, ಸಾತ್ವಿಕ ಶರಣರ ನುಡಿ ಹುಸಿಯೆ? ಅದು ದಿಟ. ಅದು ದಿಟ ಒಳಗೆಂಬುದೇ ದೇವಲೋಕ. ಹೊರಗೆಂಬುದೇ ವೃತ್ಯಲೋಕ. ಈ ಎರಡು ಲೋಕಕ್ಕೆ ಹೊರಗಾಗಿ ನಾವಿರಲು ಈ ಎರಡು ಲೋಕದೊಳಗೆ ತಾವೆ ಇರಲಿ ಗುಹೇಶ್ವರಾ ॥೧೪॥

ಮತ್ತಂ ಪ್ರಭುದೇವರುದ್ದಂಡಿಸುತ್ತಿ ಎದ್ದು ಹೋದ ಜಂಗಮರ ವಿಡಂಬಿಸುವ ಪ್ರಸ್ಥಾವದ ವಚನ॥

ಅಂಗಜ ಜಂಗುಳಿಗಳೆಲ್ಲ ಅಶನಕ್ಕೆ ನೆರೆದು, ಲಿಂಗದ ಹವಣ ನಿವರಿತ್ತ ಬಲ್ಲರು? ಕಾಯ ಜೀವಿಗಳು ಕಳವಳದಾರಿಗಳು ದೇವರ ಸುದ್ದಿಯ ನಿವರಿತ್ತ ಬಲ್ಲರಯ್ಯ? ಮದ್ಯಪಾನವನುಂಡು ಮದವೆದ್ದ ಜೋಗಿಯಂತೆ ನುಡಿವರು ಗುಹೇಶ್ವರನ ನಿಲವ ನಿವರಿತ್ತ ಬಲ್ಲರು? ॥೧೫॥

ಆ ಪ್ರಸ್ಥಾವದೊಳು ಚಿನ್ನವಣ್ಣಾಯಕರು ವಿಡಂಬಿಸುವ ಪ್ರಸ್ಥಾವದ ವಚನ॥

ಅತಿಮುಕ್ತನವೆಂಬ ಶೂನ್ಯ ಸಿಂಹಾಸನವನೇರಿಕೊಂಡು ನಾವೇ ಹಿರಿಯರು ನಾವೇ ದೇವರೆಂಬವರು ತಮ್ಮ ತಾವರಿಯರು. ಅದ್ಭುತ ಮನ ಭುಂಜಕರ ಮೆಚ್ಚ ನಮ್ಮ ಕೂಡಲ ಚನ್ನಸಂಗಯ್ಯನು ॥೧೬॥

ಮತ್ತಂ ಪಥವ ನರಿಯದೆ ಮುಂಡೆಯ ಬೋಳಿಸಿಕೊಂಡಾತ ಜಂಗಮವಲ್ಲ. ಸತ್ತಡೆ ತೆಗೆವರಿಲ್ಲೆಂದು ಕಟ್ಟಿಕೊಂಡಾತ ಭಕ್ತನಲ್ಲ. ತನು ಮನ ಧನ ಎನ್ನದಲ್ಲ, ಲಿಂಗದ ಒಡವೆ ಲಿಂಗಕ್ಕೆಂದು ಮಾಡುವಾತ ಭಕ್ತ. ತನು ಗುಣವಿರಹಿತನಾಗಿ ಲಿಂಗದಲ್ಲಿ ಸ್ವಯವಾಗಿ ಬಂದು ನಿಂದಾತನೆ ಜಂಗಮ. ಅಂಥ ಭಕ್ತನು ಅಂಥ ಜಂಗಮನು ಕೂಡಲ ಚನ್ನಸಂಗಯ್ಯನಲ್ಲಿ ಬಸವನು ಪ್ರಭುವಲ್ಲದಿಲ್ಲ. ಉಳಿದವರೆಲ್ಲ ಲಾಂಛನಧಾರಿಗಳೂ ॥೧೭॥

ಮತ್ತಂ॥ ಬರಿಯ ಬೋಳುಗಳೆಲ್ಲ ಜಂಗಮವೇ? ವೇಷಧಾರಿಗಳೆಲ್ಲ ಜಂಗಮವೇ? ಜಡ ಜೀವಿಗಳೆಲ್ಲ ಜಂಗಮವೇ? ನಿರ್ಗಮನವೆ ಜಂಗಮ? ನಿಃಸ್ಪೃಹ ಜಂಗಮ. ನಿರ್ವೈಕ್ಯನೆ ಜಂಗಮ. ಇಂತಹ ಜಂಗಮದ ಸುಳುಹು ಕಾಣದೆ, ಕೂಡಲ ಚನ್ನ ಸಂಗಮ ದೇವ ತಾನೆ ಪ್ರಭುವೆಂಬ ಜಂಗಮವಾದ ॥೧೮॥

ಮತ್ತಂ॥ ಧರೆಯ ಮೇಲೆ ನುಳಿದಾಡುವ ಲಾಂಛನ ಧಾರಿಗಳೆಲ್ಲರು ಹದಿನೆಂಟು ಜಾತಿಯ ಮನೆಯಲುಂಡು ಕೆಟ್ಟರಯ್ಯ. ಗಿರಿಯಲ್ಲಿಪ್ಪ ಜಡೆಯ ಧಾರಿಗಳೆಲ್ಲರು ಫಲವೃಕ್ಷಂಗಳನುಂಡು ಕೆಟ್ಟರಯ್ಯ. ತರಗೆಲೆಯ ಮೆದ್ದು ತಪಸ್ಸಿನಿಪ್ಪವರೆಲ್ಲರು ವಾಯು ಭಕ್ಷಣವನುಂಡು ಕೆಟ್ಟರಯ್ಯ. ಅರಿಕೆಯ ಇಂದ್ರಿಯಂಗಳ ಕಟ್ಟ ಕುರುಹಿನ ರಾಜ್ಯಕ್ಕೆ ಬಂದು ನರಕಕ್ಕಿಳಿವವರ ಹಿರಿಯರೆಂದೆನ್ನದೆನ್ನ ಮನವು. ಇದು ಕಾರಣ ಕೂಡಲ ಚನ್ನ ಸಂಗಯ್ಯ ನೊಲ್ಲದಿದ್ದರೆ ಅವರ ಬೆನ್ನಿಲಿ ಹೋಗಲಿ. ಪ್ರಭುದೇವರ ಬಿಡೆನು ನಾನು॥೧೯॥

ಆ ಪ್ರಸ್ಥಾವದೊಳು ಸೊಡ್ಡಳ ಬಾಚರಸರ ವಚನ॥

ವಿಪಿನದೊಳು ಮದಕರಿಯ ಹಿಂಡು ಚಿಸಂದ ಲೀಲೆಯೊಳಾಡುತ್ತಿರಲು, ಕೇಸರಿ ಬರಲು ಮದಕರಿಗಳೆಲ್ಲ ಕೆದರಿ ಓಡುವ ತೆರನಂತೆ, ಸಾಕಾರ ಸೊಡ್ಡಳ, ನಿಮ್ಮ ಶರಣ ಪ್ರಭುದೇವರು ಬರಲೊಡನೆ ಹರಿದುದಯ್ಯ ನೆನಿಪ ಗಣಂಗಳು ॥೨೦॥

ಇಂತು ಜಂಗಮವೆಲ್ಲ ಮುಳಿದು ಹೋಗಲು ಬಸವರಾಜದೇವರು ಅತ್ಯಂತ ಭೀತರಾಗಿ ಪ್ರಭುದೇವರೊಡನೆ ಬಿನ್ನೈಸುವ ವಚನ॥

ಅಯ್ಯಾ. ನಿಮ್ಮ ಶರಣರ ಸಂಗವೆನಗೆ ಪರಮ ಸುಖವಯ್ಯ. ಅಯ್ಯ, ನಿಮ್ಮ ಶರಣರ ಅಗಲಿಕೆ ಪ್ರಾಣವಿಯೋಗವಯ್ಯ. ಶಿವ ಶಿವ, ಸಂತವಿಡಿ ಎನು. ಇನ್ನೆಂತಯ್ಯ? ಎನಗೇನು ಗತಿ? ಕೂಡಲಸಂಗಮದೇವ ನಿಮ್ಮ ಶರಣರ ಮುನಿಸು ಎನಗೆ ಬಿಡಿಸಬಾರದ ತೊಡಕು. ॥೨೧॥

ಮತ್ತಂ, ಗುರು ಮುನಿದರೆ ಒಂದು ದಿನ ತಾಳುವೆ. ಲಿಂಗ ಮುನಿದರೆ ಅರೆ ದಿನ ತಾಳುವೆ. ಜಂಗಮ ಮುನಿದರೆ ಕ್ಷಣಮಾತ್ರ ತಾಳಿದರೆ ಎನ್ನ ಪ್ರಾಣದ ಹೋಕು ನೋಡಾ ಕೂಡಲ ಸಂಗಮದೇವಾ ॥೨೨॥

ಮತ್ತಂ ಅರಸು ಮುನಿದರೆ ನಾಡೊಳಗಿರಬಾರದು. ಪತಿ ಮುನಿದರೆ ಸತಿ ಇರಬಾರದು. ಕೂಡಲ ಸಂಗಮದೇವ, ಜಂಗಮ ಮುನಿದರೆ ನಾನೆಂತು ಬದುಕುವೆನು? ॥೨೩॥

ಇವಕ್ಕೆ ಪ್ರಭುದೇವರು ಬಸವರಾಜದೇವರ ಭಯಮಂ ಸಂತೈಸಿ ಬೋಧಿಸುವ ವಚನ॥

ಅಂಜಬೇಡ, ಅಳುಕಬೇಡ. ಹೋದವರಾರು? ಇದ್ದವರಾರು? ಎಲೆ ಮರುಳ, ಒಂದು ಮುಖವಲ್ಲಿಪ್ಪ ದೇವನೊಬ್ಬನೆ. ಹಲವರ ಮುಖದಲ್ಲಿಪ್ಪ ದೇವನೊಬ್ಬನೆ. ನಾವು ಹಲವಲ್ಲದೆ ಕಾರ್ಯ ಒಂದೇ ನೋಡಾ. ಮನದೊಳಗಣ ಘನವು ತನುವ ನಗಲುವುದೇ? ಗುಹೇಶ್ವರಲಿಂಗದ ವಿಯೋಗಕ್ಕೆ ತೆರಹಿಲ್ಲ ಕೇಳಾ ಸಂಗನ ಬಸವಣ್ಣಾ ॥೨೪॥

ಮತ್ತಂ॥ ಮತಿಯೊಳಗೆ ದುರ್ಮತಿ ಹುಟ್ಟಿ ಕಲಿ ಗಸಣಿಗೊಳಗಾವ ಪರಿಯ ನೋಡಾ. ಜ್ಞಾನವಜ್ಞಾನ ನುಂಗಿವ ಬಳಿಕ, ಭಾನು ಗ್ರಹಣಕ್ಕೊಳಗಾದಂತೆ ಇದ್ದಿತ್ತು. ಕ್ಷೀರವನುಂಬ ಶಿಶು ತಾಯನಗಲಿ ಅರಿಯದ ಮೋಹದಂತೆ ಇದ್ದಿತ್ತು. ಹೇಳುವಲ್ಲಿ ಯುಕ್ತನು, ಕೇಳುವಲ್ಲಿ ಯುಕ್ತನು, ಎಂಬುದು ಅಜ್ಞಾನ. ಭಾವಕ್ಕೆ ಬಂದಿತ್ತು. ನೀರ ಮೇಲಣ ಲಿಪಿಯ ನೋದಬಲ್ಲವರುಂಟೆ? ಸಾರಾಯ ವೇದ್ಯವಪ್ಪರಿಗಲ್ಲದೆ ಕನ್ನಡಿಯೊಳಗೆ ನೋಡಲು ಭಿನ್ನವುಂಟೆ ಅಯ್ಯ? ತನ್ನ ಕಣ್ಣಿನಲ್ಲಿ ಕಾಣದಂತೆ ಇದ್ದಿತ್ತು ದರ್ಪಣದೊಳಗಣ ಬೆಳಗು. ಬೆಳಗಿನೊಳಗಣ ಬೆಳಗು. ಗುಹೇಶ್ವರ ನಿಷ್ಪತಿಯ ತಿಳಿದು ನೋಡಯ್ಯ ಸಂಗನ ಬಸವಣ್ಣಾ ॥೨೫॥

ಇವಕ್ಕೆ ಬಸವರಾಜದೇವರ ಪ್ರತ್ಯುತ್ತರ. ಅದ್ವೈತವ ಅಂತರಂಗದಲ್ಲಿ ಅರಿದು, ಹೊರಗೆ ದಾಸೋಹವ ಮಾಡದಿರ್ದಪರೆಂತಯ್ಯ? ಉಭಯದ ಸಂದೇಹದಲ್ಲಿ ನಿಜ ಒಪ್ಪದು ನಿಮ್ಮ ಶರಣರ ಮನ ಸೊಂದಲ್ಲಿ ನಾನು ಸ್ಥಿರಿಸಿ ಕೊಂಬೆನೆಂತಯ್ಯ? ಕೂಡಲ ಸಂಗಮದೇವ ಹಾವು ಸಾಯದೆ ಕೋಲು ನೋಯುವಂತೆ ಮಾಡಾ ನಿಮ್ಮ ಧರ್ಮ ॥೨೬॥

ಇದಕ್ಕೆ ಪ್ರಭುದೇವರ ಪ್ರತ್ಯುತ್ತರ. ಒಂದಾದುದು ಎರಡಪ್ಪುದೇ? ಎರಡಾದುದು ಒಂದಪ್ಪುದೇ? ಪರಿಣಾಮದ ವೇಳೆಯಲ್ಲಿ ಸಂದೇಹ ಹುಟ್ಟಲುಂಟೆ? ಬಂದ ಜಂಗಮದ ನಿಲವನರಿಯದೆ ಹಿಂದ ನೆನಸಿ ಹಲವ ನೆನೆಸುವರೆ? ಈ ಒಂದು ನಿಲವಿಂಗೆ ಪರಿಣಾಮವ ಮಾಡಬಲ್ಲರೆ ನಿನ್ನ ಲಕ್ಷದ ಮೇಲೆ ತೊಂಬತ್ತಾರು ಸಾವಿರ ಜಂಗಮಕ್ಕೆ ಪರಿಣಾಮವಪ್ಪುದು ನೋಡಾ. ಗುಹೇಶ್ವರನೆಂಬ ಲಿಂಗದ ನೆಲೆಯನರಿಯದೆ ಮರುಳಾದೆಯಲ್ಲಾ ಸಂಗನ ಬಸವಣ್ಣಾ ॥೨೭॥

ಇವಕ್ಕೆ ಬಸವರಾಜದೇವರ ಪ್ರತ್ಯುತ್ತರ. ದೇವ ದೇವ, ಮಹಾಪ್ರಸಾದ ನಿಮ್ಮಡಿಗಳೆಂದಂತೆ ಅಲ್ಲದೆ ಇನ್ನೆನಗೆ ಬೇರೆ ಸ್ವತಂತ್ರ ಉಂಟೆ? ಸಂದೇಹ ಸಂಶಯವುಂಟೆ? ದರ್ಪಣದೊಳಗಣ ಪ್ರತಿಬಿಂಬವ ನೋಡುವ ಮುಖಕ್ಕೆ ಭಿನ್ನ ಭಾವವುಂಟೆ? ಚರಿಸಿ ಬಪ್ಪ ಅನಂತ ಸುಳುಹಿನೊಳಗೆ ನೀನೊಬ್ಬನೆ. ನಿನ್ನೊಳಗೆ ಅನಂತ ಸುಳುಹು ಅಡಗಿದವು. ನಿಮಗೆ ಮಾಡಿದ ಸುಯಿಧಾನವ ನಿಮಗೆ ನೀಡುವೆನು. ಅವಧರಿಸಬೇಕಯ್ಯ ಕೂಡಲಸಂಗನ ದೇವಯ್ಯ ॥೨೮॥

ಇವಕ್ಕೆ ಪ್ರಭುದೇವರ ಪ್ರತ್ಯುತ್ತರ. ತನಗುಳ್ಳ ನಿಧಾನ ತನಗಿಲ್ಲದಂತೆ ಬಂಧುಗಳೆಲ್ಲರ ನುಂಗಿ ಅಂಬುಧಿ ಬತ್ತಿತ್ತು. ಅದ್ಭುತ ಸತ್ತಿತ್ತು. ರಣರಂಗವಪ್ಪತ್ತಿತ್ತು ಇರಳು ಮಾಣಿಕ್ಯವ ನುಂಗಿ ಮರಣವಾದ ಬಳಿಕ, ಅಮೃತದ ಪುತ್ಥಳಿಯ ಹಾಲ ಕುಡಿಯ ಕರೆವರೆ ಗುಹೇಶ್ವರ ಲಿಂಗಕ್ಕೆ ಊಟವೆಂಬುವದಿಲ್ಲ ನೋಡಾ ಸಂಗನ ಬಸವಣ್ಣಾ ॥೨೯॥

ಮತ್ತಂ॥ ಕಾಯದಲ್ಲಿ ಕಾಯ ಸವಮ, ಪ್ರಾಣವಲ್ಲಿ ಪ್ರಾಣ ಸವಮ, ನಿಶ್ಚಿಂತವಾದ ಬಳಿಕ ಹಸಿವುತೃಷೆಗಳೆಂಬವು ಅಳಿದು ಹೋದವು ಕೇಳಾ ಉಂಡೆನೆಂಬ ಬಯಕೆಯು ಒಲ್ಲೆನೆಂಬ ವೈರಾಗ್ಯವು ಇಲ್ಲ. ಇದು ಸ್ವಭಾವ

ತೃಪ್ತಿಯೊಳಗಡಗಿತ್ತು. ಇದು ಕಾರಣ ನಮ್ಮ ಗುಹೇಶ್ವರ ಲಿಂಗಕ್ಕೆ ಆರೋಗಣೆ ಇಲ್ಲ ಕಾಣಾ ಸಂಗನಬಸವಣ್ಣಾ ॥೩೦॥

ಇದಕ್ಕೆ ಚಿಕ್ಕವಣ್ಣಾಯಕರ ವಚನ. ಒಲ್ಲೆನೆಂದರೆ ಭಂಗ. ಒಲುಪೆನೆಂದರೆ ಅದೇ ಭಂಗ. ಒಲ್ಲೆ ಒಲುವೆನೆಂಬೆರಡನು ತಿಳಿದು ತೃಪ್ತನಾದಿನೆಂದಡೆ ಅದೇ ಕೊರತೆ. ಕೂಡಲಚನ್ನಸಂಗಯ್ಯ ಭಕ್ತನಾಧೀನವಾಗಿ ಇಲ್ಲಿಗೆ ನಡೆದು ಬಂದ ಬಳಿಕ ಉಪಚಾರ ಉಂಟೇ ಅಯ್ಯ? ॥೩೧॥

ಇದಕ್ಕೆ ಪ್ರಭುದೇವರ ಪ್ರತ್ಯುತ್ತರ. ಭಕ್ತನಾಧೀನವಾಗಿ ಭಕ್ತಿಯ ಬೇಡ ಬಂಪವನಲ್ಲ. ಯುಕ್ತಿಯಾಧೀನವಾಗಿ ಯುಕ್ತಿಯ ಬೇಡ ಬಂದವನಲ್ಲ. ಆಶನಾತುರನಾಗಿ ವಿಷಯವ ಬಯಸಿ ಬಂದವನಲ್ಲ. ಗುಹೇಶ್ವರನ ಶರಣ ಸಂಗನ ಬಸವಣ್ಣ ಮಾಡುವ ಭಕ್ತನಲ್ಲವಾಗಿ, ನಾನು ಬೇಡುವ ಜಂಗಮವಲ್ಲ ಕಾಣಾ ಚನ್ನಬಸವಣ್ಣಾ ॥೩೨॥

ಇದಕ್ಕೆ ಬಸವರಾಜದೇವರ ಪ್ರತ್ಯುತ್ತರ॥ ಅನು ನಿಮ್ಮಲ್ಲಿ ಪ್ರಪಂಚನುಪಚಾರವನರಿಯೆನಯ್ಯ. ನಿಮ್ಮ ಪಾದದಲ್ಲಿ ತದ್ಗತನಾಗಿಪ್ಪೆ. ಭಕ್ತಿ ಮುಕ್ತಿ ವಿರಕ್ತಿ ಉಪಚಾರವನರಿಯೆನು. ಕೂಡಲ ಸಂಗಮದೇವ, ಭಿನ್ನವಿಲ್ಲದೆ ಭೃತ್ಯಾಚಾರಕ್ಕೆ ಬಂದ ಪದಾರ್ಥವ ನೀನಂದೆ ಚಿತ್ತೈಸಯ್ಯ ॥೩೩॥

ಇದಕ್ಕೆ ಪ್ರಭುದೇವರ ಪ್ರತ್ಯುತ್ತರ॥ ಕಾಯವೆಂಬ ಕಲ್ಪಿತವ ಕಳೆದು, ಪ್ರಾಣವೆಂಬ ಸೂತಕವ ಹರಿದು, ನಿಜಭಕ್ತಿ ಸಾಧ್ಯವಾದಲ್ಲದೆ ಲಿಂಗಪರಿಣಾಮ ವೇಧಿಸಬಾರದು. ಆನು ಮಾಡಿದೆ ನೀನು ಕೊಳ್ಳು ಎಂದರೆ ಅದೇ ಅಜ್ಞಾನ. ನಮ್ಮ ಗುಹೇಶ್ವರ ಲಿಂಗಕ್ಕೆ ಕುರುಹಳಿದು ನಿಜ ಉಳಿದವರಾದಲ್ಲದೆ ಪದಾರ್ಥವ ನೀಡಬಾರದು ಕಾಣಾ ಚನ್ನಬಸವಣ್ಣಾ ॥೩೪॥

ಇದಕ್ಕೆ ಬಸವರಾಜದೇವರ ವಿನ್ನಹ. ಮರ ಹಿಂದಲಾದ ಕುರುಹಿನ ಕಾಯವ ಧರಿಸಿಕೊಂಡು ಬಂದರೆ ಅದು ಎನಗೆ ಕುಂದಲ್ಲ ನೋಡು ದೇವಾ. ನಿಮ್ಮ ಲೀಲೆಯಿಂದೆ ಹಿಂದಾರು ಜನ್ಮದಲ್ಲಿ ಬಂದರೆ ಅದು ನಿಮ್ಮ ಜಂಗಮ ಭಕ್ತಿಯಿಂದ ಕಳೆದೆ ನೋಡಯ್ಯ. ಕಾಯವಿಲ್ಲದ ಜಂಗಮಕ್ಕೆ ಪ್ರಾಣವಿಲ್ಲದ ಮಾಟ ಒಲ್ಲೆನೆಂಬುದಕ್ಕೆ ಕಾರಣವೇನು ಹೇಳಾ ಕೂಡಲಸಂಗಮದೇವಾ? ॥೩೫॥

ಇದಕ್ಕೆ ಪ್ರಭುದೇವರ ಪ್ರತ್ಯುತ್ತರ. ತಾನಿಟ್ಟ ಬೇತಾಳ ತನ್ನನೆ ತಿಂದಿತೆಂಬಂತೆ ನಿನ್ನ ಭಾವಳಿಯನೆತ್ತುವನ್ನಕ್ಕರ ಎನ್ನಮರವೆ ಎನಗೆ ಎಚ್ಚರಿಕೆ ಯಾಯಿ:ತ್ತು. ಎನ್ನ ಪೂರ್ವ ನಿರ್ವಾಹವಾಯಿತ್ತು. ನಿನ್ನ ವರ್ಮವು ತಿಳಿಯದೆನಗೆ. ಅದೆಂತೆಂದೊಡೆ ಹಿಂದೆ ನೀನೇನಾಗಿ ಇದ್ದೆಯೆಂಬುದನರಿಯೆನಾಗಿ ಇಂದು ನಿಮ್ಮ ಮನೆಯಲಾರೋಗಣೆ ಯಾಗದು ಕಾಣಾ ಸಂಗನಬಸವಣ್ಣಾ ಗುಹೇಶ್ವರಂಗೆ ॥೩೬॥

ಇದಕ್ಕೆ ಬಸವ ರಾಜ ದೇವರ ಪ್ರತ್ಯುತ್ತರ॥ ಅಯ್ಯ ಏಕೀಳು ಭವಾಂತರದಲ್ಲಿ ಶಿವಭಕ್ತನಾಗಿ ಬಾರದಿದ್ದರಿ ನಿಮ್ಮಾಣೆ ನಿಮ್ಮ ಪ್ರಮಥರಾಣೆ. ನಿಮ್ಮ ಪ್ರಸಾದಕ್ಕಲ್ಲದೆ ಬಾಯ್ದೆರೆಯೆನಯ್ಯ. ಅದೆಂತೆಂದೊಡೆ ಪ್ರಥಮ ಭವಾಂತರದಲ್ಲಿ ಶಿಲಾದನೆಂಬ ಗಣೇಶ್ವರನ ಮಾಡಿ ಹೆಸರಿಟ್ಟು ಕರೆದು ನಿಮ್ಮ ಕಾರುಣ್ಯವ ಮಾಡಿಕೊಂಡಿದ್ದಿರಯ್ಯ. ಎರಡನೆಯ ಭವಾಂತರದಲ್ಲಿ ಸ್ಕಂದನೆಂಬ ಗಣೇಶ್ವರನ ಮಾಡಿ ಹೆಸರಿಟ್ಟು ಕರೆದು ನಿಮ್ಮ ಕಾರುಣ್ಯವ ಮಾಡಿಕೊಂಡಿದ್ದಿರಯ್ಯ. ಮೂರನೆಯ ಭವಾಂತರದಲ್ಲಿ ನೀಲಲೋಹಿತನೆಂಬ ಗಣೇಶ್ವರನ ಮಾಡಿ ಹೆಸರಿಟ್ಟು ಕರೆದು ನಿಮ್ಮ ಲೀಲಾವಿನೋದದಿಂದಿರಿಸಿಕೊಂಡಿದ್ದಿರಯ್ಯ. ನಾಲ್ಕನೆಯ ಭವಾಂತರದಲ್ಲಿ ಮನೋಹರನೆಂಬ ಗಣೇಶ್ವರನ ಮಾಡಿ ಹೆಸರಿಟ್ಟು ಕರೆದು ನಿಮ್ಮ ಮನಃಪ್ರೇರಕನಾಗಲೆಂದಿರಿಸಿಕೊಂಡಿದ್ದಿರಯ್ಯ. ಐದನೆಯ ಭವಾಂತರದಲ್ಲಿ ಕಾಲಲೋಚನನೆಂಬ ಗಣೇಶ್ವರನ ಮಾಡಿ ಹೆಸರಿಟ್ಟು ಕರೆದು ಸರ್ವಕಾಲ ಸಂಹಾರವ ಮಾಡಿಸುತ್ತಿದ್ದಿರಯ್ಯ. ಆರನೆಯ ಭವಾಂತರದಲ್ಲಿ ವೃಷಭನೆಂಬ ಗಣೇಶ್ವರನ ಮಾಡಿ ಹೆಸರಿಟ್ಟು ಕರೆದು ನಿಮಗೇರಲು ವಾಹನವಾಗಲೆಂದಿರಿಸಿ ಕೊಂಡಿದ್ದಿರಯ್ಯ. ಏಳನೆಯ ಭವಾಂತರದಲ್ಲಿ ಬಸವಪಣ್ಣಾಯಕರೆಂಬ ಗಣೇಶ್ವರನ ಮಾಡಿ ಹೆಸರಿಟ್ಟು ಕರೆದು ನಿಮ್ಮ ಒಕ್ಕು ಮಿಕ್ಕುದಕ್ಕೆ ಯೋಗ್ಯನಾಗಲೆಂದಿರಿಸಿಕೊಂಡಿದ್ದಿರಯ್ಯ. ಇದು ಕಾರಣ ಕೂಡಲಸಂಗಮ ದೇವ, ನೀವು ಬರಿಸಿದ ಭವಾಂತರದಲ್ಲಿ ನಾನು ಬರುತ್ತಿದ್ದೆನಯ್ಯ ॥೩೭॥

ಇದಕ್ಕೆ ಪ್ರಭುದೇವರ ಪ್ರತ್ಯುತ್ತರ. ಕೆಳಗೇಳು ಲೋಕಂಗಳಿಲ್ಲದ ಮುನ್ನ, ಮೇಲೇಳು ಲೋಕಂಗಳಿಲ್ಲದ ಮುನ್ನ, ಸಮಸ್ತ ಬ್ರಹ್ಮಾಂಡಂಗಳಿಲ್ಲದ ಮುನ್ನ, ಅಲ್ಲಿಂದತ್ತತ್ತ ಬಸವಣ್ಣ ನೀನು ಲಿಂಗ ಭಕ್ತ ಜಂಗಮ ಪ್ರಾಣಿ ಪತಿಧರನ ಶರಣಂಗೆ ವೃಷಧರ ಸ್ವಾಯತವಾಗಿ ನಮ್ಮ ಗುಹೇಶ್ವರ ಲಿಂಗಕ್ಕೆ ಬಸವಣ್ಣನೇ ಭಕ್ತನೆಂದು ಅರಿದೆನಯ್ಯ. ॥೩೮॥

ಇದಕ್ಕೆ ಬಸವರಾಜದೇವರ ಪ್ರತ್ಯುತ್ತರ. ಅಯ್ಯ ನೀವೆನ್ನ ಬಲ್ಲಿರಲ್ಲದೆ ನಾ ನಿಮ್ಮ ಬಲ್ಲೆನೆ? ನಿಮ್ಮ ನಿಲವ ನೋಡಿ ಮಾಡಿಹೆನೆಂದರೆ ನೀ ಘನ

ಪನ್ನ ಮನಕ್ಕೆ ಸಾಧ್ಯವಾಗವ ಕಾರಣ ಅಂತಿಂತೆಂದುಪಮಿಸಲಮ್ಮದೆ ಜಿಹ್ವೆ
ನೋಡಯ್ಯ. ನಿತ್ಯ ತೃಪ್ತ ಮಹಿಮ, ನಿಮಗೆಂದಳವಡಿಸಿದ ಪದಾರ್ಥವ ಸುಚಿ
ತ್ತದಿಂದಳವಡಿಸಯ್ಯ ಪ್ರಭುವೇ ಕೂಡಲ ಸಂಗಮ ದೇವಾ. ೩೯॥

ಇವಕ್ಕೆ ಪ್ರಭುದೇವರ ಪ್ರತ್ಯುತ್ತರ. ಪೌರ್ಣಮಿ ಬಂದನ್ನಕ್ಕರ ಬಾಯ್ಬಿ
ಬಂಧನದಲ್ಲಿರ್ದ ಚಕೋರನಂತೆ ಇದ್ದೆನಯ್ಯ. ಉಣ್ಣಲಾಗದೆಂಬ ಶಾಸ್ತ್ರವಿ
ಡಿದು ಇದ್ದವನಲ್ಲ. ಉಣ್ಣಲಾಗದೆಂಬ ಶಾಸ್ತ್ರ ಉಂಟಿ ಲಿಂಗವಂತಂಗೆ?
ಅಹೋರಾತ್ರಿ ಅಷ್ಟ ಯೋಗಂಗಳ ಲಿಂಗಕ್ಕೆ ಕೊಟ್ಟ ಕೊಳಬೇಕು. ಮಾಡುವ
ನೀಡುವ ನಿಜ ಭಕ್ತರಿಲ್ಲದ ಕಾರಣ ಬಾಯ್ದೆರೆಯದೆ ಇದ್ದೆನು. ಮಾಡಿ ನೀಡಿ
ಹೆನೆಂಬ ಸಂತೋಷದಾಪ್ಯಾಯನ ಹಿರಿದಾಯಿತ್ತು. ನೀಡಯ್ಯ ಸಂಗನ
ಬಸವಣ್ಣ ಗುಹೇಶ್ವರಂಗೆ. ॥೪೦॥

ಮತ್ತಂ ಸಮತೆಯೆಂಬ ಕಂಥೆಯ ತೊಟ್ಟು, ಸುಬುದ್ಧಿಯೆಂಬ ಟೊಪ್ಪ
ರವನಿಕ್ಕಿ, ವಿಷಯವೆಂಬ ಹಾವುಗೆಯ ಮೆಟ್ಟಿ, ತಮಂಧವೆಂಬ ಕುಳಿಯ
ಬೀಳದೆ, ವೈರಾಗ್ಯವೆಂಬ ಕೊರಡನೆಡಹದೆ, ಮದವೆಂಬ ಜೇಳ ಮುಟ್ಟದೆ.
ಗುಹೇಶ್ವರನ ಶರಣ ಬಂದೆನು. ಭಕ್ತಿ ಭಿಕ್ಷೆಯ ನಿಕ್ಕಯ್ಯ ಚನ್ನ ಸಂಗನ
ಬಸವಣ್ಣಾ ॥೪೧॥

ಮತ್ತಂ। ಕಡೆಯಿಲ್ಲದ ದೇಶವ ತಿರುಗಿವೆನು. ಹವಣಿಲ್ಲದ ಕಂಥೆಯ
ತೊಟ್ಟಿನು. ಹಸಿವಿಲ್ಲದ ಕಪ್ಪರವ ಹಿಡಿದು ಭಕ್ತಿ ಭಿಕ್ಷವ ಬೇಡ ಬಂದೆ. ಗುಹೇ
ಶ್ವರ ಹಸಿದನು. ಊಣಲಿಕ್ಕೆ ಕೇಳಾ ಸಂಗನ ಬಸವಣ್ಣಾ ॥೪೨॥

ಇದಕ್ಕೆ ಬಸವರಾಜದೇವರ ಪ್ರತ್ಯುತ್ತರ. ಕಾಯದ ಕುರುಹು ಹಿಡಿದು
ಬಂದೆನೆಂಬ ಆ ಭಾವ ಇರಲೀತಕ್ಕೆ? ನಿಮಗೆ ಅಂಬರದ ಚಾಪ ಮುಗಿ
ಲೊಳಗೆ ಹೊಂದಿತ್ತೆ? ಬೇರೊಂದರಲ್ಲಿ ನಿಂದಿತ್ತೆ? ಅದರಂಗವ ಛಾಯೆ
ಪ್ರಭುದೇವರು ನಿಂದ ಸುಳುಹು. ಕೂಡಲ ಸಂಗಮ ದೇವರಲ್ಲಿ ಭಿನ್ನವಿಲ್ಲವೆ
ನಿಂದ ಕಾಯದಂಗಾ ॥೪೩॥

ಮತ್ತಂ॥ ಎರಡಂದ ಭಿತ್ತಿನಂತೆ, ರಸವಾರಿಯಂತೆ, ಪಶುವಿನ ಪಿಸಿ
ದಲ್ಲಿ ತಲೆದೋರುವ ಅಮೃತದಂತೆ, ಕಾಯವಿಡಿದು ಬಂದಡೆ ನಿಷ್ಕಳ
ಭಾವವಿಲ್ಲ ಕೂಡಲ ಸಂಗಮ ದೇವರಲ್ಲಿ ಪ್ರಭುದೇವರ ಸುಳುಹು ಅಗಸ್ಥ
ವಾಯಿತ್ತು ॥೪೪॥

ಇದಕ್ಕೆ ಪ್ರಭುದೇವರ ಪ್ರತ್ಯುತ್ತರ॥ ಬಂದು ನಿಂದು ಪೊಲಿ ನೀರ
ಬಿಂದವರೆಲ್ಲರು ಹೆಂಡತಿಯರಾಗಬಲ್ಲರೇ? ಬಂದು ನಿಂದು ಸುಳಿದು ಮಾಡು
ವರೆಲ್ಲರು ಸಂಗನಬಸವಣ್ಣನಂತೆ ಗುಹೇಶ್ವರಲಿಂಗವ ಬಲ್ಲರೇ? ॥೪೫॥

ಇದಕ್ಕೆ ಬಸವರಾಜ ದೇವರ ಪ್ರತ್ಯುತ್ತರ॥ ರೂಹಿಲ್ಲದ ಸಯಿಧಾನವ
ನೀಡುವೆ. ರುಚಿಯಿಲ್ಲದ ಪದಾರ್ಥವ ಮಥನಿಸದೆ ನೀಡುವೆನು. ಲಿಂಗ
ಕ್ಕೆಂದು ಲಿಂಗ ಪದಾರ್ಥವ ಸಂಗಮುಖವ ಮರೆದು ನಿಮಗೆ ನೀಡುವೆ.
ಕಾಮಿಸದೆ ಕಲ್ಪಿಸದೆ ಭಾವಿಸದೆ ಭ್ರಮಿಸದೆ ನಿಮ್ಮ ಪರಿಯಾಣಕ್ಕೆ ನೀಡು
ವೆನು. ಸುಚಿತ್ತ ಸಮಾಧಾನದಿಂದ ಅವಧರಿಸಬೇಕಯ್ಯ ಕೂಡಲ ಸಂಗ
ಮದೇವಯ್ಯ ॥೪೬॥

ಇದಕ್ಕೆ ಪ್ರಭುದೇವರ ಪ್ರತ್ಯುತ್ತರ.॥

ನಿಮ್ಮ ಲೀಲೆ ನಿಮ್ಮ ವಿನೋದ ನಿಮ್ಮ ಹರೆ ನಿಮ್ಮ ಕೊಳಲು
ಅದಕ್ಕೆ ಬೇಕೆನ್ನೆ. ಬೇಡವೆನ್ನೆ. ಮೇಘವಹ್ನಿ ಧರೆನೆರಗುತ್ತ ಲೋಕವ ಬೆಸ
ಗೊಂಡಿತ್ತೆ? ಉದರಾಗ್ನಿ ಧರೆನೆರಗುತ್ತ ಭೂತಂಗಳ ಬೆಸಗೊಂಡಿತ್ತೆ? ಗುಹೇ
ಶ್ವರನಲ್ಲಮನ ನಿಡೂಪ ಮಹಿಮೆ ಎಂತಿದ್ದಿತ್ತು? ಅಹಂಗೆ ನೀನು ಮಾಡು
ವುದಲ್ಲದೆ ನಾನಿದಕ್ಕೆ ಬೇಕೆನ್ನೆ. ಬೇಡೆನ್ನೆನು. ॥೪೭॥

ಇದಕ್ಕೆ ಬಸವರಾಜದೇವರ ಪ್ರತ್ಯುತ್ತರ.॥

ಮಾಡುವ ಮಾಡಿಸಿಕೊಂಬ ಈ ಎರಡರ ನಡುವೆ ಸಂದು ಭೇದ
ಉಂಟೇ ದೇವಾ? ಕಾಯ ಪ್ರಾಣ ಸಂಗವಂತೆ ಇದ್ದುದಲ್ಲದೆ ಬಲ್ಲಂತೆ
ಮಾಡು. ಬಲ್ಲಂತೆ ನೀಡು. ನಾನರಿಯೆನೆಂಬುದು ನಿನಗುಚಿತವೇ? ಮಾಡು
ವಲ್ಲಿ ನೀಡುವಲ್ಲಿ ಹೇಳಿಸಿ ಮಾಡಿಸಿಕೊಂಬುದಲ್ಲದೆ ಕೈಕಲಸಿದರೆ ಬಾಯಿಂಗೆ
ಹೆಂಗುಂಟೇ ಕೂಡಲಸಂಗಮದೇವಾ? ॥೪೮॥

ಇದಕ್ಕೆ ಪ್ರಭುದೇವರ ಪ್ರತ್ಯುತ್ತರ.॥

ಉಳ್ಳವನ ಹಗೆಯ ತೆಗೆವನ್ನಕ್ಕರ ಇಲ್ಲದವರ ಹರಣ ಹೋಯಿ
ತ್ತೆಂಬ ನಾಡಿ ಎನಗಾಯಿತ್ತು. ನೂತು ಒಣ್ಣಿಸಲು ಹೊತ್ತು ಹೋಯಿ
ತ್ತಯ್ಯಾ. ನಿನಗದೆ ಪರಿಪಾಡಿಗೆ ಕಡೆ ಇಲ್ಲ. ಒಬ್ಬರ ನೋಡುವಾಗ
ಕರುವತ್ತು ಮನುಷ್ಯರ ನೋಡಿದ ಹಾಗೆ ಆಗುತ್ತಿದೆ. ಶೂನ್ಯಸಿಂಹಾಸನ
ವಾರಿಗೊಡುತ್ತಿದೆ. ಪ್ರಾಣ ಹೆಡತಲೆಯಲ್ಲಿ ಹೋಗುತ್ತಿದೆ. ಗುಹೇಶ್ವರ
ಹಸಿದನು. ಪದಾರ್ಥವ ನೀಡಯ್ಯ ಸಂಗನಬಸವಣ್ಣಾ. ॥೪೯॥

ಇದಕ್ಕೆ ಬಸವರಾಜದೇವರ ವಚನ. ॥

ಶುದ್ಧವಾಯಿತ್ತೆಂಬೆನೆ? ಸುಯಿಧಾನಿ ನಾನಲ್ಲ. ಅನುವಾಯಿತ್ತೆಂಬೆನೆ? ಅವಧಾನಿ ನಾನಲ್ಲ. ಸುಯಿಧಾನ ಅವಧಾನ ಅರ್ಪಿತವ ಮುನ್ನರಿಯೆ. ಇದ್ದ ಪರಿಯಲ್ಲಿ ನೀಡಿದರೆ ಬಂದ ಪರಿಯಲ್ಲಿ ಕೈಕೋ ಕೂಡಲಸಂಗಮದೇವಾ. ॥೫೦॥

ಇದಕ್ಕೆ ಪ್ರಭುದೇವರ ಪ್ರತ್ಯುತ್ತರ. ॥

ಅಹುದಹುದು ಕಿಂಕುರ್ವಾಣ. ಮಜಭಾಪು. ಬಲ್ಲವರು ಬಲ್ಲೆನೆಂದು ಬರಿ ಲಿಂಗವಂತರ ಮಹಿಮೆ ಹಿಂಗಿರಬೇಡ. ಗುಹೇಶ್ವರನ ಆಪ್ಯಾಯನವನಿಗಿಸುವ ಅನುಮಾನವನು ನೀನಲ್ಲದೆ ಮಹೀತಳದೊಳು ಬಲ್ಲವರಾರುಹೇಳಾ ಸಂಗನಬಸವಣ್ಣಾ? ॥೫೧॥

ಇದಕ್ಕೆ ಬಸವರಾಜದೇವರ ವಚನ॥

ಅಘವಣೆಯವಸರದಾಚಾರ ಸತ್ಕ್ರಿಯೆಂಬ ಭೂವಿಯ ಮೇಲೆ ಸರ್ವಶುದ್ಧವೆಂಬ ಗೋಮಯವಂ ತಂದು, ವಿನಯಾರ್ಥವೆಂಬ ಉದಕದಿಂದ ಸಮ್ಮಾರ್ಜನೆಯಂ ಮಾಡಿ, ತನುವಿನವಗುಣಂಗಳಂ ಹಿಟ್ಟುಗುಟ್ಟಿ, ರಂಗವೋಲಿಯನಿಕ್ಕಿ. ಅಕ್ಷಯವೆಂಬ ಬಿಂದಿಗೆಯಲ್ಲಿ ಪರಮಾನಂದವೆಂಬ ಅಘವಣೆಯ ತುಂಬಿ, ಸಮರಸದಿಂದೆ ಮಜ್ಜನಕ್ಕೆರೆಯಲು ಹೃದಯ ಕಮಲವೆಂಬ ಪುಷ್ಪವಮಂ ಸಲಿಸಿ, ಸೌಖ್ಯತರ ಶಾಂತಿ ಎಂಬ ಗಂಧವ ನಿಟ್ಟು, ಅಕ್ಷಯವೆಂಬ ಅಕ್ಷತೆಯನಿಟ್ಟು ಅಳವಡಿಸಿ, ಸದ್ಭಾವವೆಂಬ ಧೂಪವಮಂ ಬೀಸಿ, ಸುಜ್ಞಾನವೆಂಬ ನಿವಾಳಿಯನೆತ್ತಿ, ನಿತ್ಯ ನಿರಂಜನವೆಂಬ ನೀರಾಜನವಮಂ ಬೆಳಗಲು, ಬ್ರಹ್ಮನಾದವೆಂಬ ಗಂಟೆಯಂ ಬಾಜಿಸಲು, ನಿತ್ಯಲಿಂಗಾರ್ಚನೆಗೆಡೆಮಾಡಲು ಇದರ ವರ್ಮ ಕರ್ಮಸ್ಥಿತಿಯ ಶಿವಲಿಂಗಾರ್ಚನೆಯಂ ಮಾಡಬಲ್ಲರೆ ನಾನಾರನು ಕಾಣೆನು. ಕೂಡಲ ಸಂಗಮದೇವ ಪ್ರಭು ಶಿವಲಿಂಗಾರ್ಚನೆಯ ಮಾಡಲು ನಾನೆ ಪರಿಚಾರಕನು. ॥೫೨॥

ಇದಕ್ಕೆ ಪ್ರಭುದೇವರು ತಮ್ಮ ಕರಸ್ಥಲದ ಲಿಂಗಕ್ಕೆ ಅಷ್ಟವಿಧಾರ್ಚನೆ ಷೋಡಶೋಪಚಾರವ ಮಾಡುತ್ತ ನಿವಾಳಿಯನೆತ್ತುವ ಪ್ರಸ್ಥಾವದ ಪದಂಗಳು॥

ರಾಗದೇಶಿ॥ ಮಂಗಳ ಮಂಗಳ ಗುಹೇಶ್ವರನ ಶರಣ ಲಿಂಗೈಕ್ಯಂಗೆ ಮಂಗಳಾ. ॥ಪಲ್ಲ॥

ಜಗವೆಲ್ಲ ಊರ ಮಾಡಿ, ಊರೆಲ್ಲವ ಮನೆಯ ಮಾಡಿ, ಹೋಗವಿಯಿಲ್ಲದ ಸುಳುಹು ನೋಡಾ. ಸುಳುಹಿನ ಛೇದವ ನರಿಯದ ಕಾರಣ ದೇವಲೋಕ ಮರ್ತ್ಯಲೋಕವೆಲ್ಲ ಭ್ರಮೆಗೊಂಡಿತ್ತಲ್ಲ. ॥೧॥

ಎಂಬತ್ತುನಾಲ್ಕು ಲಕ್ಷ ಯೋನಿಮುಖಜೀವಿಗಳಿಗೆ ಎಂಬತ್ತುನಾಲ್ಕು ಲಕ್ಷಾರಾಧನೆ ಒಂದೊಂದಾರಾಧನೆಯ ಒಂದೊಂದನರಿಯದೆ ಗೊಂದಣಗೊಂಡು ಲಯವಾಯಿತಲ್ಲಾ. ॥೨॥

ಭಕುತಿ ಯುಕುತಿಯನರಿಯೆ. ಷೋಡಶೋಪಚಾರವನರಿಯೆ. ಭಾವ ಸಂಕಲ್ಪ ವಿಕಲ್ಪವ ನರಿಯೆ. ನಾವು ಸೀವುಗಳಿಲ್ಲವ ನೇವಿಸಿ ಕಳೆವಂಗೆ ಲವ ಲೋಕ ಕಂಪಿತವಾತಂಗೆ. ॥೩॥

ಕುಲವಳಿದು ಫಲವಳಿದು ಬಲುಹಳಿದು ನಿಲಲು ಸೂತ್ರದ ಜಂತ್ರವಳಿಯಲು ಫಲಸಿದ್ಧಿ ಎನಿಸಿ ನಿಷ್ಫಲಸಿದ್ಧಿಯನೆ ಬಿಟ್ಟು ಭಕ್ತಾಂಗನೆಯ ಮರ್ತ್ಯಕ್ಕೆ ತಂದಂಗೆ. ॥೪॥

ಮಧ್ಯಸ್ಥಾನದ ಲೋಕಕ್ಕೆ ಹೋಗಿ ಮರುವಾಳನರಿಯದ ಪರಿಯ ನೋಡಿರೆ. ತನು ರುಚಿಯನೆ ಮರೆದು ಘನರುಚಿಯನರಿದನ ತನ್ನಂತೆ ಮಾಡಿದ ಗುಹೇಶ್ವರಲಿಂಗಾ. ॥೫॥

ಆ ಪ್ರಸ್ಥಾವದೊಳು ಮೋಳಿಗೆಯ ಮಾರಯ್ಯಗಳ ವಚನ॥

ಮುತ್ತೊಡೆದ ಚಿಪ್ಪಿನಲ್ಲಿ ನಿವಾಳಿಗಳ ಮಾಡಿ ಹೊನ್ನಸರಿಯಾಣಂಗಳ ನಡುವೆ ತಂದು ಮೇಳೈಸಿ, ಉಟ್ಟ ಪಟ್ಟಾವಳಿಯ ದೇವಾಂಗದ ಸರ್ವಶೃಂಗಾರದಿಂದೆ ಕಳಸ ಕನ್ನಡಿಯ ಕನ್ನಿಕೆಯರ ಜವಳಿ ಪಂಕ್ತಿ ಶೋಭಿಸುತ್ತಿರಲು, ಶಿವಭಕ್ತ ಜನಸತಿಯರು ನಡೆದು ಬಂದು ಶೂನ್ಯ ಸಿಂಹಾಸನದ ಮುಂದೆ ನಿಂತಿರ್ದ್ದರು ನಿಃಕಳಂಕ ಮಲ್ಲಿಕಾರ್ಜುನ ಪ್ರಭುವಿಂಗೆ ಆರತಿಯೆತ್ತಿಹೆವೆಂದು ॥೬॥

ಮತ್ತಂ॥ ನಾಗಲಾಂಬಿಕೆಯಮ್ಮನು ನಿವಾಳಿಯನೆತ್ತುವ ಪ್ರಸ್ಥಾವದಲ್ಲಿ ಮೋಳಿಗೈಯ್ಯಗಳ ವಚನ॥

ಕೊಟ್ಟು ಪ್ರವ್ಯವನು ತಮ್ಮ ತಮ್ಮ ಲಿಂಗಕ್ಕೆ ಸಮರ್ಪಣೆಯ ಮಾಡಿ ತಾಂತು ತನುಭೋಗಾದಿ ಭೋಗಂಗಳ ಭೋಗಿಸುತ್ತಿರ್ದರಲ್ಲ. ಹೊನ್ನ

ಪರಿಯಾಣಂಗಳಲ್ಲಿ ಅನಂತ ಪರಿಪರಿಯ ಗುಗ್ಗುಳ ಧೂಪವ ಸಾಂಗವೆಳೆಯಲು, ಭವದಿಂದ ನಡೆತಂದು ಶೂನ್ಯ ಸಿಂಹಾಸನದ ಮುಂದೆ ನಿಂದಿರ್ದರು. ಪಂಚಮ ವಾದ್ಯ ಮೊಳಗುತ್ತಿರಲು ಅನರವರ ಕೈಯ್ಯ ನಿವಾಳಗಳನಿಸು ಕೊಂಡು ನಾಗಾಯುಮ್ಮಗಳು ನಿಃಕಳಂಕ ಮಲ್ಲಿಕಾರ್ಜುನನಿಗೆ ಆರತಿಯನೆತ್ತುತಿರ್ದರೆಲ್ಲಾ. ॥೫೯॥

ಇತಿ ಶ್ರೀಮತ್ಸಕಲ ಗಣಪುರಾತನರೊಳ್ ಪ್ರಭುದೇವರ ಮಹಾನುಭಾವ ಸದ್ಗೋಷ್ಠಿಯಂ ಮಾಡಿದ ಶೂನ್ಯ ಸಂಪಾದನೆಯೊಳ್ ಪ್ರಭುದೇವರು ಶೂನ್ಯ ಸಿಂಹಾಸನದ ಮೇಲೆ ಮೂರ್ತಿಗೊಂಡದಕ್ಕೆ ಅಷ್ಟಾದಶೋಪದೇಶ ಸಮಾಪ್ತ.

The Vijay College
LIBRARY.
VIJAY COLLEGE,
BIJAPUR.

ಪ್ರಭುವಾರೋಗಣೆ ಸಂಪಾದನೆ.

(ಏಕೋನ ವಿಂಶತ್ಯುಪದೇಶ.)

ಕಂದ॥ ಶೂನ್ಯಪೀಠದೊಳು ಮಂಡಿಸಿ ಚಿನ್ಮಯ ಗುರುಮೂರ್ತಿ ಪ್ರಭುವರನತಿಶಯವ॥ ಪ್ರಸ್ತುತದಾರೋಗಣೆಯಂ। ನಿನ್ನಿಯೊಳೊಳರ್ಪಿಸಿದ ಪರಿಯದೆಂತನಲುಸುರ್ವೆಂ ॥೧॥

ಅದೆಂತೆಂದೊಡೆ, ಪ್ರಭುದೇವರು ಶೂನ್ಯಸಿಂಹಾಸನದ ಮೇಲೆ ಮೂರ್ತಗೊಂಡಿರಲು, ಬಸವರಾಜದೇವರು ಅಷ್ಟವಿಧಾರ್ಚನೆ ಷೋಡಶೋಪಚಾರಂಗಳಂ ಮಾಡಿಸಿ ಅತ್ಯಂತ ಸಂತೋಷದಿಂದಿರಲು ಅಸಟ್ಟಣದಲ್ಲಿಹ ಸಕಲ ಶರಣ ಸತಿಯರೆಲ್ಲರು ನಿವಾಳಿಗಳನೆತ್ತಿ ಕೊಂಡಾಡುತ್ತಿರೆ ಪಂಚ ಮಹಾವಾದ್ಯ ರಭಸದಿಂ ಶರಣರೆಲ್ಲರು ಜಯಜಯ ಎಂದು ಹರುಷಾಂಬುಧಿಯೊಳು ತೇಂಕಾಡುತ್ತ ಮಿರಲು ಆ ಪ್ರಸ್ತಾವದೊಳು ಬಸವರಾಜದೇವರು ಪ್ರಭುದೇವರಿಗೆ ಆರೋಗಣೆಯ ಮಾಡಿಸಬೇಕೆಂದು ಪರಿಯಾಣವ ತಂದಿರಿಸಿದ ಪ್ರಸ್ತಾವದ ವಚನ.

ಅಂಗದಲಳವಟ್ಟ ಲಿಂಗಕ್ಕೆ ಅಂಗವೇ ಭಾಜನ. ಪ್ರಾಣದ ಮೇಲಣ ಲಿಂಗಕ್ಕೆ ಮನವೇ ಭಾಜನ. ಅರಿವಿನ ಮೇಲಣ ಲಿಂಗಕ್ಕೆ ನಿಭ್ರಾವವೇ ಭಾಜನ. ಕೂಡಲಸಂಗಮದೇವಯ್ಯ ಪ್ರಭುದೇವರು ಆರೋಗಣೆಯ ಮಾಡುವರೆ ಭಕ್ತಿಪರಿಯಾಣವಲ್ಲದೆ ಬೇರೆ ಮತ್ತೆ ಭಾಜನವ ಕಾಣೆನು. ॥೧॥

ಮತ್ತಂ, ಪರಿಯಾಣದಲ್ಲಿ ಸಕಲ ಪದಾರ್ಥಂಗಳಂ ನೀಡುವ ಪ್ರಸ್ತಾವದ ವಚನ.

ಘನವಪ್ಪ ಪರಿಯಾಣವಲ್ಲಿ ಒಂದನುನಿನ ಬೋನವನಳವಡಿಸಿ ಪರಿಪರಿಯ ಪದಾರ್ಥಂಗಳು ಬಗೆಬಗೆಯಿಂದ ಬರಲು ಸೋಡನ ಮುನ್ನವೆ ರೂಪರ್ಪಿತವಾಯಿತ್ತು. ಮುಟ್ಟಿದ ಮುನ್ನವೇ ಸೋಂಕರ್ಪಿತವಾಯಿತ್ತು. ರುಚಿಸದ ಮುನ್ನವೆ ಸುಖವರ್ಪಿತವಾಯಿತ್ತು ಅವಧಾರು. ಅವಧಾರು ಅವಧಾರು. ಲಿಂಗ ನಿಮ್ಮ ಮನಕ್ಕೆ ಬಂದ ಪದಾರ್ಥವ ನಿನ್ನ ಘನಕ್ಕೆ ನೀನರ್ಪಿಸಿದರೆ ಎನ್ನ

ಮನಕ್ಕೆ ಬಂದ ಪದಾರ್ಥವ ನಿನಗರ್ಪಿಸುವೆನು. ಗುಹೇಶ್ವರ ನಿನಗೆ ಭೋಜನವನಳವಡಿಸಿ ನೀಡಬಲ್ಲವರಾಗಿ ಎನಗು ನಿನಗು ಸಂಗನಬಸವಣ್ಣನ ಪ್ರಸಾದವನಾರೋಗಿಸು ದೇವಾ. ॥೨॥

ಮತ್ತಂ ಪ್ರಭುದೇವರಾರೋಗಣೆಃ--

ಕಾಯದಲಾದ ಅರ್ಪಿತ ಅರ್ಪಿತವಲ್ಲ. ಪ್ರಾಣದಲಾದ ಅರ್ಪಿತ ಅರ್ಪಿತವಲ್ಲ. ಭಾವದಲಾದ ಅರ್ಪಿತ ಅರ್ಪಿತವಲ್ಲ. ಅರುಹಿನಲಾದ ಅರ್ಪಿತ ಅರ್ಪಿತವಲ್ಲ. ನೆನಹಿಲ್ಲದ ಅವಧಾನ ಮರಹಿಲ್ಲದಾರೋಗಣೆ ತಟ್ಟಿದ ಮುಟ್ಟಿದ ಅರ್ಪಿತವಲ್ಲ. ಗುಹೇಶ್ವರಲಿಂಗದ ಆರೋಗಣೆಯನಿಂದು ಸಂಗನಬಸವಣ್ಣನಿಂದ ಕಂಡೆನು ॥೩॥

ಆ ಪ್ರಸ್ತಾವದೊಳು ಬಸವರಾಜದೇವರ ವಚನ ॥

ಕೈಹಾರ ನೀಡಿದರೆ ಮನಹಾರ ಕೊಳುತ್ತೈದಾನೆ. ಆಹುದಹುದು. ಸ್ವಾಮಿಯ ಹಸಿವು ಲೋಕಕ್ಕೆ ಹೊಸತು. ಕೂಡಲ ಸಂಗಮ ದೇವನೆರೆ ಹಸಿದ. ಪೊರಮೊರದಲ್ಲಿ ನೀಡಿ ॥೪॥

ಮೊರ ಹಾರ ನೀಡಿದರೆ ತೆರಹಾರ ಕೊಳುತ್ತೈದಾನೆ. ಆಹುದಹುದು. ದೇವರ ಹಸಿವು ನಮಗೆ ಹೊಸತಲಾ. ದೆಸೆದಿಕ್ಕೆಲ್ಲ ವಿಶ್ವತೋ ಮುಖವ ಕೂಡಲ ಸಂಗಮ ದೇವಂಗೆ ದೆಸೆದೆಸೆಯಲ್ಲಿ ನೀಡಿ ॥೫॥

ಇದಕ್ಕೆ ಚಿಕ್ಕದಣ್ಣಾಯಕರ ವಚನ !

ಅನಾಹತದಲ್ಲಿ ಶಿವ ತನ್ನ ಲೀಲಾ ವಿನೋದದಿಂದ ನೀವು ಸಹಿತ ಮೂರ್ತಿಯಾದನು. ಹೊರಗೆ ಆಕಾರವ ಧರಿಸಿ ಒಳಗೆ ನಿರವಯಕ್ಕೆ ಆರೋಗಣೆಯ ಮಾಡಿಸಲು ಕೂಡಲ ಚನ್ನಸಂಗಮದೇವ ಪ್ರಭುದೇವರ ಅಪರಿಮಿತದಾರೋಗಣೆಗೆ ಬಸವಣ್ಣ ಮಡಿವಾಳನೆಂಬೆರಡು ತೋಳ ಧರಿಸಿದನು ಎನೆಂದುಪಮಿಸುವೆನು ॥೬॥

ಮಡಿವಾಳಯ್ಯಗಳ ವಚನ ।

ತನುಮುಖಕ್ಕೆ ನೀಡಿದ ಬೋನ ಅನುವಾಗಿ ಅಳವಡದ ಮುನ್ನ ಮನಮುಖಕ್ಕೆ ಸರಿಯಾಯಿತ್ತು. ಮನಮುಖಕ್ಕೆ ಅನುವಾಗಿ ಅಳವಡದ ಮುನ್ನ ನೋಡ ನೋಡಲೈಕ್ಯವಾಯಿತ್ತು. ಆಕಾಶ ಬಾಯ ತೆರೆದಂತೆ

ಆರೋಗಣೆಯ ಮಾಡುತಿದ್ದನು. ಮಾಡಿಸುವ ಗರುವರಾರೊ? ಕಲಿ ದೇವರ ದೇವನ ಅನುವನರಿದು ನೀಡುವಲ್ಲಿ ಸಂಗನ ಬಸವಣ್ಣಗಲ್ಲದೆ ಮತ್ತಾರಿಗು ಅಳವಡದು ॥೭॥

ಹಡಪದಪ್ಪಣ್ಣಗಳ ವಚನ।

ಹೆಡಗೆ ಹಾರ ಮೊರಹಾರ ಗೆರಸಿಹಾರ ಮಡಕೆ ಹಾರ ದೆಸೆ ದೆಸೆಯಲ್ಲಿ ತಂದು ನೀಡುತ್ತಿರಲು ಹೊಸ ಪರಿಯದಾರೋಗಣೆಯನವಧರಿಸುತ್ತಿರಲನು ಆವ ದೆಸೆ ದೆಸೆಯಲ್ಲಿ ತಂದು ನೀಡುತ್ತಿದ್ದರೆ ಆ ದೆಸೆಗಳೆಲ್ಲ ಬಾಯಾಗಿ ಕೊಳುತಿರ್ದನು. ಎತ್ತೆತ್ತ ನೋಡಿದತ್ತತ್ತ ಮುಖವಾಗೆ ಎವೆ ಹೊಯಿದಂತೆ ತೆರಹಿಲ್ಲದೊಂದು ನಿಮಿಷ ಎಡಹಿದರೆ ಅಕ್ಕೈಗಚ್ಚು ನುಚ್ಚು ತವಡು ಮೊವಲಾಗಿ ಹೆಚ್ಚಿದವು. ನಿಮಿಷದೊಳು ಭಕ್ತಿ ಬಂಧುಗಳೆಲ್ಲ ತಮ್ಮಾಟದ ಸುಯಿಧಾನವ ತಂದು ಸಾರೆಗಟ್ಟಿ ನೀಡುತ್ತಿರೆ ಅದ್ಭುತದ ಆರೋಗಣೆಯ ಕಂಡು ಹರಿಹರಿದು ಸಾಕ ಪ್ರಯತ್ನವಂ ಮಾಡಿ ಎನುತ್ತಿ ಬಸವ ಪ್ರಿಯ ಕೂಡಲ ಚನ್ನಸಂಗಯ್ಯನಲ್ಲಿ ಸಂತೋಷವಲ್ಲಿ ಲೋಲಾಡುತಿರ್ದನು ಎನ್ನ ಪರಮ ಗುರು ಬಸವಣ್ಣನು ॥೮॥

ಬಸವರಾಜದೇವರ ವಚನ ॥

ಅರಿದರಿದು ಎನಗಿಂದು ಕಂಗೆ ಮುಂಗಳವಾಯಿತ್ತು. ಒಂದಹುದು ಒಂದಾಗದೆಂಬ ಭ್ರಮೆಯವನಲ್ಲ. ಬೇಕು ಬೇಡೆಂಬ ಜಂಜಡದವನಲ್ಲ. ಎಡವರಿಯದ ನೋಟ ಸುಡಿಯ ಸಡಗರವಂತು ಎಡೆಯಾಟ ಕೋಟಲೆಯ ಕಳೆದು ಬಂದನು. ನೋಡುವರ ಮನದ ಸುಖದ ಸಾಗರ ನಿಧಿಯ ನೇನೆಂದುಪಮಿಸುವೆನು. ಎನ್ನ ಉಭಯ ಕರ್ಮವ ಕಳೆದು ತನ್ನೊಳಗೆ ಇಂಬಿಟ್ಟು ಕೊಳ್ಳಬಂದನು ಕೂಡಲ ಸಂಗಮ ದೇವ ಕೃಪಾಮೂರ್ತಿ ॥೯॥

ಮತ್ತಂ ॥ ಬೆದರಿಸುವ ಸಂಗ, ಬೆಚ್ಚಿಸುವ ಸಂಗ, ಬಿಚ್ಚಿಸುವ ಸಂಗ, ತನ್ನ ನಚ್ಚಿ ನುಚ್ಚಿ ಮುಯ್ಯಾಂತೆನೆಂದರೆ ಮೂಳವಾಡುವ ಸಂಗ, ಜೋಲೈಸುವ ಸಂಗ, ಅಳಗೊಳಿಸುವ ಸಂಗ, ಇದಿರ ಕೈಯಲ್ಲಿ ಅಳಲಿಸುವ ಸಂಗ, ಬಳಲಿಸುವ ಸಂಗ, ಒತ್ತಿ ನೋಡುವ ಸಂಗ, ಒಳಹೊರಗೆನ್ನದೆ ಕೂಡಲ ಸಂಗಮ ದೇವಯ್ಯ ಮಡಿವಾಳ ಮಾಚಿ ತಂದೆಯ ಕೃಪೆಯುಳ್ಳನ್ನಕ್ಕರ ನಾನಂಜೆನು ॥೧೦॥

ಇದಕ್ಕೆ ಮಡಿವಾಳಯ್ಯಗಳ ಪ್ರತ್ಯುತ್ತರ.

ಮಾಚಿ ತಂದೆಗಳ ಕೈಲಾಗದು. ಹೋಚಿ ತಂದೆಗಳ ಕೈಲಾಗದು. ಇಚ್ಛೆಗೆಟ್ಟವನಂತೆ ಇರಲಾಗದು. ಅಚ್ಚೊತ್ತಿದಂತೆ ಇರಬೇಕು. ಅತಿ ಜೋಡ್ಯವಾಗಿ ಎಚ್ಚರಿಕೆಯ ಮಚ್ಚು ಮರಹಿಲ್ಲದೆ ಬೆಚ್ಚುತಿರಬೇಕು. ಮಚ್ಚು ಪಲ್ಲಟವಾದರೆ ಆಶ್ಚರ್ಯ ಭಕ್ತಿ ಭಂತನಾಗಿರಬೇಕು. ಕಲಿ ತರುಳನೊತ್ತಿ ಮುಂದಕ್ಕೆ ಹರಿವನಲ್ಲದೆ ಎಡೆಗೋಲನಾಸೆ ಮಾಡುವನೆ ಹೇಳಾ? ಕಲಿದೇವರ ದೇವನೆ ಅಂಕೆಗೆ ಜಂಕೆಗೆ ಬೆಟ್ಟಿ ಬೆದರಿ ಓಡದಿರು. ವೀರಗಂಕಣವ ಕಟ್ಟು ಸಂಗನ ಬಸವಣ್ಣಾ ॥೧೧॥

ಇದಕ್ಕೆ ಬಸವರಾಜದೇವರ ಪ್ರತ್ಯುತ್ತರ.

ಸುಯಿಧಾನ ಸಯವಾಯಿತ್ತೆಂದು ಬೆದರಿದೆನಾದಡೆ, ನಿಮ್ಮಾಣೆ, ನಿಮ್ಮ ಪ್ರಮಥರಾಣೆ. ಪಡಿ ಪದಾರ್ಥಂಗಳು ಅವಸರಕ್ಕೆ ಒದಗದೆ ಇದ್ದಲ್ಲಿ ಮನವಳುಕಿ ಬೆದರಿದೆನಾದಡೆ ನಿಮ್ಮ ಭಕ್ತರಿಗೆ ಸಲ್ಲೆನು. ಒಡಪೆ ಸವಿದರೆ ಒಡಲನೆ ಸಲಿಸುವೆನು. ಕಡೆಮುಟ್ಟಿ ಪೂರೈಸದಿರ್ದನಾಪಡೆ ಮಡಿವಾಳ ನೂಚಿ ತಂದೆಯ ಪಾದಸಾಕ್ಷಿಯಾಗಿ ಕೂಡಲ ಸಂಗಮ ದೇವರಿಗೆ ದೂರವಹೆನು ॥೧೨॥

ಮತ್ತಂ, ಅಳವಡಿಸಿದ ಪದಾರ್ಥ ಅರ್ಪಿತಕ್ಕೆ ಸರಿಯಾಯಿತ್ತು. ಅಳವಡಿಸದ ಮುನ್ನ ಕೈಕೊಳ್ಳುತೈದಾನೆ ಶಿವನು. ಸಂದ ಪದಾರ್ಥ ಸಲ್ಲಲಿ. ಕೂಡಲಸಂಗಮದೇವರ ಆರೋಗಣೆಯ ಅವಸರಕ್ಕೆ ಸಂಚಿತ ಸುಯಿಧಾನವ ತೆಗೆಸಿರೆ ಸೊಡ್ಡಳ ಬಾಚರಸರೆ ॥೧೩॥

ಇದಕ್ಕೆ ಸೊಡ್ಡಳ ಬಾಚರಸರ ವಚನ. ಬನ್ನಿರಿ ಕರಣಿಕರು ನೀವು ಲೆಸ್ಸವ ಕೇಳಿ ಧಾನ್ಯ ಸಂಚವನು. ಹೊಸ ಜೋಳ ಅರವತ್ತು ಲಕ್ಷ ಖಂಡುಗ. ಸಾವಿ ಧಾನ್ಯ ಮೂವತ್ತು ಲಕ್ಷ ಖಂಡಗ. ಗೋದಿ ಹನ್ನೆರಡು ಲಕ್ಷ ಖಂಡುಗ. ಕಡಲೆ ಬತ್ತೀಸ ಲಕ್ಷ ಖಂಡಗ. ಹೆಸರು ಮೂವತ್ತು ಲಕ್ಷ ಖಂಡುಗ. ನವಣ, ಹಾರಕ, ಬರಗು, ಸಾವೆ, ಮಾಸಿಗಳೆಂಬ ಧಾನ್ಯ ಐವತ್ತು ಲಕ್ಷ ಖಂಡುಗ. ಹೊಸ ಹುಗ್ಗಿಯ ವೇಳೆಗೆ ಬಹ ಬತ್ತ ಹತ್ತ ಅಗಡಿತ. ಮಹಾದಾನಿ ಸೊಡ್ಡಾಳನಾರೋಗಣೆಯ ಅವಸರಕ್ಕೆ ಅಳವಟ್ಟ ಸುಯಿಧಾನ ಇನಿತನವಧರಿಸಯ್ಯ ಸಂಗನಬಸವಣ್ಣ ॥೧೪॥

ಬಸವರಾಜದೇವರ ವಚನ. ಎಣೆಕೆಗೆ ಬಂದ ಸುಯಿಧಾನ ಕ್ಷಣಕ್ಕೆ ಪಾಕವಾಗಲು ಗಣನೆ ಇಲ್ಲದೆ ನೀಡುತ್ತಿರಲು ತೋರದ ಮುನ್ನವೆ ಅರ್ಪಿತವಾವವು. ಇಂತು ಎಣಿಸಿ ನೋಡಿಹೆನೆಂದರೆ ಮನಕ್ಕೆ ಸಾಧ್ಯವಲ್ಲ. ಬಯಲು ಬಾಯ್ದೆಗೆದಂತೆ ಉಣುತ್ತಿದ್ದನು ಕೂಡಲಸಂಗಮದೇವನು. ॥೧೫॥

ಮತ್ತಂ, ಖಂಡ ಮಂಡಿಗೆ ಬೆಲ್ಲ ದ್ರಾಕ್ಷೆ ಸಕ್ಕರೆ ಸರಿಭಾಗವಾದ ಹೊಸ ಹೆಸರ ಭಕ್ಷ ಪನ್ನೆರಡು ಖಂಡುಗ, ಸುಲಿಗಡಲೆಯ ಕಜ್ಜಾಯ ಹದಿನೆಂಟು ಖಂಡುಗ, ಅಕಾಲ ಮಾವಿನಹಣ್ಣು ಇಪ್ಪತ್ತುನಾಲ್ಕುಲಕ್ಷ ಕಡಿ ಇಲ್ಲದ ಕದಳಿಯ ಫಲ ಚಾರಬೀಜ ಎಂಬತ್ತು ಖಂಡುಗ, ತವರಾಜ ಹೆತ್ತತುಪ್ಪ ಹಲಸಿನಹಣ್ಣು ಮನಮೇರೆ ಹಾಲುಕೆನೆ ಹದಿನೆಂಟು ಖಂಡುಗ, ಉತ್ತತ್ತಿ ಚಿಲುಪಾಲು ಫಲ್ಲ ಕಟ್ಟಣೆಯಿಲ್ಲ. ಮನ ಒಲಿವ ಕಜ್ಜಾಯವನಾರೋಗಣೆಯ ಮಾಡು ದೇವ ಕೂಡಲಸಂಗಮದೇವಾ. ॥೧೬॥

ಮತ್ತಂ, ಕೈಯ್ಯಲ್ಲಿ ಮುಟ್ಟಿದ ಪದಾರ್ಥ, ಕೈಯ್ಯಲ್ಲಿ ಐಕ್ಯ. ಕಂಗಳ ತಾಗಿದ ಪದಾರ್ಥ ಕಂಗಳೊಳಗೆ ಐಕ್ಯ. ನಾಲಿಗೆ ತಾಗಿದ ಪದಾರ್ಥ ನಾಲಿಗೆಯೊಳಗೈಕ್ಯ. ನೀಡುವ ಪರಿಚಾರಕರು ಬೇಸತ್ತರಲ್ಲದೆ ಆರೋಗಣೆಯ ಮಾಡುವ ದೇವ ಎತ್ತಲೇನೆಂದರಿಯನು. ಬ್ರಹ್ಮಾಂಡವನೊಡಲೊಳಗಿರಿಸಿಕೊಂಡು ಬಂದ ದೇವಂಗೆ ಆರೋಗಣೆಯ ಮಾಡಿಸಿಹೆನೆಂಬ ಅಹಂಕಾರದಲ್ಲಿ ಇದ್ದೆನಾಗಿ ನಾನ ಕೆಟ್ಟ ಕೇಡನೇನೆಂಬೆನಯ್ಯ? ಕೂಡಲಸಂಗಮದೇವರ ತೃಪ್ತಿಯ ತೆರನ ಬಲ್ಲರೆ ಹೇಳಾ ಮಡಿವಾಳಯ್ಯ ॥೧೭॥

ಇದಕ್ಕೆ ಮಡಿವಾಳ ತಂದೆಗಳ ವಚನ. ಮರುಳುಗೊಂಡೆಯಲ್ಲ ಬಸವನಣ್ಣ! ಪಿತ್ತ ತಲೆಗೇರಿತ್ತೆ ನಿನಗೆ? ನರಿಯಂದವರು ಮರುಳಹರೆಂಬ ನಾಣ್ನುಡಿ ದಿಟವಾಯಿತ್ತು. ಜಗದಗಲ ಮಿಗೆ ಅಗಲದ ದೇವಂಗೆ ಕುರುಹಿನ ಪದಾರ್ಥಂಗಳು ನಿಲುಕಲಾಪವೆ? ಎಡೆಯಲೊಬ್ಬರಲಾಗದು. ಮಾಡುವರೆ ಕಡೆಯಲ್ಲಿ ಕೆಡುವುದು ನಿನ್ನ ಭಕ್ತಿ. ಕಲಿದೇವರ ದೇವನ ತೃಪ್ತಿಯನು ಚನ್ನಬಸವಣ್ಣ ಬಲ್ಲ. ಕೇಳಿ ನೋಡಾ ಸಂಗನಬಸವಣ್ಣ. ॥೧೮॥

ಇದಕ್ಕೆ ಬಸವರಾಜದೇವರ ವಚನ. ಧನ ಮದದಿಂದ ಸುಯಿಧಾನದ ಮದದಿಂದೆ ಮಾಡಿದೆನೆಂಬುದು ಕಡೆ ನುಟ್ಟದೆ ಹೋಯಿತ್ತು. ಹಸ್ತಪರುಷದಿಂದ ಮುಟ್ಟಿ ಮಾಡಿದುದೆಲ್ಲವು ಅಂತರಿಸಿತ್ತು. ದೃಷ್ಟಿಪರುಷದಿಂದ ನೋಡಿ ಮಾಡಿಹೆನೆಂಬುದೆಲ್ಲವು ಹೆಚ್ಚಿತ್ತು. ವಾಕ್ಪರುಷದಿಂದ ನುಡಿದು ಮಾಡಿದುದೆಲ್ಲವು ಸ್ಪಯವಾಯಿತ್ತು. ಮನಪರುಷದಿಂದ ಮುಟ್ಟಿ ನೀ

ಡಿದ ಪದಾರ್ಥ ತೋರವ ಮುನ್ನವೆ ಅಮಳೋಕ್ಯವಾದ ಕೂಡಲ ಸಂಗಮ ದೇವರ ತೃಪ್ತಿಯನರಿದಿಹೆನೆಂದು ಕೆಟ್ಟಿನು. ॥೨೯॥

ಮತ್ತಂ, ತೋರಿಲ್ಲವ ಸಿಂಹಾಸನದ ಮೇಲೆ ಹೇಳಬಾರದ ಘನವ ಬಂದೆರಗಿದರೆ ತೋರಿ ಮೇರೆವ ಸಂಗಮನಾಥನು ಎದ್ದು ಹೋದನು. ನೀಡ ನೀಡ ಸುಯಿಧಾನವೆಲ್ಲವು ನಿರ್ಮಯಲಾಯಿತ್ತು. ಮಾಡಿದ ಸುಯಿಧಾನವ ಮರಳಿ ನೋಡಲಿಲ್ಲ. ಇದ ಏನ ಹೇಳುವೆ ಆ ನಿಯಮದ ಚರಿತ್ರವನು? ಇಂದೆಂತುಪಮಿಸುವೆನು ವಿಸ್ಮಯವನು? ಕೂಡಲ ಸಂಗಮದೇವರ ತೃಪ್ತಿಯ ತೆರನ ಬಲ್ಲರೆ ಹೇಳಯ್ಯ ಚನ್ನಬಸವಣ್ಣ. ॥೩೦॥

ಇಂತು ಬಸವರಾಜದೇವರು ಪ್ರಭುದೇವರಿಗೆ ತೃಪ್ತಿಯು ಮಾಡುವ ಬುದ್ಧಿಯಾವುದೆಂದು ಕೇಳಲು ಅದಕ್ಕೆ ಚಿಕ್ಕದಣ್ಣಾಯಕರ ವಚನ.

ಅನಂತ ವರುಷದ ಹಿರಿಯರೆಂಬೆನೆ? ಏನ್ನೆನು, ಅವರು ಭೂಭಾರಕರಾಗಿ. ಏಳು ವರುಷದ ಹಿರಿಯ ಚೀಲಾಳ. ಹನ್ನೆರಡು ವರುಷದ ಹಿರಿಯಳು ಮಹಾದೇವಿಯಕ್ಕ. ಅಂಡಜ ಪಿಂಡಜ ರೋಮಜರೆಂಬ ಅಂವಂದಿನ ಬಾಲಕರು ನಿಮಗೆ ಬುದ್ಧಿಹೇಳುವರೆ ಎನಗೆ ಬುದ್ಧಿ ಇಲ್ಲ ಕೂಡಲ ಸಂಗಮದೇವ. ॥೩೧॥

ಮತ್ತಂ, ಪಂಚಶತಕೋಟಿ ವಿಸ್ತೀರ್ಣ ಭೂಮಂಡಲ ಮೊದಲಾದ ನವಖಂಡ ಪೃಥ್ವಿ ಎಲ್ಲವು ಒಂದು ಭುವನದೊಳಗಡಗಿತ್ತು. ಅಂತಹ ಈರೇಳು ಭುವನವನೊಳಕೊಂಡ ಮಹಾಘನಕ್ಕೆ ಸುಯಿಧಾನವ ನೀಡಿಹೆನೆಂಬ ಸ್ವಾಮಿಯ ಮರುಳತನವೇನೆಂಬೆನು? ಕೂಡಲ ಚನ್ನಸಂಗಮದೇವರ ತೃಪ್ತಿಯ ತೆರನನರಿವರೆ ನೀವು ಬೋನ ನಾನು ಪದಾರ್ಥ. ಇವರಿಂದ ಮೇಲೇನು ಘನವಿಲ್ಲ ಕಾಣಾ ಸಂಗನಬಸವಣ್ಣ ॥೩೨॥

ಇದಕ್ಕೆ ಬಸವದೇವರ ವಚನ. ಎನ್ನ ಕಾಯದ ಕತ್ತಲೆ ಹಿಂಗಿತ್ತು ಚನ್ನಬಸವಣ್ಣ. ಇಂದಿನಲ್ಲಿ ಎನ್ನತನು ಮನಘನದ ಲೋಭವಳಿದು ತಳ ಪೆಳಗಾಯಿತ್ತು. ಇಂದಿನಲ್ಲಿ ಎನ್ನೆಡೆಗೊಂಡ ಅಹಂಕಾರ ನಿರ್ಮಯಲಾಯಿತ್ತು ಚನ್ನಬಸವಣ್ಣ. ಇಂದಿನಲ್ಲಿ ಕೂಡಲಸಂಗಮದೇವರ ತೃಪ್ತಿಯ ತೆರವ ನೀನು ತೋರಿದೆಯಾಗಿ ನಾನು ಬದುಕಿದೆನು ಕಾಣಾ ಚನ್ನಬಸವಣ್ಣ ॥೩೩॥

ಇದಕ್ಕೆ ಚನ್ನಬಸವರಾಜದೇವರ ವಚನ. ಎನ್ನ ಹೊಗಳಲಿಕ್ಕೆ ನಿಮಗೆ ತೆರಹಿಲ್ಲ. ನಿಮ್ಮ ಹೊಗಳಲಿಕೆ ಎನಗೆ ತೆರಹಿಲ್ಲ. ಒಬ್ಬರನೊಬ್ಬರ ಹೊಗಳಲಿಕೆ ಹೊತ್ತು ಹೋಯಿತ್ತಲ್ಲದೆ ಸಂಗಮನಾಥನ ಆಪ್ಯಾಯನಕ್ಕೆ ಪದಾರ್ಥವ ನೀಡಲಿಲ್ಲ. ಕೂಡಲ ಚನ್ನಸಂಗಯ್ಯಂಗೆ ಪದಾರ್ಥವನಳವಡಿಸಿ ನಡೆಸಿದೆ ಸಂಗನಬಸವಣ್ಣಾ. ॥೩೪॥

ಇದಕ್ಕೆ, ಬಸವರಾಜದೇವರ ವಚನ:— ಧನ ಸಪೆದರೆ ತನುವನರ್ಪಿಸುವೆನು. ತನು ಸಪೆದರೆ ಮನವನರ್ಪಿಸುವೆನು. ಮನ ಸಪೆದರೆ ಭಾವವನರ್ಪಿಸುವೆನು. ಭಾವ ಸಪೆದರೆ ನಿರ್ಭಾವವನರ್ಪಿಸುವೆನು. ಕೂಡಲ ಸಂಗಮದೇವಯ್ಯ ಚನ್ನಬಸವಣ್ಣನ ತೆತ್ತಿಗನಾದ ಬಳಿಕ ನಾನು ನಿಮ್ಮಲ್ಲಿ ಕೂಡಿ ಅರ್ಪಿಸಿ ಶುದ್ಧನಪ್ಪೆನಯ್ಯ. ॥೩೫॥

ಮತ್ತಂ, ಅದಿಯ ಲಿಂಗವ ತಂದಾತನಲ್ಲಯ್ಯ. ಅನಾದಿಯ ಲಿಂಗವ ತಂದಾತನಲ್ಲಯ್ಯನು. ಭಾಸುರೆ ಜಂಗಮವೆ ನಿರ್ಣಯಲನವಗ್ರಹಿಸಿದಿರಿ ನಿಮಗೋಸುಗ ಮಾಡುವ ಸುಯಿಧಾನವನು ನಡೆಗೆಟ್ಟು ಮಾಡುವೆನು ಸರ್ವಕುಳಕ್ಕೆ ನೀನೆಂದು ಅಲ್ಲಯ್ಯನ ಶ್ರೀಪಾದಕ್ಕೆ ಕೈಯ್ಯನಾನುವೆನು. ನವ ಬ್ರಹ್ಮರ ಕೇರಿಯೊಳಗೆ ಅಲ್ಲಯ್ಯನ ಪ್ರಭೆ ರುದ್ರ ಭೂಮಿಯೊಳಗೆ ಅಲ್ಲಯ್ಯನ ಪ್ರಭೆ. ಬಂದು ನಿಂದಸಿ ಲವಿಂಗೆ ಅಲ್ಲಯ್ಯನ ಪ್ರಭೆ. ಸುಯಿಧಾನವಿಲ್ಲದಿರೆ ಎನ್ನ ನೀತುವೆನು ಕೂಡಲ ಸಂಗಮದೇವಾ. ॥೩೬॥

ದೇವದೇವ ಮಹಾಪ್ರಸಾದ ಅವಧರಿಸಯ್ಯ ಎನ್ನ ವಿಜ್ಞಾಪನ. ಅತಳ ವಿತಳ, ಸುತಳ, ತಳಾತಳ ರಸಾತಳ ಮಹೀತಳ ಪಾತಾಳಾದಿ ಲೋಕದಿಂದತ್ತತ್ತ ನಿಮ್ಮ ಶ್ರೀಚರಣ. ಭೂಲೋಕ ಭುವರ್ಲೋಕ ಸ್ವರ್ಲೋಕ ಮಹರ್ಲೋಕ ಜನಲೋಕ ತಪೋಲೋಕ, ಸತ್ಯಲೋಕದಿಂದತ್ತತ್ತ ನಿಮ್ಮುತ್ತುಮಾಂಗ. ತನುವಿನೊಳಗೆ ಅನಲ ಭರಿತವಾಗಿರ್ದ ಮಥನದಿಂ ತೋರಿ ಆಹುತಿಗೊಂಬಂತೆ ಸರ್ವಕರ್ತ ನಿತ್ಯಾನಂದಮಯನಿ ಭಕ್ತ ಲೀಲಾ ವಿನೋದನಿ ಕೂಡಲಸಂಗಮದೇವ ಸುಚಿತ್ರದಲ್ಲಿ ಮನ ಮೀಸಲ ಬೋನವನಾರೋಗಿಸಯ್ಯ. ॥೩೭॥

ಕಾಲ ಮುಟ್ಟಲನ್ಯಾಯ ಸುಯಿಧಾನ. ಕಲ್ಪಿತವಿಲ್ಲದ ಸುಯಿಧಾನ. ಅನಂತರತಿ ಎಂಬ ಹೆಂಗಸು ಮುಟ್ಟಿದ ಸುಯಿಧಾನ. ಭಾಳಲೋಚ

ನನೆಂಬ ಜಂಗಮ ಮುಟ್ಟಿದ ಸುಯಿಧಾನ. ಎಲ್ಲಿಯು ಮುಟ್ಟಿದ ಸುಯಿಧಾನವ ನಿಮಗರ್ಪಿಸಿದೆನು ಆರೋಗಿಸಯ್ಯ ಪ್ರಭುವೇ ಕೂಡಲ ಸಂಗಮದೇವ ॥೨೪॥

ಇದಕ್ಕೆ ಚಿಕ್ಕದಣ್ಣಾಯಕರ ವಚನ. ಅಂಗ ಲಿಂಗಕ್ಕೆ ಭಾಜನವೆಂಬರು. ಅಂಗ ಲಿಂಗಕ್ಕೆ ಭಾಜನವಲ್ಲ. ಕಾಯಗುಣಂಗಳ ಕಳೆದು, ಪಾಂಪಾಮುದವ ಹಿಂಗಿಸಿ, ಮನವೆಂಬ ಘನಪರಿಯಾಣವ ಬೆಳಗಿ, ಷಡಾಧಾರ ಚಕ್ರವೆಂಬ ಅಡ್ಡಣಿಗೆಯನಿಟ್ಟು, ಸಕಲಇಂದ್ರಿಯಂಗಳೆಂಬ ಕೆಲವಟ್ಟಲನಳವಡಿಸಿ, ಜ್ಞಾನಪ್ರಕಾಶವೆಂಬ ದೀಪಸ್ತಂಭವುಂ ಬೆಳಗಿ, ಸಕಲ ಕರಣಂಗಳೆಂಬ ಮೇಲುಸಾಧನಂಗಳಂ ಹಿಡಿದು, ಸಚ್ಚಕ್ತ್ಯಾನಂದವೆಂಬ ಬೋನವುಂ ಬಡಿಸಿ, ವಿನಯ ವಿವೇಕವೆಂಬ ಅಭಿಸಾರವುಂ ಗಡಣಿಸಿ ಪ್ರಸನ್ನ ಪರಿಣಾಮದ ಮಹರುಚಿ ಎಂಬ ಚಿಲುಪಾಲ ಘಟ್ಟಿಯ ತಂದಿಳುಹಿ ಸುಚಿತ್ತ ಸುಯಿಧಾನದಿಂದೆ ನಿಮ್ಮ ಹಸ್ತದ ಅವಧಾನವೆ ಅನುವಾಗಿ ಬಸವಣ್ಣನೆ ಜೋನನಾನೇ ಪದಾರ್ಥವಾಗಿ ನಿಮ್ಮ ಪರಿಯಾಣಕ್ಕೆ ವೇಧಿಸಿದೆನು ಆರೋಗಣೆ ಮಾಡಯ್ಯ ಕೂಡಲಚನ್ನಸಂಗಮ ದೇವಾ. ॥೨೯॥

ಮತ್ತಂ, ಕಾಯವೆಂಬ ಘಟಕ್ಕೆ ಕರಣಂಗಳೆಂಬ ಸುಯಿಧಾನ, ಅದಕ್ಕೆ ಚೈತನ್ಯವೆ ಜಲವಾಗಿ ಸಮತೆ ಎಂಬ ಮುಚ್ಚಳವ ಮುಚ್ಚಿ ಧೃತಿ ಎಂಬ ಸಮತೆಯನೊಡ್ಡಿ ಮತಿ ಎಂಬ ಅಗ್ನಿಯನಿಕ್ಕಿ ಜ್ಞಾನವೆಂಬ ದರ್ವಿಯಲ್ಲಿ ಘಟ್ಟಿಸಿ ಪಕ್ವಕ್ಕೆ ತಂದು ಭಾವದಲ್ಲಿ ಕುಳ್ಳಿರಿಸಿ ಪರಿಣಾಮದೋಗರವ ನೀಡುವೆನಯ್ಯ ಕೂಡಲಸಂಗಮದೇವಾ. ॥೩೦॥

ಮತ್ತಂ, ಕಂಗಳಾಶ್ರಯದ ಸೋಂಕಿನ ಸುಖ ಸಂಬಂಧವನು ಮಹದಾಶ್ರಯಕ್ಕೆ ತಂದು ಸೂಸಲೀಯದೆ ನಿಮಗರ್ಪಿಸುವೆ. ನಾಸಿಕದಾಶ್ರಯವನು ತಟ್ಟು ಮುಟ್ಟಿಲ್ಲದೆ ನಿಮಗರ್ಪಿಸುವೆನು. ಆಪ್ಯಾಯನದಲ್ಲಿ ಅಂಗವಿಸುವ ಸುವಿಚಾರ ಚೈತನ್ಯ ಮಧ್ಯಕ್ಕೆ ತಂದು ನಿಮಗರ್ಪಿಸುವೆ. ಪ್ರಸಾದಿ ಅನುಭಾವ ಪ್ರಸಾದಿ ಶರಣ ಪ್ರಸಾದಿ ಜಂಗಮವೇ ಲಿಂಗವೆಂಬುದನರಿದೆನಾಗಿ ಕೂಡಲ ಚನ್ನಸಂಗನ ಪ್ರಸಾದದಿಂದ ನಾನು ಪ್ರಸಾದಿಯಾದೆನಾಗಿ ಅನು ನಿನಗೆ ಪ್ರಸಾದಿಯಾದೆನು. ಆರೋಗಿಸಯ್ಯ ಪ್ರಭುವೇ ॥೩೧॥

ಮತ್ತಂ ನೀನಳವಡಿಸಿಕೊಟ್ಟ ಪದಾರ್ಥ ನಿನಗರ್ಪಿತವಯ್ಯ. ನಿಮ್ಮ ಆರೋಗಣೆ ಮಹಾ ಆರೋಗಣೆ ಸಕಲ ಕರಣಂಗಳಿಗೆ ಹಿತಾರ್ಥ. ಕೂಡಲ

ಚನ್ನಸಂಗಮದೇವಾ ನಿನಗೆ ಪ್ರೀತ್ಯರ್ಥವಾಗಿ ನಾನು ಅರ್ಪಿತವ ಮಾಡಲಿಲ್ಲವಯ್ಯ ॥೩೨॥

ಮತ್ತಂ, ಗುರುವೇ ಜೋನ, ಶಿಷ್ಯನೇ ಮೇಲೋಗರ, ಲಿಂಗಕ್ಕೆ ಪದಾರ್ಥವರ್ಪಿತವಯ್ಯ. ಘನಕ್ಕೆ ಮನವೇ ಅರ್ಪಿತ. ಮನಕ್ಕೆ ಮಹಪ್ರಸಾದ ಅರ್ಪಿತ. ಘನದೊಳಗೆ ಮನವು ತಲ್ಲೀಯವಾದ ಬಳಿಕ ಅರ್ಪಿಸುವ ಭಕ್ತರಾರು? ಆರೋಗಿಸುವ ದೇವರಾರು? ನಿತ್ಯ ತೃಪ್ತ ಉಣಕಲಿತೆನೆಂದರೆ ಅರ್ಪಿಸಲುಂಟೆ ದೇವ ಮತ್ತೊಂದನು? ಕೂಡಲಸಂಗಮದೇವ ಬಸವಣ್ಣನೇ ಜೋನ ನಾನೇ ಪದಾರ್ಥ ಸುಚಿತ್ತದಿಂದೆ ಆರೋಗಿಸಯ್ಯ ಪ್ರಭುವೆ. ॥೩೩॥

ಇದಕ್ಕೆ ಪ್ರಭುದೇವರು ತೃಪ್ತಿಯಾಗಿ ನಿರೂಪಿಸಿದ ವಚನ. ಮನ ಮುಕ್ತಿ ವಿವೇಕವೆಂಬ ಅಕ್ಕಿಯನು ಗುಪಿತವೆಂಬ ವರೊಳಗಿಕ್ಕಿ ಅಭಿನ್ನ ಮಥನವೆಂಬ ಒನಕೆಯುಲ್ಲಿ ಛಳಿಸಿ ಕಿಲ್ಮಿಷವೆಂಬ ತೌಡಂ ಹಾರಿಸಿ ಸಮತೆ ಎಂಬ ಸಲಿಲದಲ್ಲಿ ಜಾಳಿಸಿ ಅಳುಪೆವೆಂಬ ಹರಳಂ ಕಳೆದು ದಯಾಮೃತವೆಂಬ ಹಾಲಿನಲ್ಲಿ ಬೋನವುಂ ಮಾಡಿ ಸನುರಸ ರುಚಿಕರದಿಂದೆ ಶಾಕಪಾಕಂಗಳ ಮಾಡಿ ನೆನಹಿನ ಲವಲವಿಕೆಯೇ ಅಭಿಗರವಾಗಿ ನಿರ್ಮಲವೆಂಬ ತಿವಡಾನವ ಗಡಣಿಸಿ ಕಾಯ್ದುರ್ದರಯ್ಯ ಪಂಚೇಂದ್ರಿಯವೆಂಬ ಸೊಣಗ ವಟ್ಟಿದಂತೆ. ಕಾಯ್ದುರ್ದರಯ್ಯ ಷಡುವರ್ಗವೆಂಬ ತೊತ್ತಿಯರು ಮುಟ್ಟಿದಂತೆ. ಕಾಯ್ದುರ್ದರಯ್ಯ ಅಷ್ಟಮದವೆಂಬ ಮಕ್ಕಳು ಮುಟ್ಟಿದಂತೆ. ಇನಿತು ಮುಖ್ಯವಾದ ಹೀನಂಗಳಾವಾವು ಮುಟ್ಟಿದಂತೆ ಕಾಯ್ದುರ್ದರಾಗಿ ಈ ಬೋನ ಗುಹೇಶ್ವರ ಲಿಂಗಕ್ಕೆ ಅರ್ಪಿತವಾಯಿತ್ತು ಕಾಣಾ ಚನ್ನ ಬಸವಣ್ಣಾ ॥೩೪॥

ಮತ್ತಂ, ಭರಿತ ಬೋನ ಭರಿತ ಬೋನವೆಂದು ಭ್ರಮೆಗೊಂಡು ಭ್ರಮಿತರಾದಿರಿ ಲೋಕವೆಲ್ಲ. ಭರಿತ ಬೋನವೆ ದಿಟವಾದರೆ ಮರ್ತ್ಯದಲ್ಲಿ ಸಾಳಿಯಲುಂಟೆ? ಚತುರ್ವಿಧ ಅರ್ಪಿತದೊಳಗೆ ಅವುದು ಭರಿತವೆಂಬುದನರಿಯರಾಗಿ ಗುಹೇಶ್ವರ ಲಿಂಗವಲ್ಲಿ ಭರಿತ ಬೋನವ ಅನು ಚನ್ನಬಸವಣ್ಣಂಗಾಯಿತ್ತು ॥೩೫॥

ಪ್ರಭುದೇವರು ಬಸವರಾಜ ದೇವರೊಡನೆ ನಿರೂಪಿಸಿದ ಪ್ರತ್ಯುತ್ತರ.

ಭಕ್ತಿಯೇ ಓಗರವಾಗಿ ಸತ್ಯನೆ ಮೇಲೋಗರವಾಗಿ ನಿಜತತ್ವವೆ ಸ್ವಯವಾಗಿ ಗುಹೇಶ್ವರ ಲಿಂಗಕ್ಕೆ ಇಕ್ಕಿ ಬಲ್ಲವ ಸಂಗನಬಸವಣ್ಣನಲ್ಲದಿಲ್ಲಾ ॥೩೬॥

ಮತ್ತಂ, ಭೂಮಿಯಲ್ಲಿ ಹುಟ್ಟಿ ಅಂತರಂಗವಲ್ಲಿ ಜೆಳೆವ ಫಲವೃಕ್ಷದಂತೆ ಸರ್ವರಿಗೆ ಭೂತಹಿತವಾಗಿ ಫಲರಸವಸೀನ ತೆ ನೀ ಭೂಮಿಯಾಗಿ ನಾ ಸಸಿಯಾಗಿ ಬೆಳೆದ ಜೆಂಬಳಿಯಲ್ಲಿ ಗುಹೇಶ್ವರಲಿಂಗವೆಂಬುದು ಫಲವಾಯಿತ್ತು. ಅರಿವರಿಕೆ ರಸವಾಯಿತ್ತು. ಸಂಗನಬಸವಣ್ಣನಿಂದ ಎನ್ನಂಗ ಬಯಲಾಯಿತ್ತು. ॥೩೭॥

ಅಂದು ನೀವು ಬಂದ ಬೆಂಬಳಿಯಲ್ಲಿ ನಾ ಬಂದೆ. ಅಂದಂದಿಪ ಸಂದೇಹ ಹರಿಯಿತ್ತು. ನೀ ಭಕ್ತನಾಗಿ ನಾ ಜಂಗಮವಾಗಿ ಗುಹೇಶ್ವರಲಿಂಗವೆಂಬುದಕ್ಕೆ ಅಂಗವಾಯಿತ್ತು. ॥೩೮॥

ಕಾಯ ಉಭಯಭೇದವಾಗಿ ಆತ್ಮನೇಕವಾಗಿ ಕಾಯ ಭಕ್ತನಾಗಿ ಪ್ರಾಣ ಜಂಗಮವಾಗಿ ನಾ ಹಿಡಿದ ರೂಪು ಬಸವಣ್ಣನಾಗಿ ಅರಿದರಿವು ಗುಹೇಶ್ವರಲಿಂಗವಾಗಿ ನೆನೆವುತ್ತಿರ್ದೆನು. ॥೩೯॥

ಇದಕ್ಕೆ ಬಸವರಾಜದೇವರ ವಚನ. ಆತ್ಮನ ಸುಳುಹಿನಿಂದ ಮತ್ತೆ ಕಾಯದ ಅವತಾರವಳಿಯಿತ್ತು. ನೀನೆಂಬ ಭಾವವರತಲ್ಲಿ ಕೂಡಲಸಂಗಮದೇವರ ಭಾವ ಪ್ರಭುದೇವರಲ್ಲಿ ಐಕ್ಯವಾಯಿತ್ತು. ॥೪೦॥

ಇದಕ್ಕೆ ಪ್ರಭುದೇವರ ವಚನ. ಅನ್ನಒಡ ಹಂಗೆನ್ನದಿರು. ಸಂಗನ ಬಸವಣ್ಣ ನಿನಗೆ ಬೇರೆ ಅಡಗುವ ಕುರಹೆಂಬುದೊಂದೊಡಲುಂಟೆ? ಎನಗೆ ಅಂತೈಯ್ಯ ನಾವು ಕಾಯವೆಂಬ ಕವಳಿ ಗುಹೇಶ್ವರನೆಂಬ ಭ್ರಮೆ ಬಿಡದು. ॥೪೧॥

ಮತ್ತಂ, ಪ್ರಭುದೇವರು ಬಸವರಾಜದೇವರ ಸ್ತುತಿಸಿದ ವಚನ. ತನು ಶುದ್ಧವಾಯಿತ್ತು ಬಸವಣ್ಣ ಇಂದೆನ್ನ. ಮನ ಶುದ್ಧವಾಯಿತ್ತು ಬಸವಣ್ಣ ಇಂದೆನ್ನ. ಭಕ್ತಿ ಯುಕ್ತಿ ಮುಕ್ತಿ ಶುದ್ಧವಾಯಿತ್ತು ಬಸವಣ್ಣ ಇಂದೆನ್ನ. ಇನ್ನೆಲ್ಲವು ಶುದ್ಧವಾದವು ಬಸವಣ್ಣ ಇಂದೆನ್ನ. ನಮ್ಮ ಗುಹೇಶ್ವರಲಿಂಗಕ್ಕೆ ಆದಿ ಆಧಾರವಾದೆಯಲ್ಲ ಬಸವಣ್ಣ. ॥೪೨॥

ಮತ್ತಂ, ಚನ್ನಬಸವಣ್ಣನ ಸ್ತುತಿಸಿದ ವಚನ. ಪಂಚವರ್ಣದ ಬಿಂದು ಪ್ರಪಂಚನಳಿದುಳಿದಿರಲು ಸಂಚಲಿಸುವರೆ ಆವೆಡೆ ಇಲ್ಲ. ನಿಂದ ಚಿತ್ತಿನ ಪ್ರಭೆ ಅಂಗವಸುರೆ ನುಂಗಿ ಹಿಂದು ಮುಂದು ಎಡಬಲ ಆಡಿ ಆಕಾಶವೆಂಬುದಿಲ್ಲ. ಕೆಳಗೆ ನಿಲಲಾಧಾರ ಮೊವಲಿಂಗಿಲ್ಲ. ಕಡೆಗೆ ಸಾರುವೆನೆನಲು ಊಧ್ರ್ವವಿಲ್ಲ. ನಡುವೆ ನಾನಿದ್ದಿಹೆನೆಂದರೆ ತನ್ನೊಡಲೊಳಗೆ ಒಡೆದು ಮೂಡಿತ್ತು. ಅದು ತನ್ನಂತೆ ಬಯಲು. ಈ ಬಿಡಗು ವಿನ್ಯಾಣವ ಬಡ

ವರಿವರೆ ಇವನೀವು ನುಡಿದು ತೋರಿದನು ಗುಹೇಶ್ವರನ ಶರಣ ಸಂಗನಬಸವಣ್ಣನು. ॥೪೩॥

ಇದಕ್ಕೆ ಬಸವರಾಜದೇವರ ವಚನ. ಕಾಣಬಾರದ ಘನವ ಕರಸ್ಥಲದಲ್ಲಿ ತೋರಿದ. ಹೇಳಬಾರದ ಘನವ ಮನಸ್ಥಲದಲ್ಲಿ ತೋರಿದ. ಉಪಮಿಸಬಾರದ ಘನವ ನಿಮ್ಮ ತೃಪ್ತಿಯ ಮುಖದಲ್ಲಿ ತೋರಿದ. ಇಂತೀ ತ್ರಿವಿಧವು ಏಕಾರ್ಥವಾಗಿಹ ಭೇದವ ಚೆನ್ನಬಸವಣ್ಣ ತೋರಿದನಾಗಿ ಅನುವುದುಕಿದೆನು ಕಾಣಾ ಕೂಡಲಸಂಗಮದೇವಾ. ॥೪೪॥

ಇದಕ್ಕೆ ಪ್ರಭುದೇವರು ಚನ್ನಬಸವರಾಜದೇವರ ಸ್ತುತಿಸಿದ ವಚನ.

ಗುರುಶಿಷ್ಯರಿಬ್ಬರ ಮಧ್ಯದಲ್ಲಿ ಒಂದು ಮಗು ಹುಟ್ಟಿತ್ತು ನೋಡಾ. ಗುರುವಿಂಗೆ ಗುರುವಾದ ಪರಿ ಎಂತೋ? ಶಿಷ್ಯಂಗೆ ಶಿಷ್ಯನಾದ ಪರಿ ಎಂತೋ? ಆದಿಯ ಲಿಂಗವ ಸಾಧ್ಯವ ಮಾಡಿ ತೋರಿದ ಗುಹೇಶ್ವರನ ಶರಣ ಚನ್ನಬಸವಣ್ಣಂಗೆ ಶರಣೆಂದು ಬದುಕಿದೆನು ಕಾಣಾ ಸಂಗನಬಸವಣ್ಣ. ॥೪೫॥

ಆ ದೃಷ್ಟದ ಕರಣವ ಮೇಲಣ ಪೂರ್ವಾಶ್ರಯವ ಕಳೆದು ಗುರುವಿನ ಹಸ್ತ ಮುಟ್ಟಿತ್ತೆಂಬ ಸಂದಣಿಯಲ್ಲಿ ಹೋಗದು. ಪಂಚೇಂದ್ರಿಯ ಲಿಖಿತವ ತೊಡೆದು ಲಿಂಗ ಲಿಖಿತವ ಬರೆಪುದು ಶಿಷ್ಯನ ಕೈಯ್ಯಲಲ್ಲದೆ ಗುರುವಿನ ಕೈಯ್ಯಲಾಗದು. ಭವಿ ಮಾಡುವ ಬೋನವ ಭಕ್ತ ಕಾಣದ ಹಾಗೆ ಅರ್ಪಿಸುವ ಭೇದವರಿದು ಪ್ರಸಾದ ಪೂರ್ವಾಶ್ರಯವ ಕಳೆದು ನಿರೂಪಿಸಬಲ್ಲರೆ ಹರಿಯದು. ಗುರುವಿಲ್ಲದ ಶಿಷ್ಯ ಶಿಷ್ಯನಿಲ್ಲದ ಗುರು ಇಂತೀ ಒಂದಕ್ಕೊಂದು ಇಲ್ಲದೆ ಗುಹೇಶ್ವರಲಿಂಗವಲ್ಲಿ ಸಹಜದುದಯವಾದನು. ನಮ್ಮ ಚನ್ನಬಸವಣ್ಣಂಗೆ ನಮೋ ನಮೋ ಎಂಬೆನು. ॥೪೬॥

ಬಸವರಾಜದೇವರು ಚನ್ನಬಸವರಾಜದೇವರ ಸ್ತುತಿಸಿದ ವಚನ।

ಪ್ರಸಾದಿಯ ಪ್ರಸಾದದಲೊದಗಿದ ಪ್ರಸಾದಿಯನೇನೆಂದುಪಮಿಸುವೆನು? ಏನೆಂದು ಸ್ತುತಿಸುವೆನಯ್ಯ? ಮಹಾಪ್ರಸಾದಿಗೆ ಮಹಾಘನ ಪ್ರಸಾದವಾದ ಪ್ರಸಾದಿಯನು ಅಗಮ್ಯ ಪ್ರಸಾದವಲ್ಲಿ ಸ್ವಾಯತವಾದ ಕೂಡಲ ಸಂಗಮದೇವ ನಿಮ್ಮ ಶರಣ ಚನ್ನಬಸವಣ್ಣಂಗೆ ನಮೋ ನಮೋ ಎಂಬೆನು ॥೪೭॥

ಲೋಕದಿಚ್ಛೆಯ ನಡೆವವನಲ್ಲ. ಲೋಕದಿಚ್ಛೆಯ ನುಡಿವವನಲ್ಲ. ಲೋಕ ವಿರಹಿತ ಶರಣ. ಶರಣ ವಿರಹಿತ ಲೋಕವೆಂಬುದು ಕಾಣ ಬಂದಿತ್ತು ನೋಡಾ. ಲಿಂಗವೆ ಗೂಡಾಗಿ, ಜಂಗಮವೆ ಸ್ವಾಯತವಾಗಿ ಪ್ರಸಾದವೆ ಪ್ರಾಣವಾಗಿ ಪರಿಣಾಮದಲ್ಲಿ ಒಪ್ಪ ನೋಡಯ್ಯ. ಕೂಡಲ ಸಂಗಮದೇವ ನಿಮ್ಮ ಶರಣ ಚನ್ನಬಸವಣ್ಣಂಗೆ ನಮೋ ನಮೋ ಎಂಬೆನು. ॥೪೯॥

ಇದಕ್ಕೆ ಚನ್ನಬಸವಣ್ಣನು ಬಸವಣ್ಣನ ಸ್ತುತಿಯಿಸಿದ ವಚನ.॥

ಅಂಗದಮೇಲೆ ಆಚಾರಲಿಂಗ ಸ್ವಾಯತವಾಯಿತ್ತು. ಪ್ರಾಣದ ಮೇಲೆ ಜಂಗಮಲಿಂಗ ಸ್ವಾಯತವಾಯಿತ್ತು. ಆತ್ಮನ ಮೇಲೆ ಸಮ್ಯಜ್ಞಾನ ಸ್ವಾಯತವಾಯಿತ್ತು ಇಂತೀ ತ್ರಿವಿಧಕ್ಕೆ ತ್ರಿವಿಧ ಸ್ವಾಯತವಾಗಿಪ್ಪ ನಮ್ಮ ಕೂಡಲ ಚನ್ನಸಂಗನ ಶರಣ ಬಸವಣ್ಣಂಗೆ ನಮೋ ನಮೋ ಎನುತಿರ್ದೆನು. ॥೪೯॥

ಮತ್ತಂ, ತನು ಗುರವಿನಲ್ಲಿ ಸಪೆದು, ಮನ ಲಿಂಗದಲ್ಲಿ ಸಪೆದು, ಧನ ಜಂಗಮದಲ್ಲಿ ಸಪೆದು, ತನುವೆ ಗುರುವಾಗಿ, ಮನವೆ ಲಿಂಗವಾಗಿ ಧನವೆ ಜಂಗಮವಾಗಿ, ತ್ರಿವಿಧವು ಐಕ್ಯವಾಗಿ ನಿಂದಲ್ಲಿ ನಿಜ ಭರಿತನಾಗಿ ಕಾಯವಿಡಿದು ಕರ್ಮ ವಿರಹಿತವಾಗಿ ಕೂಡಲ ಚನ್ನಸಂಗಯ್ಯನಲ್ಲಿ ಬಸವ ಣ್ಣನುಪಮಾತೀತನಾಗಿರ್ದನು. ॥೫೦॥

ಮತ್ತಂ॥ ಚನ್ನಬಸವಣ್ಣನು ಪ್ರಭುದೇವರ ಸ್ತುತಿಸಿದ ವಚನ॥

ಮನೆಯೊಳಗಣ ಕಿಚ್ಚು ಕಾನನವ ಸುಟ್ಟಿತ್ತು. ಕಾನನ ಬೆಂದಲ್ಲಿ ಮನೆ ಉರಿ ಹತ್ತಿತ್ತು ಮನೆ ಬೆಂದು ಕಂಭ ಉರಿಯಿತ್ತು. ಆ ಕಂಭದ ಮೇಲೊಂದು ರತ್ನ ವಿದ್ದುದು ಕಂಡೆ. ಅದರ ಬೆಳಗು ಮೂರುಲೋಕ ತುಂಬಿತ್ತಲ್ಲಾ! ಇದು ಕಾರಣ ಕೂಡಲಚನ್ನಸಂಗಯ್ಯನಲ್ಲಿ ಪ್ರಭುದೇವರ ನಿಲವಿಂಗೆ ನಾನು ಶರಣೆನುತಿರ್ದೆನು ॥೫೧॥

ಮತ್ತಂ॥ ಅಂಗದಲ್ಲಿ ಲಿಂಗವರತು, ಲಿಂಗದಲ್ಲಿ ಅಂಗವರತು, ಒಡಲುಪಾಧಿ ಎಂಬುದಿಲ್ಲ ನೋಡಾ. ನಿಂದಡೆ ನೆಳಲಿಲ್ಲ. ಸುಳಿದಡೆ ಹೆಜ್ಜೆ ಇಲ್ಲ ಅಪರಿಮಿತ ಘನ ಮಹಿಮನನೇನೆಂಬೆನಯ್ಯ? ಶಬ್ದವರಿದು ಸಾರಾಯನಲ್ಲ. ಗತಿಪಿಡಿದು ಆಜಡನಲ್ಲ. ಎರಡು ಅಳಿದುಳಿದ ನಿಶ್ಚಿಂತನು. ತನಗೆ ತಾನೆ

ನಿಜವಾದ ಕೂಡಲಚನ್ನಸಂಗಯ್ಯನಲ್ಲಿ ಪ್ರಭುದೇವರ ಪಾದಕ್ಕೆ ನಮೋ ನಮೋ ಎನುತಿರ್ದೆನು ॥೫೨॥

ಮತ್ತಂ॥ ಹೆಣ್ಣಿಂಗೆ ಬಂದಾತನಲ್ಲ, ಹೊನ್ನಿಂಗೆ ಬಂದಾತನಲ್ಲ, ಮಣ್ಣಿಂಗೆ ಬಂದಾತನಲ್ಲ, ಅರಸನಕ್ಕೆ ಬಂದಾತನಲ್ಲ, ವ್ಯಸನಕ್ಕೆ ಬಂದಾತನಲ್ಲ. ಕೂಡಲ ಚನ್ನಸಂಗಯ್ಯನಲ್ಲಿ ಭಕ್ತಿಪಥವ ತೋರಬಂದೆನಯ್ಯ ಪ್ರಭುದೇವರು. ॥೫೩॥

ಇಂತು ಪ್ರಭುದೇವರು, ಚನ್ನಬಸವಣ್ಣನು, ಬಸವಣ್ಣನು ಒಬ್ಬರೊಬ್ಬರ ಕೊಂಡಾಡುತಿಪ್ಪ ಪ್ರಸ್ಥಾವದೊಳು ಬಸವರಾಜದೇವರು ಲಕ್ಷದ ಮೇಲೆ ತೊಂಬತ್ತಾರು ಸಾವಿರ ಜಂಗಮದ ಮುನಿಸ ತಿಳುಹಿಕೊಡಬೇಕೆಂದು ಪ್ರಭುದೇವರಿಗೆ ವಿನ್ನಹಂ ಮಾಡುವ ಪ್ರಸ್ಥಾವದ ವಚನ॥

ಚಂದ್ರಮ ಅವ್ಯಕ್ತಕರನಾದಡೇನಯ್ಯ, ಒಳಗಣ ಕಳಂಕ ಬಿಡದನ್ನಕ್ಕರ? ಸೂರ್ಯ ಮಹ ಪ್ರಕಾಶವಾದಡೇನಯ್ಯ, ಅಸ್ತಮಾನಕ್ಕೆ ಅಸ್ತಂಗತನೆಂಬ ಹೀನ ಬಿಡದನ್ನಕ್ಕರ? ಆನು ನಿಮ್ಮ ಕೃಪೆಯ ಹಡೆದು ಫಲವೇನಯ್ಯ, ನಿಮ್ಮ ಶರಣರು ಎನ್ನ ಮೇಲೆ ಮುನಿದುಹೋದ ಬಳಿಕ? ಕೂಡಲ ಸಂಗನುದೇವಯ್ಯ ನಿಮ್ಮ ಶರಣರು ಮನದಲ್ಲಿ ಎನ್ನ ಮೇಲೆ ಕರುಣ ಹುಟ್ಟಿ ಬಪ್ಪಂತೆ ಮಾಡಯ್ಯ. ॥೫೪॥

ಇದಕ್ಕೆ ಪ್ರಭುದೇವರ ಪ್ರತ್ಯುತ್ತರ॥

ನಾನೆಂಬಹಂಕಾರವಲ್ಲಿ ನಾನುಂಡೆನಾವಡೆ ಎನಗದೆ ಭಂಗ. ಸ್ತುತಿ ನಿಂದೆಗೆ ನೊಂದೆನಾವಡೆ ಅಂಗೈಯ್ಯಲ್ಲಿದ್ದ ಗುಹೇಶ್ವರಲಿಂಗಕ್ಕೆ ದೂರ ಸಂಗನಬಸವಣ್ಣಾ ॥೫೫॥

ಮತ್ತಂ॥ ನೋಡುವ ಸೂರ್ಯ ಸುರಿವ ಜಲ ಹೊಲಿ ನೆಲಿ ಶುದ್ಧ ಎಲ್ಲಕ್ಕು ಸರಿ. ಅರಿದು ನುಡಿವಂಗೆ ಮರೆದು ನುಡಿದು ತಲ್ಲಣಿಸುವಂಗೆ ಅವನ ಹೃದಯವೆ ಸಾಕ್ಷಿ. ಗುಹೇಶ್ವರಲಿಂಗಕ್ಕೆ ತಥ್ಯಮಿಥ್ಯವಿಲ್ಲ ಸಂಗನ ಬಸವಣ್ಣಾ ॥೫೬॥

ಮತ್ತಂ॥ ಸುರಿವ ಜಲಕ್ಕೆ ನೆಲ ಹೊಲ ಎಂದು ಪ್ರಮಾಣಿಸಬಹುದೆ? ಉರಿವ ಅನಲಂಗೆ ಶತ ಹೊಂಕು ಸಸಿನವೆಂಬುದುಂಟೆ? ಗುಹೇಶ್ವರಲಿಂಗಕ್ಕೆ ಲೇಸು ಕಷ್ಟವೆಂಬುದಿಲ್ಲ ಸಂಗನಬಸವಣ್ಣಾ ॥೫೭॥

ಮತ್ತಂ॥ ಕಾಯದ ಮೇಲೆ ಕಲ್ಲು ಬೀಳಲಿಕ್ಕೆ ಜೀವ ಅರಾವನ್ನರಿದು ತಾವು ಮಾಡಿಸಿಕೊಂಬಾಗ ನೋವರಿವುದು ಕಾಯವೊ ಜೀವವೆ ಉಭಯ ಸಮಯವೊ? ಗುಹೇಶ್ವರಲಿಂಗಕ್ಕೆ ಅನ್ಯವಿಲ್ಲ ಸಂಗನಬಸವಣ್ಣಾ ॥೫॥

ಮತ್ತಂ॥ ನಿಜವ ಬಲ್ಲವಂಗೆ ಜಲವು ಸರಿ ನೆಲನು ಸರಿ. ಪರಿದು ನುಡಿವಂಗೆ ಜಗವು ಸರಿ ಸಮಯವು ಸರಿ. ಎನುಗಾವಿಭ್ಯವಿಲ್ಲ. ಗುಹೇಶ್ವರಲಿಂಗವು ಪರಿಪೂರ್ಣವಾದ ಕಾರಣ ಸಂಗನಬಸವಣ್ಣಾ ॥೫॥

ಮತ್ತಂ॥ ನೀರನೀಜುವನ ದೇಹ ಬಳಲುವದಲ್ಲದೆ ನೀರು ಬಳಲುವವೆ? ಸಮಯವ ನುಡಿದಡೆ ಸಮಯಕ್ಕೆ ನೋವಲ್ಲದೆ ಗುಹೇಶ್ವರಲಿಂಗಕ್ಕಾಭ್ರಮೆ ಇಲ್ಲ ಕಾಣಾ ಸಂಗನಬಸವಣ್ಣಾ ॥೬॥

ಮತ್ತಂ॥ ವಿಡಂಬನ. ಜಂಗಮ ಘನವೆಂಬೆನೆ? ಜಂಗಮ ಬೇಡಿದಾಗಲೆ ಕಿರಿದಾಯಿತ್ತು. ಲಿಂಗ ಘನವೆಂಬೆನೆ? ಕಲ್ಲಕುಟಿಕನ ಕೈಯ್ಯಲ್ಲಿ ಮಾಡಿಸಿಕೊಂಡು ಕಿರಿದಾಯಿತ್ತು. ಭಕ್ತ ಘನವೆಂದನೆ? ತನು ಮನ ಧನ ವಂಚಕನಾಗಿ ಕಿರಿದಾದ ಇಂತೀ ತ್ರಿವಿಧದಲ್ಲಿ ಪರಿಣಾಮವಿಲ್ಲವ ಪರಮಾರ್ಥ ಗುಹೇಶ್ವರಲಿಂಗದ ಘನವ ಬಲ್ಲವರಾರು ಹೇಳಯ್ಯ ಸಂಗನಬಸವಣ್ಣಾ ॥೬೧॥

ಮತ್ತಂ, ತನು ಬತ್ತಲಿ ಇದ್ದಡೇನಯ್ಯ? ಮನ ಕುಟಿಯಾಗವನ್ನಕ್ಕರ? ಮಂಡೆ ಬೋಳಾದಡೇನಯ್ಯ ಭಾವ ಬಯಲಾಗದನ್ನಕ್ಕರ? ಭಸ್ಮನ ಹೂಸಿದಡೇನು? ಕರಣಾದಿ ಗುಣಂಗಳನೊತ್ತಿ ಮೆಟ್ಟಿ ನುಡದನ್ನಕ್ಕರ? ಇಂತೀ ಆಸೆಯ ವೇಷದ ಭಾಷೆಗೆ ಗುಹೇಶ್ವರ ಸಾಕ್ಷಿಯಾಗಿ ಛೀ ಎಂಬೆನು ಕಾಣಾ ಸಂಗನಬಸವಣ್ಣಾ. ॥೬೨॥

ಮತ್ತಂ, ಆಸೆ ಎಂಬ ಶೂಲದ ಮೇಲೆ ವೇಷವೆಂಬ ಹೆಣನ ಕುಕ್ಕರಿಸಿದರೆ ಮೇಲುಳ್ಳ ಹಿರಿಯರು ಹೀಗೆ ಸವೆದರು ನೋಡಾ. ಆಸೆಯ ಮುಂದಿಟ್ಟುಕೊಂಡು ಸುಳಿವ ಹಿರಿಯರ ಕಂಡು ಗುಹೇಶ್ವರ ಲಿಂಗಕ್ಕೆ ಹೇಸಿಕೆಯಾಯಿತ್ತು ಕಾಣಾ ಸಂಗನಬಸವಣ್ಣಾ. ॥೬೩॥

ಮತ್ತಂ॥ ಆಚಾರವನರಿಯದೆ, ಕ್ರಿಯಾಕಾರ ಉಡುಗದೆ, ವಿಭಯ ವಳಿಯದೆ, ಕೋಪವಡಗದೆ, ತಾಪಮುರಿಯದೆ, ಬರಿದೆ ನೆನೆವ ಹೊರ

ನಂತೆ ಜೆಬ್ಬಳಿಸಿ ಜೆಪ್ಪನೆ ಬೆರವವರ ಕೇಡಿಂಗೆ ನಾನು ಬೆರಗಾದೆನು ಕಾಣಾ ಗುಹೇಶ್ವರ. ॥೬೪॥

ಮತ್ತಂ॥ ತಪ್ಪ ತಾವರಿಯರು. ಹೇಳಿದರೆ ಕೇಳರು. ಅದರ ಹೊಲ ಸನೇನೆಂದರಿಯರು. ಎಟರ ಕಂಟಕವ ಮುನ್ನರಿಯರು. ಏರಿಪ ಬೆಟ್ಟವ ಳಿಯಲರಿಯದವರನೇನೆಂಬೆ ಗುಹೇಶ್ವರಾ? ॥೬೫॥

ಮತ್ತಂ, ಅರಿದ ಶರಣಂಗೆ ಆಚಾರವಿಲ್ಲ. ಆಚಾರವಿಲ್ಲವಾಗಿ ಲಿಂಗವಿಲ್ಲ. ಲಿಂಗವಿಲ್ಲದ ಶರಣನ ಸುಳುಹು ಜಗಕ್ಕೆ ವಿಪರೀತ ಚರಿತ್ರವದು. ಸಂಕಟವಲ್ಲ ನೋಡಾ. ಸಂಸಾರ ಬಳಸುವ ಬಯಕೆ ಏನೆಂದು ಹೊದ್ದನು. ಕಟಿಯ ಹಿಡಿದು, ದಿಟವ ಮರೆದು, ಇಲ್ಲದ ಲಿಂಗವನುಂಟೆಂದು, ಪೂಜಿಸುವರಾಗಿ, ಆಚಾರ ಉಂಟು. ಆಚಾರವುಳ್ಳವಂಗೆ ಗುರುವುಂಟು. ಗುರುವುಳ್ಳವಂಗೆ ಲಿಂಗ ಉಂಟು. ಲಿಂಗಪೂಜಕಂಗೆ ಭೋಗ ಉಂಟು. ಈ ಬರಿಮು ಬಾಯ ಒಣ್ಣಕರೆಲ್ಲರು ಪೂಜಕರಾದರು. ಗುಹೇಶ್ವರಲಿಂಗವು ಅಲ್ಲಿಲ್ಲಿ ಎಂಬುದನು ಈ ವೇಷಲಾಂಛನತೆತ್ತಬಲ್ಲರು ಹೇಳಾ ಸಂಗನ ಬಸವಣ್ಣಾ. ॥೬೬॥

ಇವಕ್ಕೆ ಬಸವರಾಜದೇವರ ಪ್ರತ್ಯುತ್ತರ॥

ಘನ ಗಂಭೀರ ವಾರುಧಿಯೊಳಗೆ ತೋರುವ ವಿಚಾರಂಗಳು ಆ ವಾರುಧಿಯ ಬಿಟ್ಟು ತೋರಬಲ್ಲವೆ? ತೋರಿದರೆ ಆ ವಾರುಧಿ ತನ್ನ ತಾ ಜರಿದುಕೊಂಬುದೆ? ನಿಮ್ಮೊಳಗಡಗಿದ ಪ್ರಮಥರೆಲ್ಲರ ಗುಣಾದಿಗುಣಂಗಳೆಲ್ಲವನು ನಿಮ್ಮಡಿಯಲೆತ್ತಲುಂಟೆ? ಜಗದೊಳಗೆ ಕೂಡಿ ಪರಿಪೂರ್ಣವಾದ ಬಳಿಕ ಅದಿರ ನೋಡಿ, ಜರಿದು ನುಡಿವ ತಾವಾವುದು ಹೇಳಯ್ಯ? ಕೂಡಲಸಂಗಮದೇವಯ್ಯ ನಿಮ್ಮ ನೀವು ಪರಿಣಾಮಿಸಿಕೊಂಬುದಲ್ಲದೆ ಭಿನ್ನವ ಮಾಡಲುಂಟೆ? ॥೬೭॥

ಮತ್ತಂ॥ ಕುಲವ ನೋಡದೆ ಛಲವ ನೋಡದೆ ನಿಲವ ನೋಡದೆ ಕೂಡಿದ ಬಳಿಕ ಜಲ್ಲಿ ಕೆಚ್ಚು ಕುಂದನರಸಲುಂಟೆ? ಮುಂದುವರಿದು ಜಂಗಮಕ್ಕೆ ನಿಮ್ಮ ಕಾರುಣ್ಯವನುಪದೇಶವ ಮಾಡಿದ ಬಳಿಕ ಬಂದುದ ಬಂದಂತೆ ಮನಸಿಸಿಕೊಳ್ಳಬೇಕಲ್ಲದೆ ಅಂತಿಂತೆಸ್ಸಬಾರದು ಕೇಳಯ್ಯ. ನೀನು ನಿರಾಕಾರ ನಾಕಾರವೆಂಬೆರಡು ಮೂರ್ತಿಯ ಧರಿಸಿಪ್ಪೆಯಾಗಿ ಒಂದು ಜರಿದು ಒಂದು

ಹಿಡಿದಿಹೆನೆಂದರೆ ಅದೇ ಕೊರತೆ ನೋಡಾ ಪ್ರಭುವೆ ಕೂಡಲಸಂಗಮ ದೇವಾ. ॥೬೮॥

ಇದಕ್ಕೆ ಪ್ರಭುದೇವರ ಪ್ರತ್ಯುತ್ತರ॥

ಆಕಾರ ನಿರಾಕಾರವೆಂಬೆರಡು ನಾನೆ ದಿಟ ದಿಟ ತಪ್ಪದು ಕೇಳಾ. ಆಕಾರಕ್ಕೆ ಭಾವವೆ ಪ್ರಾಣ. ನಿರಾಕಾರಕ್ಕೆ ಮಹಾಜ್ಞಾನವೆ ಪ್ರಾಣ. ಇಂತೀ ಉಭಯಕುಳಕ್ಕೆ ಇದು ಲಕ್ಷಣ ಕೇಳಾ. ಎರಡರೊಳಗೆ ಆವ ಮುಖದಲ್ಲಿ ಇಪ್ಪಾತನು ಆ ಮುಖಪಲ್ಲಿ ಶುದ್ಧವಾಗದನ್ನಕ್ಕರ ಗುಹೇಶ್ವರಲಿಂಗಕ್ಕೆ ದೂರ ಕೇಳಾ ಸಂಗನಬಸವಣ್ಣಾ. ॥೬೯॥

ಇದಕ್ಕೆ ಬಸವರಾಜ ದೇವರ ಪ್ರತ್ಯುತ್ತರ. ಅರಿವಿಲ್ಲದ ಕಾಯ ಉಂಟೆ? ಅರಿವಿಲ್ಲದ ಪ್ರಾಣ ಉಂಟೆ? ಅರಿವಿಲ್ಲದ ನಿಲವು ಉಂಟೆ? ಭಾವವಿಲ್ಲದ ಭಕ್ತಿ ಉಂಟೆ? ಕೂಡಲಸಂಗಮದೇವ ನೀವು ಪರಿಪೂರ್ಣ ವಾಗಿಪ್ಪಿರಿ. ಅವಗುಣಕ್ಕೆ ತೆರಹಿಲ್ಲ. ॥ ೭೦ ॥

ಇದಕ್ಕೆ ಪ್ರಭುದೇವರ ಪ್ರತ್ಯುತ್ತರ. ಅಹುದಹುದು ಬಸವಣ್ಣ. ನೀನೆಂದುದನಲ್ಲೆನಬಹುದೆ? ಎನ್ನ ಮನದ ಕಪ್ಪ ಕಳೆದು, ನಿರ್ಲೇಪನ ಮಾಡಿ ಎನ್ನ ನಿರ್ವಯಲಲ್ಲಿ ನಿಲಿಸಿ ಪ್ರತಿಷ್ಠೆಯ ಮಾಡುವಾತನು ನೀನೆಂಬುದು ಸತ್ಯ ವಚನ ನೋಡಾ! ಗುಹೇಶ್ವರನ ಮಹಗಣಂಗಳಿದ್ದಲ್ಲಿಗೆ ಹೋಗಿ ತಿಳುಹಿಕೊಂಡು ಬಾರಾ ಸಂಗನಬಸವಣ್ಣಾ ॥ ೭೧ ॥

ಇದಕ್ಕೆ ಬಸವರಾಜ ದೇವರ ಪ್ರತ್ಯುತ್ತರ. ಕಾಲವಿಂದೆ ಕೆಡಿಮುಟ್ಟು ಮಾಡಿದ ಲೇಸು ಒಂದುದಿನ ಉದಾಸವ ಮಾಡಿದರೆ ಅದೆಲ್ಲವು ವ್ಯರ್ಥವಾಗಿ ಹೋಹುದು ಕೇಳಯ್ಯ. ಸಾವಿರ ನೋಂಪಿಯ ನೋಂತು ಒಂದು ಬಾರಿ ಹಾದರವನಾಡಿದರೆ ಆ ನೋಂಪಿ ಎಲ್ಲವು ನೀರೊಳಗೆ ನೆರೆದು ಹೋಹಂತೆ ಕೇಳಯ್ಯ. ನಾನೆಷ್ಟ ಭಕ್ತಿಯ ಮಾಡಿದರೇನು?, ನಿಮ್ಮ ಶರಣರ ಮನವೆಳ್ಳನಿತು ನೊಂದರೆ ಎನ್ನ ಭಕ್ತಿಯ ಅಭಿಮಾನ ಹೋಯಿತ್ತು. ಅಯ್ಯ ಕೂಡಲಸಂಗಮದೇವ ನಿಮ್ಮ ಶರಣರ ಮುನಿಸನಾವ ಪರಿಯಲ್ಲಿ ತಿಳುಹುವೆ ಹೇಳಾ ಎಲೆ ಪ್ರಭುವೇ ॥ ೭೨ ॥

ಇದಕ್ಕೆ ಪ್ರಭುದೇವರ ಪ್ರತ್ಯುತ್ತರ. ಎಡದ ಕಾಲದಲೊದ್ದರೆ ಬಲವ ಕಾಲ ಹಿಡಿವುದು. ಬಲದ ಕಾಲಿಲೊದ್ದರೆ ಎಡವ ಕಾಲ ಹಿಡಿವುದು. ತ್ರಾಹಿ. ತಪ್ಪೆನ್ನದು. ಗುಹೇಶ್ವರನ ಶರಣ ನೊಡಗೊಂಡು ಬಾರಯ್ಯ ಸಂಗನ ಬಸವಣ್ಣಾ ॥ ೭೩ ॥

ಇದಕ್ಕೆ ಬಸವರಾಜದೇವರು ಮಹಾ ಶಿವಗಣಂಗಳಿಗೆ ಬಂದು ಮುನಿಸ ತಿಳುಹಿ ಕರೆವ ಪ್ರಸ್ಥಾವದ ವಚನ॥

ತೊತ್ತಿನ ತೊತ್ತಿನ ಮುರಿದೊತ್ತಿನೊಡನೆ ಮುನಿವುದು ನಿಮಗೆ ಗುಣವೆ ಅಯ್ಯ? ಅಯ್ಯ ಅಯ್ಯ, ನಿಮ್ಮ ಧರ್ಮದವ ನಾನಯ್ಯ. ಒಮ್ಮೆ ಕೈಪಿಡಿಯಾಡಿ ಕರುಣಿಸಯ್ಯ. ಕೂಡಲ ಸಂಗಮದೇವ ಇಲಿಗಂಜಿ ಮನೆಯ ಸುಡುವರುಂಟೆ? ॥೭೪॥

ಮತ್ತಂ, ಅನು ಭಕ್ತನಲ್ಲ. ಅನು ಯುಕ್ತನಲ್ಲ. ನೀವು ಮಾಡಿದ ಸೂತ್ರದ ಬೊಂಬೆ ನಾನಯ್ಯ. ಎನಗೆ ಬೇರೆ ಸ್ವತಂತ್ರ ಉಂಟೆ? ನೀವೆನ್ನ ಮಾನಾಭಿಮಾನಕ್ಕೆ ಒಡೆಯರಾದ ಬಳಿಕ ಎನ್ನ ತಪ್ಪ ಲೆಕ್ಕಿಸದೆ ಬಿಜಯಂಗೈವುದಯ್ಯ ಕೂಡಲ ಸಂಗಮದೇವ. ॥೭೫॥

ಮತ್ತಂ॥ ಎನ್ನ ಭಕ್ತಿ ಎಲವದ ಕಾಯ ಫಲದಂತೆ ನೋಡಯ್ಯ. ಹೊರಗೆ ಹೆಂಸು ಒಳಗೆ ಬೂರವಯ್ಯ. ನಿಮ್ಮ ದೇವರೆಂದು ಪೂಜಿಸಿ ಮಾನವರೆಂದು ಮರೆವೆನು. ಸಗುಣ ನಿರ್ಗುಣವೆರಡು ಅಳವಡದ ಸಂದೇಹಿ ನಾನಯ್ಯ. ಕೂಡಲ ಸಂಗಮದೇವ ಎನ್ನಪರಾಧವ ಸೈರಿಸುವರೆ ನೀವಲ್ಲದೆ ಮತ್ತಾರನು ಕಾಣೆ. ಶರಣಾರ್ಥಿ. ಕೃಪೆಯಿಂದ ಕರುಣಿಸಯ್ಯ ॥೭೬॥

ಇದಕ್ಕೆ ಶರಣರ ಪ್ರತ್ಯುತ್ತರ॥

ಸೊಡ್ಡಳಬಾಚರಸರ ವಚನ॥

ಹಿಡಿದು ಬಿಟ್ಟ ಬಳಿಕ ಅಂತಿರಬೇಕಲ್ಲದೆ ಇನ್ನು ಹಿಡಿದು ತಪ್ಪಿದ ವಸ್ತುವ ಅರಸಿ ಹಿಡಿಯಲುಂಟೆ? ಮುನಿದು ಹೂವಿನೊಳಿಟ್ಟು ಒಸದು ಆನೆಯನೇರಿಸಿಹೆನೆಂದಡೆ ಶಿವಶರಣರ ಮನಸ್ಸು ತಿಳಿಯದು ನೋಡಾ. ಒಡೆದ ಮುತ್ತು ನಾಣ್ಯಕ್ಕೆ ಸಲ್ಲದು. ಒಡೆದ ಹಾಲು ಅವ್ಯತಕ್ಕೆ ಸಲ್ಲದು. ನಾವೇಕಯ್ಯ? ನಿಮಗೆಂದು ಸೊಡ್ಡಳನ ಶರಣರು ನಿರೂಪವ ಕೊಡಲು ಎನ್ನ ಪರಮಾರಾಧ್ಯರು ಸಂಗನಬಸವಣ್ಣ ತಿಳುಹುತಿರ್ದನು ॥೭೭॥

ಇದಕ್ಕೆ ಬಸವರಾಜದೇವರ ಪ್ರತ್ಯುತ್ತರ.

ಎಡದ ಪಾದದಲೊದ್ದರೆ ಬಲದ ಪಾದವ ಹಿಡಿವೆ. ಬಲದ ಪಾದದಲೊದ್ದರೆ ಎಡದ ಪಾದವ ಹಿಡಿವೆ. ತ್ರಾಹಿ ತ್ರಾಹಿ. ತಪ್ಪೆನ್ನದು. ಒಪ್ಪಿ ನಿಮ್ಮದು. ಕೂಡಲಸಂಗಮದೇವ ನಿಮ್ಮ ಕರುಣದ ಕಂದ ನಾನು.

ಮತ್ತಂ, ಎನ್ನಂತರಂಗ ನೀವಯ್ಯ. ಎನ್ನ ಬಹಿರಂಗ ನೀವಯ್ಯ! ಎನ್ನರಿವು ನೀವಯ್ಯ! ಎನ್ನ ಮರಹು ನೀವಯ್ಯ! ಎನ್ನ ಭಕ್ತಿ ನೀವಯ್ಯ ಎನ್ನ ಯುಕ್ತಿ ನೀವಯ್ಯ! ಎನ್ನ ಆಲಸ್ಯ ನೀವಯ್ಯ! ಎನ್ನ ಪರವಶ ನೀವಯ್ಯ. ಸಮುದ್ರವ ಹೊಕ್ಕು ಕಾಲು ಒಳದಲ್ಲಿ ಕೊರತೆಯನರಸುವಿಕೆ ಆ ಸಮುದ್ರವು? ಎನ್ನ ಲೇಸು ಹೊಲ್ಲೆಯವೆಂಬುದ ನೀವೆ ಬಲ್ಲೀ. ಇದಕ್ಕೆ ನಿಮ್ಮ ಪಾದನೆ ಸಾಕ್ಷಿ, ಎನ್ನ ಮನವೆ ಸಾಕ್ಷಿ ಕೂಡಲಸಂಗಮದೇವಾ. ॥೭೯॥

ಇದಕ್ಕೆ ಚನ್ನಬಸವರಾಜದೇವರ ವಚನ. ಆರಿಗೆ ಮಾಡಬಹುದಯ್ಯ ಸದ್ಭಕ್ತಿ ಎಂಬುದನು? ಆರಿಗೆ ತಿಳಿವುದಯ್ಯ ಶಿವಜ್ಞಾನದ ಸೆರಗು? ನಿರಾಳದ ಸಿಂಹಾಸನದ ಮೇಲೆ ನಿರವಯ ಬಂದೆರಗಿದರೆ ನಿರಾಕಾರದ ಪದಾರ್ಥವ ತಂದರ್ಪಿಸಿ ಪ್ರಸನ್ನವ ಹಡೆವ ಸಾಕಾರ ಸಿಂಹಾಸನದ ಮೇಲೆ ಮೂರ್ತಿಗೊಂಡ ಸಂಗಮನಾಥ ವಸನಿದೆದ್ದು ಹೋದರೆ ತನುವಿನೊಳಗೆ ತನುವಾಗಿ ಹೊಕ್ಕು ಮನದೊಳಗೆ ಮನವಾಗಿ ಹೊಕ್ಕು ಭಾಷದೊಳಗೆ ಭಾವವಾಗಿ ವೇಧಿಸಿ ಶಿವಶರಣರ ವಸನದ ಕಂದು ಕಲೆಯ ಕಳೆದು ತನ್ನತ್ತ ತಿರುಗಿಸಿ ಪ್ರಸನ್ನವಡೆದ ಇಂತೀ ಉಭಯದ ನಿರ್ಣಯದಲ್ಲಿ ನಿಸ್ಸೀಮನಾದ ಕೂಡಲಸಂಗಮದೇವರ ಶರಣ ಬಸವಣ್ಣಂಗೆ ತ್ರಿಜಗದೊಳಗೆ ಆರನು ಸರಿಗಾಣೆನು. ॥೮೦॥

ಮತ್ತಂ॥ ರಣವನರ್ಚಿಸಿ ಭೂತಕ್ಕೆ ಬಲಿಯ ಕುಡುವ ಕಲಿಯ ಮನದ ಕೊನೆಯ ಮೊನೆಯ ಮೇಲಿಪ್ಪಂತೆ ಸಮಯಾಚಾರವ ಮಾಡಬೇಕು. ಮಾಡಿಹೆನೆಂಬುದು ಸಾಮಾನ್ಯವೆ? ಇದು ಕಾರಣ ಕೂಡಲಚನ್ನಸಂಗಯ್ಯ ಸಮಯ ಭಕ್ತಿ ಸಂದಿತ್ತು ಸಂಗನಬಸವಣ್ಣಂಗೆ ॥೮೧॥

ಇಂತು ಬಸವರಾಜದೇವರು ಬೇಡಿಕೊಳ್ಳಲು, ಮಹಾಗಣಂಗಳು ಮುನಿಸು ತಿಳಿದು, ಪ್ರಸನ್ನರಾದ ಪ್ರಸ್ಥಾವದಲ್ಲಿ ಚಿಕ್ಕದಣ್ಣಾಯಕರ ವಚನ॥

ಭಕ್ತಿಯುಕ್ತಿಯ ಹೊಲಬ ಮೂರು ಲೋಕದೊಳಗೆ ಬಲ್ಲವರನಾರನು ಕಾಣೆನು. ಲಿಂಗದಲ್ಲಿ ಭಕ್ತಿಯ ಮಾಡಿದರೆ ಭವ ಹರಿಯುವೆಂದು

ಜಂಗಮ ಮುಖ ಲಿಂಗವೆಂದರಿದು ಅರ್ಚಿಸಿ ಪೂಜಿಸಿ ದಾಸೋಹವ ಮಾಡಿ, ಪ್ರಸನ್ನತೆಯ ಹಡೆದು ಆ ಪ್ರಸನ್ನತೆಯ ರುಚಿಯನುಪವಿಸಬಾರದು. ಆ ಬಸವಣ್ಣನ ಭಕ್ತಿ ಪ್ರಸಾದವ ಕೊಂಡು, ನಾನು ಬದುಕಿದೆನು. ಆ ಬಸವಣ್ಣನ ಪ್ರಸಾದವ ಕೊಂಡು, ಅಲ್ಲಮಪ್ರಭು ತೃಪ್ತನಾದನು. ಅಲ್ಲಮಪ್ರಭು ಕೊಂಡ ಪ್ರಸಾದದ ತೃಪ್ತಿ ಲಕ್ಷವ ಮೇಲೆ ತೊಂಭತ್ತಾರು ಸಾವಿರ ಜಂಗಮಕ್ಕೆ ತೃಪ್ತಿಯಾಯಿತ್ತು. ಆ ಲಕ್ಷವ ಮೇಲೆ ತೊಂಭತ್ತಾರು ಸಾವಿರ ಜಂಗಮ ತೃಪ್ತಿಯಾದಲ್ಲಿ ಸಚರಾಚರವೆಲ್ಲ ಕೂಡಿ ತೃಪ್ತಿಯಾಯಿತ್ತೆಂದರೆ ಇಲ್ಲವೆಂದು ಬಿಜ್ಜಳರಾಯ ತರ್ಕಿಸಲು ಕಪ್ಪೆಯ ಒಡಲೊಳಗೆ ಪ್ರಭುವಿನ ಪ್ರಸಾದವ ತೋರಿದ ಬಸವಣ್ಣನು? ಇದು ಕಾರಣ ಕೂಡಲಚನ್ನಸಂಗಮದೇವರಲ್ಲಿ ಬಸವಣ್ಣ ಪ್ರಭುದೇವರ ಪ್ರಸಾದದ ಘನವು ತ್ರಿಲೋಕ್ಯವಲ್ಲಿ ವಿಖ್ಯಾತವಾಯಿತ್ತು. ॥೮೨॥

ಇದಕ್ಕೆ ಪ್ರಭುದೇವರ ವಚನ॥

ಲಿಂಗಜಂಗಮವೆಂಬ ಸಕೀಲವನರಿದು ಲಿಂಗಾರ್ಚನೆಯ ಜಂಗಮಾರ್ಚನೆಯ ಮಾಡಲು, ಆ ಲಿಂಗವೆ ಜಂಗಮದೊಳಗಡಗಿ ಆ ಜಂಗಮವೆ ಪರಾತ್ಪರವೆಂದರಿದು, ತೋರಿದ ಆ ಜಂಗಮವೆಂಬ ಘನವು ನಿಮ್ಮೊಳಗಡಗಿದ ಕಾರಣ ಗುಹೇಶ್ವರ ನಿಮ್ಮ ಅನುವನರಿದು ಸಂಗನಬಸವಣ್ಣನು ತನ್ನ ಪ್ರಸಾದವನಿಕ್ಕಿದರೆ ನಿಮ್ಮ ಪ್ರಮಥರೆಲ್ಲರು ನಿಮ್ಮ ಜಯ ಜಯ ಎನುತಿರ್ದ ಕಾರಣ ನಾನು ಬಸವಣ್ಣಂಗೆ ನಮೊ ನಮೊ ಎನುತಿರ್ದೆನು. ॥೮೩॥

ಇದಕ್ಕೆ ಬಸವರಾಜದೇವರ ಪ್ರತ್ಯುತ್ತರ॥

ತೊರೆಯುದಕವ ಕೆರೆಯುಂಡು ತೃಪ್ತನಾಗಲು, ಆ ಕೆರೆಯುದಕವ ಹಲವು ಕೆಲವು ಸ್ಥಾವರ ಜಂಗಮಂಗಳುಂಡು ತೃಪ್ತಿವಡೆದಂತೆ ಪ್ರಭುದೇವರ ತೃಪ್ತಿ ಅಸಂಖ್ಯಾತ ಮಹಾಗಣಂಗಳೆಲ್ಲಕ್ಕೆ ತೃಪ್ತಿಯಾಯಿತ್ತು ನೋಡಾ. ಬಸಿರ ಹೆಂಗಸು ತೃಪ್ತಿಯಾದಲ್ಲಿ ಒಡಲ ಶಿಸು ತೃಪ್ತಿಯಾವಂತೆ ಸಚರಾಚರವೆಲ್ಲವು ತೃಪ್ತಿಯಾದವು ನೋಡಾ. ಕೂಡಲಸಂಗಮದೇವ ನಿಮ್ಮ ಶರಣ ಪ್ರಭುದೇವರ ಪ್ರಸಾದದ ಮಹಿಮೆಗೆ ನಮೊ ನಮೊ ಎಂಬೆನು. ॥೮೪॥

ಇದಕ್ಕೆ ಪ್ರಭುದೇವರು ಬಸವಣ್ಣನ ಸ್ತೋತ್ರಮಂ ಮಾಡುವ ವಚನ॥

ಲಿಂಗದ ಪೂರ್ವಾಶ್ರಯವ ಕಳೆಯಲೆಂದು ಲಿಂಗಪ್ರಾಣಿಯಾದ. ಜಂಗಮದ ಪೂರ್ವಾಶ್ರಯವ ಕಳೆಯಲೆಂದು ಜಂಗಮಪ್ರಾಣಿಯಾದ. ಪ್ರಸಾದದ

ಪೂರ್ವಾಶ್ರಯವ ಕಳೆಯಲೆಂದು ಮಹಾಪ್ರಸಾದಿಯಾದ. ಇಂತೀ ತ್ರಿವಿಧದ ಪೂರ್ವಾಶ್ರಯವ ಕಳೆಯಲೆಂದು ಬಸವಣ್ಣನು ಮರ್ತ್ಯಕ್ಕೆ ಬಂದನು ಕಾಣಾ ಗುಹೇಶ್ವರಾ. ॥೮೫॥

ಮತ್ತಂ॥ ಆದಿ ಆಧಾರಮುಂ ಮಾಡಿ, ಅಜಕೋಟಿ ಬ್ರಹ್ಮಾಂಡಂಗಳಂ ಮಾಡಿ, ಈರೇಳು ಭುವನಂಗಳಂ ಮಾಡಿ, ಹರ ಲೀಲೆಯಾಡುವಲ್ಲಿ ಹರಿ ವಿರಿಂಚಿಗಳ ಸುರಾಸುರರ ಶಿರೋಮಾಲೆ ಇಕ್ಕಿ ಕೊಂಡಾಡುವಲ್ಲಿ ಪಾತಾ ರಸಾತಳಕ್ಕಿಳಿದು ಭುವನ ಜಲಮಯವಾದಲ್ಲಿ ಹಸ್ತ ಮಕುಟ ತಾಗಿ ಸಕಲ ಲೋಕಂಗಳೆಲ್ಲವು ನಿರವಯಲಾದಲ್ಲಿ ನಿಜ ಬೆಳಗಿನೊಳಗಣ ಬೆಳಗಿನೊಳಗೆ ಸೋಹಂ ಮೆನಲು ವಿಚಾರದಿಂದೆ ಘನ ಮನವಾದಂದು ಗುಹೇಶ್ವರ ನೀನೆ ಲಿಂಗ ನಾನೆ ಜಂಗಮ ಬಸವಣ್ಣನೆ ಭಕ್ತಾ ॥೮೬॥

ಮತ್ತಂ॥ ಭೂವಳಯ ಮಧ್ಯದಲ್ಲಿ ಎಂಟಿಸಳ ಮೇಲೆ ಸುಳಿದಾಡುವನ ಉಚ್ಚರಲೀಯ್ಯ. ಕಂಟಕ ವಿರಹಿತ ನಂಟರಿಗೆ ವಿರೋಧಿ. ಇಳೆಯ ಗುಣ ವಿರಹಿತನು. ಗಗನ ಕಮಲ ಕುಸುಮ ಪರಿಣಾಮದೊಳಗೆ ಪರಿಣಾವಿ ನೋಡಾ. ತಾನೆಂಬುದ ಹುಸಿ ಮಾಡಿ, ಲಿಂಗಜಂಗವು ದಿಟವೆಂದು ಸಕಲ ಸುಖಭೋಗಂಗಳನರ್ಪಿಸಿದ ಗುಹೇಶ್ವರ ನಿಮ್ಮ ಶರಣ ಬಸವಣ್ಣಂಗಲ್ಲದೆ ಇನ್ನಾರಿಗೆಯು ಅಳವಡದು. ॥೮೭॥

ಮತ್ತಂ॥ ಹಾಳಮನೆಯ ಹೊಸತಿಲಲ್ಲಿ ನಿಂದಿದ್ದು ಆರು ಬಾರದ ಬಟ್ಟೆಯ ನೋಡುತ್ತ ಆರಿಂಗಾಗದಿರವು ನಮಗಾಯಿತ್ತೆನುತಲಿ ಆರಯ್ಯ ಬಲ್ಲವರಿಗೆ ಶಂಕೆ ಇಲ್ಲ. ಕಾಲಿಲ್ಲದೆ ಬಂದವರು ಕೈಯಿಲ್ಲದೆ ಕೊಂಬವರು ಮೇಲು ತಲೆ ಇದ್ದವರು ನುಡಿವಾಗ ಮಾರಾರಿಯು ಬೆಳಸನಾರಯ್ಯ ಸಂತವಿಡುವರೆಂದರೆ ಸಾರಾಯಂಗಲ್ಲದೆ ಮತ್ತಿನ್ನಾರಿಂಗಹುದು ಹೇಳಾ? ಸಂತೆಯ ಗುಡಿಸಿಲ ಸೂಳೆಗೆ ಕೊಂತವ ಕೊಂಡರೆ ಎಂತು ಬಚ್ಚಡಬಹುದು? ಮರುಳುತನವು. ಶಂಕಿಸಿತು ಎನ್ನ ಮನವು. ಹಿಂದು ಮುಂದು ಕೂಡುವರಿಲ್ಲೆಂದು ಉಮ್ಮಳದಲ್ಲಿ ಗುಹೇಶ್ವರ ನಿಮ್ಮ ಶರಣ ಬಸವಣ್ಣನ ಪ್ರಸಾದವ ಕೊಂಡು ನಿರುಪಮ ಸುಖಿಯಾದೆನು. ॥೮೮॥

ಮತ್ತಂ॥ ಆದಿಯಲ್ಲಿ ಬಸವಣ್ಣನುತ್ಪತ್ಯವಾದ ಕಾರಣ ನಾಗಲೋಕದ ನಾಗಗಣಂಗಳಿಗೆ ಬಸವಣ್ಣನ ಪ್ರಸಾದ. ಮರ್ತ್ಯಲೋಕದ ಗಣಂಗಳಿಗೆ

ಬಸವಣ್ಣನ ಪ್ರಸಾದ. ದೇವಲೋಕದ ದೇವಗಣಂಗಳಿಗೆ ಬಸವಣ್ಣನ ಪ್ರಸಾದ. ಗುಹೇಶ್ವರ ನಿಮ್ಮಾಣೆ ಎನಗು ನಿನಗು ಬಸವಣ್ಣನ ಪ್ರಸಾದ ॥೮೯॥

ಎತ್ತಿದ ಮಣಿಮಕುಟದ ಮೇಲಣ ಸುತ್ತಿದ ನಾಗ ಭೂಷಣದ ಪೆಡೆಯೊಂದು ಕೋಟಿ. ಶಿವನಿಪ್ಪ ನೆಲೆಯನಾರು ಅರಿಯರಯ್ಯ! ಇಕ್ಕಿದ ಕರೋಟಿ ಮಾಲೆಯೊಳಗಿಪ್ಪ ರುದ್ರ ಕೋಟಿ. ಶಿವನಿಪ್ಪ ನೆಲೆಯನಾರು ಅರಿಯರಯ್ಯ. ಇಕ್ಕಿದ ರುಂಡಮಾಲೆಯೊಳಗಿಪ್ಪ ಮುಂಡಧಾರಿಗಳೊಂದು ಕೋಟಿ. ಶಿವನಿಪ್ಪ ನೆಲೆಯನಾರು ಅರಿಯರಯ್ಯ. ಖಂಡ ಕಪಾಲವ ಧರಿಸಿಪ್ಪ ಕಪಾಲಧಾರಿಗಳೊಂದು ಕೋಟಿ. ಶಿವನಿಪ್ಪ ನೆಲೆಯನಾರು ಅರಿಯರಯ್ಯ. ಗುಹೇಶ್ವರ ನಿಮ್ಮ ಪೂರ್ವಾಚಾರಿ ಸಂಗನ ಬಸವಣ್ಣ ಸೊಬ್ಬನೆ ಬಲ್ಲನು ॥೯೦॥

ಮತ್ತಂ॥ ನಡುಜಲಕ್ಕೆ ಇದಿರಾಗಿ ಹರಿವ ಸ್ವಾಮಿಯ ಬರವ ಕಂಡು ಬಿಡದೆ ಬೆಂಬತ್ತಿಸುವ ಪರಿಯ ನೋಡಾ! ನಡೆ ನುಡಿ ಚೈತನ್ಯ ಒಡಲಸೊಂದನು ಮಾಡಿ ಬಿಡದೆ ಬೇದಿಸುವ ಬೆಡಗ ಕಂಡೆನಯ್ಯ. ಕಡೆಗೆ ಸೂಸದ ವೃಷ್ಟಿ ಹಿಡಿದು ತೊಲಗದ ಹಸ್ತ ಬಿಡಬೇಡ. ತನಗೆನ್ನದ ಸಜ್ಜನ ಮಡದಿ ತನ್ನ ಗಂಡನ ಅಡಗಿ ಕೂಡುವ ಭೇದ ನಡುವಿರಳು ಕೂಡಿ ನಿಮಿರಿ ಬೆಳಗಾಯಿತ್ತು. ಮಾಡಿ ನೀಡುವವನ ಕಂಡು ನಾಡುಬೀಡೆಲ್ಲ ನೆರೆದು ಕೋಡಕೈಯಲ್ಲಿ ಕೊಟ್ಟರೆ ತೃಪ್ತರಾಗಿ ಮಾಡುವರ ಹರಸುವರು. ನೋಡುವರ ಮಣದಣಿಯ ಕೂಡುವರು. ಕೋಟಿ ಸಹಜ ಒಂದೆ ಎಂದು ಕೈಯಲ್ಲಿ ಕೊಟ್ಟರೆ ಜೋಡ ತೊಡೆದಾತನ ವೈಯ್ಯಲ್ಲಿ ಕೂಡಿ ಕಾಯ ಫಲವಿಲ್ಲದುದ ಕಂಡು ನೋಡಿರೆ. ಮುಸಿ ಮುಟ್ಟಿದ ಮಹಂತನ ಬೇಡುವೆನಾತನ ಕರುಣವನು ಪಾಡುವೆ. ನೊಸಲಲ್ಲಿ ನೋಡುವೆ. ಗುಹೇಶ್ವರನ ಶರಣ ಬಸವಣ್ಣಂಗೆ ನಮೊ ನಮೊ ಎಂಬೆನು ॥೯೧॥

ಮತ್ತಂ॥ ಯುಗದ ಉತ್ಸವವ ನೋಡಿರೆ. ಪಂಚಶಕ್ತಿಗಳಿಗೆ ಪಂಚಪ್ರಧಾನರು ಅವರಾಗು ಹೋಗನಾ ಶರಣನೆ ಬಲ್ಲ. ಆ ಶರಣ ತಾನೆ ತಾನಾಗಿ ಇರು ದರುಶನಕ್ಕೆ ಯಾಚಕನಲ್ಲ. ಮೂರು ದರುಶನಕ್ಕೆ ಮುಯ್ಯಾನುವನಲ್ಲ. ವೇದ ಶಾಸ್ತ್ರ ಪುರಾಣ ಛಂದಸ್ಸು ನಿಘಂಟುಗಳೆಂಬುದಕ್ಕೆ ಭೇದಕನಲ್ಲ. ಅದೆಂತೆಂದೊಡೆ, ಅವರಂಗದ ಮೇಲೆ ಗುರುವಿಲ್ಲ, ಲಿಂಗವಿಲ್ಲ, ಜಂಗಮವಿಲ್ಲ, ಪ್ರಸಾದವಿಲ್ಲ, ಪಾದೋದಕವಿಲ್ಲದ ಭಾಷೆ. ಆ ಗುರು ಲಿಂಗ ಜಂಗಮ ಪ್ರಸಾ

ದ ಪಾವೋದಕ ಏಕಾರ್ಥವಾದ ಕಾರಣ ಪ್ರಾಣಿಗಳೆಲ್ಲವು ಪ್ರಣಾಮಂಸ್ಥೆವ
ತ್ತಿರ್ದವು. ಜೀವಿಗಳೆಲ್ಲವು ಜಯ್ಯ ಜಯ್ಯ ಎನುತಿರ್ದವು. ಆತ್ಮಂಗಳೆಲ್ಲವು
ಅನ್ನವ ಬೇಡುತಿರ್ದವು. ಗುಹೇಶ್ವರ ಸಂಗನಬಸವಣ್ಣನ ಪಾದಕ್ಕೆ ಈರೇಳು
ಲೋಕವೆಲ್ಲವು ಜಯ ಜಯ ಎನುತ್ತಿರ್ದವು ॥೯೨॥

ಇದಕ್ಕೆ ಬಸವರಾಜದೇವರು ಪ್ರಭುದೇವರ ಸ್ತೋತ್ರಮುಂ ಮಾಡುವ
ವಚನ॥

ಹೊನ್ನಿನ ಆಪ್ಯಾಯನಕ್ಕೆ ಬೋಳಾದವನಲ್ಲ. ಮಣ್ಣಿನ ಆಪ್ಯಾಯ
ನಕ್ಕೆ ಬೋಳಾದವನಲ್ಲ, ಹೆಣ್ಣಿನ ಆಪ್ಯಾಯನಕ್ಕೆ ಬೋಳಾದವನಲ್ಲ. ಕೂಡ
ಲಸಂಗಮದೇವರಲ್ಲಿ ಎನಗಾರು ಇಲ್ಲವೆಂದು ಬೋಳಾದ ಎನ್ನ ಪ್ರಭುದೇ
ವರು. ॥೯೩॥

ಮತ್ತಂ॥ ಶ್ರೋತ್ರದಲ್ಲಿ ಬ್ರಹ್ಮಚಾರಿಯಾಗಿರಬೇಕು ಶರಣನು. ತ್ವಕ್ಕಿ
ನಲ್ಲಿ ಬ್ರಹ್ಮಚಾರಿಯಾಗಿರಬೇಕು ಶರಣನು. ನಾಸಿಕದಲ್ಲಿ ಬ್ರಹ್ಮಚಾರಿಯಾ
ಗಿರಬೇಕು ಶರಣನು. ನೇತ್ರದಲ್ಲಿ ಬ್ರಹ್ಮಚಾರಿಯಾಗಿರಬೇಕು ಶರಣನು.
ಜಿಹ್ವೆಯಲ್ಲಿ ಬ್ರಹ್ಮಚಾರಿಯಾಗಿರಬೇಕು ಶರಣನು. ಇಂತೀ ಪಂಚೇಂದ್ರಿ
ಯಂಗಳಲ್ಲಿ ಬ್ರಹ್ಮಚಾರಿಯಾಗಿ ಕೂಡಲಸಂಗಮದೇವರಲ್ಲಿ ಎನ್ನನಾಗು
ಮಾಡಲಿಕ್ಕೆ ಬ್ರಹ್ಮಚಾರಿಯಾದನು ಪ್ರಭುದೇವರು ॥೯೪॥

ಮತ್ತಂ। ಬಸುರೆ ಬಾಯಾಗಿ ಬಾಯೆ ಬಸುರಾಗಿ ಇಪ್ಪುದ ತೊಪೆದ
ಕಂಡೇ ತಲೆಯಾಗಿ, ತಲೆಯೆ ಕಣ್ಣಾಗಿರಿಸಿದ ಕಾಲೆ ಕೈಯ್ಯಾಗಿ ಕೈಯೇ
ಕಾಲಾಗಿರಿಸಿದ, ನೆಲ ಸುಟ್ಟು ನೀರೆಯನುಡುಗೊರೆಯ ಕೊಟ್ಟನು.
ಮಥನವಿಲ್ಲದ ಸಂಗ ಸುಖವ ಎನಗೆ ತೋರಿದನು ಕೂಡಲಸಂಗಮದೇವ
ಪ್ರಭುವಿನ ಶ್ರೀಪಾದಕ್ಕೆ ನಮೋ ನಮೋ ಎನುತಿರ್ದೆನು. ॥೯೫॥

ಮತ್ತಂ, ವೀರ ದನುಜರೆಲ್ಲ ಧಾರುಣಿ ಎಂಬುದರೊಳಗೆ ಸಾಗರ
ವಾಗಿದ್ದುದನಾರು ಅರಿಯರಲ್ಲ. ದ್ವಾರಾವತಿ ಪುರದೊಳಗೆ ಪರವು ಒಂದಿ
ದ್ದರೆ ಶರೀರ ಸಂಬಂಧವ ಮಾಡಲರಿಯರಲ್ಲ. ಕಳಗಸವ ಕಳೆದುಕೊಂಡು
ಪರಶುರಾಮನ ಗೆಲಿದು ಸುರರೊಳಗೆ ಸುಳಿದಾಡಲರಿಯರಲ್ಲ. ವಾರುಧಿಯ
ನೇರಿಕೊಂಡು ಮರಣವೆಂಬುದ ನಿಲಿಸಿ ತ್ರಿಪುರವ ಮೂರ್ತಿಗೊಳಿಸಲರಿ
ಯರಲ್ಲ. ಪೋರುವೆಂಬುವ ಹೊಕ್ಕು ನೂರೆಂಟನೆಣಿಸಿಕೊಂಡು ನಿರಾಕಾ

ರವಲಡಗುವರಿನ್ನಾರು ಹೇಳಾ? ನಾಸಿರದ ಮೇಲೆ ನೂರೆಂಭತ್ತೆಂಟು ರಾಶಿ
ಪರುಷವೇದಿಗಳಾಗಲರಿಯರಲ್ಲ. ಕೂಡಲಸಂಗನ ಶರಣ ಸಂಬಂಧವು ಪ್ರಭು
ವಿಂಗಲ್ಲದೆ ಮತ್ತಾರಿಗು ಅಳವಡದು ॥೯೬॥

ಮತ್ತಂ, ನೀಲದ ಮಣಿಯೊಂದು ಮಾಣಿಕ್ಯವ ನುಂಗಿದರೆ ವಜ್ರ
ಬಂದು ಅದ ಬೆಂದು ಗಳಿಸಿತ್ತು ನೋಡಾ! ಅಡಗಿರ್ದ ಮಾಣಿಕ್ಯ ನೀಲದ
ತಲೆಯ ಮೆಟ್ಟಿ ಆನಂದ ನಾಂಟ್ಯವನಾಡುತಿದ್ದಿತ್ತು. ಅಂಬರದೊಳಗಣ
ಮುಗ್ಧೆ ಕಂಗಳು ಮುತ್ತಿನ ಮಣಿಯ ಮಥನವಿಲ್ಲದೆ ನುಂಗಿ ಉಗುಳು
ತಿದ್ದಳು. ಲಿಂಗಜಂಗಮವೆಂಬುದ ಇಂದರಿದು ಸುಖಿಯಾದೆನು ಕೂಡಲ
ಸಂಗಮದೇವರಲ್ಲಿ ಪ್ರಭುವಿನ ಕೃಪೆಯಿಂದ ನಾನು ಬದುಕಿದೆನು. ॥೯೭॥

ಮತ್ತಂ, ನೀರ ಒರಳ ಮಾಡಿ ನೆಳಲೊನಕೆಯ ಮಾಡಿ, ಆಕಾರವಿಲ್ಲ
ದಕ್ಕಿಯ ಥಳಿಸುತ್ತಿರಲು, ಮೇಲುಗಿರಿಯಾಕಳ ಕರೆದು ಕ್ಷೀರದಲ್ಲಿ ಅಡಿಗಿಯ
ಮಾಡಿ, ನಾರಿಯ ಬಸುರೊಳಗೆ ಗಂಡ ಬಂದು ಕುಳ್ಳಿರಲು, ಮಾಡಿದಡಿಗೆಯ
ಮನ ಉಂಡು ಹೋಗಲು ಮೇಲು ಕೈಯ್ಯ ತೆರೆದು ಸಂತೊಷದಿಂದೆ ಪ್ರಾಣ
ಸಖಿ ತನ್ನ ಗಂಡಂಗೆ ನೀಡುತ್ತಿರಲು ಅರಳ ಹುಟ್ಟಿಗೆಯಲ್ಲಿ ಹೊರಳಿ ಮಾಡುವ
ಭೇದ ಮರಳಿ ಕೂಡಲಿಕೆಂತು ಋಣವಿಲ್ಲ. ಕೆರಳಿ ಮುನಿದು ಘುಡಿಘುಡಿಸಿ ಗರ್ಜಿ
ಸಲೊಡನೆ ತೆರಳಲಮ್ಮದೆ ಅಂಜಿ ಒಕ್ಕಗಡಗಿದ ಶರಣ ಸತಿ ಲಿಂಗ ಪತಿ ಎಂಬ
ಭಾಷೆ ನೀವು ಹರನ ಬಟ್ಟೆಯ ನೋಡಿ ಸೂಯ್ಯಬೇಡ ಜನನ ಮರಣ ವಿರ
ಹಿತ ಕೂಡಲ ಸಂಗನ ಅನುಭಾವ ಪ್ರಭುವಿನ ಶ್ರೀಪಾದದೊಳಗಿದ್ದು
ಸುಖಿಯಾದೆನು ॥೯೮॥

ಪ್ರಭುದೇವರು ಚಿಕ್ಕದಣ್ಣಾಯಕರ ಹೊಗಳಿದ ವಚನ. ಬಸವಣ್ಣ,
ನಿನ್ನ ಹೊಗಳಲೆಡೆಯಂತಿರಲಿ. ಗುರುವಾಗಬಹುದು. ಜಂಗಮವಾಗಬಹುದು.
ಇಂತೀ ತ್ರಿವಿಧವು ಆಗಬಹುದು. ನಿನ್ನ ಆಚಾರಕ್ಕೆ ಪ್ರಾಣವಾಗಿ ಎನ್ನ ಜ್ಞಾನ
ಕ್ಕೆ ಆಚಾರವಾಗಿ ಉಭಯ ಸಂಗದ ಸುಖದ ಪ್ರಸನ್ನಕ್ಕೆ ಪರಿಣಾಮ ಪ್ರಸಾದಿ
ಯಾಗಿ ಬಂದ ಘನ ಮಹಿಮನು ಗುಹೇಶ್ವರಲಿಂಗದಲ್ಲಿ ಚೆನ್ನಬಸವಣ್ಣನಾ
ಗಬಾರದು ಕಾಣಾ ಸಂಗನ ಬಸವಣ್ಣಾ ॥೯೯॥

ಮತ್ತಂ, ಪ್ರಕೃತಿಯ ಸುಣವುಳ್ಳನ್ನಕ್ಕರ ಭಕ್ತನಲ್ಲ. ಕಾಮ, ಕ್ರೋಧ,
ಲೋಭ, ಮೋಹ, ಮದ, ಮತ್ಸರವುಳ್ಳನ್ನಕ್ಕರ ಶರಣನಲ್ಲ. ಹಸಿವು
ತೃಷೆ ನಿದ್ರೆ ವಿಷಯವುಳ್ಳನ್ನಕ್ಕರ ಪ್ರಸಾದಿಯಲ್ಲ. ಆಚಾರದಲ್ಲಿ ಅನು

ಭಾವಿ, ಪ್ರಸಾದದಲ್ಲಿ ಪರಿಣಾಮಿ, ಗುಹೇಶ್ವರಲಿಂಗದಲ್ಲಿ ಚನ್ನಬಸವಣ್ಣ ನೆಂಬ ಪ್ರಸಾದಿಗೆ ನಮೋ ನಮೋ ಎನುತಿರ್ದೆನು. ॥೧೦೦॥

ಮತ್ತಂ, ಆದಿವಿಡಿದು ಬಾಹಾತ ಭಕ್ತನಲ್ಲ. ಅನಾದಿವಿಡಿದು ಬಾಹಾತ ಭಕ್ತನಲ್ಲ. ಸ್ಥಲವಿಡಿದು ಬಾಹಾತ ಭಕ್ತನಲ್ಲ. ಲಿಂಗವಿಡಿದು ಬಾಹಾತ ಭಕ್ತನಲ್ಲ. ಶೂನ್ಯಕಾಯವ ನಿಃಶೂನ್ಯಂಗಿಕ್ಕಿ ಪ್ರಾಣಲಿಂಗ ಪ್ರಸಾದವ ಕೊಳಬಲ್ಲನು. ಗುಹೇಶ್ವರ ಲಿಂಗದಲ್ಲಿ ಚನ್ನಬಸವಣ್ಣಂಗೆ ನಮೋ ನಮೋ ಎಂಬೆನು. ॥೧೦೧॥

ಮತ್ತಂ, ಸದ್ಯೋಜಾತ ಶಬ್ದಜ್ಞಾನಿ, ವಾಮದೇವನಃತುರಜ್ಞಾನಿ, ಅಘೋರ ಕೋಪಜ್ಞಾನಿ, ತತ್ಪುರುಷ ಕ್ಷಣಿಕಜ್ಞಾನಿ, ಈಶಾನ್ಯನತೀತಜ್ಞಾನಿ, ಈ ಪರಿಯಲ್ಲಿ ನೋಡಾ ಗುಹೇಶ್ವರಲಿಂಗದಲ್ಲಿ ಅವಿರಳಜ್ಞಾನಿ ಚನ್ನಬ ಸವಣ್ಣನ ಶ್ರೀಪಾದಕ್ಕೆ ನಮೋ ನಮೋ ಎಂಬೆನು. ॥೧೦೨॥

ವೀರಧಾರುಣಿಯೊಳಗೆ ನಾರಿ ಶೃಂಗಾರವ ಮಾಡಿ ಈರೇಳು ಭುವನವ ನಮಗೊಕ್ಯವ ಮಾಡಿ, ಬಿಂದು ಶಕ್ತಿಯ ಭೇದ ಸಂಚ ಯೋಗದ ಸುಖವ ತಂದು ಮೂರ್ತಿಗೊಳಿಸಿದರಾರು? ಒಂದೆರಡರ ನುಡಿಯ ಮತ್ತೊಂದ ಗ್ರಹಿಸಿತ್ತ ಕಂಡೆ. ಬಿಂದುವಿನ ರಸದ ಪರೀಕ್ಷೆಯ ಭೇದವ ಚಂದ್ರಕಾಂ ತದ ಗಿರಿಗೆ ಅರುಣ ಚಂದ್ರನೊಡನೆ ಇಂಬಿನಲ್ಲಿ ಇಪ್ಪ ಪರಿಯ ನೋಡಾ. ಅಂಗೈಯ್ಯ ತಳದೊಳು ಮೇಲೆ ಕಂಗಳಲ್ಲಿ ಉರ ಸನ್ನ ಇಂಬಿನಲ್ಲಿ ನೆಲೆವ ಸುಖ ಆದಿ ಅನಾದಿಯ ಪ್ರತಿಬಿಂಬ ಇಂದೆನಗೆ ತೋರಿತ್ತು ಗುಹೇಶ್ವ ರನ ಶರಣ ಚನ್ನಬಸವಣ್ಣಂಗೆ ಶರಣೆನುತಿರ್ದೆನು. ॥೧೦೩॥

ಮತ್ತಂ, ವಸುಧೆಯ ಮುಟ್ಟದೆ ರಸವನೋಸರಲೀಯದೆ, ರಸದಲ್ಲಿ ಕಟ್ಟ ಬಲ್ಲರೆ ಅದು ಯೋಗ. ಹೊರಗಿದ್ದ ರಸವ ಕಟ್ಟಬಲ್ಲೆನೆಂಬವರೆಲ್ಲ ಆಂಜನಸಿ ದ್ಧರಾಗಿ ಹೋದರು. ಸುಷುಮ್ನಾ ಸೂಕ್ಷ್ಮ ನಿಧಿಯ ಮಧ್ಯದ ಕೂಪ ಕಂಭದ ಮೇಲೆ ಪಂಚೇಂದ್ರಿಯ ಗುಹ್ಯವ ತೊಡೆದು ರಸವ ಕಟ್ಟಬಲ್ಲ ಗುಹೇಶ್ವರನ ಶರಣ ಚನ್ನಬಸವಣ್ಣಂಗೆ ನಮೋ ನಮೋ ಎನುತಿರ್ದೆನು.॥೧೦೪॥

ಚನ್ನಬಸವಣ್ಣನು ಪ್ರಭುದೇವರ ಪೊಗಳುವ ವಚನ ॥

ರೂಪಿಲ್ಲದ ರೂಪು, ನಿಜವಿಲ್ಲದ ನಿಷ್ಪತ್ತಿ, ಸೀಮೆಯ ಮೀರಿದ ನಿಸ್ಸೀಮ, ಗಮನವಿಲ್ಲದಗಮ್ಯ, ನುಡಿಯುಡಿಗಿದ ನಿಃಶಬ್ದ, ಪರವನರಿ

ಯದ ಪರಿಣಾಮಿ, ಕೂಡಲ ಚನ್ನಸಂಗನ ಶರಣ ಪ್ರಭುದೇವರಿಗೆ ನಮೋ ನಮೋ ಎನುತ್ತಿರ್ದೆನು ॥೧೦೫॥

ಒಟ್ಟ ಬಯಲೊಳಗೊಂದು ಐವಾಗಿಲ ಪಟ್ಟಣ. ಆ ಪಟ್ಟಣಕ್ಕೆ ಒಡ ಲಿಲ್ಲದಾತ ಅರಸು ನೋಡಾ. ಆ ಅರಸಂಗೆ ಅರುವರು ಅರಸಿಯರು. ಮೂವ್ವರು ಸ್ವರೂಪಿಯರು. ಮೂವ್ವರು ಕುರೂಪಿಯರು. ಅವರೊಬ್ಬರಿಗೊ ಬ್ಬರಿಗೊಂದೊಂದು ಪರಿಯ ಕೂಟ ನೋಡಾ. ಐವರ ಕಣ್ಣ ಕಟ್ಟಿ ಒಬ್ಬಳ ಸೆರೆದರೆ ಪ್ರತಿ ಇಲ್ಲದ ಸುಖವು ಸಮವಾದ ಕಾರಣ ಕೂಡಲ ಚನ್ನಸಂಗ ನಿಮ್ಮ ಶರಣ ಪ್ರಭುವಿಂಗೆ ನಮೋ ನಮೋ ಎನುತ್ತಿರ್ದೆನು ॥೧೦೬॥

ಚಿಕ್ಕದಣ್ಣಾಯಕರು ಬಸವರಾಜದೇವರ ಹೊಗಳಿದ ವಚನ॥

ಅಂತರಂಗದಲ್ಲಿ ಪ್ರಭುದೇವರನೊಳಕೊಂಡ ಬಹಿರಂಗದಲ್ಲಿ ಎನ್ನ ನೊಳಕೊಂಡ. ಆ ಉಭಯ ಸಂಗದ ಮಧ್ಯದಲ್ಲಿ ನಿಜೈಕ್ಯವಾಗಿರ್ದನು. ಪ್ರಸಾದವಲ್ಲಿ ಪರಮಾನಂದ ಸುಖ. ಅರುಹಿನಲ್ಲಿ ಕುರುಹಳಿದ ಘನದ ನಿಲವು ಕೂಡಲ ಚನ್ನಸಂಗಮದೇವ ಬಸವಣ್ಣನ ಪಾದಕ್ಕೆ ನಮೋ ನಮೋ ಎಂಬೆನು ॥೧೦೭॥

ಇದಕ್ಕೆ ಬಸವಣ್ಣ ಚನ್ನಬಸವಣ್ಣನ ಹೊಗಳುವ ವಚನ ॥

ಶಿಶುವೆನ್ನ ಬಹುದೆ ನಂಬಿಯಣ್ಣನ? ಸೂಕ್ಷ್ಮನೆನ ಬಹುದೆ ರವಿ ಯನು? ಜಗವ ಬೆಳಗುವ ದೃಷ್ಟಿ ಕಿರಿಯದೆನಬಹುದೆ? ಸೃಷ್ಟಿಯ ಕಾಂಬು ವ ಭಾವ ಕಿರಿದೆನ ಬಹುದೆ? ಬಳ್ಳ ಲಿಂಗವಾದುದನು ಕೂಡಲ ಸಂಗಮ ದೇವ ಕೇಳಯ್ಯ. ಯುಗಜುಗವೆಲ್ಲವನು ಮೀರಿದ ಶರಣನು ಕಿರಿದೆನ್ನ ಬಹುದೆ? ಚನ್ನಬಸವಣ್ಣನ ಪಾದಕ್ಕೆ ನಮೋ ನಮೋ ಎಂಬೆನು ॥೧೦೮॥

ಮತ್ತಂ, ಒತ್ತಿ ಹೊಸದು ಕಿಚ್ಚನೆ ಮಾಡಿದೆನೆಂದು ಮುಟ್ಟಿ ಹಿಡಿ ವಡೆ, ಕೈ ಬೇಯದಿಹುದೆ? ಎನ್ನಿಂದಾಯಿತ್ತು, ಎನ್ನಿಂದ ಹೋಯಿತ್ತು, ಎನ್ನದಿರು ಮನವೆ. ನಾನು ಮಾಡಿದೆನೆನ್ನದಿರು ಮನವೆ. ಕೂಡಲ ಸಂಗಮದೇವ ಕೇಳಯ್ಯ. ಚನ್ನಬಸವಣ್ಣನ ಪಾದಕ್ಕೆ ನಮೋ ನಮೋ ಎಂಬೆನು ॥೧೦೯॥

ಮತ್ತಂ, ಲಿಂಗ ಗಂಭೀರದೊಳಗೆ ಜಗ ಹುಟ್ಟಿದರೇನು? ಆ ಲಿಂಗ ದಿಂದ ಘನವೇ? ಶಿವಲಿಂಗದೊಳಗೆ ಜಗ. ಜಗ ಶಿವಲಿಂಗದೊಳಗೆ

ಲೋಕಾದಿಲೋಕಂಗಳಿಗೆ ನೀನು ಭಕ್ತಿಯ ಕಂದೆರೆದು ತೋರಿದೆ. ಕೂಡಲ ಸಂಗಮ ದೇವರಲ್ಲಿ ಚನ್ನಬಸವಣ್ಣ ನಿನ್ನ ಶ್ರೀ ಪಾದಕ್ಕೆ ನಮೋ ನಮೋ ಎನುತ್ತಿರ್ದೆನು ॥೧೧೦॥

ಪ್ರಾಣಲಿಂಗ ಪ್ರವೇಶಿತನಾಗಿ ಪ್ರಸಾದದಲ್ಲಿ ಸನ್ನಿಹಿತನಯ್ಯ. ಲಿಂಗಾರ್ಪಿತವಲ್ಲದ ಅನರ್ಪಿತವ ಮುಟ್ಟಲೀಯನಯ್ಯ. ಅಂಗ ಗುಣಂಗಳನೆಲ್ಲವ ನತಿಗಳೆದು ಪ್ರಸಾದದಲ್ಲಿ ಬ್ರಹ್ಮಚಾರಿಯಾದವನು ಕೂಡಲ ಸಂಗಮದೇವರಲ್ಲಿ ಚನ್ನಬಸವಣ್ಣನು ॥೧೧೧॥

ಮತ್ತಂ, ಸರ್ವಾವಧಾನಿ ಸಮಯ ಪ್ರಸಾದಿ ನೋಡಯ್ಯ. ಲಿಂಗಾರ್ಪಿತವಲ್ಲಿ ಸರ್ವಾವಧಾನಿ ನೋಡಯ್ಯ. ಅಯ್ಯ ಅನಾಹತಂಗಳಲ್ಲಿ ಪುನ್ನಪ ಇರಲೀಯ್ಯ ಕೂಡಲ ಸಂಗಮದೇವರಲ್ಲಿ ಚನ್ನಬಸವಣ್ಣಂಗೆ ನಮೋ ನಮೋ ಎನುತ್ತಿರ್ದೆನು ॥೧೧೨॥

ಮತ್ತಂ, ಅಂಗವಿಕಾರವನಳಿದು ಸತಿಯರ ಸಂಗವನರಿಯ ನೋಡಾ. ದೇಹ ಗುಣಂಗಳಿಲ್ಲಾಗಿ ನಿರ್ದೇಹಿ ಪ್ರಸಾದಿ ನೋಡಯ್ಯ. ಆಶನ ವ್ಯಸನಾದಿಗಳೆಲ್ಲವು ಬೆಂದವು ನೋಡಯ್ಯ. ಈ ಎಲ್ಲ ಗುಣಂಗಳಳಿದು ಕೂಡಲ ಸಂಗಮದೇವರಲ್ಲಿ ಸಾವಧಾನ ಪ್ರಸಾದಿ ಚನ್ನಬಸವಣ್ಣನು ॥೧೧೩॥

ಮತ್ತಂ, ಘನವನರಿದು ಘನವ ವೇಧಿಸಿ, ಘನಗುರುವ ತನ್ನೊಳಗೆ ಬೈಚಿಟ್ಟ ಪರಿಣಾಮಿಯ ನೋಡಯ್ಯ. ಗುರುಲಿಂಗ ಜಂಗಮದಲ್ಲಿ ತನು ಮನ ಧನವ ವೇಧಿಸುವ ಪರಿಯ ನೋಡಾ. ಕಾಯ ಪ್ರಸಾದದಲ್ಲಿ ಸ್ವಾಯತವ ಮಾಡಿ ಕೊಂಡಿಪ್ಪ ಪರಿಯ ನೋಡಾ. ಷಡುಸ್ಥಾನದಲ್ಲಿ ಸ್ವಾಯತವಾದ ಕೂಡಲ ಸಂಗಮದೇವರ ಚನ್ನಬಸವಣ್ಣನು ॥೧೧೪॥

ಮತ್ತಂ, ನಿರ್ದೇಪನಾದ ನಿಜಗುಣ ನೋಡಯ್ಯ. ಕಾಮಿಸದ ಕಲ್ಪಿಸದ ಪ್ರಸಾದಿ ನೋಡಯ್ಯ. ಬಯಸಲಿಲ್ಲದ ಪ್ರಸಾದಿ ಗುರುವಿನ ಮುಖದಲ್ಲಿ ಬಂದು ಪ್ರಸಾದವಲ್ಲದೆ ಮತ್ತೇನೇನು ಮುಟ್ಟಲೀಯ್ಯನು ಕೂಡಲಸಂಗಮದೇವರಲ್ಲಿ ಚನ್ನಬಸವಣ್ಣನು ॥೧೧೫॥

ಮತ್ತಂ, ಅರ್ಪಿತವ ಮಾಡುವ ಅವಧಾನವು, ಅನ್ಯವು ಸೋಂಕದ ಅವಧಾನವು, ಅರಿಷಡ್ವರ್ಗಂಗಳು ಮುಟ್ಟಲಿಯ್ಯದ ಅವಧಾನದ ಪರಿಯ ನೋಡಾ. ಪಂಚಭೂತವೆಂಬ ಭವಿಯ ಕಳೆದು ಪ್ರಸಾದಿಯಾಗಿಪ್ಪ ಪರಿಯ

ನೋಡಾ. ಪಂಚೇಂದ್ರಿಯಂಗಳ ಗುಣವಳಿದು ಪಂಚವಿಂಶತಿ ತತ್ವವಲ್ಲಿ ಪರಿಣಾಮಿ ಕೂಡಲಸಂಗಮ ದೇವರಲ್ಲಿ ಚನ್ನಬಸವಣ್ಣನು ॥೧೧೬॥

ಚನ್ನಬಸವಣ್ಣನು ಬಸವಣ್ಣನ ಸ್ತುತಿಸಿದ ವಚನ॥

ಭಕ್ತ ಮಹೇಶ್ವರ ಪ್ರಸಾದಿ ಪ್ರಾಣಲಿಂಗಿ ಶರಣೈಕ್ಯರಿಂದೆ. ಬೇರೆ ಮಾಡಿ ನುಡಿದು ಬೇರೆ ಮಾಡಿ ನುಡಿವ ಭಿನ್ನವಿಲ್ಲ. ಅಂತರಗದಲ್ಲಿ ಅರಿವು ಪರಿಪೂರ್ಣ. ಬಹಿರಂಗದಲ್ಲಿ ದಾಸೋಹ ಸಂಪನ್ನ. ಮನೋವಾಕ್ಕಾಯ ಕರ್ಮಗಳಲ್ಲಿ ಸದ್ಭಕ್ತಿಸಂಪನ್ನ. ಎಡದೆರಹಿಲ್ಲದೆ ಲಿಂಗ ಸಂಪನ್ನ. ಸರ್ವಾಂಗದಲ್ಲಿ ಸರ್ವಾಚಾರ ಸಂಪನ್ನ. ಕೂಡಲ ಚನ್ನ ಸಂಗಮದೇವರಲ್ಲಿ ಬಸವಣ್ಣನ ಶ್ರೀಪಾದಕ್ಕೆ ನಮೋ ನಮೋ ಎಂಬೆನು ॥೧೧೭

ಮತ್ತಂ॥ ಮಾತು ಮಾಣಿಕವ ನುಂಗಿ, ಜ್ಯೋತಿ ಕತ್ತಲೆಯ ನುಂಗಿ, ಆಳು ಆಜ್ಞೆಯ ನುಂಗಿ ಉಗುಳಿಲ್ಲದ ಮಥನ, ಮಥನವಿಲ್ಲದ ಸಂಗ, ಮರಣವಿಲ್ಲದ ಉದಯ, ಅಳಲಿಲ್ಲದ ಶೋಕ, ಸಮರಸವಿಲ್ಲದ ಉದಯದ ಬೆಳಗನು ಮದಗಜ ಒಳಕೊಂಡು ಮಾವತಿಗನ ನುಂಗಿ ಉಗುಳದಲ್ಲಿ ಸದಮದ ಬರಿ ಕೈಯ್ಯೊಳಗೆ ಈರೇಳು ಭುವನವನೊದರೆ ಹಾಯಿಕೆ ತಾನೆ ನಿಂದುದಲ್ಲ ಸದಮಲಜ್ಞಾನ ಸಂಪನ್ನ ಕೂಡಲಚನ್ನಸಂಗೈಯ್ಯನಲ್ಲಿ ಬಸವಣ್ಣಂಗೆ ಸ್ತವಾಯಿತ್ತು. ॥೧೧೮॥

ಮತ್ತಂ॥ ಉರಿಯ ಸೀರೆಯನುಟ್ಟು, ಕಡೆಸೆರಗ ಬಿಡಬೀಸಿ, ಮಡದಿ ತನ್ನ ಕೆಳದಿಯರನೊಡಗೊಂಡು ಆಡುತ್ತಿರೆ ಪತಿ ಬಂದು ಮುಡಿಯ ಹಿಡಿದು ಉಟ್ಟ ಸೀರೆಯ ನುಗಿಯೆ ಮಡದಿ ಒಡಗೂಡುತ್ತಿರೆ ಸಮರಸದಲ್ಲಿ ಸತಿಯಳಿದು ಪತಿಯಾಗಿ ಪತಿಯಳಿದು ನಿಃಪ್ಪತ್ತಿಯಾಗಿ ಸತಿ ಪತಿ ನಿಃಪ್ಪತ್ತಿಎಂಬ ತ್ರಿವಿಧವು ಏಕಾರ್ಥವಾದ ಕೂಡಲಚನ್ನಸಂಗನಲ್ಲಿ ಬಸವಣ್ಣನ ಪಾದಕ್ಕೆ ನಮೋ ನಮೋ ಎನುತ್ತಿರ್ದೆನು. ॥೧೧೯॥

ಮತ್ತಂ॥ ಚನ್ನಬಸವಣ್ಣ ಗುರುಬಸವಣ್ಣನ ಸ್ತುತಿಸಿದ ಪದಂಗಳೂ॥

ರಾಗಭೂಪಾಳ॥ ಪರಮ ಮೂರುತಿ ಪರಮಜ್ಞಾನಿ ಲೋಕಪ್ರಪಂಚನಲ್ಲ ನಿಃಪ್ರಪಂಚನಾಮ ನಿರ್ಭಾಮ ನಿಃಕಾಮಿಯಾಗಿ ॥ಪದ॥

ಕಾಯಗುಣಗಳ ತಂದು ಜೀವದೊಳಗಿರಿಸಿ ಪ್ರಾಣಲಿಂಗಕ್ಕೆ ಸಮಾಧಾನಮಾಡಿ ಆಶ್ರಮವ ಸ್ವೀಕರಿಸನಾ ಶ್ರೀಯವನೀಕರಿಸದ್ವೈತಾದ್ವೈತನು ಅಲ್ಲ ಲಿಂಗಸಂಗಿ. ॥೧॥

ಕಾಯ ಶೂನ್ಯ ಲಿಂಗ ಪ್ರಾಣ ಶೂನ್ಯ ಶರಣ। ಭಾವ ಭೇದಂಗಳಿಲ್ಲವಾಗಿ ಒಳ ಹೊರಗುವನ್ನು ಸರ್ವಾಂಗದಲ್ಲಿ ಅನುಭಾವಕೆ ತೆರಹಿಲ್ಲದನು ಮನೂ. ॥೨॥

ಕಾರಣವ ಕಲ್ಪಿತಾಕಲ್ಪಿತವ ಸಂಕಲ್ಪವಿಕಲ್ಪನಲ್ಲ ಸುಜ್ಞಾನಿಯಾಗಿ ನಾವಯ। ನಿರವಯಸಂಗಿ ನಿಸ್ಸಂಗಿ ಪರಮಾತ್ಮ ತಾನಾದ ನಿರ್ಬೋಧ ಬೋಧಿ. ॥೩॥

ನಿರ್ಭಾವ ನಿರ್ನಾಮ ನಿರ್ದೇಹ ದೇಹಿ ನಿರ್ಗುಣಕೆ ಅವಯವಾಕಾರರೂಪಾ। ಪರತತ್ವವನ್ನಿಂಬಿಟ್ಟು ಉಭಯವಳಿದುಳಿದಾತ ತ್ರಿವಿಧ ಸಂಪನ್ನನೀತನು ಉಬಯಸಂಗಿ. ॥೪॥

ಲಿಂಗಭಕ್ತಶೇಷ ಭಕ್ತಚರ ಪ್ರಾಣಿ ನಿರ್ಗಮನ ಗಮನಿಗೆ ಗಮನವಿಲ್ಲ ಸ್ವತಂತ್ರ ಕೂಡಲಚನ್ನಸಂಗಯ್ಯನಲ್ಲಿ ಸಾಧ್ಯ ಸಾಧಕನಾದ ಲಿಂಗಸಂಗಿ. ॥೫॥

ವತ್ತೀ, ವೇದವಂತಿರಲಿ, ಶಾಸ್ತ್ರ ಸಾಕು ಸಾಕು. ಪುರಾಣವಂತಿರಲಿ, ಆಗಮ ಸಾಕು ಸಾಕು. ಅಂತಿರಲಿ ಸಾಧಿಸಿದನು ಸಜ್ಜನ ಸಾರಾಯವನು ಲಿಂಗ ಜಂಗಮದ ಪ್ರಸಾದವೆ ಪ್ರಾಣವೆಂದು ಇದರಲ್ಲಿ ಸಜ್ಜನ ಸದರ್ಥ ಕೂಡಲ ಚನ್ನಸಂಗಯ್ಯನಲ್ಲಿ ಬಸವಣ್ಣನು. ॥೧೨॥

ಆ ಪ್ರಸ್ಥಾವದೊಳು ಮಡಿವಾಳ ಮಾಚಿತಂದೆಗಳು ಪ್ರಭುದೇವರ ಸ್ತುತಿಸುವ ವಚನ.

ತನುಗುಣವಳಿದು ಲಿಂಗಸಂಗಿಯಾದ. ಮನಗುಣವಳಿದು ಜ್ಞಾನ ಸಂಬಂಧಿಯಾದ. ಪ್ರಾಣಗುಣವಳಿದು ಪ್ರಸಾದ ಸಂಬಂಧಿಯಾದ. ಭಾವ ಭ್ರಮೆಯಳಿದು ನಿಜಲಿಂಗಸಂಬಂಧಿಯಾದ. ಇಂತೀ ಚತುರ್ವಿಧ ಸಂಬಂಧಿಯಾಗಿ ಶೂನ್ಯಸಿಂಹಾಸನವನ್ನಿಂಬುಗೊಂಡ ಕಲಿದೇವರ ದೇವ ನಿಮ್ಮ ಶರಣ ಪ್ರಭುದೇವರ ಪಾದಕ್ಕೆ ನಮೋ ನಮೋ ಎಂಬೆನು. ॥೧೩॥

ಮತ್ತಂ, ಲಿಂಗಬೆರಗಿನ ಪರಮಸುಖಿಯಃನೇನೆಂಬೆನಯ್ಯಾ? ಕಂಗಳ ಕಳೆಯ ಸಂಗವನರಿದ ಅಂಗ ವಿರಹಿತನನೇನೆಂದುಪಮಿಸುವೆನು? ನೋಟದಲ್ಲಿ ಅನುಮಿಷ. ಕೂಟದಲ್ಲಿ ನಿಸ್ಸಂಗಿ. ಎಡೆಯಾಟದಲ್ಲಿ ನಿರ್ಗಮನ. ನಿಂದಲ್ಲಿ ನಿರಾಳ. ಸುರಾಳದಲ್ಲಿ ಪರಿಪೂರ್ಣ. ಘನಕ್ಕೆ ಘನಮಹಿಮನು ಕಲಿದೇವರ

ದೇವ ನಿಮ್ಮ ಶರಣನು ಪ್ರಭುದೇವರ ಶ್ರೀಪಾದಕ್ಕೆ ನಮೋ ನಮೋ ಎನುತಿರ್ದೆನು. ॥೧೨॥

ಮತ್ತಂ, ಸಂಸಾರದ ಸಾರಾಯವ ತನಿರಸವ ಹಿಂಡಿ ಹಿಡಿದಾಡಿದರಯಾ. ಸನಂಕೊಂಡು ಹರಿದು ಹತ್ತುವನಲ್ಲ. ಮರಳಿ ನೋಡುವನಲ್ಲ ಇಂತಪ್ಪ ವೀರರುಂಟೇ? ಇಂತಪ್ಪ ಧೀರರುಂಟೇ? ಇಂತಪ್ಪ ಪೌರುಷ ಚರಿತನಾಗಿ ಪಾಯೆಯ ಹಂಗಿಸಿ ಮುಯ್ಯಾಂತು ಮುಂದಣ ನಿಲವ ನಾಗು ಮಾಡಿದ ನಿಜೈಕ್ಯ ನಿರ್ವಯಲ ನಿಷ್ಪತ್ತಿಗೆ ನಿಜವಾಗಿ ನಿರಾಳದೊಳಗೆ ತಾನೇ ತೊಳಲುತ್ತಿರ್ದನು. ಕಲಿದೇವ, ನಿಮ್ಮ ಲಿಂಗೈಕ್ಯ ಪ್ರಭುದೇವರ ಶ್ರೀಪಾದದಲ್ಲಿ ಭೃಂಗನಾಗಿಪ್ಪೆನು ॥೧೪॥

ಪ್ರಭುದೇವರು ಮಡಿವಾಳ ಮಾಚಿ ತಂದೆಗಳ ಸ್ತುತಿಸಿದ ವಚನ ॥

ಲಿಂಗ ಗಂಭೀರ ಸುನಾದನಂ ಜಗಗಂಭೀರ ತನುಗುಣ ಚರಿತ್ರ ಜಂಗಮಗಂಭೀರ ಅನಾಹತವೇ ಮನಗುಣ ಚರಿತ್ರ ಈ ಎರಡರ ಸಂಬಂಧವೇ ಒಡಲು ಪರಮಾನಂದ ಜಲದಲ್ಲಿ ಅಲುಬಿ ಮಹಾ ಪ್ರಕಾಶದಲ್ಲಿ ಅರಿಸಿ ಅನಾಹತ ಮಥನದಲ್ಲಿ ಘಟ್ಟಿಸಿ ಆ ವಸ್ತ್ರವನೆನಗೆ ಕೊಟ್ಟರೆ ಉಡದ ಮುನ್ನವೆ ಉರಿ ಹತ್ತಿತ್ತು ನೋಡಾ. ಆ ಉರಿಯ ಕಣ್ಣಿಗೆ ಕಾಣಬಾರದು. ಮನಕ್ಕೆ ನೆನೆಯಬಾರದು. ಉರಿ ಉಂಡು ಉಷ್ಣವಿಲ್ಲದ ಆ ಸ್ವಯಂ ಜ್ಯೋತಿಯ ನಿಜ ನಿವಾಸದಲ್ಲಿ ನಿಶ್ಚಿಂತನಾಗಿರ್ದು ಮಡಿವಾಳನ ಕೃಪೆಯಿಂದ ನಾನು ಬದುಕಿದೆನು ಕಾಣಾ ಗುಹೇಶ್ವರಾ ॥೧೫॥

ಮತ್ತಂ, ತಾಯಿಲ್ಲದ ಶಿಸುವಿಂಗೆ ಶಿಸು ಒಲ್ಲದ ತಾಯಿ ಮೊಲೆವಾಲನೂಡಿದಳು. ಮೊಲೆವಾಲ ನುಂಡ ಶಿಸು ತಾಯಿ ತರ್ಕೈಸಿದರೆ ತಾಯಿ ಶಿಸುವಿಂಗೆ ಸತಿಯಾದಳಲ್ಲ. ಸತಿಯ ಸಂಗದ ಸುಖನ ಪತಿ ಇಲ್ಲದರಿದಲ್ಲಿ ಸತಿ ಪತಿ ಎಂಬೆರಡು ಅಳಿಯಿತ್ತು ನೋಡಾ. ಈ ನಿಜದ ನಿರ್ಣಯವ ತೋರಿದನೆನಗೆ ಗುಹೇಶ್ವರನ ಶರಣ ಮಡಿವಾಳ ತಂದೆಗಳ ಪಾದಕ್ಕೆ ನಮೋ ನಮೋ ಎಂಬೆನು ॥೧೬॥

ಚಿಕ್ಕದಣ್ಣಾಯಕರು ಮಡಿವಾಳ ಮಾಚಿ ತಂದೆಗಳ ಸ್ತೋತ್ರಮಂ ಮಾಡುವ ವಚನ ॥

ಹೊಟ್ಟೆಯಲ್ಲಿ ಎನ್ನ ತಿಗೆದ. ಜೆನ್ನಿನಲ್ಲಿ ಬಸವಣ್ಣನ ತಿಗೆದ. ಬ್ರಹ್ಮರಂಧ್ರದಲ್ಲಿ ಅಲ್ಲಮನ ತಿಗೆದ. ಸಂಗನೋ ಮಡಿವಾಳನೋ ಮಡಿವಾಳನೋ

ಸಂಗನೋ ಕೂಡಲ ಚನ್ನಸಂಗನಲ್ಲಿ ಮಡಿವಾಳ ಸ್ವಾಯತ ನಮ್ಮ ಬಸವ ಣ್ಣಂಗೆ ॥೧೩೧॥

ಮತ್ತಂ, ಅಂಗದ ಮೇಲಣ ಲಿಂಗ ಹಿಂಗದಂತಿರಬೇಕು. ಅಂಗಕ್ಕೆ ಲಿಂಗಕ್ಕೆ ಸಂಬಂಧವೇನೋ? ಮನ ಮುಟ್ಟಿದನ್ನಕ್ಷರ ಕಾಯ ಕಾಯಕವ ಮಾಡುತ್ತಿರಲು ಮನವು ಲಿಂಗವಲ್ಲಿ ಬೆರಸಿ ತೆರಹಿಲ್ಲದಿಪ್ಪ ಮಡಿವಾಳನ ಪರಿಯ ನೋಡಾ. ಅಂಗಲಿಂಗ ಸಂಗವೆಂಬ ಸಂದು ಸಂಶಯವ ನಳಿದು ಸರ್ವಾಂಗ ಲಿಂಗ ಸಂಬಂಧಿ ಕೂಡಲ ಚನ್ನಸಂಗಯ್ಯನಲ್ಲಿ ಮಡಿವಾಳ ಮಾಚಯ್ಯನು ॥೧೩೨॥

ಮಡಿವಾಳ ಮಾಚಿ ತಂದೆಗಳು ಚನ್ನಬಸವಣ್ಣನ ಸ್ತುತಿಸಿದ ವಚನ॥ ವಾಯದ ಮಾಯದ ಸಂಭ್ರಮದೊಳಗೆ ಸಿಲುಕಿತ್ತು ನೋಡಾ. ಭವನ ವೆಲ್ಲವು ಮಾಯಕ್ಕೆ ಹೊರಗಾದ ನಿರ್ಮಾಯನ ಕಂಡೆನು. ತಾನೆಂಬ ನುಡಿಗೆ ನಾಚಿ ನೀನೆಂಬ ನುಡಿಗೆ ಹೇಸಿ ತಾನು ತಾನಾದ ಘನ ಮಹಿ ಮನು ಕಾಯದಲ್ಲಿ ಕುರುಹಿಲ್ಲ. ಭಾವದಲ್ಲಿ ಭ್ರಮೆ ಇಲ್ಲ. ಜ್ಞಾನ ತಾನೆಂಬ ಭೇದವಿಲ್ಲ. ಸಾಯವನಲ್ಲ ನಿರವಯನಲ್ಲ ಕಲಿದೇವರ ದೇವ ನಿಮ್ಮ ಶರಣ ಚನ್ನಬಸವಣ್ಣನು ॥೧೩೩॥

ಅತಿಶಯವನತಿಗಳೆದು ನಿರತಿಶಯ ಸುಖದೊಳಗೆ ಪರಮ ಸುಖಿಯಾ ಗಿಪ್ಪವರಾರು ಹೇಳಾ? ನಿಜ ನಿರ್ಣಯವನರಿದು ಭಜನಿಯ ಭಾವವನೆ ಅಳಿದು ಶ್ರೀಜಗಪತಿಯಾಗಿಪ್ಪವರಾರು ಹೇಳಾ? ಕೋಡಗವ ಮನದೊ ಳಗೆ ಗಮನ ವಿರಹಿತನಾಗಿ ಗಮನಗೆಡದಿಪ್ಪರಾರು ಹೇಳಾ? ಹಗೆಯಲ್ಲಿ ಹೊಕ್ಕು ಹಗೆಯಳಿದು ಸುಖಿಯಾಗಿ ತನಗೆ ತಾ ಕಳಿಯಾಗಿಪ್ಪರಾರು ಹೇಳಾ? ಒಳ ಹೊರಗು ಸರ್ವಾಂಗವೆಲ್ಲ ಲಿಂಗವಾಗಿರ ಬಲ್ಲ ಪರಮಾತ್ಮ ರಾರು ಹೇಳಾ? ಕಲಿದೇವರ ದೇವಾ ನಿಮ್ಮ ಶರಣ ಚನ್ನಬಸವಣ್ಣನ ನಿಲವ ನರಿದು ಶರಣೆಂದು ನಾನು ಸುಖಿಯಾದೆನು. ॥೧೩೪॥

ಮಡಿವಾಳಯ್ಯಗಳು ಬಸವರಾಜದೇವರ ಸ್ತುತಿಸಿದ ವಚನ.

ಮಾರಾರಿಯ ಜೆಸನದಿಂದೆ ಧಾರುಣಿಗವತರಿಸಿ ಸಾರಾಯ ಸಭ್ಯ ಕ್ತಿಯ ತೋರಿದನು. ಶಿವಶರಣರೆಲ್ಲರಿಗೆ ಭಕ್ತಿಯ ಸಂಚಯುವ ಮುಕ್ತಿಯ ಭೇದವ ಸತ್ಯಶರಣರಿಗೆಲ್ಲ ಉಪದೇಶವ ಮಾಡಿ ನಿತ್ಯ ಲಿಂಗಾರ್ಚನೆಯೊಳ ಗೆನ್ನನಿರಿಸಿ ರಕ್ಷಿಸಿದಾತ ಬಸವಣ್ಣ ಕಾಣಾ ಕಲಿದೇವರ ದೇವಾ. ॥೧೩೫

ಆರು ಜನ್ಮದವನೆಂಬರು. ಬಸವಣ್ಣನಲ್ಲಾರು ಮಾತು ಕೇಳಲಾಗದು. ಆರುಸ್ಥಲವನಾರು ಪಥವ ತೋರಲಿಕ್ಕೆ ತಾ ಪರಶಿವಮೂರ್ತಿಯಾದ. ಆರಾರು ತತ್ವಂಗಳ ಮೇಲಿಹಾತ ಬಸವಣ್ಣನ ಕಾಣಾ ಕಲಿದೇವರ ದೇವಾ. ॥೧೩೬॥

ಮತ್ತಂ, ಕಲ್ಯಾಣವೆಂಬ ಪಟ್ಟಣದೊಳಗೆ ಛತ್ತೀಸಪುರದ ಮಹಾ ಗಣಂಗಳು ಒಂದು ಪುರದವರು ಅಘವಣಿಯ ತಾಹರು. ಎರಡು ಪುರ ದವರು ಸಮ್ಮಾರ್ಜನೆಯ ರಂಗವೋಲೆಯ ಮಾಡುವರು. ಮೂರು ಪುರ ದವರು ಲಿಂಗಾರ್ಚನೆಗೆ ನೀಡುವರು. ನಾಲ್ಕುಪುರದವರು ಲಿಂಗಕ್ಕೆ ಜೋನವ ಮಾಡುವರು. ಐದು ಪುರದವರು ಅರ್ಪಿತಕ್ಕೆ ನೀಡುವರು. ಆರು ಪುರದ ವರು ಪ್ರಸಾದದಲ್ಲಿ ತಪ್ಪತರಾಗಿ ಏಳು ಪುರದವರು ಧ್ಯಾನಾರೂಢರಾಗಿಹರು. ಮುಂದಣ ಪುರದವರು ನಿಶ್ಚಿಂತ ನಿವಾಸಿಗಳಾಗಿಹರು. ಈ ಪುರದ ಗಣಂ ಗಳು ಓಲೈಸುವ ಬಸವಣ್ಣನ ಮಹಾಮನೆಯ ಮಡಿವಾಳ ನಾನು ಕಾಣಾ ಕಲಿದೇವ ದೇವಾ. ॥೧೩೭॥

ಮತ್ತಂ, ಇವಭಕ್ತಿ ಸಂಪುಟವಾದ ಮಹಾಮಹಿಮರ ನಿಲವು ನಾದದ ಉತ್ಪತ್ತಿ ಸೋಂಕದು. ಬಿಂದುವಿನಾಶ್ರಯದಲ್ಲಿ ಬೆಳೆಯದು. ಶುಕ್ಲ ಶೋಣಿತವೆಂಬ ಪಂಚವರ್ಣಾಶ್ರಮವನು ಹೊದ್ದದು. ಅಷ್ಟದಳ ಕಮಲವ ಮುಟ್ಟದು. ಪ್ರಾಣೋಪಾನ ವ್ಯಾನೋದಾನ ಸಮಾನನಾಗ ಕೂರ್ಮ ಕ್ರಕರ ದೇವದತ್ತ ಧನಂಜಯವೆಂಬ ದಶವಾಯುಗಳಿಚ್ಛೆಯಲ್ಲಿ ಸುಳಿದಾ ಡದು. ಜ್ಞಾನದಲ್ಲಿ ಬೆಳೆವುದು. ನಿರಾಲಂಬದಲ್ಲಿ ಆಡುವದು. ಹೃದಯ ಕಮಲದ ಪದ್ಮ ಪತ್ರದ ಉಸಿರ ನಾಲಿನ ಸಂಪುಟ ಜಂಗಮದಾಟವ ನಾಡುವದು. ಲಿಂಗ ನೋಟವ ನೋಡುವುದು. ಮಹಾಘನದಲ್ಲಿ ಬೆಳೆ ವುದು. ನಿಜನಿರಾಳದಲ್ಲಿ ನಿಜಯಾಗಿಪ್ಪುದು. ಕಲಿದೇವರ ದೇವ ನಿಮ್ಮ ಶರಣ ಬಸವಣ್ಣನ ನಿಲವಿದು ॥೧೩೮॥

ಮತ್ತಂ, ಅಷ್ಟ ತನುವಿನಲ್ಲಿ ಹುಟ್ಟಿದ ನಿಷ್ಠಾಪುರದಲ್ಲಿ ಮುಟ್ಟುವ ಭಾವದಲ್ಲಿ ವಿದ್ಯದೊಳಗಣ ಆಧಾರ ಮಂಟಪದೊಳಗಣ ಸಹಜವನರಿದ ವಂಗಲ್ಲದೆ ಲಿಂಗವೆನಬಾರದು. ಜಂಗಮವೆನಬಾರದು. ಪ್ರಸಾದವೆನಬಾ ರದು. ದ್ವಾರ ಮಂಟಪದೊಳಗಣ ಸಹಜವನರಿಯದೆ ಕರಣಂಗಳಿಗೆ ಗುರಿ ಯಾದರು. ಕರಣ ಲಿಂಗಾರ್ಚಕರಾದರು. ಕರಣವು ಮರಣ ತಪ್ಪದಿ ನ್ನೆಂತೋ? ಇದನೆಲ್ಲವ ನತಿಗಳೆದು ನಿಜ ಲಿಂಗಾರ್ಚನೆಯು ತೋರಿ ನಿಜೈಕ್ಯ ದೊಳಗಿರಿಸಿ ಬದುಕಿಸಿದಾತ ಬಸವಣ್ಣ ಕಾಣಾ ಕಲಿದೇವರ ದೇವಾ ॥೧೩೯॥

ಬಸವರಾಜದೇವರು ಮಡಿವಾಳ ತಂದೆಗಳ ಸ್ತೋತ್ರಮುಂ ಮಾಡುವ ವಚನ॥

ಎನ್ನ ಕಾಯದ ಕರ ಸ್ಥಲದಲ್ಲಿ ಪ್ರಭುದೇವರ ಕಂಡೆನು. ಎನ್ನ ಪ್ರಾಣದ ಕರ ಸ್ಥಲದಲ್ಲಿ ಚನ್ನಬಸವಣ್ಣನ ಕಂಡೆನು. ಎನ್ನ ಸರ್ವಾಂಗದ ಕರ ಸ್ಥಲದಲ್ಲಿ ಮಡಿವಾಳನ ಕಂಡೆನು. ಸಂಗನೋ ಮಡಿವಾಳನೋ ಎಂದು ನುಡಿಯಲರಿಯೆ. ಮಡಿವಾಳನೋ ಸಂಗನೋ ಎಂದು ನುಡಿಯಲರಿಯೆ. ಎನ್ನೊಡಲ ಗಣಂಗಳನೆ ಕೆಡಿಸಿ ತಡೆಯ ಕಾಣಿಸಿ ಎನ್ನನುಳುಹಿದ ಪರಮಯೋಗಿ ಕೂಡಲ ಸಂಗಮದೇವ ಮಡಿವಾಳ ಮಾಚಿ ತಂದೆಯ ಪಾದಕ್ಕೆ ನಮೋ ನಮೋ ಎಂಬೆನು ॥೧೪೦॥

ಮತ್ತಂ, ಆಚಾರದ ಸುಖವ ಸಂಗದಲ್ಲಿ ನೆಲೆಗೊಳಿಸಿ ತೋರಿದ ಅನುಭಾವದನುವ ಪ್ರಾಣದಲ್ಲಿ ನೆಲೆಗೊಳಿಸಿ ತೋರಿದ ಮಹಾಜ್ಞಾನದ ಸುಖವ ಸರ್ವಾಂಗದಲ್ಲಿ ನೆಲೆಗೊಳಿಸಿ ತೋರಿದ ಈ ತ್ರಿವಿಧ ಸ್ಥಲದ ನಿರ್ಣಯವ ಎನಗೆ ಅರುಹಿದ ಕಾರಣ ಕೂಡಲ ಸಂಗಮದೇವಯ್ಯ ಮಡಿವಾಳ ಮಾಚಯ್ಯನ ಪಾದಕ್ಕೆ ನಮೋ ನಮೋ ಎಂಬೆನು ॥೧೪೧॥

ಹಡಪದಪ್ಪಣ್ಣಗಳು ಪ್ರಭುದೇವರ ಸ್ತುತಿಸಿದ ವಚನ॥

ಅನುಮಿಷನಾದ ನಿಬ್ಬೆರಗಿನ ಲಿಂಗೈಕ್ಯ ಭಾವ ನಿರ್ಭಾವವನೈದಿ ಜ್ಞಾನವೇ ಪರಮಾಶ್ರಯವಾಗಿಪ್ಪ ಲಿಂಗೈಕ್ಯನು ಮಹವ ನೊಳಕೊಂಡ ಮಹಾಮಹಿಮ ಲಿಂಗೈಕ್ಯನು ಬಸವಪ್ರಿಯ ಕೂಡಲ ಚನ್ನಸಂಗಯ್ಯ ನಿಮ್ಮ ಶರಣ ಪ್ರಭುದೇವರಿಗೆ ನಮೋ ನಮೋ ಎನುತ್ತಿರ್ದೆನು. ॥೧೪೨॥

ಮತ್ತಂ, ನಿರಾಕಾರದ ಶಕ್ತಿಯಲ್ಲಿ ನಿರಾಳವೆಂಬ ತನು ನಿಃಶೂನ್ಯವೆಂಬ ಸಿಂಹಾಸನದ ಮೇಲೆ ಘನವಾಗಿ ತೊಳಗಿ ಬೆಳಗುತ್ತಿರ್ದನು. ದಿಸೆಯೆಲ್ಲ ಮುಖವಾಗಿ ಮುಖವೆಲ್ಲ ಜಗವಾಗಿ ಅಖಂಡ ಪರಿಪೂರ್ಣ ಪರಬ್ರಹ್ಮ ತಾನಾದನು. ಈ ಮಹಿಮನ ನೆನೆದರೆ ಮನೋಮುಕ್ತಿ, ಕಂಡರೆ ರೂಪು, ಮುಕ್ತಿ, ನುಡಿಸಿದರೆ ಶಬ್ದ ಮುಕ್ತಿ, ಸಂಗವ ಮಾಡಿದರೆ ಸರ್ವಾಂಗ ಲಿಂಗೈಕ್ಯ. ಬಸವ ಪ್ರಿಯ ಕೂಡಲ ಚನ್ನಸಂಗಯ್ಯ ನಿಮ್ಮ ಪ್ರಭುವಿನ ಶ್ರೀಪಾದಕ್ಕೆ ಶರಣೆಂದು ಬದುಕಿದೆನು ॥೧೪೩॥

ನಾಗಯಕ್ಕಗಳು ಪ್ರಭುದೇವರನು ಬಸವರಾಜ ದೇವರನು ಚನ್ನ ಬಸವಣ್ಣನನು ಸ್ತೋತ್ರಮುಂ ಮಾಡಿದ ವಚನ॥

ಎನ್ನ ಭವದ ಬಳ್ಳಿಯ ಬೇರು ಹರಿಯಿತ್ತಯ್ಯ, ಬಸವಣ್ಣನು ಒಕ್ಕುದ ಕೊಂಡೆನಾಗಿ. ಎನ್ನ ಮನದ ಕಪಟ ಹಿಂಗಿತ್ತಯ್ಯ ಚನ್ನಬಸವಣ್ಣನ ಕರುಣವ ಪಡೆದೆನಾಗಿ. ಎನ್ನ ಮನದ ಸಂಶಯ ತೊಲಗಿತ್ತೆಂದು ಬಸವಣ್ಣ ಪ್ರಿಯ ಕೂಡಲ ಚನ್ನಸಂಗಯ್ಯ ಎನ್ನ ಪರಮ ಗುರು ಶ್ರೀ ಪ್ರಭುವಿನ ಶ್ರೀ ಪಾದವ ಕಂಡೆನಾಗಿ ॥೧೪೪॥

ಅರಿಯದೆ ಮರಹಿಂದ ಭವದಲ್ಲಿ ಬಂದೆ. ಇನ್ನು ಅರಿದ ಬಳಿಕ ಬಳಲಲುಂಟೆ? ಹೃದಯ ಕಮಲ ಮಧ್ಯದಲ್ಲಿ ನಿಜವು ನೆಲೆಗೊಂಡ ಬಳಿಕ ಪುಣ್ಯ ಪಾಪವೆಂಬವಕ್ಕೆ ಹೊರಗಾದೆನು. ಭುವನ ಹದಿನಾಲ್ಕರೊಳಗೆ ಪರಿಪೂರ್ಣ ನಿರಂಜನ ಜ್ಯೋತಿಯಾಗಿ ಬೆಳಗುವ ಪ್ರಭುವ ಕಂಡು ಬದುಕಿದೆನು ಕಾಣಾ ಬಸವಣ್ಣ ಪ್ರಿಯ ಕೂಡಲಚನ್ನಸಂಗಯ್ಯ. ॥೧೪೫॥

ಸೊಡ್ಡಳ ಬಾಚರಸರು ಪ್ರಭುದೇವರ ಸ್ತೋತ್ರಮುಂ ಮಾಡುವ ವಚನ॥

ಬರದಲ್ಲಿ ಅರಲುಗೊಂಡಪಂಗೆ ಅಮೃತ ಸಿಕ್ಕಿದಂತೆ ಜರಾ ಮರಣ ದುಃಖಿ ಮರುಜೀವನೆಯ ಕಂಡಂತೆ ಭವದ ಬಾಗಿಲ ಹೊಗದೆ ಬದುಕಿದೆ ನೈಯ್ಯ ನಿತ್ಯವ. ಕಂಡು ಒಳಗೆ ಬೆಳಗುವ ಪ್ರಕಾಶ ಹೊರಗೆ ಮೂರ್ತಿಗೊಂಡಂತೆ ಕಂಗಳಿಗೆ ಮಂಗಳವಾಯಿತ್ತಯ್ಯ. ಮಹಾ ಘನದಲ್ಲಿ ಸಾಕಾರ ಸೊಡ್ಡಳನ ಶರಣ ಪ್ರಭುವಿಂಗೆ ನಮೋ ನಮೋ ಎನುತಿರ್ದೆನು. ॥೧೪೬॥

ಮತ್ತಂ, ಮನದ ಸಂಚದೋವರಿಯೊಳಗೆ ಮಿಂಚಿನ ಗೊಂಚಲು ಬಳ್ಳಿವರಿಯಿತ್ತಯ್ಯ. ಎನ್ನ ಕಾಯದ ಕಂಗಳೊಳಗೆ ನಿರುಪಮ ಸುಖ ಸಾಧ್ಯವಾಯಿತ್ತಯ್ಯ. ಒಯಿಸುವ ಒಯಿಕೆ ಕೈಸಾರಿತ್ತು. ಅರಸುವ ಅರಿಕೆ ನಿಂದಿತ್ತು. ಅಹಹಾ ಕರತಳಾಮಳಕವಾಯಿತ್ತಲ್ಲ. ಸತ್ಯಶರಣರ ದರುಶನವೇನ ಮಾಪದು? ಮಹಾದಾನಿ ಸೊಡ್ಡಳನ ಶರಣ ಪ್ರಭುವಿನ ಶ್ರೀ ಪಾದವ ಕಂಡು ಬದುಕಿದೆನು. ॥೧೪೭॥

ಬಹುರೂಪಿಚೌಡಯ್ಯಗಳು ಬಸವಣ್ಣನ ಚನ್ನಬಸವಣ್ಣನ ಪ್ರಭುದೇವರ ಸ್ತುತಿಸುವ ವಚನ॥

ಸಂಗನಬಸವಣ್ಣ ಎನ್ನ ಕರಸ್ಥಲಕ್ಕೆ ಬಂದ ಕಾರಣ ಗುರುವಾದ. ಚನ್ನಬಸವಣ್ಣನೆನ್ನ ಕರಸ್ಥಲಕ್ಕೆ ಬಿಜಯಂಗೈದ ಕಾರಣ ಎನಗೆ ಲಿಂಗ

ವಾದ. ಪ್ರಭುದೇವರು ಎನ್ನ ಕರಸ್ಥಲಕ್ಕೆ ಬಂದ ಕಾರಣ ಎನಗೆ ಪ್ರಾಣ ಲಿಂಗವಾದ. ಈ ಮೂವರಿಗೆ ನಾ ಭಕ್ತನಾಗಿ ಹುಟ್ಟಿದೆನಾಗಿ ರೇಕಣ್ಣ ಪ್ರಿಯ ನಾಗಿನಾಥ ಎನಗೆ ಒಚ್ಚತವಾನ. ॥೧೪೪॥

ಮತ್ತಂ. ಬಸವಣ್ಣನಿಂದೆ ಶುದ್ಧಪ್ರಸಾದಿಯಾದೆ. ಚನ್ನಬಸವಣ್ಣನಿಂದೆ ಸಿದ್ಧಪ್ರಸಾದಿಯಾದೆ. ಪ್ರಭುದೇವರಿಂದ ಪ್ರಸಿದ್ಧ ಪ್ರಸಾದಿಯಾದೆ. ರೇಕಣ್ಣ ಪ್ರಿಯ ನಾಗಿನಾಥನಲ್ಲಿ ಸೊಬಗಮೆರೆದೆ. ॥೧೪೯॥

ಕಕ್ಕಯ್ಯಗಳು ಪ್ರಭುವಿನ ಸ್ತುತಿಸುವ ವಚನ. ॥

ಕಷ್ಟ ಕುಲದಲ್ಲಿ ಹುಟ್ಟಿದ ಕರ್ಮವ ಕಳೆದು ಮುಟ್ಟಿ ಪಾವನವ ಮಾಡಿ ಕೊಟ್ಟನಯ್ಯ ಎನ್ನ ಕರಸ್ಥಲಕ್ಕೆ ಲಿಂಗವ. ಆ ಲಿಂಗ ಬಂದು ಸೋಂಕಲೊಡನೆ ಎನ್ನ ಸರ್ವಾಂಗದ ಅವಲೋಹವಳಿಯಿತ್ತಯ್ಯ! ಎನ್ನ ತನುವಿನಲ್ಲಿ ಗುರುವ ನೆಲೆಗೊಳಿಸಿದ, ಎನ್ನ ಮನದಲ್ಲಿ ಲಿಂಗವ ನೆಲೆಗೊಳಿಸಿದ, ಎನ್ನ ಧನದಲ್ಲಿ ಜಂಗಮವ ನೆಲೆಗೊಳಿಸಿದ, ಎನ್ನ ಅರಿವಿನಲ್ಲಿ ಪ್ರಸಾದವ ನೆಲೆಗೊಳಿಸಿದ, ಇಂತೀ ತ್ರಿವಿಧ ಸ್ಥಾನ ಶುದ್ಧವ ಮಾಡಿದ ಬಸವಣ್ಣನ ಕರುಣದಿಂದೆ ಪ್ರಭುವಿನ ಶ್ರೀಪಾದವ ಕಂಡು ಬದುಕಿದೆನು ಕಾಣಾ ಅಭಿನವ ಚನ್ನಮಲ್ಲಿಕಾರ್ಜುನ. ॥೧೫೦॥

ಮತ್ತಂ, ಆಸೆಯಾವಿಷವಳಿದು ಹುಸಿವಿಷಯಂಗಳೆಲ್ಲ ಹಿಂಗಿ ಸಂಶಯ ಸಂಬಂಧವಾಯಿತ್ತು ನೋಡಾ. ಎನ್ನ ಮನದೊಳಗೆ ಘನ ಪರಿಣಾಮವ ಕಂಡು ಮನಮಗ್ನವಾಯಿತ್ತಯ್ಯ. ಅಭಿನವ ಚನ್ನಮಲ್ಲಿಕಾರ್ಜುನ ನಿಮ್ಮ ಶರಣ ಪ್ರಭುದೇವರ ಕರುಣದಿಂದೆ ಬದುಕಿದೆನು. ॥೧೫೧॥

ಮೋಳಿಗಯ್ಯಗಳು ಪ್ರಭುವಿನ ಸ್ತುತಿಸುವ ವಚನ. ॥

ಬಡವಂಗೆ ನಿಧಾನ ಕಡವರ ಕೈಸಾರಿತ್ತಯ್ಯ. ಕಾಣಬಾರದ ಬಯಲು ರೂಪು ಗೊಂಡಿತ್ತಯ್ಯ. ನಿರಾಳ ನಿರ್ಣಯದ ಮೇಲೆ ನಿಂದಿತ್ತು. ಎನ್ನ ಧಾವದ ಕೊನೆಯ ಮೊನೆಯ ಮೇಲೆ ಮನೆಯ ಮಾಡಿಕೊಂಡಿಪ್ಪ ಪ್ರಭುದೇವರ ಕಂಡು ಬದುಕಿದೆನು ಕಾಣಾ ನಿಃಕಳಂಕ ಮಲ್ಲಿಕಾರ್ಜುನ ॥೧೫೨॥

ಮತ್ತಂ, ನೆನಹಿನ ನಿಧಿಯ ನೋಡಾ. ಎನ್ನ ಅರಿವಿನ ಘನವ ನೋಡಾ. ಆಹಾ ಎನ್ನ ಪುಣ್ಯವೆ ಆಹಾ ಎನ್ನ ಭಾಗ್ಯವೆ ಆಹಾ ಎನ್ನ

ಕಂಗಳ ಮನೆಯ ಮಾಡಿಕೊಂಡಿಪ್ಪ ನಿತ್ಯದ ಬೆಳಗೆ ಎನ್ನ ಧ್ಯಾನದೊಳಗಣ ವೈಧವೆ ಎನ್ನ ಸುಖದೊಳಗಣ ಸುಗ್ಗಿಯೆ ನಿಃಕಳಂಕ ಮಲ್ಲಿಕಾರ್ಜುನ ನಿಮ್ಮ ಶರಣ ಪ್ರಭುವಿನ ಶ್ರೀಪಾದಕ್ಕೆ ನಮೋ ನಮೋ ಎನುತಿರ್ದೆನು. ॥೧೫೩॥

ಏಕಾಂತರಾಮಿತಂದೆಗಳು ಪ್ರಭುದೇವರ ಸ್ತುತಿಸಿದ ವಚನ. ॥

ಲೋಕಾಂತವಳಿದು ಏಕಾಂತ ಉಳಿದಲ್ಲಿ ಏಕೈಕಮೂರ್ತಿಯ ಸಂಗ ಸಮ್ಮನಿಸಿತ್ತೆನಗೆ. ಎನ್ನ ನುಡಿ ಆತನ ಕಿವಿಗಿನಿದಾಯಿತ್ತು. ಆತನ ನುಡಿ ಎನ್ನ ಕಿವಿಗಿನಿಯಾಯಿತ್ತು. ಇಬ್ಬರ ನುಡಿಯು ಒಂದೆಯಾಗಿ ನಿಃಶಬ್ದ ವೇಧಿಸಿತ್ತು. ಈ ಸುಖದ ಸೋಂಕಿನ ಪುಣ್ಯದ ಫಲದಿಂದೆ ಅನುಪಮ ಚರಿತ್ರ ಅಲ್ಲಮ ಪ್ರಭುದೇವರ ನಿಲವ ಕಂಡು ನಾನು ಧನ್ಯನಾದೆನು ಕಾಣಾ ಏಕಾಂತ ವೀರಸೊಡ್ಡಳ ॥೧೫೪॥

ಮತ್ತಂ, ಕೂರ್ಮನ ಶಿಸುವಿನ ಸ್ನೇಹದಂತಿಪ್ಪ ದೇವ ಎನಗಿಂದು ಪ್ರತ್ಯಕ್ಷ ಕಣ್ಣ ಮುಂದೆ ಗೋಚರವಾದ ನೋಡಾ. ಎನ್ನಂತರಂಗದಲ್ಲಿ ಹೂಣೆಹೊಕ್ಕು ವಿನಯ ಸದ್ಗೋಷ್ಠಿಯಂ ಮಾಡುವ ನಿಃಕಳಂಕ ಚೈತನ್ಯನು ಸಕಲ ರೂಪು ಸನ್ನಿಹಿತನಾದ ನೋಡಾ. ಬಟ್ಟಬಯಲು ಗಟ್ಟಿಗೊಂಡಂತೆ ಏಕಾಂತ ವೀರ ಸೊಡ್ಡಳ ನಿಮ್ಮ ಶರಣ ಪ್ರಭುದೇವರ ನಿಲವು ॥೧೫೫॥

ಶಂಕರದಾಸಿಮಯ್ಯಗಳು ಪ್ರಭುದೇವರ ಸ್ತುತಿಸಿದ ವಚನ. ॥

ಹರ ನಿರೂಪದಿಂದೆ ಬಸವಣ್ಣ ಧರಣಿಗೆ ಅವತರಿಸಿದ ಕಾರಣ ಶಿವಾಚಾರ ಸದಾಚಾರವೆಂಬುದು ಧರೆಗೆ ವಿಖ್ಯಾತವಾಯಿತ್ತು. ಶಿವಗಣ ಪ್ರಮಥಗಣಂಗಳೆಂಬ ಮಹಾ ಮಹಿಮರ ಸುಳುಹು ಧರೆಯ ಮೇಲೆ ಕಾಣ ಬಂದಿತ್ತು ನೋಡಯ್ಯ. ಪರುಷವ ಸಾಧಿಸಿ ತಂದಂತಾಯಿತ್ತು. ನಿಮ್ಮ ಶರಣರ ಸಂಗದಿಂದೆ ಎನ್ನ ಸಂದಿಯ ಮೊಗವಾಡ ಸೊಸಲಕ ಸ್ಥ್ಲಂಬ ಅಹಂಕಾರವ ಮುಂದುಗೊಂಡಿದ್ದೆನಯ್ಯ! ಎನ್ನ ಮದ ಉಡುಗಿ ಸಂಗನಬಸವಣ್ಣನ ಕರುಣದಿಂದೆ ಪ್ರಭುದೇವರ ನಿರಾಳವ ಕಂಡು ಬದುಕಿದೆನು ಕಾಣಾ ನಿಜಗುರು ಶಂಕರದೇವಾ. ॥೧೫೬॥

ಮತ್ತಂ ಕಾಯದ ಮಮವಳಿದಲ್ಲದೆ ಮಾಯಾವಿಕಾರವಳಿಯದು. ಭಾವ ನಾಶವಾಗದು. ಭಾವ ನಾಶವಾದ

ಲ್ಲದೆ ಲಿಂಗ ಸಂಬಂಧವಳವಡದು. ಲಿಂಗಸಂಬಂಧವಳವಟ್ಟಲ್ಲದೆ ಸುಖವು ಸಾಧ್ಯವಾಗದು. ಪರಮ ಸುಖ ಪರಿಣಾಮಕ್ಕೆ ಮಹಾನುಭಾವಿಗಳ ಸಂಗವೆ ಬೇಕು. ಮಹಾನುಭಾವಿಗಳ ಸಂಗದಿಂದಲ್ಲದೆ ವಿಶ್ರಾಮವಿಲ್ಲ. ಇಂತಪ್ಪ ಮಹಾನುಭಾವದ ಮೂರ್ತಿ ಸಂಗನಬಸವಣ್ಣನ ಕೃಪೆಯಿಂದ ಎನಗೆ ನಿಜವು ಕಾಣಬಂದಿತ್ತು. ಇದು ಕಾರಣ ನಿಜಗುರು ಶಂಕರದೇವರ ಶ್ರೀಪಾದವ ಕಂಡು ನಿಶ್ಚಿಂತನಾದೆನಯ್ಯ. ॥೧೫೭॥

ಮೇದಾರ ಕೇತಯ್ಯಗಳು ಪ್ರಭುದೇವರ ಸ್ತುತಿಸುವ ವಚನ.॥

ಎನ್ನ ಕಾಯದ ಕಳವಳವ ನಿಲಿಸಿ ಗುರು ಲಿಂಗವ ತೋರಿದ. ಎನ್ನ ಮನದ ವ್ಯಾಕುಳವ ನಿಲಿಸಿ ಜಂಗಮವ ತೋರಿದ. ಅಂತು ಅಂತರಂಗ ಬಹಿರಂಗದಲ್ಲಿ ತಾನೆಯಾಗಿ ಎನ್ನ ಪಾವನವ ಮಾಡಿದನು. ಅಮರಗಣಂಗಳ ಮುನಿದು ಎನ್ನ ಕೈಲಾಸಕ್ಕೊಯ್ದರೆ ಸಪ್ಯೋನ್ಮುಕ್ತಿಯ ತೋರಲೆಂದು ಮರ್ತ್ಯಕ್ಕೆ ಮರಳಿ ತಂದ ಸಂಗನಬಸವಣ್ಣನೆ ಗುರು ಎನಗೆ ಸಂಗನ ಬಸವಣ್ಣನೆ ಪರವೆನಗೆ ಸಂಗನ ಬಸವಣ್ಣನ ಕರುಣದಿಂದೆ ಘನಕ್ಕೆ ಘನ ಮಹಿಮ ಅಲ್ಲಮಪ್ರಭುವಿನ ಶ್ರೀಪಾದವ ಕಂಡು ಬದುಕಿದೆನು ಕಾಣಾ ಗೌರೇಶ್ವರಾ ॥೧೫೮॥

ಮತ್ತಂ, ಪ್ರಾಣಸ್ಥಾನದಲ್ಲಿ ಆಪ್ಯಾಯನವಾಯಿತ್ತು. ಲಿಂಗ ಜಂಗಮ ತನುಸ್ಥಲದಲ್ಲಿ ಆಪ್ಯಾಯನವಾಯಿತ್ತು. ಆಚಾರಲಿಂಗಸ್ಥಲ ಗುರುಲಿಂಗಸ್ಥಲ ಉಭಯಸ್ಥಲ ನಿಷ್ಠಲವಾಗಿ ತಾನೊಂದೆ ತೋರುತ್ತಿರ್ದಿತ್ತು. ಆ ತೋರುವ ತೋರಿಕೆಯೆ ಬಸವಣ್ಣನೆನಗೆ. ಆ ಬಸವಣ್ಣನ ಕರುಣದಿಂದೆ ಪ್ರಭುದೇವರ ಶ್ರೀಪಾದವ ಕಂಡು ಬದುಕಿದೆನು ಕಾಣಾ ಗೌರೇಶ್ವರಾ ॥೧೫೯॥

ಇತಿ ಶ್ರೀ ಮತ್ಸಕಲಗಣ ಪುರಾತನರೋಳ್ ಪ್ರಭುದೇವರು ಮಹಾನುಭಾವ ಸದ್ಗೋಷ್ಠಿಯಂ ಮಾಡಿದ ಶೂನ್ಯಸಂಪಾದನೆಯೊಳ್ ಪ್ರಭುದೇವರ ಆರೋಗಣೆಯಲ್ಲಿ ಪ್ರಭುದೇವರ ಸ್ತುತಿಗಂ ಏಕೋನ ವಿಂಶತ್ಯುಪದೇಶ ಸಮಾಪ್ತ ॥

ಶರಣರವಸಾನ ಪರಾನುರಿಕೆ ಸಂಪಾದನೆ

(ವಿಂಶತ್ಯುಪದೇಶ)

ಶ್ರೀ ಗುರು ಬಸವ ಲಿಂಗಾಯ ನಮಃ ॥ಕಂದ॥ ಸಂಗನ ಬಸವಣ್ಣನೆ ಘನ ಲಿಂಗದೊಳವಿರಳ ನಿಜೈಕ್ಯಮಂ ಶರಣ ಸ್ತೋತ್ರ ಮಂಗಳ ಅವಸಾನವ ಪ್ರಭು ಲಿಂಗಂ ಪೇಳಿದ ಸುಬೋಧೆಯೆಂತೆನೆ ಪೇಳ್ವೆಂ ॥

ಅದೆಂತೆಂದೊಡಾ ಎಲ್ಲಿ ಗಣಂಗಳು ಸ್ತೋತ್ರ ಮಾಡುತ್ತಿರಲು ಪ್ರಭುದೇವರು ಬರಿಯ ಸ್ತೋತ್ರವ ಮಾಡಿ ಫಲವೇನು? ನಿಃಶಬ್ದ ಬ್ರಹ್ಮವನುಡಿಯ ಗಡಣಕ್ಕೆ ಸಾಧ್ಯವಪ್ಪುದೆ ಎಲೆ ಮರುಳಗಳಿರಾ? ಆದಿಯಲ್ಲಿ ಪರಶಿವನ ತದ್ರೂಪವಾದ ಸ್ಥೂಲ ತತ್ವವೇ ಮರ್ತ್ಯ ಲೋಕದ ಮಹಾ ಮನೆಯನುದ್ಧರಿಸಲೆಂದು ರುದ್ರ ಗಣ ಪ್ರಮಥ ಗಣಂಗಳು ಮೊದಲಾದ ಸಮಸ್ತ ಗಣನಿಕರ ಸಹಿತಲೈತಂದು ಕಲ್ಯಾಣವೆಂಬ ಕಟಕವ ಶಿವಪುರವ ಮಾಡಿ ರುದ್ರ ಗಣ ಮೊದಲಾದ ಪ್ರಮಥ ಗಣವಸಂಖ್ಯಾತರೆಂದು ಹೆಸರಿಟ್ಟು ಕರೆದು ಶಿವಾಚಾರಧ್ವಜವನೆತ್ತಿ ಭಕ್ತಿಯ ಕುಳಸ್ಥಳ ವಕೃತ ದೃಷ್ಟ ಪವಾಡವ ತೋರಿ ಶಿವಲೋಕಕ್ಕೆ ತಾನೆ ನಿಚ್ಚಣಿಕೆಯಾಗಿ ಪೆರೆದು ಮರ್ತ್ಯವ ಪಾವನವ ಮಾಡಿದ ಬಳಿಕ ಇನ್ನು ಮರ್ತ್ಯದ ಹಂಗೇತಕ್ಕೆ? ತನ್ನೀಸವ ತುಂಬಿ ಫಳ ಒನ್ಮಿಂಗೆ ತೊಟ್ಟು ಬಿಡುವಂತೆ ಬಂದ ಮಣಹ ಪೂರೈಸಿತ್ತು ನೋಡಿರೆ. ಅಸಂಖ್ಯಾತರು ಇನ್ನು ನಿಮ್ಮ ನೀವೆ ತಿಳಿದು ನಿರಾಳದಲ್ಲಿ ನಿಜವಸ್ತುದಿ ಸಾವನ್ನಕ್ಕರ ಸಾಧನೆಯ ಕಲಿತರೆ ಕಾದುವ ದಿನವಿನ್ನಾವುದೆಂದು ಪ್ರಭುದೇವರು ತಮ್ಮ ಅವತಾರವ ಅವಸಾನವ್ಮಂ ನಿರೂಪಿಸುವ ಪ್ರಸ್ತಾವವ ವಚನ॥

ಅನುಪನರಿಯದೆ ಆದಿಯ ವಿಚಾರಿಸದೆ ಅನಾದಿಯಲ್ಲಿ ತಾನಾರೆಂಬುದ ನೋಡದೆ ಸ್ತೋತ್ರಮಂ ಮಾಡಿ ಫಲವೇನು? ನಿಃ ಶಬ್ದ ಬ್ರಹ್ಮನುಚ್ಯತೆ ಎಂಬ ಘನವ ಹೊಗಳಿಕೆಗೆ ಸಿಕ್ಕುವದೆ? ಎಲೆ ಮರುಳುಗಳಿರಾ ಅನಾದಿಯಲ್ಲಿ ಬಸವಣ್ಣನು ಏಳನೂರೆಪ್ಪತ್ತು ಅಮರಗಣಂಗಳು ಸಹಿತ ಮರ್ತ್ಯಕ್ಕೆ ಬಂದನೊಂದು ಕಾರಣದಿಂದ ಬಂದ ಮಣಿಹ ಪೂರೈಸಿತ್ತು. ಸಂದ ಪುರಾತರೆಲ್ಲರು ಕೇಳಿ ಇಂದು ನೀವೆಲ್ಲರು ನಿಮ್ಮ ನೀವೆ

ತಿಳಿದು ನೋಡಿ ನಿಜವನೈದುವುದು ಇಂದು ನಮ್ಮ ಗುಹೇಶ್ವರ ಲಿಂಗಕ್ಕೆ ಸುಳುಹಿಲ್ಲ. ॥೧॥

ಮತ್ತಂ. ಸಾವನ್ನಕ್ಕರ ಸಾಧನವ ಮಾಡಿದರೆ ಕಾದುವ ದಿನವಿನ್ನಾವುದು? ಬಾಳುವನ್ನಕ್ಕನ ಭಜಿಸುತ್ತಿದ್ದರೆ ತಾನಹ ದಿನವಿನ್ನಾವುದು? ಅರ್ಥವುಳ್ಳನ್ನಕ್ಕರ ಅರಿವುತ್ತಿದ್ದರೆ ನಿಜವನೈದುವ ದಿನವಿನ್ನಾವುದು? ಕಾರ್ಯಕ್ಕೆ ಬಂದು ಕಾರ್ಯ ಕೈಸಾರಿದ ಬಳಿಕ ಇನ್ನು ಮರ್ತ್ಯಲೋಕದ ಹಂಗೇತಕ್ಕೆ? ತನಿರಸ ತುಂಬಿದ ಅಮೃತ ಫಲ ಒಮ್ಮಿಗೆ ತೊಟ್ಟು ಬಿಡುವದು. ನೋಡಿರೆ ದೃಷ್ಟಾಂತವ. ಬಸವಣ್ಣ ಚನ್ನಬಸವಣ್ಣ ಮೊದಲಾದ ಪ್ರಮಥರು ಗುಹೇಶ್ವರ ಲಿಂಗದಲ್ಲಿ ನಿಜವನೈದಿ ನಿಶ್ಚಿಂತರಾಗಿರಯ್ಯ. ॥೨॥

ಹೀಗೆಂದು ಪ್ರಭುದೇವರು ನಿರೂಪಿಸುತ್ತಿರಲು, ಬಸವರಾಜದೇವರು ತಮ್ಮ ಲಿಂಗಾಂಗಸಮರಸೈಕ್ಯವೆಂತೆಂದು ಬೆಸಗೊಂಬ ಪ್ರಸ್ತಾಪದ ವಚನ.

ದೇವದೇವ ಮಹಾ ಪ್ರಸಾದ ಅವಧರಿಸು ದೇವ ಎನ್ನ ಬಿನ್ನಪವ. ಕಾಯದ ಮಾಯದ ಪಡಗರದಲ್ಲಿ ಹುಟ್ಟಿಸಿದಿರಿ. ಎನ್ನ ಅಗು ನಿಮ್ಮ ಲೀಲಾ ವಿನೋದ. ಆ ಕಾಯದ ಮಾಯದ ತಲೆಯ ಜಿವುಟಿ ಶ್ರೀಗುರು ಕಾರುಣ್ಯವ ಮಾಡಿ ಗುರು ಲಿಂಗ ಜಂಗಮ ತ್ರಿವಿಧ ಭಕ್ತಿಯ ಘನವ ತೋರಿಸಿ ನಿಮ್ಮ ಪಾದೋದಕ ಪ್ರಸಾದವನಿತ್ತು ರಕ್ಷಿಸಿದಿರಿ. ಅದು ನಿಮ್ಮ ಲೀಲಾ ವಿನೋದ. ಪರವಾದಿ ಬಿಜ್ಜಳ ಒರೆಗಲ್ಲಾದಲ್ಲಿ ಮುನ್ನೂರರು ವತ್ತು ಸತ್ತ ಪ್ರಾಣವನೆತ್ತಿ ಮೂವತ್ತಾರು ಕೊಂಡೆಯರ ಪರಿಹರಿಸಿ ಎಂಭತ್ತೆಂಟು ಪವಾಡವ ಮೆರೆದಿರಿ. ಅದು ನಿಮ್ಮ ಲೀಲಾ ವಿನೋದ. ಎನ್ನ ಮನದ ಮಲಿನವ ತೊಳೆಯಲೆಂದು ಬಂದು ಶೂನ್ಯ ಸಿಂಹಾಸನದ ಮೇಲೆ ಮೂರ್ತಿಗೊಂಡು ನಿಮ್ಮ ನಿಜ ಮಹಿಮೆಯನೆಲ್ಲ ಪ್ರಮಥರ ಮುಂದೆ ತೋರಿ ಎನ್ನ ಪಾವನವ ಮಾಡಿ ಪಡುಸ್ಥಲಮಂ ಎನ್ನ ಸರ್ವಾಂಗದಲ್ಲಿ ಪ್ರತಿಷ್ಠಿಸಿ ಎನ್ನ ನಿಮ್ಮಂತೆ ಮಾಡಿದಿರಿ. ಅದು ನಿಮ್ಮ ಲೀಲಾ ವಿನೋದ. ಕೂಡಲ ಸಂಗಮ ದೇವ ಎನ್ನ ವರ್ಮದ ಸಕೀಲವ ನೀವೆ ಬಲ್ಲಿರಾಗಿ ಎನಗೊಮ್ಮೆ ತಿಳುಗಿಕೊಟ್ಟು ಎನ್ನ ನುಳುಹಿಕೊಳ್ಳಾ ಪ್ರಭುವೆ ॥೩॥

ಇದಕ್ಕೆ ಪ್ರಭುದೇವರ ಪ್ರತ್ಯುತ್ತರ. ಕಾಯದೊಳಗೆ ಕಾಯವಾಗಿ, ಪ್ರಾಣದೊಳಗೆ ಪ್ರಾಣವಾಗಿ, ಮನದೊಳಗೆ ಮನವಾಗಿ, ಭಾವದೊಳಗೆ ಭಾವವಾಗಿ, ಅರುಹಿನೊಳಗೆ ಅರುಹಿನ ತಿರುಳಾಗಿ, ಮರಹು ಮಾರುಗೊಂಡು

ನಿಜ ನಡವು ಸಾಧ್ಯವಾದ ಬಳಿಕ ಅವುದು ಪರ್ವ ಅವುದು ಕರ್ಮ ಅವುದು ಜೋಪೆ ಅವುದು ಸಂಬಂಧವೆಂದು ಹೇಳಲಿಲ್ಲ ನೀ ಕೇಳಲಿಲ್ಲ. ಅದೇನು ಕಾರಣವೆಂದರೆ ಬೇಸರಗೊಂಬ ತೆರಹಿಲ್ಲವಾಗಿ ಗುಹೇಶ್ವರ ಲಿಂಗವಲ್ಲಿ ತಿಪ್ಪಮರೆ ಅವುದು ಹೇಳಯ್ಯ ಬಸವಣ್ಣಾ ॥೪॥

ಇದಕ್ಕೆ ಬಸವ ರಾಜ ದೇವರ ಪ್ರತ್ಯುತ್ತರ॥

ಅರಿದಿಹೆನೆಂದರೆ ಅರಿಹಿಂಗಸಾಧ್ಯ. ನೆನೆದಿಹೆನೆಂದರೆ ನೆನಹಿಂಗಸಾಧ್ಯ. ಭಾವಿಸಿಹೆನೆಂದರೆ ಭಾವಕ್ಕಸಾಧ್ಯ. ವಾಙ್ಮನಕ್ಕಗೋಚರ ಲಿಂಗವ ನರಿವ ಪರಿ ಎಂತಯ್ಯ? ಗುರು ತೋರಪನ್ನಕ್ಕರ ಗುರು ಶಿಷ್ಯರ ಮಥನದಲ್ಲಿ ಸ್ವಯಂ ಜ್ಯೋತಿ ಲಿಂಗವು ಉದಯವಪ್ಪುದೆಂಬ ಶ್ರುತಿ ಹುಸಿಯೆ? ಕೂಡಲ ಸಂಗಮದೇವ ನಿಮ್ಮ ಮಹಾನುಭಾವರ ಮಥನದಿಂದೆ ಎನ್ನಲ್ಲಿ ನಿಜವ ನೆಲೆಗೊಳಿಸಾ ಪ್ರಭುವೆ. ॥೫॥

ಇದಕ್ಕೆ ಪ್ರಭುದೇವರ ಪ್ರತ್ಯುತ್ತರ॥

ಮಥನವ ಲೀಲೆಯಲ್ಲಿ ಹುಟ್ಟುವದೆ ಬ್ರಹ್ಮನು? ಶ್ರುತಿ ಸ್ಮೃತಿಗಳಿಗೆ ಅಳವಡದು ನೋಡಾ. ಪೃಥ್ವಿಯೊಳಗಿಲ್ಲದೆ ಅಚಳವಪ್ಪ ಲಿಂಗವನು ಸಚರಾಚರವಲ್ಲಿ ಭರಿತವೆಂತೆಂಬೆ? ಇಲ್ಲವ ಲಿಂಗವನಲ್ಲಲ್ಲಿಗೆ ಉಂಟೆಂಬ ಲಿಂಗವಾತ್ಮ ಗುಹೇಶ್ವರನೆಂಬ ಲಿಂಗವು ಸಾಧ್ಯವಾಗದು ಕಾಣಾ ಸಂಗನ ಬಸವಣ್ಣಾ. ॥೬॥

ಇದಕ್ಕೆ ಬಸವ ರಾಜ ದೇವರ ಪ್ರತ್ಯುತ್ತರ॥

ಅನುಭಾವವಿಲ್ಲದ ಭಕ್ತಿ ಅರುವಿಂಗೆ ಬಾರದು. ಅನುಭಾವವಿಲ್ಲದ ಸಂಗ ಪರಮರಸ ಸುಖಕ್ಕೆ ಸಲುಕದು. ಅನುಭಾವವಿಲ್ಲದ ಪ್ರಸಾದ ಪರಿಣಾಮವ ಕೊಡದ. ಅನುಭಾವ ಇಲ್ಲದೆ ಏನೇನು ಅರಿಯಬಾರದು. ತನ್ನಲ್ಲಿ ಸಸಿ ಹಿತ ಉಳ್ಳಡೆ ಶಿವ ಶರಣರ ಸಂಗವೇತಕ್ಕೆನಲುಂಟೆ? ಕೂಡಲ ಸಂಗಮದೇವಯ್ಯ ನಿಮ್ಮ ಅನುಭಾವ ಗೂಡಿನ ಮಥನವೆಂದು ನುಡಿಯಬಹುದೇ ಪ್ರಭುವೆ? ॥೭॥

ಇದಕ್ಕೆ ಪ್ರಭುದೇವರ ಪ್ರತ್ಯುತ್ತರ॥

ನೆಲದ ಮಂಡಣ ಬಾಗಿಲು ಮೂರು ಸೊನೆಯ ಕಂಭದ ಶ್ರೀಲಲ್ಲಿ ಒಂದು ಜೇಗುಲ. ಅಲ್ಲಿ ಒಳಗಣ ಹುಸಿವಿನ ಕಲ್ಲಿನಲ್ಲಿ ಸಿಲುಕಿತ್ತು.

ನಾದ ಮೂರುತಿ ಲಿಂಗವಿಪ್ಪುದು. ಒಂದು ಮಾತನಾಡುವರಳುಕಿ ನುಡಿವುದು ಗುಹೇಶ್ವರ ವೆ.ಚ್ಚಲು ಬಹು ಪ್ರಾತಿನ ಮಾಲೆಯ ಅನುಭಾವಕ್ಕೆ ನಾಚು ವೆನು ಕಾಣಾ ಸಂಗನ ಬಸವಣ್ಣಾ ॥೮॥

ಇದಕ್ಕೆ ಬಸವರಾಜದೇವರ ಪ್ರತ್ಯುತ್ತರ. ॥

ಅರವಿಂದಲರಿವೆನೆಂದರೆ ಅರವಿಂಗಸಾಧ್ಯ. ಅರಿಯದೆ ಅರಿವ ಪರಿ ಎಂತಯ್ಯ? ಭಾವಿಸುವೆನೆಂದರೆ ಭಾವ ನಿರ್ಭಾವವೆಂದುದಾಗಿ ಮತ್ತೆ ಭಾವಿಯಲ್ಲವೆ ಕಾರಣ ಬಾರದಯ್ಯಾ. ವಾಙ್ಮನಕ್ಕಗೋಚರನೆಂದಡೆ ನುಡಿಯು ಲಿಲ್ಲವೆ ನಡೆ ಸಾಧ್ಯವಹ ಪರಿ ಎಂತು ಹೇಳಾ ಅಯ್ಯಾ? ಹಲವು ಮಾತಿನ ನಿಲವು ಒಂದೆಂಬ ನುಡಿ ಗಡಣದ ನಿಜವ ಬಲ್ಲವರಾರು ಹೇಳಯ್ಯ? ನಿಮ್ಮ ಮಾತೆಂಬ ಪರತತ್ವ ಒಂದಲ್ಲದೆ ಎರಡುಂಟೆ? ಕೂಡಲ ಸಂಗಮದೇವ ಕಡೆ ಮುಟ್ಟು ನೋಡುವಡೆ ನುಡಿಗೆಡೆಯಿಲ್ಲ. ಕೃಪೆಯಿಂದ ಕರುಣವ ಮಾಡಯ್ಯ ಪ್ರಭುವೆ ॥೯॥

ಇದಕ್ಕೆ ಪ್ರಭುದೇವರ ಪ್ರತ್ಯುತ್ತರ ॥

ಪ್ರಸಾದಲಿಂಗವುಳ್ಳನ್ನಕ್ಕರ ಪ್ರಾಣಲಿಂಗವೆಂಬ ವಾರ್ತೆ ಭಂಗನೋಡಾ. ಸಂಗನ ಬಸವಣ್ಣ ಬೀದಿಯಲ್ಲಿ ಕೊಡನ ನೊಡದು ಬಯಲ ನುಡುಗಿದರೆ ಉಂಟೆ ಹೇಳಾ? ಗುಹೇಶ್ವರ ಲಿಂಗವ ಬೇರು ಮಾಡಿ ಅರಸಲುಂಟೆ ಬಸವಣ್ಣಾ ॥೧೦॥

ಇದಕ್ಕೆ ಬಸವರಾಜದೇವರ ಪ್ರತ್ಯುತ್ತರ. ॥

ಆವಿಯಲ್ಲಿ ಸಾಧ್ಯವೆಂಬೆನೆ? ತಿಲ್ಲಿಂದತ್ತತ್ತ ಸಾಧ್ಯಾಸಾಧ್ಯ ಸೂತಕ ಶಬ್ದ ಕ್ಕತೀತ. ಆ ಲಿಂಗವೆ ಆಲಿಂಗನವಾಗಿ ಆವಿರಳ ಸಂಪನ್ನನಾದಲ್ಲಿ ಭೇದ ಭಾವವುಂಟೆಂಬೆನೆ? ಅದೇ ಭವಕ್ಕೆ ಬೀಜ. ಎನ್ನ ಪ್ರಾಣಲಿಂಗ ನೀನೆಂದಿ ಪ್ಪೆನಯ್ಯ ಕೂಡಲ ಸಂಗಮದೇವಾ. ॥೧೧॥

ಇದಕ್ಕೆ ಪ್ರಭುದೇವರ ಪ್ರತ್ಯುತ್ತರ॥

ಬಸವಣ್ಣನೆ ಪ್ರಾಣಲಿಂಗವೆಂದು ಭಾವಿಸಿ ದೃಷ್ಟಿ ನಟ್ಟ ಸೈವೆರನಾದುದ ಕಂಡೆ. ಕಲ್ಪಿಸಿ ಮನ ನಟ್ಟದು ಸಿಬ್ಬೆರಗಾಯಿತ್ತಯ್ಯ. ಗುಹೇಶ್ವರ ನಿಮ್ಮಲ್ಲಿ ಸರ್ವ ನಿರ್ವಾಣಿ ಸಂಗನ ಬಸವಣ್ಣನೆ ಎನ್ನ ಪ್ರಾಣಲಿಂಗವೆಂದರಿದು ನೀನೆನ್ನನೊಳಕೊಂಡ ಗುರುವೆಂದು ಕಂಡೆನಯ್ಯ. ನಿಮ್ಮ ಧರ್ಮ ನಿಮ್ಮ ಧರ್ಮ. ॥೧೨॥

ಮತ್ತಂ॥ ಎತ್ತಿತ್ತ ನೋಡಿದರೆ ಬಸವನೆಂಬ ಬಳ್ಳಿ. ಆ ಬಳ್ಳಿಯ ಹಿಡಿದೆತ್ತಿದರೆ ಲಿಂಗವೆಂಬ ಗೊಂಚಲು. ಆ ಲಿಂಗದ ಗೊಂಚಲ ಹಿಡಿದೆತ್ತಿದರೆ ಭಕ್ತಿ ರಸವಾಯಿತ್ತಯ್ಯ. ಇದಾರಯ್ಯ? ಅನುಮೋಕ್ಯವ ಮಾಡಬಲ್ಲವರು ಇದಾರಯ್ಯ? ಹೊರಗೆ ಪ್ರಜ್ವಲಿಸಿ ತೋರಬಲ್ಲವರು ಬಸವ ಗುರು ಎನ್ನ ಕರಸ್ಥಲದ ಲಿಂಗದ ಅಡಿಯನರುಹಿ ತೋರಿದ ಕಾರಣ ಗುಹೇಶ್ವರ ಲಿಂಗದ ನಿಲವ ನಿನ್ನಿಂದಲರಿದೆ. ಈ ಉಳಿದ ಲೋಕಾದಿಲೋಕಂಗಳೆಲ್ಲ ಎನ್ನ ಮುಖದಲ್ಲಿ ಕಿಂಚಿತ್ತು. ॥೧೩॥

ಮತ್ತಂ॥ 'ಬ' ಎಂಬಲ್ಲಿ ಭವ ಹರಿಯಿತ್ತಯ್ಯ. 'ಸ' ಎಂಬಲ್ಲಿ ಸರ್ವಜ್ಞಾನಿಯಾದೆನು. 'ವ' ಎಂಬಲ್ಲಿ ವಚಿಸುವರೆ ಚೈತನ್ಯಾತ್ಮಕನಾದೆನು. ಇಂತೀ ಬಸವಕ್ಷರತ್ರಯ ಎನ್ನ ಸರ್ವಾಂಗದಲ್ಲಿ ತೊಳಗಿ ಬೆಳಗುವ ಭೇದವ ನರಿಯೆ ನೆನು ಬಸವ ಬಸವ ಎನುತಿರ್ದೆನು ಕಾಣಾ ಗುಹೇಶ್ವರಾ. ॥೧೪॥

ಮತ್ತಂ, ಅಳಿಯ ಬಳಿಯ ಸುಳಿವನಲ್ಲ ಪ್ರಳಯವಿಲ್ಲದ ವಿಜಯನು. ಕಳಾಕುಳದ ಅತ್ಯನ ಅಂಗಸಂಗಿಯಲ್ಲ. ಸುಳುಹಿನೊಳಗಣ ಸೂಕ್ಷ್ಮವ ತಿಳಿದು ನೋಡುವರೆ ಅಣೆವಾದಿ ಗುಣ ವಿರಹಿತನ ಅಕಲ್ಪಿತ ಮಹಿಮನ ನೇನೆಂಬೆನು? ನೆಲದ ಕಳವಳದ ಬಳಿಯ ಭಾವ ರೂಪನಲ್ಲ. ಬೆಳಗಿನೊಳಗಣ ಬೆಳಗು ಗುಹೇಶ್ವನೆಂಬ ನಿಲವು ಸಂಗನ ಬಸವಣ್ಣನ ಕರಸ್ಥಲದೊಳಗೆ ತೊಳಗಿ ಬೆಳಗುತ್ತಿದ್ದಿತ್ತು ॥೧೫॥

ಮತ್ತಂ, ಅಂಗದ ಕೈಯ್ಯಲ್ಲಿ ಲಿಂಗ. ಮನದ ಕೈಯ್ಯಲ್ಲಿ ನಿಸ್ಸಂಸಾರ ಎಂತಯ್ಯ. ಪ್ರಾಣ ಲಿಂಗ ಲಿಂಗಪ್ರಾಣವೆಂಬುದು ಭಿನ್ನವಿಟ್ಟು ನುಡಿವೆನು. ಹೊರಗೆ ಕುರುಹಾಗಿ ತೋರುತ್ತಿದೆ. ಇದು ಕೃತಯುಗದಲ್ಲಿ ಮೂರ್ತಿಯಾದ ಕರಸ್ಥಲವಲ್ಲ. ಇದು ತ್ರೇತಾಯುಗದಲ್ಲಿ ಮೂರ್ತಿಯಾದ ಕರಸ್ಥಲವಲ್ಲ. ಇದು ದ್ವಾಪರದಲ್ಲಿ ಮೂರ್ತಿಯಾದ ಕರಸ್ಥಲವಲ್ಲ. ಇದು ಕಲಿಯುಗದಲ್ಲಿ ಮೂರ್ತಿಯಾದ ಕರಸ್ಥಲವಲ್ಲ. ಕೆಳಗೇಳು ಲೋಕ ಮೇಲೇಳು ಲೋಕ ಹುಟ್ಟಿದಲಿಂದತ್ತತ್ತ ಮುನ್ನ ಮುನ್ನಲಾದ ಕರಸ್ಥಲವು. ಸಂಗನ ಬಸವಣ್ಣನ ಕರ ಸ್ಥಲದೊಳಗೆ ಗುಹೇಶ್ವರನೆಂಬ ಲಿಂಗದೊಳಗೆ ಬೆಳಗು ತ್ರಿದ್ಮಪ ಕಂಡು ನಮೋ ನಮೋ ಎನುತಿರ್ದೆನು ॥೧೬॥

ಮತ್ತಂ, ಜಗತ್ಸ್ವಯಂಭುವೆಂಬ ಗಣೇಶ್ವರನ ಕರಸ್ಥಲದಲ್ಲಿ ಹಿಡಿದಾಡುತ್ತಿದ್ದಾರೆ. ಆದಿ ಲಿಂಗವೆಂದು ಬಗೆಯಲದು ಲೋಕವೆಲ್ಲ ಗುಹೇ

ಪ್ರಭು ನಿಮ್ಮ ಶರಣ ಬಸವಣ್ಣನಚ್ಚ ಲಿಂಗವ ಹಿಡಿವ ಕಾರಣ ಬರಿಯ ಲಿಂಗದ ಮಸ್ತಕವಾಯಿತ್ತು ತ್ರಿಜಗದೊಳಗೆ ॥೭॥

ಮತ್ತಂ, ಎನ್ನ ಕರ ಸ್ಥಲದೊಳಗೊಂದು ಮಹಾ ಬೆಳಗ ಕಂಡಿಸಯ್ಯ. ಮಹಾ ಮಂಗಳ ನಿಳಯವಾಗಿ ತೋರುತ್ತಿದೆ. ಗುಹೇಶ್ವರ ಲಿಂಗದ ಕಂಗಳ ಕಾಂತಿಗಳು ಸಂಗನ ಬಸವಣ್ಣನ ನಿವಾಳಿಸುತ್ತಿಪ್ಪವಯ್ಯ ॥೮॥

ಮತ್ತಂ, ಗುರುಸ್ಥಲ ಲಿಂಗಸ್ಥಲ ಜಂಗಮಸ್ಥಲ ಪ್ರಸಾದಸ್ಥಲ ಐಡ ನಿತ್ತಲ್ಲಿ. ಸಂಗನ ಬಸವಣ್ಣನ ಕರಸ್ಥಲದೊಳಗೆ ಇನ್ನಾರಿಗಹುದೀ ಭಕ್ತಿ ಸ್ಥಲ? ಇನ್ನಾರಿಗೆ ಸಾರಿಹುದೀ ಭಕ್ತಿಸ್ಥಲ? ಗುಹೇಶ್ವರ ಸಂಗನ ಬಸವಣ್ಣನ ಮರಿಹೊಕ್ಕು ಬದುಕಿದೆನು ॥೯॥

ಪ್ರಭುದೇವರು ಬಸವರಾಜದೇವರ ಐಕ್ಯಸ್ಥಲವುಂ ಕೊಂಡಾಡಿದ ಪ್ರಸ್ಥಾವದ ವಚನ ॥

ಅವಸ್ಥೆ ಅವಸ್ಥೆಯ ಕೂಡಿ ಬಿಂಬ ನಾಮವ ಕೂಡಿ ಕಳೆ ಕಳೆಗಳು ಒಂದಾದ ಪರಿಯ ನೋಡಾ. ಅದು ಲಿಂಗದ ಪ್ರಸಾದಿಷ್ಠ ಆನೆಂಬ ಗುರುಭಾವ ವಾದೆನಯ್ಯ. ಹಿಂದು ಮುಂದು ಒಂದು ಮಾಡಿದ ಮೂರ್ತಿಯಾಗಿ ಲಿಂಗ ಜಂಗಮವಾದ ಪರಿಯ ನೋಡಾ. ಗುಹೇಶ್ವರನ ಅವಿಮೋಕ್ಷವಾದ ಸಂಗನ ಬಸವಣ್ಣನ ಶ್ರೀಪಾದಕ್ಕೆ ನಮೋ ನಮೋ ಎಂಬೆನು ॥೨೦॥

ಮತ್ತಂ, ಕೈಲಾಸಕ್ಕೆ ಹೋದವರೆಲ್ಲ ಕೈಸೆರೆಯಾದರು. ಲಿಂಗಪಲ್ಲಿ ಲೀಯವಾದವರೆಲ್ಲರು ಬಂಧನಕ್ಕೊಳಗಾದರು. ಸಾಲೋಕ್ಯ ಸಾಮಿಪ್ಯ ಸಾರೂಪ್ಯ ಸಾಯುಜ್ಯದವರೆಲ್ಲರು ಎಡೆಯಾಡುತ್ತಿದ್ದರು. ಗುಹೇಶ್ವರ ನಿಮ್ಮ ಶರಣ ಸಂಗನ ಬಸವಣ್ಣ ಜಂಗಮ ಪ್ರಸಾದಿಯಾದನಾಗಿ ಸ್ವಯಂಭು ಲಿಂಗವಾದಾ ॥೨೧॥

ಮತ್ತಂ॥ ಪ್ರಭುದೇವರು ಬಸವರಾಜ ದೇವರ ನಿರ್ವಯಲ ಜ್ಞಾನ ಶೂನ್ಯಮುಂ ನಿರೂಪಿಸಿದ ವಚನ॥

॥ಪದ॥ ರಾಗ ನಾಟ॥

ತಾನಿದಿರೆಂಬೆರಡರಿಯದೆ ಧ್ಯಾನ ನಷ್ಟವಾಗಿ, ಜ್ಞಾತೃ, ಜ್ಞಾನ, ಜ್ಞೇಯ ವೆಂಬ ತ್ರಿವಿಧವ ಸರಿತ ಮಹಿಮಾ. ॥ಪದ॥

ಹೊರಗೊಳಗೆಂಬೆರಡರ ಬಗೆಯನ್ನರಸದೆ ಎರಡರ ತೆರನೆಂಬ ನುಡಿಯುಂ ಮುನ್ನವೆ ತಾನರಿಯದೆ ಅರಿವಿನ ಮೂಲವ ಹರಿದು ಮನನೆ ನಷ್ಟವಾದ ಅರಿವು ಅರಿವಿನ ಪುರವೆಯ ಕಾಡುಹಳವ ನಿಶ್ಚಿಂತಾ. ॥೧॥

ಉಲುಹಡಗಿದ ಪಮುಪ್ರಪ ನಿಲುವಿನ ಘಾತದಂತೆ ತಿಳಿವಿನ ಮಹ ಘನ ವಿವೇಕ ಹರಿಹಂಚಾಗಿ ಉಳಿದೆನೆಂಬಾ ಉಳುಮೆಯ ಮೂಲವ ಮುರಿದು ಕಳೆಯ ಬೆಳಗಳಿದು ನಿಜದೊಳು ನಿಂದ ಮಹಿಮಾ. ॥೨॥

ಉರಿ ಕರ್ಪೂರದ ಒಡಗೂಡಿ ಎರಡು ಅಳಿದ ಬಳಿಕ ಮರಳಿ ನೋಡಿ ಹೆನೆಂದರೆ ಭಸ್ಮವಿಲ್ಲ ನೋಡಾ. ಅರಿವ ನರಿದಿಹೆನೆಂಬ ಅರಿವಿನ ಮೂಲವ ಛೇದಿಸಿ ಛೇದಿಸಿದ ಜ್ಞಾನ ಭಸ್ಮ ವೆಂಬುದಿಲ್ಲದ ಮಹಿಮಾ. ॥೩॥

ನಿಜವಲ್ಲಿ ನಿರ್ಣಯವಡಗಿದ ಗತಿ ಮತಿ ನಷ್ಟವಾಗಿ ಕಳೆಯೊಳಗಣ ಬೆಳಗು ತಾನೆಂದು ತೋರುತಲಿರ್ಪ ತೊಳಗಿ ಬೆಳಗುವ ಚೈತನ್ಯ ತನ್ನಲ್ಲಿ ತಾನೆ ನಿಃಕಳೆಯಾಗಿ ನಿಜದೊಳು ನಿಃಶೂನ್ಯವಾದ ಮಹಿಮಾ. ॥೪॥

ತನ್ನೊಳು ತಾನೆಯಾಗಿ ಎನ್ನಲ್ಲಿ ನಾನರಿದೆನೆಂಬ ಅರುಹಿಗೆ ತೆರಪು ಗೊಡದೆ ಬಿಂದು ಬೀಸರವಾಗಿ ಪಮ್ಯಶೂನ್ಯ ನಷ್ಟವಾಗಿ ನಿರ್ಮಳ ನಿಜ ಪದವಾದ ಉಪಮಾತೀತ ಮಹಿಮಾ. ॥೫॥

ಜ್ಞಾನಜ್ಯೋತಿಯ ಪ್ರಭೆ ತಾನಾಗಿ ನಿಂದಿರ್ದ ತಾನಾಗಿದ್ದೆನೆಂಬ ಜ್ಞಾನ ಶೂನ್ಯವಾಗಿ ತಾನೆ ತನ್ನೊಳು ಪೈಮರೆದೊರಗಿರ್ದ ನಿರಾಳ ಜ್ಞಾನಾತೀತ ನಿರ್ಮಲ ನಿಶ್ಚಲ ನಿರ್ಭೇದ್ಯ. ॥೬॥

ಶಬ್ದ ನಿಃಶಬ್ದವಾಗಿ ನಿಃಶಬ್ದವನಹತವಾಗಿ, ಶಬ್ದ ನಿಃಶಬ್ದವೆಂಬ ಬುದ್ಧಿ ನಿರ್ಣಯಲಾಗಿ, ಇದ್ದುದ ಹೋದುದನರಿಯದೆ ಪೋರೆಗೆಟ್ಟ ನಿಃಶಬ್ದ ಗಂಭೀರ ಗುಹೇಶ್ವರ ನಿಮ್ಮ ಬಸವ ॥೭॥

ಇಂತು ಪ್ರಭುದೇವರು ಬಸವರಾಜದೇವರಿಗೆ ಲಿಂಗಾಂಗ ಸಮರಸದ ನಿರ್ವಯಲ ನಿಜ ಸಮಾಧಿಯ ನಿರ್ಣಯವನರುಹಿ ತೋರಲು, ಆ ಬಸವ ರಾಜ ದೇವರು ಕೃತ ಕೃತ್ಯವ ಸ್ತೋದಿದ ವಚನ॥

ಆ ರತವಡಗಿತ್ತೆನ್ನ. ಭಯಕೆ ಸಮನಿಸಿತ್ತೆನ್ನ. ಸಂಕಲ್ಪ ನವನಿಸಿತ್ತೆನ್ನ. ಸ್ವಯವು ಮೂರಕೊಂಡಿತ್ತೆನ್ನ. ನಿಮ್ಮ ನೋಡಿ ಎನ್ನ ಕಂಗಳು ಮಂಗಳವು

ಯದ ಸುಖನಂಗವಾಯಿತ್ತಯ್ಯ? ಒಳಹೊರಗೆಂಬುದ ತಿಳಿದು ಪ್ರಭುವಿನ ಕರುಣದಿಂದೆ ಕೂಡಲ ಸಂಗಮ ದೇವರಲ್ಲಿ ತೆರಹಿಲ್ಲದಿರ್ದೆನು. ॥೮॥

ಆ ಪ್ರಸ್ತಾವದೊಳು ಚನ್ನ ಬಸವ ರಾಜ ದೇವರು ಬಸವ ರಾಜ ದೇವರ ನಿರ್ಣಯದ ಪ್ರಸಾದದ ಕೃತನಿಶ್ಚಯವ ಕಂಡು ಸ್ತೋತ್ರಮಂ ಮಾಡುವ ವಚನ॥ ಪದಂಗಳು॥

ರಾಗ ಭೂಪಾಳಿ.

ಮಹಾ ಘನ ಲಿಂಗದೊಳಗೆ ಮಹಾಘನ ತದ್ರೂಪವಾಗಿ ಸಹಜ ಪರಿಣಾಮ ಪ್ರಸಾದವನಾರೋಗಿಸಿ ನಿರ್ಣಯಲಾದ ಬಸವಣ್ಣ ಗುರುವೆ. (ಪದ)

ಇತರೇತರ ಭಾವವ ನರಿಯದೆ, ಸತತ ವಿಧಾನವೆಂದರಿಯದೆ ಕೃತ ನಿಶ್ಚಯದ ಪರಿಣಾಮ ಪ್ರಸಾದವನಾರೋಗಿಸಿ ನಿರ್ಣಯಲಾದ. ॥೧॥

ನಿಂದ ಸುಖವ ನಿಂದೆ ನಿಂದೆಂಬ ಸಂಶಯ ಭಾವವ ಮರೆದು ನಿಂದ ನಿಜ ಪರಿಣಾಮ ಪ್ರಸಾದದೊಳೊಂದಿ ನಿಜ ಗ್ರಾಹಕನಾದ ಸುಖಿಯಾ ॥೨॥

ಅರ್ಪಿತವಿಲ್ಲದ ಮುನ್ನವೆ ಅರ್ಪಿತ ನಿಜ ರೂಪಾಗಿ ಅರ್ಪಿತ ಪರಿಣಾಮದ ಪ್ರಸಾದದ ತವನಿಧಿಯೆ ॥೩॥

ಮುಟ್ಟಿದ ಮುನ್ನವೆ ಪ್ರಸಾದ ಗ್ರಾಹಕನಾಗಿ ಮುಟ್ಟಿದೆನೆಂದೆಂಬುದನರಿಯದೆ ಒಟ್ಟಿ ಬಯಲ ಪರಮಾನಂದದಿ ವೃಷ್ಟಿ ಮುಟ್ಟದ ನಿಜವೆ ॥೪॥

ನಿರ್ಣಯ ನಿರ್ಣಯವಾದ ನಿರಂಜನ ಸನ್ನಿಹಿತ ಕೂಡಲ ಚನ್ನ ಸಂಗನಲ್ಲಿ ನಿತ್ಯ ತೃಪ್ತನಾದ ಪರಿಣಾಮಿ ಬಸವಣ್ಣ ತಂದೆ ॥೫॥

ಮತ್ತಂ. ಅಪ್ಪವನಪ್ಪಿದ ಶರಣ ವಾರಿ ಕಲ್ಲಿನಂತೆ ವಾಯುವನಪ್ಪಿದ ಪರಿಮಳದಂತೆ ಲಿಂಗವನಪ್ಪಿದ ಶರಣನ ದೇಹ ಎನಬಹುದೆ? ಅನಲನಪ್ಪಿದ ಕರ್ಪುರದಂತೆ ಕೂಡಲ ಚನ್ನ ಸಂಗೈಯ್ಯ ನಿಮ್ಮ ಶರಣ ಬಸವಣ್ಣನ ನಿಲವು ॥೬॥

ಮತ್ತಂ, ತಾನೆಲ್ಲ ಜಗಜಗವೆಲ್ಲ. ತಾನೆಂಬ ಅರಿವರತು ಮನ ಪೇಕ್ಷ್ಯ ರೂಪಾಗಿ ಅನ್ಯವಿಲ್ಲದ ಅನ್ಯವನರಿಯೆ. ಎಲ್ಲಿಯದು ನಿರಂಜನನ ನಿಜ ಚಿದ್ರೂಪಾಗಿ ಅರಿವು ತಾನೆಂಬ ಮಮತೆಗೆ ತೆರಹಿಲ್ಲೆಂದು ಆನೆನ್ನ ತಾನೆನ್ನ ದುಳಿದುಳಿಪಿಯನುಪಮಿಸಬಹುದೆ? ಅನುಪಮ ಸುಖ ಸಾರಾಯ ಕೂಡಲ ಸಂಗೈಯ್ಯ ನಿಮ್ಮ ಶರಣ ಬಸವಣ್ಣನು ॥೭॥

ಮತ್ತಂ, ವೇದ ವೇದಾರ್ಥ ಸಾರಾಯದಿಂದೆ ಹದಿನಾರು ಶಾಸ್ತ್ರ ಪುರಾಣಂಗಳಾದವು. ಆ ಪುರಾಣಂಗಳ ಸಾರಾಯವನರಿವುದರಿಂದ ಜ್ಯೋತಿಜ್ಞಾನವಾಯಿತ್ತು. ಆ ಜ್ಯೋತಿಜ್ಞಾನದಿಂದೆ ಮತಿಜ್ಞಾನ ಶ್ರುತಜ್ಞಾನ ಮನ ಪರಿಪೂರ್ಣ ಜ್ಞಾನ ಅವಧಿಜ್ಞಾನ ಕೇವಲಜ್ಞಾನ ಇಂತೀ ಪಂಚ ಜ್ಞಾನವೆ ಪಂಚ ಸ್ಥಲವಾಯಿತ್ತು. ಮತಿಜ್ಞಾನವುಳ್ಳಾತನೆ ಭಕ್ತ. ಶ್ರುತಜ್ಞಾನವುಳ್ಳಾತನೆ ಮಹೇಶ್ವರ. ಮನ ಪರಿಪೂರ್ಣಜ್ಞಾನವುಳ್ಳಾತನೆ ಪ್ರಸಾದಿ. ಅವಧಿಜ್ಞಾನವುಳ್ಳಾತನೆ ಪ್ರಾಣಲಿಂಗಿ. ಕೇವಲ ಜ್ಞಾನವುಳ್ಳಾತನೆ ಶರಣ. ಶರಣ ಸ್ಥಲವೆಂಬುದು ಭಿನ್ನಂ ನಾಸ್ತಿ. ಈ ಪಂಚಜ್ಞಾನಕ್ಕೆ ಮೂಲವಾದ ಜ್ಯೋತಿಜ್ಞಾನವೆ ಪಂಚಸ್ಥಲದಲ್ಲಿ ಏಕಾಕಾರದ ಐಕ್ಯನು. ಇಂತೆಂದುದಾಗಿ ಕೂಡಲ ಚನ್ನಸಂಗಯ್ಯನಲ್ಲಿ ಪಂಚಸ್ಥಲದ ನೆಲೆಯ ಬಲ್ಲ ಐಕ್ಯ ಬಸವಣ್ಣಂಗೆ ನವೋ ಸಮೋ ಎಂಬೆನು. ॥೩॥

ಆ ಪ್ರಸ್ತಾವದೊಳು ಬಸವರಾಜದೇವರ ಪರಾಮರಿಕೆಯನೇನೆಂಬೆ ನೇನೆಂಬೆ? ಒಂದೆರಡಾದುದ ಎಂತೆಂಬೆ? ಎಂತೆಂಬೆ ಎರಡೊಂದಾದುದ? ಅವಿರಳ ಘನ ಲಿಂಗೈಕ್ಯ ಮಹಾದಾನಿ ಕೂಡಲ ಸಂಗಮದೇವಯ್ಯ ತಾನೆ ಬಲ್ಲ. ॥೪॥

ಮತ್ತಂ, ಘನ ಗಂಭೀರ ಮಹಾ ಘನದೊಳಗೆ ಘನಕ್ಕೆ ಘನವಾಗಿದ್ದೆನಯ್ಯ. ಕೂಡಲ ಸಂಗಮದೇವಯ್ಯನೆಂಬ ಮಹಾ ಬೆಳಗಿನೊಳಗೆ ಬೆಳಗಾಗಿರ್ದೆನೆಂಬ ಶಬ್ದ ಮುಗ್ಧವಾಗಿರ್ಪುದ ನೇನೆಂಬೆನಯ್ಯ. ॥೫॥

ಮತ್ತಂ, ದೆಸೆದಿಕ್ಕು ಧರೆ ಗಗನವೆಂಬುದ ನಾನರಿಯೆನಯ್ಯ. ಲಿಂಗ ಮಧ್ಯಂ ಜಗತ್ಸರ್ವಂ ಎಂಬುದ ನಾನರಿಯೆನಯ್ಯ. ಲಿಂಗಸೋಂಕಿನ ಸುಖದೊಳಗೆ ಶಿವ ಶಿವ ಎನುತಿರ್ದೆನಯ್ಯ. ಅಂಬುಧಿಯೊಳಗೆ ಬಿದ್ದ ವಾರಿಕಲ್ಲಿನಂತೆ ಭಿನ್ನಭಾವವಿಲ್ಲದೆ ಶಿವ ಶಿವ ಎನುತಿರ್ದೆನು ಕಾಣಾ ಕೂಡಲಸಂಗಮದೇವಾ. ॥೪॥

ಮತ್ತಂ. ಅರಿವನ್ನಕ್ಕರ ಅರ್ಚಿಸಿದೆ, ಅರಿವನ್ನಕ್ಕರ ಪೂಜಿಸಿದೆ; ಅರಿವನ್ನಕ್ಕರ ಹಾಡಿದೆ, ಹೊಗಳಿದೆ; ಅರಿವು ಗೆಟ್ಟು ಮರಹು ನಷ್ಟವಾಗಿ, ಭಾವ ನಿರ್ಭಾವವಾಗಿ ನಿಜ ಒಳಕೊಂಡಿತ್ತಾಗಿ ಕೂಡಲ ಸಂಗೈಯ್ಯನಲ್ಲಿ ಸರ್ವ ನಿವಾಸಿಯಾದೆನು. ॥೪॥

ಮತ್ತಂ, ತಿರಿಯಲಿಲ್ಲವ ತಿವು ತಿವಗ್ರಹಿಸಿತ್ತಾಗಿ ತಿರಿಯಲಿಲ್ಲದ ವರಿಯಲಿಲ್ಲದ ನಿಜವು ನಿಂದಿತ್ತಾಗಿ ನಿರ್ಣಾಮವಾಯಿತ್ತು. ನಿಷ್ಪತ್ತಿಯಾಯಿತ್ತು, ಜಗನ್ಮಧದಲ್ಲಿ ಮನಗೆಟ್ಟಿತ್ತು, ನಿಂದಲ್ಲಿ ನಿರಾಳವಾಯಿತ್ತು. ಕೂಡಲ ಸಂಗನುದೇವರಲ್ಲಿ ಶಬ್ದ ಮುಗ್ಧವಾಯಿತ್ತು. ॥೪೨॥

ಮತ್ತಂ, ತಿಂತರಂಗ ಬಹಿರಂಗ ತತ್ಮ ಸಂಗ ಒಂದೇ ತಿಯ್ಯ. ತಿದ್ವೂಧದ ಸುಖವನು ಕೂಡಲ ಸಂಗಮದೇವ ತಾನೆ ಬಲ್ಲನು. ॥೪೩॥

ಮತ್ತಂ, ಸಮಸ್ತ ಕತ್ತಲೆಯ ಮಸಕವ ಕಳೆದಿಪ್ಪ ಇರವ ನೋಡಾ! ಬೆಳಗಿನ ಬೆಳಗು ಸಿಂಹಾಸನವ ಕೂಡಿವ ಕೂಟವ ಕೂಡಲ ಸಂಗೈಯ್ಯ ತಾನೇ ಬಲ್ಲನು. ॥೪೪॥

ಮತ್ತಂ॥ ಚಿಕ್ಕದಣ್ಣಾಯಕರ ಸಮರಸ. ತಿರಿವಿನಾಶ್ರಯ ಸಂಗ ತಿರಿತು ನೆರಿ ಮಾಡಲು ಭಾವದಲ್ಲಿ ಸರ್ಪ ದಷ್ಟವಾಗಿ ತಿಕಾರ ಪ್ರಾಣದಲ್ಲಿ ವಿಕ್ರಮಿಸಿತ್ತು. ಭಾವದಲ್ಲಿ ಭರಿತ ನಿರ್ಭಾವದಲ್ಲಿ ನಿರುತ ಕೂಡಲಚನ್ನಸಂಗಯ್ಯ ಸಕಲಾಶ್ರಯದಲ್ಲಿ ನಿರ್ಣಯ. ॥೪೫॥

ಮತ್ತಂ, ನೇಹದ ಸುಖವ ನೋಟ ನುಂಗಿತ್ತು. ನೋಟದ ಸುಖವ ಕೂಟ ನುಂಗಿತ್ತು. ಕೂಟದ ಸುಖವ ತಿಲಿಂಗನ ನುಂಗಿತ್ತು. ತಿಲಿಂಗನದ ಸುಖವ ಸಂಗ ನುಂಗಿತ್ತು. ಸಂಗಸುಖವ ಸಮರಸ ನುಂಗಿತ್ತು. ಸಮರಸದ ಸುಖವ ಪರವಶ ನುಂಗಿತ್ತು. ಪರವಶದ ಸುಖವ ಕೂಡಲ ಚನ್ನ ಸಂಗಯ್ಯ ತಾನೆ ಬಲ್ಲ ॥೪೬॥

ಮತ್ತಂ, ತಿರಿಯಲಿಲ್ಲದ ತಿರಿವು, ಮರೆಯಲಿಲ್ಲದ ಮರಹು, ನೋಡಲಲ್ಲದ ನೋಟ, ಕೂಡಲಿಲ್ಲದ ಕೂಟ, ಬೆರಿಸಲಿಲ್ಲದ ಬೆರಗು ನಿಂದುದು ಕೂಡಲ ಚನ್ನ ಸಂಗಯ್ಯ ಲಿಂಗೈಕ್ಯವು ॥೪೭॥

ಮತ್ತಂ, ತರುಹಿಂದಾದ ಮರಹಿನ ಶಬ್ದ ವರಿಯಲಾಗದು. ತರಿಪಡೆ ತದಕ್ಕದೆ ಭಂಗವು. ತಿರಿವರತು ಮರಹು ನಷ್ಟವಾಗಿ ಜ್ಞಾನವೆಂಬಲ್ಲಿ ನಿರ್ಣಯವಿಲ್ಲಿಯ್ಯ. ಜ್ಞಾನದೊಳಗಣ ಬುದ್ಧಿಯು ಭಸ್ಮವಾಗಿ ಧರಿಸಿ ಕೂಡಲ ಚನ್ನ ಸಂಗಯ್ಯ ಸರ್ವನಿವಾಸಿ ॥೪೮॥

ಮತ್ತಂ, ಏನೆಂಬೆನೇನೆಂಬೆನಾಶ್ರಯ ವಿರಹಿತನ? ಏನೆಂಬೆನೇನೆಂಬೆನಾಮ ನಿರ್ಣಮನ? ಏನೆಂಬೆನೇನೆಂಬೆ? ಸಂಸಾರ ಭರಿತ ನಲ್ಲದುದನೇನೆಂಬೆ?

ದೇವಾ ಕ್ರಿಯೆ ಮೀರಿದ ಸಂಬಂಧ ಕೂಡಲಿ ಚನ್ನಸಂಗಮ ದೇವ ನಾನೆಂಬುದಿಲ್ಲವಾದನೇನೆಂಬವಿನುವೆನು? ॥೪೯॥

ಮತ್ತಂ, ಎನ್ನ ಮನದಲ್ಲಿ ಇದೇ ತಥ್ಯವಯ್ಯ. ಬೆರಸುವರೆ ಪ್ರಾಣದ ಮಥನ ಭಾವದ ನಷ್ಟ ತನು ಸ್ಥಿತಿಯ ಮರೆದು ಭ್ರಾಂತ ಸೂತಕವೆಲ್ಲ ವಿವರಿಸಿ ಹೋಯಿತು. ರೂಸ್ಯ ಸಿಂಹಾಸನದ ಮೇಲೆ ಕೂಡಲ ಚನ್ನಸಂಗಮ ನಿಮ್ಮ ಶರಣನ ಪ್ರಭೆಯಿಂದೆ ॥೫೦॥

ಮತ್ತಂ॥ ವೃಷ್ಟಿ ನಷ್ಟವಾದುವಕ್ಕೇನು ವೃಷ್ಟ? ಭಾವ ನಷ್ಟವಾದುದೇ ವೃಷ್ಟ. ಭಾವ ನಷ್ಟವಾದುದಕ್ಕೇನು ವೃಷ್ಟ? ಸ್ವಯ ಪರವರಿಯದುದೇ ವೃಷ್ಟ. ಸ್ವಯ ಪರವರಿಯದುದಕ್ಕೇನು ವೃಷ್ಟ? ಕೂಡಲ ಚನ್ನ ಸಂಗಯ್ಯನ ನೆನೆದುದೇ ವೃಷ್ಟ. ॥೫೧॥

ಮತ್ತಂ॥ ಸಹಜವೆನ್ನದೆ ನಿಜವೆನ್ನದೆ ಖಂಡಿತವೆನ್ನದೆ ಪರಿಪೂರ್ಣವೆನ್ನದೆ ಏನು ಎನ್ನದೆ ಕೂಡಲ ಚನ್ನ ಸಂಗಯ್ಯ ಲಿಂಗೈಕ್ಯವು. ॥೫೨॥

ಮತ್ತಂ॥ ತನೆಂಬುದಿಲ್ಲ, ನೀನೆಂಬುದಿಲ್ಲ, ಸ್ವಯವೆಂಬುದಿಲ್ಲ, ಪರವೆಂಬುದಿಲ್ಲ, ತರಿವೆಂಬುದಿಲ್ಲ, ಮರಹೆಂಬುದಿಲ್ಲ, ಒಳಗೆಂಬುದಿಲ್ಲ, ಹೊರಗೆಂಬುದಿಲ್ಲ ಕೂಡಲ ಚನ್ನ ಸಂಗಯ್ಯ ನೆಂಬ ಶಬ್ದ ಮುನ್ನಿಲ್ಲ. ॥೫೩॥

ಮತ್ತಂ॥ ತನು ಬಯಲು ನಿರ್ವಯಲೊಳಗಡಗಿತ್ತು. ಮನ ಬಯಲು ನಿರ್ವಯಲೊಳಗಡಗಿತ್ತು. ಭಾವ ಬಯಲು ನಿರ್ವಯಲೊಳಗಡಗಿತ್ತು. ಬಯಲು ಬಯಲ ಬೆರಸಿ ಬಯಲೆಯಾಯಿತ್ತು. ಕೂಡಲ ಚನ್ನ ಸಂಗಯ್ಯನೆಂಬ ನುಡಿಯಡಗಿತ್ತು. ॥೫೪॥

ನುಡಿವಾಕಯ್ಯಗಳ ಸರಾಮರಿಕೆ. ನಿತ್ಯ ಸತ್ಯದೊಳಗಡಗಿ ಸತ್ಯ ಆಚಾರದೊಳಗಡಗಿ ಆಚಾರ ಅನುಭಾವದೊಳಗಡಗಿ ಅನುಭಾವ ಜ್ಞಾನದೊಳಗಡಗಿ ಮಹಾಜ್ಞಾನ ಮನೋಲಯದೊಳಗಡಗಿ ಮನೋಲಯವೆ ಮಹಾಘನವಾಯಿತ್ತು ಕಲಿ ದೇವರ ದೇವ ನಿಮ್ಮ ನಿಜೈಕ್ಯ. ॥೫೫॥

ತನು ನಷ್ಟ ಮನ ನಷ್ಟ ನೆನಹು ನಷ್ಟ ಭಾವ ನಷ್ಟ ಜ್ಞಾನ ನಷ್ಟ ಇಂತೀ ಪಂಚ ನಷ್ಟದೊಳಗೆ ನಾ ನಷ್ಟವಾದೆನು. ಆ ನಷ್ಟದೊಳಗೆ ನೀನು ನಷ್ಟವಾದೆ. ಕಲಿ ದೇವರ ದೇವನೆಂಬ ನುಡಿ ನಿಃಶಬ್ದ ಬ್ರಹ್ಮಮುಖ್ಯತಿ ॥೫೬॥

ಅರಿವಿನೊಳಗಣ ಕುರುಹು ಮರಹಿಂಗೆ ಬೀಜ. ಕುರುಹಿನ ಮರಹ ನರಿವು ನುಂಗಿ ಘನಕ್ಕೆ ಘನ ವೇದ್ಯವಾದ ಬಳಿಕ ನಿತ್ಯ ಪರಿಪೂರ್ಣ ತಾನೆ. ಕಲಿದೇವರ ದೇವನು ವಾಙ್ಮನಕ್ಕಗೋಚರನು. ॥೫೭॥

ಮತ್ತಂ, ಎನ್ನ ಆಯುತ ಅವಧಾನಗೆಟ್ಟಿತ್ತಯ್ಯ. ಎನ್ನ ನ್ಯಾಯತ ಸಂದಳಿಯಿತ್ತಯ್ಯ. ಎನ್ನ ಸಮಾಧಾನ ತರ ಹರವಾಯಿತ್ತಯ್ಯ ಎನ್ನ ಅರಿವು ನಿಜದಲ್ಲಿ ನಿಷ್ಪತ್ತಿಯಾಯಿತ್ತಯ್ಯ ಕಲಿ ದೇವರ ದೇವಯ್ಯ ನಿಮ್ಮ ರಬ್ಬ ಮುಗ್ಧವಾಗಿದ್ದೆನು ॥೫೮॥

ಮತ್ತಂ, ತನುವಳಿಯಿತ್ತು. ಮನವಳಿಯಿತ್ತು. ಭಾನವಳಿಯಿತ್ತು. ಬಯಕೆಯಳಿಯಿತ್ತು. ನಿಜವೆಂಬುದಳಿಯಿತ್ತು. ನಾಮ ಸೀಮೆಯ ಬಯಲಲ್ಲಿ ಕಲಿದೇವರ ದೇವನಲ್ಲಿ ಬೆರಸಿ ಬೇರಿಲ್ಲವಿರ್ದೆನು ॥೫೯॥

ಮತ್ತಂ, ತ್ರಿವಿಧ ಮಧ್ಯ ಶೇಷ ತ್ರಿಕೂಟ ಬೆಳಸು ದಿವ್ಯ ಮಧ್ಯದ ಸರಿಯಾಣ ನಿರ್ಭಾವ ಮಧ್ಯ ಧ್ಯಾನವನೆ ತಂದು ರತ್ನಾ ಭರಣದ ಭಾಜನದಲ್ಲಿ ಇವನೆಲ್ಲವನು ಸಂಹರಿಸುವೆನು. ಹಿಂದೆ ನೋಡಿಯು ಅರನು ಕಾಣೆ. ಮುಂದೆ ನೋಡಿಯು ಅರನು ಕಾಣೆ. ಮಧ್ಯದಲ್ಲಿ ನೋಡು. ವೈಶ್ಯಕ್ಕರನ ಮಾಡಿದ ಭಕ್ತಿಯ ಬೇಡವೆಂದು ಒಬ್ಬ ಜಂಗಮ ಬಂದತೆ ಕೊಟ್ಟು ಆ ಭಕ್ತಿಯ ಶೇಷ ಪ್ರಸಾದದಿಂದೆ ಶುದ್ಧನಾದೆನು ಕಾಣಾ ಕಲಿ ದೇವರ ದೇವಾ ॥೬೦॥

ಮತ್ತಂ ಬಹುರೂಪಿ ಜೌಡಯ್ಯಗಳ ಸಮರಸದ ವಚನ॥

ಷಡುಚಕ್ರವಳಯದೊಳಗೆ ನಾನಾಡುವೆ. ಬಹು ರೂಪಭ್ರೂ ಮಧ್ಯ ಮಂಡಲ ಹೃದಯ ಕಮಲ ಮಧ್ಯದ ಅಜ್ಞ ಸ್ವರದ ಮಣಿ ಪೂರಕದ ಮೇಲೆ ನಾನಾಡುವೆ. ಬಹು ರೂಪ ನುರಿಯುಂಡ ಕರ್ಪೂರದಂತೆ ನಾನಾಡುವೆ. ಬಹು ರೂಪ ಬಯಲ ಬೆರಸಿದ ಮರೀಚಿಯಂತೆ ನಾನಾಡುವೆ. ಬಹು ರೂಪ ರೇಕಣ್ಣ ಪ್ರಿಯನಾಗಿ ನಾಥ ಬಸವಣ್ಣನಿಂದೆ ಬದುಕಿದೆನು ॥೬೧॥

ಮತ್ತಂ, ನಿಷ್ಪತ್ತಿ ಬಂದು ಹಾಳಕೊಂಡಿದ್ದಲ್ಲಿ ನಿರಾಶ್ರಯ ಬಂದು ಹೊದಕೆಯಾದಲ್ಲಿ ನಿರಾಲಂಬವಾಯಿತ್ತಯ್ಯ. ಎನ್ನ ಬಹು ರೂಪು ನಿರು ಹರಣ ಮಧ್ಯದಲ್ಲಿ ಅಡಗಿದ್ದುದಲ್ಲ. ಎನ್ನ ಬಹು ರೂಪಕ್ಕೆ ಪ್ರಾಣಲಿಂಗ ಬಸವಣ್ಣ ಕಾಣಾ. ರೇಕಣ್ಣ ಪ್ರಿಯ ನಾಗಿನಾಥ ಬಸವಣ್ಣನಿಂದೆ ಬದುಕಿದೆನು ॥೬೨॥

ಮತ್ತಂ, ಇಂದು ಬಂದ ಬಹುರೂಪ ನೋಡಿರಯ್ಯ. ಗತಿಯ ಹೊವ್ವದೆ ಸ್ಥಿತಿಯು ಹೊವ್ವದೆ ಸ್ಥಾನವ ಹೊವ್ವದೆ ಏನರು ಕಟ್ಟುವ ಕಟ್ಟಳೆಯ ವಿಚಾರಿ ನಾನಾಡುವೆ. ಬಹುರೂಪ ರೇಕಣ್ಣ ಪ್ರಿಯ ನಾಗಿನಾಥ ಬಸವಣ್ಣನಿಂದ ಬದುಕಿದೆನು ॥೬೩॥

ಮತ್ತಂ, ಇನ್ನಾಡುವೆ ಜಂಗಮ ಬಹುರೂಪ ಅಲ್ಲಮನಂತೆ. ಆಡುವೆ ಬಹುರೂಪು ಅಜಗಣ್ಣನಂತೆ. ಆಡುವೆ ಬಹುರೂಪ ಮುಖವಾದದಯ್ಯ ಗಳಂತೆ. ಆಡುವೆ ಬಹುರೂಪ ಪುರುಷಂಗಣ ಮೆಟ್ಟಿ ಆಡುವೆ. ಬಹು ರೂಪ ರೇಕಣ್ಣ ಪ್ರಿಯ ನಾಗಿನಾಥ ಬಸವಣ್ಣನಿಂದ ಬದುಕಿತ್ತೀ ಲೋಕವೆಲ್ಲಾ ॥೬೪॥

ಮತ್ತಂ, ಶೂನ್ಯ ಸನ್ನಿಹಿತನಾದಲ್ಲಿ ಶೂನ್ಯ ಪದಾರ್ಥವಾದಲ್ಲಿ ಬಸವನ ಪ್ರಸಾದವೆಂಬ ಬಸವನ ಕೂಡೆ ಆಡುತ್ತಿರ್ದ ರೇಕಣ್ಣ ಪ್ರಿಯನಾಗಿ ನಾಥ ಬಸವಣ್ಣನಿಂದ ಒದುಕಿತ್ತೀ ಲೋಕವೆಲ್ಲಾ ॥೬೫॥

ಶುದ್ಧವೇ ಜವನಿಕೆಯಾಗಿ ಶುದ್ಧವೇ ಸಿಂಹಾಸನವಾಗಿ ಪ್ರಸಿದ್ಧ ಹೊದಕೆಯ ಹೊದ್ದು ನಾನಾಡುತ್ತಿರ್ದ್ದೆ. ಬಹುರೂಪ ಶುದ್ಧ ವಿಡಿದಲ್ಲಿ ಇದ್ದ ನಿಜ ನಾಸ್ತಿಯಾಯಿತ್ತೆನ್ನ ಬಹುರೂಪ, ಸಿದ್ಧವೆಂಬ ಸಿಂಹಾಸನವ ಳಿವಲ್ಲಿ ಬುದ್ಧಿ ಗೆಟ್ಟು ಅಡುತಿರ್ದ್ದಯ್ಯ ಎನ್ನ ಬಹು ರೂಪು ಪ್ರಸಿದ್ಧ ಹೊದಿಕೆಯ ಹರಿವಲ್ಲಿ ನಾ ಬಸವನ ಕೂಡೆ ಆಡುತಿರ್ದೆ ಕಾಣಾ ರೇಕಣ್ಣ ಪ್ರಿಯನಾಗಿ ನಾಥ ಬಸವಣ್ಣನಿಂದ ಬದುಕಿತ್ತೀ ಲೋಕವಲ್ಲಾ. ॥೬೬॥

ಮತ್ತಂ, ಸರಮೊಳಗೆ ಸರಗಟ್ಟಿ ಸರ ಹರಿದವ ನಾನಯ್ಯ. ಮಹದಲ್ಲಿ ಮನೆ ಗಟ್ಟಿ ವಸಿ ಬೆಂದವ ನಾನಯ್ಯ. ಕಿಚ್ಚಿನೊಳಗೆ ಕಿಚ್ಚ ನೊಟ್ಟಿ ಕಾದವ ನಾನಯ್ಯ. ಆ ಕಿಚ್ಚಿನೊಳಗೆ ಬಿದ್ದು ಉರಿದವ ನಾನಯ್ಯ. ಬಸವಣ್ಣನು ಎನ್ನ ಬಹುರೂಪಕ್ಕೆ ಸೂತ್ರಧಾರಿಯಾದ. ಸೂಕ್ಷ್ಮವಾಗಿ ಹೋದೆ ನಾ ಬಸವನಿಂದ ಕಟ್ಟಿ ಕಾಣಾ ರೇಕಣ್ಣ ಪ್ರಿಯನಾಗಿ ನಾಥ ಬಸವಣ್ಣನಿಂದ ಬದುಕಿತ್ತೀ ಲೋಕವೆಲ್ಲಾ ॥೬೭॥

ಹಡಪದಪ್ಪಣ್ಣಗಳ ಪರಾಮರಿಕೆ. ಎನ್ನ ತನು ನಿಮ್ಮ ಸೇವೆಯಲ್ಲಿ ಸವೆದು, ಎನ್ನ ಮನ ನಿಮ್ಮ ನೆನಹಿನಲ್ಲಿ ಸವೆದು, ಎನ್ನರಿವು ನಿಮ್ಮ ಘನದಲ್ಲಿ ಸವೆದು ನಿಶ್ಚಲ ನಿಜೈಕ್ಯವಾಗಿ ಬಸವ ಪ್ರಿಯ ಕೂಡಲ ಚನ್ನ ಸಂಗಯ್ಯ ನಾ ನೀನೆಂಬುದು ಏನಾಯಿತ್ತೆಂದರಿಯೆ. ॥೬೮॥

ಮತ್ತಂ, ಎನ್ನ ಆಚಾರ ವಿಚಾರ ಬಸವಣ್ಣಂಗರ್ಪಿತವಾದವು ಎನ್ನ ಅವಧಾನ ಅನುಭಾವ ಬಸವಣ್ಣಂಗರ್ಪಿತವಾದವು. ಎನ್ನ ಸರ್ವಾಚಾರ ಸಂಪತ್ತು ಬಸವಣ್ಣನಲ್ಲಿ ವೇದ್ಯವಾಯಿತ್ತು. ಬಸವ ಪ್ರಿಯ ಕೂಡಲ ಚನ್ನ ಸಂಗಮದೇವರಲ್ಲಿ ನಿಜ ನಿವಾಸಿ ಯಾಗಿರ್ದೆನು. ॥೯೯॥

ಮತ್ತಂ, ಹರಿದು ಹತ್ತಿ ಮುಟ್ಟಲಿಲ್ಲ. ಮುಟ್ಟಿ ಮುರಳಿ ಇಳಿಯ ಲಿಲ್ಲ. ಬೆರಸಿದೆನೆಂದು ನೆನೆಯಲಿಲ್ಲ. ಬಸವ ಪ್ರಿಯ ಕೂಡಲ ಚನ್ನಸಂ ಗಯ್ಯನಲ್ಲಿ ಕಬ್ಬಕ್ಕೆ ಇಂಬಿಲ್ಲದಿದ್ದೆನ. ॥೨೦॥

ಸೊಡ್ಡಳ ಬಾಚರಸರ ಪರಾಮರಿಕೆ. ಎನ್ನ ಕಾಯವೆಂಬ ಸಿಂಹಾ ಸನದಲ್ಲಿ ಪ್ರಾಣ ಲಿಂಗವ ಮೂರ್ತಿಗೊಳಿಸಿ, ಧ್ಯಾನವೆಂಬ ಹಸ್ತದಲ್ಲಿ ಮುಟ್ಟಿ ಪೂಜಿಸುತ್ತಿರಲು, ಮೆಲ್ಲಮೆಲ್ಲನೆ ಸುತ್ತಿ ಮುತ್ತಿದ ಸಂಸಾರ ಬಯಲ ಬೆರ ಸಿದ ನಾನೆಂಬ ಭೇದವಳಿದು ಮಹಾದಾನಿ ಸೊಡ್ಡಳನಲ್ಲಿ ನಿಜಲಿಂಗೈಕ್ಯ ವಾಯಿತ್ತು. ॥೨೧॥

ಮತ್ತಂ, ಅಂಗ ಲಿಂಗಕ್ಕೆ ಗೂಡಾಯಿತ್ತು. ಲಿಂಗ ಅಂಗಕ್ಕೆ ಗೂಡಾ ಯಿತ್ತು. ಅಂಗ ಲಿಂಗ ಸಂಗವೆಂಬ ಸಂದಳಿದು ನಿಜ ಲಿಂಗೈಕ್ಯವಾ ಯಿತ್ತು. ಭಾವ ನಿರ್ಭಾವ ನಿಷ್ಪತ್ತಿಯಲ್ಲಿ ಮಹಾದಾನಿ ಸೊಡ್ಡಳಂಗೆ ಸರ್ವ ನಿರ್ವಾಣವಾಯಿತ್ತು. ॥೨೨॥

ಮತ್ತಂ, ಎನ್ನ ಅಷ್ಟವಿಧಾರ್ಚನೆ ಷೋಡಶೋಪಚಾರದ ಹಂಗು ಹರಿದು ಸೋಹಂ ಸೋಹಂ ಎನುತ್ತಿದ್ದಿತು. ಸೋಹಂ ಮೆಂಬ ಸುಖದ ಮಡಾ ಸವಿಯ ಮಹಾದಾನಿ ಸೊಡ್ಡಳ ಆರೋಗಣೆಯ ಮಾಡಿ ನಿಜ ನಿವಾಸಿಯಾದ ಕಾರಣ ನಾನು ನಾವು ನೀನೆಂ ಗೆಟ್ಟಿನು. ॥೨೩॥

ಮತ್ತಂ, ಅಕ್ಕ ನಾಗಾಯಿಗಳ ಪರವಶ ಎನ್ನ ತನು ಚನ್ನಬಸ ವಣ್ಣನ ಬಯಲ ಬೆರಸಿತ್ತು. ಎನ್ನ ಮನ ಸಂಗನಬಸವಣ್ಣನ ನಿಜಪ ದವ ಬೆರಸಿತ್ತು. ಎನ್ನ ಪ್ರಾಣ ಪ್ರಭುದೇವರ ಬಯಲ ಬೆರಸಿತ್ತು. ಬಸ ವಣ್ಣ ಪ್ರಿಯ ಚನ್ನಸಂಗನ ಶರಣರು ಒಬ್ಬರೊಬ್ಬರೊಂದೊಂದ ಹಂಚಿ ಕೊಂಡ ಕಾರಣ ಎನಗೇನು ಎನಗೇನು ಇಲ್ಲದೆ ಮಹಾ ಘನದಲ್ಲಿ ನಿಜ ನಿವಾಸಿಯಾಗಿದ್ದೆನು. ॥೨೪॥

ಮತ್ತಂ॥ ಎನ್ನ ಕುಲ ಸೂತಕವನಳಿದ ಬಸವಣ್ಣ. ಎನ್ನ ಫಲಸೂತ ಕವನಳಿದ ಬಸವಣ್ಣ. ಎನ್ನ ತನು ಸೂತಕವನಳಿದ ಬಸವಣ್ಣ. ಎನ್ನ ಮನ

ಸೂತಕವನಳಿದ ಬಸವಣ್ಣ. ಎನ್ನ ಪ್ರಾಣಸೂತಕವ ಕಳೆದ ಬಸವಣ್ಣ. ಎನ್ನ ಭಾವ ಸೂತಕವ ಕಳೆವ ಬಸವಣ್ಣ. ಎನ್ನ ಅರಿವು ಮರಹಿನ ಸಂದ ಬಿಡಿಸಿದ ಬಸವಣ್ಣ. ಎನ್ನ ತನ್ನಲ್ಲಿ ಇಂಬಿಟ್ಟುಕೊಂಡ ಬಸವಣ್ಣ. ತನ್ನ ಎನ್ನಲ್ಲಿ ಇಂಬಿಟ್ಟುಕೊಂಡ ಬಸವಣ್ಣ. ನಿಜ ನಿರ್ಮಯಲ ಸಮಾಧಿಯ ನಿಜ ನಿವಾಸದ ಬಾಗಿಲ ತೋರಿದ ಬಸವಣ್ಣ. ಬಸವಣ್ಣ ಪ್ರಿಯ ಕೂಡಲ ಚನ್ನ ಸಂಗಯ್ಯನ ಹೃದಯ ಕಮಲದಲ್ಲಿ ಸಮವಾಗಿರಿಸಿದ ಎನ್ನ ತಂದೆ ಸಂಗನ ಬಸವಣ್ಣನು. ॥೨೫॥

ಮೋಳಿಗೆಯ ಮಾರಯ್ಯಗಳ ಪರವಶ॥ ಎನ್ನರಿವು ಮರಹು ಬಸವಣ್ಣಂ ಗರ್ಪಿತ, ಎನ್ನ ಆಚಾರ ವಿಚಾರ ಬಸವಣ್ಣಂಗರ್ಪಿತ, ಎನ್ನ ಭಾವ ನಿರ್ಭಾವ ಬಸವಣ್ಣಂಗರ್ಪಿತ. ಎನ್ನಂತರಂಗ ಬಹಿರಂಗ ಬಸವಣ್ಣಂಗರ್ಪಿತ, ನೀ ನಾನೆಂಬುದು ಬಸವಣ್ಣಂಗರ್ಪಿತ ಇಂತು ಎನ್ನನೆ ಬಸವಣ್ಣಂಗೆ ನಿವೇದಿಸಿ ಅಪಾವವ ಲಂಬವು ಇಲ್ಲದೆ ನಿರಾಲಂಬವಲ್ಲಿ ನಿಜನಿವಾಸಿಯಾದೆನು ಕಾಣಾ ನಿಃಕಳಂಕ ಮಲ್ಲಿಕಾರ್ಜುನ. ॥೨೬॥

ಮತ್ತಂ॥ 'ಬ' ಎಂಬಲ್ಲಿ ಬಳಿ ಸಂದೆನು. 'ಸ' ಎಂಬಲ್ಲಿ ಸಯವಾದೆನು 'ವ' ಎಂಬಲ್ಲಿ ನಿರವಯವಾದೆನು ನಿಃಕಳಂಕ ಮಲ್ಲಿಕಾರ್ಜುನ ಬಸವಣ್ಣನ ನಿಜಪದದಲ್ಲಿ ಸಂದಿಲ್ಲದೆ ಬೆರಸಿ ನಮೋ ನಮೋ ಎಂಬ ಹಂಗಳಿದುಳಿ ದೆನು. ॥೨೭॥

ಡೋಹರ ಕಕ್ಕಯ್ಯಗಳ ಪರವಶ॥ ಎನ್ನ ಕಪ್ಪ ಕುಲ ಸೂತಕ ನಿಮ್ಮ ಪಸ್ತ ಮುಟ್ಟಿದಲ್ಲಿ ಬಯಲಾಯಿತ್ತು. ಮಿಕ್ಕ ಶೋಣಿತದಿಂದಾದ ಸೂತಕ ಲಿಂಗ ಮುಟ್ಟಿಲೊಡನೆ ಬಯಲಾಯಿತ್ತು. ತಟ್ಟಿದ ಮುಟ್ಟಿದ ಸುಖಿಂ ಗಳ ಲಿಂಗಮುಖಕ್ಕೆ ಅರ್ಪಿಸಿದೆನಾಗಿ ಎನ್ನ ಪಂಚೇಂದ್ರಿಯಂಗಳು ಬಯ ಲಾಯಿತ್ತು. ಎನ್ನಂತರಂಗದಲ್ಲಿ ಜ್ಞಾನಜ್ಯೋತಿ ಎಡೆಗೊಂಡಿತ್ತಾಗಿ ಒಳಗು ಬಯಲಾಯಿತ್ತು. ಸಂಸಾರ ಸಂಗನಾಪ ಅವಸ್ಥೆ ಪಿರಿದ ಕ್ರಿಯದಲ್ಲಿ ತರ ಹರವಾಯಿತ್ತಾಗಿ, ಬಹಿರಂಗ ಬಯಲಾಯಿತ್ತು. ಅಭಿನವ ಮಲ್ಲಿಕಾರ್ಜುನ ನಿಮ್ಮ ಮುಟ್ಟಿದ ಕಾರಣ ನಾನು ಬಯಲಾದೆನು. ॥೨೮॥

ಮತ್ತಂ॥ ನೆಯಲರಿಯೆ, ನಿರ್ಧರಿಸಲರಿಯೆ. ಮನನಿಲ್ಲ ಭಾವಿಸಲರಿಯೆ ಬಳಸಲರಿಯೆ ಭಾವ ನಿರ್ಭಾವವಾಯಿತ್ತಾಗಿ, ಧಾನ ಮೌನವನರಿಯೆ,

ಧ್ಯಾನ ಶೀತ ತಾನೆಯಾಯಿತ್ತಾಗಿ, ಜ್ಞಾತೃ ಜ್ಞಾನ, ಜ್ಞೇಯಂಗಳಿಲ್ಲವಿ
ಪಾರಿ ಅಭಿನವ ಮಲ್ಲಿಕಾರ್ಜುನನಲ್ಲಿ ಪರಮ ಸುಖಿಯಾದೆನು. ॥೬॥

ಇಂತು ಎಲ್ಲ ಗಣಂಗಳು ತಮ್ಮ ನಿಜ ಪದದ ನಿಲುಕಡೆಯ ಪೇಳ್ದ
ತದನಂತರದಲ್ಲಿ ಚನ್ನ ಬಸವ ರಾಜ ದೇವರು ವಿಸ್ತೈಸುವ ಅವಸಾನವ
ಸೂಚನೆಯ ಪದಂಗಳು.

ರಾಗ ಶ್ರೀ ರಾಗ.

ಏನ ಹೇಳುವೆನಕ್ಕ ಕನಸನೂ ಮಾನವರಿಗೆ ತಿಳಿವಡಸಾಧ್ಯ ತಡ
ವಲ್ಲಾ ॥ಪ॥

ನಾನೊಂದು ಕನಸ ಕಂಡೆನು ಕೇಳಿಲೆ ಯಕ್ಕ ಮಾನದೊಳಗೆ ಒಂದಾ
ನೆಯೂ ಅನೆ ನಿಂತುದು ಮಾವತಿಗ ಮಾನವ ಸೊಕ್ಕು ಕಾನನದೊಳು
ತೊಳಲುವ ಕಂಡೆನಕ್ಕಾ. ॥೧॥

ದಾರಿವಿಡಿದು ಬರೆ ಬರೆ ಸರವರ ಕಂಡೆ. ಸರವರದೊಳಗೊಂದು
ಕಮಲವ ಸರವರ ಕನಃಲ ಕರ್ನಿಕೆಯ ಮಧ್ಯದೊಳೊಂದು ಉರಿಯ
ಬೀಜವ ಕಂಡೆನಿದಿರೊಳು ॥೨॥

ಉರಿಯ ಬೀಜವ ಸರಗೊಳಿಸಿ ಕೊರಳೊಳಿಟ್ಟು ಪರ ವೂರರಸನ
ಸಮುಖವಾಗಿ ಬರುತ ಬರುತ ಬರೆ ಬರೆ ಘನದುರಿ ಎದ್ದು ನೆರವ ಮನೆಯ
ಹುಲ್ಲುರಿದುದಾ ॥೩॥

ನೆಲೆಗೆಟ್ಟು ಶೂನ್ಯದ ಸುಖವ ಬಯಸಿ ಬಂದು ಹಲವು ಬಣ್ಣದ ನೂಲ
ಹುರಿ ಮಾಡಿ ತವೆ ಕಾವಿಲೊಳಗೊಂದಮೃತವ ಸೇದೆಯ ಬಾವಿ ತೊಲಗ
ಲೀಯದು ಜಾಲಗಾರನನೂ ॥೪॥

ಬಟ್ಟೆ ಬಯಲ ತಟ್ಟೆ ತುದಿಯ ಕೊನೆಯ ಮೇಲೆ ಉಟ್ಟವ ತೊರೆದು
ನಿಂದುದ ಕಂಡೆ ಮುಟ್ಟೆ ಕೂಡಲ ಚನ್ನಸಂಗನ ಶರಣರು ಹುಟ್ಟಿ ಮುರಿದು
ಹೋದುದ ಕಂಡೆನಮ್ಮಾ ॥೫॥

ಆ ಪ್ರಸ್ತಾವದೊಳು ಪ್ರಭುದೇವರು ತಮ್ಮ ಪರಾಮರಿಕೆಯ ಹೇಳುವ
ವಚನ ॥

ಮನದ ಕೊನೆಯ ಮೊನೆಯ ಮೇಲೆ ನೆನವ ನೆನಹು ಜನನ ಮರ
ಣವ ನಿಲಿಸಿ ಜ್ಞಾನಜ್ಯೋತಿ ಉದಯ ಭಾನು ಕೋಟಿಯ ವಿಸ್ತಾರ

ಭಾವದ ಉದಯ ಜ್ಞಾನ ಶೂನ್ಯದಲಡಗಿದ ಘನವ ನೇನೆಂಬೆನು ಗುಹೇ
ಶ್ವರಾ. ॥೫॥

ಮತ್ತಂ, ನಿರ್ವಿಕಲ್ಪನೆಂಬ ನಿಜದೊಳಗೈಯ್ಯ ನಿರಹಂಭಾವದಲ್ಲಿ
ನಾನಿದ್ದೆನಯ್ಯ. ನೋಡಿಹೆನೆಂದರೆ ನೋಡಲಿಲ್ಲ. ಕೇಳಿಹೆನೆಂದರೆ ಕೇಳಲಿಲ್ಲ.
ಘನ ನಿರಂಜನ ಬೆಳಗಿಂದಲಾದುವ ನೆನೆಂಬೆನು ಗುಹೇಶ್ವರ ॥೬॥

ಮತ್ತಂ, ಘನವ ಕಂಡು ಮನ ವ್ರತ ವಿಸಿತ್ತು ಕಂಡು ಕಂಡು
ಮಿಕ ಘನವಾಯಿತ್ತು. ತತ್ತಲೀಯ್ಯವಾಯಿತ್ತು. ತದುಗತವಾಯಿತ್ತು.
ಶಬ್ದ ಮುಗ್ಧವಾಯಿತ್ತು ಗುಹೇಶ್ವರಾ. ॥೭॥

ಮತ್ತಂ, ಬಯಲ ಬೆರಗಿನ ಸುಖದ ಸವಿಯ ಬೆರೆವಲ್ಲದೆ ಕಾಣೆ.
ಕಾಣೆನೆಂಬ ನುಡಿಗೆಡೆಯ ಕಾಣೆ. ಕುರುಹಳಿದು ಅರಿವ ನೆರೆ ಅರಿದು
ಬೆರಿಸಿದೆನೆಂಬ ಬಿರುನುಡಿಯ ನುಡಿಗೆ ನಾಚಿದೆನಯ್ಯ ಗುಹೇಶ್ವರಾ. ॥೮॥

ಉಪಮೆ ಉಪಮಿಸಲರಿಯದೆ, ಉಪಮಾತೀತವೆನುತಿದ್ದಿತ್ತು. ಅರಿವು
ಅರಿವಿನಲ್ಲಿ ಮರೆಯಲಿದ್ದುದನರಿಯದೆ ಅರಿವು ಪರಪರಾ ಎನ್ನುತ್ತಿದ್ದಿತು.
ಧ್ಯಾನ ಧ್ಯಾನಿಸಲರಿಯದೆ ಧ್ಯಾನ ರೂಪಾತೀತನೆಂದು ತದ್ಧ್ಯಾನಗೊಂ
ಡಿತ್ತು. ಜ್ಞಾತೃ ಜ್ಞಾನ. ಜ್ಞೇಯವೆಂಬುದಕೆ ಇನ್ನಾವ ಜ್ಞಾನವು ಪೇದ
ವಿಜ್ಞಾನವೆಂದುದಾಗಿ ತತ್ವಮಸಿ ವಾಕ್ಯಂಗಳೆಲ್ಲವು ಹುಸಿಯಾಗಿ ಹೋದವು.
ಸಚ್ಚಿದಾನಂದವೆಂದುದಾಗಿ ದ್ವೈತಾದ್ವೈತ ವಾದಿಗಳೆಲ್ಲರು ಸಂಹಾರವಾಗಿ
ಹೋದರು. ಬಂದೂ ಬಾರದು, ಹೊಂದಿಯೂ ಹೊಂದದು. ನಿಂದ
ನಿರಾಳ ಗುಹೇಶ್ವರಾ. ॥೯॥

ಮತ್ತಂ, ಗುರುವಿನಿಂದಾದ ಕಾಯವ ಬಿರಿಸಿ ಗುರುವನರಿಯದದೇ
ನಯ್ಯ? ಲಿಂಗವಿಂದಾದ ಜೀವನ ಬೆರಿಸಿ ಲಿಂಗನನರಿಯದದೇನಯ್ಯ?
ಜಂಗಮವಿಂದಾದ ಮನವ ಬೆರಿಸಿ ಜಂಗಮವನರಿಯದದೇನಯ್ಯ? ಈ
ತ್ರಿವಿಧ ಭಕ್ತಿಯನರುಹಿಸಿಕೊಟ್ಟ ಸಂಗನಬಸವಣ್ಣನ ಬೆರಿಸಿ ನೀನು ನಾನು
ಸಮುಕಿದೆವು ಕಾಣಾ ಗುಹೇಶ್ವರಾ. ॥೧೦॥

ಮತ್ತಂ, ನಾನೆಂಬುದು ಪ್ರಮಾಣ. ನೀನೆಂಬುದು ಪ್ರಮಾಣ. ಸ್ವಯ
ವೆಂಬುದು ಪ್ರಮಾಣ. ಪರವೆಂಬುದು ಪ್ರಮಾಣ. ಪ್ರಮಾಣವೆಂಬುದು
ಪ್ರಮಾಣ ಗುಹೇಶ್ವರನೆಂಬುದು ಅಪ್ರಮಾಣ. ॥೧೧॥

ಇಂತು ಪ್ರಭುದೇವರು ತಮ್ಮ ಸಾವುಂಕೆಯು ಹೇಳಿ ತಾವು ಲಿಂಗೈಕ್ಯವಾಗುವ ಅವಸ್ಥೆಯು ನಿರೂಪಿಸಿದ ವಚನ॥

ಇಂದುವಿನ ಬೆಳಗಿನ ಸಂಪತ್ತನಿಂಬುಗೊಂಡ ಚಕೋರನ ಧ್ಯಾನವೆಂತಪ್ಪುದು ಅಂತಾಗಿದ್ದೆ ನಾನು. ರಾತ್ರಿಯೊಳ್ಮುಗಿದ ಪದ್ಮಪತ್ರದ ಭ್ರಮರನ ಧ್ಯಾನವೆಂತಿಪ್ಪುದು ಅಂತಾಗಿದ್ದೆ ನಾನು. ಮಾತೆ ವಿಯೋಗದ ಶಿಸುವಿನ ಧ್ಯಾನವೆಂತಿಪ್ಪುದು ಅಂತಾಗಿದ್ದೆ ನಾನು. ಸ್ವಪ್ನದಲ್ಲಿ ದೃಷ್ಟ ಕೇಸರಿಯ ಧ್ಯಾನದ ಮದಕರಿಯಂತಿಪ್ಪುದು ಅಂತಾಗಿದ್ದೆ ನಾನು. ನೋಟವನಗಲಿದ ನೇಹದ ಧ್ಯಾನವೆಂತಿಪ್ಪುದು ಅಂತಾಗಿದ್ದೆ ನಾನು. ಬ್ರಹ್ಮಪಾಶ ವಿಷ್ಣು ಮಾಯವನತಿಗಳಿದ ಫಲದಲ್ಲಿ ಏನೆಂದರಿಯದಿದ್ದೆ ನಾನು ಗುಹೇಶ್ವರ ಲಿಂಗ ಸಂಗನಬಸವಣ್ಣನೊಳಗೆ ಲೀಯವಹ ಭರದಲ್ಲಿ ಏನೆಂದರಿಯದಿದ್ದೆ ನಾನು. ೯೯॥

ಇತಿ ಶ್ರೀಮತ್ಸಕಲಗಣ ಪುರಾತನರೊಳ್ ಪ್ರಭುದೇವರು ಮಹಾನುಭಾವ ಸದ್ಗೋಷ್ಠಿಯಂ ಮಾಡಿದ ಶೂನ್ಯ ಸಂಪಾದನೆಯೊಳ್ ಎಲ್ಲ ಪುರಾತರ ಅವಸಾನದ ಪರಾಮರಿಕೆಗೆ ವಿಂಶೋಪದೇಶ ಸಮಾಪ್ತ.

ಎಲ್ಲ ಗಣಂಗಳ ನಿರ್ವಯಲ ಸಮಾಧಿ.

(ವಿಕವಿಂಶತ್ಯುಪದೇಶ.)

ಕಂದ॥ ಗೋರಕ್ಷಗೆ ನಿಜಪದಮುಂ। ಓರಂತಿರಲಿತ್ತು ಪ್ರಭುವು ನಿರ್ವಯಲಾಗಲು। ಭೂರಿ ಮಹ ಶರಣರುಗಳೀ। ಧಾರುಣಿಯೊಳಗಿರದೆ ಐಕ್ಯವಡೆದುದ ಪೇಳ್ದೆಂ॥

ಅಪೆಂತೆಂದೊಡೆ, ಪ್ರಭುದೇವರು ಬಸವರಾಜದೇವರು ಚನ್ನಬಸವರಾಜದೇವರು ಮಡಿವಾಳಮಾಚಿ ತಂದೆಗಳು ಮೊದಲಾದ ಅಸಂಖ್ಯಾತ ಮಹಾ ಗಣಂಗಳೆಲ್ಲ ತಮ್ಮ ತಮ್ಮ ನಿಜಪದವ ನಿಜೈಕ್ಯಮುಂ ಪೇಳಲು, ಪ್ರಭುದೇವರು ಕೇಳ್ದು ತಮ್ಮ ನಿಜಪದಮುಂ ಪೇಳಿ ಮತ್ತೆಲ್ಲ ಅಸಂಖ್ಯಾತರಿಗೆ ನಿರ್ವಯಲ ಸ್ಥಿತಿಗತಿಯ ನಿರೂಪಿಸುವ ಪ್ರಸ್ತಾವದ ವಚನ॥

ಅವಧಿಯಳಿಯಿತ್ತು. ವ್ಯವಧಾನ ಉಳಿಯಿತ್ತು. ನಿಜವೆ ನಿಜವನೊಡಗೂಡಿತ್ತು ಕೇಳಾ ಬಸವಣ್ಣ. ಕಲಿಯುಗದಲ್ಲಿ ಮುಂದೆ ಇರಬಾರದು ನಿಜ ಶರಣರಿಗೆ ನಡೆ ನೀನು. ಕಪ್ಪಡಿಯ ಸಂಗಯ್ಯನಲ್ಲಿ ಒಡಗೂಡು. ಉಳುವೆಯ ಮನೆಯಲ್ಲಿ ನಿಜವಸ್ಥೆಮವ ನಡೆ. ಚನ್ನಬಸವಣ್ಣ ಮಹವನೊಡಗೂಡು ಮಡಿವಾಳಯ್ಯ ಸೊಡ್ಡಳಬಾಚರಸರು ಮೊದಲಾದ ಪ್ರಮಥರೆಲ್ಲರು ನಿಜವಸ್ಥೆಮವುದು. ನಿರ್ವಯಲ ಸಮಾಧಿಯಲ್ಲಿ ಬಗೆದು ಹೋಗಿ ಲಿಂಗದೊಳಗೆ ಹೊಗುವರೆಲ್ಲರು ನಡೆಯಿರಿ. ಕಾಯವೆರಸಿ ಕೈಲಾಸಕ್ಕೆ ಕಾಯ ಸಹಿತೈವುದು ನಿಮಗೆಲ್ಲರಿಗು ಉಪದೇಶ ಮಂತ್ರ ತಪ್ಪದು ನಮಗೆ ಕವಳಿಯಲ್ಲಿ ಹೊಕ್ಕು ನಿಜದಲ್ಲಿ ಒಡಗೂಡುವ ಪರಿಣಾಮವಿದು. ನಮ್ಮ ಗುಹೇಶ್ವರ ಲಿಂಗದಾಣತಿ ನಿಮಗೆಲ್ಲರಿಗೂ. ೧೧॥

ಇಂತು ಪ್ರಭುದೇವರು ಬಸವರಾಜದೇವರು ಮೊದಲಾದ ಅಸಂಖ್ಯಾತರೆಲ್ಲಕ್ಕೆ ನಿಜಸಮಾಧಿಯ ಪರಿವಂ ನಿರೂಪಿಸಿ ಬೀಳ್ಕೊಂಡು ಕಲ್ಯಾಣಮುಂ ಪೊರಮಟ್ಟು ಶ್ರೀಪರ್ವತಕ್ಕೆ ಬಿಜಯಂಗೈವುತ್ತಿರಲಲ್ಲಿ ಗೋರಕ್ಷನೆಂಬ ಸಿದ್ಧನಂ ಕಂಡು, ಸಂಘಷಣೆಯಂ ಮಾಡಿ, ಅವನ ವಜ್ರದೇಹಮುಂ ಅಸಿತಾಸಿ ಪತ್ರದಿಂ ಹೊಯಿದು ನೋಡಿ, ಪರೀಕ್ಷೆಯುಂ ಕೊಂಡು ನುಡಿವ ಪ್ರಸ್ತಾವದ ವಚನ॥

ಹಿಂದನರಿಯದುದು ಮುಂದನೇನಬಲ್ಲುದೆ? ಉದಯ ಮುಖದಲ್ಲಿ ಹುಟ್ಟಿದ ಪ್ರಾಣಿಗಳು ಅಸ್ತಮಾನಕ್ಕೆ ಅಳಿದರಲ್ಲ. ಅಂದಂದಿನ ಘಟಜೀವಿಗಳು ಬಂದ ಬಟ್ಟಿಗೆ ಹೋದರು. ಗುಹೇಶ್ವರ ಲಿಂಗವು ಅರಿಗೆಯು ಇಲ್ಲ ವಯ್ಯ. ॥೨॥

ಮತ್ತಂ, ಅವೃತ ಸೇವನೆಯ ಮಾಡಿ, ಆಪ್ಯಾಯನ ಘನವಾಯಿತ್ತ ಕಂಡೆ. ಪರುಷವೇದಿಯ ಸಾಧಿಸಹೋದರೆ ದಾರಿದ್ರ ಘನವಾಯಿತ್ತ ಕಂಡೆ. ಮರುಜೀವನೆಯ ಹಣ್ಣ ಮೆದ್ದು ಮರಣವಾಯಿತ್ತ ಕಂಡೆ. ಇವನೆಲ್ಲವನು ಸಾಧಿಸಹೋದರೆ ಏನು ಇಲ್ಲದಂತಾಯಿತ್ತು. ನಾನು ನಿಜವ ಸಾಧಿಸಿ ಬಮುಕಿದೆನು ಗುಹೇಶ್ವರ ॥೩॥

ಮತ್ತಂ, ಧರೆಯ ಮೇಲುಳ್ಳ ಅರುಹಿರಿಯರೆಲ್ಲ ಮರುಳುಗೊಂಡು ಅಡುತ್ತಿದ್ದಾರೆ ನೋಡಾ. ಮುಂಜಿನ ಮಡಕೆಯೊಳಗೆ ನಿರಂಜನೆಯ ಭಾಂಡವ ತುಂಬಿ ಅಂಜದೆ ಪಾಕವ ಮಾಡಿಕೊಂಡುಂಡು ಭಾಂಡವ ಮಾರುತ್ತಿಪ್ಪರು ನೋಡಾ. ಸಂಜೀವನೆಯ ಬೇರ ಕಾಣದೆ ಮರಣಕ್ಕೊಳಗಾದರು ಗುಹೇಶ್ವರನನರಿಯದ ಭವಭಾರಕರೆಲ್ಲರು. ॥೪॥

ಮತ್ತಂ ನಾರು ಬೇರಿನ ಕುಟಿಲ ಕುಹಕವ ಕಪಟ ಯೋಗವ ಲ್ಲಿದು ನಿಲ್ಲಿರೊ? ಕಾಯ ಸಮಾಧಿ ಕರಣ ಸಮಾಧಿ ಜೀವಸಮಾಧಿ ಯೋಗವಲ್ಲಿದು ನಿಲ್ಲಿರೊ ನಿಜ ಸಹಜ ಸಮಾಧಿ ಗುಹೇಶ್ವರಾ. ॥೫॥

ಹೀಗೆಂದು ಪ್ರಭುದೇವರು ಆತನ ಕಾಯ ಸಿದ್ಧಿ ಮೊದಲಾದ ಸಿದ್ಧಿಗಳಂ ಅತನ ಭಿನ್ನ ಯೋಗಾಭ್ಯಾಸಮಂ ಜರಿಯಲವಂ ಬಿಟ್ಟು ಉಪದೇಶಮಂ ಪಡೆದು ಬಿನ್ನೈಸುವ ಪ್ರಸ್ಥಾವದ ವಚನ ॥

ರಸವಾದಂಗಳ ಕಲಿತಲ್ಲಿ ಲೋಹಸಿದ್ಧಿಯಲ್ಲದೆ ರಸಸಿದ್ಧಿಯಾದುದಿಲ್ಲ. ನಾನಾ ಕಲ್ಪ ಅದೃಶ್ಯ ಕರಣಂಗಳ ಕಲಿತಲ್ಲಿ ಕಾಯಸಿದ್ಧಿಯಲ್ಲದೆ ಆತ್ಮಸಿದ್ಧಿಯಾದುದುಂಟೆ? ನಾನಾ ವಾಗ್ವಾದಂಗಳಿಂದ ಹೋರಿ ಮಾತಿನ ಮಾಲೆಯಾಯಿತ್ತಲ್ಲದೆ ಆತ್ಮ ನಿಹಿತ ವಾದುದಿಲ್ಲ. ನೀ ನಾನೆಂದಲ್ಲಿ ನೀನು ನಾನಾದೆಯಲ್ಲದೆ ನಾನು ನೀನಾದುದಿಲ್ಲ. ಗೋರಕ್ಷ ಪಾಲಕ ಮಹಾಪ್ರಭು ಸಿದ್ಧ ಸೋಮನಾಥ ಲಿಂಗವಾದೆಯಲ್ಲದೆ ಲೀಯುವಾಗಿ ಆ ಲಿಂಗವೆ ಯಾದುದಿಲ್ಲ ॥೬॥

ಮತ್ತಂ, ಕುಂಡಲಿ ಎಂಬ ಆಧಾರದಲ್ಲಿ ಜಲತೇಜವೆಂಬ ವಾಯು ವೆಂಬ ತ್ರಿವಿಧ ಕೂಡಿ ಕಮಂಡಲ ಹುಟ್ಟಿ ಅವಕ್ಕೆ ಬಾಯಿ ಮೂರು, ಹಿಡಿಯಾರು, ಜೀವಂದರಲ್ಲಿ ಉದಕವ ಕೊಳುತ್ತಿರಲಾಗಿ ಆ ಅಸುವಿನ ತೃಷೆಯಡಗಿ ಬಯಕೆ ಸಜೆ ಬತ್ತಿದಲ್ಲಿ ಮಹಾಗಣನಾಥನ ಐವತ್ತೆರಡು ಸರ ಹರಿದವು ಮೂವತ್ತಾರು ಮಣಿ ಕೆಟ್ಟವು ಇಪ್ಪತ್ತೈದು ಮಣಿ ಮುಂಜ ವಾಯಿತ್ತು. ಆರು ನಾಯಕ ರತ್ನವೆಲ್ಲಿ ಅಡಗಿತ್ತೆಂದರಿಯೆ. ಮೂರು ರತ್ನವ ಕಂಡೆ. ಒಂದು ಉರಿವುದು. ಒಂದು ಉಲಿವುದು. ಒಂದು ಬೆಳಗು ನಂದಿ ಹುದು. ಇಂತೀ ತ್ರಿವಿಧಾಂಗವ ಕಂಡು ಈ ಅಂಗದ ಮಣಿಯ ಒಂದೊಂದ ಪವಣಿಸಲರಿಯದೆ, ಈ ದಿನವಮಡೆಯ ವಿಕಳವ ತೋರಿಸಾ ಗೋರಕ್ಷ ಪಾಲಕ ಮಹಾಪ್ರಭು ಸಿದ್ಧ ಸೋಮನಾಥ ಲಿಂಗವೆ ॥೭॥

ಹೀಗೆಂದು ಗೋರಕ್ಷಕನು ಬಿನ್ನೈಸಲು, ಇದಕ್ಕೆ ಪ್ರಭುದೇವರು ನಿರ್ವಯಲ ಸಮಾಧಿಯ ಭೇದವ ನಿರೂಪಿಸುವ ಪ್ರಸ್ಥಾವದ ವಚನ. ॥

ಅರಿಸಲತು ಬೆರಗು ಪತ್ತಿತ್ತೆಂಬ ಜ್ಞಾನವಿದೆನೋ? ನಾಹಂ ಮೆಂಬಲ್ಲಿ ತಾನಾರೊ? ಕೂಹಂ ಮೆಂಬಲ್ಲಿ ಮುನ್ನಾರೋ? ಪರಬ್ರಹ್ಮನೋಹಂ ಮೆಂಬಲ್ಲಿ ಮುನ್ನ ತಾನೆ ತಾನಾಗಿರ್ಪ ಚಿದೋಹಂ ಮೆಂಬ ಹಮ್ಮಿನ ಭವಮಾಲೆ ಇದೇನೆಂ? ನಿಃಶಬ್ದ ಬ್ರಹ್ಮ ಮುಚ್ಯತೆ ಎಂಬ ಶಬ್ದವಿಡಿದು ಬಳಲುವ ಕಾರಣವಿದೇನೊ ಗುಹೇಶ್ವರಾ. ॥೮॥

ಹೀಗೆಂದು ಪ್ರಭುದೇವರು ನಿರೂಪಿಸಲು, ಇದಕ್ಕೆ ಗೋರಕ್ಷನು ಲಿಂಗಾಂಗ ಸಂಬಂಧನ ಕೃತನಿಶ್ಚಯವನೈದಿದ ಪ್ರಸ್ಥಾವನ ವಚನ. ॥

ನಾ ನಿನ್ನ ಕೇಳಿಹೆನೆಂದಡೆ ನಾನಂಗಿ ನೀ ನಿರಂಗಿ, ನಾ ನಿನಗೆ ಹೇಳಿಹೆನೆಂದಡೆ ನಾ ಸಂಗಿ ನೀ ನಿಸ್ಸಂಗಿ, ನಿನ್ನಂಗ ಎನ್ನಂಗದಲ್ಲಿ ಪ್ರತಿಷ್ಠಿಸಿ ನಿನ್ನ ಅರಿವು ಎನ್ನ ಆತ್ಮದಲ್ಲಿ ನಿಂದು ಅರಿವನ್ನಕ್ಕ ನನಗು ನಿನಗು ತತ್ತು ಗೊತ್ತು ಗೋರಕ್ಷ ಪಾಲಕ ಮಹಾಪ್ರಭು ಸಿದ್ಧ ಸೋಮನಾಥ ಲಿಂಗವು ಸರಿಯುಹುದು ಗುಹೇಶ್ವರಾ. ॥೯॥

ಮತ್ತಂ, ಅರಗಿನ ತೇಜಿಯ ಮೇಲೆ ಉರಿಯ ಹಿರಿಯರಸು ಮೂರ್ತಿಗೊಂಡು, ಮುಂಜಿನ ಪರಿವಾರ ಸಂದಣಿಸಿ ಸಂತೈಸಿ ಅವರಂಗಕ್ಕೆ ಬಿಸಿ ಲಿಂಗದ ಜೋಡ ತೊಡಿಸಿ ಆ ಚತುರಂಗವ ಮೇಲೆ ಪಶುತನುಸೆಂಬ ಖಂಡೆಯವ ಪಿಡಿಸು ಜಂತ್ರಿಕಾ ಕಿರಣದ ಮೇಲೆ ಅಂಗವಿಸಿ ಏರಲಾಗಿ

ಘಾಜು ಬೆದರಿತ್ತು. ಊರರಸು ಎತ್ತಿದ ಖಂಡೆಯವ ವರುಣನ ಕಿರಣದೊ
ಳಗಡಗಿತ್ತು. ಮಂಜಿನ ಪರಿವಾರ ಆ ರಂಜನೆಯೊಳಗೆ ಬಯಲಾಯಿತ್ತು.
ಉರಿಯರಸು ವಾಯುವಿನ ಸಿರಿಯೊಳಗಾದ. ಅರಗಿನ ಅಶ್ವ ಅರಸಿನ ತೊಡೆ
ಯೊಳಗೆ ಹರಿಯಿತ್ತು. ಇಂತೀ ದೊರೆಗೆ ಅರಿದಿಲ್ಲನೆಂದು ಗೋರಕ್ಷ ಪಾಲಕ
ಪ್ರಭು ಸಿದ್ಧ ಸೋಮನಾಥ ಲಿಂಗಕ್ಕೆ ಇದಿರಿಲ್ಲ ಎನುತಿರ್ದೆನು ॥೧೦॥

ಇಂತು ಪ್ರಭುದೇವರು ಗೋರಕ್ಷಂಗೆ ಲಿಂಗಾಂಗ ಸಂಬಂಧವ
ಬೋಧಿಸಿ ಅವನಂ ಬೀಳ್ಕೊಂಡು ಕದಳಿಯ ಮುಂಬಾಗಿಲಲ್ಲಿ ನಿಂದ ಪ್ರಸ್ಥಾ
ವನ ವಚನ. ॥

ಕಾಯನೆಂಬ ಕದಳಿಯ ಹೊಕ್ಕು ಪ್ರಾಣವೆಂಬ ಗಂಹರದೊಳಗೆ
ಸಕಲೇಂದ್ರಿಯವೆಂಬ ಕೋಣೆ ಕೋಣೆಗಳಲ್ಲಿ ತಿರುಗಾಡುತ್ತ ಬರಲಾಗಿ
ಮೇರು ಮಂದಿರದ ತ್ರಿಕೋಣೆಯಲ್ಲಿ ಬೆಳಗಾಯಿತ್ತು. ಗುಹೇಶ್ವರ ಲಿಂಗ
ವೆಂಬುದು ರೂಪಾಯಿತ್ತು. ॥೧೧॥

ಇಂತು ತಮ್ಮ ನಿಜವನರುಹಿದ ಪ್ರಭುದೇವರು ಆ ಕದಳಿಯ
ಹೊಕ್ಕು ನಿರವಯದೊಳು ನಿಜ ನಿವಾಸಿಯಾಗಿರ್ದ ಪ್ರಸ್ಥಾವದ ವಚನ.

ಕಾಯವೆಂಬ ಮಹಾ ಕದಳಿಯ ಗೆಲಬಲ್ಲವರಾರನು ಕಾಣೆನು.
ಸಂಸಾರವೆಂಬ ಸಪ್ತಸಮುದ್ರವ ಬಳಸಿ ಬಂದಿಪ್ಪ ಉಭಯನೆಂಬ ಮಹಾ
ರಣ್ಯದೊಳು ಪಂಚೇಂದ್ರಿಯವೆಂಬ ವಿಷದ ಮಳೆ ಸುರಿವುತ್ತಿಪ್ಪುದು. ಕೋಪ
ವೆಂಬ ಪೆಬ್ಬುಲಿ ಮೊರೆವುತ್ತಿಪ್ಪುದು. ಅಷ್ಟಮದಗಜಂಗಳು ಬೀದಿವರಿವು
ತ್ತಿಪ್ಪವು. ಕಾಮವೆಂಬ ಮೂರಂಬಿನ ಸೊನೆ ಸುರಿವುತ್ತಿಪ್ಪುದು. ಮತ್ಸರ
ವೆಂಬ ಮಹ ಸರ್ಪಂಗಳು ಕಿಡಿಯನುಗುಳುತ್ತಿರ್ಪವು. ಆಸೆ ಎಂಬ
ಪಾಪಿಯ ಕೂಸು ಹಿಸಿಹಿಸಿದು ತಿನುತ್ತಿರ್ಪುದು. ತಾಪತ್ರಯವೆಂಬ
ಕೆಂಡದ ಮಳೆ ಅಡಿ ಇಡಬಾರದು. ಅಹಂಕಾರವೆಂಬ ಗಿರಿಗಳು ಅಡ್ಡ
ಬಿದ್ದಿಪ್ಪವು. ಪಂಚಭೂತಂಗಳೆಂಬ ಭೂತಂಗಳ ಭಯ ದಿಟ್ಟಿಸಬಾರದು.
ಮಾಯೆ ಎಂಬ ರಕ್ಕಸಿ ಹಸಿಯ ತಿನುತಿಪ್ಪಳು. ವಿಷಯವೆಂಬ ಕೂಪವ
ಬಳಸಬಾರದು. ಮೋಹವೆಂಬ ಬಳ್ಳಿ ಕಾಲ ಕುತ್ತಬಾರದು. ಲೋಭ
ವೆಂಬ ಮಸದಡ್ಡಾಯುಧವನೊರೆಯನುಚ್ಚಬಾರದು. ಇಂತಪ್ಪ ಕದಳಿಯ
ಹೊಗಲರಿಯದೆ ದೇವ ದಾನವ ಮಾನವರೆಲ್ಲರು ಮತಿಗೆಟ್ಟು ಮರುಳಾಗಿ
ಹೊರೆದೆಗೆದು ಓಡಿದರು. ಅಂಗಾಲ ಕಣ್ಣವರು ಪೈಯ್ಯಲ್ಲ ಕಣ್ಣವರು

ತಲೆ ಬಾಲಗೆಟ್ಟರು. ನಾನೀ ಕದಳಿಯ ಹೊಕ್ಕು ಹೊಯಿದಾಡಿ ಮುಳ್ಳು
ಮುಸೆಯುಟ್ಟುದೆ ಕದಳಿ ಒರೆದು ಗೆಲಿದುತ್ತರಿಸಿ ಗುಹೇಶ್ವರನೆಂಬ ಲಿಂಗದ
ನಿಜಸಮಾಧಿಯಲ್ಲಿ ನಿಂದು ಪರಪರನಾಗಿ ನಿರಾಳಕೆ ನಿರಾಳವಾಗಿದ್ದೆನಯ್ಯಾ ॥೧೨॥

ಇಂತು ಪ್ರಭುದೇವರು ನಿಜಪದವನ್ಯೈದಲು ಬಸವರಾಜದೇವರು
ಸ್ತುತಿಸಿದ ವಚನ. ॥

ಲಿಂಗ ಗಂಭೀರ ಗಮನಗೆಟ್ಟುದಲ್ಲ. ಜಂಗಮ ಗಂಭೀರ ಸುಳು
ಹುಗೆಟ್ಟ್ಟದಲ್ಲ. ಪ್ರಸಾದ ಗಂಭೀರ ರೂಪುಗೆಟ್ಟುದೆಲ್ಲ. ಆಚಾರ ಗಂಭೀರ
ಅವಯವಗೆಟ್ಟತಲ್ಲ. ಜ್ಞಾನಗಂಭೀರ ನಡೆಗೆಟ್ಟುತಲ್ಲ. ಕೂಡಲಸಂಗಮದೇ
ವರಲ್ಲಿ ಪ್ರಭುದೇವರು ನಿಜವನ್ಯೈದಲು ಸಂಗನಬಸವಣ್ಣನ ಪ್ರಾಣ ಒಡನೆ
ಬಳಿಸಂದಿತಲ್ಲಾ. ॥೧೩॥

ಚಿಕ್ಕಪಣ್ಣಾಯಕರ ವಚನ. ॥

ಎನ್ನ ಅನುಭಾವವಗಮ್ಯವೆ, ಎನ್ನರುಹಿನ ನಿಶ್ರಮವೆ, ಎನ್ನ ಭಾವದ
ಬಯಕೆಯೆ, ಎನ್ನ ಜೀವದ ನಿಲವೆ, ಎನ್ನ ಪರಿಣಾಮದ ಮೇರುವೆ,
ಎನ್ನ ಮನದ ಮಹಿಮನೆ, ನಿಮ್ಮ ಸುಳುಹು ಎತ್ತಲಡಗಿತ್ತು? ಎಲೆ ಲಿಂಗವೆ
ನಿನ್ನ ನಾಮನೆತ್ತ ನಿರ್ನಾಮವಾಯಿತ್ತು? ಎಲೆ ಪರಮಗುರುವೆ ಕೂಡಲ
ಚನ್ನಸಂಗಮನಲ್ಲಿ ಉರಿಯುಂಡ ಕರ್ಪೂರದಂತಾದೆಯಲ್ಲ ಪ್ರಭುವೆ. ॥೧೪॥

ಮಡಿವಾಳ ಮಾಚಿ ತಂದೆಗಳ ವಚನ ॥

ಅಷ್ಟ ತನುವಿನ ಸಿಷ್ಯಾಪರನ ಬಿಟ್ಟು ಬಟ್ಟ ಬಯಲಲ್ಲಿ ನಿಂದ
ನಿಜವ ನೋಡಾ. ಹತ್ತೆಂಬ ಪ್ರಾಣವ ಸುತ್ತಿ ಸುಳಿಯಲೀಯದೆ ಒತ್ತಿ
ಸುಟ್ಟು ಸಯವಾದ ಘನಚೈತನ್ಯವ ನೋಡಾ. ನಿಷ್ಕೆ ನಿಬ್ಬೆರಗು ತೊಟ್ಟು
ಬಿಟ್ಟ ಸಚ್ಚಿದಾನಂದವಾದ ಪರಿಯ ನೋಡಾ. ಕಲಿದೇವರ ದೇವ ಪ್ರಭು
ದೇವರ ನಿಲವಿಂಗೆ ನಮೋ ನಮೋ ಎನುತಿರ್ದೆನು ॥೧೫॥

ಸೊಡ್ಡಳ ಬಾಚರಸರ ವಚನ॥

ನಿಜತತ್ವದ ನಿರ್ವಯಲು ನಿರವಯವಾಯಿತ್ತು. ನೆನೆವರ ಪರುಷ
ಘನವನೊಡಗಲಿಸಿತ್ತು. ಭಕ್ತರ ಭಾಗ್ಯ ಮುಕ್ತಿಯನ್ಯೈದಿತ್ತು. ಬಸವಣ್ಣ
ಚನ್ನಬಸವಣ್ಣನ ಮಹಾಮನೆಯಲ್ಲಿ ಮಹಾದಾನಿ ಸೊಡ್ಡಳನ ಶರಣ
ಪ್ರಭುದೇವರು ನಿರವಯಲ ಬೆರಸಲೊಡನೆ ಸತ್ಯಲೋಕದ ಬಾಗಿಲ ಕವ
ತೆರೆಯಿತ್ತು ॥೧೬॥

ಹೀಗೆಂದು ಸೊಡ್ಡಳ ಬಾಚರಸರು ತಾವು ಲಿಂಗೈಕ್ಯವಾಗಲು, ಬಸವರಾಜದೇವರು ನಿರೂಪಿಸಿದ ಪ್ರಸ್ತಾವದ ವಚನ॥

ಎಮ್ಮವರಿಗೆ ಸಾವಿಲ್ಲ. ಎಮ್ಮವರು ಸಾವನಂಯರು. ಸಾವೆಂಬುದು ಸಾವಲ್ಲ. ಲಿಂಗದಲ್ಲಿ ಉದಯವಾದ ನಿಜೈಕ್ಯರಿಗೆ ಆ ಲಿಂಗದಲ್ಲಿ ಅಲ್ಲದೆ ಬೇರೆ ಮತ್ತೊಂದೆಡೆ ಇಲ್ಲ. ಕೂಡಲ ಸಂಗಮದೇವರ ಶರಣ ಸೊಡ್ಡಳ ಬಾಚರಸನು ನಿಜಲಿಂಗವ ಒಡಲೊಳಗೆ ಬಗೆದು ಹೊಕ್ಕಡೆ ಉಪಮಿಸಬಲ್ಲವರ ಕಾಣೆನು ॥೧೬॥

ಇಂತು ಸೊಡ್ಡಳಬಾಚರಸರ ಲಿಂಗೈಕ್ಯವ ಬಸವರಾಜದೇವರು ಕೊಂಡಾಡಿ ಮತ್ತಂ ಬಸವರಾಜದೇವರು ಹಳೆಯಯ್ಯ ಮಧುವಯ್ಯಗಳು ಪರಮ ಹರುಷದೊಳು ಪ್ರವರ್ತಿಸಲು ಬಿಜ್ಜಳನು ಹರಳಯ್ಯ ಮಧುವಯ್ಯಗಳ ಚರಿತ್ರ ನೀತಿಯಲ್ಲೆಂದು ಬಗೆದು ಬಸವೇಶ್ವರನೊಳು ಮಥನಿಸಲು, ಬಹು ವಿಧದ ವೃಷ್ಟವ ಕುಡಲು, ನಂಬುಗೆ ಮನಕ್ಕೆ ಸಾಲದೆ ಅವರ ಕರೆಸಿ ಕಣ್ಣ ತೆಗೆಯಿಸಲು, ಬಸವರಾಜದೇವರು ಹರಳಯ್ಯ ಮಧುವಯ್ಯಗಳ ಕಂಗಳ ಪಡೆಯಲವರು ಶಿವನೊಳೈಕ್ಯಾರ್ಥವಾಗಲು, ಆ ಬಸವರಾಜದೇವರು ಶಿವ ಭಕ್ತ ದ್ರೋಹಿಯಪ ಬಿಜ್ಜಳನ ಸಂಹರಿಸಿ, ನನ್ನಿಯಿಂ ಮೆರೆ ಎಂದು ಜಗದೇವಂಗೆ ಪೆಸನಿತ್ತು ಲೋಕಪಾಲಕನ ನೊಸಲ ಬರಹ ತೊಡೆಯಲೊಡನೆ ಕೂಡಲಸಂಗಮದೇವರು ತಮ್ಮ ಕವಳಿಗೆಯ ತೊಡೆದರೆಂದು ಶರಣ ಜನಂಗಳೊಡನೆ ಬಸವರಾಜದೇವರು ನಿರೂಪಿಸುವ ಪ್ರಸ್ತಾವದ ವಚನ॥

ಅರಸು ವಿಚಾರವು ಸಿರಿಯು ಶ್ರಿಂಗಾರವು ಸ್ಥಿರವಲ್ಲ ಕೇಳಿರಿ. ಮರ್ತ್ಯದೊಳಗೆ ಕೆಟ್ಟಿಹ ಕಲ್ಯಾಣ ಹಾಳಹುದು. ಕಲ್ಯಾಣ ಲೋಕವರಿಯಲು ಶಿವಾಚಾರಭಿಮಾನದಲ್ಲಿ ಜಗದೇವ ಪೊಲ್ಲಿಯ ಬೊಮ್ಮಣ್ಣನ ಕೈಯ್ಯಲ್ಲಿ ಮಡಿದಿಹನು. ಕೂಡಲ ಸಂಗಮದೇವರು ತಮ್ಮ ಕವಳಿಗೆಯ ತೊಡೆದಿಹರು ॥೧೮॥

ಮತ್ತಂ॥ ಕರ್ತನಟ್ಟಿದರೆ ಮರ್ತ್ಯದಲ್ಲಿ ಮಹಮನೆಯಕಟ್ಟಿದೆ. ಸತ್ಯ ಶರಣರಿಗೆ ತೊತ್ತು ಭೃತ್ಯನಾಗಿ ಸವೆದು ಬದುಕಿದೆನು ಕರ್ತನ ಬೆಸನು ಮತ್ತೆ. ಬರಲಿಂವಟ್ಟಿದರೆ ಕೂಡಲಸಂಗಮದೇವರ ನಿರೂಪಕ್ಕೆ ಮಹಾಪ್ರಸಾದವೆಂದೆನು. ॥೧೯॥

ಆ ಪ್ರಸ್ತಾವದ ಪದಂಗಳು॥

ರಾಗ ಆಹರಿ.

ಶರಣು ಶರಣಯ್ಯ ನೀವು ನಮ್ಮನೆಲ್ಲಿಗೆ ಕರೆದಿಹಿರಿ ಗುರುಲಿಂಗಜಂಗಮವು ಒಕ್ಕುಮಿಕ್ಕುದುಂಟಿ ನಮಗಲ್ಲಿ ॥ಪಲ್ಲ॥

ಪನ್ನಗಧರನೊಳಿಹ ಪ್ರಸ್ಪನ ಚನ್ನಬಸವಣ್ಣ ಕಂಡನಲ್ಲ। ಇನ್ನೇನ ವಾಡುವೆನಯ್ಯ ನಮ್ಮ ಶರಣರು ಕರೆದರು. ॥೧॥

ಆದಿಯಲಾದಿದ ಮಾತನು ನೀವು ಆಗಳಿ ಮೆರೆದಿರಿ ಎಲೆ ಶಿವನೆ ಮೋದುನಿಯೊಳು ಗುರುಲಿಂಗಜಂಗಮದ ಭಕ್ತಿಯ ಬೆಳಸೆಂದು ॥೨॥

ಉಶ್ಶಹದಿಂದಲಿ ಅರ್ಚನೆಯು ಮಾಡಿ ಬಿಚ್ಚು ಬಿಸಾಟಂತಾಯಿತ್ತಯ್ಯ। ನಚ್ಚಿದೆನಯ್ಯ ನಿಮ್ಮ ಶರಣರ ಸೇವೆಯ ತಪ್ಪಿಸುವದು ಗುಣವೆ ॥೩॥

ಕುಸುರಿಗೆಲಸದ ಮಿಸುನಿಯ ತೊಡಿಗೆಯ ಬಿಟ್ಟು ಬಿದ್ದು ಹೋದಂತೆ। ಪಶುಪತಿ ನಿಮ್ಮ ಶೇಷ ಪ್ರಸಾದ ಉಂಟೆ ನಮಗಲ್ಲಿ ॥೪॥

ಸುಚಿತ್ತದಲ್ಲಿ ಶಿವಲಿಂಗ ಪೂಜಿಸಿ ಬೆಚ್ಚು ಬೆರಿಸಿದಂತಾಯಿತ್ತಯ್ಯ। ನಚ್ಚಿದೆನಯ್ಯ ನಿಮ್ಮ ಶರಣರ ಸೇವೆಯ ತಪ್ಪಿಸುವರೆ ಗುರುವೆ ॥೫॥

ಬಿನ್ನಹ ಕೇಳಿ ಬಾಚಿರಾಜಯ್ಯ ಮೋಳಿಗೆಯ ಮಾರಯ್ಯ ಮಡಿವಾಳ ತಂದೆ ಚನ್ನಬಸವಣ್ಣನ ಕೈಯ್ಯಡೆಗೊಟ್ಟಿವು ನಿಮ್ಮ ಶಿರುವೆಂದು ॥೬॥

ಮುಡಿಯಲಿ ವಾಜಿ ಕಿವಿಯಲಿ ಮೂಗುತಿ ಕೊರಳೊಳು ಕಂಕಣ ನಡುಪಟ್ಟಿರೆ ಕಾಲಿಲೆ ಬಳೆ ಹೆಡತಲೆಯಲಿ ಪದಕವು ಲೀಲೆಯಿಂದುಡ ಕೊಟ್ಟರೆಮ್ಮವರು ॥೭॥

ಬಿಡಲಾರೆನು ಮರ್ತ್ಯಲೋಕದ ರುಚಿಯನು ಬಿಡಲಾರೆನು ಗಣ ತಿಂಥಿಣಿಯ ಬಿಡಲಾರೆನು ಗುರುಲಿಂಗಜಂಗಮದ ಒಕ್ಕುಮಿಕ್ಕುದನು ॥೮॥

ಭಕ್ತರೆಲ್ಲರು ಮುತ್ತೈದೆರಾಗಿರಿ ನಿಮ್ಮ ಡಿತ್ತದ ಕಂದನ ಮರೆಯುದಿರಿ ಮುಕ್ತಿಯನೀವುದು ಬಿಜ್ಜಳರಾಯನೆ ಭಕ್ತರ ಪಸ್ತವಲ್ಲೆ ॥೯॥

ಹರಮುನಿದರೆ ಗುರು ಕಾವನಲ್ಲ ಗುರು ಮುನಿದರೆ ಹರಕಾವನಲ್ಲ ಹರಗಿಂದಲು ಗುರುವಿಂದಲು ಜಂಗಮವೆ ಅಧಿಕ ॥೧೦॥

ಶರಣ ಸಕಲ ಮಾತರ ಪಾದಕ್ಕೆ ಶರಣು ಪ್ರಭುವಿನ ಪಾದಕ್ಕೆ ಶರಣು ಕೂಡಲಸಂಗನ ಪಾದಕ್ಕೆ ಶರಣು ಶರಣು ತಂದೆ ॥೧೧॥

ಬಸವರಾಜದೇವರು ಅಸಂಖ್ಯಾತ ಮಹಾಗಣಂಗಳೊಡನೆ ತಮ್ಮ ಲಿಂಗೈಕ್ಯಮಂ ಬಿನ್ನಪಂಗೈದು ಕಳುಹಿಸಿಕೊಂಬ ಪ್ರಸ್ಥಾವದ ವಚನ॥

ಆನು ನಿಮ್ಮ ಬಂಟರ ಬಂಟ ನಾನೆಯ್ಯ. ಆನು ನಿಮ್ಮ ಲಿಂಕರ ಲಿಂಕ ನಾನೆಯ್ಯ. ಆನು ನಿಮ್ಮ ತೊತ್ತಿನ ಪಡುಗವ ತೆಗೆವ ಪಡಿದೊತ್ತಯ್ಯ. ಕೂಡಲಸಂಗನ ಶರಣರಿಗೆಲ್ಲ ಸಂಗನಬಸವನ ಬಿನ್ನಪವ ಕವಳಿಗೆ ಸಂದಿತ್ತು ನಿಮ್ಮ ನಿಜ ಪದದಲ್ಲಿ ಬೆರಸೆಂದು ಕೈಸೆವಾಡಿರಯ್ಯ ॥೬೧॥

ಆನು ಮಾಡಿದ ತಪ್ಪನೆಣಿಸಿಹೆನೆಂದರೆ ಗಣನೆಯಿಲ್ಲ. ನಡೆದು ತಪ್ಪುವೆನು ನುಡಿದು ತಪ್ಪುವೆನು. ಮಾಡಿ ತಪ್ಪುವೆನು. ಕೂಡಿ ತಪ್ಪುವೆನು. ಅರಿದು ತಪ್ಪುವೆನು. ಮರೆದು ತಪ್ಪುವೆನು. ಎನ್ನ ತಪ್ಪನೊಪ್ಪವ ಮಾಡಿಕೊಂಬುವಲ್ಲದೆ ಚಿತ್ತಕ್ಕೆ ತರಲಾಗದು. ಕೂಡಲಸಂಗಮದೇವಯ್ಯನೆಂಬ ಗಂಡನೆನ್ನ ಪರಿಸಬೇಕೆಂದು ಕರೆಯಲಟ್ಟಿದನು ಶಿವಶರಣರೆಲ್ಲರಿಗೆ ಶರಣೆಂದು ಬೀಳುಕೊಂಬ ತವಕದಲ್ಲಿದ್ದೆ. ॥೬೨॥

ಆ ಪ್ರಸ್ಥಾವದ ಪದಂಗಳು ॥

ಶರಣು ಶರಣು ಕೂಡೆ ಶರಣು ಶರಣೆನು ತಿದ್ದಿಸೈಯ್ಯ ಅಚಲಪಪ್ಪ ಲಿಂಗವನೊಲಸಿದ ಶರಣರಿಂಗೆ ಶರಣು ॥ಪದ॥

ಹಸ್ತ ತಾಯಿ ದೃಷ್ಟಿ ತಂದೆ ಹುಟ್ಟಿದೆ. ನಾನು ಅಯೋನಿಯಲಿ ಕಟ್ಟಿದ ಕಂಕಣವ ಗುರು ಸಾಕ್ಷಿಯಾಗಿ ಶಿವನೆ ಗಂಡನೆಂದು ॥೧॥

ತಂದೆ ತಾಯಿ ಬಂಧು ಬಳಗ ಶಿವಭಕ್ತರೆನ್ನವರು ಮನೆಗೂಡಿ ಕಳುಹಿ ನೀವು ಕೊಟ್ಟ ಗಂಡನ ಮನೆಗೆ ॥೨॥

ಮದುವೆ ಎಂದು ನಮ್ಮವರು ಹುಟ್ಟಿಗೆಯ ನುಡಿಸಲು ಹುಟ್ಟಿದೆ ಹರಿದು ಅರಿವೆಯಾಗಿ ಸ್ವತಂತ್ರ ಶೀಲರು ಕೊಟ್ಟ ಅರಿವೆಯ ಮರಳದಿರೆಂದು ॥೩॥

ಹಿಂದಣ ಭವಮಾಲೆ ಹಿಂಗಿತ್ತು. ಎನಗೆ ನಿಮ್ಮ ಕಾರುಣ್ಯ ಪ್ರಸಾದದಿಂದ ಮರಳಿ ಭವವಿಲ್ಲ ನೀವೆ ಬಲ್ಲಿರಿ ನಿಮ್ಮ ಕಂದನನೂ ॥೪॥

ಮುಚ್ಚಿದ ಬಾಯಿ ಮುಗಿದ ಕರವು ನುಡಿಯಲಮ್ಮೆನು ಪ್ರತಿಶಬ್ದವನು ನೋಸಲು ಶರಣರ ಪಾಪದಿಂದಗಲದಿಪ್ಪುದಾಗಿ ॥೫॥

ಹಲವು ಪರಿಯಿಂದ ಗಂಡನನೊಲಿಸಿ ಕೂಡಿದ ಕೂಟದ ಸ್ನೇಹವನು ಹೇಳಲಿಲ್ಲ ಕೇಳಲಿಲ್ಲ ಶಬ್ದಕಿಂಬಿಲ್ಲವಾಗಿ ॥೬॥

ಶಬ್ದದ ನೀಶಬ್ದವಾಯಿತ್ತು. ತಂದೆ ಕೂಡಲ ಸಂಗಯ್ಯನಲ್ಲಿ ಬೆರಸಿ ಮನವು ಅಲ್ಲಮ ಪ್ರಭುವಿನ ಪಾದದಲ್ಲಿ ಸಯವಾಯಿತ್ತಾಗಿ ॥೭॥

ಇಂತು ಬಸವರಾಜದೇವರು ಅಸಂಖ್ಯಾತ ಮಹಾಗಣಂಗಳ ಕೈಯ್ಯಲು ಬೀಳ್ಕೊಂಡು ತಮ್ಮ ಗೃಹೋಪಕರಣಂಗಳಂ ಲಿಂಗಜಂಗಮಕ್ಕೆ ಸೂರೆಗೊಟ್ಟು ಏಳುನೂರೆಪ್ಪತ್ತು ಮಹಾಗಣಂಗಳಿಗೆ ನಿಜಪದಪ್ರಾಪ್ತಿಯ ನಿರೂಪಿಸಿ ಕಳುಹಿ ತಮ್ಮ ಸಮಯಾಚಾರದ ಮೂವತ್ತಾರು ಸಾವಿರ ಜಂಗಮಮಂ ಚಿಕ್ಕದಣ್ಣಾಯಕರ ಕೈಯಲ್ಲಿ ಕೊಟ್ಟು ಸಕಲ ಶರಣರಗೂಡಿ ಕಟಕಮಂ ಪೊರಮಟ್ಟು ಕಪ್ಪಡಿಯ ಸಂಗಮೇಶ್ವರಂಗೆ ಎಯ್ದಿ ಪೋಗಲು ಆಗಳೆ ಬಿಜ್ಜಳನೈಶ್ವರ್ಯ ಹಾನಿಯಾಗೆ ಕಟಕದ ಭಾಗ್ಯವಳಿಯಿತ್ತು. ಧಾರುಣಿ ನಡುಗಿತ್ತು. ಕಾಗೆಗಳಿರುಳರಚಿದವು. ಹಗಲು ನರಿಗಳೂರೊಳ ಪೊಕ್ಕವು. ನಕ್ಷತ್ರ ಬಿದ್ದವು. ಕಲ್ಲ ಮಳೆ ಸುರಿದವು. ಮಹಾಚಂಡವಾಯು ಬೀಸಿತ್ತು. ಕೆಂದೂಳಿದ್ದು ಹಗಲು ಮುಸುಕಿ ಮಂಜಿನ ಕತ್ತಲೆಯಾಗಿ ಗಗನದೊಳು ಭೀಕರವಾಗಿ ಬಿಜ್ಜಳನು ಶಿರವಿಲ್ಲದ ಹೆಣನ ಕಂಡ. ಪ್ರತಿ ಸೂರ್ಯ ಮೂಡಿದನು. ಇದರ ಮೇಲೇನಹುದೊ ಎನುತ್ತ ಜನರುಗಳು ಹೆದರಿ ಸಂವಾದಿಸುತ್ತಿರೆ ಇತ್ತಲಾ ಜಗದೇವನು ಪೊಲ್ಲೆಯ ಬೊಮ್ಮಯ್ಯನ ಕೂಡಿಕೊಂಡು ಬಸವರಾಜದೇವರಲ್ಲಿಗೆ ಬಂದು ಬೆಸನಾಂತುದಕ್ಕೆ ಇದೇ ಕಾಲವೆಂದು ಅತಿ ಪರಾಕ್ರಮದಿಂದೆ ಭಸ್ಮಾಂಗ ವಿಭೂತಿ ಶರಣಾಂಕಿತ ವೀರಾವತಾರದ ವೀರಭದ್ರರು ಕೈದುವಂ ಪಿಡಿದು ದಳದಳನೆ ಬಂದು ಐವತ್ತಾರು ದೇಶಾಧಿಪತಿಗಳಿಂದೋಲೈಸಿಕೊಳುತ್ತ ಇಪ್ಪತ್ತೆರಡು ವಿನಿಯೋಗಂಗಳಂದ ಗರ್ಮಗೆಯ ಮೇಲಿಹ ಬಿಜ್ಜಳನ ಕಾಣುತ್ತ ಆಯು ಧವನುಚ್ಚಿ ಸಭೆಯಲ್ಲಿ ಝಲ್ಲೆನಲು, ಬಿಜ್ಜಳನ ಕಾಯವಲ್ಲಿ ಒಂದೆರಡು ಮೂರು ಪೂರಾಯು ಗಾಯದೊಳಿರಿದು ಕೆಡಹಿ ಶಿವಭಕ್ತ ದ್ರೋಹಿಯ ಕೊಂದೆವಲಾ ಎಂದು ಉಬ್ಬುತ್ತ ಕೊಬ್ಬುತ್ತ ಬೊಬ್ಬೆ ಇಡುತ್ತ ವೀರಭದ್ರರು ಶಿವಲೋಕಕ್ಕೈದಿದರು. ಇತ್ತ ಬಸವರಾಜದೇವರು ಇನಿತಂ ಕೇಳಿ ಸಂತೋಷಿಸಿ ಕೂಡಲಗೆ ಬಂದು ಆ ಸಮಯದೊಳು ನೀಲಲೋಚನೆಯ ಕರೆದುಕೊಂಡು ಬನ್ನಿ ಎಂದು ಹಡಪದಪ್ಪಣ್ಣಗಳ ಕಳುಹಲು ಆ ಅಪ್ಪಣ್ಣಗಳು ಕಲ್ಯಾಣಕ್ಕೆ ಬಂದು ನೀಲಲೋಚನೆಯಮ್ಮನ ಮುಂದೆ ನಿಂದು

ನಮಸ್ಕರಿಸಿ ಲಿಂಗೈಕ್ಯವಾಗುವದಕ್ಕೆ ಬಸವರಾಜದೇವರು ನಿಮ್ಮ ಕೂಡಲಿಸಿ ಬರಹೇಳಿದರೆಂದು ಆ ಅಪ್ಪಣ್ಣಗಳೊಡನೆ ನೀಲಲೋಚನೆಯಮ್ಮನು ನಿವೇದಿಸಿದ ಪ್ರಸ್ಥಾವದ ವಚನ ॥

ಇಪ್ಪೆಯ ಹೂವ್ವನನುಗೊಳಿಸಲು ಇಪ್ಪೆ ಹಿಪ್ಪೆಯಾಯಿತ್ತು. ಸರ್ಪನ ಶಿರ ಕಂತದಲ್ಲಿ ಮೂಗುತಿಯ ಸರಗೊಳಿಸಿದೆನಯ್ಯ. ನಾವಿಲ್ಲಿದ್ದರೇನು? ನಾವಲ್ಲಿದ್ದರೇನು? ನಮ್ಮ ನಿಮ್ಮ ಸಂಸರ್ಗದಲ್ಲಿ ನಿಮಿಷವನಾಕಾ ಮೂರ್ತಿಗಳಾಗಿ ನಿರವಯವನೈದಿ ನಿಜ ಸುಖಿಗಳಾದೆನು. ಬಸವನಲ್ಲಿ ಎಮಗೆ ತೆರಹಿಲ್ಲವಯ್ಯ ಅಪ್ಪಣ್ಣ. ಭಾವಶೂನ್ಯಳು ನಾನಯ್ಯ ಸಂಗಯ್ಯ. ॥೪೦॥

ಮತ್ತಂ, ನಾನಾರ ಸಾರುವೆನೆಂದು ಚಿಂತಿಸಲೇತಕಯ್ಯ? ನಾನಾರ ಕೊಂದುವೆನೆಂದುಭ್ರಮೆ ಒಡಲೇಕಯ್ಯ? ನಾನಾರ ಇರವನರಿಯೆನೆಂದು ಪ್ರಳಾಪಿಸಲೇಕಯ್ಯ? ಪರಿಣಾಮ ಮೂರ್ತಿ ಬಸವನ ರೂಪು ಕರಸ್ಥಲದಲ್ಲಿ ಬೆಳಗಿದ ಬಳಿಕ ಸಂಗಯ್ಯನ ಹಂಗು ನಮಗೇತಕೆ ಅಪ್ಪಣ್ಣಾ? ॥೪೧॥

ಆ ಪ್ರಸ್ಥಾವದ ಪದಂಗಳು.

ರಾಗ ರಾಮಕ್ರಿ.

ನೋಡು ನೋಡು ನೋಡು ಲಿಂಗವೆ ನೋಡು ಬಸವಯ್ಯನಾಟವಾ. ॥ಪಲ್ಲ॥

ಅಲ್ಲಿಗೆ ಎನ್ನನು ಬರಹೇಳಿದರಂತೆ, ಇಲ್ಲಿ ತಾವಿಲ್ಲವೆ ಸಂಗಯ್ಯನು ಅಲ್ಲಿ ಇಲ್ಲಿ ಎಂಬ ಉಭಯ ಸಂದೇಹವು ಬಲ್ಲ ಮಹಾತ್ಮರಿಗಿದು ಗುಣವೆ ॥೧॥

ಪೊಡವಿಯ ಭಕ್ತಗಣಂಗಳು ಸಹವಾಗಿ ಮಡಗಿದ ಶ್ರೀಗುರುಕರದಲ್ಲಿ ದೃಢಚಿತ್ತ ಕರಿಗೊಂಡು ಕೂಡಿಹೆನೆಂದರೆನ್ನೊಡೆಯ ಸಂಗಮನಾಥ ನೀತನಲ್ಲವೆ. ॥೨॥

ಸಂಗನಬಸವಣ್ಣನೆಂದನಿರೂಪಕ್ಕೆ ಹಿಂಗದೆ ಕರವೆತ್ತಿ ಮುಗಿವುತಲಿ ಸಂಗಮನಾಥನೆ ಈತನೆಂದನುತಲೆನ್ನಂಗೈಯ್ಯ ಲಿಂಗದೊಳಡಗುವೆ ॥೩॥

ಹೀಗೆಂದು ನೀಲಲೋಚನೆಯಮ್ಮನು ಹಡಪದಪ್ಪಣ್ಣಗಳ ಮರಳಿ ಕಳುಹಲು, ಅವರು ಬಂದು ಬಸವರಾಜದೇವರೊಡನೆ ದೇವಾ ಅವರು ತಮ್ಮ ಇಷ್ಟಲಿಂಗದೊಳಗೈಕ್ಯವಾಗಿಹೆವೆಂದರೆಂದು ವಿಜ್ಞಾಪಿಸಲು, ಅದಕ್ಕೆ ಬಸವರಾಜದೇವರು ಒಡಂಬಟ್ಟು ಸಂಗಮೇಶ್ವರನಲ್ಲಿ ಉಪಾವಸ್ಥೆಯಂ ಮಾಡುವ ವಚನ. ॥

ನಾನಾ ಭವದುಃಖದಲ್ಲಿ ಹುಟ್ಟಿದ ಪ್ರಾಣಿಯನಿಲ್ಲಿಂಗೆ ತಂದೆ. ಇನ್ನು ಹುಟ್ಟಲಾರೆನು ಹೊಂದಲಾರೆನು. ಜನನಮರಣವೆಂಬೆರಡಕ್ಕೆ ಹೊರಗಾದೆನಯ್ಯ. ನೀವು ಹೇಳಿದ ಮಾತಿನ ಮಾಡಿದೆ. ಇನ್ನು ನಿಮ್ಮೊಳಗೆ ಕೂಡಿಕೊಳ್ಳಾ ಕೂಡಲಸಂಗಮದೇವಾ. ॥೪೫॥

ಮತ್ತಂ, ಉರಿಯೊಳಗಣ ಕರ್ಪೂರಕ್ಕೆ ಕರಿಯುಂಟೆ ಅಯ್ಯ? ಬಯಲ ಮರೀಚಿಯ ಜಲಕ್ಕೆ ಕೆಸರುಂಟೆ ಅಯ್ಯ? ವಾಯುವನಪ್ಪಿದ ಪರಿಮಳಕ್ಕೆ ಸಿರ್ಮಾಲ್ಯ ಉಂಟೆ ಅಯ್ಯ? ನೀವು ನೆರೆ ಒಲಿದ ಬಳಿಕ ಎನಗೆ ಭವ ಉಂಟೆ? ಕೂಡಲಸಂಗಮದೇವ ನಿಮ್ಮ ಚರಣಕಮಲದೊಳಗೆ ಎನ್ನ ನಿಂಬಿಟ್ಟುಕೊಳ್ಳಯ್ಯ. ॥೪೬॥

ಮತ್ತಂ॥ ಬಸವರಾಜದೇವರು ನಿಮ್ಮ ಶರೀರದೊಳು ಆವ ಸ್ಥಾನವನು ಒಲ್ಲೆನು. ನಿಮ್ಮ ಹೃದಯ ಕಮಲದೊಳಿಂಬಿಟ್ಟುಕೊಳ್ಳಿ ಎಂದು ಅತ್ಯಂತ ಅವಸ್ಥೆಯಿಂ ವಿಜ್ಞಾಪಿಸುವ ಪ್ರಸ್ಥಾವದ ವಚನ ॥

ಶರಣ ಸನ್ನಿಹಿತನು ಐಕ್ಯವಾಹಲ್ಲಿ ಹರಿಬ್ರಹ್ಮಾದಿಗಳು ಮೊದಲಾದ ತೆತ್ತೀಸ ಕೋಟಿ ದೇವಕ್ಕಳು ಉಘೆ ಚಾಂಗು ಭಲಾ ಎಂದು ಸ್ತುತಿಸುತ್ತಿರಲು ಇಕ್ಕ ಬಸವಣ್ಣಂಗೆ ಠಾವಾವುದಯ್ಯ ಎಂದಡೆ ಅಂಗದ ಕಳೆಯಲ್ಲಿ ಬಲಸೆ ಬ್ರಹ್ಮನ ಸ್ಥಾನ. ಎಡನೆ ನಾರಾಯಣನ ಸ್ಥಾನ ಒಪ್ಪಿನಯ್ಯ ಆ ಸ್ಥಾನಂಗಳನು. ಕೊರಳು ಗರಳದ ಸ್ಥಾನ, ಬಾಯು ಅಪ್ಪುವಿನ ಸ್ಥಾನ, ನಾಸಿಕ ವಾಯುವಿನ ಸ್ಥಾನ, ಕಂಗಳು ಅಗ್ನಿಯ ಸ್ಥಾನ, ಜಡೆ ಗಂಗಾದೇವಿಯ ಸ್ಥಾನ, ನೊಸಲು ಚಂದ್ರಮನ ಸ್ಥಾನ, ಹಿಂದು ಸೂರ್ಯನ ಸ್ಥಾನ, ಚರಣಂಗಳು ಅಷ್ಟದಿಕ್ಪಾಲಕರ ಸ್ಥಾನ, ಗುಹ್ಯ ಕಾಮನ ಸ್ಥಾನ, ಹಸ್ತಂಗಳು ತ್ರಿಶೂಲ ಕಪಾಲ ಖಟ್ವಾಂಗ ಡಮುರುಗ ಸ್ಥಾನ, ಇಂತೀ ಎಲ್ಲ ಸ್ಥಾನಂಗಳನೊಳ್ಳಿನಯ್ಯ. ಹೃದಯ ಕಮಲದ ಅಂತರಾಳದ ಏಕ ಪೀಠದ ಸಿಂಹಾಸನದ ತೆರಹು ನೋಡು ಕೂಡಲಸಂಗಮದೇವಾ ॥೪೭॥

ಹೀಗೆಂದು ಬಸವರಾಜದೇವರು ಅತ್ಯಂತ ಅವಸ್ಥೆಯಿಂ ವಿಜ್ಞಾಪಿಸಲು, ಮನ್ನನದ ಮಧ್ಯದೊಳು ಪೊಕ್ಕು ಚಿದಾತ್ಮಲಿಂಗವು ಹೊಳೆದು ಕೋರಿತ್ತಾಕ್ಷಣದಿ ಮುಗಿಲೋಳ್ಕಿಂಚು ಪೊರಪೊಣ್ಮುವಂತೆ ದಿನಮಣಿಯ ಕೋಟಿ ಪ್ರಭಾ ಪುಂಜದೊಬ್ಬುಳಿಯಾದ ಮಾಳ್ಕಿಯೋಳ್ಚಂದ್ರನ ಕೋಟಿ ತೇಜವನೊಳಕೊಳುತ್ತ ಮೂರ್ತಿಯು ಧರಿಸಿ ಆ ಸಂಗಮೇಶ್ವರನು ಜಂಗಮ

ಸ್ವರೂಪಿನಿಂದ ಬಂದು ಆ ಬಸವರಾಜದೇವರ ಬಿಗಿಬಿಗಿಯಪ್ಪಿಕೊಂಡು ಹೃದಯಕಮಲದೊಳಗಡಗಿಸಿಕೊಂಡು ಆ ಲಿಂಗದೊಳಾಮೂರ್ತಿಯಾದ ಪ್ರಸ್ಥಾವದ ವಚನ ॥

ಧರೆಯಾಕಾಶದ ನಡುವೆ ಒಂದು ಮಾಮರ ಹುಟ್ಟಿತ್ತು. ಆ ಮಾಮರಕ್ಕೆ ಕೊಂಬೆರಡು, ಎಲೆ ಮೂರು, ಮೂವತ್ತಾರು ಪುಷ್ಪ ಕಾಯಿ ಒಂದೆ ಹಣ್ಣು ರಸ ತುಂಬಿದಲ್ಲಿ ಏನೇನ ಕಾಣೆನು. ಎಲೆ ಉದುರಿದಡೆ ಹಣ್ಣು ತೊಪ್ಪಬಿಟ್ಟು ಬಿದ್ದಿತ್ತು. ಆ ಹಣ್ಣ ಪ್ರಭುದೇವರು ಆರೋಗಣೆಯ ಮಾಡಿ ನಿಜದಲ್ಲಿ ನಿರ್ವಯಲಾದರು. ಪ್ರಭುವಿನ ಕಾರುಣ್ಯ ಪ್ರಸಾದವ ನಾನು ಕೊಂಡೆನಾಗಿ ಕೂಡಲಸಂಗಮದೇವರು ಇತ್ತ ಬಾರೆಂದು ತಮ್ಮ ಹೃದಯಕಮಲದಲ್ಲಿ ಇಂಬಿಟ್ಟುಕೊಂಡರು. ॥೪೮॥

ಇಂತು ಬಸವರಾಜದೇವರು ತಪ್ಪೊಳಗೆ ಇಂಬಿಟ್ಟು ಗುರುಮೂರ್ತಿಯಾಕ್ಷಣದಲೆ ಸಾಕಾರವನುಳಿದು ನಿರ್ವಯಲಾಗಲು ಉಘೆ ಉಘೇ ಎನುತ್ತಿಲ್ಲೆಡೆಯೊಳು ಶಿವಭಕ್ತರ ಕೀರ್ತನೆಗಳ್ಮೊರೆಯೆ ಆ ಬಸವರಾಜದೇವರು ಗಾಳಿಯೊಳು ಸುಳಿಗಾಳಿ ಬೆರೆದಂತೆ ನಭದೊಳೆಸೆವ ತಟಿರ್ಲತೆ ನಭದೊಳು ಹೊಡೆದಡಗಿದಂತೆ ಉದಕದಿಂದಾವ ವಾರಿಶಿಲೆ ಉದಕದೊಳಡಗಿದಂತೆ ಕುಸುಮ ಪರಿಮಳದಂತೆ ಪಾಲ್ಗೋಳ್ವಾಲಬೆರಸಿದಂತೆ ಚಂದ್ರನೋಳ್ಕಳೆ ಉದಯಿಸಿ ಮರಳಿ ಚಂದ್ರನೋಳ್ಬೆರಸಿದಂತೆ ಬಸವರಾಜದೇವರು ಸಂಗಮೇಶ್ವರನೆಂಬ ಗುರುಮೂರ್ತಿಯ ಹೃತ್ಕಮಲದಲ್ಲಿ ವಿಶ್ರಾಂತಿಯನೈದಿ ತದ್ಗುರುವೆ ತಾನಾಗಿ ಬೆರಸಲು ಇತ್ತ ನೀಲಲೋಚನೆಯಮ್ಮನವರು ಪ್ರಳಾಪಿಸಿದ ವಚನ ॥

ಆದಿ ಅನಾದಿಯ ತತ್ವವ ಭೇದಿಸಿಕೊಟ್ಟ ಗುರುವೆ, ಅಪ್ರಮಾಣದ ಬೆಳಗ ಭೇದಿಸಿ ಕೊಟ್ಟ ಗುರುವೆ, ಅಕಾರ ಉಕಾರ ಮಕಾರ ಕಾಳೆಯನರುಹಿಕೊಟ್ಟ ಗುರುವೆ ಇಷ್ಟ ಪ್ರಾಣ ಭಾವವಿದೆಂದು ತೋರಿದ ಗುರುವೆ, ನಿಜದರುಹನರುಹಿಸಿ ಕೊಟ್ಟ ಗುರುವೆ, ನಿರ್ಮಳ ಪ್ರಭೆಯ ತೋರಿದ ಗುರುವೆ, ನಿಜವನನುಭವಕ್ಕೆ ತಂದ ಗುರುವೆ, ನಿಮ್ಮ ಘನನ ಕಾಂಬ ಕಣ್ಣ ಕ್ರಮುಗೆಟ್ಟತ್ತು ಸಂಗಯ್ಯ; ಬಸವಯ್ಯನ ಪ್ರಭೆಯಲ್ಲಿ ಅಡಗಿತ್ತು. ॥೪೯॥

ಮತ್ತಂ॥ ಕಾಮಿತ ಸುಖವ ಕಂಗೊಳಿಸಿದ ಗುರುವೆ, ಕಲ್ಪಿತವ ನಷ್ಟವ ಮಾಡಿದ ಗುರುವೆ, ಎತ್ತಲಡಗಿದೆಯಯ್ಯ ಸುಖದುಃಖವನೊಂದು ರೂಪವ ಮಾಡಿದೆ ಗುರುವೆ ಎತ್ತಲಡಗಿದೆಯಯ್ಯ ಸಂಗಯ್ಯನ ಗುರುಬಸವಾ ॥೫೦॥

ಮತ್ತಂ ॥ ಮದ್ಯದ ಕಲ್ಪ ನಾಸ್ತಿಯಾಯಿತ್ತೇ ಬಸವ? ಪ್ರಾಣ ಪ್ರಸಾದವಲ್ಲಿ ಅಡಗಿತ್ತಿ ಬಸವ? ಭಕ್ತಿ ಬಯಲಾಯಿತ್ತೇ ಬಸವ? ಭಾವ ನಿರ್ಭಾವವಾಯಿತ್ತೆ ಬಸವ? ಕಲ್ಪಿತ ಗುಣ ನಷ್ಟವಾಯಿತ್ತೆ ಬಸವ? ಮನೋ ಮುಕ್ತಿಯಾಯಿತ್ತೆ ಸಂಗಯ್ಯನ ಗುರುಬಸವಾ ॥೫೧॥

ಮತ್ತಂ॥ ಏನೇನು ಎನಲಿಲ್ಲ. ಎನ್ನ ಭಕ್ತಿಯುಳಿದ ಭಾವಕ್ಕೆ ಇನ್ನೇನು ಎನಲಿಲ್ಲ. ಎನ್ನ ಪ್ರಾಣದ ಹಂಗು ಹರಿದ ಬಳಿಕ ಇನ್ನೇನು ಏನು ಎನಲಿಲ್ಲ. ಎನ್ನೈಕ್ಯದ ಸಮರಸ ಕೈಗೂಡಿದ ಬಳಿಕ ಇನ್ನೇನು ಏನು ಎನಲಿಲ್ಲ. ಎನ್ನಭಿಮಾನದ ಕರ್ತೃ ನಿರಾಳದಲ್ಲಿ ಸಂದ ಬಳಿಕ ಸುಯಿಧಾನ ಸುಯಿಧಾನವಾಯಿತ್ತಯ್ಯ ಸಂಗಯ್ಯ ॥೫೨॥

ಮತ್ತಂ, ಎನಗಿನ್ನೇನು ಎನ್ನೈಕ್ಯಸೈಕ್ಯವ ನೈದಿದ ಬಳಿಕ? ಎನಗೆ ಕಾಮವಿಲ್ಲ. ಎನಗೆ ಪ್ರಾಣವಿಲ್ಲ. ಎನಗೆ ಹೃದಯದ ಹಂಗು ಹರಿದು ಪರಿಣಾಮ ಪ್ರಸಾದಿಯಾದೆನಯ್ಯ ಸಂಗಯ್ಯ ॥೫೩॥

ಹೀಗೆಂದು ನೀಲಲೋಚನೆಯಮ್ಮನು ಪ್ರಳಾಪಿಸುತ್ತಿರಲು ಅವಕ್ಕೆ ಚನ್ನಬಸವರಾಜದೇವರ ವಚನ ॥

ಶ್ರೀಗುರು ತನ್ನ ಸಾಕಾರವ ಬಿಟ್ಟು ನಿರಾಕಾರವಾದರೆ ಸಂದೇಹಿಸಲಿಲ್ಲ. ಸಾಕಾರವಿಡಿದು ಉಪದೇಶವ ಕೊಟ್ಟು ಕಾಯ ಸನುರ್ಪಿಸಿಕೊಂಡು ಶುದ್ಧವ ಮಾಡಿದನು. ಪ್ರಾಣದಲಡಗಿ ಸಿದ್ಧವ ಮಾಡಿದನು. ಆತ್ಮಪದದಲ್ಲಿ ಬೆರಸಿ ಪ್ರಸಿದ್ಧವ ಮಾಡಿದನು. ಇಂತು ಅವಿರಳ ಗುರುತತ್ವ ಸಂಗನ ಬಸವಣ್ಣ ನಿನ್ನೊಳಗೆ ಪರಿಪೂರ್ಣ ಕಾಣಾ ಕೂಡಲ ಚನ್ನಸಂಗಮದೇವಾ ॥೫೪॥

ಮತ್ತಂ, ಜಂಗಮಮುಖದಲ್ಲಿ ಲಿಂಗ ಸರ್ವಾಂಗವಾಯಿತ್ತಾಗಿ ಆರೋಗಿಸಿ ಕೊಡುವುದು ನೋಡಾ. ಜಂಗಮದಾಸ್ಯಾಯನಪೆ ಲಿಂಗದಾಪ್ಯಾಯನ ನೋಡಾ. ಜಂಗಮ ತೃಪ್ತಿಯ ನಿತ್ಯತೃಪ್ತಿ ನೋಡಾ. ಜಂಗಮವಾರೋಗಿಸಿಕೊಂಡು ಪದ್ರಸೆ ತೀರಿದರೆ ಅಂಗ್ಯಯ್ಯಲೆರಗುವುದು ನೋಡಾ. ಜಂಗಮದ ಮುಖದಲು ತೃಪ್ತನಾದೆನೆಂದು ಬಾರೋ ಬಸವ ಎಂದು ಕೈವಿಡಿದು ತೆಗೆವಪ್ಪಿ ಮುದ್ದಾಡಿಸಿ ತರ್ಕೈಸಿಕೊಂಡು ನಿನ್ನ ಹೊರಗಿರಿಸಲಾರೆನೆಂದು ತನ್ನ ಹೃದಯ ಕಮಲದಲ್ಲಿ ಇಂಬಿಟ್ಟುಕೊಂಡ ಕೂಡಲ ಚನ್ನಸಂಗಯ್ಯಂಗೆ ಬಸವ ಪ್ರಾಣಲಿಂಗವಾದಾ ॥೫೫॥

ಇದಕ್ಕೆ ನೀಲಮ್ಮನ ವಚನ ॥

ಅಡವಿಯಲ್ಲಿ ಕಣ್ಣಗೆಟ್ಟ ಪರುವಿನಂತೆ ನಾನು ಪ್ರಳಾಪಿಸುತ್ತಿದ್ದೆ ನೈಯ್ಯ! ನಾನು ಕಡುದುಃಖದಿಂದ ಮರುಗಲು ಕರಣ ಚನ್ನಬಸವಣ್ಣನ ನಿವು ಶಿವ ಶಿವ ಎಂಬ ಮಂತ್ರವನರುಹಿ ಅಳಲುವ ಬಳಲಿಕೆಯ ಕಳೆದ ನಯ್ಯ ಸಂಗಯ್ಯನಲ್ಲಿ ಚನ್ನಬಸವಣ್ಣಂಗೆ ನಮೋ ನಮೋ ಎನುತ್ತಿರ್ದೆನು. ॥೫೬॥

ಮತ್ತಂ. ನೀಲಲೋಚನೆಯಮ್ಮನ ಐಕ್ಯ ॥

ಎಲೆ ಅಯ್ಯ ಕರಸ್ಥಲ ಬಯಲಾಯಿತ್ತು. ಎನಗೆ ಕರಸ್ಥಲ ಮನಸ್ಥಲವಾಯಿತ್ತು ಸಂಗಯ್ಯ. ಬಸವ ಹೋದನತ್ತ ನಾನಡಗಿದೆನಯ್ಯ ನಿನ್ನತ್ತ॥೫೭॥

ಮತ್ತಂ, ನಿರ್ಮೂಲವಾಯಿತ್ತು. ಆಹಾ ನಿರಾಲಂಬವಾಯಿತ್ತು. ಆಹಾ ನಿರಾಕುಳವಾಯಿತ್ತು. ಪುಣ್ಯದ ಫಲ ತೋರಿ ಆಹಾ ಬಯಲನೆ ಕೂಡಿತ್ತು. ಬಯಲು ನಿರ್ವಯಲಾಯಿತ್ತು. ಆ ನಿರ್ವಯಲನುಡುಗಿ ನಿಜ ಸುಖಿಯಾದೆನಯ್ಯ ನಾನು ಸಂಗಯ್ಯನಲ್ಲಿ ನಿಃಶೂನ್ಯವಾಯಿತ್ತಯ್ಯ ॥೫೮॥

ಇಂತು ನೀಲಲೋಚನೆಯಮ್ಮನು ಸಮುದ್ರದಲ್ಲಿ ಬುದ್ಬುದಂಗಳಡಗಿದಂತೆ ಆಕಾಶದೊಳಡಗಿದ ಮಿಂಚಿನಂತೆ ಶರೀರದೊಳಡಗಿದ ಜೈತನ್ಯದಂತೆ ನಯನವಲ್ಲಡಗಿದ ಪ್ರತಿಬಿಂಬದಂತೆ ತಮ್ಮ ಇಷ್ಟಲಿಂಗದಲ್ಲಿ ಏಕಾರ್ಥವಾಗಿ ನಿರ್ವಯಲನೈದಲು ಅತ್ತ ಸೊನ್ನಲಾಪುರದಲ್ಲಿ ಸಿದ್ಧರಾಮಯ್ಯದೇವರು ತಮ್ಮ ಮಹಾಜ್ಞಾನದಿಂದರಿದು ಸ್ತುತಿಸಿದ ವಚನ ॥

ತಾಯೆ ಪರಮ ಸುಖಾಚಾರ ಮೂರ್ತಿಯನಡಗಿಸಿ ನೀನೆಯಾದೆಯವ್ವಾ ತಾಯೆ. ಮಹಾಜ್ಞಾನ ಕಲ್ಪಿತದಲ್ಲಿ ನೀನೆಯಡಗಿದೆಯವ್ವ ತಾಯೆ. ನೀಲಮ್ಮನೆಂಬ ಸುಖವಾಸಿ ಮೂರ್ತಿ ಕಪಿಲಸಿದ್ಧ ಮಲ್ಲಿನಾಥಯ್ಯ ನಿಮ್ಮ ತಾಯಿ ನೀಲಮ್ಮ ನೀನಾದಳು ॥೫೯॥

ಆ ಪ್ರಸ್ಥಾವದೊಳು ಅಕ್ಕನಾಗಾಯಿಗಳು ಪ್ರಳಾಪಿಸಿದ ವಚನ ॥

ಅಯ್ಯ ನಾನಧವೆಯಯ್ಯ ಕೈಯ್ಯಕೋಲ ಕೊಂಬರೆ ಅಯ್ಯ? ಎಳಿಗರುವಿನ ಎಳೆಗಂತಿಯನೆಳಪೊಯ್ಯರೆ ಭಕ್ತರು? ಅಯ್ಯ ಅಯ್ಯ ಎನಲೊಯ್ಯನೆ ಬಸವಣ್ಣ ಪ್ರಿಯ ಚನ್ನಸಂಗಯ್ಯ ॥೬೦॥

ಭಕ್ತಿಯ ತವನಿಧಿಯೆ, ಮುಕ್ತಿಯ ಮೂರುತಿಯೆ, ಲಿಂಗ ಜಂಗಮದ ಜೈತನ್ಯವೆ, ನಿಮ್ಮನಗಲಿ ಎಂತು ಸೈರಿಸುವೆನು? ಎಲೆ ಅಯ್ಯ

ಪರಮ ಗುರುವೆ, ಆಹಾ ಎನ್ನ ಅಂತರಂಗದ ಜ್ಯೋತಿಯೇ ನಿಮ್ಮ ಒಕ್ಕ ಶೇಷ ಪ್ರಸಾದವ ಸಿಕ್ಕಿ ಎನ್ನ ಪಾವನವ ಮಾಡಿ ಉಳುಹಿದೆಯಯ್ಯ ಲಿಂಗವೆ. ಎನಗಿನ್ನಾರು ಹೇಳೈಯ್ಯ ನೀವಲ್ಲದೆ ನೀವಲ್ಲದೆ? ಬಸವಣ್ಣ ಪ್ರಿಯ ಚನ್ನಸಂಗಯ್ಯ ನೀವಗಲಿದರೆ ಎನ್ನ ಪ್ರಾಣ ನಿಮ್ಮೊಳಗೆ ಆಗಲು ಬಲ್ಲುದೆ? ॥೬೧॥

ಮತ್ತಂ. ಬಸವಣ್ಣ ನೀವು ಮರ್ತ್ಯಕ್ಕೆ ಬಂದು ಸಂದರೆ ಭಕ್ತಿಯ ಬೆಳವಿಗೆ ಪಸೆದಿಸೆಗೆಲ್ಲ ಪಸರಿಸಿತ್ತೈಯ್ಯ. ಸ್ವರ್ಗ ಮರ್ತ್ಯ ಪಾತಾಳದೊಳಗೆಲ್ಲ ನಿಮ್ಮ ಭಕ್ತಿಯ ಬೆಳುವೆಗೆಯ ಘನವನಾರು ಬಲ್ಲರು? ಅಣ್ಣ ಶಶಿಧರನಟ್ಟಿದ ಮಣಿಹವು ಪೂರೈಸಿತ್ತೆಂದು ನೀವು ಲಿಂಗೈಕ್ಯವಾದಡೆ ನಿಮ್ಮೊಡನೆ ಭಕ್ತಿ ಹೋಯಿತ್ತಯ್ಯ. ನಿಮ್ಮೊಡನೆ ಸದಾಚಾರ ಹೋಯಿತ್ತಯ್ಯ. ನಿಮ್ಮೊಡನೆ ಅಸಂಖ್ಯಾತರು ಹೋದರು. ಅಣ್ಣ ಮರ್ತ್ಯಲೋಕವ ಮಹಾಮನೆಯು ಶೂನ್ಯವಾಯಿತ್ತು. ಅಯ್ಯ ಬಸವಣ್ಣ ಎನ್ನನೊಯ್ಯದೆ ಹೋದೆಯಲ್ಲ. ಪಂಚ ಪರುಷ ಮೂರುತಿ ಬಸವಣ್ಣ, ಬಸವಣ್ಣ ಪ್ರಿಯ ಚನ್ನಸಂಗಯ್ಯಂಗೆ ಪ್ರಾಣಲಿಂಗವಾಗಿ ಹೋದೆಯಲ್ಲ ಸಂಗನಬಸವಣ್ಣಾ ॥೬೨॥

ಹೀಗೆಂದು ಚನ್ನಸಂಸ್ತೈವುತ್ತಿರೆ ಆ ಬಸವರಾಜದೇವರ ಬೆಂಬಳಿಯಲಿ ಅಕ್ಕನಾಗಾಯಿಗಳು ಲಿಂಗೈಕ್ಯವಾದ ಪ್ರಸ್ಥಾವದ ವಚನ ॥

ಆಚಾರವೆಂಬುದು ಅಗೋಚರ ನೋಡಯ್ಯ ಅರಿಗೆಯು ಸಾಧ್ಯವಲ್ಲ. ಮರ್ತ್ಯ ಲೋಕದಲ್ಲಿ ಸದಾಚಾರ ಬೆಳವಿಗೆಯ ಮಾಡಲೆಂದು ಬಸವಣ್ಣ ಬಂದು ಭಕ್ತಿಸ್ಥಲವ ಹರಹಿದನು. ಗುರುಲಿಂಗಜಂಗಮ ದಾಸೋಹ ಪ್ರಸಾದ ಪಾದೋದಕದ ಹಾದಿಯ ನೆಲ್ಲರಿಗೆಯು ತೋರಿದ. ಶಿವಾಚಾರದ ಬೆಳವಿಗೆಯನಹುದಲ್ಲವೆಂದು ಬಿಜ್ಜಳ ತರ್ಕೈಸಲು, ಅನಂತಮುಖದಿಂದ ಒಡಂಬಡಿಸಿ ಅಹುದೆನಿಸಿದ ಬಂದ ಮಣಿಹ ಪೂರೈಸಿತ್ತೆಂದು ಲಿಂಗದೊಳಗೆ ಬಗೆದು ಹೊಕ್ಕಡೆ ಹಿಂದೆ ಲೋಕವರಿದು ಬಮುಕಬೇಕೆಂದು ಸೆರಗು ಕೊಟ್ಟನು. ನಾನು ಹಿಂದುಳಿದಹೆಳೆಂದು ಮುಂದಣ ಗತಿಯ ತೋರಿ ಬಸವಣ್ಣ ಪ್ರಿಯ ಚನ್ನಸಂಗಯ್ಯನಲ್ಲಿ ಪ್ರಸನ್ನದೊಳಗೆ ಇಂಬಿಟ್ಟುಕೊಂಡನು ಎನ್ನ ಹೆತ್ತ ತಂದೆ ಸಂಗನಬಸವಣ್ಣನು ॥೬೩॥

ಆ ಪ್ರಸ್ಥಾವದೊಳು ಚನ್ನ ಬಸವರಾಜದೇವರು ವಿನ್ಯೈಸಿದ ಪ್ರಸ್ಥಾವನ ವಚನ ॥

ಲಿಂಗ ಜಂಗಮ ಜಂಗಮ ಲಿಂಗವೆಂಬುದ ತೋರಿ ನಿಜೈಕ್ಯನಾಪಿಯಲ್ಲ. ನಿಜ ಗುರುಬಸವಣ್ಣ ಪ್ರಸಾದ ಕಾಯ, ಕಾಯ ಪ್ರಸಾದವೆಂಬುದ ಎನ್ನ ಸರ್ವಾಂಗವಲ್ಲಿ ಪ್ರತಿಷ್ಟಿಸಿ ಎನ್ನನಾಗು ಮಾಡಿ ಮುಂದುವರಿಪಿಯಯ್ಯ ಬಸವಣ್ಣ. ಲಿಂಗ ಪ್ರಾಣ ಪ್ರಾಣ ಲಿಂಗವೆಂಬುದ ಎನ್ನಂ ತರಂಗದಲ್ಲಿ ಸ್ಥಾಪ್ಯವ ಮಾಡಿ ಎನ್ನ ನಿನ್ನಂತೆ ಮಾಡಿ ನಿಜಲಿಂಗದೊಳಗೆ ನಿಜವಾದೆಯಲ್ಲ ಬಸವಣ್ಣ. ಎನ್ನ ಮನವ ಮಹತ್ವದಲ್ಲಿ ಲಯವ ಮಾಡಿ ನಿರ್ವಯಲಾಗಿ ಹೋದೆಯಲ್ಲ ನಿಜಲಿಂಗೈಕ್ಯ ಬಸವಣ್ಣ. ನಿನ್ನ ಒಕ್ಕುಮಿಕ್ಕ ಶೇಷವನಿಕ್ಕಿ ಆಗು ಮಾಡಿ ನಿನ್ನಂತರಂಗದಲ್ಲಿ ಅಪ್ಪೆ ನಾಗಾಯಿಯ ಇಂಬುಗೊಂಡಡೆ ಎನ್ನ ಮನ ನಿಮ್ಮ ಪಾದದಲ್ಲಿ ಕರಗಿ ಕೊರಗಿತ್ತಯ್ಯ ಸಂಗನಬಸವಣ್ಣ. ಕೂಡಲ ಚನ್ನಸಂಗೈಯ್ಯನೆ ಸುಜ್ಞಾನ ವಾಹನವಾಗಬೇಕೆಂದು ನಿರವಯಲಾದೆಯಲ್ಲ ಸಂಗನಬಸವಣ್ಣ ॥೨೪॥

ಆ ಪ್ರಸ್ತಾವದೊಳು ಬಿನ್ನ ಪಂಗೈವ ಪದಂಗಳು.

॥ ರಾಗ ಕೋಕವರಾಳಿ ॥

ಶರಣು ಶರಣು ಎನ್ನ ಗುರುವೆ ಶರಣಯ್ಯ ಶರಣು ಉಪಮಾತೀತ ಜ್ಞಾನ ಗುರುವೆ ನಿಜಲಿಂಗಜಂಗಮವೆ ಘನವೆಂದು ಪ್ರಸಾದವನು ಹಿಂಗದೆ ನಿಜಪದವ ತೋರಿದ ಗುರುವೆ॥ ವಿಲ್ಲದ॥

ಸಾಕಾರ ರೂಪನೆ ತಾಳಿ ಜಿಜ್ಞಳಗೆ ಬೇಕಾದ ದೃಷ್ಟವನೆ ತೋರಿವ ಗುರುವೆ ವಿಸ್ತರಿಸಿ ಜಗಕೆ ನೀನಾಗಿ ಎನ್ನುವನು ತಪ್ಪಿಸಿ ಹೋದೆ ಎಲೆ ಬಸವ ಪರಮಗುರುವೆ ॥೧॥

ಭಕ್ತ ಮಹೇಶ್ವರ ಪ್ರಸಾದಿ ಪ್ರಾಣಲಿಂಗಿ ಶರಣೈಕ್ಯ ಸ್ಥಲದಲ್ಲಿ ನಡೆದ ಗುರುವೆ ಸೋಹಿ ದಾಸೋಹಿ ನೀನಾಗಿ ಭಕ್ತರಿಗೆ ಇಹಪರದ ಸುಖವನ್ನು ತೋರಿದ ಗುರುವೆ ॥೨॥

ನಾದ ಬಿಂದು ಕಳಾತೀತ ಮಹಾಘನವ ಆದಿಲಿಂಗ ಅನಾದಿ ಶರಣ ಗುರುವೆ. ಪಿಂಜು ಪಿಂಜನೆ ಕೂಡಿದಂತೆ ಇದರ ಸಂಚವ ನೆನ್ನಬಹುದ ಗುರುವೆ ॥೩॥

ಅರಿವು ಕುರುಹನೆ ಅರಸಿ ಬರಲು ಆ ಕುರುಹು ಅರಿವನೊಳಕೊಂಡುದನು ಅರಿದ ಗುರುವೆ, ಜ್ಞಾತೃ, ಜ್ಞಾನ, ಜ್ಞೇಯವೆಂಬ ತ್ರಿವಿಧದ ಮಾಟವನು ಹಿಂಗಿದ ಜ್ಞಾನ ಗುರುವೆ ॥೪॥

6274

ಭಾವ ಭಾವನೆ ಭಾವಿಸಲು, ಅನುಭಾವ ನಿರ್ಭಾವವೇಕಾರ್ಥವೆಂದರಿದಗುರುವೆ ಕೂಡಲ ಚನ್ನಸಂಗಯ್ಯ ನಿಮ್ಮುವನು ಬಸವಲಿಂಗ ಬಸವವಲಿಂಗ ಎನುತಿರ್ದೆನು ॥೧೯॥

ಮತ್ತ॥ ಕಂಡಂತೆ ಕಂಡಂತೆ ಆಯಿತ್ತು ಭಕ್ತಿ. ಕಂಡಂತೆ ಆಯಿತ್ತಯ್ಯ. ಉಪಚಾರಕ್ಕೆ ನಿಂದುದು ಉಪಚಾರಕ್ಕೆ ನಿಂದಿತ್ತಲ್ಲ. ಭೃತ್ಯಾಚಾರ ಸಮಯ ಭಕ್ತಿ ಸಂಗನಬಸವಣ್ಣನೊಡನೆ ಹೋಯಿತ್ತು. ಕೂಡಲ ಚನ್ನಸಂಗಯ್ಯ ಬಸವಣ್ಣನೊಯ್ಯಲಾಗಿ ॥೨೦॥

ಮತ್ತಂ॥ ಸ್ಥಲಹೋಯಿತ್ತೆನಗೆ ನಿಃಸ್ಥಲ ಹೋಯಿತ್ತೆನಗೆ. ಗೋರಿಕಲ್ಲ ಮಾಡಹೋಯಿತ್ತೆನಗೆ. ಹುಬ್ಬಿನ ವಿಮಾನ ಹೋಯಿತ್ತೆನಗೆ. ಬಸವ ಹೋದನೆನಗೆ. ಬಸವನ ಮನೆಯ ಜಂಗಮ ಹೋದರೆನಗೆ. ಇನ್ನು ಬಸವ ಬಸವ ಎಂದಡೆ ಕೂಡಲ ಚನ್ನಸಂಗಯ್ಯ ನಿಮ್ಮಾಣೆ ॥೨೧॥

ಮುಡಿವಾಳಯ್ಯಗಳ ವಚನ॥

ಉಟ್ಟ ನೀರೆಯ ಹರಿದು ಹೋದಾತ ನೀನಲ್ಲ. ಬಸವಣ್ಣ ಮೆಟ್ಟಿದ ಕೆರಹ ಕಳೆದು ಹೋದೆಯಲ್ಲ ಬಸವಣ್ಣ! ಕಟ್ಟಿದ ಮುಡಿಯ ಬಿಟ್ಟು ಹೋದೆಯಲ್ಲ ಬಸವಣ್ಣ! ಸೀಮೆ ಸಂಬಂಧ ತಪ್ಪಿ ಹೋದೆಯಲ್ಲ ಬಸವಣ್ಣ. ಲಿಂಗಕ್ಕೆ ಮಾಡಿದ ಮಾಟವ ಸೋಂಕದೆ ಹೋದೆಯಲ್ಲ ಬಸವಣ್ಣ! ಜಂಗಮಕ್ಕೆ ಮಾಡಿವ ಮಾಟವ ಕಯ್ಯಲ್ಲಿ ಹಿಡಿದುಕೊಂಡು ಹೋದೆಯಲ್ಲ ಬಸವಣ್ಣ. ಬೆಳಗನುಟ್ಟು ಬಯಲಾಗಿ ಹೋದೆಯಲ್ಲ ಬಸವಣ್ಣ. ಆ ಬಸವಣ್ಣನ ಹಿಂದುಗೊಂಡು ಹೋಹ ಪಥವನೆ ತೋರಾ ಕಲಿದೇವರದೇವಾ ॥೨೨॥

ಮತ್ತಂ, ಬ್ರಹ್ಮನ ಹೆಂಡತಿಯ ಹಿಡಿತಂದು ಅಡಿಗೆಯ ಮಾಡಿಸಿದಾತ ಬಸವಣ್ಣ. ಹರಿಯ ಸಾಸಿರದೇಳನೂರು ಕುವಾರತಿಯರ ಹಿಡಿತಂದಾತ ಬಸವಣ್ಣ. ಲಿಂಗಕ್ಕೆ ಮಾಡುವ ತನ್ನ ಸೋಂಕದೆ ಹೋದಾತ ಬಸವಣ್ಣ. ಜಂಗಮಕ್ಕೆ ಮಾಡಿದುವ ಕೈಯ್ಯಲ್ಲಿ ಹಿಡಿದುಕೊಂಡು ಹೋದಾತ ಬಸವಣ್ಣ. ಬೆಳಗನುಟ್ಟು ಬಯಲಾಗಿ ಹೋದಾತ ಬಸವಣ್ಣ. ಬಸವಣ್ಣನ ಹಿಂದಸೆ ತೋರು ಕಂಡಾ ಕಲಿದೇವರದೇವಾ ॥೨೩॥

ಮತ್ತಂ॥ಆಕಾರ ನಿರಾಕಾರವಾಯಿತ್ತಲ್ಲ ಬಸವಣ್ಣ. ಪ್ರಾಣನಿಃ ಪ್ರಾಣವಾಯಿತ್ತಲ್ಲ ಬಸವಣ್ಣ. ಲಿಂಗಜಂಗಮದ ಮಾಟ ಕೂಟಸಮಾಪ್ತಿಯಾವಾಯಿತ್ತಲ್ಲ ಬಸವಣ್ಣ. ಲಿಂಗಜಂಗಮದ ಮಾಟ ಕೂಟಸಮಾಪ್ತಿಯಾ

ಯಿತ್ತಲ್ಲ ಬಸವಣ್ಣ. ನಿಃಕಟ್ಟ ವೇದ್ಯವಾದೆಯಲ್ಲ ಬಸವಣ್ಣ. ಕಲಿದೇವರ ದೇವನು ಹೃದಯ ಕಮಲವ ಹೊಕ್ಕು ದೇವಂಗೆ ದೇವನಾಗಿ ಹೋಪೆಯಲ್ಲ ಸಂಗನಬಸವಣ್ಣಾ ॥೭॥

ಲಿಂಗನಿಧಿಯೆ ಬಸವ, ಜಂಗಮದ ವಾರುಧಿಯೆ ಬಸವ, ಪ್ರಸಾದದ ತವನಿಧಿಯೆ ಬಸವ, ಅನುಭಾವದ ಮೇರುವೆ ಬಸವ, ಮಹಾಘನವನೊಡಗೂಡಿದಾತನು ಬಸವಣ್ಣನೊ ಕಲಿದೇವನೊ. ॥೭೫॥

ಮತ್ತಂ॥ ಬಿಂದುವ ಹರಿದೆಯಲ್ಲ ಬಸವಣ್ಣ. ನಾದವ ಸಿಂಹಾಸನವ ಮಾಡಿಕೊಂಡೆಯಲ್ಲ ಬಸವಣ್ಣ, ಅಷ್ಟಗುಣವ ನಷ್ಟವ ಮಾಡಿದೆಯಲ್ಲ ನಿಜಲಿಂಗ ಬಸವಣ್ಣ ಶುಕ್ಲ ಶೋಣಿತದಿಂದಾದ ಕಾಯವೆತ್ತ ಹೋಯಿತ್ತಯ್ಯ ನಿಜಗುರುಬಸವಣ್ಣ. ಭಕ್ತಿ ರೂಪುಗೆಟ್ಟು ಪ್ರಸಾದಿಯಲ್ಲ ಮತ್ತೊಂದು ರೂಪಾದೆಯಲ್ಲ. ನಿಜರೂಪಿ ಬಸವಣ್ಣ ಶೂನ್ಯ ಪ್ರಸಾದಿಯಲ್ಲ ಆವ ಪ್ರಸಾದಿಯಲ್ಲ. ಆವ ಪ್ರಸಾದವನು ಸೋಂಕದ ಪ್ರಸಾದಿ ಯೋನಿಜನಲ್ಲ. ಉಯೋನಿಜನು ನಮ್ಮ ಬಸವಣ್ಣನು. ನಿರಾಕಾರವಾಗಿ ಹೋದನು ನಮ್ಮ ಬಸವರಾಜನು. ಬೆಳಗನುಟ್ಟು ಬಯಲಾಗಿ ಹೋದನು ನಮ್ಮ ಬಸವಲಿಂಗನು. ಬಸವಣ್ಣ ಬಸವಣ್ಣ ಬಸವಣ್ಣ ಎನಲಮ್ಮೆನು. ಎನ್ನ ವಾಙ್ಮನಕ್ಕಗೋಚರನಾಗಿ ಬಸವಣ್ಣಂಗೆ ಶರಣೆಂಬೆ ಪಥವ ತೋರಯ್ಯ ಕಲಿದೇವರದೇವಾ ॥೭೬॥

ಮತ್ತಂ॥ ನೆನೆವನಯ್ಯ ಲೋಹ ಪರುಷದ ಸಂಗದಂತಾಯಿತ್ತಾಗಿ. ಬಸವಣ್ಣ ಬಸವಣ್ಣ ಎಂಬ ಶಬ್ದದೊಳಗೆ ಎನ್ನ ಗಮನ ನಿರ್ಗಮನವಾಯಿತ್ತು. ಬಸವಣ್ಣ ಎಂದೆನ್ನೆನಯ್ಯ. ಕಲಿದೇವರ ದೇವಾ ಕಿಡಿಗೊಂಡರಿನ ಸಂಗದಂತಾಯಿತ್ತಾಗಿ ॥೭೭॥

ಇಂತು ಚನ್ನಬಸವರಾಜದೇವರು ಮಡಿವಾಳ ಮಾಚಿತಂದೆಗಳು ಮೊದಲಾದ ಅಸಂಖ್ಯಾತ ಮಹಾಗಣಂಗಳೆಲ್ಲರು ಉಳುಮೆಯ ಮಹಾಮನೆಯಲ್ಲಿ ನಿರವಯಲನೈದುವ ಪ್ರಸ್ಥಾವದೊಳು ಮಡಿವಾಳ ಮಾಚಿ ತಂದೆಗಳ ವಚನ॥

ನಿರ್ವಹವಾಯಿತ್ತಯ್ಯ ಬಸವಣ್ಣಂಗೆ ಕಪ್ಪಡಿಯ ಸಂಗಯ್ಯನಲ್ಲಿ. ಅಕ್ಕನಾಗಾಯಿ ಮಿಂಡಮಲ್ಲಿನಾಥ ಹಡಪದಪ್ಪಣ್ಣ ಮೊಗವಾಡದ ಕೇತಿರಾಜ ಕೋಲಶಾಂತಯ್ಯ ಮೊದಲಾದ ಶಿವಗಣಂಗಳೆಲ್ಲರು ಬಸವಣ್ಣನ ಬಯಲ ಬೆರಸಿದರು. ಆ ಬಯಲ ಪ್ರಸಾದದಿಂದ ನಿರುಪಮ ಪ್ರಭುದೇವರು ಕದಳಿಯಲ್ಲಿ ಲಯವಾದರು. ಆ ಬಯಲ ಪ್ರಸಾದದಿಂದ ಮೋಳಿಗೆಯ ಮಾರಯ್ಯ ಕಕ್ಕಯ್ಯ ಪಡಿಹಾರಿ ಉತ್ತಣ್ಣ ಕನ್ನವಮಾರಣ್ಣ, ಕಲಕೇತ ಬೊಮ್ಮಣ್ಣ ನುಲಿಯ ಚಂದಯ್ಯ, ಹೆಂಡದ ಮಾರಯ್ಯ, ಶಂಕರದಾಸಿಮಯ್ಯ ಏಕಾಂತ ರಾಮಯ್ಯ, ಮೇದಾರ ಕೇತಯ್ಯ ಮೊದಲಾದ ಏಳನೂರೆಪ್ಪತ್ತು ಅಮರಗಣಂಗಳ ದಂಡು ಕೈಲಾಸಕ್ಕೆ ನಡೆಯಿತ್ತು. ಬಂದ ಮಣಿಹ ಸಂದಿತ್ತು. ಸಂದ ಪುರಾತನರು ಎನ್ನ ಮನದ ಪೈಲಿಗೆಯ ಕಳೆದ ಕಾರಣ ಕಲಿದೇವಯ್ಯ ಇವರೆಲ್ಲರು ಒಕ್ಕು ಮಿಕ್ಕ ಪ್ರಸಾದ ಎನಗಾಯಿತ್ತು ॥೭೮॥

ಇಂತು ಮಡಿವಾಳ ಮಾಚಿತಂದೆಗಳು ನಿರವಯಲಾದ ತವನಂತರ ಚನ್ನ ಬಸವರಾಜದೇವರ ಐಕ್ಯ.

ಹನ್ನೆರಡು ಗಾವುದ ವಿಸ್ತೀರ್ಣ ಪಟ್ಟಣಕ್ಕೆ ಕಲ್ಯಾಣವೇ ಪ್ರಣುತಿಯಯ್ಯ. ಆ ಪ್ರಣುತಿಯಲ್ಲಿ ಮಹತ್ತೆಂಬ ಎಣ್ಣೆಯನೆರದು ಜ್ಞಾನಜ್ಯೋತಿಯ ಹೊತ್ತಿಸಿ ಒಪ್ಪುತ್ತಿದ್ದಿತ್ತಯ್ಯ. ಅಲ್ಲಿ ಕಾಳಯ್ಯ, ಚೌಡಯ್ಯ, ಕೋಲಶಾಂತಯ್ಯ, ಮೊಗವಾಡದ ಕೇತಿರಾಜಯ್ಯ ಖಂಡೆಯದ ಬೊಮ್ಮಣ್ಣ ಮಿಂಡ ಮಲ್ಲಿನಾಥ, ಹಡಪದಪ್ಪಣ್ಣ, ಮಡಿವಾಳಯ್ಯ, ಅಪ್ಪಿ ನಾಗಾಯಿಗಳು ಸಹಿತ ಇವರೆಲ್ಲರು ಸಂಗನಬಸವಣ್ಣನ ಬಯಲ ಕೂಡಿ ಹೋದರು. ಇದು ಕಾರಣ ಕೂಡಲ ಚನ್ನ ಸಂಗಮದೇವರಲ್ಲಿ ಇವರೆಲ್ಲರ ಪ್ರಸಾದದ ಬಯಲು ಎನಗಾಯಿತ್ತು ॥೭೯॥

ಇತಿ ಶ್ರೀಮತ್ಸಕಲ ಗಣ ಪುರಾತನರೊಳ್ ಪ್ರಭುದೇವರ ಮಹಾನುಭಾವ ಸದ್ಗೋಷ್ಠಿಯಂ ಮಾಡಿದ ಶೂನ್ಯ ಸಂಪಾದನೆಯೊಳ್ ಎಲ್ಲ ಗಣಂಗಳ ನಿರ್ಣಯಲ ಸಮಾಧಿ ಏಕ ವಿಂಶೋತ್ಕೃಷ್ಟಪದೇಶ ಸಮಾಪ್ತ.

ಗದ್ಯ॥ ಇದು ಪರಮಗುರು ಪರಮ ವೀರಶೈವ ಸಿದ್ಧಾಂತ ತತ್ವಜ್ಞಾನ, ಇದು ವೀರಶೈವಾಚಾರ ಪ್ರತಿಷ್ಠಾಪನಾಚಾರ್ಯ, ಇದು ದಿವ್ಯ ವೇದಾಂತ ಶಿರೋಮಣಿ, ಇದು ಸಮಸ್ತ ಶಾಸ್ತ್ರ ಮುಖ್ಯ ಮುಖ ದರ್ಪಣ, ಇದು ಮಹಾಜ್ಞಾನ ಪ್ರವರ್ತನ ಪರಮಾನುಭವ ಸಂಬೋಧೆ, ಇದು ಸರ್ವಾಚಾರ ಸಂಪನ್ನ ರಸಮಯಾರೂಢ ಸಂಗ್ರಹ, ಇದು ಪರಮ ರಾಜಯೋಗ, ಸಾಧ್ಯ ಸಂಪಾದನ, ಇದು ಸಚ್ಚಿದಾನಂದ ನಿತ್ಯಪರಿಪೂರ್ಣ

ರಸಾಮೃತ ಪ್ರಸನ್ನ ಪ್ರಸಾದ, ಇದು ಅಜ್ಞಾನ ತಿಮಿರಾಂಜನ ತಂತ್ರವಪ್ಪ ಪ್ರಭುದೇವರ ಶೂನ್ಯಸಂಪಾದನೆಯ ಮಹಾಪ್ರಸಂಗಮಂ ಬಸವರಾಜದೇವರ. ಚನ್ನ ಬಸವರಾಜ ದೇವರು ಪ್ರಭುದೇವರು ಮುಖ್ಯವಾದ ಅಸಂಖ್ಯಾತ ಮಹಾಗಣಂಗಳ ವಚನಂಗಳಿಂದ ಕಥಾ ಸಾಂಗತ್ಯವಾಗಿ ಶಿವ ಗಣಾಂಗಳ ಪ್ರಸಾದಿ ಮಹಾದೇವಯ್ಯಗಳು ತಚ್ಛಿವ ಗಣಂಗಳ ಶಿವಾನು ಭಾವವನು ಭಾವಸ್ರೋತ್ರ ದ್ವಾರ ಮುಖಕ್ಕೆ ನಿರ್ಮಳ ದರ್ಪಣವನೆ ಸಮರ್ಪಿಸಿದನು. ಈ ಮಹಾ ಪ್ರಸಂಗದ ಸಮಹೃದಯವನರಿತಡೆ ನಿತ್ಯ ನಿರವಯವಪ್ಪುದು. ಭವಭಾರಕ್ಕಂಜಿ ಕೇಳಲು ಸರ್ವೋನ್ಮುಕ್ತನು. ತತ್ಸಂಗದಿಂದ ಕೇಳಿ ಮನದಲ್ಲಿ ಧರಿಸಲು ನಿರ್ಮಳಾತ್ಮಕನಪ್ಪನು. ಆ ಧರಣಿಯಿಂದ ಶ್ರೋತ್ರಮುಖಕ್ಕೆ ಕೇಳಿಸಿದಾತನು ರುದ್ರಾಧಿಪತಿಯಪ್ಪನು. ಮನೋರತಿಯಿಂ ಬರೆದೊಡೆ, ಪಠಿಸಿದೊಡೆ, ಅರ್ಥವ ಹೇಳಿದೊಡೆ ಕೇಳಿದೊಡೆ ಸಾಲೋಕ್ಯ, ಸಾಮೀಪ್ಯ, ಸಾರೂಪ್ಯ, ಸಾಯುಜ್ಯವೆಂಬ ಚತುರ್ವಿಧ ಪದಂಗಳಂ ಪಡೆವನು. ಇದನು ಶಿವಶರಣರು ಕೇಳುವುದು, ಲಾಲಿಸುವುದು ಪಾಲಿಸುವುದು ಬರೆದೋದುವುದು. ಇಲ್ಲಿ ಈ ವಚನ ಕ್ರಮ ತಪ್ಪಿದಡೆ ನಿಮ್ಮ ಪರಿಪೂರ್ಣಜ್ಞಾನದಿಂದ ತಿದ್ದಿಕೊಂಬುದೆಂದು ಎನಲಾಗಿ ಆ ವಾಕ್ಯವಿಡಿದು ಗುಮ್ಮಳಾಪುರದ ಸಿದ್ಧಲಿಂಗದೇವರು ಅಲ್ಲಿ ಸಿದ್ಧರಾಮಯ್ಯ ದೇವರಿಗೆ ದೀಕ್ಷಾಕ್ರಮವಿಲ್ಲದಿರಲು, ಬಸವಾದಿ ಪ್ರಮಥರ ವಚನ ಪ್ರಸಿದ್ಧವಾಗಿ ಸೇರಿಸಿದರು. ಆ ಪರಿಯಲ್ಲಿ ಅನಿರ್ವಾಚ್ಯ ಪರಂಜ್ಯೋತಿ ಸ್ವರೂಪ ಷಟ್ಸ್ಥಲ ಸಂಪನ್ನ ಷಡುಲಿಂಗಾಂಗ ಭರಿತ ಶರಣಜನ ಬಾಂಧವ ಶರಣಜನ ಹೃತ್ಕಮಲ ಕರ್ಣಿಕಾವಾಸ ಅನಾದಿ ಪರಶಿವನೆನಿಸುವ ತೋಂಟದ ಸಿದ್ಧಲಿಂಗೇಶ್ವರನು ಆ ತೋಂಟದ ಸಿದ್ಧಲಿಂಗೇಶ್ವರನ ಕೃಪಾ ಕಟಾಕ್ಷ ಪಾತ್ರರಾದ ಬೋಳ ಬಸವೇಶ್ವರನು ಆ ಬೋಳ ಬಸವೇಶ್ವರನ ಮಹಾ ಜ್ಞಾನಾನುಭಾವ ಪ್ರಸನ್ನತೆಯಿಂದ ಗೂಳೂರ ಸಿದ್ಧವೀರಣ್ಣೊಡೆಯರೆಂಬ ದಿವ್ಯ ಜ್ಞಾನಾನುಭಾವಿಗಳು ಈ ಶೂನ್ಯಸಂಪಾದನೆಯ ರಚಿಸಿ ವಸುಧೆಯ ಷಟ್ಸ್ಥಲ ಲಿಂಗಾಂಗ ಸಂಬಂಧಿಗಳಾದ ವೀರಮಹೇಶ್ವರರುಗಳ ಕೃಪಾ ಕಟಾಕ್ಷ ಪ್ರಸನ್ನ ಪಾತ್ರರಪ್ಪ ಸ್ವಲೀಲಾನಂದ ಭಕ್ತವತ್ಸಲರಪ್ಪ ಷಟ್ಸ್ಥಲ ಸಾಮ್ರಾಜ್ಯ ಸಾರ್ವಭೌಮ ಜಗತ್ಪಾವನ ಸದ್ಧರ್ಮ ಮೂರ್ತಿಯಪ್ಪ ಅಂಗ ಮನೋಇಂದ್ರಿಯಾದಿ ದುಸ್ಸಂಗ ವಿರಹಿತರಪ್ಪ ಸಮಸ್ತ ಜಗದ್ವಿಲಾಸ ವೈಭವ ವಿರಹಿತರಪ್ಪ ಶ್ರೀಮದ್ಭೋಧಾ ಗುರು ನಮಃಶಿವಾಯ ದಿವ್ಯ

ಕಮಲಕ್ಕೆ ಈ ಸಂಪಾದನೆಯ ದಿವ್ಯ ಜ್ಞಾನ ವಚನಾಮೃತವ ಬರೆದು ಸಮರ್ಪಿಸಿದೆನು. ಗುರುವೆ ಎನ್ನ ತಪ್ಪನೊಳಕೊಂಡು ಎನ್ನಂಗಮನಂಗಳಲ್ಲಿ ಕೂರ್ತಿಗೊಂಡು ನಿಮ್ಮ ಚಿದಂಘ್ರಿಯೊಳಿನ್ನ ನಿಂಬಿಡಯ್ಯ ಶಾಶ್ವತ ಗುರುವೆ ಶರಣಾರ್ಥಿ॥

ಮತ್ತಂ, ಬಂದೆನನೇಕ ಭವಂಗಳೊಳ್ ನೊಂದೆನು ನಿಮ್ಮಂಘ್ರಿ ಸ್ಮರಿಯವಕಾಣದೆ. ಮಿಗೆಯತಿ ಬೆಂದೆನು. ಕಾಮಾದಿಗಳಲ್ಲಿ ಸಂದೆನು ಸಕಲೇಂದ್ರಿಯಂಗಳಾತುರದಿಂ ಮಿಗೆ ನೊಂದವಗುಣವ ನೋಡದೆ ಕಂದನೆ ಬಾರೆಂದು ಕಂಬನಿಯಂ ತೊಡೆದು ನಿಮ್ಮಂಘ್ರಿಯೊಳಿನ್ನನಿಂಬಿಡಯ್ಯ ಪದಮಲಗುರುವೆ ಶರಣಾರ್ಥಿ॥

ನಮಃಶಿವಾಯ ಗುರುವೆ ಬಸವಲಿಂಗನ ಬಿನ್ನಪವ ಲಾಲಿಸಿ ಕೃಪೆಯಿಂ ಪಲಹಿ ಪಲಹಿ ಶರಣಾರ್ಥಿ ಸಮಸ್ತ ಶರಣರಿಗೆ ಶರಣಾರ್ಥಿ.॥

ವೃತ್ತ॥ ಪರಮ ಸುಧಾಶಿವಾಗ್ರಣಿ ಪವಿತ್ರ ಚರಿತ್ರ, ಶಿವಾಕೃತಿ ಧರ್ಮಸು। ಸ್ಥಿರತರ ಮಾನಸೇಂದ್ರಿಯ ವಿವರ್ಜಿತ ತೋಂಟದ ಸಿದ್ಧಲಿಂಗಸ।ದ್ಗುರುವರನಾತನಾವರದೊಳಿಪ್ಪ ಬೋಳಬಸವೇಶ್ವರಾರ್ಯ ಸ।ತ್ಕರುಣವನಂತು ಗುಳೂರ ಸಿದ್ಧವೀರ ಯತೀಶನೊಲ್ದು ಪೇಳಿದಂ ॥೧॥

ಧರೆಯೋಳ್ ಪ್ರೌಢನೆನಿಪ್ಪನೋರ್ವ ನವನೌಕ್ತಿಕಂಗಳಂ ಚಾರುಬಂ। ಧುರವಪ್ಪಂತೆ ಸಮಾನದಿಂದವರ ತತ್ತ್ವಸ್ಥಾನಮಂ ಕಂಡು ಬೀಚ್ಚರದಿಂದ ಲಯ ಮಧ್ಯರತ್ನವನು ಹರ್ಷಾನಂದದಿಂ ಕೋವಪೋಲ್।ಶರಣರ್ಮೆಚ್ಚಲು ಸಿದ್ಧವೀರ ಯತಿ ಪೇಳ್ದಂ ಶೂನ್ಯ ಸಂಬೋಧೆಯಂ ॥೨॥

ಶ್ರೀಮದ್ವೀಶಿಕನಲ್ಲಮ ಪ್ರಭುವರಂ ಸ್ವೇಚ್ಛಾವಿಲಾಸಂಗಳಿಂ।ದಾಮೋ ಘಶರಣರ್ಗೆಯಪ್ಪ ತೆರದಿಂದಾಶೂನ್ಯ ಪೀಠಾಗ್ರದೊಳ್। ಪ್ರೇಮಂ ಬಿತ್ತಿ ಪ್ರಶ್ನೆಗಳ್ಗೀ ಮಂಡಿಸಿ ಶಿವ ಜ್ಞಾನಾರ್ಥಮಂ ಕೇಳಿ ಪೇಳ್ದಾ ಮಹಾತ್ಮೆಯ ಸಿದ್ಧವೀರ ಯತಿ ಪೇಳ್ದಂ ಸರ್ವರಾನಂದಿಸಲ್ ॥೩॥

ಕಂದ॥ ಗುರು ತೋಂಟದ ಸಿದ್ಧೇಶನ।ಚರಣಾಂಬೋಜಾತ ಮಂತ್ರ ಕೃತಚಿತ್ತೋ।ತ್ಕರಸಿದ್ಧವೀರಯೋಗೀ ಶ್ವರಜರಣರ ಕಿವಿಗೆ ವಚನ ಬೋಧೆಯನಿತ್ತು ॥

ಪ್ರಭುದೇವರ ಶೂನ್ಯ ಸಂಪಾದನೆ ಸಮಾಪ್ತ

367

ಗ್ರಂಥಾಲಯ
ವಿ. ಎಲ್. ಡಿ. ಇ. ಸಂಸ್ಥೆ
ವಿ. ಪಟಿಯಿಂದ ವಾಪ್ತಿತೆ ಪಡೆದ
ತ. ॥ ಪ.ಗ .ಪಳಕ್ಷ್ಯ ಸಂಶೋಧನ ೀಂದ್ರ
ವಿಜ. ಪೂ ೨.

The Vijay College
LIBRARY,
VIJAY COLLEGE,
BIJAPUR.